

RNI REG.NO.KARKAN/2011/38712 7ನೇ ಜೂನ್ 2024 ಸಂಪುಟ : 14 ಸಂಚಿಕೆ : 1 ISSN: 2249-2429

ಶಿಕ್ಷಣ ಸೌಧ
ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ
U.G.C. Care Listed Journal
SHIKSHAN SOUDHA
Kannada Quarterly
ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

ಪ್ರಕಾಶಕರು :
**ಡಾ|| ಜಯದೇವ ಮೈ. ಮೆಣಸಗಿ**
ವಿದ್ಯಾನಿಧಿ ಪ್ರಕಾಶನ, ಗದಗ
ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :
**ಡಾ. ಎಸ್.ಬಿ. ಯಾದವಾಡ**

ಸಹಸಂಪಾದಕರು :
**ಡಾ. ಪ್ರಕಾಶ ಕೆ. ಬಡಿಗೇರ**

ಸಂಪಾದಕ ಮಂಡಳಿ

- **ಪ್ರೊ. ಎಸ್.ಎಸ್. ಪಾಟೀಲ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಪ್ರೊ. ಬಿ.ಎಲ್. ಲಕ್ಕಣ್ಣವರ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಕ.ರಾ.ಅ.ಮ.ವಿ, ವಿಜಯಪುರ
- **ಪ್ರೊ. ಕೆ.ಎಂ. ಮೇತ್ರಿ**
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಕುಲಪತಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ.
- **ಪ್ರೊ. ಜಗನ್ನಾಥ ಕೆ. ಡಾಂಗೆ**
  ಡೀನರು, ಶಿಕ್ಷಣ ನಿಕಾಯ ಮತ್ತು ಮುಖ್ಯಸ್ಥರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಡಾ. ಎನ್. ಲಕ್ಷ್ಮೀ**
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- **ಡಾ. ರಾಜಪ್ಪ ದಳವಾಯಿ**
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- **ಡಾ. ಭೀಮಪ್ಪ ರಂಗಣ್ಣವರ**
  ಸಹ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ,
  ತಮಿಳುನಾಡು, ನಿಲಕುಡಿ, ತಿರುವರುರ್.
- **ಡಾ. ಹುಚ್ಚೇಗೌಡ**
  ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ,
  ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

**Shikshan Soudha**
*A Quarterly Education and Research Journal*
**VIDYANIDHI PRAKASHANA®**
Since:1973
**SRI SIVAKUMAR AGENCY®**
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-200527
email : shikshansoudha@gmail.com

The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

## ಅಂತರಂಗ Inside

### ಸೈದ್ಧಾಂತಿಕ (Articles)

06 ಕರ್ನಾಟಕ ರಾಜ್ಯ ರೈತ ಚಳವಳಿಯ ಹಂತಗಳು – ಡಾ. ರಮೇಶ ಟಿ.
10 ಡಾ. ಫ.ಗು. ಹಳಕಟ್ಟಿಯವರ ವಚನ ಪ್ರೇಮ ಮತ್ತು ವ್ಯಕ್ತಿತ್ವ – ಡಾ. ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ
12 ತೃತೀಯ ಲಿಂಗಿಗಳ ಪ್ರಸ್ತುತ ಶಿಕ್ಷಣ, ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳು – ಡಾ. ಪ್ರಕಾಶ ಸಿ., ಡಾ. ಜಗನ್ನಾಥ ಕೆ. ಡಾಂಗೆ
15 ಚಕೋರಿ : ಮೌಖಿಕ ಕಥನಗಳ ಅನನ್ಯ ಹೆಣಿಗೆ – ಡಾ. ಅಶ್ವಿನಿ ಆರ್.ಎಸ್.
20 ಧರ್ಮ, ಪುರೋಹಿತಶಾಹಿ ಮತ್ತು ಪ್ರಭುತ್ವ – ಚನ್ನಬಸವ
23 ಜಾನಪದ ನಂಬಿಕೆಗಳಲ್ಲಿ ಜಲದ ಪ್ರಾಮುಖ್ಯತೆ – ಡಾ. ಸೀತಾ ಹೆಚ್.ಎನ್., ಡಾ. ಸಿ. ಎಸ್.ಕೆಂಡಗಣ್ಣೆಗೌಡ
25 ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಕುರಿತು ಬಸವಣ್ಣನವರ ಚಿಂತನೆಗಳು – ಡಾ. ರಾಜು ಕೂಡಗಿ
28 ಭಾರತದ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ದ ಪಾತ್ರ – ಡಾ. ಜಗದೀಶ ಹೆಚ್.
32 ಆಧುನಿಕ ಭಾಷಾ ವಿಜ್ಞಾನದ ಪಿತಾಮಹ ಅವ್ರಾಮ್ ನೋಮ್ ಚೋಮ್ಸ್ಕಿ ಒಂದು ಅವಲೋಕನ – ಡಾ. ಟಿ. ದೀಪಕ್‌ಕುಮಾರ್
35 ಚಿತ್ರದುರ್ಗ ಜಿಲ್ಲೆಯ ಹಬ್ಬ – ಉತ್ಸವಗಳು – ಡಾ. ಬಿ. ಜಯಮ್ಮ
37 ಪುರಾಣಗಳ ವಿಶೇಷ ಲಕ್ಷಣಗಳು – ಡಾ. ಎಚ್.ಎಸ್. ಮೇಲಿನಮನಿ, ಡಾ. ಎಸ್.ಎಸ್. ಭಗವತಿ
38 ಬೆಳ್ವೊಲನಾಡಿನ ನಿಸಿದಿ ಶಾಸ – ಡಾ. ಶರಣಪ್ಪ ಬಸಪ್ಪ ಜಗ್ಗಲ
42 ಭಾರತದಲ್ಲಿನ ನಿರಾಶ್ರಿತ ಸಮುದಾಯಗಳ ಸಮಸ್ಯೆಗಳು ಮತ್ತು ಸವಾಲುಗಳಿಗೆ ಭಾರತ ಸರ್ಕಾರದ ಸ್ಪಂದನೆ – ಶ್ರೀ ಹನಮಗೌಡ, ಡಾ. ದಯಾನಂದ ನಾಯ್ಕ್
47 ಹಾವಿನಹಾಳ ಕಲ್ಲಯ್ಯನ ವಚನಗಳು – ಡಾ. ಎಂ.ಎಸ್. ಮಾಗಣಗೇರಿ
51 ವ್ಯಕ್ತಿತ್ವ ನಿರಸನ – ಡಾ. ಕರಿಬಸಪ್ಪ ಎನ್.
52 ಮಾನವನ ಆರೋಗ್ಯ : ಪತಂಜಲಿಯ 'ಯೋಗ ಸೂತ್ರ' ಸುಸೂತ್ರ – ಡಾ. ಶಂಕರ ಬಾರಿಕೇರ
56 ಸರ್ವಜ್ಞನ ವಚನಗಳಲ್ಲಿ ಮನೋವಿಜ್ಞಾನದ ಗ್ರಹಿಕೆಗಳು – ಡಾ. ಶಿವಲಿಂಗೇಗೌಡ
59 ಕನ್ನಡ ಜನಪದ ಸಾಹಿತ್ಯ – ಸಂಸ್ಕೃತಿ ಮತ್ತು ತಾತ್ವಿಕತೆ – ಡಾ. ಎಸ್. ಶಶಿರೇಖಾ
61 ಅಂಬಿಗರ ಚೌಡಯ್ಯನ ವಚನಗಳಲ್ಲಿ ಬಂಡಾಯ ಪ್ರಜ್ಞೆ – ಡಾ. ತಿಪ್ಪೇರುದ್ರ ಸಂಡೂರ
64 ಜೈನ ಬಸದಿಗಳು ರೂಪಾಂತರ – ನಾಶ ಪುನರ್‌ನಿರ್ಮಾಣ – ಡಾ. ಅಡಿವೆಪ್ಪ ಚ. ವಾಲಿ
66 ಕಮಲಾದೇವಿ ಚಟ್ಟೋಪಾಧ್ಯಾಯ – ಶಶಿಕುಮಾರ್ ಬಿ.ಎಸ್.
70 ಜಯದೇವಿತಾಯಿ ಲಿಗಾಡೆ ಕಾವ್ಯ : ಅನುಭಾವಿಕ ಅನುಸಂಧಾನ – ಡಾ. ಜ್ಯೋತಿ ಎಸ್.ಬಿ.
73 ಕನ್ನಡ ಕಾವ್ಯ ಜಗತ್ತು : ಕೆಲವು ಮಹಿಳಾ ಚಿಂತನೆಗಳು – ಡಾ. ನಾಗಣ್ಣ ಕಿಲಾರಿ
79 ಸಂಗೀತ ಕ್ಷೇತ್ರಕ್ಕೆ ಶಾರಂಗದೇವನ ಕೊಡುಗೆ – ನಾಗರಾಜ ಎಂ. ಪುರಮಕರ
80 ಉನ್ನತ ಶಿಕ್ಷಣದಲ್ಲಿ ಶ್ರೇಯಾಂಕ ವ್ಯವಸ್ಥೆಗಳು : ವಿಶ್ವವಿದ್ಯಾಲಯಗಳ ಕಾರ್ಯಕ್ಷಮತೆ ಮೌಲ್ಯಮಾಪನ – ರಂಗಸ್ವಾಮಿ ಐ.ಜೆ. ಪ್ರೊ. ಜಗನ್ನಾಥ ಕೆ. ಡಾಂಗೆ
85 ಕನ್ನಡ ಚಿತ್ರರಂಗದಲ್ಲಿ ಗಾಂಧಿ ಅಭಿವೃದ್ಧಿ ಮಾದರಿಯ ಪ್ರಸ್ತುತತೆ : ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾದ ವಿಶ್ಲೇಷಣಾತ್ಮಕ ಅಧ್ಯಯನ – ಸಚಿನ್ ಎನ್.ಜೆ. ಪ್ರೊ. ಸತೀಶ್‌ಕುಮಾರ್
88 ಪಿ. ಲಂಕೇಶರ ಕಥೆಗಳಲ್ಲಿ ಜೀವನ ದರ್ಶನ – ಶ್ರೀನಿವಾಸ ಎನ್.

**: ಸೂಚನೆ :**

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನವಾದಲ್ಲಿ 1500 ಶಬ್ದಗಳನ್ನು ಮೀರಬಾರದು ಹಾಗೂ ಸಂಶೋಧನಾ ಲೇಖನವಾದಲ್ಲಿ 2000 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು ಕಳಿಸಿರಿ.


**ವಿದ್ಯಾನಿಧಿ ಪ್ರಕಾಶನ ®**
**ಶ್ರೀ ಶಿವಕುಮಾರ ಏಜನ್ಸಿ®**

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ.

ದೂರವಾಣಿ : 08372–200527
e-mail : vidyanidhiprakashana@gmail.com.



**90** ಕನಕದಾಸರ ಕೀರ್ತನೆಗಳಲ್ಲಿ ವೈಚಾರಿಕ ಪ್ರಜ್ಞೆಯ ಆಯಾಮಗಳು
– ಡಾ. ಧರ್ಮವೀರ ಕೆ.ಎಚ್.

**93** ಕನಕದಾಸರ ಕೀರ್ತನೆಗಳಲ್ಲಿ ಪರಮಾರ್ಥ – ಡಾ. ಮಾಧವ ಎಂ.ಕೆ.

**97** ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಸಂಚಲನದಲ್ಲಿ ರಾಜಕೀಯ ನಾಯಕತ್ವದ ಪಾತ್ರ – ಪ್ರಸ್ತುತ ವೈ.ಎನ್., ಪ್ರೊ. ಎಂ. ಹೆಚ್. ಪ್ರಹ್ಲಾದಪ್ಪ

**100** ಕೃಷ್ಣದೇವರಾಯನ ಕಾಲದ ಮಂಡ್ಯ ಪ್ರದೇಶ – ಡಾ. ಎಸ್. ಶಿವರಾಮು

**102** ಲಿಂಗ ವ್ಯವಸ್ಥೆ, ವಲಸೆ ಮತ್ತು ಅಭಿವೃದ್ಧಿ – ಡಾ. ಯರ್ರಿಸ್ವಾಮಿ

**105** ಅನನ್ಯ ಮಹಿಳಾವಾದಿ ಅಂಬೇಡ್ಕರ್ – ಡಾ. ಆಶಾರಾಣಿ ಕೆ. ಬಗ್ಗನಡು


## ಸಂಶೋಧನೆ (Reserch)


**107** ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ–ಸಾಂಸ್ಕೃತಿಕ ಸ್ಥಿತಿಗತಿಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ – ಡಾ. ದ್ರಾಕ್ಷಾಯಣಮ್ಮ ಎನ್.ಸಿ.

**111** ಬೀದಿ ಮಕ್ಕಳ ಬದುಕಿನ ಸ್ಥಿತಿಗತಿಗಳ ಒಂದು ಅಧ್ಯಯನ – ನಾಗೇಂದ್ರಪ್ಪ

**113** ರಾಜ್ಯ ಆದಾಯ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಕೌಟಿಲ್ಯನ ಅರ್ಥಶಾಸ್ತ್ರ ಪ್ರಸ್ತುತತೆ – ಒಂದು ಅಧ್ಯಯನ – ಡಾ. ಸುಜಾತಮ್ಮ

**116** ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಶಕ್ತಿ ಹಾಗೂ ಅಭ್ಯಾಸ ಕೌಶಲಗಳ ನಡುವಿನ ಸಹ–ಸಂಬಂಧದ ಅಧ್ಯಯನ – ಡಾ. ಪ್ರಕಾಶ ಕೆ. ಬಡಿಗೇರ


## ಶಿಕ್ಷಣ ತಜ್ಞರು (Education Thinkers)


**119** ಡಾ. ರಾಧಾಕೃಷ್ಣನರವರ ಜೀವನ ಹಾಗೂ ಸಾಧನೆಗಳು
– ಡಾ. ಆರ್.ಹೆಚ್. ಜಂಗಣವಾರಿ


# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

*ಚಂದಾ ವಿವರ :*

| | | |
|---|---|---|
| ವಾರ್ಷಿಕ ಚಂದಾ | ₹ 750/- | ☐ |
| ತ್ರೈವಾರ್ಷಿಕ ಚಂದಾ | ₹ 2100/- | ☐ |
| ಆಜೀವ ಸದಸ್ಯತ್ವ | ₹ 7000 /- | ☐ |

*ಚಂದಾದಾರರು :*
**ಶಿಕ್ಷಣ ಸೌಧ**
ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

*Bank Detils :*
**SHIKSHANA SOUDHA**
Indian Overseas Bank
J.T. Math Road, Gadag Branch
A/c.No.: 285402000000179
IFSC : IOBA0002854

ಡಿ.ಡಿ. ಕಳುಹಿಸಬೇಕಾದ ವಿಳಾಸ :

**ಶಿಕ್ಷಣ ಸೌಧ**
ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
**ವಿದ್ಯಾನಿಧಿ ಪ್ರಕಾಶನ**
ಸ್ಟೇಶನ್ ರೋಡ ಮತ್ತು 'ನನಸು' ಜೆ.ಟಿ.ಮಠ ರೋಡ,
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–200527
Email : shikshansoudha@gmail.com

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ
ನೂತನ ಚಂದಾದಾರರ ನೋಂದಣಿ ಪ್ರತಿ

APPROVED BY UGC CARE

Date :

Name :________________________

Designation :________________________

Institution :________________________

Address :________________________
________________________

Phone Cell Nos.:________________________

e-mail :________________________

D.D. No. :________________ Dated :__________

Amount :__________ Bank :________________

*Institution's Signature*

## ಸಂಪಾದಕೀಯ

# ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ (AI)

ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆಯು ಬಹುಚರ್ಚಿತ ವಿಷಯವಾಗಿದೆ ಏಕೆಂದರೆ ಅದು ನಾವು ತ್ವರಿತವಾಗಿ ಕಲಿಯುವ ವಿಧಾನವನ್ನು ಬದಲಾಯಿಸುತ್ತದೆ. ಕಲಿಕೆಯ ಪ್ರಕ್ರಿಯೆಯಲ್ಲಿ AI ಅನ್ನು ಅಳವಡಿಸಿಕೊಳ್ಳುವುದರಿಂದ ಮಕ್ಕಳ ಕಲಿಕೆಯು ಉತ್ತಮವಾಗುತ್ತದೆ.

**AI ಶಿಕ್ಷಣದ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ**

ತಂತ್ರಜ್ಞಾನವು ಯಾವಾಗಲೂ ಶಿಕ್ಷಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ, ಆದರೆ ಸ್ಮಾರ್ಟ್ ಸಾಧನಗಳು ಮತ್ತು ವೆಬ್ ಆಧಾರಿತ ಪಠ್ಯಕ್ರಮದ ಹೆಚ್ಚಿದ ಲಭ್ಯತೆಯಿಂದಾಗಿ ಅದರ ಪ್ರಸ್ತುತ ಬಳಕೆಯು ಎಂದಿಗಿಂತಲೂ ಹೆಚ್ಚು ಪ್ರಚಲಿತವಾಗಿದೆ. ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಯು ವಿದ್ಯಾರ್ಥಿಗಳು ಕಲಿಯಲು ಸಹಾಯ ಮಾಡಲು ಹಲವಾರು ವಿಭಿನ್ನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಅವುಗಳೆಂದರೆ:

**ಚಾಟ್‌ಬಾಟ್‌ಗಳು**

ವಿದ್ಯಾರ್ಥಿಗಳು ಶೀಘ್ರದಲ್ಲೇ ಬಳಸಬಹುದಾದ AI ಶೈಕ್ಷಣಿಕ ಅಪ್ಲಿಕೇಶನ್‌ಗಳಿಗೆ ಚಾಟ್‌ಬಾಟ್‌ಗಳು ಒಂದು ಉದಾಹರಣೆಯಾಗಿದೆ. ಗಣಿತ ಅಥವಾ ಓದುವ ಗ್ರಹಿಕೆಯಂತಹ ನಿರ್ದಿಷ್ಟ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಲು ವಿನ್ಯಾಸಗೊಳಿಸಲಾದ ಬಾಟ್‌ಗಳೊಂದಿಗೆ ಚಾಟ್ ಮಾಡಲು ಮಕ್ಕಳು ಐಪ್ಯಾಡ್‌ಗಳು ಅಥವಾ ಲ್ಯಾಪ್‌ಟಾಪ್‌ಗಳನ್ನು ಬಳಸುವ ತರಗತಿ ಕೊಠಡಿಗಳಲ್ಲಿ ಇವುಗಳನ್ನು ಹೆಚ್ಚಾಗಿ ಅಳವಡಿಸಲಾಗುತ್ತಿದೆ. ಚಾಟ್‌ಬಾಟ್‌ಗಳು ಎಲ್ಲಾ ತಾಂತ್ರಿಕ ಮೂಲಗಳ ಭವಿಷ್ಯವಾಗಿದೆ. ಇದು ಶಿಕ್ಷಕರಿಗೆ ನಿಯೋಜಿಸಲಾದ ಕಾರ್ಯಗಳ ಚಕ್ರವನ್ನು ಕಡಿಮೆ ಮಾಡುತ್ತದೆ. ತರಗತಿಗಳಲ್ಲಿ ಬಳಸಲಾಗುವ ಚಾಟ್‌ಬಾಟ್‌ಗಳು ಶಿಕ್ಷಕರು ಮತ್ತು ಪೋಷಕರ ನಡುವೆ ಇಮೇಲ್ ಸಂವಹನವನ್ನು ಬದಲಾಯಿಸಬಹುದು ಮತ್ತು ಪೋಷಕರು ಸಹ ಭೇಟಿಯಾಗಬಹುದು.

**ವರ್ಚುವಲ್ ರಿಯಾಲಿಟಿ (VR)**

ಶಿಕ್ಷಣದಲ್ಲಿ ಇತ್ತೀಚಿನ ಒಂದು ಆವಿಷ್ಕಾರವೆಂದರೆ ವರ್ಚುವಲ್ ರಿಯಾಲಿಟಿ, ಇದನ್ನು ಇತಿಹಾಸವನ್ನು ಕಲಿಸುವುದರಿಂದ ಹಿಡಿದು ಗಣಿತ ಕೌಶಲ್ಯಗಳೊಂದಿಗೆ ವಿದ್ಯಾರ್ಥಿಗಳಿಗೆ ಸಹಾಯ ಮಾಡುವವರೆಗೆ ಎಲ್ಲದಕ್ಕೂ ಬಳಸಲಾಗುತ್ತಿದೆ. ವರ್ಚುವಲ್ ರಿಯಾಲಿಟಿ ಎನ್ನುವುದು ಮೂರು ಆಯಾಮದ ಕಂಪ್ಯೂಟರ್–ರಚಿತ ಪರಿಸರವಾಗಿದ್ದು, ಇಲ್ಲಿ ಕಲಿಕಾರ್ಥಿಯು ಅನ್ವೇಷಿಸಬಹುದು ಮತ್ತು ಸಂವಹನ ಮಾಡಬಹುದು. ವಿದ್ಯಾರ್ಥಿಗಳು ಪರಸ್ಪರ ಸಂಪರ್ಕ ಹೊಂದುವಂತೆ ಮಾಡಲು ವರ್ಚುವಲ್ ರಿಯಾಲಿಟಿ ಉತ್ತಮ ಮಾರ್ಗವಾಗಿದೆ. ವರ್ಚುವಲ್ ರಿಯಾಲಿಟಿಯೊಂದಿಗೆ, ವಿದ್ಯಾರ್ಥಿಗಳು ನಿಜ ಜೀವನದಲ್ಲಿ ನೋಡಲು ಅಥವಾ ಕಲಿಯಲು ಎಂದಿಗೂ ಅವಕಾಶವಿಲ್ಲದ ವಿಷಯಗಳನ್ನು ಅನ್ವೇಷಿಸಬಹುದಾಗಿದೆ.

ಚಾಟ್‌ಬಾಟ್‌ಗಳು ಹಾಗೂ ವರ್ಚುವಲ್ ರಿಯಾಲಿಟಿ ಅಪ್ಲಿಕೇಶನ್‌ಗಳು ಕೃತಕ ಬುದ್ಧಿಮತ್ತೆಗೆ ಎರಡು ಉದಾಹರಣೆಗಳಾಗಿವೆ. ಇಂದಿನ ಈ ತಂತ್ರಜ್ಞಾನ ಯುಗದಲ್ಲಿ ಶಿಕ್ಷಕರಾದ ನಾವೆಲ್ಲರೂ ಸಮಯೋಚಿತವಾಗಿ ಕೃತಕ ಬುದ್ಧಿಮತ್ತೆಯನ್ನು ಬಳಸಿದ್ದೇ ಆದಲ್ಲಿ ಕಲಿಕೆಯು ಪರಿಣಾಮಕಾರಿಯಾಗುವುದರಲ್ಲಿ ಸಂದೇಹವಿಲ್ಲ.

**– ಡಾ. ಎಸ್.ಬಿ. ಯಾದವಾಡ**
**ಸಂಪಾದಕರು**



ಸಂಪುಟ : 14 ಸಂಚಿಕೆ : 1
7ನೇ ಜೂನ್ 2024
ಶಿಕ್ಷಣ ಸೌಧ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕರ್ನಾಟಕ ರಾಜ್ಯ ರೈತ ಚಳವಳಿಯ ಹಂತಗಳು

✍ **ಡಾ. ರಮೇಶ ಟಿ.,** ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು.

ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದ ರೈತರು ಸಂಸ್ಥಾನಿಕರ ಆಡಳಿತಕ್ಕೊಳಪಟ್ಟಿದ್ದ ಬ್ರಿಟಿಷರ ನೇರ ಆಳ್ವಿಕೆಯ ಭಾಗದಲ್ಲೂ ಅಥವಾ ರಾಜವಂಶದ ಆಡಳಿತಕ್ಕೊಳಪಟ್ಟಿದ್ದ ಭಾಗಗಳಲ್ಲಿ ಪಾರಂಪರಿಕ ಒಕ್ಕಲುತನ ಮಾಡಿಕೊಂಡು ಬಂದಿದ್ದರು. ಈ ಸಂದರ್ಭದಲ್ಲಿನ ಚಳುವಳಿಯ ಸ್ವರೂಪವು ಬಹುತೇಕ ಅಂದಿನ ಶಿಸ್ತು, ಸಜ್ಜನಿಕೆ, ಗೌರವದೊಡನೆ ಮತ್ತು ಆಡಳಿತದವರೊಡನೆ ಸೇರಿಕೊಂಡು ಅವರಲ್ಲಿನ ಜನಹಿತ ಕಾರ್ಯಗಳಿಗನುಗುಣವಾಗಿ ಬೆಳೆಸಿಕೊಂಡ ಪ್ರೀತಿಗನುಗುಣವಾಗಿ ಇದ್ದಿತ್ತೆನ್ನಬಹುದಾಗಿದೆ. ಆದರೂ ಅಲ್ಲಲ್ಲಿ ಅಧಿಕಾರಿಗಳ ಸ್ವಾರ್ಥ, ಅಚಾತುರ್ಯಗಳಿಂದ, ಕಿರುಕುಳ ಮೀರಿದಾಗ ಅವರ ಪ್ರತಿಭಟನೆ ತುಸು ಬಿರುಸಾಗಿದ್ದಿತು.ಆದರೂ ಸಹ ಅದರಲ್ಲಿ ಭಯಮಿಶ್ರಿತ ಗೌರವವೂ ಇದ್ದಿದ್ದು.ಪ್ರಜಾಪ್ರತಿನಿಧಿ ಸಭೆ ಅಥವಾ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಲ್ಲಿ ಶಾಸಕ ಪ್ರತಿನಿಧಿಗಳು ಕ್ಷೇತ್ರದರ್ಶನ, ಅಧ್ಯಯನ, ಬೌದ್ಧಿಕ ವಿವೇಚನೆ ಹಾಗೂ ರೈತ ಕಾಳಜಿಗಳೊಡನೆ ಚರ್ಚಿಸಿ, ಸಲಹೆ, ಪರಿಹಾರ ಮಾರ್ಗಗಳನ್ನು ಸೂಚಿಸಿರುವುದನ್ನು ನೋಡಬಹುದಾಗಿದೆ. ಹಾಗೆಯೇ ಸರ್ಕಾರದ ಅಧಿಕಾರಿಗಳು ಸಹ ಎಚ್ಚರ ಹಾಗೂ ಬುದ್ಧಿವಂತಿಕೆಯಿಂದ ಉತ್ತರಿಸಿಕೊಂಡು ಬರುವುದರ ಜೊತೆಗೆ ಆಡಳಿತಾತ್ಮಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುವುದೂ ಸಹ ನಾವು ಗಮನಿಸಬಹುದಾಗಿದೆ. ಈ ಸಂದರ್ಭದ ರೈತಚಳುವಳಿಗಳಲ್ಲಿ ಉದ್ದೇಶ, ಗುರಿಸಾಧನೆಗಳೊಂದಿಗೆ ಪ್ರಜಾಪ್ರಭುತ್ವದ ಸೊಗಡು ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ. ಪ್ರಾಯಶಃ ಅವರ ಬದುಕು ಬೆಳೆದುಕೊಂಡು ಬಂದ ಬಗೆ ಅದಕ್ಕೆ ಕಾರಣವಾಗಿರಬಹುದು.[1]

ಸ್ವಾತಂತ್ರ್ಯ ಬಂದು ಬಹಳ ಕಾಲದ ತರುವಾಯ ರೈತರು ಮತ್ತೆ ಸಂಘಟನೆಯ ಬಗ್ಗೆ, ಹೋರಾಟದ ಬಗ್ಗೆ ಸಂಘಟಿತರಾಗಲು ಮುಂದಾದರು ಉದ್ದಿಮೆದಾರರ ಬಂಡವಾಳಶಾಹಿಗಳ ಹಿತಾಸಕ್ತಿಯ ರಕ್ಷಣೆಗೆ ಅಚ್ಚಗಾವಲಾಗಿ ನಿಂತಿರುವ ಯಾವುದೇ ಪಕ್ಷದ ಆಳುವ ಸರಕಾರಗಳು ರೈತನ ಹಿತಾಸಕ್ತಿಗೆ ಪೂರಕವಾಗಿ ಸ್ಪಂದಿಸುತ್ತಿಲ್ಲವೆಂಬುದು ರೈತರಿಗೆ ಮನವರಿಕೆಯಾಗ ತೊಡಗುವುದರ ಜೊತೆಗೆ ರೈತರೆಲ್ಲ ಪಕ್ಷಬೇಧ ಮರೆತು ಸರ್ಕಾರಕ್ಕೆ ಸಡ್ಡು ಹೊಡೆದು ನಿಂತು ತಮ್ಮ ಬೇಡಿಕೆಗಳನ್ನು ನ್ಯಾಯುಬದ್ಧವಾಗಿ ಈಡೇರಿಸಿಕೊಳ್ಳುವಲ್ಲಿ ಮುಂದಾಗಲಾರಂಭಿಸಿದರು. ಜಾಗತಿಕ ಮಾರುಕಟ್ಟೆ, ಬಹುರಾಷ್ಟ್ರೀಯ ಕಂಪನಿಗಳ ಶಕ್ತಿಸಾಧ್ಯತೆ ಮುಂತಾದ ಹುನ್ನಾರಗಳಿಂದ ರೈತ ಸಂಕಷ್ಟಗಳಿಗೆ ಒಳಗಾಗಲಾರಂಭಿಸಿದನು.[2] ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಸಮರದಲ್ಲಿ ತೊಡಗಿಕೊಂಡಿದ್ದ ರೈತರು ಆರ್ಥಿಕ ದಾಸ್ಯದಿಂದ ಮುಕ್ತ ಮಾರುಕಟ್ಟೆಯ ರಾಕ್ಷಸ ನೀತಿಯಿಂದ ಬಿಡುಗಡೆಗೊಳ್ಳಲು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಮತ್ತೆ ಸಂಘರ್ಷದ ಹಾದಿ ಹಿಡಿಯುವ ಪರಿಸ್ಥಿತಿಗಳೊದಗಿವೆ.

ದೇಶದ ಅತಿಮುಖ್ಯ ಘಟಕವಾಗಿರುವ ರೈತರ ದುಡಿಮೆಯನ್ನು ಅಲಕ್ಷ್ಯಮಾಡಿ ಸಮಾಜದ ಇತರ ವ್ಯಕ್ತಿಗಳಿಗೆ ದೊರೆಯುವ ಸವಲತ್ತಿನಿಂದ ರೈತವಂಚಿತನಾದಾಗ ಅನಿವಾರ್ಯವಾಗಿ ರೈತಸಂಘಟನೆ ಪ್ರಾರಂಭವಾಯಿತು. ಮಹಾಯುದ್ಧದ ಪೂರ್ವದಲ್ಲಿ ಟೆನೆನ್ಸಿ ಪದ್ಧತಿಯ ಕುರಿತು ಕಾಯ್ದೆ ಕಾನೂನುಗಳು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ರೀತಿಯಲ್ಲಿ ಜಾರಿಯಲ್ಲಿದ್ದವು.ಮಹಾರಾಷ್ಟ್ರ, ಕೇರಳ, ಗುಜರಾತ್ ಮತ್ತು ಕರ್ನಾಟಕದಲ್ಲಿ ಶಾಸನ ಸಭೆಗಳು ಈ ಗೇಣಿ ಪದ್ಧತಿಯನ್ನು ಹೋಗಲಾಡಿಸಿ ಕೃಷಿ ಉತ್ಪನ್ನವನ್ನು ಹೆಚ್ಚಿಸಬಯಸಿದವು. ಆದರೆ ಇತರ ರಾಜ್ಯಗಳಲ್ಲಿ ಇದಕ್ಕೆ ವಿರುದ್ಧವಾಗಿ ರೈತರ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿತ್ತು. ಬುದ್ಧಿ ಜೀವಿಗಳು, ಪ್ರಜ್ಞಾವಂತ ಅಧಿಕಾರಿಗಳು ಭೂ ಸುಧಾರಣೆಯ ಸಲುವಾಗಿ ಪ್ರಯತ್ನ ಮಾಡಿದರೂ ರೈತರಲ್ಲಿಯ ಸಂಘಟನಾಶಕ್ತಿಯ ಅಭಾವ ಮತ್ತು ತಟಸ್ಥ ಧೋರಣೆಯಿಂದ ಚಳುವಳಿ ಅಂತಹ ತೀವ್ರತೆಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಮೊದಲನೇ ಮಹಾಯುದ್ಧದ ಪೂರ್ವದಲ್ಲೇ ರೈತಚಳುವಳಿ ಭೂಮಾಲಿಕತ್ವದ ಬೇರನ್ನೇ ಅಲುಗಾಡಿಸಿ ರೈತರ ಹಕ್ಕು ಬಾಧ್ಯತೆಗಳ ಕುರಿತು ಸರ್ಕಾರ ಸುಧಾರಣೆ ಕೈಗೊಳ್ಳಲು ಕಾರಣವಾಯಿತು.[3] ಎರಡನೇ ಮಹಾಯುದ್ಧದ ನಂತರ ರೈತರನ್ನೇ ಒಡೆಯನನ್ನಾಗಿ ಸ್ಥಾಪಿಸುವ ಹೊಸಕಾಯಿದೆಗೆ ಅಂದಿನ ರೈತ ಚಳುವಳಿ ಪ್ರೇರಣೆಯಾಗಿದ್ದಿತು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಟೆನೆನ್ಸಿ ಕಾಯಿದೆಗೆ ಸಂಬಂಧಿಸಿದಂತೆ ಮೂಲ ಗೇಣಿ, ಚಾಲ ಗೇಣಿ, ನಡಗಿಸೂಲಗಿ, ಪಾಲು ಮುಂತಾದ ಕಂದಾಯ ಪದ್ಧತಿಗಳು ಚಾಲ್ತಿಯಲ್ಲಿದ್ದವು. ಇವುಗಳಲ್ಲಿ ಮೂಲಗೇಣಿ ಪ್ರಕಾರ ಭೂಮಾಲಿಕನಿಗೆ ನಿರ್ದಿಷ್ಟಪಡಿಸಿದ ಗೇಣಿ ರೈತ ಕೊಡಬೇಕಾಗಿತ್ತು. ಮೂಲ ಗೇಣಿದಾರನಾದ ರೈತನಿಗೆ ಭೂಮಿ ಅಡವಿಡುವ ಮಾರುವ ಮತ್ತು ಮತ್ತೊಬ್ಬರಿಗೆ ಗೇಣಿಕೊಡುವ ಅಧಿಕಾರವಿತ್ತು. ಚಾಲಗೇಣಿ ಭೂಮಾಲಿಕ ಅಥವಾ ಮೂಲ ಗೇಣಿದಾರನಿಂದ ಸಾಗುವಳಿಗೆ ಭೂಮಿಯನ್ನು ಪಡೆಯುವ ಈ ಪದ್ಧತಿಯಲ್ಲಿ ರೈತನಿಗೆ ಅಷ್ಟು ಭದ್ರತೆ ಇರಲಿಲ್ಲ. ನಡಗಿ ಎಂಬ ಪದ್ಧತಿಯಲ್ಲಿ ರೈತನು ಉತ್ಪನ್ನದಲ್ಲಿನ ಅರ್ಧಪಾಲನ್ನು ವಸ್ತು ಅಥವಾ ಹಣದ ರೂಪದಲ್ಲಿ ಒಡೆಯನಿಗೆ ಕೊಡಬೇಕಾಗಿತ್ತು. ಸೂಲಗಿ ಎಂಬ ಪದ್ಧತಿಯಲ್ಲಿ ತೋಟವನ್ನು ಸಂಪೂರ್ಣವಾಗಿ ಬೆಳೆಸಿದ ನಂತರ ಭೂಮಾಲಿಕ ಅದನ್ನು ರೈತನಿಗೆ ಒಪ್ಪಿಸುತ್ತಿದ್ದು ಸಾಗುವಳಿ ಮಾಡುವ ರೈತನಿಗೆ ಉತ್ಪನ್ನದಲ್ಲಿ $^{1}/_{3}$ ರಷ್ಟು ಪಾಲು ಕೊಡಲಾಗುತ್ತಿದ್ದಿತಲ್ಲದೆ ಇದು ಚಾಲಗೇಣಿ ಪದ್ಧತಿಯನ್ನೇ ಹೋಲುತ್ತಿದ್ದು, ಉತ್ಪನ್ನದಲ್ಲಿ ರೈತನಿಗೆ ಅರ್ಧಪಾಲು ಸಿಗುತ್ತಿತ್ತು.ಅಲ್ಲದೆ ರೈತನಿಗೆ ಯಾವುದೆ ಭದ್ರತೆ ಇಲ್ಲವಾಗಿತ್ತು. ಜಮೀನ್ದಾರ ರೈತನಿಗೆ ಸಾಗುವಳಿ ಮಾಡಲು ಕೊಟ್ಟ ಬೀಜ ಹಾಗೂ ಇತರ ಖರ್ಚನ್ನು ರೈತನಿಂದ ಬೆಳೆ ಬಂದಕೂಡಲೇ ಹಣ ಅಥವಾ ವಸ್ತುವಿನ ರೂಪದಲ್ಲಿ ಪಡೆದು ನಂತರ ಪಾಲುಮಾಡಲಾಗುತ್ತಿದ್ದಿತು. ಇದರಲ್ಲಿ $^{2}/_{5}$, $^{2}/_{3}$ ಮುಂತಾದ ಪದ್ಧತಿಗಳಿದ್ದು ಇವೆಲ್ಲಾ ಭೂಮಾಲಿಕರ ಹಿತಾಸಕ್ತಿಯುನ್ನು ಕಾಪಾಡಲಿಕ್ಕಾಗಿ ರೂಪುಗೊಂಡಿದ್ದವು.[4] ಶ್ರಮ ರೈತರದಾದರೆ ಅದರ ಪ್ರತಿಫಲ ಒಡೆಯರ ಪಾಲಾಗುತ್ತಿದ್ದಿತು. ಗೇಣಿ ಪದ್ಧತಿ ಭೂಮಾಲಿಕರಿಗೆ ಹೆಚ್ಚು ಪ್ರಯೋಜನ ಕಾರಿಯಾಗಿದ್ದು, ರೈತರ ಪರಿಸ್ಥಿತಿ ನಿಜಕ್ಕೂ ಶೋಚನೀಯವಾಗಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿ ರೈತರಾದವರನ್ನು ಸಂರಕ್ಷಿತ ರೈತರೆಂದು ಆಮೇಲೆ ರೈತರಾದವರನ್ನು ಸಾದಾ ರೈತರೆಂದು ಸರಕಾರ ಪರಿಗಣಿಸಿತು.ಭೂಮಾಲೀಕರು ಚಾಲಗೇಣಿ ದರವನ್ನು ಆಗಾಗ ಹೆಚ್ಚಿಸಿ ಉತ್ಪನ್ನದ ಹೆಚ್ಚು ಭಾಗವನ್ನು ತಾವೇ ಪಡೆದುಕೊಳ್ಳುತ್ತಿದ್ದರು. ಅನಾವೃಷ್ಟಿ, ಅತಿವೃಷ್ಟಿ, ನೆರಹಾವಳಿ, ಕೀಟಗಳ ಬಾಧೆ ಮೊದಲಾದವುಗಳನ್ನು ಲೆಕ್ಕಿಸದೆ ಚಾಲಗೇಣಿಯ ಬಿಡಿಗಾಸನ್ನು ಬಿಡದೆ ರೈತರಿಂದ ಕಂದಾಯ ವಸೂಲಿ

UGC CARE APPROVED

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾಡುತ್ತಿದ್ದರು. ರೈತ ಗೇಣಿಯನ್ನು ಕೊಡಲು ಅಶಕ್ತನಾದರೆ ಭೂಮಿಯನ್ನು ಆತನಿಂದ ತಪ್ಪಿಸಿ ಬೇರೊಬ್ಬನಿಗೆ ಕೊಡಲಾಗುತ್ತಿದ್ದಿತು. ಸಂಘಟನೆಯ ಕೊರತೆಯಿಂದಾಗಿ ಕರುಣೆಯಿಲ್ಲದ ಭೂಮಾಲೀಕರ ಶೋಷಣೆಗಳನ್ನು ರೈತನು ಒಪ್ಪಿಕೊಳ್ಳಬೇಕಾಗಿತ್ತು. ಕೆಲವು ಪ್ರದೇಶಗಳಲ್ಲಿ ಭೂಮಾಲೀಕನ ಒಡೆತನವನ್ನು ಕಾಯಾ ವಾಚಾ ಮನಸಾ ಒಪ್ಪಿಕೊಂಡ ರೈತರು ಹಬ್ಬ ಹರಿದಿನಗಳಂದು ಒಡೆಯನ ಮನೆಗೆ ಹಣ್ಣು, ಹಂಪಲು, ತರಕಾರಿ ಎಳನೀರು, ಬಾಳೆಹಣ್ಣಿನ ಗೊನೆಗಳನ್ನು ಒಯ್ದು ಒಡೆಯನ ಮುಂದಿಟ್ಟು ಹಬ್ಬಗಾಣಿಕೆ ನೋಡುತ್ತೇನೆ ಎಂದು ಹೇಳಿ ಕಾಲಿಗೆ ಬೀಳುವ ಸಂಪ್ರದಾಯ ರೂಢಿಯಲ್ಲಿತ್ತು.[5] ಕೆಲವು ವಿಶೇಷ ಹಬ್ಬ ಉತ್ಸವಗಳಲ್ಲಿ ರೈತನು ಬಿಟ್ಟಿಯಾಳಾಗಿ ದುಡಿಯಬೇಕಾಗಿತ್ತು. ರೈತ ಒಡೆಯನೆದುರು ವಿನಮ್ರ ಮತ್ತು ವಿಧೇಯನಾಗಿರಬೇಕಾಗಿತ್ತು. ಆತನ ನಡತೆ ಸರಿ ಕಾಣದೇ ಇದ್ದರೆ ಮಾಲೀಕ ಭೂಮಿಯನ್ನು ಇವನಿಂದ ತಪ್ಪಿಸಬಹುಹುದಾಗಿತ್ತು. ಈ ರೀತಿಯ ಕಾರ್ಯವೈಖರಿಗಳಿಂದಾಗಿ ರೈತ ಸಂಪೂರ್ಣವಾಗಿ ಶೋಷಣೆಗೆ ಒಳಗಾಗಿದ್ದ.

ಕರ್ನಾಟಕದ ಉಳಿದ ಪ್ರದೇಶಗಳಿಗೆ ಹೋಲಿಸಿದರೆ, ಶಿವಮೊಗ್ಗ ಜಿಲ್ಲೆಯ ರೈತರು ಸ್ವಾತಂತ್ರ್ಯನಂತರದಲ್ಲಿ ಹೆಚ್ಚು ಸಂಘಟಿತರಾಗಿ ಹೋರಾಟಗಳನ್ನು ನಡೆಸಿರುವುದನ್ನು ನೋಡಬಹುದಾಗಿದೆ. ಯಾಕೆಂದರೆ, ಈ ಸಂಘಟನೆ, ಹೋರಾಟಗಳು ಜಿಲ್ಲೆಯ ಎಲ್ಲಾ ತಾಲ್ಲೂಕು ಹೋಬಳಿಗಳನ್ನಾಗಲೀ, ಅಥವಾ ಬಡರೈತರ ಎಲ್ಲಾ ಸಮಸ್ಯೆಗಳನ್ನಾಗಲೀ ಎಂದೂ ಒಳಗೊಂಡಿರಲಿಲ್ಲ. ಇವು ಮುಖ್ಯವಾಗಿ ಗೇಣಿ ರೈತರು, ಕಾಲಾನುಕ್ರಮದಲ್ಲಿ ನ್ಯಾಯಗೇಣಿ, ಗೇಣಿಕರಾರು ಮತ್ತು ಗೇಣಿ ಜಮೀನಿನ ಮೇಲೆ ತಮ್ಮ ಹಕ್ಕುಗಳಿಗೋಸ್ಕರ ನಡೆಸಿದ ಹೋರಾಟಗಳಾಗಿದ್ದವು.[6] ಅದೇ ರೀತಿ ಇಂತಹ ರೈತ ಚಳವಳಿಗಳಲ್ಲಿ ಪ್ರಮುಖ ಕಾರಣಗಳೂ ಅಡಗಿದ್ದು, ಆರ್ಥಿಕ ಅವ್ಯವಸ್ಥೆಯನ್ನು ಪ್ರತಿನಿಧಿಸುವ ಬಂಡವಾಳಶಾಹಿ ಮತ್ತು ಗೇಣಿದಾರ ವ್ಯವಸ್ಥೆಯ ಶೋಷಣೆ ಮತ್ತು ಸಾಮಾಜಿಕ ಶೋಷಣೆಯನ್ನು ಪ್ರತಿನಿಧಿಸುವ ಮೇಲ್ಜಾತಿ ಮತ್ತು ಕೆಳಜಾತಿ ಎಂಬುವವೂ ರೈತ ಚಳುವಳಿಗೆ ಸ್ವಾತಂತ್ರ್ಯ ನಂತರದಲ್ಲಿ ಪ್ರೇರಣೆಯಾಗಿದ್ದವು. ಭಾರತದಂತಹ ರಾಷ್ಟ್ರದಲ್ಲಿ ವಸಾಹತುಶಾಹಿ ಸೃಷ್ಟಿಸಿದ ಬಹುಮುಖ್ಯ ಮಾದರಿಗಳೆಂದರೆ ಬಂಡವಾಳಶಾಹಿ, ಬಲಾಢ್ಯ ರೈತವರ್ಗ, ದುಡಿಯದ, ದಣಿಯದ, ಬೆವರು ಸುರಿಸದೇ ನಾಮಾಕಾವಸ್ತೆ ಜಮೀನಿನ ಮಾಲೀಕರು ಅಥವಾ ಜಮೀನ್ದಾರರು ಎನಿಸಿಕೊಂಡ ಹುಸಿ ರೈತರು ಒಂದೆಡೆಯಾದರೆ, ಇನ್ನೊಂದು ಕಡೆಗೆ ಭೂಮಿಯ ಜೊತೆ ಅವಿನಾಭಾವ ಸಂಬಂಧ ಇಟ್ಟುಕೊಂಡ, ಜಮೀನನ್ನು ಉತ್ತಿಬಿತ್ತಿ ಬೆಳೆ ತೆಗೆಯುವ, ಆದರೆ ಅದು ನನ್ನದೆನ್ನದ ಅಸ್ಥಿರ ಬಡಕೃಷಿ ಕಾರ್ಮಿಕ ವಾಸ್ತವವಾಗಿ ದುಡಿಯುವ ರೈತವರ್ಗ ಎಂಬುವವನಾಗಿವೆ.[7]

ವಸಾಹತೋತ್ತರ ಕಾಲಾವಧಿಯಲ್ಲಿ ರೈತ ಚಳುವಳಿಯ ಸ್ವರೂಪ ಬದಲಾದ ಉತ್ಪಾದನಾ ಸಂಬಂಧದ ರೀತಿಗೆ ಅನುಗುಣವಾಗಿ ಹಾಗೂ ಅದಕ್ಕೆ ಹೊಂದಿಕೊಂಡು ಬದಲಾಯಿತು. ಬದಲಾದ ಸಂದರ್ಭ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಸಂವಾದ ಮತ್ತು ಪ್ರತಿಭಟನೆಯಲ್ಲಿ ಬದಲಾವಣೆಗಳಾದವು.ಅಲ್ಲದೆ ಪ್ರತಿಭಟನೆಗಳು ಕೂಡ ವಿಭಿನ್ನ ಅರ್ಥವನ್ನು ಪಡೆದವು.ವಸಾಹತೋತ್ತರ ಕಾಲಾವಧಿಯಲ್ಲಿ ಮೂರು ರೀತಿಯ ರೈತ ಚಳುವಳಿಗಳು ಹುಟ್ಟಿಕೊಂಡಿದ್ದನ್ನು ನೋಡಬಹುದಾಗಿದೆ. ಅವುಗಳೆಂದರೆ (1) ಭೂಮಾಲೀಕರ ವಿರುದ್ಧ ಗೇಣಿದಾರರು/ಬಡರೈತರು, (2) ಶ್ರೀಮಂತ ರೈತವರ್ಗದ ವಿರುದ್ಧ ಕೃಷಿ ಕಾರ್ಮಿಕರು (3) ರಾಜ್ಯ ಅಥವಾ ರಾಜಕೀಯ ಚೌಕಟ್ಟಿನ ವಿರುದ್ಧ ಶ್ರೀಮಂತ/ಬೂರ್ಜ್ವಾ ರೈತವರ್ಗ.

ಮೊದಲನೆ ರೀತಿಯ ಹೋರಾಟವನ್ನು ವ್ಯಾಪಕವಾಗಿ ಗೇಣಿದಾರರ ಹೋರಾಟವೆಂದು ಕರೆಯಬಹುದಾಗಿತ್ತು. ಇದರಲ್ಲಿ ಬಡರೈತರನ್ನೂ ಕೃಷಿ ಕಾರ್ಮಿಕರನ್ನೂ ಕೂಡ ಸೇರಿಸಬಹುದಾಗಿದೆ. ಈ ರೀತಿಯ ಹೋರಾಟದ ಆರಂಭದ ದಿನಗಳನ್ನು ನಾವು ತೆಲಂಗಾಣ ಹೋರಾಟದಲ್ಲಿ ಕಾಣಬಹುದಾಗಿತ್ತು. ಈ ಗೇಣಿದಾರರ ಹೋರಾಟ ಭೂ ಮಸೂದೆಯನ್ನು ತುರ್ತಾಗಿ ಜಾರಿಗೊಳಿಸಲು ಅವಕಾಶವನ್ನು ಮಾಡಿಕೊಟ್ಟಿತು.[8]

ಸ್ವಂಉಂ ಉಳುವೆಂಉ ನೆಪದಲ್ಲಿ ಗೇಣಿದಾರರನ್ನು ಒಕ್ಕಲೆಬ್ಬಿಸಿದ್ದರಿಂದಾಗಿ ಘರ್ಷಣೆಯ ತೀವ್ರತೆ ಹೆಚ್ಚಾಯಿತು. ಗೇಣಿದಾರರ ಹೋರಾಟಗಳಿಗೆ ವಿಶಾಲವಾದ ತಳಹದಿ ಇದ್ದಿತು.ಇವು ಮುಖ್ಯವಾಗಿ ರಾಜ್ಯ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಬಯಸುತ್ತಿದ್ದವು. ಕರ್ನಾಟಕದಲ್ಲಿ ಗೇಣಿದಾರರ ಹೋರಾಟ ಮುಖ್ಯವಾಗಿ ವಸಾಹತೋತ್ತರ ಕಾಲಾವಧಿಯಲ್ಲಿ (1950–51) ಪರಾಕಾಷ್ಟೆಗೆ ತಲುಪಿದ್ದಿತು.

1793ರ ಶಾಶ್ವತ ಭೂ ಒಪ್ಪಂದ ಮತ್ತು 1808ರ ರೈತವಾರಿ ಒಪ್ಪಂದಗಳು ಎರಡು ಮೂಲ ಉದ್ದೇಶಗಳನ್ನು ಹೊಂದಿದ್ದವು. ಒಂದು ಕಡೆ ರಾಜ್ಯ ಮತ್ತು ಜಮೀನ್ದಾರರು, ಇನ್ನೊಂದು ಕಡೆ ಜಮೀನ್ದಾರರು ಮತ್ತು ರೈತರು ಅಂದರೆ ರಾಜ್ಯಕ್ಕೆ ಕಂದಾಯ ಜಮೀನ್ದಾರರಿಗೆ ಗೇಣಿ.ಇದು ರಾಷ್ಟ್ರದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಖಾಸಗಿ ಆಸ್ತಿ ಪದ್ಧತಿ ನಿರ್ಮಾಣಮಾಡುವುದು ಮತ್ತು ರೈತರನ್ನು ಗೇಣಿಯಂಥಹ ಉತ್ಪಾದನಾ ಸಂಬಂಧಕ್ಕೆ ಜೋಡಿಸುವುದೇ ಆಗಿದೆ. ಇದೊಂದು ರೀತಿಯ ರೈತರನ್ನು ಪಾರಂಪರಿಕೆ ಆಳುಗಳನ್ನಾಗಿ, ಗೇಣಿದಾರರನ್ನಾಗಿ, ಒಡೆಯರ ಸುಂದರ ತೋಟದ ಆಳುಗಳನ್ನು ಸೃಷ್ಟಿಸುವ 'ಮಾಪಲೇಷು' ಶ್ರಮಿಕರನ್ನಾಗಿ ಮಾತ್ರವೇ ರೂಪಿಸುವ ಊಳಿಗಮಾನ್ಯ ಪದ್ಧತಿಯ ಸಂಚಾಗಿದೆ. ಅಂದರೆ ವಸಾಹತುಶಾಹಿಯು ಸೃಷ್ಟಿಸಿದ ಬಹುಮುಖ್ಯ ಕೊಡುಗೆ ಎಂದರೆ ದೇಶದಲ್ಲಿ ಜಡಗೊಂಡ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯೊಂದನ್ನು ರೂಪಿಸಿ, ಗೇಣಿ ರೂಪಿತ ಉತ್ಪಾದನಾ ವಿಧಿವಿಧಾನಗಳು ಅಪ್ಪಟ ಶ್ರಮಿಕರನ್ನು ತಯಾರಿಸುವಂತಾಹದ್ದೆ ಆಗಿದೆ. ಇದರ ಜೊತೆ ಜೊತೆಗೆ ಇನ್ನೊಂದು ಪ್ರಮುಖ ಅಂಶವೆಂದರೆ ಒಂದು ಜನಾಂಗದ ಸಂಸ್ಕೃತಿಯನ್ನು ಹತ್ತಿಕ್ಕುವ ಪ್ರಯತ್ನ.ಒಂದು ಸಮುದಾಯದ ಆಚರಣೆ, ಆಲೋಚನಾ ವಿಧಿ ವಿಧಾನಗಳು ಆಯಾ ಸಮುದಾಯದ ಆರ್ಥಿಕ ಸಾಮಾಜಿಕ ನೆಲೆಗಳ ಜೊತೆ ನೇರ ಸಂಬಂಧವನ್ನು ಹೊಂದಿರುತ್ತದೆ.[9] ಈ ರೀತಿಯ ಗುಲಾಮಗಿರಿ ಆರ್ಥಿಕ ವ್ಯವಸ್ಥೆ ಹಂತಹಂತವಾಗಿ ಒಂದು ಜನಾಂಗದ ಸಾಂಸ್ಕೃತಿಕ ಅನನ್ಯತೆಯನ್ನು ಹತ್ತಿಕ್ಕುವ ಘೋರಹತ್ಯಾಕಾಂಡವೇ ಆಗಿರುತ್ತದೆ.

ಇಂತಹ ಸಂದರ್ಭದಲ್ಲಿ ಅನುಪಸ್ಥಿತ ಭೂಮಾಲೀಕರಿಗೆ ಬೇಕಾದುದು ಬಿಟ್ಟಿ ದುಡಿಯುವ ಕಡಿಮೆ ಕೂಲಿಯ ಕಾರ್ಮಿಕರು ಹಾಗೂ ಸುಖಲೋಲುಪತೆಗೆ ಬೇಕಾದ ಗೇಣಿಯೇ ಹೊರೆತು ಭೂಮಿಯ ಅಭಿವೃದ್ಧಿಯಾಗಿರಲಿಲ್ಲ. ಅದರಲ್ಲೂ ರೈತರ ಬದುಕಿನ ಸುಧಾರಣೆ ಅವರಿಗೆ ಅನಾವಶ್ಯಕವಾಗಿತ್ತು. ಇಂತಹ ಹೊತ್ತಿನಲ್ಲಿ ಆಳುವ ವರ್ಗ ಕೂಡ ಅತ್ಯಂತ ಜಾಣತನದಿಂದ ಬಂಡವಾಳಶಾಹಿ ವ್ಯವಸ್ಥೆ ಪರವಾಗಿ ನಿಲ್ಲುತ್ತಾ ರೈತರ ಕ್ಷೇಮ ಸಮಾಚಾರಗಳನ್ನು ನಿರ್ಲಕ್ಷಿಸುತ್ತ ಪಟ್ಟಬದ್ಧ ಹಿತಾಸಕ್ತಿಗಳನ್ನು ಪೋಷಿಸುತ್ತಾ ಉಳ್ಳವರಿಗೆ ಗೆಲ್ಲುವ ರಹದಾರಿಗಳನ್ನು ಸೃಷ್ಟಿಸುತ್ತ ಮುಂದುವರಿಯುತ್ತದೆ. ಈ ರೀತಿಯ ಪ್ರತಿಕ್ರಿಯೆಗಳು ಅಥವಾ ಅಂಶಗಳು ಯಾವುದೇ ಹೋರಾಟ ಚಳವಳಿ ಪ್ರಾರಂಭಗೊಳ್ಳಲು ಕಾರಣವಾಗುತ್ತವೆ. ಹೀಗೆ ಈ ಹಂತದಲ್ಲಿ ತಾವು ತಿನ್ನುವ ಅನ್ನ, ಬದುಕುವ ಮಾರ್ಗ, ದುಡಿಯುವ ಭೂಮಿ ಸೇರಿದಂತೆ ಯಾವಾಗ ಅದರ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೋ ಆಗ ಜನತೆ ಪ್ರತಿಭಟಿಸಿ ಹೋರಾಟವನ್ನು ಪ್ರಾರಂಭಿಸುತ್ತವೆ. ಈ ದಿಶೆಯಲ್ಲಿ ರೈತ ಹೋರಾಟ ಖಾಸಗಿ ಒಡೆತನವನ್ನು ಶಾಶ್ವತವಾಗಿ ನಿರಾಕರಿಸಿ ನಿಜ ದುಡಿಮೆಗಾರರ ಒಡೆಯನಾಗುವ ದಾರಿಯಲ್ಲಿನ ಕ್ರಾಂತಿಕಾರಕ ಚಲನೆಯಾಗಿರುತ್ತದೆ. ಇಲ್ಲಿ ಒಂದು ಶೋಷಕ ವ್ಯವಸ್ಥೆಯನ್ನು ಹೊಡೆದು ಹಾಕಿ ಇನ್ನೊಂದು ಶೋಷಕ ವ್ಯವಸ್ಥೆಗೆ ಹಕ್ಕುದಾರನಾಗದೆ, ಸಾಮಾನ್ಯ ವ್ಯಕ್ತಿಯೊಬ್ಬ ತನ್ನ ದುಡಿವ ಅನ್ನಕ್ಕೆ ನಿಜವಾರಸುದಾರನಾಗುವುದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ಹಂತದಲ್ಲಿ ಪ್ರಮುಖ ವರ್ಗ ವ್ಯವಸ್ಥೆ ಅಥವಾ ಅದನ್ನು ಪ್ರಚೋದಿಸುವ ಜಾತಿವ್ಯವಸ್ಥೆ ಶಿಥಿಲಗೊಂಡು ಉತ್ಪಾದನಾ ಶಕ್ತಿಯಾದ ಶ್ರಮಜೀವಿಯು ಸ್ವಾಭಿಮಾನಿ, ಸ್ವಾವಲಂಬಿ ಬದುಕನ್ನು ಸೃಷ್ಟಿಸಿಕೊಳ್ಳುವುದರೊಂದಿಗೆ ತನ್ಮೂಲಕ ಸರ್ವಾಂಗೀಣ ಅಭಿವೃದ್ಧಿ ಹೊಂದುವುದಾಗಿದೆ. 1951ರ ಸಾಲಿನಲ್ಲಿ ನಡೆದಿದ್ದ ಕಾಗೋಡು ರೈತ ಚಳವಳಿಗೆ ಇಂತಹ ಅಂಶಗಳು ಹಿನ್ನೆಲೆಯಾಗಿದ್ದವು. ಒಡೆಯ ಒಕ್ಕಲೆಂಬ ಪರಿಕಲ್ಪನೆಯ ಹಿಂದೆ ಜಾತಿ ಮತ್ತು ವರ್ಗವ್ಯವಸ್ಥೆ ಗೋಚರಿಸಿ ಆರ್ಥಿಕವಾಗಿ ಪ್ರಬಲವಾದ ಜನಾಂಗವೊಂದು ಆಸ್ತಿಯ ಸಮಗ್ರ ಹಕ್ಕನ್ನು ಪಡೆದುಕೊಂಡು, ಇನ್ನೊಂದು ಜಾತಿ ಮತ್ತು ವರ್ಗವನ್ನು ಶೋಷಿಸುತ್ತದೆ.[10] ಆಗ ಈ ನೆಲದ ಜೊತೆ ನಿಕಟ ಸಂಪರ್ಕ ಹೊಂದಿರುವ ಜನಾಂಗ ಅದರಿಂದ ವಿಮುಖನಾಗುವುದನ್ನು ವಿರೋಧಿಸುವಂತಹ ಬೆಳವಣಿಗೆಗಳು ಕಾಗೋಡು ರೈತ ಚಳವಳಿಯಲ್ಲಿ ಅಸ್ಫೋಟಿಸಿದ್ದಿತು.

ಕಾಗೋಡು ಚಳವಳಿ ಪ್ರಾದೇಶಿಕ ಸೀಮಿತತೆ ಹೊರಗಿನ ಸಂಘಟನೆಯ ಕೊರತೆ ಹೊಂದಿದ್ದು, ಹಿಂದಿನ ಸ್ವಾತಂತ್ರ್ಯ ಹೋರಾಟಕ್ಕಿಂತ ಬಹುಮುಖ್ಯ ಜೀವಸ್ಮರಣ ಪ್ರಶ್ನೆಯಾಗಿ ಈ ಚಳುವಳಿ ನಿಂತಿದ್ದಿತು. ಪಾಶ್ಚಾತ್ಯ ಗುಲಾಮಗಿರಿ ವಿರುದ್ಧ ಸಮಷ್ಠಿ ಪ್ರಜ್ಞೆಯಲ್ಲಿ ವ್ಯಾಪಕವಾಗಿ ಸ್ವಾತಂತ್ರ್ಯದ ಕಲ್ಪನೆಯನ್ನು ರಾಷ್ಟ್ರೀಯ ಚಳವಳಿ ತಂದಿತಾದರೂ ವಾಸ್ತವವಾಗಿ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ಜನಸಾಮಾನ್ಯರ ಪಾಲಿಗೆ ಗಗನ ಕುಸುಮವಾಗಿಯೇ ಇದ್ದ ಸಂದರ್ಭದಲ್ಲಿ ಅಷ್ಟು ದೀರ್ಘವಲ್ಲದ, ವಿಶಾಲ ತಳಹದಿಯಿಲ್ಲದ, ಆರ್ಥಿಕ ಬೆಂಬಲವಿಲ್ಲದ, ಸ್ಥಳೀಯ ಪ್ರಭುತ್ವದ ವಿರುದ್ಧ, ದೌರ್ಜನ್ಯದ ವಿರುದ್ಧ ನಡೆದ ಸಂಘರ್ಷ ಈ ಕಾಗೋಡು ರೈತ ಚಳುವಳಿಯಾಗಿದ್ದು, ಎಲ್ಲಿಯವರೆಗೆ ವೈಯುಕ್ತಿಕ ಸ್ವಾತಂತ್ರ್ಯದ ಕಲ್ಪನೆ ಲಭಿಸುವುದಿಲ್ಲವೋ ಅಲ್ಲಿಯವರೆಗೆ ರಾಷ್ಟ್ರೀಯ ಸ್ವಾತಂತ್ರ್ಯವೆಂಬುದು ಬರಿ ಭ್ರಮಾತ್ಮಕವಾಗಿರುತ್ತದೆ. ಆದುದರಿಂದಲೇ ಮುಂದಿನ ನಾಡಿನ ಬಹಳಷ್ಟು ಹೋರಾಟಕ್ಕೆ ಒಂದು ಮೂಲ ಪೀಠಿಕೆಯಾಗಿದ್ದಿತ್ತಲ್ಲದೆ, ಸ್ವಾತಂತ್ರ್ಯ ಪೂರ್ವ ರೈತ ಹೋರಾಟಗಳಿಗಿಂತ ತಾತ್ವಿಕ ಬದ್ಧತೆಗಳನ್ನು ಒಳಗೊಂಡು ಸ್ವಾತಂತ್ರ್ಯ ನಂತರದ ಹೊಸರಾಜಕೀಯ ಪರಂಪರೆಯ ಸೃಷ್ಟಿಗೆ ಇದು ಕಾರಣೀಭೂತವಾಯಿತು.[11]

ಸಾಮಾಜಿಕ, ಆರ್ಥಿಕ ವ್ಯವಸ್ಥೆಯೊಂದನ್ನು ರೂಪಿಸಬಲ್ಲ ಆಧುನಿಕ ಸಮಾಜದ ಪ್ರಮುಖ ವ್ಯವಸ್ಥೆಯಾದ ರಾಜಕೀಯ ಶಕ್ತಿಯ ಅಲೆಯೊಂದು ಕ್ರಿಯಾತ್ಮಕವಾಗಿ ಕಾಗೋಡು ರೈತ ಚಳವಳಿಯಿಂದ ಹುಟ್ಟಿಕೊಂಡು ಮುಂದೆ ಇದು ಇಡೀ ರಾಜ್ಯಾದ್ಯಂತ ಸ್ವಾತಂತ್ರ್ಯಾನಂತರದ ರೈತ ಹೋರಾಟಕ್ಕೆ ಮೂಲ ವೇದಿಕೆಯನ್ನು ಸೃಷ್ಟಿಸಿತು. ಈ ದೇಶದಲ್ಲಿ ಭೂಮಿ ಇಲ್ಲದ ಕೂಲಿಕಾರ್ಮಿಕರು ಹೇಗೆ ಭೂಮಿಯ ಬಗ್ಗೆ ಗಾಢವಾದ ಬಯಕೆಯನ್ನು ಹೊಂದಿರುತ್ತಾರೋ ಹಾಗೆಯೇ ಭೂಮಿ ಹೊಂದಿದವರು ಅದರ ಬೆಳೆಗಳ ಬೆಲೆಗಳು, ಗೊಬ್ಬರ ಸಬ್ಸಿಡಿಗಾಗಿ ಕಾದಾಡುವ ಅನಿವಾರ್ಯತೆಯನ್ನು ಕೂಡ ಹೊಂದಿದ್ದಾರೆ. ಬದಲಾಗುತ್ತಿರುವ ಆಡಳಿತಶಾಹಿ ಹಾಗೂ ದಾಳಿಯಿಡುತ್ತಿರುವ ಬಂಡವಾಳ ಶಾಹಿ ವ್ಯವಸ್ಥೆ ಜಾಗತೀಕರಣದ ಹೆಸರಲ್ಲಿ ನಡೆಯುತ್ತಿರುವ ಶೋಷಣೆ, ಇವು ವ್ಯವಸ್ಥಿತವಾಗಿ ಜಾರಿಗೊಂಡಿದ್ದನ್ನು ಪ್ರತಿಭಟಿಸುವಂತಾಯಿತು.ವಿಶೇಷವಾಗಿ ಬಹುಮುಖ್ಯವಾದ ಧನಾತ್ಮಕ ಚಿಂತನೆಯೆಂದರೆ ರೈತರು ಸಂಘಟನಾತ್ಮಕ ಶಕ್ತಿಯಾಗಿ ರೂಪುಗೊಂಡರು.

ಭಾರತದ ಇತಿಹಾಸದುದ್ದಕ್ಕೂ ರಾಜ್ಯದೊಡನೆ ಶ್ರೀಮಂತ ರೈತರು ಯಾವುದೇ ಸಂಘರ್ಷವನ್ನು ತೋರದೆ ಆಳುವ ವರ್ಗದ ಹಿತಾಸಕ್ತಿಗಳನ್ನು ಕಾಪಾಡುತ್ತಲೇ ಬಂದಿರುವುದರಿಂದ; ರೈತರ ಒಕ್ಕೂಟದ ಬೇಡಿಕೆಗಳು ಎಷ್ಟೋ ಭಾರಿ ಶ್ರೀಮಂತ ರೈತವರ್ಗದ ಬೇಡಿಕೆಗಳಂತೆ ಕಂಡುಬಂದಿದ್ದವು. ಕಾಗೋಡು ರೈತ ಚಳವಳಿಯ ನಂತರದ ನಡೆದ ರೈತ ಚಳುವಳಿಗಳು ಬಹಳಷ್ಟು ಭಿನ್ನವಾದ ಕಾರಣಗಳನ್ನು ಒಡಲಲ್ಲಿ ಇಟ್ಟುಕೊಂಡು ನಡೆದಿದ್ದವು. ಜಾಗತೀಕರಣದ ಪರಿಣಾಮ ಅತ್ಯಂತ ಗಾಢವಾಗಿ ಬೀರಿದ್ದು ರೈತನ ಮೇಲೆ, ವಿಶ್ವಬ್ಯಾಂಕ್ ಪ್ರೇರಿತ ಕೃಷಿ ನೀತಿಯಿಂದ ರೈತ ಸಾಲದ ಸಂಕಷ್ಟದಲ್ಲಿ ಸಿಲುಕಿ ಪ್ರತಿದಿನ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನಾವು ಕಾಣುತ್ತೇವೆ.[12] ಸರ್ಕಾರ ಇಂತಹ ಘಟನೆಗಳಿಗೆ ಅಲ್ಪ ಹಣಕಾಸು ಪರಿಹಾರ ಕೊಡುವುದರ ಮೂಲಕ ತಿಪ್ಪೆಸಾರಿಸುವ ಪ್ರಯತ್ನ ಮಾಡುತ್ತಿದೆಯೇ ಹೊರತು ಅದಕ್ಕೊಂದು ಶಾಶ್ವತ ಪರಿಹಾರವನ್ನು ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ನಂತರ ಬಹಳಷ್ಟು ರೈತ ಚಳುವಳಿಗಳು ನಡೆದಿವೆ.

ಮೈಸೂರು ರಾಜ್ಯದ ಮಲೆನಾಡು ಪ್ರದೇಶದಲ್ಲಿ ಶೇಕಡ 90ರಷ್ಟು ವ್ಯವಸಾಯಗಾರರು ಗೇಣಿದಾರರಾಗಿದ್ದರು. ಗೇಣಿದಾರರ ರಕ್ಷಣೆಗಾಗಿ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಕೆಲವು ನಿಬಂಧನೆಗಳು ಅಡಕವಾಗಿದ್ದರೂ ಕೂಡ ಆ ನಿಬಂಧನೆಗಳು ಪುಸ್ತಕದಲ್ಲಿದ್ದವೇ ಹೊರತು ವಾಸ್ತವಿಕವಾಗಿ ಅವುಗಳಿಂದ ಗೇಣಿದಾರರಿಗೆ ಯಾವ ರಕ್ಷಣೆಯು ದೊರೆಯುತ್ತಿರಲಿಲ್ಲ. ಅಲ್ಲಲ್ಲಿ ಕೆಲವು ಭೂ ಮಾಲಿಕರೇ ವಿನಃ ಉಳಿದ ಗೇಣಿದಾರರನ್ನು ಹಲವು ವಿಧಾನಗಳಲ್ಲಿ ಶೋಷಣೆ ಮಾಡುತ್ತಿದ್ದರು.ತಮ್ಮ ಮನಸ್ಸು ಬಂದಾಗ ಗೇಣಿದಾರರನ್ನು ಬದಲಿಸಿ ಭೂಮಿಯನ್ನು ಬೇರೆಯವರಿಗೆ ಕೊಡುತ್ತಿದ್ದರು. ಭೂ ಮಾಲೀಕರು ನಿಗದಿ ಮಾಡಿದ ಗೇಣಿಯನ್ನು ಗೇಣಿದಾರನೇ ತೆರಬೇಕಾಗಿತ್ತು. ಗೇಣಿಯ ನಿಗದಿ ಮತ್ತು ವಸೂಲಿ ಮಾಡುವಾಗ ಭೂಮಾಲೀಕರು ಗೇಣಿದಾರರ ಕಷ್ಟ ಕಾರ್ಪಣ್ಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಅಳತೆ ಮತ್ತು ತೂಕಗಳಲ್ಲಿಯೂ ಕೂಡ ಭೂಮಾಲೀಕರು ತಮಗೆ ಅನುಕೂಲವಾಗುವ ರೀತಿಯಲ್ಲಿ ಅಳೆಯುವ ಕೊಳಗಗಳನ್ನು ತೂಕದ ಬಟ್ಟುಗಳನ್ನು ಸಿದ್ಧಗೊಳಿಸುತ್ತಿದ್ದರು. ಕೆಲವು ಕಡೆಗಳಲ್ಲಿ ಭೂಮಾಲೀಕರು ನಿಷ್ಕರುಣೆಯಿಂದ ಗೇಣಿಯನ್ನು ವಸೂಲಿ ಮಾಡುವ ನೆಪದಲ್ಲಿ ಗೇಣಿದಾರರನ್ನು ದೋಚುತ್ತಿದ್ದರು. 1945ರಲ್ಲಿ ಮಲೆನಾಡು ಗೇಣಿದಾರರ ಸಂಘವೆಂಬ ಹೆಸರಿನ ಸಂಘಟನೆಯೊಂದು ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಸ್ಥಾಪಿತಗೊಂಡಿತು. 1947ರಲ್ಲಿ ಈ ಸಂಘದ ವತಿಯಿಂದ ಸಾಗರದಲ್ಲಿ ಮಲೆನಾಡು ಗೇಣಿದಾರರ ಸಮ್ಮೇಳನವು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರಿಂದ ಉದ್ಘಾಟನೆಗೊಂಡು ಪ್ರಸಿದ್ಧ ಸಮಾಜವಾದಿ ಮನಂದ ಮಿಶ್ರಾರವರು ಮುಖ್ಯ ಅತಿಥಿಗಳಾಗಿದ್ದರು. ಈ ಸಮ್ಮೇಳನದಲ್ಲಿ ಗೇಣಿರೈತರ ಪರವಾಗಿ ಗೇಣಿಯ ಪ್ರಮಾಣ 1/3 ಭಾಗಕ್ಕಿಂತ ಹೆಚ್ಚಿರಬಾರದು, ಭೂಮಾಲೀಕರು ಗೇಣಿಯನ್ನು ಸ್ವೀಕರಿಸಿದಾಗ ರಶೀದಿ ನೀಡಬೇಕು, ಅಳತೆ ಮತ್ತು ತೂಕದಲ್ಲಿ ನಿಯಮಗಳಿರಬೇಕೆಂತಲೂ, ಮುಜರಾಯಿ ಮತ್ತು ಇನಾಂ ಜಮೀನುಗಳನ್ನು ಹರಾಜು ಮಾಡಬಾರದೆಂದು ತೀರ್ಮಾನಿಸಲಾಯಿತು.[13] ಸಂಘದ ಕಾರ್ಯವೈಖರಿ ವಿಸ್ತಾರಗೊಳ್ಳುತ್ತಾ ಗೇಣಿದಾರರಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಜಾಗೃತಿ ಮೂಡಿಸತೊಡಗಿತು. ಕ್ರಮೇಣ ಮಲೆನಾಡು ಗೇಣಿದಾರರ ಸಂಘದ ಪ್ರಯತ್ನದಿಂದ ಗೇಣಿದಾರರಲ್ಲಿ ಸಂಘಟನೆ ಉಂಟಾಯಿತು. ಗೇಣಿದಾರರನ್ನು ಭೂಮಾಲೀಕರು ಭೂಮಿಯ ತಾತ್ಕಾಲಿಕ ಒಡೆತನದಿಂದ ಉಚ್ಚಾಟನೆ ಮಾಡುವುದನ್ನು ಪ್ರತಿಭಟಿಸತೊಡಗಿದವು. ಗೇಣಿದಾರರ ಸಂಘಟನೆ ಬೆಳೆಯುತ್ತಾ ಹೋದ ಹಾಗೆ ಅಲ್ಲಲ್ಲಿ ಗೇಣಿದಾರರಿಗೂ ಭೂ ಮಾಲಿಕರಿಗೂ ವಿವಾದಗಳೂ ಉದ್ಭವಿಸತೊಡಗಿದವು. ಕೆಲವು ಸಂದರ್ಭಗಳಲ್ಲಿ ರಾಜಿ ತೀರ್ಮಾನಗಳಿಂದ ಇತ್ಯರ್ಥಗೊಳ್ಳುತ್ತಿದ್ದವು. ಆದರೆ 1951ರಲ್ಲಿ ಕಾಗೋಡು ಜಮೀನುದಾರರಿಗೂ ಮತ್ತು ಅದರ ವಕ್ಕಲುಗಳಿಗೂ ಉಂಟಾಗಿದ್ದ ವಿವಾದ ಒಂದು ಹೋರಾಟಕ್ಕೆ ಕಾರಣವಾಯಿತು. ಮೊದಲು ಗೇಣಿಯ ಪ್ರಮಾಣದ ವಿಚಾರದಲ್ಲಿ ಪ್ರಾರಂಭವಾದ ವಿವಾದ ದೊಡ್ಡದಾಗಿ ಬೆಳೆಯಿತು. ಸ್ವಾತಂತ್ರ್ಯಾ ನಂತರದ ಕರ್ನಾಟಕದಲ್ಲಿನ ಮೊದಲ ಬಹುದೊಡ್ಡ ಚಳುವಳಿಯಾಗಿದ್ದಿತು.ಈ ಬಗ್ಗೆ ಹೆಚ್ಚಿನ ಮಾಹಿತಿ ಮುಂದಿನ ಭಾಗದಲ್ಲಿ ದೀರ್ಘವಾಗಿ ಚರ್ಚಿಸಲಾಗಿದೆ.

ಏಕೀಕರಣ ಪೂರ್ವ ರೈತ ಚಳುವಳಿಗಳಲ್ಲಿ ಧಣಿ ಮತ್ತು ಒಕ್ಕಲು ಸಂಬಂಧಗಳು ಭಾವನಾತ್ಮಕ ನಂಟುಗಳನ್ನು ತೀರ ಕಳಚಿಕೊಂಡಿದ್ದವು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೆಲವು ಸಂದರ್ಭಗಳಲ್ಲಿ ಸಾಧ್ಯವಾದಷ್ಟು ಹೊಂದಿಕೊಂಡಿದ್ದಿತು. ಕಿಸಾನ್‌ಸಭಾ ಮತ್ತು ಪ್ರತ್ಯೇಕ ರೈತ ಸಂಘಟನೆಗಳು ಜನತೆಯಲ್ಲಿ ಜಾಗೃತಿ ಮೂಡಿಸಿ ರೈತರಲ್ಲಿ ರಾಜಕೀಯ ಪ್ರಜ್ಞೆ, ಹಕ್ಕಿನ ಪ್ರಜ್ಞೆಗಳನ್ನು ಎಚ್ಚರಗೊಳಿಸುವಲ್ಲಿ ಯಶಸ್ವಿಯಾದರೂ ಅದು ಪೂರ್ಣಪ್ರಮಾಣದಲ್ಲಿ ಚುರುಕುಗೊಳ್ಳಲಿಲ್ಲ. ಅನ್ಯಾಯದ ವಿರುದ್ಧ ಧನಿ ಎತ್ತುವ, ದೂರು ದುಮ್ಮಾನಗಳನ್ನು ನಿಯೋಗಗಳ ಮೂಲಕ ಸತತ ಮಂಡಿಸುವ, ಪರಿಹಾರಕ್ಕಾಗಿ ಬೆಂಬತ್ತಿ ಹೋಗುವ ಪ್ರಯತ್ನಗಳು ನಾಂದಿಗೊಂಡಿದ್ದವು. ಜಮೀನ್ದಾರ್‌ಶಾಹಿಗಳೊಡನೆ ರೈತಾಪಿಶಾಹಿಯೂ ಸ್ವಲ್ಪಮಟ್ಟಿಗೆ ರೂಪುಗೊಂಡಿದ್ದಿತು. ವಿಧಾನಸಭಾ ಚರ್ಚೆಗಳಲ್ಲಿ ರೈತರ ಸಮಸ್ಯೆಗಳ ಪರಿಹಾರದ ಜೊತೆಗೆ ಪೋಲಿಸರ ಅತಿರೇಕಗಳ ವರ್ತನೆ, ಅಧಿಕಾರಿಗಳ ಕಿರುಕುಳಗಳ ಬಗ್ಗೆ ಚರ್ಚೆ, ಮೊದಲಾದವು ಜನತೆಯಲ್ಲಿ ಚಳುವಳಿಯ ಸ್ಫೂರ್ತಿಯನ್ನು ಮೂಡಿಸಿದವು. ಇದರಿಂದಾಗಿ ರೈತರ ಸಂಘಟನೆಯ ನೆಲೆ ವಿಸ್ತರಿಸಿತು. ಏಕೀಕರಣೋತ್ತರ ಚಳವಳಿಗಳ ತೀವ್ರತೆ ಭರಾಟೆ ಖಾರವಂತಿಕೆ ಪರಿಹಾರದ ಒತ್ತಾಯಗಳಿಗೆ ಬಹುಶಃ ಇವು ತಮ್ಮ ಸೋಲು ಗೆಲುವುಗಳ ಮೂಲಕ ಸ್ವಯಂ ಭೂ ವೇದಿಕೆಯನ್ನು ನಿರ್ಮಿಸಿಕೊಳ್ಳಲು ಅವಕಾಶ ಬೆಳೆದು ಬಂದಿತು. 'ಭೂಸುಧಾರಣೆ ಜಾರಿ, ಗೇಣಿಶಾಸನ ತಿದ್ದುಪಡಿ ಮಸೂದೆ, ಧಾರ್ಮಿಕದತ್ತಿ, ಇನಾಂ ರದ್ದತಿ ಮಸೂದೆ, (1953–55) ಮತ್ತು ಮೈಸೂರು ಟೆನೆನ್ಸಿ ಕಾನೂನು ತಿದ್ದುಪಡಿ ಮಸೂದೆ, 1965ರಲ್ಲಿ ನಡೆದಿದ್ದ ಸದನದ ಚರ್ಚೆಗಳ ಅಥವಾ ಕಲಾಪಗಳಲ್ಲಿನ ಸದನದ ಚರ್ಚೆಗಳ ಪಕ್ಷಿನೋಟ ಮತ್ತು ಗರ್ಭಸ್ಥ ಚಳುವಳಿಯ ಪ್ರಭಾವ ಮತ್ತು ಪ್ರೇರಣೆ ಮೊದಲಾದವು ಚರ್ಚಿಸಲ್ಪಟ್ಟಿದ್ದವು.[14]

ಕಾಗೋಡು ಚಳುವಳಿಯ ನಂತರದ ಗೇಣಿ ಶಾಸನ, ಗೇಣಿ ಹಕ್ಕು ಭೂಸುಧಾರಣೆ, ಇನಾಂ ವಂಶದ ಕುರಿತ ಮಸೂದೆಗಳ ಹಾಗೂ ತಿದ್ದುಪಡಿ 1953 ರಿಂದ 1955ರವರೆಗೆ ನಡೆದ ಚರ್ಚೆಗಳು ಚಲನಾಶೀಲ ಗತಿಯುಳ್ಳವಾಗಿದ್ದವು ಮತ್ತು ತೀವ್ರತೆಯನ್ನು ಪಡೆದಿದ್ದವು. ಒಟ್ಟಾರೆ 1953 ರಿಂದ 65ರ ನಡುವಿನ ಅವಧಿಯ ಕಾಗೋಡೋತ್ತರ ಚಳುವಳಿಗಳ ಸ್ವರೂಪಗಳು ರೈತಾಪಿ ಚಳುವಳಿಯ ಆಸ್ಫೋಟನೆಗೆ ಕಾರಣವಾಗಿ ಸೂಚನೆ ನೀಡುವುದರ ಮೂಲಕ ರೈತಾಪಿ ದಂಗೆಗಳು ಸ್ವಾತಂತ್ರ್ಯಾನಂತರವು ಆಸ್ಫೋಟಗೊಂಡವು.[15] ಕರ್ನಾಟಕ ಏಕೀಕರಣದ ನಂತರ ರೈತ ಸಂಘಗಳ ಪಾತ್ರ ಹಾಗೂ ರೈತರ ರಾಜಕೀಯ ಪ್ರಜ್ಞೆ, ಹೋರಾಟದ ಹಸಿವೂ ಹೆಚ್ಚು ತೀವ್ರವಾಗಿ ಕಂಡುಬಂದಿತು. ಭರಾಟೆಯಿಂದ ರೈತ ಚಳುವಳಿಗಳೂ ನಡೆದಿದ್ದವು.ಅದಕ್ಕೆ ಅನುಗುಣವಾಗಿ ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ರೈತರ ಪರವಾದ, ಕಾರಣವಾದ ಪರಿಹಾರ ಪ್ರಯತ್ನಗಳು ನಡೆದವು. ಕರ್ನಾಟಕ ಪ್ರಾಂತೀಯ ರೈತ ಸಂಘವೂ ಇದೇ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ರೈತ ಹೋರಾಟಕ್ಕೆ ದೊಡ್ಡ ಆಶಾಕಿರಣವಾಗಿ ಮೂಡಿತು. ಬೊಂಬಾಯಿ ಕರ್ನಾಟಕದ ಜಿಲ್ಲೆಗಳಲ್ಲಿ 1956ರ ಏಪ್ರಿಲ್ ಒಂದರಿಂದ ಉಳುವವನೆ ಆಯಾ ಹೊಲದ ಹಕ್ಕುದಾರ ಎಂದು ಆಗಸ್ಟ್ ಒಂದರಲ್ಲಿ ಹೊಸ ಸಾಗುವಳಿ ಕಾಯಿದೆ ತಿದ್ದುಪಡಿಯಾಯಿತು. ಕರ್ನಾಟಕದ ಏಕೀಕರಣವಾದನಂತರ ಕಾಯ್ದೆ ತಿದ್ದುಪಡಿ ಜಾರಿಗೊಳ್ಳದಿರಲು ಜಿಲ್ಲೆಯ ಜಮೀನ್ದಾರರು, ಶಾಸಕರು, ಆಡಳಿತ ಪಕ್ಷದ ಮುಖಂಡರು ಕಾರಣವೆಂಬ ಆರೋಪ ರೈತ ಸಂಘದ್ದಾಗಿತ್ತು. 1956ರಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಜೋಡಿ ಇನಾಂನ್ನು ರದ್ದುಮಾಡಿತು. ರೈತರ ಬಳಿ ದಾಖಲೆಗಳು ಹಾಗೂ ಅವರಿಗೆ ಓದು ಬರಹ ತಿಳುವಳಿಕೆ ಇಲ್ಲದಿದ್ದ ಸಂದರ್ಭದಲ್ಲಿ ಜಮೀನುಗಳನ್ನು, ರೆವಿನ್ಯೂ ಗ್ರಾಮಗಳನ್ನು ರೂಪಿಸಿದಾಗ, ಜಮೀನ್ದಾರರಿಗೆ ಬಿಟ್ಟುಕೊಟ್ಟಾಗ ಸಮಸ್ಯೆಗಳು ಪ್ರಾರಂಭಗೊಂಡವು. ಅಕ್ಟೋಬರ್ 21, 1956ರಲ್ಲಿ ಸುಮಾರು 300 ರೈತರ ಪ್ರತಿಭಟನಾ ಮೆರವಣಿಗೆಯನ್ನು ರೈತ ಸಂಘದ ಮೂಲಕ ಏರ್ಪಡಿಸಲಾಯಿತು. ಕೊಡಗಿನ ಮೂರ್ನಾಡಿ ಸಮೀಪದ ಕಟ್ಟೆಮಡು ಗ್ರಾಮದ 23 ಎಕರೆ ಪೈಸಾರಿ ಭೂಮಿ (ಕಾಯ್ದಿರಿಸಿದ್ದ) ಯನ್ನು ಸರ್ಕಾರದಿಂದ ಕೆಲವು ಜಮೀನ್ದಾರರು ಪಡೆಯಲು ಯತ್ನಿಸಿದುದನ್ನು ರೈತ ಸಂಘವು ಪ್ರತಿಭಟಿಸಿತು. ಬಿಜಾಪುರದ ಪ್ರದೇಶಗಳಲ್ಲಿ ಬೊಂಬಾಯಿ ಟೆನೆನ್ಸಿಕಾಯ್ದೆಯ ಪ್ರಕಾರ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿಗೆ ಭಾಗ ತೆರಿಗೆ ಕೊಡಬೇಕೆಂಬುದನ್ನು ರೈತಮುಖಂಡ ಬಸವರಾಜಪ್ಪ ಎಂಬುವವರ ನಾಯಕತ್ವದಲ್ಲಿ ವಿರೋಧಿಸಲಾಯಿತು. ಇನಾಂಪದ್ಧತಿ ಶಾಸನದಿಂದ ಹೊರಗುಳಿಯಲು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರದ ಕೆಲವು ಜಮೀನ್ದಾರರು ಕೃತಕ ದಾಖಲೆಗಳನ್ನು ರೂಪಿಸಿ ರೈತರಿಗೆ ಬಂಜರು ಭೂಮಿಯನ್ನು ಬಿಟ್ಟಾಗ ಅದನ್ನು ಉಗ್ರಪ್ಪ ಮತ್ತು ಬೋರೇಗೌಡರೆಂಬ ಮುಖಂಡರು ಊರಿನ ರೈತ ಸಂಘಟನೆ ರೂಪಿಸಿ ವಿರೋಧ ವ್ಯಕ್ತಪಡಿಸಿದ್ದರು. ಹೀಗೆ ಭೂಮಾಲೀಕರಿಗೆ ಹೆಚ್ಚು ಅನುಕೂಲವಾಗುವಂತಿದ್ದ ಭೂ ಸುಧಾರಣಾ ವ್ಯವಸ್ಥೆ, ಸ್ವಂತ ಸಾಗುವಳಿ ನೆಪದಲ್ಲಿ ಒಕ್ಕಲೆಬ್ಬಿಸುವ ವ್ಯವಸ್ಥೆ, ಭೂ ಪರಿಹಾರ ಧನ ಗೇಣಿಯ 15ರಷ್ಟು ಇದ್ದು, ಅದನ್ನು ಕಂತುಗಳಲ್ಲಿ 20 ವರ್ಷಗಳ ಅವಧಿಯಲ್ಲಿ ಕೊಡಲು ಅವಕಾಶವಿದೆಯೆಂಬ ಈ ಭೂ ಮಾಲೀಕರಿಗೆ ಹೆಚ್ಚು ಅನುಕೂಲವಾಗುವಂತಿರುವ ವ್ಯವಸ್ಥೆಗಳನ್ನು ರೈತವರ್ಗ ವಿರೋಧಿಸಿತು.[16]

ವಾಣಿಜ್ಯ ಬೆಳೆಗಳ ಬೆಲೆ ವಿಷಯ, ಮಾರುಕಟ್ಟೆ ವ್ಯವಸ್ಥೆ, ತೆಂಗು ಬೆಳೆಗಾರರು ಸೂಕ್ತ ಬೆಲೆಗೆ ಮತ್ತು ಧಾರಣೆಯಲ್ಲಿನ ಕುಸಿತ, ರೇಷ್ಮೆ ಬೇಳೆಗೆ ನೀಡುವ ಸೌಲಭ್ಯ, ಸಲಕರಣೆ ಹಣಕಾಸಿನ ಸಹಾಯ, ಮೊದಲಾದವುಗಳನ್ನು ಕುರಿತ ರೈತರ ಪ್ರತಿಭಟನೆ ಜೊತೆಯಲ್ಲಿ ರಾಜಕೀಯ ಹಸ್ತಕ್ಷೇಪ ಮೊದಲಾದವುಗಳನ್ನು ಕುರಿತ ಚಿಂತನ ಕ್ರಮಗಳು, ಪರಿಹಾರಗಳು, ಹೊಸ ಸಹಸ್ರಮಾನದ ಕೃಷಿ ಬದುಕಿನ ಚಿತ್ರಣವನ್ನು ನೀಡುತ್ತವೆ. ಮೊದಲಿನ ಹೋರಾಟಗಳಲ್ಲಿ ನೋವು ಅನುಭವಿಸಿ ಹೋರಾಟದ ಕಸುವುಗಳನ್ನು ಸಾಕಷ್ಟು ಕಾಲ ಉಳಿಸಿಕೊಂಡು ಬಂದರೂ ಸಂಘಟನೆಯ ನೆಲೆಗಳು ಈ ಸಹಸ್ರಮಾನ ವರ್ಷದ ಚಟುವಟಿಕೆಯಂತೆ ವ್ಯಾಪಕವಾಗಿತ್ತು. ಮುಖ್ಯವಾಗಿ ಜಾಗತೀಕರಣದ ಅನ್ವಯ ಕೃಷಿ ಬದುಕಿನ ಮೇಲೆ ಹರಡಿರುವ ಪರಿಣಾಮಗಳಿಂದಾಗಿ, ಸ್ವದೇಶಿ ಚಿಂತನೆಗಳೂ ಹೋರಾಟದ ಕಸುವನ್ನು ಗಟ್ಟಿಯಾಗಿಯೆ ಪ್ರದರ್ಶಿಸುತ್ತಿವೆ. ಇಲ್ಲಿನ ಸಂದಿಗ್ಧಗಳೂ, ರಾಜಕಿಯ ವಾಸನೆಗಳೂ ಹೋರಾಟದ ಚಟುವಟಿಕೆಗಳನ್ನು ಪುಷ್ಠೀಕರಿಸುತ್ತದೆ.[17] ಜಾಗತೀಕರಣ, ಉದಾರೀಕರಣ ಮತ್ತು ಭೌಗೋಳೀಕರಣಗಳು ಸ್ಥಳೀಯ ಕೃಷಿ ವ್ಯವಸ್ಥೆಗೆ ಮಾರಕವಾಗಲು ಸಮೀಪಿಸುತ್ತಿವೆ. ಇಂತಹ ಹಳಿತಪ್ಪಿದ ವ್ಯವಸ್ಥೆಗಳನ್ನು ಹದಗೊಳಿಸುವ ಕಾರ್ಯ, ಚಟುವಟಿಕೆಗೆ ಚಿಂತನಶೀಲತೆ ಎಂಬುದು ಶಿಸ್ತು, ಸಂಯಮ, ಸಂಘಟನೆಗಳ ಮೂಲಕ ವ್ಯಕ್ತಗೊಂಡು ರೈತ ಸಮುದಾಯವನ್ನು ಆತಂಕ, ಆವೇಶ ಹತಾಶೆ, ಆತ್ಮಹತ್ಯೆ, ಬಲಿದಾನ ಮೊದಲಾದ ಸನ್ನಿವೇಶಗಳಿಂದ ಹೊರತರಬೇಕಾಗಿದೆ.

## ಕೊನೆಟಿಪ್ಪಣಿ


- **ನಾಗರಾಜ ಎಂ.ಜಿ.,** ಕರ್ನಾಟಕ ರೈತ ಚಳವಳಿ – ಸತ್ಯಾಗ್ರಹಗಳು, ಸಂ.1, (ಬೆಂಗಳೂರು, 2006), ಪು.120.
- **ಚಂದ್ರಶೇಖರ ಎಸ್.,** ರೈತವರ್ಗ ಹಾಗೂ ರಾಷ್ಟ್ರೀಯ ಚಳವಳಿ, ಕಾಗೋಡು ಚಳವಳಿ, ಸುವರ್ಣ ಸಂಪುಟ, (ಶಿವಮೊಗ್ಗ, 2002), ಪು. 372.
- **ಶ್ರೀಪಾದಶೆಟ್ಟಿ,** ಉತ್ತರ ಕನ್ನಡ ಜಿಲ್ಲೆ ರೈತ ಹೋರಾಟ ಮತ್ತು ದಿನಕರ ದೇಸಾಯಿ, ಕಾಗೋಡು ಚಳವಳಿ, ಸುವರ್ಣ ಸಂಪುಟ, (ಶಿಮೊಗ್ಗ, 2002), ಪು.322–323.


*– 24ನೇ ಪುಟಕ್ಕೆ ಮುಂದುವರೆದುದು*

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಡಾ. ಫ. ಗು. ಹಳಕಟ್ಟಿಯವರ ವಚನ ಪ್ರೇಮ ಮತ್ತು ವ್ಯಕ್ತಿತ್ವ

✍ **ಡಾ. ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ,** ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನೇಸರಗಿ ತಾ : ಬೈಲಹೊಂಗಲ.

**ಪೀಠಿಕೆ**

ಕನ್ನಡ ನಾಡುಕಂಡ ಮಹಾಚೇತನಾ ಶಕ್ತಿ, ಸರ್ವ ಶ್ರೇಷ್ಠ ಶರಣ ವಚನ ಪಿತಾಮಹ ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರ ವಚನ ಪ್ರೇಮ ಮತ್ತು ವ್ಯಕ್ತಿತ್ವ ಇತಿಹಾಸದ ಪುಟದಲ್ಲಿ ಚಿರಸ್ಥಾಯಿ. 1880 ಜುಲೈ 2 ರಂದು ಧಾರವಾಡದಲ್ಲಿ ತಂದೆ ಗುರುಬಸಪ್ಪ ತಾಯಿ ದಾನಮ್ಮರ ಉದರದಲ್ಲಿ ಜನಿಸಿದ ಹಳಕಟ್ಟಿಯವರು 20 ನೇ ಶತಮಾನದ ಕ್ರಾಂತಿ ಪುರುಷ. ತಮ್ಮ ಜ್ಞಾನ ಮತ್ತು ಸತ್ಕ್ರಿಯಾ ಬಲದಿಂದ ಸಾಹಿತ್ಯ ಹಾಗೂ ಸಮಾಜ ಸೇವೆಯನ್ನು ಮಾಡಿ ಪ್ರತಿ ಹೆಜ್ಜೆಯಲ್ಲೂ ಹೊಸದೊಂದು ಮೈಲುಗಲ್ಲನ್ನು ಸ್ಥಾಪಿಸಿದ ಧೀಮಂತ ಅನುಭಾವಿ.

ಫ. ಗು. ಹಳಕಟ್ಟಿಯವರ ಜೀವನ ಸಾಧನೆ ಸಪ್ತಸಾಗರಗಳಷ್ಟು ವಿಸ್ತೃತ. ಅವರ ಮಹೋನ್ನತವಾದ ವಚನ ಪ್ರೇಮ ಮತ್ತುಅಖಂಡ ವ್ಯಕ್ತಿತ್ವವನ್ನು ಆಗಸದಲ್ಲಿಯ ಚಂದಿರನನ್ನು ಕನ್ನಡಿಯಲ್ಲಿ ಸೆರೆ ಹಿಡಿದು ತೋರಿದಂತೆ ಈ ಪುಟ್ಟ ಲೇಖನದ ಆಶಯ. ವಿಜಯಪುರದ ಮತ್ತೊಂದು ಪ್ರಸಿದ್ಧ ಗುಮ್ಮಟವೆಂದರೆ ಫ. ಗು. ಹಳಕಟ್ಟಿಯವರು. ವಚನ ವಾಙ್ಮಯ ಎಂದಾಕ್ಷಣ ನಮ್ಮ ಕಣ್ಮುಂದೆ ಕಂಗೊಳಿಸುವ ಕನ್ನಡದ ಕೀರ್ತಿ ಶಿಖರ ಹಳಕಟ್ಟಿಯವರು. ಜಗದ, ಯುಗದ ಶ್ರೀಮಂತವಾದ ವಚನ ವಾಙ್ಮಯಕ್ಕೆ ಪುನರ್ಜನ್ಮ ನೀಡಿದ ಪುಣ್ಯಾತ್ಮ.

ಸಮಸ್ತ ಜನತೆಗೆ ಬಸವಾದಿ ಪ್ರಮಥರನ್ನು ಪರಿಚಯಿಸಿ, ಶಿವ ಶರಣರಿಗೆ ಅಮೂಲ್ಯವಾದ ಚಾರಿತ್ರಿಕ ನೆಲೆ ಒದಗಿಸಿ ವಚನ ಹೊಂಗಿರಣ ಪ್ರತಿ ಪ್ರಜೆಯ ಮನೆ ಮನದಂಗಳದಲ್ಲಿ ಪ್ರಕಾಶಿಸುವಂತೆ ಮಾಡಿದ ಮಹಾನ್ ಸಾಧಕ. ಅಂದು ಕಾಲ ಗರ್ಭದಲ್ಲಿ ನಾಶವಾದ, ನುಶಿ ಹೆಗ್ಗಣಗಳಿಗೆ ಆಹಾರವಾಗಿ ಅಳಿದುಳಿದ ವಚನ ಸಾಹಿತ್ಯವನ್ನು ರಕ್ಷಿಸಲು ಹಳಕಟ್ಟಿಯವರು ನಡೆಸಿದ ಹೋರಾಟ ಅದ್ವಿತೀಯ. ಮಳೆ, ಚಳಿ, ಬಿಸಿಲು, ಹಸಿವು, ನಿದ್ರೆ ಮತ್ತು ನೀರಡಿಕೆಗಳನ್ನು ಲೆಕ್ಕಿಸದೆ ಮನೆ, ಮಠ, ಮಂದಿರ ಹಾಗೂ ಗ್ರಾಮ ಗ್ರಾಮಗಳನ್ನು ಸುತ್ತಿ ವಚನಗಳನ್ನು ಸಂಶೋಧಿಸಿದವರು. ದೊರೆತ ವಚನಗಳೆಲ್ಲವನ್ನು ತಮ್ಮ ತಾರ್ಕಿಕ ತಕ್ಕಡಿಯಲ್ಲಿಟ್ಟು ತೂಗಿ ಪರಿಷ್ಕರಿಸಿ ಪ್ರಕಟಿಸಿದವರು. ಸುಮಾರು ಮೂರುನೂರು ಜನ ಬಸವಾದಿ ಪ್ರಮಥರ ವಚನಗಳನ್ನು ಹೆಕ್ಕಿ ತೆಗೆದು, ಶರಣರ ವಚನಾಮೃತವನ್ನು ಸಹೃದಯರ ನಾಲಿಗೆಯ ಮೇಲೆ ತಂದಿಟ್ಟು ಆಧ್ಯಾತ್ಮಿಕ ನೆಲಗಟ್ಟಿನ ಮೇಲೆ ಬದುಕು ರೂಪಿಸಿಕೊಳ್ಳಲು ಮುನ್ನುಡಿ ಬರೆದ ಮೊದಲ ಮಹಾನುಭಾವಿ ಹಳಕಟ್ಟಿಯವರು.

ಸಮಾಜದ ಅಂಕುಡೊಂಕುಗಳನ್ನು ತಿದ್ದಿತೀಡಿ ಆರೋಗ್ಯ ಪೂರ್ಣ ಸಮಾಜವನ್ನು ಕಟ್ಟುವಲ್ಲಿ ವಚನಗಳ ಪಾತ್ರ ಬಹು ಮುಖ್ಯವೆಂದು ಅರಿತ ಹಳಕಟ್ಟಿಯವರು ವಕೀಲ ವೃತ್ತಿಯಲ್ಲಿದ್ದರೂ ವಚನ ಸಾಹಿತ್ಯದ ಸಂರಕ್ಷಣೆ ಮತ್ತು ಪ್ರಚಾರಕ್ಕೆ ಕಂಕಣಬದ್ಧರಾಗಿ ದುಡಿದ ಅವದಿ ಅಮೋಘವಾದುದು. ಈ ಕಾರಣದಿಂದಲೇ ಹಳಕಟ್ಟಿಯವರನ್ನು ಅಭಿನವ ಬಸವಣ್ಣನೆಂದು ಕರೆಯಲಾಗುತ್ತದೆ. ಅನುಭವ ಮತ್ತು ಅನುಭಾವಗಳೆರಡರ ನಡುವೆ ಆತ್ಮ ಸಾಕ್ಷಾತ್ಕಾರದ ನಿಜ ಸ್ವರೂಪ ಕಂಡ ಹಳಕಟ್ಟಿಯವರ ಪ್ರತಿ ನಡೆ ನುಡಿಯಲ್ಲವೂ ಅನುಭಾವದ ಪಾಕವಾಗಿ ಸ್ಫುರಿಸಿದೆ.

**"ವೇದವೇ ಹಿರಿದೆಂದು ವಾದವನು ಮಾಡುವಿರಿ ?**
**ವೇದದಲಿ ಏನು ಅರಿವಿಹುದು?**
**ಅನುಭವಿಯ ವೇದವೇ ವೇದ ಸರ್ವಜ್ಞ"**

ಎಂಬ ಸರ್ವಜ್ಞನ ಅಮೃತವಾಣಿಗೆ ಹಳಕಟ್ಟಿಯವರೇ ಜೀವಂತ ಸಾಕ್ಷಿ. ಸಂಶೋಧನೆ, ಅಧ್ಯಯನ ಹಾಗೂ ಪ್ರಕಟಣೆಗಳನ್ನು ಮೈಗೂಡಿಸಿಕೊಂಡ ಹಳಕಟ್ಟಿಯವರ ಪರಮಗುರಿ ಉತ್ತಮ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಪ್ರೀತಿ ಮತ್ತು ಸ್ನಿಗ್ಧಭಾವದಿಂದ ಸಮಾನತೆ, ಸರ್ವೋದಯದ ನಾಡನ್ನುಕಟ್ಟುವದೇ ಆಗಿತ್ತು ಎಂಬುದು ಗಮನಾರ್ಹ ಸಂಗತಿ.

ಕಾಯಕಯೋಗಿ ಫ. ಗು. ಹಳಕಟ್ಟಿಯವರು ಸದಾ ನಾಡ ಮತ್ತು ರಾಷ್ಟ್ರ ಕಲ್ಯಾಣ ಕನಸು ಕಂಡವರು. ಅದಕ್ಕಾಗಿ ಜೀವನ ಪರ್ಯಂತ ಅನೇಕ ಕಷ್ಟ ಕೋಟಲೆಗಳನ್ನು ಮೆಟ್ಟಿನಿಂತು ವಿಜಯ ಸಾಧಿಸಿದವರು. ಇಂಥಹ ಶರಣ ಕುಲದೀಪಕ, ಜ್ಞಾನ ದಾಸೋಹಿ ಹಳಕಟ್ಟಿಯವರ ಕುರಿತು ನಾಡಿನ ಹಿರಿಯ ಕವಿ ಸಿದ್ದಯ್ಯ ಪುರಾಣಿಕರು ರಚಿಸಿದ 'ಕರುನಾಡ ಕಾರಣಿಕ' ಕವಿತೆಯ ಪಂಕ್ತಿಗಳು ಹಳಕಟ್ಟಿಯವರ ಸಾಧನೆಯ ಯಶೋಗಾಥೆಯನ್ನು ಮಾರ್ಮಿಕವಾಗಿ ಚಿತ್ರಿಸುತ್ತವೆ.

**"ಹಗಲೆಲ್ಲ ಹುಟ್ಟುವರೆ**
**ಹಳಕಟ್ಟಿಯಂತವರು**
**ಶತಕ ಸುಕೃತದ ಸತ್ವ**
**ಕೊಟ್ಟು ನಿಂತವರು?**
**ಕಷ್ಟಗಳೆ ಆಹಾರ**
**ನಷ್ಟಗಳೆ ನೀರು**
**ಕ್ಲೇಶಗಳೆ ಹಾಸಿಗೆಯು**
**ದೊರೆತವಿವು ಮೂರು**
**ಆದರೂ ಶರಣನಿವ**
**ಕೆಂಗಡಲೆಇಲ್ಲ !**
**ಆದರ್ಶ ಧ್ಯೇಯಗಳ**
**ಕೈಬಿಡಲೆಇಲ್ಲ"**

ಕವಿ ಡಿ. ಎಸ್. ಕರ್ಕಿಯವರು ರಚಿಸಿದ 'ಗುರುವಾರ' ಎಂಬ ಕವನದಲ್ಲಿ ಹಳಕಟ್ಟಿಯವರ ಅಪ್ರತಿಮ ವ್ಯಕ್ತಿತ್ವ ಅನಾವರಣಗೊಂಡಿದೆ. ವಚನ ವಾಙ್ಮಯವನ್ನು ಸಂಶೋಧಿಸಿ ಜನತೆಯ ಅಂತರಂಗದ ಕಣ್ಣು ತೆರೆಸಿದ ಹಳಕಟ್ಟಿಯವರನ್ನು ಗುರುಗಳಲ್ಲಿ ಪರಮಗುರು ಎಂದು ಸಂಭೋಧಿಸಿದ ಪರಿಅರ್ಥ ಪೂರ್ಣವಾಗಿದೆ.

**"ಶ್ರೀ ಹಳಕಟ್ಟಿಯವರ ನೆನವು ನಮಗೆಲ್ಲ**
**ಪ್ರೇರಣೆಯ ನೀಡುವ ಘನ ನೆನಹಾಗದೇನಯ್ಯ"**

ಫ. ಗು. ಹಳಕಟ್ಟಿಯವರು ಮನುಜಮತ ವಿಶ್ವ ಪಥದರಹ ದಾರಿಯಲ್ಲಿ ಸಾಗಿದವರು. ಇವರು ಸದಾ ಭಾವ ಪೂರ್ಣ ಭಕ್ತಿ ಮತ್ತು ನಿತ್ಯಕಾಯಕದ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ವಿಶ್ವ ಬಂಧುತ್ವ, ಬಸವಣ್ಣನವರಂತೆ ಹಳಕಟ್ಟಿಯವರು ಮನುಜತ್ವ– ಶರಣತ್ವ ಸಿದ್ಧಾಂತವನ್ನು ರೂಢಿಸಿಕೊಂಡು ಜೀವಿಸಿದವರು. ಕವಿ ಶ್ರೀ ಬ. ಗಿ. ಯಲ್ಲಟ್ಟಿಯವರ 'ಚಿರಂತನವಾಗಿ ಬದುಕಿರಿ' ಕವಿತೆ ಸುಂದರವಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**"ಓ ವಚನ ಪಿತಾಮಹ, ನಿಮ್ಮ ನೆನಹುವುದೊಂದು**
**ಬಸವ ಕ್ರಾಂತಿಯಚಿತ್ರ ಪ್ರತ್ಯಕ್ಷದರ್ಶನವು"**

ಚೆಂಬೆಳಕಿನ ಕವಿ ಚೆನ್ನವೀರಕಣವಿಯವರು ರಚಿಸಿದ 'ಹಳಕಟ್ಟಿಯವರ ಸ್ಮರಣೆ' ಕವನವು ವಚನ ವಾಙ್ಮಯಕ್ಕೆ ನೀಡಿದ ಕೊಡುಗೆಯನ್ನು ಮನೋಜ್ಞವಾಗಿ ಚಿತ್ರಿಸುತ್ತದೆ.

**"ಯಾವುದೊ ಅಮೃತಗಳಿಗೆ; ನಿಮ್ಮದೃಷ್ಟಿಗೆ ಬಿತ್ತು.**
**ಹೂತಿಟ್ಟ ಹೊನ್ನಗಣಿ ! ತೋಡಿದಿರಿ ಹಗಲಿರಳು**
**ಮೈಮರೆತು; ಹೊರದೆಗೆದು ಹೇರಿದಿರಿ ಬಂಡಿ ಬಂಡಿ**
**ಚಿನ್ನದಅದಿರು; ಹಿಂಗಿತು ಹಸಿವು ನೀರಡಿಕೆ"**

ನಶಿಸಿ ಹೋಗುತ್ತಿರುವ ವಚನ ರಾಶಿ ದಾರ್ಶನಿಕನ ದೃಷ್ಟಿಗೆ ಬಿದ್ದಕಾರಣ ಅದರ ಸಂಶೋಧನೆಯಲ್ಲಿ ತೊಡಗಿಸಿತು. ಅಷ್ಟೇ ಅಲ್ಲದೆ ವಚನ ನಿಧಿಯನ್ನು ಹೊರತೆಗೆಯಲು ಹಳಕಟ್ಟಿಯವರು ಹಗಲಿರಳು ಹಸಿವು–ನೀರಡಿಕೆಗಳೆಲ್ಲವನ್ನು ತೊರೆದು ಶ್ರಮಿಸಿದ ಬಗೆಯನ್ನು ಕವಿ ಗುರುತಿಸಿದ್ದಾರೆ. ವಚನ ಸಂಪತ್ತನ್ನು ಬಂಗಾರವೆಂದು ಸಂಭೋಧಿಸಿದ ರೀತಿ ವಚನಗಳ ಶ್ರೇಷ್ಟತೆಯನ್ನು ಸಾರುತ್ತದೆ. 'ಗೋಳಗುಮ್ಮಟ ತಾನೆತಲೆ ಬಾಗಿತು ನಿಮಗೆ' ಎಂಬ ಕಣವಿಯವರ ನುಡಿ ಹಳಕಟ್ಟಿಯವರ ವಚನ ಗುಮ್ಮಟದ ಭವ್ಯತೆಯನ್ನು ಪ್ರತಿನಿಧಿಸುತ್ತದೆ.

**"ಊರೂರು ಸುತ್ತಿದವರು**
**ವಚನ ಸಿರಿ ಶೋಧಿಸಿದವರು**
**ಜ್ಞಾನ ಭಂಡಾರ ನಿರ್ಮಿಸಿದವರು**
**ವಚನ ರಕ್ಷಕರಾಗಿ, ನಾಡ ಭಕ್ತರಾಗಿ**
**ದುಡಿದು ಮಡಿದವರುಇತಿಹಾಸದಿ**
**ಅಮರವಾದವರು ಹಳಕಟ್ಟಿಯವರು"**

ಮೇಲಿನ ಕವಿತೆಯ ಸಾಲುಗಳು ಹಳಕಟ್ಟಿಯವರ ಸಾಹಿತ್ಯ ಪ್ರೇಮ ಮತ್ತು ನಾಡಕಲ್ಯಾಣದ ಪ್ರೇಮವನ್ನು ನೆನಪಿಗೆ ತರುತ್ತವೆ.

ಹಳಕಟ್ಟಿಯವರು ಅತ್ಯುತ್ತಮ ಸೃಜನಶೀಲ ಬರಹಗಾರರು. ಸ್ವತಂತ್ರ ಸಾಹಿತ್ಯದಡಿಯಲ್ಲಿ ಚರಿತ್ರೆಗಳು, ನಿಘಂಟು, ವಚನ ಸಂಪಾದನೆ, ಶಾಸನ ಸಂಪಾದನೆ, ರಗಳೆ ಸಂಪಾದನೆ, ಕಾವ್ಯ ಸಂಪಾದನೆ, ಗದ್ಯ ಸಂಪಾದನೆ, ಪತ್ರಿಕಾ ಸಂಪಾದನೆ ವಿಮರ್ಶೆ ಮತ್ತು ಲೇಖನಗಳು ಮುಂತಾದ ಸಾಹಿತ್ಯಿಕಕೊಡುಗೆ ಶ್ರೀಮಂತವಾದುದು. ಸಮಾಜಮುಖಿಯಾದ ಹಳಕಟ್ಟಿಯವರು ಶೈಕ್ಷಣಿಕರಂಗ, ಆರ್ಥಿಕ, ರಾಜಕೀಯ, ಔದ್ಯೋಗಿಕ ಮತ್ತು ಪತ್ರಿಕೋದ್ಯಮ ಹೀಗೆ ಮೊದಲಾದ ರಂಗಗಳ ಪ್ರಗತಿಗಾಗಿ ಶ್ರಮಿಸಿದ್ದಾರೆ. ಅಂದು ಅವರು ಸ್ಥಾಪಿಸಿದ ಸಂಘ ಸಂಸ್ಥೆಗಳು ಇಂದಿಗೂ ಫಲಪ್ರದವಾಗಿ ಗಗನದೆತ್ತರಕೆ ಬೆಳೆದು ನಿಂತಿವೆ.

ಶಿವಾನುಭವ ಮತ್ತು ನವ ಕರ್ನಾಟಕ ಪತ್ರಿಕೆಗಳನ್ನು ಆರಂಭಿಸಿ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಪರಂಪರೆ ಮತ್ತು ಸಮಾಜ ಜಾಗೃತಿ ಕಾರ್ಯ ಮಾಡಿದ್ದು ಹಳಕಟ್ಟಿಯವರ ಮರೆಯಲಾದ ಸಾಧನೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬಂತೆ ಹಳಕಟ್ಟಿಯವರ ಪ್ರತಿಕಾರ್ಯವು ಶಾಶ್ವತ. ಹಳಕಟ್ಟಿಯವರ ವ್ಯಕ್ತಿತ್ವ – ಸಾಧನೆಯ ಫಲವಾಗಿ ಅನೇಕ ಪ್ರಶಸ್ತಿ, ಗೌರವ ಸನ್ಮಾನಗಳು ಸಂದಿವೆ. ವಚನ ಪಿತಾಮಹ, ವಚನ ಗುಮ್ಮಟ, ಕರ್ನಾಟಕದ ಮ್ಯಾಕ್ಸ್ ಮುಲ್ಲರ್, ಅಭಿನವ ಬಸವಣ್ಣ, ಜಂಗಮ ವಿಶ್ವವಿದ್ಯಾಲಯ, ನವ ಕರ್ನಾಟಕದ ಶಿಲ್ಪಿ, ಯುಗಪುರುಷ ಮೊದಲಾದ ಬಿರಿದುಗಳಿಗೆ ಭಾಜನರಾಗಿದ್ದಾರೆ.

ಜೀವನ ನಿಷ್ಠೆ, ಫಲಾಪೇಕ್ಷೆಯಿಲ್ಲದ ಕಾಯಕ, ಸಹಾನುಭೂತಿ, ಸೌಜನ್ಯ, ಸ್ನೇಹ ಭಾವ, ಮಮತೆ, ವಿಶಾಲ ಹೃದಯಿ ಮೊದಲಾದ ಸದ್ಗುಣಗಳ ಸಂಪನ್ನರು. ಬಡತನದಲ್ಲೂ ಆತ್ಮಾಭಿಮಾನ ಮತ್ತು ಆತ್ಮ ವಿಶ್ವಾಸಗಳನ್ನೇ ಪ್ರಬಲ ಅಸ್ತ್ರಗಳನ್ನಾಗಿಸಿಕೊಂಡು ತೊಟ್ಟಗುರಿಯನ್ನು ಮುಟ್ಟಿದವರು. ಕುವೆಂಪುರವರ 'ಕೀರ್ತಿ ಶನಿಯೇತೊಲಗಾಚೆ' ಎಂಬ ಮಾತನ್ನು ಜೀವನದುದ್ದಕ್ಕೂ ಕರಾರುವಕ್ಕಾಗಿ ಪಾಲಿಸಿದವರು. ಪ್ರಶಸ್ತಿ ಪುರಸ್ಕಾರಗಳಿಗೆ ಹಾತೊರೆಯದೆ ಪ್ರಾಮಾಣಿಕರಾಗಿ ಜನ ಸೇವೆ ಮಾಡಿ ಜನಾನುರಾಗಿಯಾದವರು. ಕಾಯಕದಲ್ಲಿಯೇ ಕೈಲಾಸವನ್ನು ಕಂಡು ಕಾಯಕವನ್ನೇ ಪೂಜಿಸಿ ಕಾಯಕದಿಂದಲೇ ದೇವಮಾನವರಾದವರು. ಇಂತಹ ಮಹಾನ್ ಸಾಧಕರ ಜೀವನ ಮತ್ತು ಆದರ್ಶಗಳು ನಮಗೆಲ್ಲ ಸರ್ವ ಕಾಲಕ್ಕೂ ಸ್ಫೂರ್ತಿದಾಯಕ. ಅವರ ವಚನ ಪ್ರೇಮ ನಮಗೆಲ್ಲ ಮಾದರಿ. ಅವರನ್ನು ಪ್ರತಿ ದಿನ, ಪ್ರತಿಕ್ಷಣ ನೆನೆಯುವುದೇ ನಮ್ಮೆಲ್ಲರ ಆದ್ಯಕರ್ತವ್ಯ ಮತ್ತು ಭಾಗ್ಯವೆಂದು ಭಾವಿಸೋಣ.

## ಪರಾಮರ್ಶನ ಗ್ರಂಥಗಳು


- **ಮರುಳಸಿದ್ದಯ್ಯ ಎಚ್. ಎಂ. (2004) :** ಅರಿವು ಆಚರಣೆ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು
- **ಆರ್. ಸಿ. ಹಿರೇಮಠ (1968) :** ಧಾರವಾಡ, ಇಪ್ಪತ್ತೇಳು ಶಿವಶರಣೆಯರ ವಚನಗಳು, ಭಾಗ–3,
- **ಶ್ರೀನಿವಾಸಮೂರ್ತಿ ಎನ್. ಆರ್. (2012) :** ವಚನ ಧರ್ಮಾನುಸಾರ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತು
- **ಡಾ. ಎಂ. ಎಂ. ಕಲಬುರ್ಗಿ, ವಚನ (2012) :** ಶಿವಶರಣರ ವಚನಗಳ ಸಂಕಲನ, ಪ್ರಕಾಶಕರು ಬೆಂಗಳೂರು ಬಸವ ಸಮಿತಿ ಬಸವ ಭವನ.
- **ಪ್ರಕಾಶ ಈ. ರ. ಶೆಟ್ಟಿ (2020) :** ಹನ್ನೆರಡನೇ ಶತಮಾನದ ಶರಣ ದಂಪತಿಗಳ ದರ್ಶನ, ಬೆಳಗಾವಿ ಚೆನ್ನಬಸವ ಪೌಂಡೇಶನ್ (ರಿ).
- **ಸಿದ್ದಯ್ಯ ಪುರಾಣಿಕ (1960) :** ಶರಣಚರಿತ್ರಾಮೃತ, ಮೈಸೂರು ವಯಸ್ಕರ ಶಿಕ್ಷಣ ಸಮಿತಿ.
- **ಫ.ಗು. ಹಳಕಟ್ಟಿ ಶಿವಶರಣರ ಚರಿತ್ರೆಗಳು ಭಾಗ–1, 1944**
- **ಫ.ಗು. ಹಳಕಟ್ಟಿ :** ಅರವತ್ತಮೂರು ಶಿವಶರಣರ ಚರಿತ್ರೆಗಳು ಭಾಗ–2,
- **ಶರಣಕಥಾ ಮಾಲೆ,** ಬೆಂಗಳೂರು ಬಸವ ಸಮಿತಿ.
- **ಬಸವ ಪಥ ಮಾಸ ಪತ್ರಿಕೆಗಳು,** ನಿಯತ ಕಾಲಿಕೆಗಳು.


■■


ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com


APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ತೃತೀಯ ಲಿಂಗಿಗಳ ಪ್ರಸ್ತುತ ಶಿಕ್ಷಣ, ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳು

✍ **ಡಾ. ಪ್ರಕಾಶ** ಸಿ. ಸಂಶೋಧನಾರ್ಥಿ, ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. ಶಿವಮೊಗ್ಗ–577451.

✍ **ಡಾ. ಜಗನ್ನಾಥ ಕೆ. ಡಾಂಗೆ,** ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ–577451.

**ಸಾರಾಂಶ**

ಭಾರತ ದೇಶ ಪ್ರಜಾಪ್ರಭುತ್ವ ದೇಶವಾಗಿದೆ ಮತ್ತು ಪ್ರತಿಯೊಬ್ಬ ಪ್ರಜೆಗೂ ಸಮಾನ ಅವಕಾಶ ಕಲ್ಪಿಸುವುದು ಭಾರತೀಯ ಸಂವಿಧಾನದ ಆಶಯವಾಗಿದೆ. ಜಾತಿ, ಧರ್ಮ ಅಥವಾ ಲಿಂಗವನ್ನು ಲೆಕ್ಕಿಸದೆ ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಮತ್ತು ಸಾಧಿಸುವುದು ಪ್ರತಿಯೊಬ್ಬರಿಗೂ ಭಾರತೀಯ ಸಂವಿಧಾನದಲ್ಲಿ ಅವಕಾಶವಿದೆ. ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದ ಅಭಿವೃದ್ಧಿಗೆ ಶಿಕ್ಷಣ ಅತ್ಯಗತ್ಯವಾಗಿದೆ. ಇಂತಹ ಶಿಕ್ಷಣವು ಜಾತಿ, ಧರ್ಮ, ಲಿಂಗಗಳ ತಾರತಮ್ಯವಿಲ್ಲದೆ ಸರ್ವರಿಗು ಸಲ್ಲಬೇಕಾಗಿದೆ.ಲಿಂಗಗಳ ಆಧಾರದ ಮೇಲೆ ನೋಡುವುದಾದರೆ ಮಂಗಳಮುಖಿಯರು ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ಮಂಗಳಮುಖಿಯರನ್ನು ಸರ್ಕಾರವು ತೃತೀಯ ಲಿಂಗಕ್ಕೆ ಸೇರಿಸಿದೆ. 2011ರ ಜನಗಣತಿಯ ಪ್ರಕಾರ, ಭಾರತದಲ್ಲಿ ಸುಮಾರು 4.9 ಲಕ್ಷತೃತೀಯ ಲಿಂಗಿಗಳು ಇದ್ದಾರೆ. ಮಂಗಳಮುಖಿ ಎಂದರೆ "ಹೆಣ್ಣು ಅಲ್ಲದ ಗಂಡು ಅಲ್ಲದ ಒಂದು ವ್ಯಕ್ತಿಯ ಮನಃಸ್ಥಿತಿ". 'ತೃತೀಯ ಲಿಂಗ' ಅಥವಾ 'ಮಂಗಳಮುಖಿ' ಎನ್ನುವ ಪರಿಭಾಷೆಗಳು ಇತ್ತೀಚೆಗೆ ಅಧಿಕೃತವಾಗಿ ಮತ್ತು ಹೆಚ್ಚಾಗಿ ಬಳಕೆಯಾಗುತ್ತಿವೆ. ಈ ಪದಗಳ ಬಳಕೆಗಿಂತ ಮುಂಚೆ ಇಂತಹವರನ್ನು ನಪುಂಸಕ, ಚಕ್ಕ, ಕೋಜಾ, ಹಿಜ್ರಾ, ಚನ್ನಪಟ್ಟಣ, ದ್ವಿಲಿಂಗಿ, ಶಿಖಂಡಿ ಮುಂತಾದ ಪದಗಳು ಬಳಕೆಯಾಗುತ್ತಿದ್ದವು. ಹಿಜರಾ ಎನ್ನುವುದಕ್ಕೆ ಪರ್ಷಿಯನ್ ಭಾಷೆಯಲ್ಲಿ ವಲಸೆ ಹೋಗುವವರು ಎನ್ನುವ ಅರ್ಥವಿದೆ. ತೃತೀಯ ಲಿಂಗಿಗಳಿಗೆ ಪ್ರಸ್ತುತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡಲಾಗುತ್ತಿದೆ ಆದರೂ ಸಹ ಇತರೆ ಮಕ್ಕಳಂತೆ ಸೂಕ್ತ ಕಲಿಕಾ ವಾತಾವರಣ, ಸಮಾನ ಕಲಿಕಾ ಅವಕಾಶಗಳು ಮತ್ತು ಸ್ವಂತ ಅಭಿಪ್ರಾಯ, ಭಾವನೆಗಳಿಗೆ ಮುಕ್ತ ಮತ್ತು ಸೂಕ್ತ ಮನ್ನಣೆ ನೀಡಲಾಗುತ್ತಿಲ್ಲ ಎಂಬ ಸಂಗತಿಯು ನಾಗರಿಕ ಸಮಾಜವನ್ನು ತಲ್ಲೆ ತಗ್ಗಿಸುವಂತೆ ಆಗಿದೆ. ತೃತೀಯ ಲಿಂಗಿಗಳು ಸಂಸ್ಕೃತಿಕ ಭಾಗವಹಿಸುವಿಕೆ, ಕುಟುಂಬ ಮತ್ತು ಸಮಾಜದಿಂದ ದೂರವಿರುತ್ತಾರೆ. ತೃತೀಯ ಲಿಂಗಿಗಳಿಗೆ ಸರಿಯಾದ ಶಿಕ್ಷಣ, ಉದ್ಯೋಗವಿಲ್ಲದೆ ಬೀದಿಯಲ್ಲಿ ಭೀಕ್ಷೆ ಬೇಡಿ ದೈನಂದಿನ ಜೀವನ ನಡೆಸುವಂತೆ ಆಗಿದೆ. ತೃತೀಯ ಲಿಂಗಿಗಳಿಗೂ ಸಮಾಜದಲ್ಲಿ ಎಲ್ಲರಂತೆ ಬದುಕುವ ಹಕ್ಕು ಇದೆ. ಮಂಗಳಮುಖಿಯರೆಂದು ಹೀಯಾಳಿಸಿ, ತಾತ್ಸಾರ ಮನೋಭಾವನೆಯಿಂದ ಕಾಣುವುದನ್ನು ಬೀಡಬೇಕು. ನಾಗರಿಕ ಸಮಾಜ ಮಾನವೀಯತೆ ದೃಷ್ಟಿಯಿಂದ ಒಪ್ಪಿಕೊಂಡು ಗೌರವಯುತವಾಗಿ ಬದುಕಲು ಅವಕಾಶ ಮಾಡಿಕೊಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಶೈಕ್ಷಣಿಕ ನೀತಿಗಳು, ಜಾಗೃತಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳ್ಳಿಸಿದ್ದರೂ ಸಹ ಮಾಹಿತಿ ಕೊರತೆ, ಅಧಿಕಾರಿಗಳ ಉದಾಸಿನತೆ ಕಾಣುತ್ತಿದೆ. ತೃತೀಯ ಲಿಂಗಿಗಳು ವಲಸೆ ಹೋಗುವ ಕಾರಣ ಯಾವುದೇ ಕಾರ್ಯಕ್ರಮಗಳು ನಿರೀಕ್ಷಿತ ಮಟ್ಟದಲ್ಲಿ ತಲುಪುತ್ತಿಲ್ಲ. ಈ ಲೇಖನವು ತೃತೀಯ ಲಿಂಗಿಗಳ ಪ್ರಸ್ತುತ ಶಿಕ್ಷಣ, ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳ ಕುರಿತು ಬೆಳಕು ಚೆಲ್ಲುತ್ತಿದೆ. ಅದರೊಂದಿಗೆ ತೃತೀಯ ಲಿಂಗಿಗಳು ವೃತ್ತಿ ಶಿಕ್ಷಣ ಸೇರಿದ್ದಂತೆ ಮುಖ್ಯವಾಹಿನಿಯ ಶಿಕ್ಷಣಕ್ಕೆ ಯಾವುದೇ ಅಡಚಣೆಗಳು ಇಲ್ಲದೆ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಸಂಘ ಸಂಸ್ಥೆಗಳು, ಸಮಾಜ ಮತ್ತು ಸರ್ಕಾರದ ಕರ್ತವ್ಯವಾಗಿದೆ ಎಂದು ತಿಳಿಸುತ್ತದೆ.

ಪ್ರಮುಖ ಪದಗಳು : ಮಂಗಳಮುಖಿ,ತೃತೀಯ ಲಿಂಗಿಗಳು,ಸಮನ್ವಯತೆ, ಮುಖ್ಯವಾಹಿನಿ

## ಪೀಠಿಕೆ

ಮಂಗಳಮುಖಿ ಎಂದರೆ ಹೆಣ್ಣು ಅಲ್ಲದ ಗಂಡು ಅಲ್ಲದ ಒಂದು ಮನಃಸ್ಥಿತಿ. 'ತೃತೀಯ ಲಿಂಗ' ಅಥವಾ 'ಮಂಗಳಮುಖಿ' ಎನ್ನುವ ಪರಿಭಾಷೆಗಳು ಇತ್ತಿಚೆಗೆ ಅಧಿಕೃತವಾಗಿ ಮತ್ತು ಹೆಚ್ಚಾಗಿ ಬಳಕೆಯಾಗುತ್ತಿವೆ. ಈ ಪದಗಳ ಬಳಕೆಗಿಂತ ಮುಂಚೆ ಇಂತವರನ್ನು ನಪುಂಸಕ, ಚಕ್ಕ, ಕೋಜಾ, ಹಿಜ್ರಾ, ಚನ್ನಪಟ್ಟಣ, ದ್ವಿಲಿಂಗಿ, ಶಿಖಂಡಿ ಮುಂತಾದಪದಗಳು ಬಳಕೆಯಾಗುತ್ತಿದ್ದವು. 'ಹಿಜರಾ' ಎನ್ನುವುದಕ್ಕೆ ಪರ್ಷಿಯನ್ ಭಾಷೆಯಲ್ಲಿ 'ವಲಸೆ ಹೋಗುವವರು' ಎನ್ನುವ ಅರ್ಥವಿದೆ. (ಅಕ್ಕಯ್ ಪದ್ಮಶಾಲಿ 2021). 'ತೃತೀಯ ಲಿಂಗ' ಎಂಬ ಪದವು ಲೈಂಗಿಕ ದೃಷ್ಟಿಕೋನ ಅಥವಾ ದೈಹಿಕ ಲೈಂಗಿಕ ಗುಣ ಲಕ್ಷಣಗಳನ್ನು ಒಳಗೊಂಡಿಲ್ಲ, ಆದರೆ ವಾಸ್ತವವಾಗಿ ಲಿಂಗ ಗುರುತಿಸುವಿಕೆ ಮತ್ತು ಲಿಂಗ ಅಭಿವ್ಯಕ್ತಿಗೆ ಸಂಬಂಧಿಸಿದ ವೈದ್ಯಕೀಯ ಪದವಾಗಿದೆ. 'ತಾವು ಇರುವ ಕತ್ತಲೆಯನ್ನು ಅರಿಯದವರು ಬೆಳಕಿಗಾಗಿ ಎಂದೂ ಹುಡುಕುವುದಿಲ್ಲ. ಉತ್ತಮ ಶಿಕ್ಷಣ ಈ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ'. –**"ಡಾ. ಬಿ. ಆರ್. ಅಂಬೇಡ್ಕರ್"** ರವರ ಆಶಯದಂತೆ ತೃತೀಯ ಲಿಂಗಿಗಳು ಸುಶಿಕ್ಷಿತರಾಗುವುದರಿಂದ ಬಡತನ, ಭೀಕ್ಷಾಟನೆ, ನಿರುದ್ಯೋಗ ಎಂಬ ಕತ್ತಲೆಯಿಂದ ಹೊರಬಂದು ಶೈಕ್ಷಣಿಕ ಹಾಗೂ ಆರ್ಥಿಕ ಸಬಲತೆಯನ್ನು ಸಾಧಿಸಬಹುದು. (ಅಗರ್ವಾಲ್ ಮತ್ತು ಸೌಮ್ಯ. 2015). "ಸರ್ವರಿಗೂ ಸಮಪಾಲು, ಸರ್ವರಿಗು ಸಮ ಬಾಳು" ಎಂಬ ನಾಣ್ಣುಡಿಯಂತೆ ತೃತೀಯ ಲಿಂಗಿಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕಾಗಿದೆ. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಸದೃಢತೆಯನ್ನು ಸಮನಾಗಿ ಸಾಧಿಸಬೇಕಾಗಿದೆ. ಸಮ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ ಶೈಕ್ಷಣಿಕವಾಗಿ, ವ್ಯಕ್ತಿಗತವಾಗಿ ಬಲಗೊಳಿಸಬೇಕು. ಏಕೆಂದರೆ ಶಿಕ್ಷಣ ಒಂದೇ ಮನುಷ್ಯನಲ್ಲಿ ವಿಶಾಲಮನೋಭಾವವನ್ನು ಮೂಡಿಸುವಂತಹದ್ದು. ಆದರೆ, ಪ್ರಸ್ತುತ ಸಂದರ್ಭದಲ್ಲಿ ತೃತೀಯ ಲಿಂಗಿಗಳು ಶಾಲಾ ಕಾಲೇಜುಗಳಲ್ಲಿ ಈ ಕೆಳಕಂಡ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳೆಂದರೆ –

## ಶಿಕ್ಷಣ ಪಡೆಯುವಲ್ಲಿ ತೃತೀಯ ಲಿಂಗಿಗಳು ಎದುರಿಸುತ್ತಿರುವ ಸಮಸ್ಯೆಗಳು (Problems of transgender in education )

**1. ಕ್ಯಾಂಪಸ್‌ನಲ್ಲಿ ಅಸುರಕ್ಷತೆ (No safety on campus) :** ತೃತೀಯ ಲಿಂಗಿಗಳಿಗೆ ಕಾಲೇಜಿನ ಆವರಣದಲ್ಲಿ ಇತರರಿಗಿಂತ ನಡೆನುಡಿಗಳು ಭಿನ್ನವಾಗಿರುವ ಕಾರಣ ತಮ್ಮ ಸಹಪಾಠಿಗಳಿಂದ ದೈಹಿಕ, ಮಾನಸಿಕ ಕಿರುಕುಳ ಎದುರಿಸುತ್ತಾರೆ. (ಚಂದ್ರ ಎಸ್. 2017). ಕಾಲೇಜಿನ ಕ್ಯಾಂಪಸಗಳು ತೃತೀಯ ಲಿಂಗಿಗಳ ಮೇಲೆ ನಡೆಯುವ ದೈಹಿಕ ಮತ್ತು ಮಾನಸಿಕ ಕಿರುಕುಳಗಳಿಂದ ಮುಕ್ತವಾಗಿಲ್ಲ ಹಾಗೂ ಪಠ್ಯ ಮತ್ತುಸಹಪಠ್ಯ ಚಟುವಟಿಕೆಗಳಲ್ಲಿ ಅಧ್ಯಾಪಕರ ಮತ್ತು ಸಿಬ್ಬಂದಿಗಳಿಂದ ಪ್ರೋತ್ಸಾಹ ದೊರಕುತ್ತಿಲ್ಲ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**2. ತಾರತಮ್ಯ ನೀತಿಗಳು (Discrimination policies) :** ಪ್ರಸ್ತುತ ನೀತಿಗಳು ಸಾಮಾನ್ಯವಾಗಿ ಲಿಂಗಾಧಾರಿತವಾಗಿರುತ್ತವೆ. ಶಿಕ್ಷಣ ತಜ್ಞರು ನೀತಿಗಳನ್ನು ರಚಿಸುವಾಗ ತೃತೀಯ ಲಿಂಗಿಗಳನ್ನು ಹೆಚ್ಚಿನದಾಗಿ ಗಮನದಲ್ಲಿಟ್ಟುಕೊಂಡು ನೀತಿಗಳನ್ನು ಜಾರಿಗೊಳಿಸುವುದಿಲ್ಲ, ಆದ್ದರಿಂದ ಹಲವು ನೀತಿಗಳು ತೃತೀಯ ಲಿಂಗಿಗಳಿಗೆ ಅನ್ವಯಿಸುವುದಿಲ್ಲ. ಈ ತಾರತಮ್ಯದ ನೀತಿಗಳಿಂದ ತೃತೀಯ ಲಿಂಗದ ವಿದ್ಯಾರ್ಥಿಗಳು ಶೋಷಣೆ ಮತ್ತು ಕಹಿ ಕಲಿಕಾ ಅನುಭವವನ್ನು ಅನುಭವಿಸುತ್ತಾರೆ. ಈ ತಾರತಮ್ಯದ ನೀತಿಗಳು ತೃತೀಯ ಲಿಂಗಿಗಳ ಮಾನಸಿಕ ಮತ್ತು ದೈಹಿಕ ಸ್ಥೈರ್ಯವನ್ನು ಕುಂಠಿತಗೊಳಿಸುವುದಲ್ಲದೆ, ತಾವು ಇತರ ವಿದ್ಯಾರ್ಥಿಗಳಿಗಿಂತ ಕೀಳು ಎಂಬ ಭಾವನೆ ಮೂಡಿಸುತ್ತದೆ.

**3. ಶಾಲಾ/ಕಾಲೇಜು ದಾಖಲೆಗಳಲ್ಲಿ ಲಿಂಗ ತಾರತಮ್ಯ (Gender discriminations on college records) :** ತೃತೀಯ ಲಿಂಗಿಗಳು ಶಾಲಾ /ಕಾಲೇಜು ದಾಖಲಾಗುವ ಸಂದರ್ಭದಲ್ಲಿ ನೋಂದಣಿ ಅರ್ಜಿ ಭರ್ತಿ ಮಾಡುವಾಗ ಹೆಣ್ಣು ಅಥವಾ ಗಂಡು ಎಂಬ ಕಾಲಂಗಳಷ್ಟೆ ವಿರುವುದನ್ನು ಗಮನಿಸಿ ತಮ್ಮದು ಭಿನ್ನ ಲಿಂಗವೆಂದು ತಿಳಿದು ಮುಜುಗರಕೊಳ್ಳಪಡುವುದಲ್ಲದೆ ಹಾಗೂ ಅಧ್ಯಾಪಕರು,ಸಿಬ್ಬಂದಿ ವರ್ಗದವರು ಪ್ರವೇಶ ನಿರಾಕರಿಸುತ್ತಾರೆ. (ಸೆರಾಹ್ ಜೆಬಕಾನಿ, ಎಸ್. 2013). ಕೆಲವೊಮ್ಮೆ ಪ್ರವೇಶಾತಿ ದೊರಕಿದರು, ಜನಗಣತಿ ಸಂದರ್ಭದಲ್ಲಿ ತೃತೀಯು ಲಿಂಗಿಗಳ ಬಗ್ಗೆ ಸರಿಯಾದ ಅಂಕಿ-ಅಂಶಗಳು ನೀಡದೆಇರುವುದರಿಂದ ಅವರನ್ನು ಸರ್ಕಾರದ ಸೌಲಭ್ಯಗಳಿಂದ ವಂಚಿತರನ್ನಾಗಿಸುತ್ತಾರೆ. ಶಿಕ್ಷಣ ವ್ಯವಸ್ಥೆಯಲ್ಲದೆ ಇತರೆ ರಂಗದಲ್ಲೂ ತೃತೀಯ ಲಿಂಗಿಗಳು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳೆಂದರೆ;

**4. ತೃತೀಯ ಲಿಂಗದ ವಿದ್ಯಾರ್ಥಿಗಳು ಎದುರಿಸುವ ಇತರೆ ಸಮಸ್ಯೆಗಳು (Problems faced by transgender students) :** ತೃತೀಯ ಲಿಂಗದ ವಿದ್ಯಾರ್ಥಿಗಳು ಪ್ರತಿದಿನ ದೈಹಿಕ, ಮಾನಸಿಕ ಕಿರುಕುಳವನ್ನು ಅನುಭವಿಸುತ್ತಾರೆ ಹಾಗೂ ಕುಟುಂಬ ಮತ್ತು ಸಮಾಜದಿಂದ ಬಹಿಷ್ಕರಿಸಲ್ಪಡುತ್ತಾರೆ. ಆದ್ದರಿಂದಾಗಿ ಅವರುಗಳು ಶಿಕ್ಷಣದಿಂದ ಹೊರಗುಳಿಯುತ್ತಾರೆ. ಅಸುರಕ್ಷತೆ ಭಾವನೆಯ ಒತ್ತಡವನ್ನು ತಡೆಯಲಾಗದೆ ಔಷಧಿಗಳ ಮೊರೆ ಹೊಗುತ್ತಾರೆ. (ಅಶೋಕ ರಾಜ್, ಎಸ್. 2019). ಕೆಲವರು ಆತ್ಮಹತ್ಯಗೆ ಶರಣಾಗುವುದನ್ನು ಕಾಣಬಹುದು. ಕುಟುಂಬ ಮತ್ತು ಸಮಾಜಗಳಲ್ಲಿ ಅವರ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶಗಳು ದೊರಕುವುದಿಲ್ಲ, ಆದ್ದರಿಂದಾಗಿ ಸೂಕ್ತ ಮಾರ್ಗದರ್ಶನದ ಕೊರತೆಯುಂಟಾಗುತ್ತದೆ. ಮೇಲಿನ ಸಮಸ್ಯೆಗಳ ಜೊತೆಗೆ ಕೆಲವು ಈ ಕೆಳಕಂಡ ಸವಾಲುಗಳನ್ನು ನಾವು ಶಿಕ್ಷಣರಂಗದಲ್ಲಿ ಕಾಣಬಹುದಾಗಿದೆ;

## ಶಿಕ್ಷಣ ಪಡೆಯುವಲ್ಲಿ ತೃತೀಯ ಲಿಂಗಿಗಳು ಎದುರಿಸುವ ಸವಾಲುಗಳು (Challenges of transgender education)

**1. ಶಾಲಾ/ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸಮನ್ವಯ ಶಿಕ್ಷಣದ ಕೊರತೆ (Inclusion in school/college and Universities) :** ತೃತೀಯ ಲಿಂಗದವರ ನಡೆ-ನುಡಿಗಳು ಭಿನ್ನವಾಗಿರುವ ಕಾರಣ ಶಾಲಾ/ಕಾಲೇಜುಗಳಲ್ಲಿ ಇವರಿಗೆ ಸ್ತ್ರೀ ಮತ್ತು ಪುರುಷ ಲಿಂಗದ (ಸಾಮಾನ್ಯ) ವಿದ್ಯಾರ್ಥಿಗಳೊಂದಿಗೆ ಸಮನ್ವಯ ಶಿಕ್ಷಣ ನೀಡುವುದು ಸವಾಲಿನ ಸಂಗತಿಯಾಗಿದೆ. ಈ ಸಮುದಾಯದ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ನಿರ್ದಿಷ್ಟ ಸ್ಥಳ ನಿಗದಿ ಮಾಡುವುದು ಸವಾಲಿನ ಸಂಗತಿಯಾಗಿದೆ.

**2. ಅಗೌರವದ ಹೆಸರು ಮತ್ತು ಸರ್ವನಾಮಗಳ ಬಳಕೆ (use of disrespectful names and pronouns) :** ತೃತೀಯ ಲಿಂಗಿಗಳು ತಮ್ಮ ಹುಟ್ಟಿನಿಂದ ಬಂದಂತಹ ಹೆಸರನ್ನು ಸಾಮಾನ್ಯವಾಗಿ ಬದಲಾಯಿಸಿಕೊಳ್ಳುತ್ತಾರೆ ಕಾರಣ ಪುರುಷರು ಮಹಿಳೆಯರಾಗಿ ಅಥವಾ ಮಹಿಳೆಯರು ಪುರುಷರಾಗಿ ಬದಲಾಗುವುದರಿಂದ ಪ್ರಸ್ತುತವಾಗಿ ಜನರು ಅವರನ್ನು ಚಕ್ಕ, ಶಿಖಂಡಿ ಇತ್ಯಾದಿ ಅಗೌರವದಿಂದ ಮತ್ತು ಇತರ ಕೀಳುಮಟ್ಟದ ಶಬ್ದಗಳಿಂದ ಕೂಡಿದ ಸರ್ವನಾಮಗಳನ್ನು ಬಳಸಿ ಅವರನ್ನು ಕರೆಯುತ್ತಾರೆ. ಈ ಕಾರಣದಿಂದ ತೃತೀಯ ಲಿಂಗಿಗಳು ಮುಜುಗರದ ಸನ್ನಿವೇಶ ಎದುರಿಸುತ್ತಾರೆ.

**3. ಸೂಕ್ತ ವಿಶ್ರಾಂತಿ ಕೊಠಡಿಗಳ ಸೌಲಭ್ಯಗಳ ಕೊರತೆ (Lack of access to appropriate room facilities) :** ತೃತೀಯ ಲಿಂಗಿಗಳು ಶಾಲಾ/ಕಾಲೇಜುಗಳಲ್ಲಿ ಸೂಕ್ತ ವಿಶ್ರಾಂತಿ ಕೊಠಡಿಗಳ ಸೌಲಭ್ಯಗಳಿಲ್ಲದೆ ಶಾಲಾ/ ಕಾಲೇಜುಗಳಿಂದ ಹೊರಗುಳಿಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ವಾಸಕ್ಕೆ ಸೂಕ್ತ ಮನೆ ಮತ್ತು ವಿದ್ಯಾರ್ಥಿನಿಲಯಗಳ ಕೊರತೆ, ಕನಿಷ್ಠ ಪಕ್ಷ ಸೂಕ್ತ ವಿಶ್ರಾಂತಿ ಕೊಠಡಿಗಳಿಲ್ಲದೆ ಶಾಲಾ/ಕಾಲೇಜುಗಳಿಲ್ಲಿ ನರಳುವ ಸ್ಥಿತಿ ಮನಕಲುಕುವಂತಿದೆ. (ಚಟರ್ಜಿ ಸುಬ್ರಜಿತ್. 2018).

**4. ಗೌಪ್ಯತೆ (confidentiality) :** ಶಾಲಾ/ಕಾಲೇಜುಗಳಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ತೃತೀಯ ಲಿಂಗಿಗಳ ಸಮಸ್ಯೆಗಳು ಮತ್ತು ವೈಯಕ್ತಿಕ ವಿವರಗಳನ್ನು ಗೌಪ್ಯತೆಯಿಂದ ಕಾಪಾಡುವುದು ಸೂಕ್ತ. ಬಹಿರಂಗಗೊಳಿಸಿದಲ್ಲಿ ಅವರ ಮೇಲೆ ಹಲ್ಲೆ, ಕಿರುಕುಳ, ವಾಸಕ್ಕೆ ಮನೆ ನಿರಾಕರಣೆ, ಮನೆಯಿಂದ ಹೊರ ಹಾಕುವಿಕೆಯಂತಹ ಸಂಗತಿಗಳನ್ನು ಎದುರಿಸಬೇಕಾಗುತ್ತದೆ.(ಸಂತೋಷ್‌ಕುಮಾರ ಮೆಹೆಂದಳೆ. 2022).

**5 ಆದರ್ಶ ವ್ಯಕ್ತಿಗಳ ಕೊರತೆ (Lack of ideal personalities) :** ಜೀವನದಲ್ಲಿ ಯಾವುದೇ ವ್ಯಕ್ತಿಯು ತನ್ನ ಗುರಿ ಸಾಧನೆಗಾಗಿ ಒಬ್ಬ ಆದರ್ಶ ವ್ಯಕ್ತಿಯ ಸನ್ಮಾರ್ಗಗಳನ್ನು ಅನುಸರಿಸಿ ಗುರಿಮುಟ್ಟುತ್ತಾನೆ. ಪ್ರಸ್ತುತ ಸಂದರ್ಭದಲ್ಲಿ ಯಾವುದೇ ಅಡೆ-ತಡೆಗಳಿಲ್ಲದೆ, ಉನ್ನತ ಮಟ್ಟದಸಾಧನೆ ಮಾಡಿರುವ /ಮಾಡುತ್ತಿರುವ ತಮ್ಮ ಸಮುದಾಯದ ವ್ಯಕ್ತಿಗಳ ಕೊರತೆಯ ಕಾರಣದಿಂದ ತಮ್ಮ ಚಿಂತನೆಗಳಲ್ಲಿ, ಸಾಧನೆಯ ಪಥಗಳಲ್ಲಿ ಏಕಾಂಗಿತನವನ್ನು ಅನುಭವಿಸುತ್ತಾರೆ. (ಹಬಿನ್ ಎಚ್. 2021).

## ತೃತೀಯ ಲಿಂಗೀಯ ವಿದ್ಯಾರ್ಥಿಗಳು ಎದುರಿಸುವ ಸವಾಲುಗಳು (Challenges faced by transgender students)

1. ದೈಹಿಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸೂಕ್ತ ಚಿಕಿತ್ಸಾಲಯಗಳ ಕೊರತೆ.
2. ಸುರಕ್ಷಿತ ಮತ್ತು ಆರಾಮದಾಯಕ ವಸತಿಗಳಲ್ಲಿ ಇರಿಸಲಾಗಿಲ್ಲ.
3. ಸಾಂಸ್ಥಿಕ ಬೆಂಬಲ ಅಥವಾ ರಕ್ಷಣೆಯ ಕೊರತೆ.
4. ತೃತೀಯ ಲಿಂಗಿಗಳ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡುವ ಸಂಪನ್ಮೂಲ ಕೇಂದ್ರಗಳ ಕೊರತೆಯಿದೆ.

## ಶೈಕ್ಷಣಿಕ ನಿಹಿತಾರ್ಥಗಳು (Educational Implications)

1. ತೃತೀಯ ಲಿಂಗಿಗಳಿಗೆ ವೈಯಕ್ತಿಕ ಗಮನ ಅಥವಾ ಪರಿಹಾರ ಶಿಕ್ಷಣ ನೀಡುವಲ್ಲಿ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಸುಧಾರಿಸಲು ಸಮಾಜದ ಮೂಲಕ ಸಾಧ್ಯವಾಗುತ್ತದೆ.
2. ಶಾಲಾ/ಕಾಲೇಜುಗಳಲ್ಲಿ ಶಿಕ್ಷಕರು ತೃತೀಯ ಲಿಂಗೀಯ ವಿದ್ಯಾರ್ಥಿಗಳೊಂದಿಗೆ ಪ್ರೀತಿಯಿಂದ, ಸಹಾನುಭೂತಿಯಿಂದ ವರ್ತಿಸಬೇಕು.
3. ಪ್ರತಿಯೊಬ್ಬ ಶಿಕ್ಷಕನು ತೃತೀಯ ಲಿಂಗೀಯ ವಿದ್ಯಾರ್ಥಿಗಳನ್ನು ಇತರೆ ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ವಿಭಿನ್ನವಾದ ಕ್ರಿಯೆಗಳಲ್ಲಿ

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪಾಲ್ಗೊಳ್ಳಲು ಪ್ರೋತ್ಸಾಹಿಸಿದಲ್ಲಿ ತೃತೀಯ ಲಿಂಗದವರು ಶೈಕ್ಷಣಿಕವಾಗಿ ಹೆಚ್ಚು ಬೆಳೆಯಲು ಕಾರಣವಾಗುತ್ತದೆ.

## ಪರಿಹಾರ ಮಾರ್ಗಗಳು / ಶಿಫಾರಸ್ಸುಗಳು (Remedial measures / recommendations)

1. ತೃತೀಯ ಲಿಂಗೀಯ ವಿದ್ಯಾರ್ಥಿಗಳಿಗೆ ವೃತ್ತಿಪರ ಮತ್ತು ಕೌಶಲ್ಯ ತರಬೇತಿ ನೀಡಬೇಕು.
2. ಶಾಲಾ/ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ಇತರೆ ಸಿಬ್ಬಂದಿಗಳು ತೃತೀಯ ಲಿಂಗೀಯ ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಸಂವೇದನಾಶೀಲಾರಾಗಿರಬೇಕು.
3. ತೃತೀಯ ಲಿಂಗೀಯ ವಿದ್ಯಾರ್ಥಿಗಳಿಗೆ ವೃತ್ತಿಪರ ತರಬೇತಿ ಒದಗಿಸಿ ಅವರನ್ನು ಯಾವುದಾದರೊಂದು ಸೂಕ್ತ ಉದ್ಯೋಗಕ್ಕೆ ಸಿದ್ದಗೊಳಿಸಬೇಕು.
4. ತೃತೀಯ ಲಿಂಗೀಯ ವಿದ್ಯಾರ್ಥಿಗಳನ್ನು ಸ್ವಾವಲಂಭಿಯನ್ನಾಗಿಸುವದರಿಂದ ಅವರ ನೈತಿಕ ವಿಶ್ವಾಸವನ್ನು ಹೆಚ್ಚಿಸಬಹುದು.
5. ತೃತೀಯ ಲಿಂಗೀಯ ವಿದ್ಯಾರ್ಥಿಗಳಿಗೆ ಗೌರವ ಸೂಚಿತ ಹೆಸರುಗಳ ಮೂಲಕ ಸಂವಹನ ನಡೆಸಬೇಕು.
6. ಸಂವಿಧಾನದಲ್ಲಿ ಉಲ್ಲೇಖಿಸಿರುವ ಹಕ್ಕುಗಳ ಸದುಪಯೋಗದ ಬಗ್ಗೆಅರಿವು ಮತ್ತು ಜಾಗೃತಿ ಮೂಡಿಸಬೇಕು.

## ಉಪಸಂಹಾರ

ಶಿಕ್ಷಣವು ಸಮಾಜದ ಅಭಿವೃದ್ಧಿಗೆ ಪೂರಕವಾಗುವ ಮೂಲಕ ವ್ಯಕ್ತಿಯ ದೈಹಿಕ ಮತ್ತು ಮಾನಸಿಕವಾಗಿ ಪ್ರಗತಿಗೆ ಸಹಾಯ ಮಾಡುತ್ತದೆ. "ಮಾನವ ಕುಲಂ ತಾನೊಂದೆ ವಲಂ" ಎಂಬ ಸಂದೇಶದಂತೆ ಸಮಾಜದಲ್ಲಿ ಮಾನವರೆಲ್ಲರೂ ಸಮಾನರು, ಅದರಂತೆ ಸಮಾಜದಲ್ಲಿ ತೃತೀಯ ಲಿಂಗಿಗಳನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಭಿನ್ನತೆಯಿಂದ ಕಾಣುವುದನ್ನು ನಿಲ್ಲಿಸಿ, ಅವರನ್ನು ಸಮಾನ ದೃಷ್ಟಿಕೋನದಿಂದ ನೋಡಬೇಕು. ಸಮಾಜದಲ್ಲಿ ತೃತೀಯ ಲಿಂಗಿಗಳು ಶಿಕ್ಷಣವನ್ನು ಪಡೆಯುವುದರ ಮೂಲಕ ಅವರ ಮೂಲಭೂತ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಅನುಕೂಲವಾಗುತ್ತದೆ ಹಾಗೂ ಇವರು ಈ ಸಮಾಜದಲ್ಲಿ ಸ್ವಾವಲಂಬಿ ಮತ್ತು ಸ್ವತಂತ್ರವಾಗಿ ಬದುಕಲು ಸರ್ಕಾರ ಮತ್ತು ಸಮಾಜ ಇವರಿಗೆ ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕು. ಶಿಕ್ಷಣ ಕ್ಷೇತ್ರವು ಇಂದಿನ ದಿನಗಳಲ್ಲಿ ಸ್ಪರ್ಧಾತ್ಮಕ ಜಗತ್ತಾಗಿರುವುದರಿಂದ, ಸಮಾಜವು ವಾಸ್ತವವಾಗಿ ತೃತೀಯ ಲಿಂಗಿಗಳ ಕಲಿಕೆಗೆ ಸೂಕ್ತ ವಾತಾವರಣ ಕಲ್ಪಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು. ಶಿಕ್ಷಣ ಸಂಸ್ಥೆಯ ಮಂಡಳಿಯವರು, ಆರಕ್ಷಕ ದಳದವರು ತೃತೀಯ ಲಿಂಗದವರು ಕಿರುಕುಳಕ್ಕೆ ಒಳಗಾದಗ ಅಹವಾಲು ಸಲ್ಲಿಸಿದಾಗ ನಿರಾಕರಿಸದೆ ತಕ್ಷಣ ಕ್ರಮ ಕೈಗೊಳ್ಳಬೇಕು. ಸಮಾಜದಲ್ಲಿ ತೃತೀಯ ಲಿಂಗದವರಿಗೆ ಎಲ್ಲರಂತೆ ಶೈಕ್ಷಣಿಕ ಹಾಗೂ ಇತರೆ ಹಕ್ಕುಗಳನ್ನು ನೀಡುವುದರಿಂದ ಅವರು ಸಹ ದೇಶದ ಅಭಿವೃದ್ಧಿಯಲ್ಲಿ ಮಹತ್ವ ಪೂರ್ಣಕೊಡುಗೆ ಸಲ್ಲಿಸಬಹುದು. ತೃತೀಯ ಲಿಂಗದ ವಿದ್ಯಾರ್ಥಿಗಳ ವಿರುದ್ದ ಯಾವುದೇ ರೀತಿಯ ತಾರತಮ್ಯ ಮತ್ತು ಕಿರುಕುಳವನ್ನು ಮೇಲ್ವಿಚಾರಣೆ ಮಾಡಲು ಶಾಲಾ/ಕಾಲೇಜುಗಳಲ್ಲಿ ಅಥವಾ ಶೈಕ್ಷಣಿಕ ವ್ಯವಸ್ಥೆಯಲ್ಲಿ ತೃತೀಯ ಲಿಂಗಿಗಳ ತಾರತಮ್ಯ ವಿರೋಧಿ ಘಟಕಗಳನ್ನು ಸ್ಥಾಪಿಸಬೇಕು. ಈ ಲೇಖನದ ಮೂಲಕ ತಿಳಿಸುವುದೆನೆಂದರೆ ಇತರೆ ವಿದ್ಯಾರ್ಥಿಗಳಂತೆ ತೃತೀಯ ಲಿಂಗದ ವಿದ್ಯಾರ್ಥಿಗಳಿಗೆ ಸೂಕ್ತ ಶಿಕ್ಷಣ ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಬೇಕು.

## ಪರಾಮರ್ಶನ ಗ್ರಂಥಗಳು


- **ಅಕ್ಕಯ್ ಪದ್ಮಶಾಲಿ (2021) :** ಅಕ್ಕಯ್ ಬಹುರೂಪಿ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.
- **ಅಗರ್ವಾಲ್ ಮತ್ತು ಸೌಮ್ಯ (2015) :** ಭಾರತದಲ್ಲಿ ತೃತೀಯ ಲಿಂಗಿಗಳ ಹಕ್ಕುಗಳು ಯಾವುವು. https://blog.ipleaders.in/legal-rights-of-transgender-india/on 28/12/2016 ಪಡೆಯಲಾಗಿದೆ.
- **ಅಶೋಕರಾಜ್ ಎಸ್. (2019) :** ತೃತೀಯ ಲಿಂಗಿಗಳ ಸಮಸ್ಯೆಗಳು ಮತ್ತು ಸವಾಲುಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಸ್ಥಿತಿ, ಭಾರತೀಯ ವಿಶ್ವವಿದ್ಯಾಲಯ, ಪಿಎಚ್‌ಡಿ ಅಪ್ರಕಟಿತ ಪ್ರಬಂಧ.
- **ಚಂದ್ರ ಎಸ್. (2017) :** ತೃತೀಯ ಲಿಂಗಿಗಳ ಮಕ್ಕಳ ಶಿಕ್ಷಣ ಮತ್ತು ಸಮಾಜದಲ್ಲಿ ಅವರ ಮರು ತೊಡಗಿಸಿಗೊಳ್ಳುವಿಕೆ. ಇಂಟರ್ನ್ಯಾಷನಲ್ ಜರ್ನಲ್ ಆಫ್ ಎಜುಕೇಷನಲ್ ರಿಸರ್ಚ್ ಸ್ಟಡೀಸ್, 2(8), 875–890, GOI (2014), ತೃತೀಯ ಲಿಂಗಿಗಳ ಹಕ್ಕುಗಳ ಮಸೂದೆ–2014, ಬಿಲ್ No. XLIXC-C 2014, ಲೋಕಸಭೆ, ಭಾರತದ ಸಂಸತ್ತು, ನವದೆಹಲಿ.
- **ಚಟರ್ಜಿ ಸುಭ್ರಜಿತ್. (2018) :** ಭಾರತದಲ್ಲಿ ತೃತೀಯ ಲಿಂಗಿಗಳ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು : ಕೆಲವು ಶಿಫಾರಸ್ಸುಗಳು, ಇಂಟರ್ನ್ಯಾಷಲ್ ಜರ್ನಲ್ ಆಫ್ ಕ್ರಿಯೇಟಿವ್ ರಿಸರ್ಚ್‌ಥಾಟ್ಸ್. (IJCRT), 6(1).
- **ಸಂತೋಷ್‌ಕುಮಾರ ಮೆಹೆಂದಳೆ (2022) :** ಮಂಗಳ ಮುಖಿಯರ ಸಂಗದಲ್ಲಿ, ಬೆಂಗಳೂರು ಸ್ನೇಹ ಬುಕ್ ಹೌಸ್.
- **ಸೆರಾಹ್ ಜೆಬಕಾನಿ ಎನ್. (2013) :** ತಮಿಳುನಾಡು ಸರ್ಕಾರವು ಜಾರಿಗೆ ತಂದಿರುವ ಕಾರ್ಯಕ್ರಮಗಳ ಪ್ರಭಾವದ ಕುರಿತಾದ ಚೆನ್ನೈನ ತೃತೀಯ ಲಿಂಗಿಗಳ ಒಂದು ಅಧ್ಯಯನ, ಮದ್ರಾಸ್ ವಿಶ್ವವಿದ್ಯಾನಿಲಯ, ಪಿಎಚ್‌ಡಿ ಪ್ರಕಟಿಸಲಾಗಿದೆ.
- **ಹಬಿನ್ ಎಚ್. (2021) :** ಭಾರತದಲ್ಲಿ ತೃತೀಯ ಲಿಂಗಿಗಳ ಸಮುದಾಯ : ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸ ಕುರಿತು ಒಂದು ಅಧ್ಯಯನ. ಬಹುಶಿಸ್ತೀಯ ಶೈಕ್ಷಣಿಕ ಸಂಶೋಧನೆಯ ಇಂಟರ್ನ್ಯಾಷನಲ್ ಜರ್ನಲ್, 10,1 (4), pp.19-21.http://hdl.handle.net/10603/185885.


■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಚಕೋರಿ : ಮೌಖಿಕ ಕಥನಗಳ ಅನನ್ಯ ಹೆಣಿಗೆ

✍ **ಡಾ. ಅಶ್ವಿನಿ ಆರ್.ಎಸ್.** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪು ನಗರ, ಮೈಸೂರು–570023.

ಚಂದ್ರಶೇಖರ ಕಂಬಾರರ 'ಚಕೋರಿ' ಮಹಾಕಾವ್ಯ ಪರಂಪರೆಯ ಅಪರೂಪದ ಸಂಕಥನ, ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ದೇಸೀ ಮೂಲಸೆಲೆಗಳನ್ನು ಅಭಿವ್ಯಕ್ತಿಸಿರುವ ವಿಶಿಷ್ಟ ಕಲಾಕೃತಿ. ಈ ಶತಮಾನದ ಮಹಾಕಾವ್ಯಗಳಿಗಿಂತ ಭಿನ್ನವಾದರಿಯದಾಗಿದ್ದು, ಸಾಮಾನ್ಯವಾಗಿ ಮಹಾಕಾವ್ಯಗಳು ಸರಳ ರಗಳೆಯಲ್ಲಿದ್ದು, ವಿಸ್ತಾರ ಕಥನ ಉಳ್ಳವಾಗಿರುತ್ತವೆ ಆದರೆ ಚಕೋರಿ ಸರಳ ರಗಳೆಯಲ್ಲಿಲ್ಲ ಮೂರು ಪಾಲು ಭಾಗ ಲಯಬದ್ಧ ಗದ್ಯ ಪ್ರಧಾನವಾಗಿದ್ದು, ಉಳಿದ ಭಾಗ ಹಾಡುಗಳಿಂದ ಕೂಡಿದೆ. ಗದ್ಯ ಶ್ರೀಮಂತಿಕೆಯಿಂದ ಸೂರೆಗೊಂಡ ಆಧುನಿಕ ಚಂಪೂಕಾವ್ಯವಾಗಿದೆ. ಜನಪದ ಮತ್ತು ಶಿಷ್ಟ ಮಹಾಕಾವ್ಯದ ಜೀವಧಾತುವನ್ನು ತನ್ನಲ್ಲಿ ಅರಗಿಸಿಕೊಂಡಿದ್ದು, ಹಲವು ನಾವಿನ್ಯತೆಯನ್ನು ಪ್ರದರ್ಶಿಸುವ ದೇಸೀಕಾವ್ಯ ಎನಿಸಿದೆ. ಒಂದರ್ಥದಲ್ಲಿ ಸಮುದಾಯ ಸಂಸ್ಕೃತಿಯ ಅಂತಃಸತ್ವವನ್ನು ತನ್ನಲ್ಲಡಗಿಸಿಕೊಂಡಿರುವ ಜನಪದ ಮಹಾಕಾವ್ಯವೇ ಸರಿ. ಇದು ಜೀವನ ದರ್ಶನವನ್ನು ಮಾಡಿಸುವ ವಿಸ್ತಾರ ಪಾತ್ರವೈವಿಧ್ಯತೆಯಿಂದ ಕೂಡಿರುವ ಮಹಾಕಾವ್ಯವಾಗಿದ್ದು, ತನ್ನ ಗರ್ಭದಲ್ಲಿ ತಾತ್ವಿಕ ಚಿಂತನೆಯನ್ನು ಸಾಕ್ಷಾತ್ಕರಿಸಿಕೊಂಡಿದೆ. ಇದರ ಭಾಷೆ ಹಾಗೂ ಭಾವ ಸಂಪತ್ತು ಬಹಳ ವಿಶಿಷ್ಟವಾದುದಾಗಿದೆ. ಎಚ್.ಎಸ್. ಶಿವಪ್ರಕಾಶ್ ಅವರು ಚಕೋರಿಯ ಮುನ್ನುಡಿಯಲ್ಲಿ "ಚಕೋರಿ ಕೇವಲ ಮಹಾತ್ವಾಕಾಂಕ್ಷೆಯ ಕೃತಿಯಾಗಿಲ್ಲ. ಇಡೀ ಕನ್ನಡ ಕಾವ್ಯ ಪರಂಪರೆಯನ್ನು ಹಿನ್ನೆಲೆಯಾಗಿಟ್ಟು ನೋಡಿದಾಗಲೂ ಇದು ಮಹತ್ವದ ಪ್ರಯೋಗವಾಗಿದೆ. ಈ ಕೃತಿಯ ಚೌಕಟ್ಟಿಗೆ ಎಲ್ಲೋ ಒಂದಿಷ್ಟು ಮಾದರಿಗಳು 'ಮಲೆ ಮಾದೇಶ್ವರ ಕಾವ್ಯ', 'ಜಾನಪದ ಬಸವ ಪುರಾಣ', 'ಮಂಟೇಸ್ವಾಮಿ ಕಾವ್ಯ' ಮುಂತಾದ ಕೃತಿಗಳಲ್ಲಿ ಸ್ಥೂಲರೂಪದಲ್ಲಿ ಸಿಗುತ್ತವೆಯಾದರೂ 'ಚಕೋರಿ'ಯ ಭಾಷೆ ಮತ್ತು ಭಾವಸಂಪತ್ತು ಬೇರೆಯದೇ ರೀತಿಯದು. ಇದು ಅಕ್ಕಮಹಾದೇವಿಯ ಭಾವೋತ್ಕಟತೆ, ಅಲ್ಲಮನ ನಿಗೂಢತೆಯ ರುಚಿ, ಜನಪದ ಗೀತೆಗಳ ಸೊಗಸು ಮತ್ತು ಸರ್ವಜ್ಞನ ಶ್ರೇಷ್ಠತಮ ತ್ರಿಪದಿಗಳ ಅರ್ಥಗರ್ಭಿತ ಸರಳತೆ – ಇವೆಲ್ಲವನ್ನೂ ದ್ರವ್ಯಗಳನ್ನಾಗಿ ಬಳಸಿಕೊಂಡಿರುವ ಹೊಸಪಾಕವಾಗಿದೆ."[1] ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಕಂಬಾರರ ಚಕೋರಿ ವಿನೂತನ ಭಾಷಾಶೈಲಿಯಿಂದ ಔಚಿತ್ಯಪೂರ್ಣ ಹಾಡುಗಳು ವರ್ಣರಂಜಿತ ಸನ್ನಿವೇಶಗಳಿಂದ ವಿಜೃಂಭಿಸಿದೆ. ಜನಪದ ಕತೆಯೊಂದು ಮಹಾಕಾವ್ಯವಾಗಿ ರೂಪುಗೊಂಡಿದ್ದು, ಕನಸುಗಳು ಇಡೀ ಕಾವ್ಯವನ್ನು ನಿವೇದಿಸುತ್ತಿರುವುದು ಮಹತ್ವಪೂರ್ಣ ಸಂಗತಿಯಾಗಿದೆ. ಚಕೋರಿ ಅಲೌಕಿಕ ನೆಲೆಯ ಸತ್ವಗಳನ್ನು ಅನನ್ಯವಾಗಿ ಮೈಗೂಡಿಸಿಕೊಂಡು ಕಂಬಾರರ ಸೃಜನಶೀಲ ಚಿಂತನೆಯ ಭೂಮಿಕೆಯಲ್ಲಿ ಕಲಾತ್ಮಕವಾಗಿ ರಚಿತವಾಗಿರುವ ಶ್ರೇಷ್ಠ ಮಹಾಕಾವ್ಯ ಪರಂಪರೆಯಾಗಿದೆ.

ಚಕೋರಿ ಯಕ್ಷಿ ಮತ್ತು ಚಂದಮುತ್ತರ ನವಿರಾದ ಪ್ರೇಮ ಕಥಾನಕಗಳನ್ನು ಹೆಣೆದಿರುವ ಸಾಹಿತ್ಯಶಿಲ್ಪ. ಈ ಕಾವ್ಯದ ಕಥನಭಾಗ – ಶಿವದೇವರ ಅಪ್ಪಣೆಯಂತೆ ಅಧೋ ಲೋಕಕ್ಕೆ ಹೋಗಿ ಮಾಯಾ ಕಾರ್ತಿಯನ್ನು ಕರೆದು ತರುತ್ತಿದ್ದ ನರಮಾನವನು, ಸರ್ಪ ಸೈತಾನನ ಹಾಗೂ ಮಾಯಕಾರ್ತಿಯ ಎಳೆತದಿಂದ ಸೀಳಿ ಎರಡಾಗುತ್ತಾನೆ. ಆಗ ಶಿವದೇವರ ಅಪ್ಪಣೆಯಂತೆ ಸೂರ್ಯನಿಂದ ಬಲಭಾಗ ಹಾಗೂ ಚಂದ್ರನ ಬೆಳಕಿನಿಂದ ಎಡಭಾಗ ಪೂರ್ಣಗೊಂಡು ಇಬ್ಬರು ಅಣ್ಣ–ತಮ್ಮರಾಗುತ್ತಾರೆ. ಇವರು ಶಿವಾಪುರದ ಹಟ್ಟಿಯಲ್ಲಿ ಯಕ್ಷಿಯ ವರದಿಂದ ಅಣ್ಣ ಸೂರ್ಯ ಬೆಡಗಿನ ದಂಪತಿಗಳಿಗೆ ಚಿನ್ನಮುತ್ತನಾಗಿ, ತಮ್ಮ ಚಂದ್ರನ ದಂಪತಿಗಳಿಗೆ ಚಂದಮುತ್ತನಾಗಿ ಹುಟ್ಟುತ್ತಾರೆ. ಚಂದಮುತ್ತ ಸುಮಧುರ ಸಂಗೀತವನ್ನು ದೈವದತ್ತವಾಗಿ ಪಡೆದ ಅಪ್ರತಿಮ ತರುಣ. ಚಂದ್ರನ ಆರಾಧಕ, ಚಂದ್ರವಂಶಸ್ಥ, ವೇಣುಗಾನ ವಿಶಾರದ, ಹೊಸರಾಗಗಳ ಆವಿಷ್ಕಾರಕ್ಕಾಗಿ ಸಾಧನೆ ಮೆರೆದವನು ಹಾಗೂ ಕಲೆಯ ಸೃಷ್ಟಿಶೀಲತೆಯನ್ನರಿಸಿ ಹೊರಟ ಕಲಾವಿದ. ಅವನಿಗೆ ಕೇವಲ ತನ್ನ ತಾಯಿಯ ಬಗ್ಗೆ ಮಾತ್ರ ತಿಳಿದಿದ್ದು ತಂದೆ ಯಾರೆಂಬುದರ ಬಗ್ಗೆ ನೆನಪೂ ಸಹ ಇರುವುದಿಲ್ಲ. ಅದೇ ಹಳ್ಳಿಯ ಮುಖ್ಯಸ್ಥನಾಗಿದ್ದ ಸೂರ್ಯಮುತ್ತನಿಗೆ ಚಿನ್ನಮುತ್ತ ಎಂಬ ಮಗನಿದ್ದು, ಅವನು ಚಂದಮುತ್ತನ ಸಹಪಾಠಿ ಹಾಗೂ ಪ್ರತಿಸ್ಪರ್ಧಿ. ಒಮ್ಮೆ ಚಂದಮುತ್ತ ದನಗಳನ್ನು ಮೇಯಿಸಲು ಕಾಡಿಗೆ ಹೋಗಿದ್ದು, ಅಲ್ಲಿ ಆಲದ ಮರದ ಕೆಳಗೆ ಬಿದ್ದಿದ್ದ ಶಿಲಾಮೂರ್ತಿಯನ್ನು ಕಂಡು ಮನ ಸೋಲುತ್ತಾನೆ. ಆಗ ಗೆಳೆಯರು ಅದೇ ಮೂರ್ತಿಯನ್ನು ಆಟದ ನೆಪದಲ್ಲಿ ಅವನಿಗೆ ಮದುವೆಮಾಡಿ ಮನೆಗೆ ಕರೆತರುತ್ತಾರೆ. ಅವನು ಮನೆಗೆ ಬಂದವನೇ ಖಿನ್ನ ಮನಸ್ಕನಾಗಿ ಮಲಗುತ್ತಾನೆ. ತಾಯಿ ಲಕ್ಕಬ್ಬೆಗೆ ಚಿಂತೆಯಾಗುತ್ತದೆ, ಗೆಳೆಯರನ್ನು ವಿಚಾರಿಸಲು ಅವರು ಕಾಡಿನಲ್ಲಿ ನಡೆದ ಘಟನೆಯನ್ನು ಹೇಳಿ, ಶಿಲಾಮೂರ್ತಿಯ ಮದುವೆಯ ಪರಿಣಾಮ ಮಾಯದಗಾಳಿ ಜೋರಾಗಿ ಬೀಸಿ ಅಮಲಿನಲ್ಲಿ ಬಿದ್ದಿದ್ದ ಅವನನ್ನು ಎಚ್ಚರಿಸಿ ಕರೆತಂದ ವಿಷಯುವನ್ನು ವಿವರಿಸುತ್ತಾರೆ. ಅಂದಿನಿಂದ ಚಂದಮುತ್ತ ಅಂತರ್ಮುಖಿಯಾಗುತ್ತಾನೆ ಅಲ್ಲದೆ ಕೊಳಲೂದುತ್ತ ಮೈಮರೆತು ಬಂಡೆಯ ಮೇಲೆ ಕುಳಿತುಕೊಳ್ಳುವುದು ಸಾಮಾನ್ಯವಾಗುತ್ತದೆ. ಇದೇ ಸಂದರ್ಭದಲ್ಲಿ ಶಿವಾಪುರದ ಹಟ್ಟಿಯ ಒಡೆಯ ಸೂರ್ಯಮುತ್ತ ಹೆಗಡೆಯ ಕನಸಿನಲ್ಲಿ ದೇವತೆ ಕಾಣಿಸಿಕೊಂಡು 'ತನಗೊಂದು ಗುಡಿ ಕಟ್ಟಿಸಬೇಕು, ಇಲ್ಲದಿದ್ದರೆ ಬೂದಿಮಾಡುತ್ತೇನೆ' ಎಂದು ನುಡಿಯುತ್ತಾಳೆ. ಆ ದೇವತೆ ಆ ಶಿಲಾಮೂರ್ತಿಯೇ ಆಗಿರುತ್ತಾಳೆ. ಹೀಗಾಗಿ ಊರಿನ ಜನರೆಲ್ಲ ಸೇರಿ ಯಕ್ಷಿಣಿ ದೇವಾಲಯ ಕಟ್ಟಿಸಿ ಜಾತ್ರೆಮಾಡುತ್ತಾರೆ. ಹೆಗಡೆ–ಚಿನ್ನಮುತ್ತರು ನೀಡಿದ ಬಾಗಿನವನ್ನು ಯಕ್ಷಿ ಸ್ವೀಕರಿಸದೆ, ಚಂದಮುತ್ತ ನೀಡಿದಾಗ ಸ್ವೀಕರಿಸುತ್ತಾಳೆ. ಅಂದಿನಿಂದ ಯಕ್ಷಿಯ ಪೂಜಾ ಜವಾಬ್ದಾರಿಯನ್ನು ಚಂದಮುತ್ತನಿಗೆ ವಹಿಸಲು ಊರಿನ ಸಮಸ್ತರು ಒಪ್ಪುತ್ತಾರೆ. ಹೀಗಿರುವಾಗ ದೇವಾಲಯದಲ್ಲಿ ಚಂದ್ರಮುತ್ತನ ಕೊಳಲಿನ ನಾದಕ್ಕೆ ಯಕ್ಷಿ ಶಿಲಾಬಂಧನ ಕಳಚಿ ನಾದಲಯಕ್ಕೆ ತಕ್ಕಂತೆ ನೃತ್ಯ ಮಾಡುತ್ತಿರುತ್ತಾಳೆ. ಒಮ್ಮೆ ಚಂದಮುತ್ತ ಚಿನ್ನಮುತ್ತರಿಗೆ ಪರಿಸೆಯ ದಿನ ಕೊಳಲೂದುವ ಸ್ಪರ್ಧೆ ಏರ್ಪಡುತ್ತದೆ. ಚಂದಮುತ್ತ ಅದರಲ್ಲಿ ಯಶಸ್ವಿಯಾಗುತ್ತಾನೆ. ಆ ಹೆಮ್ಮೆಯಲ್ಲಿ ಎಲ್ಲರೂ ಇರುವಾಗ ಅಲ್ಲಿಗೊಬ್ಬ ಮುದಿ ಜೋಗ್ತಿಯ ಬಂದು ತನ್ನ ಅಸಾಧಾರಣ ಕೊಳಲುನಾದದಿಂದ ಅಲ್ಲಿ ನೆರೆದವರನ್ನೆಲ್ಲಾ ಭಾವಪರವಶಗೊಳಿಸಿ, ಎಲ್ಲರೂ ತನ್ಮಯರಾಗಿರುವಾಗಲೇ ಚಂದಮುತ್ತನ ಕೊಳಲನ್ನು ಮುರಿದು ಅಲ್ಲಿಂದ ಮರೆಯಾಗುತ್ತಾಳೆ. ಆ ಮುದಿಜೋಗ್ತಿಯ ಕೊಳಲುಗಾನಕ್ಕೆ ಮರುಳಾಗಿ ಚಂದಮುತ್ತ ಅವಳಿಂದ ಕೊಳಲು ಕಲಿಯಬೇಕೆಂದು ಅವಳನ್ನು ಹಿಂಬಾಲಿಸಿ ಹೊರಡುತ್ತಾನೆ. ಒಂದು ಪಾತಾಳ ಕೊಳದಲ್ಲಿ ಬಿದ್ದು, ಅಲ್ಲಿ ಹಾಡು ಕೇಳಿಸಿ ಹತ್ತಿರ ಹೋದಾಗ ಸಾವಿರ ಕಂಬದ ದೇವಾಲಯ ಕಾಣಿಸುತ್ತದೆ. ಅಲ್ಲೊಬ್ಬ ಮಹಾನುಭಾವ ಹಾಡುತ್ತಿರುತ್ತಾನೆ ಚಂದಮುತ್ತ ಅವನಿಂದ ಹಲವು ರಾಗಗಳನ್ನು ಕಲಿತು 'ತಿಂಗಳರಾಗ' ಕಲಿಯುವ ಹಂಬಲ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವ್ಯಕ್ತಪಡಿಸಿದಾಗ ಅದು ಮುದಿಜೋಗ್ತಿಗೆ ಮಾತ್ರ ಗೊತ್ತು ಎನ್ನುತ್ತಾನೆ. ಚಂದಮುತ್ತ ಮುದಿಜೋಗ್ತಿಯನ್ನು ಅರಸುತ್ತಾ ಹೋಗುತ್ತಾನೆ. ಅವಳನ್ನು ಸಂಧಿಸಿ ತಿಂಗಳರಾಗ ಕಲಿಯಬೇಕೆಂದು ಒತ್ತಾಯಿಸಿದಾಗ ಅವಳು ನಿರಾಕರಿಸುತ್ತಾಳೆ. ಅವಳನ್ನು ಹಿಡಿದೆಳೆದಾಗ ಹರಕು ಸೀರೆ, ಮುದಿಚರ್ಮ ಕೈಗೆ ಬಂದು ಅದರೊಳಗೆ ಸುಂದರಿ ಚಕೋರಿ ಎಂಬ ಯಕ್ಷಿ ಪ್ರತ್ಯಕ್ಷಳಾಗುತ್ತಾಳೆ. ಕ್ಷಣಾರ್ಧದಲ್ಲಿ ಅವರಿಬ್ಬರಲ್ಲಿ ಪ್ರೇಮ ಅಂಕುರಿಸಿ, ಚಕೋರಿ ಅವನಿಗೆ ಸುರತ ಸುಖವನ್ನು ಉಣಬಡಿಸುವುದಲ್ಲದೆ ತಿಂಗಳರಾಗವನ್ನು ಬಹಳ ಪ್ರೀತಿಯಿಂದ ಕಲಿಸುತ್ತಾಳೆ.

ಇತ್ತ ಚಂದಮುತ್ತನ ತಾಯಿ ಲಕ್ಕಬ್ಬೆ ಮಗನಿಗಾಗಿ ಕಾದು ನೊಂದು ಯಕ್ಷಿಗುಡಿಗೆ ಹೋಗಿ ಸಿಟ್ಟಿನಿಂದ ಮೂರ್ತಿಗೆ ಮೆಣಸಿನ ನೀರು, ಸೆಗಣಿ ಗಂಜಳ ಲೇಪಿಸುತ್ತಾಳೆ. ಇದರಿಂದ ಚಕೋರಿಗೆ ತೀವ್ರ ಉರಿಯಾಗಿ ಚಂದಮುತ್ತನಿಗೆ ‘ಇಲ್ಲಿ ಕಂಡದ್ದು ಯಾರಿಗೂ ಹೇಳಬೇಡ’ ಎಂದು ಎಚ್ಚರಿಸಿ ಅವನನ್ನು ಶಿವಾಪುರಕ್ಕೆ ಹಿಂದಿರುಗಿ ಕಳುಹಿಸುತ್ತಾಳೆ. ಮರಳಿದ ಮಗನನ್ನು ಕಂಡು ಲಕ್ಕಬ್ಬೆ ಯಕ್ಷಿಗೆ ಗುಡ್ಡನನ್ನು ಬಿಟ್ಟು ತನ್ನ ಹರಕೆ ತೀರಿಸುತ್ತಾಳೆ. ಒಮ್ಮೆ ಶಿವಾಪುರಕ್ಕೆ ಬರಗಾಲ ಬಂದು ಚಂದಮುತ್ತ ಮಳೆರಾಗ ನುಡಿಸಿ ಮಳೆತರಿಸಿ ಊರಿನವರ ಕೊಂಡಾಟಕ್ಕೆ ಪಾತ್ರನಾಗುತ್ತಾನೆ. ಈ ಸಂದರ್ಭದಲ್ಲಿ ಚಕೋರಿ ಯಕ್ಷಿ ಚಂದಮುತ್ತನ ಮನೆಗೆ ರಾತ್ರಿ ಹೊತ್ತು ರಹಸ್ಯವಾಗಿ ಬಂದು ಹೋಗುತ್ತಿರುತ್ತಾಳೆ. ಬೆಳಗೆದ್ದ ತಾಯಿಗೆ ಮಗನ ಕೆನ್ನೆಗಲ್ಲಗಳ ಮೇಲಿನ ಗಾಯದ ಗುರುತುಗಳಿಂದ ಸಂಶಯ ಬಂದು, ಅಲ್ಲಿಂದ ಮಗ ಯಕ್ಷಿಯ ಪ್ರಭಾವಕ್ಕೆ ಒಳಗಾಗಿರುವುದು ಅರಿವಿಗೆ ಬರುತ್ತದೆ. ಒಮ್ಮೆ ಹುಣ್ಣಿಮೆ ರಾತ್ರಿ ಚಂದಮುತ್ತ ಯಕ್ಷಿಗುಡಿಯ ಮುಂದೆ ಕೊಳಲು ನುಡಿಸುವಾಗ ಅವನ ನಾದದ ಮಹಾಪೂರಕ್ಕೆ ಯಕ್ಷಿ ಮೊದಲಿನಂತೆ ಬಿಳಿಯ ಪಕ್ಷಿಯಾಗಿ ಹಾರಲಾರಂಭಿಸುತ್ತಾಳೆ. ಹೀಗಿರುವಾಗ ಕೊಳಲು ಇದ್ದಕ್ಕಿದ್ದಂತೆ ಕಿರುಚಿ ಅಪಸ್ವರವಾಗಿ ಯಕ್ಷಿಯ ರೆಕ್ಕೆ ಮುರಿದು ಅವಳ ಮೂಲ ರೂಪ ದೊಪ್ಪೆಂದು ಭೂಮಿಗೆ ಬೀಳುತ್ತದೆ ಮತ್ತು ಚಂದಮುತ್ತ ಕತ್ತಿನ ಕಳಸ ಮುರಿದು ಪ್ರಜ್ಞಾಹೀನನಾಗುತ್ತಾನೆ. ಮುಂದೆ ಮಹಾನುಭಾವ ಚಿನ್ನಮುತ್ತನೊಂದಿಗೆ ಸೇರಿ ಮಾಟಮಾಡಿಸಿ ಹೀಗಾಗಿರುವುದೆಂದು ತಿಳಿಯುತ್ತದೆ. ತಾಯಿ ಲಕ್ಕಬ್ಬೆ ಮಾಟಮಾಡಿಸಿದ ಗೊಂಬೆಯ ಕತ್ತಿನ ಸೂಜಿ ಕಿತ್ತು ಗಂಟಲು ಬೇನೆ ಗುಣಪಡಿಸಿ, ಯಕ್ಷಿಯನ್ನೂ ಆರೈಕೆ ಮಾಡುತ್ತಾಳೆ. ಮತ್ತೊಂದು ಶುಭ ಮುಹೂರ್ತದಂದು ಚಂದಮುತ್ತ ತಿಂಗಳರಾಗ ನುಡಿಸ ತೊಡಗುತ್ತಾನೆ. ಅಲ್ಲಿ ಮಾಯಾಲೋಕ ಸೃಷ್ಟಿಗೊಂಡು ಮಲಗಿರುವ ಯಕ್ಷಿ ನಿಧಾನವಾಗಿ ದೈವತ್ವವನ್ನು ಪಡೆದು ಚೈತನ್ಯಶೀಲಳಾಗಿ, ಪಕ್ಷಿಯಾಗಿ ಹಾರತೊಡಗುತ್ತಾಳೆ. ಅವಳು ಮೇಲೆ ಹಾರಿದಂತೆ ಕೆಳಗೆ ಚಂದಮುತ್ತ ಶಿಲೆಯಾಗತೊಡಗುತ್ತಾನೆ. ಇದನ್ನರಿತ ಯಕ್ಷಿ ಕೆಳಗಿಳಿದು ಬಂದು ಶಿವ ಹಾಗೂ ಸಕಲ ದೈವಗಳನ್ನು ಪ್ರಾರ್ಥಿಸುತ್ತಾಳೆ ಆದರೆ ಅವಳ ಸಮ್ಮುಖದಲ್ಲೇ ಚಂದಮುತ್ತ ಶಿಲೆಯಾಗುತ್ತಿರುತ್ತಾನೆ. ಕೊನೆಯಲ್ಲಿ ಅವನ ತುಟಿಗಳನ್ನು ಚುಂಬಿಸಿ ಅವನಾತ್ಮವ ಪೂರ್ತಿ ಹೀರಿಕೊಂಡು ತೃಪ್ತಳಾಗಿ, ಚಕೋರಿ ಪಕ್ಷಿಯಾಗಿ ಹಾರಿ ಹೋಗುತ್ತಾಳೆ. ಹೀಗೆ ಈ ಕಲಾ ದಂಪತಿಗಳ ಇಂಥ ಸಾವೇ ಶುದ್ಧಕಲೆಯು ನೀಡುವ ‘ಪರಮಾನಂದ ಸ್ಥಿತಿ’ ಎಂಬುದನ್ನು ಕಾವ್ಯ ದೃಶ್ಯಾತ್ಮಕವಾಗಿ ಧ್ವನಿಸಿದೆ.

ಅನಾದಿಯಿಂದಲೂ ಮನುಷ್ಯನಿಗೆ ಆಕಾಶ ಕುರಿತ ಒಲವು, ಆಕಾಶ ಭೂಮಿ ಎಡೆಗೆ ತುಡಿತ ಹೀಗಾಗಿ ಆಕಾಶದ ಅನೇಕ ಹೆಣ್ಣುಗಳು ಭೂಮಿಗೆ ಬರುವುದು ಅಲ್ಲಿ ಹುಟ್ಟಿ ಹುಡುಗನನ್ನು ಇಷ್ಟಪಡುವುದು ನಡೆಯುತ್ತಿರುತ್ತದೆ. ಆತ ಸಾಮಾನ್ಯವಾಗಿ ಲಲಿತಕಲಾ ಪರಿಣಿತನಾಗಿರುತ್ತಾನೆ. ಇನ್ನೇನು ಆಕಾಶಕ್ಕೆ ಹೋಗಬೇಕೆಂದಿರುವಾಗ ಸಮಯ ಮೀರಿ ವಿವಾಹವಾಗಿ ಅಲ್ಲಿಯೇ ಉಳಿಯುವ ಸಂಗತಿ ಇವು ಜನಪದ ಕತೆಗಳಲ್ಲಿ ಸರ್ವೆಸಾಮಾನ್ಯವಾಗಿರುತ್ತವೆ. ಕಂಬಾರರು ಇದೇ ವಸ್ತುವನ್ನು ತೆಗೆದುಕೊಂಡು ಯಕ್ಷಿ ಕಲ್ಲಾಗಿದ್ದು, ಗೊಲ್ಲನ ಕೊಳಲದನಿಗೆ ಪರವಶಳಾಗಿ ಭೂಮಿಗೆ ಬಂದದ್ದು, ಅವನ ಸಂಗೀತ ಸೆಳೆತ ಇತ್ಯಾದಿ ತಿರುವುಗಳಿಗೆ ಚಕೋರಿ ಕಾವ್ಯದಲ್ಲಿ ಸ್ಥಾನ ಕಲ್ಪಿಸಿದ್ದಾರೆ. ಹೀಗೆ ‘ಚಕೋರಿ’ಯ ವಸ್ತು, ತಂತ್ರ, ಸನ್ನಿವೇಶ ಪ್ರತಿಮೆ ಹಾಗೂ ರೂಪಕಗಳು ಈ ನೆಲದಿಂದಲೇ ಅರಳಿ ಕಂಗೊಳಿಸಿದ ಸಿದ್ಧಮಾದರಿಗಳು. ನೆಲದ ಬದುಕಿನ ಆಶಯಗಳನ್ನು ಕೇಂದ್ರ ನೆಲೆಯಾಗಿಸಿಕೊಂಡು ಆ ಮೂಲಕ ಅನನ್ಯತೆಯನ್ನು ಕಟ್ಟಿಕೊಟ್ಟ ಹೆಗ್ಗಳಿಕೆ ಕಂಬಾರರದು. ಪುರಾಣದ ನೆಲೆಯಲ್ಲಿ ವಸಾಹತು ಸಂಸ್ಕೃತಿಯ ವಿಚಾರ ಲಹರಿಗಳನ್ನು ಸಂಘರ್ಷಕ್ಕೆ ಎದುರಾಗಿಸುವ ಇಲ್ಲಿಯ ಭಿನ್ನ ಆಲೋಚನೆ ಅಧ್ಯಯನ ಯೋಗ್ಯವಾಗಿರುವುದಾಗಿದೆ. ಜನಪದ ಪುರಾಣ, ಅತಿಮಾನುಷ ತಂತ್ರಗಳನ್ನು ಶೋಧಿಸಿ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. “ಚಕೋರಿಯನ್ನು ಓದುತ್ತ ಹೋದಂತೆ ಕೃತಿಯಲ್ಲಿ ಅಭಿವ್ಯಕ್ತಗೊಂಡಿರುವ ಜೀವನಾನುಭವ, ದೇಸೀ ಸಂಸ್ಕೃತಿಯ ನಂಬಿಕೆ–ಆಚರಣೆ, ಮಾಟ–ಮಂತ್ರ, ಕನಸು–ಕಲ್ಪನೆ, ತಂತ್ರ ಇಂತಹ ಭಾಷಿಕ ನೆಲೆಗಳು ಓದುಗನನ್ನು ಬೆಚ್ಚಿ ಬೀಳಿಸುತ್ತವೆ. ಆದಿಕಾಲದ ಕೃಷಿ, ಕುಟುಂಬ, ವಿದ್ಯೆ, ಕಲೆ, ಸಾಂಸ್ಕೃತಿಕ, ರಾಜಕೀಯ ಜಿಜ್ಞಾಸೆಗಳು ಚಕೋರಿಯಲ್ಲಿ ಮುಖ್ಯವಾಗಿವೆ. ಹಾಗೆಯೇ ಚಕೋರಿಯು ಜೀವವಿಕಾಸದ ವಿಭಿನ್ನ ಘಟ್ಟಗಳನ್ನು ಜೀವವಿಕಾಸದ ತಲೆತಲಾಂತರದ ನಂಬಿಕೆಯ ಕಥೆಗಳನ್ನು ಹೇಳುತ್ತಾ ಸೃಷ್ಟಿ ಮತ್ತು ಅವನತಿಯ ಮೂರ್ತ–ಅಮೂರ್ತ ವಿಚಾರಗಳನ್ನು ವಿಶ್ಲೇಷಿಸುತ್ತದೆ. ವಿಶ್ವಸೃಷ್ಟಿಯ ಮೂಲ, ಮನುಷ್ಯ, ದೈವ, ರಾಕ್ಷಸ, ಖೇಚರ, ದೇಹ–ಆತ್ಮ, ಹಗಲು–ರಾತ್ರಿ, ಸೂರ್ಯ–ಚಂದ್ರ, ಬಿಂಬ–ಪ್ರತಿಬಿಂಬ, ನೆಲ–ಮುಗಿಲು, ಸತ್ಯ–ಅಸತ್ಯ, ಕಲೆ–ವಿದ್ಯೆ, ಮನುಷ್ಯನ ಒಳಮನೋವ್ಯಾಪಾರದ ಅಸಂಖ್ಯ ಮೂಲಭೂತ ಸಮಸ್ಯೆಗಳನ್ನು ಅತ್ಯಂತ ಶ್ರದ್ಧೆಯಿಂದ ಅಭಿವ್ಯಕ್ತಿಗೆ ಗುರಿಪಡಿಸುತ್ತದೆ.”[2] ದೇಸೀ ಸಂಸ್ಕೃತಿಯ ಜನಪದ ಕತೆಗಳು, ನಂಬಿಕೆ, ಆಚಾರ, ವಿಚಾರ, ಮಂತ್ರ, ತಂತ್ರ ಇವುಗಳನ್ನು ಕಾವ್ಯದುದ್ದಕ್ಕೂ ಅಭಿವ್ಯಕ್ತಪಡಿಸುವ ಮೂಲಕ ಕಂಬಾರರು ಜನಜೀವನದಲ್ಲಿ ಜಾನಪದೀಯತೆ ಹಾಸುಹೊಕ್ಕಾಗಿರುವುದನ್ನು ಚಿತ್ರಿಸಿದ್ದಾರೆ. ವೈವಿಧ್ಯಮಯ ಜನಪದ ಪರಿಕರಗಳೊಂದಿಗೆ ಕಾವ್ಯ ಸಾಂಸ್ಕೃತಿಕ ಸಂವೇದನೆಯನ್ನು ಅಭಿವ್ಯಕ್ತಿಸಿದೆ.

## 1. ಜನಪದ ಕಥೆಯ ಹೂರಣ

ಚಕೋರಿ ಕಾವ್ಯದ ಜನಪದ ಕತೆ ಧಾರ್ಮಿಕ ಮಹತ್ವವನ್ನು ಎತ್ತಿಹಿಡಿಯುವ ಆಶಯ ಉಳ್ಳದಾಗಿದ್ದು, ಧರ್ಮದ ವಿವಿಧ ಸ್ವರೂಪವನ್ನು ಪ್ರತಿಪಾದಿಸುವ ಅಂಶಗಳನ್ನು ಒಳಗೊಂಡಿದೆ. ಭಾವಶುದ್ಧಿ, ಭಗವತ್ ದರ್ಶನ ಸ್ವಧರ್ಮಾಚರಣೆಗಳನ್ನು ಒಳಗೊಂಡು ಧರ್ಮದ ಹಿರಿಮೆಯನ್ನು ಸೂಕ್ಷ್ಮವಾಗಿ ಅರುಹುವ ಜನಪದ ಪರಂಪರೆಯ ಕತೆಯಾಗಿದೆ, ನೀತಿ–ಧರ್ಮೋಪದೇಶಗಳೇ ಅವುಗಳ ವಸ್ತುವಾಗಿವೆ. ಕಂಬಾರರ ಕಾದಂಬರಿಗಳ ಆರಂಭಕ್ಕೆ ಪ್ರಬಲ ಹಿನ್ನೆಲೆ ಒದಗಿಸಿಕೊಟ್ಟ ಪುರಾಣ, ನಂಬಿಕೆ, ಐತಿಹ್ಯಗಳು ವೈವಿಧ್ಯಮಯ ಜಾನಪದೀಯ ಕಥನ ರೂಪಗಳಾಗಿದ್ದು, ಪ್ರಸ್ತುತ ಕಾವ್ಯದಲ್ಲಿಯೂ ಅವುಗಳು ಜನಪದ ವಾರುವೇಷ ತೊಟ್ಟು ಪ್ರದರ್ಶಿತಗೊಂಡಿವೆ. ಹೀಗೆ ಅಲೌಕಿಕ ಘಟನೆಗಳನ್ನು ಹೆಣೆದು ಲೌಕಿಕ ಬದುಕಿಗೆ ಸಂಪರ್ಕ ಕಲ್ಪಿಸಿದ ಅದ್ಭುತ ಪ್ರಸಂಗಗಳು ಕಂಬಾರ ಸಾಹಿತ್ಯದಲ್ಲಿ ಸರ್ವೇಸಾಮಾನ್ಯ. ಇಂತಹ ಪವಾಡಸದೃಶ ಜನಪದ ಕಥನಗಳು ಇಲ್ಲಿ ಭಿನ್ನ ರೂಪದಲ್ಲಿ ನೆಲೆಯೂರಿವೆ. ಮನುಷ್ಯನ ಬದುಕನ್ನು ದಿವ್ಯಮಯ ಗೊಳಿಸುವ ಈ ಕಾವ್ಯಸಂಕಥನ ಮಾನವ ಸೃಷ್ಟಿಯ ಪುರಾಣದೊಂದಿಗೆ ಆರಂಭಗೊಳ್ಳುತ್ತದೆ. ಹೇಳೀ ಕೇಳಿ ಜನಪದ ಪುರಾಣಗಳ ಸೃಷ್ಟಿ ನಿರೂಪಣೆ ಕಂಬಾರರಿಗೆ ಕರಗತವಾಗಿದ್ದು, ಅಂತೆಯೇ ಸೃಷ್ಟಿಯ ಅನುಭವಲೋಕ ತೆರೆದುಕೊಳ್ಳುವುದು ಶಿವದೇವರ ಬೆಳಕಿನ ಮೀರಿಲೋಕದಿಂದ. ಒಮ್ಮೆ ಶಿವಲೋಕದಲ್ಲಿ ಶಿವದೇವರು ಜಪ–ತಪಮಾಡಿಕೊಂಡು ಸುಖದಿಂದಿದ್ದು, ವಿನೋದಕ್ಕಾಗಿ ತಮ್ಮ ಅಮೃತಗಿಂಡಿಯಲ್ಲಿ ಮುಖನೋಡಿದಾಗ ತಾನೆಷ್ಟು ಚೆಲುವನೆಂದು ಘನ ಆನಂದವಾಗಿ, ತಮ್ಮ ಎಡಭಾಗವನ್ನು ಕಿತ್ತು ಇನ್ನೊಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮೂರ್ತಿಮಾಡಿ 'ಆದಿಮಾಯಿ' ಎಂದು ಹೆಸರಿಟ್ಟು ಅವಳೊಡನೆ ಸರಸವಾಗಿ ಇರುವಾಗ, ಸೀಳಿಕೊಂಡ ಗಾಯದ ಮೇಲೆ ಅಮೃತ ಸುರಿದುಕೊಂಡು ಮಾಯೆಗೆ ಸುರಿದುಕೊಳ್ಳಲು ನೀಡಿದಾಗ ಅವಳು ಕೈಜಾರಿ ಕೆಳಗೆ ಚೆಲ್ಲುತ್ತಾಳೆ. ಶಿವನಿಗೆ ಕೋಪಬಂದು ಅಮೃತ ಬಳಸುವ ವಿವೇಕ, ವಯಸ್ಸು ಬರುವ ತನಕ ಒಳಮನೆಯಲ್ಲಿಟ್ಟು 'ಬಾಗಿಲನ್ನು ತೆರೆಯಬೇಡ' ಎಂದು ಹೇಳಿ ತಪಸ್ಸಿಗೆ ಕುಳಿತುಕೊಳ್ಳುತ್ತಾನೆ. ಆತುರಳಾಗಿ ಮಾಯೆ ಒಳಮನೆಯನ್ನು ತೆಗೆದಾಗ ಅಂಧಂತಮಸ್ಸು ಲೋಕವೆಲ್ಲಾ ವ್ಯಾಪಿಸಿ ಶಿವನಿಗೆ ಎಚ್ಚವಾಗುತ್ತದೆ. ಆಗ ಶಿವದೇವರು ಕತ್ತಲು ಆವರಿಸಿದ್ದ ಭಾಗವನ್ನು ಸೀಳಿ ಕೆಳಕ್ಕೆ ತಳ್ಳಲಾಗಿ ಅದರೊಳಗಿದ್ದ ಆದಿಮಾಯೆಯು ಕೆಳಕ್ಕೆ ಬೀಳುತ್ತಾಳೆ. ಆಗ ಶಿವದೇವರು ತಮ್ಮ ಹಣೆಗಣ್ಣಿನ ಒಂದು ಕಿಡಿಯನ್ನು 'ಸೂರ್ಯ'ನೆಂದು ನಾಮಕರಣಮಾಡಿ, ಕತ್ತರಿಸಿದಲೋಕ ಏನಾಯಿತೆಂದು ತಿಳಿದು ಬರಲು ಕಳುಹಿಸುತ್ತಾನೆ. ಶಿವನಿಂದ ದೂರಾದ ಮಾಯಿ ಶೋಕದಿಂದ ಬಡವಿಯಾಗಿರುತ್ತಾಳೆ. ಅವಳು ಬಿದ್ದಲ್ಲಿ ಗಿರಿಪರ್ವತಗಳು ನಿರ್ಮಾಣವಾಗಿ ಬೆವರು ಕಣ್ಣೀರು ಹೊಳೆ ಹಳ್ಳವಾಗಿ ಅವಳ ಉಸಿರು ಗಾಳಿಯಾಗಿ, ಮರ್ತ್ಯಲೋಕ ಸೃಷ್ಟಿಯಾಗುತ್ತದೆ. ಹೀಗಿರುವಾಗ ಆದಿಮಾಯಿ ಮುಂದೆ ಧರಣಿಮಂಡಳ ಮಧ್ಯದಲ್ಲಿ ಪುಣ್ಯಕೋಟಿ ಹಸುವಾಗಿ ಜನಿಸುತ್ತಾಳೆ. ಆದರೆ ಸಂತಾನವಿಲ್ಲದೆ ಕೊರಗುತ್ತಿರುವಾಗ ಆ ಹಸುವಿಗೆ ಒಂದು ಕನಸಾಗುತ್ತದೆ. ಆಕಾಶ ನೀಲಿಮದಲ್ಲಿ ಮಾಯದ ಬೆಳ್ಳಿಯಗಿಂಡಿಯಲ್ಲಿ ಬೆಳ್ದಿಂಗಳ ಹಾಲು ಸುರಿದು ಮರೆಯಾಗುತ್ತದೆ. ಬೆಳ್ಳಿಗಿಂಡಿಯನ್ನು ಪಡೆಯುವ ಯೋಗ ಒದಗುವ ಬಗ್ಗೆ ಆಲೋಚಿಸುತ್ತಾ ಕೊಂಬಿಂದ ಗವಿಯ ಗೋಡೆಯ ಮ್ಯಾಲೆ ಗೀರುತ್ತ ಹೂ, ಹಣ್ಣು ತರು ಮರ ಹಕ್ಕಿ ಬರೆದು, ಬೆಟ್ಟದೆತ್ತರದ ಹೋರಿಯ ಚಿತ್ರ ಬರೆದು ಶಿವಭಕ್ತಿಮಾಡಿದಾಗ, ಆ ಹೋರಿ ನಂದೀಶನಾಗಿ ಅವತಾರವಾಗಿ ಬಂದು ಬೆಳ್ಳಿಗಿಂಡಿಯ ಹಾಲನ್ನು ಮೈತುಂಬ ಸುರಿದು ಮಾಯವಾಗುತ್ತದೆ. ಆ ಹಾಲನ್ನು ಮಡಕೆಯಲ್ಲಿಟ್ಟು ಹೆಪ್ಪುಹಾಕಿದಾಗ ತರು ಮರ ಬೆಳೆಗಳಿಗೆ ಹಸಿವಾಗಿ, ಮಕ್ಕಳನ್ನು ಕಾಪಾಡಲು ತನ್ನ ಹಾಲುನೆತ್ತರು ಸುರಿದು ವೈಬರಿದಾಗಿ ಪಾತಾಳದ ಜಲ ಬಾವಿಯಲ್ಲಿ ಜಲ ಸಮಾಧಿಯಾಗುತ್ತಾಳೆ.

ಶಿವದೇವರು ತಪಸ್ಸುಮಾಡುತ್ತಾ ಶಿವಲೋಕದಲ್ಲಿರುವಾಗ ಹಣೆಯ ಬೆವರ ಹನಿ ಭೂಲೋಕದ ಮೇಲೆ ಬಿದ್ದು ನರ ಮಾನವನನ್ನು ಸೃಷ್ಟಿಸಿ

> **"ಪಾತಾಳವೆಂಬ**
> **ಅಧೋಲೋದಲ್ಲಿ ಬೆಟ್ಟದ ಮಾಯಕಾರ್ತಿ ಅವತಾರಗೊಂಡು**
> **ಕಟ್ಟಿರುವೆ ಹುತ್ತದಲ್ಲಿ ಸ್ಥಾಪನೆಗೊಂಡಿದ್ದಾಳೆ.**
> **ಪುರುಷಾಮೃಗವೆಂಬ ಸೈತಾನ ಸರ್ಪ ಅವಳ ಕಾವಲಿಗಿದೆ.**
> **ಅದನ್ನು ಜಯಿಸಿ, ಅವಳನ್ನು ವರಿಸಿ,**
> **ಸಂಸಾರ ದಂದುಗವ ಸುರುಮಾಡಯ್ಯ"**[3]

ಎಂದು ಆಶೀರ್ವದಿಸಿ ರಕ್ಷಣೆಗೆ ತನ್ನ ಮೈಮೇಲಿನ ರೋಮಗಳನ್ನು ಕೊಡುತ್ತಾನೆ. ಶಿವನ ರೋಮಗಳ ಸಹಾಯದಿಂದ ಸರ್ಪ ಸೈತಾನನನ್ನು ಗೆದ್ದು, ಮುಂದೆ ಬಟ್ಟೆ ನೇಯುವ ಮಾಯಕಾರ್ತಿಯನ್ನು ಕಂಡು ಮನಸೋಲುತ್ತಾನೆ. ಬೆತ್ತಲೆಯಾಗಿ ಬಂದ ಅವನಿಗೆ ಬಟ್ಟೆ ನೇಯ್ದು ಕೊಟ್ಟು, ಹಿಂದಿನ ಜನ್ಮದ ಪುಣ್ಯಕೋಟಿಯ ಕೊಂಬನ್ನು ತೆಗೆದುಕೊಂಡು ನರನೊಂದಿಗೆ ಪಾತಾಳಬಿಲಕ್ಕೆ ಹೋಗುತ್ತಾಳೆ. ಇನ್ನೇನು ಹತ್ತಬೇಕೆನ್ನುವಷ್ಟರಲ್ಲಿ ಸರ್ಪಸೈತಾನನು ಎದುರಾಗಿ, ಮೇಲೆ ಬರುತ್ತಿರುವ ಅವನ ಎಡಗಾಲು ಹಿಡಿದು ಕೆಳಗೆ ಜಗ್ಗಲಾರಂಭಿಸುತ್ತಾನೆ. ಮಾಯಕಾರ್ತಿ ಅವನ ಬಲಗಾಲನ್ನು ಹಿಡಿದು ಎಳೆಯಲಾರಂಭಿಸುತ್ತಾಳೆ. ಅವರ ಎಳೆದಾಟಕ್ಕೆ ನರಮನುಷ್ಯ ಸೀಳಿ ಎರಡಾಗುತ್ತಾನೆ. ಶಿವದೇವರ ಇಚ್ಛೆಯಂತೆ ಮುಂದೆ ಸೂರ್ಯ ಬೆಳಕಿನಿಂದ ಆ ನರ ಮಾನವನ ಬಲಭಾಗ ಪೂರ್ಣಗೊಳ್ಳುತ್ತದೆ. ಚಂದ್ರನ ಬೆಳಕಿನಿಂದ ಎಡಭಾಗ ಪೂರ್ಣಗೊಳ್ಳುತ್ತದೆ. ಹೀಗೆ ಒಬ್ಬನಿದ್ದ ನರಮನುಷ್ಯ ಇಬ್ಭಾಗವಾಗಿ ಅಣ್ಣತಮ್ಮಂದಿರಾಗುತ್ತಾರೆ. ಹೀಗೆ ಶಿವದೇವರು ಅವರಿಗೆ 'ಮಾನವರಿಗೆ ದೊಡ್ಡವರಾಗಿ, ದೇವರಿಗೆ ಸಣ್ಣವರಾಗಿ ಬಾಳಿರಯ್ಯ' ಎಂದು ಹರಸುತ್ತಾರೆ. ಅಲ್ಲಿಂದ ಸಂಸಾರ ದಂದುಗ ಆರಂಭಗೊಂಡು ಇಬ್ಬರಲ್ಲೂ ಘರ್ಷಣೆಗಳಾಗಿ ಕಾಲಕ್ರಮೇಣ ಗೌಜುಗದ್ದಲ ಪ್ರಾರಂಭಗೊಳ್ಳುತ್ತದೆ. ಒಮ್ಮೆ ಶಿವದೇವರು ಬಂದು ಹಗಲು ಅಣ್ಣ ಮಾಯಗಾರ್ತಿಯ ಜೊತೆ ಇರುವುದೆಂದು ರಾತ್ರಿ ತಮ್ಮನ ಜೊತೆ ಇರುವುದೆಂದು ತೀರ್ಮಾನಿಸುತ್ತಾರೆ. ಚಂದ್ರ-ಸೂರ್ಯರನ್ನು ಕಾವಲಿಗಿರಿಸಿದರೂ ಅವರ ಆಕ್ರಮಣ ನಿಲ್ಲದಾಗಲು ಭೂಲೋಕದ ಮೇಲೆ ಆಕಾಶ ಡಬ್ಬುಹಾಕಿ, ಶಿವದೇವರು ತಮ್ಮ ಮೇಲಿನ ನಿವಾಸಕ್ಕೆ ಹೊರಟುಹೋಗುತ್ತಾರೆ. ಇವರಿಬ್ಬರು ತಮ್ಮ ತಮ್ಮ ಕೊಂಬುಗಳನ್ನು ಊದಿ ಅಣ್ಣ ಬೆಂಕಿಮಾಡಿ ಮಾಂಸ ಬೇಯಿಸಿ ತಿನ್ನುವ, ಬೇರಿಂದ ವೈದ್ಯಮಾಡುವ ಲೋಹದಿಂದ ಆಯುಧ ಮಾಡುವ, ಆಯುಧದಿಂದ ಯುದ್ಧಮಾಡಿ ಗೆಲ್ಲುವ ಚೌಸಷ್ಠಿ ವಿದ್ಯೆಗಳನ್ನು ಹುಟ್ಟಿಸಿದರೆ, ತಮ್ಮ ನಾದ ಮೊದಲು ಶಬ್ದ ಕಡೆಯಾಗಿ ಸಂಗೀತ ಸಾಹಿತ್ಯ ಮುಂತಾದ ಇಪ್ಪತ್ತೇಳು ತನ್ಮಯ ಕಲೆಗಳನ್ನು ಹುಟ್ಟಿಸುತ್ತಾನೆ. ಆದರೆ ಪರಸ್ಪರ ಹಿಂಸಿಸುತ್ತ ಬದುಕಿರುತ್ತಾರೆ. ಇದಿಷ್ಟು ಮಹಾಕಾವ್ಯ ಸೃಷ್ಟಿ ರಹಸ್ಯದ ಕಥನ ಭಾಗವಾಗಿದೆ. ಹೀಗೆ ಸ್ವರ್ಗ-ಮರ್ತ್ಯಗಳ ನಡುವೆ ಸೇತುವೆ ನಿರ್ಮಿಸುವ ಪುರಾಣ ಪ್ರಸಂಗವನ್ನು ಕಂಬಾರರು ಚಕೋರಿ ಕಾವ್ಯದಲ್ಲಿ ಕಡೆದು ಅಲೌಕಿಕದ ನಂಟನ್ನು ಬೆಸೆದಿದ್ದಾರೆ. ಚಕೋರಿ-ಚಂದಮುತ್ತರ ಪ್ರಣಯ ಕತೆಗೆ ಈ ಪೌರಾಣಿಕ ಪ್ರಸಂಗ ಪೋಷಕ ನೆಲೆಯಲ್ಲಿ ಕಾಣಿಸಿಕೊಂಡಿದೆ.

## 2. ಜನಪದ ಸಂಪ್ರದಾಯಗಳು

ಕಾವ್ಯದಲ್ಲಿ ಜನಪದ ನಂಬಿಕೆ, ಆಚರಣೆ, ಸಂಪ್ರದಾಯಗಳು ಜನಪದ ಬದುಕಿನ ಸಾರಸರ್ವಸ್ವವನ್ನು ಗರ್ಭೀಕರಿಸಿಕೊಂಡ ಸಮಸ್ತ ಅನುಭವಗಳ ಸಂಚಯವಾಗಿದೆ. ಜನಸಮುದಾಯವೊಂದರ ನಿತ್ಯಜೀವನದಲ್ಲಿ ಕಂಡುಬರುವ ನಂಬಿಕೆ, ಆಚರಣೆ ಸಂಪ್ರದಾಯಗಳನ್ನು ಕಂಬಾರರು ಆ ಕಾಲದ ಆಡಳಿತಾತ್ಮಕ ವ್ಯವಸ್ಥೆ, ಸಾಮಾಜಿಕ ಸ್ಥಿತಿ-ಗತಿ, ಪ್ರಾದೇಶಿಕ ಮಹತ್ವ ಜೀವನದ ರೂಪು-ರೇಷೆಗಳನ್ನು ಆಧರಿಸಿ ವಿಶ್ಲೇಷಿಸಿದ್ದಾರೆ. ಕಾವ್ಯದ ಕೇಂದ್ರ ವ್ಯಕ್ತಿ ಕ್ಷಿತಿಜದ ಆಚೆ ಸೀಮೆಗೆ ಬೆಳಕು ಚೆಲ್ಲುವ 'ಚಕೋರಿ' ಎಂಬ ಅನುಪಮ ದಿವ್ಯ ಚೆಲುವೆ ಯಕ್ಷಿ. ಇಂತಹ ಸಂಸ್ಕೃತಿ ದೇವತೆಯ ಜನಪದ ಧಾರ್ಮಿಕ ಭಕ್ತಿ ಆಚರಣೆಯು ಕಾವ್ಯದಲ್ಲಿ ಕಲಾತ್ಮಕವಾಗಿ ಮೂಡಿಬಂದಿದೆ. ಜನಪದ ಕತೆಗಳ ಈ ಯಕ್ಷಿಣಿಯರು ಸುಂದರ ದೇವತೆಗಳು, ಹಸಿರು ಕಣ್ಣಿನವರು, ಗಿಣಿ ಅವರ ಹಕ್ಕಿ. ಎತ್ತರದ ಆಲದಮರ ಇವರ ವಾಸ, ಆಕಾಶದ ತುದಿಯಲ್ಲಿ ಜೀವಿಸುವವರು.

ಯಕ್ಷಿಯ ಪರಿಸೆಯಂದು ಶಿವಾಪುರದ ಸಮಸ್ತ ಜನರು ಮಿಂದು ಮಡಿಯುಟ್ಟು ಹಾಡಿ, ಕುಣಿದು, ದನಕರು, ಕುರಿ ಮೇಕೆಗಳನ್ನು ಸಿಂಗರಿಸಿ ಕುಲಗುರು ಮತ್ತು ಹೆಗಡೆಯ ಹಿರಿತನದಲ್ಲಿ ಕೊಂಬು, ಕಹಳೆ, ನಗಾರಿ, ನೌಬತ್ತು ಮುಂತಾದ ವಾದ್ಯಗಳೊಂದಿಗೆ ಯಕ್ಷಿಯ ಗುಡಿಗೆ ಹೋಗಿ ಗುಡಿ ಅಂಗಳವನ್ನು ಸೆಗಣಿಯಿಂದ ಸಾರಿಸಿ, ಪಂಚವಳ್ಳಿ ವೀಳ್ಯೆದೆಲೆಯ ಚಪ್ಪರ ಹಾಕಿ ನಂದಾದೀಪ ಹಚ್ಚಿ, ಸೀಮೆಯ ಸಮಸ್ತ ದೈವಗಳನ್ನು ಕರೆದು ಧೂಪ, ದೀಪ ಬೆಳಗಿ ಪಾದಕಾಣಿಕೆ ನೀಡಿ ಪೂಜಿಸುತ್ತಾರೆ. ಗುಡಿಬಾಗಿಲಿನಲ್ಲಿ ಹಿಂಡು ಕುರಿ ಬಲಿಕೊಟ್ಟು, ಬಲಿಬಡಿಸಿ ಧೂಪದೀಪದಾರತಿ ಹೊಗೆ ಎಬ್ಬಿಸಿ, ಊರಿನ ಸರ್ವರು ಯಕ್ಷಿಗೆ ಮೈಚೆಲ್ಲಿ ನಮಸ್ಕರಿಸುತ್ತಾರೆ. ಹೀಗೆ ಯಕ್ಷಿಯ ಪೂಜೆಯ ಆಚರಣೆ, ಪರಿಸೆ-ಹಬ್ಬ, ಕಲೆ ಮುಂತಾದ ಸಂಸ್ಕೃತಿ ಮುಖಗಳು ಜಾನಪದೀಯ ನೆಲೆಯ ಹಿನ್ನೆಲೆಯಲ್ಲಿ ಮೂಡಿಬಂದಿವೆ. ಇಲ್ಲಿ ಕಂಬಾರರು ಯಕ್ಷಿಯನ್ನು ಗ್ರಾಮದೇವತೆಯ ಪ್ರತೀಕ ಎಂಬಂತೆ ಬಳಸಿಕೊಂಡಿದ್ದಾರೆ. ಈ ಗ್ರಾಮದೇವತೆಯನ್ನು ಪ್ರಶ್ನಿಸುವ, ಪರೀಕ್ಷಿಸುವ, ವಿಡಂಬಿಸುವ ಕಾರ್ಯವನ್ನು ಜನಪದರು ಸಾಮಾನ್ಯವಾಗಿ ಮಾಡುತ್ತಾರೆ. ದೇವತೆಗಳು ವರಕೊಡದಿದ್ದರೆ ಮೆಣಸಿನ ಘಾಟು ಹಾಕುವ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪೊರಕೆಯಿಂದ ಹೊಡೆದು ಪೂಜೆಮಾಡುವ ಸೇವೆ ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಜೀವಂತವಾಗಿವೆ. ಕಾವ್ಯದಲ್ಲಿಯೂ ಚಂದಮುತ್ತನ ತಾಯಿ ಲಕ್ಕಬ್ಬೆ ಮಗ ಹಿಂದಿರುಗಿ ಬಾರದ ಸಂಕಟಕ್ಕೆ ಯಕ್ಷಿಗೆ "ಮಂಗಳವಾರದ ಅಮಾವಾಸ್ಯೆ ಸಪ್ಪಟು ಸರಿರಾತ್ರಿ ಮಾರಿಮಸಣಿ ಭೂತಪಿಶಾಚಿ ಅಡ್ಡಾಡೋ ಹೊತ್ನಲ್ಲಿ ತಣ್ಣೀರು ಮಿಂದು, ತಣ್ಣನೆ ದಟ್ಟಿ ಉಟ್ಟು, ಬುಟ್ಟಿ ತುಂಬ ಹಸಿರು ಸೆಗಣಿ, ಗಡಿಗೆ ತುಂಬ ಮೆಣಸಿನ ನೀರು ತಗೊಂಡು ಹಟ್ಟಿಯ ಹೊರಗಿನ ಯಕ್ಷಿಯ ಗುಡಿಗೆ ಹೋಗಿ, ಸೆಗಣಿಯಲ್ಲಿ ಮೆಣಸಿನ ನೀರು ಹುಯ್ದು ಗಂಜಳಮಾಡಿ ಯಕ್ಷಿಯ ಶಿಲಾಮೂರ್ತಿಯ ಮುಖಕ್ಕೆ ಬಡಿದು ಡಬ್ಬು ಮಲಗಿಸಿ – ದಿಕ್ಕುದೇಶಾಂತರ ಹೋದ ಮಗ ಬಂದರೆ ಗುಡ್ಡಬಿಡ್ತೀನಿ ಬರದಿದ್ದರೆ ನಿನಗಿದೇ ಗತಿ."[4] ಎಂದು ದ್ವಾರ ಬಾಗಿಲಿಗೆ ಮುಳ್ಳಿನ ಬೇಲಿ ಹಾಕಿ ಮನೆಗೆ ಹಿಂದಿರುಗುತ್ತಾಳೆ. ಈ ರೀತಿಯಾಗಿ ಕವಿ ಕಂಬಾರರು ಗ್ರಾಮದೇವತೆಯನ್ನು ಜನಪದರು ವಿಡಂಬಿಸುವ ಪ್ರಸಂಗವನ್ನು ಉಲ್ಲೇಖಿಸಿ ವ್ಯವಸ್ಥೆಯ ಅಸಮಾನತೆಯನ್ನು ಬಗೆಬಗೆಯಾಗಿ ಬಿಚ್ಚಿಟ್ಟಿದ್ದಾರೆ. ಮತ್ತೆ ಲಕ್ಕಬ್ಬೆ ಮಗ ಚಂದಮುತ್ತ ಹಿಂದಿರುಗಿ ಬಂದ ಮೇಲೆ ನೂರೆಂಟು ಗುಣಗಳಿಂದ ಯಕ್ಷಿಯ ಹೊಗಳುತ್ತ ಹಸುಗೂಸನ್ನ ಎರೆವಂತೆ ಯಕ್ಷಿಯಮೂರ್ತಿಯನ್ನು ತೊಡೆಯಮೇಲೆ ಚೆಲ್ಲಿಕೊಂಡು ಪಾತಾಳ ಗಂಗೆಯಲ್ಲಿ ತೊಳೆದು ಎಣ್ಣೆ, ಬೆಣ್ಣೆ, ತಿಳಿದುಪ್ಪದಲ್ಲಿ, ಬಿಸಿನೀರಿನಲ್ಲಿ ಶುದ್ಧಮಾಡುತ್ತಾಳೆ. ಕೈಕಾಲು ಮುಖ, ಸೊಂಪಾದ ಕೂದಲು, ಕಿವಿ, ಕಣ್ಣು, ಮೂಗುತಿ, ವಾಲೆ, ಕೊರಳಸರ, ಬೆರಳುಂಗುರ, ಸೊಂಟದ ಡಾಬು, ಕಾಲಿನ ಕಡಗ ಮುಂಗೈ ಬಳೆಗಳನ್ನು ತೊಳೆದಳು. ಮೈ ಒಣಗಿಸಿ ಬಣ್ಣದಲ್ಲಿ ಮೇಲಾದ ಹಸಿರು ಗಿಣಿ ನೂರು ಬರೆದ ಇಳಕಲ್ ಸೀರೆ ಉಡಿಸಿ, ಚಿನ್ನದ ಕಣ್ಣು ಬೆಳ್ಳಿಯ ಮೀಸೆಯಿಟ್ಟು ನೊಸಲಲ್ಲಿ ಚಂದ್ರನ ಬೊಟ್ಟಿಟ್ಟು ತುರುಬಿಗೆ ಮಲ್ಲಿಗೆ ದಂಡೆ ತುರುಕಿ ಶೃಂಗಾರಮಾಡಿ ತೆಂಗಿನ ಚಿಪ್ಪಿನಲ್ಲಿ ಕಪಿಲೆ ಹಸುವಿನ ತುಪ್ಪದ ಸೊಡರಿಟ್ಟು ಪೂಜೆಯ ಮಾಡಿದಳು. ಜನ ತಾಳ ಜಾಗಟೆ ಬಡಿದು ಶಂಖ ಊದಿದರು. ಕುರಿಯ ಬಲಿಕೊಟ್ಟು ಬಾಡಿನ ನೈವೇದ್ಯ, ಕಳ್ಳಿನ ನೊರೆ, ಈಚಲ ರುಚಿಗಳ ಒಪ್ಪಿಸಿಕೊ ಎಂದು ನೀಡಿ ಅಡ್ಡಬಿದ್ದರು. ಲಕ್ಕಬ್ಬೆ ಈ ಮಾದರಿಯಲ್ಲಿ ಮಗನನ್ನು ಯಕ್ಷಿಗೆ ಗುಡ್ಡ ಬಿಡುತ್ತಾಳೆ. ಹೀಗೆ ಜನಪದರು ದೇವರಲ್ಲಿ ತಾವು ಕಟ್ಟಿಕೊಂಡ ಹರಕೆಯನ್ನು ತೀರಿಸುವುದರಲ್ಲಿ ಸದಾ ಪ್ರಜ್ಞಾಪೂರ್ವಕರಾಗಿರುತ್ತಾರೆ. ಅದರಂತೆ ಕಟ್ಟಿಕೊಂಡಿದ್ದ ಹರಕೆ ಈಡೇರಿದ ನಂತರ ಅದನ್ನು ಶ್ರದ್ಧಾ ಭಕ್ತಿಯಿಂದ ತೀರಿಸುತ್ತಾರೆ. ಇಂಥ ಹತ್ತಾರು ಹರಕೆಗಳ ಸಂಪ್ರದಾಯ, ಆಚರಣೆಗಳ ಕೇಂದ್ರ ಪ್ರಜ್ಞೆಯಲ್ಲಿ ಕಂಬಾರರು ತಮ್ಮ ಚಕೋರಿ ಕಾವ್ಯವನ್ನು ದಾಖಲಿಸಿದ್ದಾರೆ.

ಚಂದಮುತ್ತ ತಿಂಗಳರಾಗ ನುಡಿಸುವಾಗ ಕೊರಳು ಕಿರುಚಿ ಅಪಸ್ವರವಾಗಿ ಹಾರುತ್ತಿದ್ದ ಚಕೋರಿ ಯಕ್ಷಿ ಬಿದ್ದುದರಿಂದ ಅವಳಿಗೆ ಮುಕ್ತಿಕೊಡಲು ಮತ್ತೊಮ್ಮೆ ಚಂದಮುತ್ತ ತಿಂಗಳರಾಗ ನುಡಿಸಲು ಮಂಡಲ ರಚಿಸುತ್ತಾನೆ. ಅಂಗಳ ಸಾರಿಸಿ, ಸಾರಣೆಮಾಡಿ, ರಂಗೋಲಿ ಎಳೆದು ಮರುಗಮಲ್ಲಿಗೆ ಪತ್ರೆಯೆಲೆ ತಂದು ಸಂಜೆಯ ಶಾಂತಿಪೂಜೆಮಾಡಿ, ಪಂಜು ಹೊತ್ತಿಸಿ ಅರಿಷಿಣ ಕುಂಕುಮಗಳಲ್ಲಿ ಮಂಡಲ ಬರೆದು ಎಡಬದಿಯಲ್ಲಿ ಮೂರು ಕಾಲಿನ ಮೂಳೆರೂಪದ ಭೃಂಗೀಶನನ್ನು ವಿರಚಿಸಿ, ಸತ್ಯಶಿವನ ಶ್ರೀಪಾದಂಗಳ ಸ್ಥಾಪನೆಮಾಡಿ ಮಂಡಲ ಮಧ್ಯೆ ಬೂದಿಬಡಕ ಶಿವನ ಮತ್ತವನ ತಲೆಯಲ್ಲಿ ಮಿಡಿನಾಗರ ಜಡೆಯ ಬರೆದು ಯಂತ್ರ, ಮಂತ್ರ, ತಂತ್ರಗಳಿಂದ ಸಾವಿರದೊಂದು ಗಣಂಗಳ ಆವಾಹಿಸಿ ಇನ್ನೊಂದು ಮಂಡಳದಲ್ಲಿ ಯಕ್ಷಿಯನ್ನಿಟ್ಟು ಶಿವನನ್ನು ನೆನೆದು ಆಲಾಪವನ್ನು ಆರಂಭಿಸುತ್ತಾನೆ.

ಮುಂದೆ ಶಿವಾಪುರಕ್ಕೆ ಮಳೆಯಾಗದೆ ಬರಗಾಲವಾದಾಗ ಚಂದಮುತ್ತ ಮಳೆರಾಯನ ನೂರೆಂಟು ಹೆಸರುಗಳಿಂದ ಮಧುರ ನಾದಗಳನ್ನು ಸ್ತುತಿಸಿ ಮಳೆ ಸುರಿಸುತ್ತಾನೆ. ಮೋಡಗಳ ಕಾಡಾನೆ ಹಿಂಡು ಆಕಾಶದಲ್ಲಿ ಘೀಳಿಟ್ಟು ಮಳೆರಾಗದಿಂದ ಧೋ ಎಂದು ಮಳೆಸುರಿಯುತ್ತದೆ. ಕಾವ್ಯದುದ್ದಕ್ಕೂ ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಸಾಂಪ್ರದಾಯಿಕ ನಂಬಿಕೆ, ಆಚರಣೆಗಳು, ಜೀವನ ವಿಧಾನಗಳು ಒಂದನ್ನೊಂದು ಬೆಸೆದುಕೊಂಡು ವಿಸ್ಮಯಗೊಳಿಸುವಷ್ಟು ಪ್ರಮಾಣದಲ್ಲಿ ಮೂಡಿಬಂದಿವೆ.

## 3. ಹರಕೆಗಳು

ಹರಕೆಗಳು ಭಕ್ತರ ವೈಯಕ್ತಿಕವಾದ ಅಭೀಪ್ಸೆ, ಫಲಾಪೇಕ್ಷೆಗಳಾಗಿದ್ದು, ಅದರ ಈಡೇರಿಕೆಗಾಗಿ ಹಲವು ಧಾರ್ಮಿಕ ಆಚರಣೆಗಳನ್ನು ಸೇವೆಗಳನ್ನು ತಮ್ಮ ದೈವದ ಹೆಸರಿನಲ್ಲಿ ಕೈಗೊಳ್ಳುವುದು ಜನಪದರ ನಂಬಿಕೆ. ಅಂತೆಯೇ ಕಾವ್ಯದಲ್ಲಿ ಅಂತಹ ಹರಕೆಗಳು ಪ್ರಸ್ತಾಪಗೊಂಡಿವೆ. ಮಾಚ ಮತ್ತು ಸಿರಿಲಕ್ಕಿ ತಮಗೆ ಪುತ್ರ ಸೌಭಾಗ್ಯವಿಲ್ಲದಾಗಿ ಸಂತಾನೋತ್ಪತ್ತಿಗಾಗಿ 'ಶಿವದೇವರಿಗೆ ಹಿಡಿ ಹಣ ಹಾಕಿಸುವುದಾಗಿ' ಹರಕೆಹೊರುತ್ತಾರೆ. ಲಕ್ಕಬ್ಬೆ ಯಕ್ಷಿಯ ಸಂಗವಾಗಿ ಮಗ ಅಂತಮುರ್ಖಿಯಾಗಿದ್ದು ಅವನು ಮೊದಲಿನಂತಾಗಲು ಬೆಟ್ಟದ ಸಿರಿಮಾಯಿಗೆ 'ಪ್ರತಿ ಮಂಗಳವಾರ ಹಾಲೋಗರ, ಕುರಿ, ಕೋಳಿಯ ಬಾಡಿನ ರುಚಿ ನಿನಗೆ ನೀಡುತ್ತೇನೆ ನನ್ನ ಕಂದನ ನನಗೆ ಕೊಡು' ಎಂದು ಹರಕೆ ಹೊರುತ್ತಾಳೆ ಹಾಗೂ ಚಂದ್ರಮುತ್ತನಿಗೆ ಜ್ವರ ಬಂದಾಗ ಹೆದರಿ ಕುಲದೈವ ಚಂದಪ್ಪನಿಗೆ 'ಬೆಳಗಾಗುವುದರೊಳಗೆ ಮಗನ ಪೀಡೆ ತೊಲಗಲಿ ನಿನಗೆ ಮಲ್ಲಿಗೆ ಹೂ ದಂಡೆ, ಬಾಡಿನ ರುಚಿ ಕೊಡುವುದಾಗಿ' ಹರಕೆ ಹೊರುತ್ತಾಳೆ. ಹೀಗೆ ತಮ್ಮ ಕಷ್ಟಕಾರ್ಪಣ್ಯಗಳಿಗೆಲ್ಲ ದೇವರ ಮೊರೆ ಹೋಗಿ ತಮಗೆ ಒಳಿತಾಗಲಿ ಎನ್ನುವ ಮನೋಭಾವ ಆಚರಣೆಗಳು ಕಾವ್ಯದಲ್ಲಿ ಅಲ್ಲಲ್ಲಿ ಗೋಚರಿಸಿವೆ. ಇಂತಹ ಹರಕೆಗಳು ಜನಪದರ ನಂಬಿಕೆ, ಆಚರಣೆಗಳನ್ನು ಮತ್ತಷ್ಟು ಬಲಗೊಳಿಸುತ್ತವೆ ಎನ್ನುವ ಕಂಬಾರರ ಚರ್ಚೆ ಪರಂಪರಾನುಗತವಾಗಿ ಬಂದಿರುವ ಹರಕೆಗಳ ವೈವಿಧ್ಯತೆಗಳನ್ನು ಅನಾವರಣಗೊಳಿಸಿದೆ.

## 4. ಬಲಿಪದ್ಧತಿ

ಜನಪದರಲ್ಲಿ ಕ್ಷುದ್ರ ದೇವತೆಗಳಿಗೆ ಕುರಿ, ಕೋಳಿ, ಆಡು, ಕೋಣ ಇತ್ಯಾದಿ ಪ್ರಾಣಿಗಳನ್ನು ಬಲಿಯಾಗಿ ಅರ್ಪಿಸಿ ತಮ್ಮ ಕಾರ್ಯ ಸಾಧನೆಮಾಡಿಕೊಳ್ಳುವ ಧಾರ್ಮಿಕ ಆಚರಣೆ ಇದೆ. ಕಾವ್ಯದಲ್ಲಿ ಅಂತಹ ಬಲಿಪದ್ಧತಿಗಳು ಆಯಾ ಸಂದರ್ಭೋಚಿತ ಆಚರಣೆಗಳಿಗೆ ಸಾಕ್ಷಿಯಾಗಿವೆ. ಸಾಮಾಜಿಕ, ಧಾರ್ಮಿಕ ಗ್ರಾಮ್ಯ ಜೀವನದಲ್ಲಿ ಸಾಮಾನ್ಯವಾಗಿರುವ ಇಂತಹ ಆಚರಣೆಗಳು ಕಾವ್ಯದಲ್ಲಿ ಹಾಸುಹೊಕ್ಕಾಗಿವೆ. ಮಾಚ ಮತ್ತು ಸಿರಿಲಕ್ಕಿಗೆ ಸಂತಾನ ಭಾಗ್ಯ ಇಲ್ಲದಿದ್ದಾಗ ಯಕ್ಷಿಯ ಕಾಟವೆಂದು ತಿಳಿದು ಒಂದು ಹುಣ್ಣಿಮೆಯ ದಿನ ಅಂಗಳದಲ್ಲಿ ಮಂಡಲ ಬರೆದು ಮಧ್ಯೆ ತಾಮ್ರದ ತಂಬಿಗೆಯಿಟ್ಟು ಯಕ್ಷಿಯನ್ನು ಆವಾಹಿಸಿ, ಎಮ್ಮೆ–ಕರು, ಮೊಟ್ಟೆಯಿಡುವ ಕೋಳಿಯನ್ನು ಬಲಿಕೊಟ್ಟು ಹರಕೆ ಒಪ್ಪಿಸುತ್ತಾರೆ. ಅನಂತರ ಸಿರಿಲಕ್ಕಿ ಬಸಿರಾಗುತ್ತಾಳೆ. ನವತಂತ್ರಿ ನರಸಯ್ಯ ತನ್ನ ಮಾಟಮಂತ್ರಾದಿಗಳ ಕ್ರಿಯೆಗೆ ಹಸುವಿನ ಕರುವನ್ನು ಬಲಿಕೊಡುತ್ತಾನೆ. ಶಿಷ್ಟ ಕಾವ್ಯ ಸಂದರ್ಭದಲ್ಲಿಯೂ ಜನಪದ ಜೀವನ ಎಷ್ಟು ಸಚಿತ್ರವಾಗಿ ಮೂಡಿವೆ ಎಂಬುದಕ್ಕೆ ಇಂತಹ ಹಲವಾರು ಬಲಿ ಪದ್ಧತಿಗಳು ನಿದರ್ಶನವಾಗಿವೆ.

## 5. ಮಾಂತ್ರಿಕ ವಿದ್ಯೆ

ಕಾವ್ಯದಲ್ಲಿ ಕಂಬಾರರು ಐಂದ್ರಜಾಲಿಕ ವಿದ್ಯೆಯ ಸ್ವರೂಪವನ್ನು ಚಿತ್ರಿಸಿದ್ದಾರೆ. ಇವು ಸಾಮಾನ್ಯವಾಗಿ ಕೆಡುಕಿನ ಮೂಲಗಳಾಗಿದ್ದು ಇದರ ಅಕರಾಳ ವಿಕರಾಳ ರೂಪಗಳು ಕಾವ್ಯದಲ್ಲಿ ಪ್ರಸ್ತಾಪಗೊಂಡಿವೆ. ಕ್ಷುದ್ರ ದೇವತೆಗಳ ಆರಾಧನೆಯ ಮೂಲಕ ಸಾಮಾನ್ಯವಾಗಿ ಇವುಗಳನ್ನು ಕರಗತಮಾಡಿಕೊಂಡಿರುತ್ತಾರೆ. ಅದರ ವಿಕೃತಿಗಳು ಗ್ರಾಮೀಣ ಜೀವನದಲ್ಲಿ ಹಾಸುಹೊಕ್ಕಾಗಿದ್ದು, ಕಾವ್ಯದಲ್ಲಿಯೂ ಅದರ ಉಗ್ರಸ್ವರೂಪ ಪ್ರದರ್ಶನಗೊಂಡಿದೆ. ಚಿನ್ನಮುತ್ತ ಮಹಾನುಭಾವನೊಂದಿಗೆ ಸೇರಿ ಚಂದಮುತ್ತನ ತಿಂಗಳರಾಗ ಆಲಾಪಕ್ಕೆ ಭಂಗ ತರುವ ಉದ್ದೇಶದಿಂದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನವತಂತ್ರಿ ನರಸಯ್ಯನ ಬಳಿಹೋಗಿ ತಂತ್ರ ಮಂತ್ರಾದಿಗಳಿಂದ ಹಸುವಿನ ಕರುವನ್ನು ಬಲಿಕೊಟ್ಟು ಚಂದಮುತ್ತನ ಗೊಂಬೆಮಾಡಿಸಿ, ಕೈಯಲ್ಲಿ ಕೊಳಲು, ತಲೆಯಲ್ಲಿ ನವಿಲುಗರಿ, ಹೆಗಲಿಗೆ ಕಂಬಳಿ, ಕರಿ ಕೂದಲು ಪೋಣಿಸಿದ ಸೂಜಿಯನ್ನು ಕತ್ತಿನಲ್ಲಿ ಚುಚ್ಚಿ ಮಲೆಯಾಳ ಮಾಟ ಮಾಡಿಸಿರುತ್ತಾರೆ. ಇಲ್ಲಿ ಕಂಬಾರರು ದೇಸೀ ಮಾಟದ ಪ್ರಯೋಗವನ್ನು ಬಳಸಿದ್ದಾರೆ. ಸ್ವಾರ್ಥಕ್ಕಾಗಿ ದುಷ್ಟ ಬುದ್ಧಿಯಿಂದ ಬಳಸುವ ಮಾಟ–ಮಂತ್ರದ ವಿಧಾನಗಳನ್ನು ಸಮಯೋಚಿತವಾಗಿ ವರ್ಣಿಸಿದ್ದಾರೆ. ಇಲ್ಲಿಯ ಮಾಂತ್ರಿಕ ವಿದ್ಯೆಯ ವಿವರಗಳು ಕಂಬಾರರ ದೇಶಿಪ್ರಜ್ಞೆಯಲ್ಲಿ ಜೀವತುಂಬಿ ಬೆಳೆದಿವೆ.

## 6. ಕನಸುಗಳ ವೈವಿಧ್ಯ

ಚಕೋರಿ ಕಾವ್ಯದಲ್ಲಿ ಕನಸುಗಳು ಕಾವ್ಯವನ್ನು ನಿರೂಪಿಸುತ್ತವೆ. ಕನಸುಗಳು ನಿರೂಪಕರಷ್ಟೇ ಅಲ್ಲ ಕತೆಯ ಪಾತ್ರವೂ ಹೌದು. ಕಾವ್ಯದ ಹಲವಾರು ಸನ್ನಿವೇಶಗಳಲ್ಲಿ ಕನಸುಗಳು ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತವೆ. ಇಲ್ಲಿ ಕನಸುಗಳು ಚಂದಮುತ್ತನ ಪ್ರೇಮವನ್ನು ನಿವೇದಿಸುವ ಜೀವಂತ ವಕ್ತೃಗಳಾಗಿವೆ. ಕಂಬಾರರು ತಮ್ಮ ಕಾವ್ಯದಲ್ಲಿ ಇಂತಹ ಕನಸುಗಳನ್ನು ಸಾಂದರ್ಭಿಕವಾಗಿ ದುಡಿಸಿಕೊಂಡಿರುವುದಲ್ಲದೆ, ಕಾವ್ಯದ ಬಹುದೊಡ್ಡ ಕಥನತಂತ್ರವಾಗಿ ಬಳಸಿದ್ದಾರೆ. ಇವು ಇನ್ನುಳಿದ ಕಾವ್ಯದಿಂದ ಬೇರ್ಪಡಿಸಿ ಸಮಕಾಲೀನ ಸಂದರ್ಭವನ್ನು ಹೆಚ್ಚಿಸಿವೆ. ಕನಸಿಗೂ ಹಾಗೂ ಯಕ್ಷಿಗೂ ಅಮೂರ್ತ ಸಂಬಂಧ ಇರುವುದರಿಂದ ಕಾವ್ಯದ ಈ ಕನಸುಗಳು ತಂತ್ರವಾಗಿ ಯಶಸ್ವಿಯಾಗಿವೆ.

ಚಕೋರಿ ಆರಂಭವಾಗುವುದೇ ಆದಿಮ ಕಾಲದಿಂದ ಉಳಿದು ಬಂದಿರುವ ಕನಸುಗಳಿಂದ, ಆದಿಮಾಯಿ ಪುಣ್ಯಕೋಟಿಯಾಗಿ ಜನ್ಮ ಪಡೆದಾಗ ಆ ಕರುವಿಗೆ ಆಗುವ ಕನಸಿನಿಂದ ಹೋರಿ ಮೂಡಿಬಂದು ಹಸಿರು ಧರ್ಮ ಹಬ್ಬಿಸಲು ಕಾರಣವಾದ ಪ್ರಸಂಗದಿಂದ ಮೊದಲುಗೊಂಡು, ಕಾವ್ಯದ ಮುಂದಿನ ಭಾಗಗಳಲ್ಲಿ ಅದು ಅನುಭಾವಿಕ ನೆಲೆಗಳಲ್ಲಿ ಪ್ರತೀತಗೊಂಡಿರುವುದನ್ನು ಕಾಣಬಹುದು. ಚಂದಮುತ್ತ ಯಕ್ಷಿಯ ಶಿಲಾಮೂರ್ತಿಯನ್ನು ವಿವಾಹವಾದ ದಿನ ಮಳೆಯಲ್ಲಿ ಮನೆಗೆ ವಾಪಾಸಾಗಿ ಒದ್ದೆ ಕಳಚದೆ, ಉಣ್ಣದೆ, ಜಗಲಿಯ ಮೇಲೆ ಮಲಗಿದ್ದು, ಜ್ವರದಿಂದ ತಲೆಸಿಡಿಯುತ್ತಿದ್ದಾಗ ಲಕ್ಕಬ್ಬೆ ಕಷಾಯ ತಂದು ಕುಡಿಸುತ್ತಾಳೆ. ಆಗ ಅವನು ಅಂಗಾತ ಮಲಗಿರುತ್ತಾನೆ ನೂರಾರು ಕನಸುಗಳು ಆ ಸಮಯದಲ್ಲಿ ಅವನನ್ನು ಮುತ್ತುತ್ತವೆ. ಮುಂದೆ ಕುಲಗುರುವಿಗೆ 'ರಾತ್ರಿ ಆಕಾಶಮಂಡಳದ ಉಲ್ಕೆಯೊಂದು ಉರಿದುರಿದು ಯಕ್ಷಿಯ ಗುಡಿಯ ಮ್ಯಾಲೆ ಉದುರಿದ' ಹಾಗೆ ಕನಸಾಗುತ್ತದೆ. ಇವೆಲ್ಲ ಚಂದಮುತ್ತ–ಯಕ್ಷಿ ವಿಷಯದಲ್ಲಿ ಮುಂದಾಗುವ ವಿಪತ್ತುಗಳ ಸಂಕೇತ ರೂಪಗಳಾಗಿವೆ. ಹೀಗೆ ಚಕೋರಿ ಕಾವ್ಯದುದ್ದಕ್ಕೂ ಕನಸುಗಳು ಕೆಲವು ಸಂದರ್ಭಗಳಲ್ಲಿ ಭಾವನೆಗಳನ್ನ ಬೆದಕಿದರೆ ಇನ್ನು ಉಳಿದ ಸಂದರ್ಭಗಳಲ್ಲಿ ಅನಾಹುತಗಳ ಮುನ್ಸೂಚಕದಂತಿವೆ. ಒಟ್ಟಾರೆ ಚಕೋರಿ ಕಾವ್ಯದಲ್ಲಿ ಕಂಡುಬರುವ ಕನಸುಗಳು ಲೌಕಿಕ–ಅಲೌಕಿಕಗಳನ್ನು ಬೆಸೆಯುವ ರೂಪಕಗಳಂತಿವೆ.

## 7. ಪಾರಂಪರಿಕ ಆಹಾರ ಪದ್ಧತಿಯ ಸೂಕ್ಷ್ಮತೆ

ಕಾವ್ಯದಲ್ಲಿ ವೈವಿಧ್ಯಮಯವಾದ ಹಾಗೂ ರುಚಿಕಟ್ಟಾದ ಆಹಾರಗಳ ಪ್ರಸ್ತಾಪವಿದೆ. ಪ್ರಾದೇಶಿಕ ಧಾನ್ಯಗಳ ಬಳಕೆಯಿಂದಾದ ಆಹಾರದ ವಿಧಾನಗಳು ಇಲ್ಲಿ ಕಾಣಿಸಿಕೊಂಡಿವೆ. ಲಕ್ಕಬ್ಬೆ ಚಂದಮುತ್ತನಿಗೆ ಬಾಳೆ ಎಲೆಹಾಕಿ ನೀರು ಚಿಮುಕಿಸಿ, ಮುದ್ದೆ, ಅನ್ನ, ಬಾಡು, ಪಲ್ಯ ಪದಾರ್ಥದ ಚಟ್ನಿ ಬಡಿಸಿ ತುತ್ತುಮಾಡಿ ಮಗನ ಬಾಯಿಗಿಟ್ಟು ಉಣಿಸುತ್ತಾಳೆ. ಮತ್ತೊಂದು ದಿನ ಹಾಲು, ಅನ್ನ, ಜೇನು, ಬೆಲ್ಲ ಪಾಲುಪಂಚಾಮೃತದ ಅಡಿಗೆಯ ನೀಡಿ ತುತ್ತಿಡುತ್ತಾಳೆ. ಹೀಗೆ ಕಾವ್ಯದಲ್ಲಿ ಚಿತ್ರಿತವಾಗಿರುವ ಪಾರಂಪರಿಕ ಆಹಾರ ಪದಾರ್ಥಗಳು ಅಲ್ಲಿಯ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಬಿಂಬಿಸಿವೆ.

ಹೀಗೆ ಜನಪದ ಜೀವನದಲ್ಲಿ ಇಂತಹ ನಂಬಿಕೆ, ಆಚರಣೆಗಳ ಪರಂಪರೆ ಬೆಳೆದುಬಂದಿದ್ದು ಕಾವ್ಯ ಅವುಗಳನ್ನು ಕೂಲಂಕುಷವಾಗಿ ವಿಶ್ಲೇಷಣೆಗೆ ಒಳಗು ಮಾಡುತ್ತಾ ಜಾನಪದ ಸಂವೇದನೆಯನ್ನು ಗರ್ಭೀಕರಿಸಿಕೊಂಡಿದೆ. ಗ್ರಾಮೀಣ ಅನುಭವಗಳು ಬೃಹತ್ ಪ್ರಮಾಣದಲ್ಲಿ ಕಾವ್ಯದಲ್ಲಿ ಗೋಚರಿಸಿದ್ದು ದಟ್ಟ ಜಾನಪದ ಅಂಶಗಳನ್ನು ಅಭಿವ್ಯಕ್ತಿಸುವ ಮೂಲಕ ವಿಭಿನ್ನ ವಿಶಿಷ್ಟ ಅನುಭವಲೋಕವೊಂದನ್ನು ತೆರೆದಿಟ್ಟಿದೆ. ಇದಲ್ಲದೆ ಕಂಬಾರರು ಕಾವ್ಯದಲ್ಲಿ ಅಲಂಕಾರಿಕ ನುಡಿಗಳ ಲಾಲಿತ್ಯ, ಕನ್ನಡ ದೇಸೀ ಪದಗಳ ಬೆಡಗು, ಅಚ್ಚಗನ್ನಡ ಪದಗಳು, ಅರ್ಥಗರ್ಭಿತ ದೃಷ್ಟಾಂತ, ಗ್ರಾಮ್ಯ ಪದ ಬಳಕೆ, ಉಪಮೆ, ರೂಪಕ, ಪಡೆನುಡಿ, ಗಾದೆ, ಒಗಟು ಎಲ್ಲವನ್ನು ಧಾರಾಳವಾಗಿ ಹೆಣೆದಿದ್ದಾರೆ. ಕಾವ್ಯದ ಪ್ರಾದೇಶಿಕ ನುಡಿಕೋಶ ಜೀವಂತಿಕೆಯಿಂದ ಪುಟಿದೇಳುವುದನ್ನು ನೋಡಬಹುದು. ಹೀಗೆ ಕಂಬಾರರು ಕಾವ್ಯದಲ್ಲಿ ಜನಪದ ಭಾಷಿಕ ಅಂತಃಸತ್ವವನ್ನು ಹಿಡಿದಿಟ್ಟಿದ್ದಾರೆ. ಇಂತಹ ವಿಭಿನ್ನ ಗುಣಗಳಿಂದ ಚಕೋರಿ ವಿಶಿಷ್ಟ ಕಾವ್ಯ ಎನಿಸಿದ್ದು, ದೇಸೀನೆಲೆಗಳ ಜೀವಂತಿಕೆ ಕಾವ್ಯದ ಜೀವಾಳವೆನಿಸಿದೆ. ಇಲ್ಲಿಯ ಜೀವನಾನುಭವ, ನಂಬಿಕೆ, ಆಚರಣೆ, ಮಾಟ–ಮಂತ್ರ, ಕನಸು–ಕಲ್ಪನೆ, ತಂತ್ರ, ಭಾಷಿಕ ನೆಲೆಗಳು ಓದುಗನನ್ನು ಮತ್ತೆ ಮತ್ತೆ ಕಾಡುತ್ತವೆ. ಇವಲ್ಲದೆ ಆದಿಮ ಜನಾಂಗದ ಕೃಷಿ ಬದುಕು, ಕೌಟುಂಬಿಕತೆ, ವಿದ್ಯೆ, ಕಲೆ, ಸಾಂಸ್ಕೃತಿಕ ಹಾಗೂ ರಾಜಕೀಯ ತೊಳಲಾಟಗಳು ಚಕೋರಿಯಲ್ಲಿ ಅಗ್ರಸ್ಥಾನ ಪಡೆದಿವೆ.

ಹೀಗೆ ಕಂಬಾರರ ಜನಪದ ಕಾವ್ಯ ಪರಂಪರೆಯ ಅಭಿವೃದ್ಧಿ ಹಾಗೂ ಮುಂದುವರಿಕೆಗೆ 'ಚಕೋರಿ' ಸಾಕ್ಷಿಯಾಗಿದೆ. ಕೃತಿ ಪ್ರತಿಯೊಂದು ಸೃಜನಶೀಲ ಹಾಗೂ ಜನಪದ ಮನೋಧರ್ಮಕ್ಕೆ ಸೀಮಿತವಾದ ಹಳೆಯ ಪುರಾಣಗಳನ್ನು ಕಟ್ಟಿಕೊಟ್ಟಿದೆ. ಹಲವು ತಲೆಮಾರುಗಳ ಸ್ಮೃತಿಗಳ ಸುಳಿವು ನಮಗೆ ಇಲ್ಲಿ ದೊರೆಯುತ್ತದೆ. ಹೀಗಾಗಿ ಜನಪದ ಪುರಾಣಗಳ ಲಕ್ಷಣಗಳನ್ನುಳ್ಳ ಚಕೋರಿ ಮಹಾಕಾವ್ಯ ನವೀನ ಪುರಾಣ ಕೃತಿಯಾಗಿ ಕಂಗೊಳಿಸಿದೆ ಅಲ್ಲದೆ ಸಾಹಿತ್ಯಲೋಕದ ಅಪರೂಪದ ಕೃತಿಯಾಗಿದೆ. ಪರಂಪರೆಯ ಭವ್ಯತೆ ಮತ್ತು ಉಜ್ವಲತೆಯನ್ನು ಎತ್ತಿಹಿಡಿಯುತ್ತಾ ವಿಚಾರ ತರ್ಕಗಳನ್ನು ಮೀರಿದ ನಿತ್ಯ ಸತ್ಯಗಳ ಹೆಣಗಾಟದಲ್ಲಿ ತೊಡಗಿದ ಚಕೋರಿ ಕನ್ನಡ ಕಾವ್ಯಕುಸುರಿಯಲ್ಲಿ ಅವತರಿಸಿದ ಕಲಾವೈಭವ.

## ಕೊನೆಟಿಪ್ಪಣಿ

1. ಎಚ್.ಎಸ್.ಶಿವಪ್ರಕಾಶ್, ಚಕೋರಿ, ಮೊದಲ ಮಾತು, ಪು.7, 2011.
2. ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ, ಪ್ರೊ.ಎಚ್.ಎಂ.ಚೆನ್ನಯ್ಯ (ಸಂ) ಸಾಲುದೀಪಗಳು (ಲೇಖನ : ಡಾ.ಚಂದ್ರಶೇಖರ ಕಂಬಾರ–ಕೆ.ಸಿ.ಶಿವಾರೆಡ್ಡಿ) ಪು.681, 2016.
3. ಚಂದ್ರಶೇಖರ ಕಂಬಾರ, ಚಕೋರಿ ಪು. 21, 2011.
4. ಚಂದ್ರಶೇಖರ ಕಂಬಾರ, ಚಕೋರಿ ಪು. 106, 2011.

## ಪರಾಮರ್ಶನ ಗ್ರಂಥಗಳು


- **ಬಸವರಾಜ ಕಲ್ಗುಡಿ (ಸಂ) :** ಕಂಬಾರರ ಸಾಹಿತ್ಯದ ನೆಲೆ ಬೆಲೆ
- **ಡಿ. ನಾಗಣ್ಣ :** ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಚಂದ್ರಶೇಖರ ಕಂಬಾರ
- **ಜಿ. ಎಸ್. ಸಿದ್ಧಲಿಂಗಯ್ಯ, ಎಚ್. ಎಂ. ಚೆನ್ನಯ್ಯ (ಸಂ) :** ಸಾಲುದೀಪಗಳು
- **ಸಿ. ಬಿ. ಹೊನ್ನು ಸಿದ್ಧಾರ್ಥ (ಸಂ) :** ಚಂದ್ರಶೇಖರ ಕಂಬಾರರ ಸಾಹಿತ್ಯ: ಅವಲೋಕನ
- **ವೀರೇಶ ಬಡಿಗೇರ :** ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಧರ್ಮ, ಪುರೋಹಿತಶಾಹಿ ಮತ್ತು ಪ್ರಭುತ್ವ

✍ **ಚನ್ನಬಸವ,** ಸಹಾಯಕ ಪಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮಾನವಿ. ತಾ. ಮಾನವಿ. ಜಿ. ರಾಯಚೂರು.

ಭಾರತದ ಸಂದರ್ಭದಲ್ಲಿ ಧರ್ಮ, ಪುರೋಹಿತಶಾಹಿ, ವರ್ಣಾಶ್ರಮ ವ್ಯವಸ್ಥೆ, ಜಾತಿ ಮತ್ತು ಅಧಿಕಾರ ಇವುಗಳ ನಡುವೆ ಒಂದಕ್ಕೊಂದು ಸಂಬಂಧವಿದೆ. ಇವುಗಳ ನಡುವಿನ ಅಂತರ್ ಸಂಬಂಧವನ್ನು ಕುರಿತು ಅಂಬೇಡ್ಕರ್ ಅವರ ಗ್ರಹಿಕೆ ಹೀಗಿದೆ: "ಅಸ್ಪೃಶ್ಯತೆಯ ಬೇರು ಜಾತಿ ವ್ಯವಸ್ಥೆಯಲ್ಲಿದೆ. ಜಾತಿ ವ್ಯವಸ್ಥೆಯ ಬೇರು ಧರ್ಮಾವಲಂಬಿಯಾದ ವರ್ಣಾಶ್ರಮದಲ್ಲಿದೆ. ವರ್ಣಾಶ್ರಮದ ಬೇರು ಬ್ರಾಹ್ಮಣ ಧರ್ಮದಲ್ಲಿದೆ ಮತ್ತು ಬ್ರಾಹ್ಮಣ ಧರ್ಮದ ಬೇರು ಅಧಿಕಾರ ಅಥವಾ ರಾಜಕೀಯ ಶಕ್ತಿಯಲ್ಲಿದೆ." ರಾಜಪ್ರಭುತ್ವದ ಸಂದರ್ಭದಲ್ಲಿ ಮತಧರ್ಮಗಳು, ಪುರಾಣ ಪ್ರತೀಕಗಳು, ದೇವತೆಗಳು, ಪೂಜಾವಿಧಿಗಳು ಗಳಿಸಿದ ಯಜಮಾನಿಕೆ ಮತ್ತು ಅಧಿಕಾರ, ಸಮುದಾಯದ ಶ್ರದ್ಧೆಗಳನ್ನು ಆಳುವ ವ್ಯವಸ್ಥೆಯಾಗಿ ಬೆಳೆಯುತ್ತಾ ಬಂದಿವೆ. ಅಲ್ಲದೆ ಸಮುದಾಯದ ಬಹುಮುಖಿ ವಿಧಾನಗಳನ್ನು ನಿಯಂತ್ರಿಸುತ್ತ ಮತ್ತು ಅಧಿಕಾರದ ಪ್ರತೀಕಗಳಾಗಿಯೂ ಪ್ರಾಪಂಚಿಕ ಭಕ್ತರಲ್ಲಿ ಮಹತ್ವ ಪಡೆದವು.

ಈ ರೀತಿ ಶ್ರದ್ಧೆ, ಭಕ್ತಿ, ಮುಂತಾದವು ಧಾರ್ಮಿಕ ಮೌಲ್ಯಗಳಾಗಿಯೇ ಜನರನ್ನು ಆಳುವ ಶಕ್ತಿಯಾಗಿ ತಮ್ಮ ಅಧಿಕಾರ ವಿಸ್ತರಣೆ ಮತ್ತು ಉಳಿವಿಗಾಗಿ ದೇವಸ್ಥಾನ, ಮಠಗಳಂಥ ಅಧಿಕಾರ ಕೇಂದ್ರಗಳನ್ನು ಸ್ಥಾಪಿಸಿಕೊಂಡವು. ಇದು ಮಧ್ಯಕಾಲೀನ ಯುಗದ ಅಧಿಕಾರ ನಿರ್ಮಾಣದ, ಸಾಂಸ್ಕೃತಿಕ ಯಜಮಾನಿಕೆಯ ಒಂದು ಮುಖವಾಗಿದೆ. 'ಧರ್ಮ'ದ ಅರ್ಥ ವ್ಯಾಪಕವಾಗಿದ್ದು, ಅದು ಸಮೂಹಗಳ ಆಚಾರಗಳ ಜೊತೆಗೆ, ಅವುಗಳನ್ನೆಲ್ಲಾ ಆವರಿಸಿ ಹಿಡಿದಿಟ್ಟುಕೊಳ್ಳಬಲ್ಲ ಒಂದು ನೈತಿಕ ಕಲ್ಪನೆಯಾಗಿದೆ. ಇದು ವಿಶ್ವವನ್ನು ಆಳುವ ನಿಯಮವಾಗಿ ಒಂದೆಡೆ ಅರ್ಥಗಳಿಸಿಕೊಂಡರೆ, ಮತ್ತೊಂದೆಡೆ ಒಬ್ಬ ನಿರ್ದಿಷ್ಟ ವ್ಯಕ್ತಿಯ ಅಥವಾ ಸಮೂಹದ, ಸಂದರ್ಭದ ಆಚರಣೆಗೆ ಸಂಬಂಧಿಸಿದ ನೈತಿಕ ತಿಳುವಳಿಕೆಯೂ ಆಗಿದೆ. ಅಲ್ಲದೆ ನಿರ್ದಿಷ್ಟ ಅರ್ಥದಲ್ಲಿ

ರಾಜಧರ್ಮ, ಜಾತಿಧರ್ಮ, ವ್ಯಕ್ತಿಧರ್ಮ ಮುಂತಾದ ನಿರ್ದಿಷ್ಟ ಆಚಾರ ಭೇದಗಳನ್ನು ಇದು ಸೂಚಿಸುತ್ತದೆ. ಈ ಹಿನ್ನಲೆಯಲ್ಲಿ ರಾಜಪ್ರಭುತ್ವದ ಬೇರೆ ಬೇರೆ ಕಾಲದಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ವೈವಿಧ್ಯಪೂರ್ಣವಾದ ಬಹುಸಂಖ್ಯೆಯ ಧಾರ್ಮಿಕ ಸಂಪ್ರದಾಯಗಳು ಪೈಪೋಟಿ ನೆಡೆಸುತ್ತಾ ಅಸ್ತಿತ್ವದಲ್ಲಿ ಹೇಗೆ ಇದ್ದವೆಂಬುದನ್ನು ನೋಡಬಹುದಾಗಿದೆ. 'ಪ್ರಭುತ್ವ'ವೆಂದರೆ ರಾಜಪ್ರಭುತ್ವ ಮತ್ತು ಪುರೋಹಿತಶಾಹಿಪ್ರಭುತ್ವ– ಇವೆರಡು ಪ್ರತಿಷ್ಠಿತ ಶಕ್ತಿಗಳ ಮೇಳ. ಒಂದು ಮೂರ್ತ ರೂಪದ ತೋಳ್ಬಲವನ್ನು, ಮತ್ತೊಂದು, ಅಮೂರ್ತರೂಪದ ಬುದ್ಧಿಬಲವನ್ನು ಸಂಕೇತಿಸುತ್ತದೆ. ಇವು ಪರಸ್ಪರ ಒಂದನ್ನೊಂದು ಆಶ್ರಯಿಸಿ ಬಹುಸಂಖ್ಯಾತ ಜನಸಮುದಾಯಗಳನ್ನು ತನ್ನ ಅಂಕೆಯಲ್ಲಿ, ಹಿಡಿತದಲ್ಲಿ ಇರಿಸಿಕೊಳ್ಳಲು ನಡೆಸಿದ ಕುಯುಕ್ತಿಯನ್ನು ಚರಿತ್ರೆಯುದ್ದಕ್ಕೂ ಕಾಣಬಹುದು. "ಪ್ರಭುತ್ವದ ವ್ಯಾಪ್ತಿಯಲ್ಲಿ ರಾಜಪ್ರಭುತ್ವವನ್ನು ಮಾತ್ರ ಗಮನಿಸಿ ಪುರೋಹಿತಶಾಹಿಯನ್ನು ಗಮನಿಸದಿದ್ದರೆ ಬೇರುಗಳನ್ನು ನಿರ್ಲಕ್ಷಿಸಿ ಬೊಡ್ಡೆಯನ್ನು ಮಾತ್ರ ವ್ಯಾಖ್ಯಾನ ಮಾಡಿದಂತಾಗುತ್ತದೆ" ಎಂದು ಪ್ರೊ. ಚಂದ್ರಶೇಖರ ನಂಗಲಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂದರೆ ಕ್ಷಾತ್ರ ಮತ್ತು ಬುದ್ಧಿ ಬಲಗಳ ಮೈತ್ರಿಯಿಂದ ಹುಟ್ಟಿ ಬೆಳೆಯುವ, ವಿಸ್ತರಿಸುವ ಪುರೋಹಿತಶಾಹಿ ಯಾಜಮಾನ್ಯದ ಧಾರ್ಮಿಕ ನೆಲೆಯನ್ನು ಗುರುತಿಸಿಕೊಳ್ಳಬೇಕಾಗಿದೆ. ಜನಸಮುದಾಯದ ಮೇಲೆ ಆದ ಪ್ರಭುತ್ವದ ಪರಿಣಾಮ ಮುಖ್ಯವಾಗಿ ಎರಡು ರೀತಿಯದು. ಒಂದು: ಮತ–ಧರ್ಮದ ಹೆಸರಿನಲ್ಲಿ ಎರಡು: ರಾಜಸತ್ತೆಯ ಹೆಸರಿನಲ್ಲಿ. ಹೀಗೆ ಪ್ರಭುತ್ವ ಅನೇಕ ಬಗೆಯ ದಬ್ಬಾಳಿಕೆಗಳನ್ನು ನಡೆಸಿದೆ. ಆರ್ಥಿಕ ಅಸಮಾನತೆಯನ್ನು ಪ್ರತಿಪಾದಿಸುವ ರಾಜಸತ್ತೆಯ ಪ್ರಭುತ್ವದಿಂದ ಕೇಡುಂಟಾಗಿದ್ದರೆ, ಮತ–ಧರ್ಮಗಳನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಂಡು ಚಾತುರ್ವರ್ಣ ಪದ್ಧತಿಯನ್ನು ಬಳಕೆಗೆ ತಂದ ಸನಾತನಿಗಳಿಂದ ಸಾಮಾಜಿಕ–ಸಾಂಸ್ಕೃತಿಕ ಅಸಮಾನತೆ ಹುಟ್ಟಿತು. ರಾಜಸತ್ತೆಯ ಪ್ರಭುತ್ವಕ್ಕಿಂತ, ಮತ–ಧರ್ಮಸತ್ತೆಯ ಮೂಲಕ ಉಂಟಾದ ಪ್ರಭುತ್ವ ಹೆಚ್ಚು ಅಪಾಯಕಾರಿಯಾಗಿ ಕಂಡುಬಂದಿತು. ರಾಜ ಸತ್ತ ನಂತರ, ರಾಜಸತ್ತೆ ಹೋದ ನಂತರ ರಾಜ ಪ್ರಭುತ್ವ ದುರ್ಬಲಗೊಳ್ಳಬಹುದು. ಆದರೆ, ಮತ–ಧರ್ಮದ ಮೂಲಕ ಈ ದೇಶದ ಪುರೋಹಿತಶಾಹಿ ಸಂಪ್ರದಾಯವಾದಿಗಳು ಶತಶತಮಾನಗಳಿಂದ ನಡೆಸಿರುವ ಯಜಮಾನಿಕೆ ತುಂಬಾ ಆತಂಕಕಾರಿಯಾದುದಾಗಿದೆ.

ಅನೇಕ ಸಲ ರಾಜಪ್ರಭುತ್ವ ಮತ್ತು ಮತ–ಧರ್ಮಪ್ರಭುತ್ವಗಳೆರಡೂ ಒಂದರೊಳಗೊಂದು ಮೇಳವಿಸಿಕೊಂಡು, ಅಥವಾ ಪರಸ್ಪರ ಅವಲಂಬಿಸಿಕೊಂಡು ಜೊತೆಜೊತೆಯಾಗಿ ಸಮುದಾಯವನ್ನು ಶೋಷಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಧರ್ಮಗುರುಗಳು, ಪಂಡಿತರು, ಮಠಾಧಿಪತಿಗಳು ಹಾಕಿದ ನಿಯಮಗಳೇ ರಾಜನ ಮೂಲಕ ರಾಜಾಜ್ಞೆಗಳಾಗಿ ರೂಪಿತಗೊಂಡಿರುವುದನ್ನು ಇತಿಹಾಸದುದ್ದಕ್ಕೂ ನೋಡಬಹುದಾಗಿದೆ. ಅಂತೆಯೇ ಮಧ್ಯಯುಗದ ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರಂಥ ವಚನಕಾರರು ರಾಜಪ್ರಭುತ್ವದಲ್ಲಿದ್ದುಕೊಂಡೇ ಅದನ್ನು ಪ್ರಶ್ನಿಸಿ, ಮತ–ಧರ್ಮಗಳ ಮೂಲಕ ನಡೆಯುತ್ತಿದ್ದ ಪ್ರಭುತ್ವದ ಯಜಮಾನಿಕೆಯ ವಿರುದ್ಧ ಪ್ರತಿಭಟನೆ ಅಥವಾ ಕ್ರಾಂತಿ ನಡೆಸಿದುದರ ಉದಾಹರಣೆ ಸಿಗುತ್ತದೆ. ಅಂದರೆ, ರಾಜಪ್ರಭುತ್ವದ ಸಂದರ್ಭದಲ್ಲಿ ಧರ್ಮ ಎನ್ನುವುದು ಪ್ರತ್ಯೇಕವಾಗಿರದೆ, ಪ್ರಭುತ್ವದ ಸಂಗಾತಿಯೂ ಆಗಿದೆ ಹಾಗೂ ಪ್ರಭುತ್ವಕ್ಕೆ ಮಾನ್ಯತೆಯನ್ನು ಸೃಷ್ಟಿಸುತ್ತದೆ. ಈ ಅರ್ಥದಲ್ಲಿ ರಾಜಪ್ರಭುತ್ವದ ಸಂದರ್ಭದಲ್ಲಿ ಧರ್ಮರಹಿತವಾದ ಶುದ್ಧ 'ಲೌಕಿಕ' ಪ್ರಪಂಚ ಸಾಧ್ಯವೇ ಇಲ್ಲವೆಂಬುದು ತಿಳಿಯುತ್ತದೆ.

ಅಲೌಕಿಕ ಸತ್ವವಾಗಿ ಧರ್ಮವು ರಾಜಪ್ರಭುತ್ವದಲ್ಲಿ ಇರುತ್ತದೆ ಎಂದೇ ಎಲ್ಲ ಪ್ರಬಲ ಸಂಪ್ರದಾಯಗಳೂ ಪ್ರತಿಪಾದಿಸಿಕೊಂಡು ಬಂದಿವೆ. ಆಧ್ಯಾತ್ಮಿಕ ಮಾರ್ಗಗಳೂ ಆಗಿದ್ದ ಧರ್ಮ–ದೇವರುಗಳು ಅನೇಕ ಬಗೆಯ ನಿಯಂತ್ರಣದ ಮಾಧ್ಯಮಗಳೂ ಆಗಿದ್ದವು. ರಾಜಪ್ರಭುತ್ವ ಒಂದು ಸಮಾಜದ ಕೇಂದ್ರವಾಗಿ ಬಂದ ಮೇಲೆ ರಾಜನ ರಕ್ಷಣೆಗಾಗಿ ಧರ್ಮ–ದೇವರುಗಳು ಹುಟ್ಟಿಕೊಂಡವು. ಈ ಧರ್ಮಗಳ ನಿರ್ವಾಹಕರು ಅವುಗಳನ್ನು ರಾಜಪ್ರಭುತ್ವಕ್ಕೆ ಸಹಾಯಕ ನೆಲೆಗಳಾಗಿ ಸೃಷ್ಟಿಸುತ್ತಾ ಧರ್ಮವನ್ನು ತಮ್ಮ ಜೀವನಾಧಾರ ಮಾಡಿಕೊಂಡರು. ಬರುಬರುತ್ತಾ ರಾಜನಿಗೆ ಪರ್ಯಾಯವೆಂಬಷ್ಟರ ಮಟ್ಟಿನ ಶಕ್ತಿಯಾಗಿ ಧರ್ಮ–ದೇವರನ್ನು ದೃಢೀಕರಿಸಿದರು. ಧರ್ಮ–ದೇವರುಗಳು ರಾಜನನ್ನು ಕಿತ್ತು ಹಾಕುವ ಅಥವಾ ನಿಯಮಿಸುವ ಹಕ್ಕುದಾರಿಕೆಯನ್ನೂ ಸ್ಥಾಪಿಸಿದರು. ನಂತರ ಸಹಜವಾಗಿಯೇ ದೈವಭಕ್ತನಾದ ರಾಜನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಭೂದೈವಗಳಿಗೆ ಮಣಿದು ಎರಡನೇ ಸ್ಥಾನಕ್ಕೆ ಬರಬೇಕಾಯಿತು. ಉದಾಹರಣೆಗೆ, ಕನ್ನಡ ವೀರಯುಗದಲ್ಲಿ ರಾಜನೇ ಪ್ರತ್ಯಕ್ಷ ದೈವ ಎಂಬ ನಂಬಿಕೆ ಪ್ರಬಲವಾಗಿತ್ತು. ಅನಂತರ ಮಧ್ಯಯುಗದಲ್ಲಿ ರಾಜ ಮತ್ತು ಸೇವಕ ಎಂಬ ಭಾವನೆ ಹೋಗಿ ಭಕ್ತಿ ಪಂಥದಲ್ಲಿ ಭಗವಂತ ಮತ್ತು ಭಕ್ತ ಎಂಬ ಭಾವನೆ ಉಂಟಾಯಿತು.

ರಾಜನ ಸ್ಥಾನದಲ್ಲಿ ದೇವರ ಪ್ರಭುತ್ವ ಸ್ಥಾಪನೆಯಾಯಿತು. ಭಾರತದ ಸಂದರ್ಭದಲ್ಲಿ ಪ್ರಭುತ್ವವನ್ನು ರಚಿಸುವ ಹಾಗೂ ಅದನ್ನು ಮಾನ್ಯ ಮಾಡುವ ವಿಧಿಗಳನ್ನು ಬಹಳ ಹಿಂದಿನಿಂದಲೂ ಪುರೋಹಿತಶಾಹಿ ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿದೆ. ಪುರೋಹಿತಶಾಹಿ ಸಂಪ್ರದಾಯವು ಬಹಳ ಶಕ್ತಿಯುತವಾದ ಒಂದು

ಅಧಿಕಾರ ಸಂಸ್ಥೆಯಾಗಿ ಬೆಳೆದುಕೊಂಡು ಬಂದಿದೆ. ಬ್ರಾಹ್ಮಣನು ಒಂದು ಪ್ರಾಪಂಚಿಕ ವ್ಯವಸ್ಥೆಯನ್ನು ಗಟ್ಟಿ ಮಾಡುವವನಾಗಿದ್ದು, ರಾಜಪ್ರಭುತ್ವದ ಮಾನ್ಯತೆಗೆ, ನಿರ್ವಹಣೆಗೆ ಬೇಕಾದ ಮತ್ತೊಂದು ಶಕ್ತಿಯಾಗಿದ್ದ ಪುರೋಹಿತನು ತನ್ನ ವರ್ಗದಲ್ಲಿ ಮತ್ತು ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಶಕ್ತಿ-ಪ್ರಭಾವಗಳ ಯಜಮಾನನಾಗಿದ್ದನು. ರಾಜ್ಯದ ಹಿತವನ್ನು ಬಯಸುವ ಪುರೋಹಿತನು ರಾಜನ ಆಪ್ತರಂಗದಲ್ಲಿ ಅನಿವಾರ್ಯ ಅಂಗವಾಗಿ ಪರಿಗಣಿತನಾಗಿದ್ದನು. ನಂತರದ ಕಾಲದಲ್ಲಿ ರಾಜರ ಕ್ರೌರ್ಯ ಅಥವಾ ಅಧಿಕಾರ ಕೇಂದ್ರೀಕರಣದ ಪರಿಣಾಮವಾಗಿ ಪುರೋಹಿತನ ಸ್ಥಾನಮಾನಗಳಿಗೆ ಊನ ಉಂಟಾಯಿತು. ಈ ಕಾರಣದಿಂದ ಬ್ರಾಹ್ಮಣರ, ಮುಖ್ಯವಾಗಿ ರಾಜಪುರೋಹಿತರ ಪ್ರಭಾವವು ಕ್ರಮೇಣ ರಾಜರ ಶಕ್ತಿ-ಭಕ್ತಿಗಳಿಗೆ ತಕ್ಕಂತೆ ಇರುತ್ತಿತ್ತೆಂದು ಊಹಿಸಬಹುದಾಗಿದೆ. ಬೌದ್ಧ ಯುಗದಲ್ಲಿ ರಾಜನ ಸ್ಥಾನಮಾನ, ಅಧಿಕಾರ, ಕರ್ತವ್ಯಗಳು ಬಹಳ ವಿಸ್ತೃತಗೊಂಡು ನಿರ್ದಿಷ್ಟ ಸ್ವರೂಪವನ್ನು ತಳೆದವು. ರಾಜರ ವಿಶೇಷಾಧಿಕಾರಗಳು, ಧರ್ಮಶಾಸ್ತ್ರ ಅಥವಾ ಪ್ರಾಚೀನ ಸ್ಮೃತಿಗಳು ಹಾಗೂ ಸಾಮಾಜಿಕ ಪರಂಪರೆಗೆ ಅನುಸಾರವಾಗಿ ಗೊತ್ತುಪಡಿಸಲ್ಪಟ್ಟಿದ್ದವು.

ಆದರೆ ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ, ಇವೆಲ್ಲವೂ ರಾಜನ ಅಧಿಕಾರ, ಘನತೆ, ಆಸ್ತಿಗಳ ಸಂರಕ್ಷಣೆಗಾಗಿ ರಾಜನು ಪಾಲಿಸಬೇಕಾದ ಕರ್ತವ್ಯಗಳೆಂದು ವ್ಯಾಖ್ಯಾನಿಸಿದನು. ಧರ್ಮಸೂತ್ರಗಳೂ ಇದನ್ನೇ ಸಾರಿದವು. ಐತ್ತರೇಯ ಬ್ರಾಹ್ಮಣದಲ್ಲಿ, ಮಹಾಭಿಷೇಕದ ಸಂದರ್ಭದಲ್ಲಿ ಪುರೋಹಿತನು ದೊರೆಯಿಂದ ಈ ರೀತಿಯಾದ ಪ್ರತಿಜ್ಞೆಯನ್ನು ಪಡೆಯುತ್ತಿದ್ದನೆಂದು ಹೇಳಿದೆ: "ನಾನು ನಿಮ್ಮನ್ನು ಪೀಡಿಸಿದ್ದೇ ಆದರೆ, ನನ್ನ ಜನ್ಮದ ರಾತ್ರಿಯಿಂದ ನನ್ನ ಮರಣದ ರಾತ್ರಿಯವರೆಗೆ ನಾನು ಮಾಡಿರಬಹುದಾದ ಯಾವ ಪುಣ್ಯವು ನನಗೆ ಲಭಿಸದೆ ಹೋಗಲಿ; ನನ್ನ ಸಂತಾನ, ನನ್ನ ಜೀವ ಮತ್ತು ನನಗೆ ಸ್ವರ್ಗ ನಷ್ಟವಾಗಲಿ" ಎಂದು ಪ್ರಮಾಣ ಮಾಡಿಸಿಕೊಳ್ಳುತ್ತಿದ್ದ ಉದಾಹರಣೆಗಳು ಸಿಗುತ್ತವೆ. ಕುಮಾರವ್ಯಾಸ ಭಾರತದ 'ಉದ್ಯೋಗ ಪರ್ವ'ದಲ್ಲಿ ದುರ್ಯೋಧನನ ಒಡ್ಡೋಲಗ ರಚನೆಯ ವರ್ಣನೆಯಲ್ಲಿ ಪ್ರಭುತ್ವಶಕ್ತಿ ಮತ್ತು ಪುರೋಹಿತಶಾಹಿ ವ್ಯವಸ್ಥೆಗಳೆರಡೂ ಪ್ರಭುತ್ವದ ಸಾಧನ ಸಲಕರಣೆಗಳಂತೆ ಕಾಣುತ್ತವೆ. ಎಂಬುದನ್ನು ಪ್ರೊ. ಕಿ.ರಂ. ನಾಗರಾಜ ಅವರು ಸಂವಾದಗೋಷ್ಠಿಯೊಂದರಲ್ಲಿ ವಿಶ್ಲೇಷಿಸಿರುವುದನ್ನು ಪ್ರೊ. ವಿ. ಚಂದ್ರಶೇಖರ ನಂಗಲಿಯವರು ಉಲ್ಲೇಖಿಸಿದ್ದಾರೆ. ರಾಜಪ್ರಭುತ್ವದಲ್ಲಿ ರಾಜ-ಮಂತ್ರಿ-ಅಧಿಕಾರವರ್ಗಗಳು ಪ್ರಮುಖ ಪಾತ್ರ ವಹಿಸಿದರೆ, ಪುರೋಹಿತಶಾಹಿ ಪ್ರಭುತ್ವದಲ್ಲಿ ಅಂದಂದಿನ ಕಾಲದ ಧರ್ಮ-ಧರ್ಮಗುರುಗಳು ಬುದ್ಧಿಜೀವಿಗಳು-ಮಧ್ಯಮವರ್ಗ-ಅಧಿಕಾರಿವರ್ಗ ಮುಂತಾದ ವ್ಯವಸ್ಥೆ ಪ್ರಧಾನ ಪಾತ್ರ ವಹಿಸುವುದನ್ನು ಗುರುತಿಸಬಹುದಾಗಿದೆ.

ಹನ್ನೆರಡನೆಯ ಶತಮಾನದ ಬಿಜ್ಜಳನ ಆಳ್ವಿಕೆಯಲ್ಲಿ ಪ್ರಭುತ್ವವು ತನ್ನ ಅಲೌಕಿಕ ಶಕ್ತಿಗಾಗಿ ಬ್ರಾಹ್ಮಣ ಮತ್ತು ಶರಣ ಈ ಎರಡು ವರ್ಗಗಳನ್ನು ಅವಲಂಬಿಸಿತ್ತು. ಈ ಎರಡು ವರ್ಗಗಳು ರಾಜಕೀಯ ಮತ್ತು ಸಾಮಾಜಿಕವಾಗಿ ಅಧಿಕಾರದ ನಿರ್ಮಾಣದಲ್ಲಿ, ವ್ಯವಸ್ಥೆಯನ್ನು ಭದ್ರಗೊಳಿಸುವಲ್ಲಿ ಹಾಗೂ ಅದನ್ನು ಮುರಿಯುವ ನಿರ್ಣಾಯಕ ಶಕ್ತಿಗಳಾಗಿ ಬೆಳೆದಿದ್ದವು. ರಾಜಪ್ರಭುತ್ವದುದ್ದಕ್ಕೂ ರಾಜನಿಗೆ ಆತನ ಲೌಕಿಕ ಅಧಿಕಾರವನ್ನು ನಿಭಾಯಿಸುವಲ್ಲಿ ಹಾಗೂ ಪಲ್ಲಟಗೊಳಿಸುವಲ್ಲಿ ವೈದಿಕ ಕೇಂದ್ರಗಳು ಅನಿವಾರ್ಯ ಅಂಗಗಳಾಗಿದ್ದವು ಎಂಬುದನ್ನು 'ಸಂಕ್ರಾಂತಿ', 'ತಲೆದಂಡ', ಮತ್ತು 'ಮಹಾಚೈತ್ರ' ನಾಟಕಗಳು ಧ್ವನಿಸುತ್ತವೆ. ಈ ಕುರಿತು ಮುಂಬರುವ ಅಧ್ಯಾಯವೊಂದರಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ವರ್ಣಧರ್ಮವು ಒಂದು ಸಮಾಜದ ಶ್ರೇಣೀಕರಣದ ಸಾಧನವಾಗಿ ರಾಜಪ್ರಭುತ್ವದ ನಿರ್ಮಾಣಶಕ್ತಿಯಾಗಿ ಹಾಗೂ ಅಧಿಕಾರ ಸೂತ್ರವನ್ನು ಹಿಡಿದಿರುವ ರಾಜನನ್ನು ಅತಿಮಾನುಷ ಶಕ್ತಿಯಾಗಿ ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿತ್ತು. ಇದು ನಾಯಕವೀರರನ್ನು ದೈವತ್ವಕ್ಕೇರಿಸುವುದು, ಮನುಷ್ಯನಿಗೆ ಮಾತ್ರ ದೇವರ ಪಟ್ಟ ಕಟ್ಟುವುದು, ಶಿಲೆಗೋ, ಲೋಹಕ್ಕೋ, ದೈವಿಕ ಶಕ್ತಿಯನ್ನು ಆರೋಪಿಸುತ್ತಾ ಮತ್ತು ಇಂಥ ಯಾವುದಾದರೂ ಬಗೆಯಲ್ಲಿ ದೇವರನ್ನು ನಿರ್ಮಿಸುತ್ತಾ ಹಣ ಗಳಿಸುವ ಹುನ್ನಾರವೂ ಆಗಿತ್ತು.

ರಾಜಪ್ರಭುತ್ವ ಅಥವಾ ರಾಜಮನೆತನಗಳು ಸಹ ವೈದಿಕರಿಗೆ ರಾಜ್ಯದ ಮೂಲೆಮೂಲೆಗಳಲ್ಲಿ ನೆಲೆ ನಿಲ್ಲಿಸುತ್ತಿದ್ದವು. ಈ ರೀತಿ ವೈದಿಕತನವನ್ನು ಪೋಷಿಸುವ, ನೆಲೆನಿಲ್ಲಿಸುವ ಕೆಲಸವನ್ನು ತಮ್ಮ ರಾಜ್ಯನಿರ್ಮಾಣ ಹಾಗೂ ಸ್ಥಿರೀಕರಣಕ್ಕೆ ಅನಿವಾರ್ಯ ಎಂಬುದನ್ನು ರಾಜಪ್ರಭುತ್ವಗಳು ಅರಿತುಕೊಂಡಂತೆ ತೋರುತ್ತದೆ. ಇದರಿಂದ ವೈಧಿಕ ಧರ್ಮವು ಪ್ರಭುತ್ವಕ್ಕೆ ಅನುಕೂಲಕರವಾದ ಲೋಕದೃಷ್ಟಿಯನ್ನು ಬೆಳೆಸಿ ಮಾನ್ಯತೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಮಠ, ದೇವಸ್ಥಾನ, ಅಗ್ರಹಾರಗಳು ಪರಿಣಾಮಕಾರಿಯಾದ ಅಧಿಕಾರ ಕೇಂದ್ರಗಳಾಗಿದ್ದವು. ಸಾಮಾಜಿಕ ಬದಲಾವಣೆಯಲ್ಲಿ ಸಂಸ್ಕೃತೀಕರಣದ ಮಾದರಿಗಳ ಮೂಲಕ ವ್ಯವಸ್ಥೆಯಲ್ಲಿ ಪ್ರತಿಷ್ಠೆ ಹಾಗೂ ಅಧಿಕಾರಗಳಿಸುವ ಮೂಲಕ ಕೆಳ ಸಮುದಾಯಗಳಿಗೆ ಮೇಲ್ಮುಖ ಚಾಲನೆಯನ್ನು ನೀಡುವ, ಅನಿವಾರ್ಯವಾದರೆ ದಮನಕಾರಿ ಪ್ರವೃತ್ತಿಯನ್ನು ಅನುಸರಿಸುವ ಮಾಧ್ಯಮವಾಗಿ, ಜ್ಞಾನ ಕೇಂದ್ರಗಳಾಗಿ ಕೂಡ ಈ ವೈದಿಕ ಕೇಂದ್ರಗಳು ಮಹತ್ವಗಳಿಸಿದವು. ಆದರೆ ಇಂಥ ಯಾವುದೇ ಚಲನೆಯ ಅಂತಿಮವಾದ ಗುರಿ ರಾಜತ್ವದ ಕೆಳಗೆ ಇಡೀ ಸಮಾಜದ ಅಧಿಕಾರ ಶ್ರೇಣೀಕರಣವನ್ನು ಸಾಧಿಸುವುದಾಗಿತ್ತು. ಇದೇ ಕಾರಣಕ್ಕೆ ಪ್ರಭುತ್ವಗಳಿಗೆ ವೈದಿಕರು ಹಾಗೂ ಅವರ ವರ್ಣಧರ್ಮ ಅನಿವಾರ್ಯವಾಗಿತ್ತು.

ಆಧುನಿಕ ಪೂರ್ವ ಭಾರತದಲ್ಲಿ ಪ್ರತಿಯೊಂದು ಊರಿಗೂ ದೇವಸ್ಥಾನಗಳೇ ಸಾಂಸ್ಕೃತಿಕ ಮತ್ತು ಧಾರ್ಮಿಕ ಅಧಿಕಾರ ಚಲಾಯಿಸುವ ಮುಖ್ಯ ಶಕ್ತಿಕೇಂದ್ರಗಳಾಗಿದ್ದವು. ಊರಿನ ಎಲ್ಲಾ ಚಟುವಟಿಕೆಗಳೂ ಅಲ್ಲಿಂದಲೇ ಪ್ರಾರಂಭವಾಗುತ್ತಿದ್ದವು. ಅದರ ಹಿಂದೆ ಆಯಾ ಕಾಲದ ಮತಧರ್ಮಗಳು ಪ್ರಭುತ್ವ ನಡೆಸುತ್ತಿದ್ದವು. ಇವು ಧರ್ಮ, ಸಂಸ್ಕೃತಿ, ಕಲೆಯ ಹೆಸರಿನಲ್ಲಿ ಅನೇಕ ಸಲ ಅನೇಕ ರೀತಿಯ ಅನಾಚಾರ, ಮೋಜು, ಕಪಟಗಳ ಮೂಲ ಸ್ಥಾನಗಳೂ ಆದವು. ಅಪರಾಧಗಳನ್ನು ತೀರ್ಮಾನಿಸುವ 'ದಿವ್ಯ' ಪದ್ಧತಿಯ ನ್ಯಾಯಾಲಯವಾಗಿ, ದೇವದಾಸಿಯರ ಸಂಗೀತ-ನರ್ತನ ಶಾಲೆಗಳಾಗಿ, ಪಂಡಿತ, ಪೂಜಾರಿಗಳ ಖಾಸಗಿ ರಹಸ್ಯ ಸ್ಥಾನಗಳಾಗಿ ಕೂಡ ದೇವಸ್ಥಾನಗಳು ಕೆಲಸ ನಿರ್ವಹಿಸಿದ್ದವು. ಹೀಗೆ ಈ ದೇವಸ್ಥಾನಗಳು ವಿದ್ಯಾಕೇಂದ್ರಗಳೂ, ಸಾಂಸ್ಕೃತಿಕ ಅಧಿಕಾರ ಕೇಂದ್ರಗಳೂ ಆಗಿರುವಂತೆ, ಸುಲಿಗೆ ಮತ್ತು ಶೋಷಣೆಯ ಕೇಂದ್ರಗಳೂ ಆಗಿದ್ದವು. ಧಾರ್ಮಿಕ ಪ್ರಭುತ್ವದ ಮೂಲಕ ಸ್ಮೃತಿ, ವೇದ, ಪುರಾಣಗಳು ಆತ್ಮಹತ್ಯೆ-ಆತ್ಮತ್ಯಾಗಗಳಂತಹ ಬಲಿಪದ್ಧತಿಗಳಿಗೆ ಮನ್ನಣೆ ನೀಡಿ, ಅವುಗಳನ್ನು ಸಾಮಾಜಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಮೌಲ್ಯವನ್ನಾಗಿಸಿದ್ದವು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ದತ್ತಿ–ದಾನ, ದೇವಾಲಯ ನಿರ್ಮಾಣಗಳ ಹಿಂದೆ ಯುದ್ಧ, ಸತಿಪದ್ಧತಿ, ಜೋಳವಾಳಿ, ವೇಳವಾಳಿ ಮುಂತಾದ ತ್ಯಾಗ–ಬಲಿದಾನಗಳ ಕಥೆ ಇದೆ. ಆತ್ಮಹತ್ಯೆ, ಆತ್ಮಬಲಿಗಳ ಹಿಂದೆ ಧಾರ್ಮಿಕ ನಂಬಿಕೆ, ಧಾರ್ಮಿಕ ಭಯ ಹಾಗೂ ರಾಜಭಕ್ತಿ ಇವೆಲ್ಲ ಏಕಕಾಲಕ್ಕೆ ಪ್ರಭಾವ ಬೀರುವುದನ್ನು ಕಾಣಬಹುದಾಗಿದೆ. ಹೀಗೆ ಜನಸಮುದಾಯದಿಂದ ಅನೇಕ ದತ್ತಿ–ದಾನಗಳನ್ನು ಸ್ವೀಕರಿಸಿದ ದೇವಾಲಯಗಳು ಸಂಪದ್ಭರಿತವಾಗಿದ್ದವು. ಆರ್ಥಿಕ ಸಂಪತ್ತು ಮತ್ತು ಧರ್ಮದ ಮೂಲಕ ಹುಟ್ಟಬಹುದಾದ ಭಯ –ಇವೆರಡೂ ಅಂದಿನ ಧಾರ್ಮಿಕ ಪ್ರಭುತ್ವಕ್ಕೆ ಶೋಷಣೆ ಮಾಡಲು ತುಂಬ ಅನುಕೂಲವಾಗಿದ್ದವು. ಹೀಗಾಗಿ ಧಾರ್ಮಿಕ ಪ್ರಭುತ್ವಕ್ಕೆ ಯಾರೂ ಅಷ್ಟಾಗಿ ಪ್ರತಿರೋಧ ತೋರುತ್ತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.[೭] ಆದರೆ, ಈ ವರ್ಣವ್ಯವಸ್ಥೆಯನ್ನು ಧಿಕ್ಕರಿಸಿ, ಪ್ರಾಪಂಚಿಕ ಅಧಿಕಾರ ರಚನೆಯ ಮಾನದಂಡಗಳನ್ನೇ ಉಪೇಕ್ಷಿಸಿದ ವಚನಕಾರರು, ಈ ರಾಜಪ್ರಭುತ್ವದಲ್ಲಿ ವೈದಿಕರೊಂದಿಗೆ ಪೈಪೋಟಿ ನಡೆಸಿ, ಕೆಲವೊಮ್ಮೆ ಮೇಲುಗೈ ಸಾಧಿಸಿದ್ದನ್ನು ಮಧ್ಯಯುಗದಲ್ಲಿ ಕಾಣಬಹುದಾಗಿದೆ. ಶರಣತ್ವದ ಒಂದು ಭಾಗವಾಗಿದ್ದ ವಿರಕ್ತರು ವರ್ಣಧರ್ಮದ ಪ್ರಪಂಚಕ್ಕೆ ಸಮಾನಾಂತರವಾಗಿ ತಮ್ಮದೇ ಅಧಿಕಾರವನ್ನು ಸಮಾಜದಲ್ಲಿ ಗಳಿಸಿಕೊಂಡಿದ್ದರು. ಅಷ್ಟೇ ಅಲ್ಲ, ಈ ಅಧಿಕಾರವನ್ನು ಸಾಂಸ್ಥಿಕವಾಗಿ, ವ್ಯವಸ್ಥಿತವಾಗಿ ಬೆಳೆಸಿಕೊಂಡಿದ್ದರು. ವರ್ಣಧರ್ಮದ ಮಾನದಂಡದಲ್ಲಿ ಈ ತುಚ್ಛೀಕರಿಸಲ್ಪಟ್ಟ ಸಮೂಹಗಳು ಮಧ್ಯಕಾಲೀನ ಪ್ರಭುತ್ವದಲ್ಲಿ ಗೌರವಾದರಗಳನ್ನು ಗಳಿಸಿಕೊಂಡವು. ಈ ರೀತಿ ವರ್ಣಧರ್ಮಕ್ಕೆ ಹೊರತಾದ, ಅದನ್ನು ಸದಾ ಪ್ರಶ್ನಿಸುವ ಹಾಗೂ ಅದಕ್ಕೆ ಪರ್ಯಾಯವಾದ 'ಧರ್ಮ' ಕಲ್ಪನೆಯನ್ನು ಪ್ರತಿಪಾದಿಸುವ ಪ್ರಕ್ರಿಯೆ ಮಧ್ಯಕಾಲದುದ್ದಕ್ಕೂ ಜಾಗೃತವಾಗಿತ್ತು.

ಆದರೆ, ಇದರಲ್ಲಿ ಒಂದು ವಿಪರ್ಯಾಸವೂ ಇದೆ. ವೈದಿಕರು ತಮ್ಮ ವರ್ಣಧರ್ಮದ ಅನುಷ್ಠಾನಕ್ಕಾಗಿ ಮಠವ್ಯವಸ್ಥೆಯನ್ನು ಅಳವಡಿಸಿಕೊಂಡು, ಅಧಿಕಾರವನ್ನು ಕೇಂದ್ರೀಕೃತವಾಗಿ ಮಾಡಿಕೊಂಡಿದ್ದಂತೆ, ರಾಜಪ್ರಭುತ್ವದಲ್ಲಿ ವಿರಕ್ತನು ಮತ್ತೊಂದು ಬಗೆಯ 'ಪ್ರಭು'ವಾಗಿ ಬದಲಾವಣೆಗೊಂಡದ್ದನ್ನು ಕಾಣುತ್ತೇವೆ. ಕಾರ್ಲ್‌ಮಾರ್ಕ್ಸನು "ಧರ್ಮವು ಜನರನ್ನು ದಾಸ್ಯದಲ್ಲಿರಿಸುವಂತೆ ಮಾಡುವ ಶಕ್ತಿಯನ್ನು ಹೊಂದಿದ್ದು, ಇದೊಂದು ಆಫೀಮಿದ್ದಂತೆ" ಎಂದು ಕರೆದಿದ್ದಾನೆ. ಹೇಗೆ ಆಫೀಮು ಸೇವಿಸಿದ್ದ ವ್ಯಕ್ತಿ ಮನಸ್ಸಿನ ಮೇಲೆ ಹಿಡಿತ ಹೊಂದಿರುವುದಿಲ್ಲವೋ ಹಾಗೆಯೇ ಬಂಡವಾಳಶಾಹಿ ವರ್ಗವು ಜನರಿಗೆ ಧರ್ಮವನ್ನು ಬೋಧಿಸುವುದರ ಮೂಲಕ ಮೆದಳು ತೊಳೆಯುವ ಸುಗಮದಾರಿಯನ್ನು ಕಂಡುಕೊಳ್ಳುತ್ತದೆ. ಸಮಾಜದಲ್ಲಿನ ಅನ್ಯಾಯ, ಅಸಮಾನತೆ ಮತ್ತು ಶೋಷಣೆಗೆ ಸಂಪೂರ್ಣವಾಗಿ ಕಾರಣವಾಗಿರುವ ಧರ್ಮವನ್ನು ಮಾರ್ಕ್ಸ್ ಪ್ರಬಲವಾಗಿ ಟೀಕಿಸಿದ್ದಾನೆ. ಏಕೆಂದರೆ, ಜನಸಮುದಾಯವನ್ನು ರಾಜ್ಯಾಧಿಕಾರದ ಬಲದಿಂದಲೇ ಸದಾ ಕಾಲ ನಿಯಂತ್ರಿಸಲು ಸಾಧ್ಯವಾಗುವುದಿಲ್ಲ.

ಆಗ ತನ್ನ ಪ್ರಧಾನ ಅಂಗವಾದ ಧರ್ಮದಿಂದ ತನ್ನ ಇಚ್ಛೆಯನ್ನು ನೆರವೇರಿಸಿಕೊಳ್ಳಲು ಹವಣಿಸುತ್ತದೆ. ಜನರ ಮನಸ್ಸಿನ ಮೇಲೆ ಧರ್ಮವು ದೇವರು, ಸ್ವರ್ಗ–ನರಕ, ಜನ್ಮ–ಜನ್ಮಾಂತರ, ಪಾಪ–ಪುಣ್ಯ, ಕರ್ಮ–ಪ್ರಾರಬ್ಧ ಮುಂತಾದ ಅಮೂರ್ತಭಯವನ್ನು ಪ್ರತಿಷ್ಠಾಪಿಸುತ್ತಿರುತ್ತದೆ. ಆದ್ದರಿಂದಲೇ ಮಾರ್ಕ್ಸ್ ಇಂಥ ಧರ್ಮದ ವಿರುದ್ಧ ಹೋರಾಟಕ್ಕೆ ಕರೆಕೊಡುತ್ತಾನೆ. ಹೀಗೆ ದೇಶದ ಧಾರ್ಮಿಕ ಪ್ರಭುತ್ವ ಮತ್ತು ರಾಜಪ್ರಭುತ್ವಗಳು ಇಂತಹ ಅಜ್ಞಾನ, ಮೌಢ್ಯ ಮತ್ತು ಗುಲಾಮಗಿರಿಗಳಲ್ಲಿ ಬದುಕಬೇಕಾದ ಅನಿವಾರ್ಯತೆಯನ್ನು ನಮ್ಮ ಜನತೆಯಲ್ಲಿ ಬೆಳೆಸಿದ್ದರಿಂದ ಅವರಲ್ಲಿ ಪ್ರತಿಭಟನೆಯ ಅಂಶಗಳು ತೀರಾ ಕಡಿಮೆಯಾಗಿವೆ. ಒಟ್ಟಿನಲ್ಲಿ ಮತ–ಧರ್ಮ ನಮ್ಮಲ್ಲಿ ಪ್ರಜ್ಞಾಪೂರ್ವಕ ವಲಯದಲ್ಲಿ ಮಾಡುವ ಹಾನಿಗಿಂತ ಪ್ರಜ್ಞಾತೀತ ವಲಯದಲ್ಲಿ ಮಾಡುವ ಹಾನಿ ಭೀಕರವಾದುದಾಗಿತ್ತು. ಮಧ್ಯಯುಗದ ಧಾರ್ಮಿಕ ಚಳುವಳಿಯು ಎತ್ತಿದ ಪ್ರಶ್ನೆಗಳು ಅವುಗಳ ಸಾಮಾಜಿಕ–ಧಾರ್ಮಿಕ–ಆರ್ಥಿಕ ನೆಲೆಗಳು, ಒಳವಿರೋಧಗಳು, ಸಂಘರ್ಷಗಳು ಬದಿಗೆ ಸರಿದು, ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಒಂದು ಬಗೆಯ ಕೋಮುವಾದಿ ನಿಲುವು ಕಾಣಿಸಿಕೊಂಡಿತು. ತನಗೆ ಅನುಕೂಲಕರವಾದ ಕೋಮುವಾದವನ್ನು ಅನೇಕ ರೀತಿಯಲ್ಲಿ ಬ್ರಿಟಿಷ್ ವಸಾಹತು ಸಾಮ್ರಾಜ್ಯವು ಪೋಷಿಸಿತು ಎಂಬುದು ಈಗ ಇತಿಹಾಸದ ಭಾಗವಾಗಿ ಹೋಗಿದೆ. ಸ್ವಾತಂತ್ರ್ಯೋತ್ತರ ಭಾರತವು ಧಾರ್ಮಿಕ ಪ್ರಭುತ್ವ ಹಾಗೂ ರಾಷ್ಟ್ರಪ್ರಭುತ್ವಗಳ ಸಂಘರ್ಷ, ಸಾಮರಸ್ಯಗಳ ವಿವಿಧ ಮಾರ್ಗಗಳಿಗೆ ಸಾಕ್ಷಿಯಾಗಿದೆ.

ಚಲಾಯಿಸುವ, ಮತೀಯ ರಾಜಕಾರಣವನ್ನು ಬಿತ್ತುವ, ರಾಜಕೀಯವಾಗಿಯೂ ಪ್ರಭಾವ ಬೀರುವ ಹಾಗೂ ನಿಯಂತ್ರಣ ಸಾಧಿಸುವ ಪ್ರಬಲ ಅಧಿಕಾರ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ಬಗೆಯ ಧಾರ್ಮಿಕ ಪರಂಪರೆಯ ಮೌಲ್ಯಗಳ ಬಗೆಗೆ ಆಧುನಿಕ ಕನ್ನಡ ಸಾಹಿತ್ಯ ವೈಚಾರಿಕ ನೆಲೆಯಲ್ಲಿ ಉತ್ಕಟವಾಗಿ ಪ್ರತಿಕ್ರಿಯಿಸಿದೆ. ಹೀಗೆ ಧಾರ್ಮಿಕ ಮೌಲ್ಯಗಳ ಜಗತ್ತನ್ನು ಪರಿಶೀಲಿಸುವ ರೂಪಕಗಳನ್ನು ಸಂಸ, ಕುವೆಂಪು, ಮಾಸ್ತಿ, ಪು.ತಿ.ನ., ಕಾರ್ನಾಡ್, ಲಂಕೇಶ್, ಶಿವಪ್ರಕಾಶ್, ಮುಂತಾದವರ ನಾಟಕಗಳಲ್ಲಿ ಗುರುತಿಸಬಹುದು.

## ಪರಾಮರ್ಶನ ಗ್ರಂಥಗಳು


- **ನಟರಾಜ್ ಹುಳಿಯಾರ್ (ಅನು) (1990)** : ಬಾಬಾ ಸಾಹೇಬ್ ಅಂಬೇಡ್ಕರ್, ಅಸ್ಪೃಶ್ಯರ ವಿಮೋಚನೆ ಮತ್ತು ಜಾತಿ ವಿನಾಶ, ಬೆಂಗಳೂರು ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮ ಶತಮಾನೋತ್ಸವ ಸಮಿತಿ.
- **ನಟರಾಜ್ ಹುಲಿಯಾರ್ (ಸಂ.) (2003)** : ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ, ರಾಮಮನೋಹರ ಲೋಹಿಯಾ ಬರಹಗಳು, ಸಂಪುಟ–6, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- **ಬರಗೂರು ರಾಮಚಂದ್ರಪ್ಪ (ಸಂ.) (1993)** : ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ.
- **ಸುರೇಶ್ ಕೆ.ಜೆ. (2000)** : ರಾಜಕೀಯ ಸಿದ್ಧಾಂತ, ಮೈಸೂರು ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್.
- **ಜವರಯ್ಯ ಮ. ನ. (1946)** : ಅಂಬೇಡ್ಕರ್ ವಿಚಾರ ಸಾಹಿತ್ಯ.


■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಜಾನಪದ ನಂಬಿಕೆಗಳಲ್ಲಿ ಜಲದ ಪ್ರಾಮುಖ್ಯತೆ

**ಡಾ. ಸೀತಾ ಹೆಚ್.ಎನ್.,** ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು-571301

**ಡಾ. ಸಿ.ಎಸ್. ಕೆಂಡಗಣ್ಣೆಗೌಡ,** ಕನ್ನಡ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

ಜನಪದ ನಂಬಿಕೆಗಳು ಜನರನ್ನು ಎಚ್ಚರಿಸುವ, ಪ್ರೋತ್ಸಾಹಿಸುವ ಹಾಗೂ ಅವರನ್ನು ನಿಯಂತ್ರಿಸುವ ಅಂಶಗಳನ್ನು ಒಳಗೊಂಡವು. ಹಲವು ನಂಬಿಕೆಗಳು ಜನರನ್ನು ದಾರಿ ತಪ್ಪದಂತೆ ರಕ್ಷಿಸಿಕೊಂಡು ಬಂದಿದ್ದು, ಜನಪದರ ಸಂಪ್ರದಾಯಗಳ ಉಳಿಯುವಿಕೆಗೂ ಈ ನಂಬಿಕೆಗಳೇ ಕಾರಣವಾಗಿವೆ.ಬಹುತೇಕ ನಂಬಿಕೆಗಳು ಜನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬಲ್ಲವಂತವುಗಳಾಗಿದ್ದು, ಮತ್ತೆ ಕೆಲವು ನಂಬಿಕೆಗಳು ವೈಜ್ಞಾನಿಕ ಹಿನ್ನೆಲೆಯಿಂದಲೂ ಮಹತ್ವವಾದವುಗಳಾಗಿವೆ ಎಂಬುದನ್ನು ನಾವು ಮರೆಯುವಂತಿಲ್ಲ.

ಜಾನಪದದಲ್ಲಿ ನಂಬಿಕೆಗಳು ಎನ್ನುವ ಪ್ರಕಾರವು ಪುರಾಣ, ಐತಿಹ್ಯ, ಮಂತ್ರವಿದ್ಯೆ, ಧರ್ಮ ಮುಂತಾದ ಜನಪದ ಪ್ರಕಾರಗಳೊಡನೆ ಸಂಬಂಧಿಸಿರುವುದರಿಂದ ಅದು ಬಹಳ ಸಂಕೀರ್ಣರೂಪವಾಗಿ ಕಾಣಿಸುತ್ತದೆ. ಕೆಲವು ನಂಬಿಕೆಗಳು ನಿಷಿದ್ಧತೆಯ ಹಿನ್ನೆಲೆಯಲ್ಲಿ ಬಂದರೆ, ಇನ್ನು ಕೆಲವು ನಂಬಿಕೆಗಳು ಅಜ್ಞಾನದಿಂದ ಭೂತ, ಪ್ರೇತ ಮುಂತಾದ ಅತಿಮಾನುಷ ಶಕ್ತಿಗಳ ಬಗೆಗಿನ ಶಕ್ತಿಗಳಿಂದ ಬಂದವುಗಳಾಗಿವೆ. ಅವೈಜ್ಞಾನಿಕ ತರ್ಕದ ಮೂಲಕ ಮಾಟದ ಸಂಬಂಧವನ್ನು ಹೊಂದಿದ ನಂಬಿಕೆಗಳು ಸಾಕಷ್ಟಿವೆ. ಮನಸ್ಸಿನ ದುರ್ಬಲತೆ ಪರಿಸರದ ತಿಳುವಳಿಕೆಯ ಇತಿಮಿತಿ ವೈಚಾರಿಕತೆಯ ಹಿನ್ನೆಲೆಯಲ್ಲಿ ಮೂಡಿಬಂದ ಜ್ಞಾನವನ್ನು ಬೆಂಬಲಿಸುವ ಜನಪದ ನಂಬಿಕೆಗಳು ವೈಜ್ಞಾನಿಕ ಮನೋಧರ್ಮದೊಂದಿಗೆ ಮಾಯವಾಗುವುದು ಖಂಡಿತ.

ಮಾನವನ ಜೀವನದಲ್ಲಿ ಹುಟ್ಟು, ಮದುವೆ, ಸಾವುಗಳು ಪ್ರಮುಖ ಸೋಪಾನಗಳಾಗಿದ್ದು, ಮನುಷ್ಯ ಮಾತೃಗರ್ಭವನ್ನು ಹೊಕ್ಕಾಗಿನಿಂದ ಹಿಡಿದು ಮಣ್ಣುಗೂಡುವ ತನಕವೂ ಒಂದಲ್ಲ ಒಂದು ನಂಬಿಕೆಗಳಿಗೆ ಶರಣಾಗಿ ಬದುಕು ನೆಡೆಸಬೇಕಾಗಿದೆ. ಹೀಗಿರುವ ಮಾನವನ ಜೀವನದ ಎಲ್ಲಾ ಘಟ್ಟಗಳಲ್ಲಿ ಜಲಜಾನಪದವು ಎಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂಬುದೇ ಈ ಲೇಖನದ ಉದ್ದೇಶ.

ಮನುಷ್ಯನ ಜೀವನದಲ್ಲಿ ಹುಟ್ಟು ಮತ್ತು ಸಾವು ಈ ಎರಡು ಸಂದರ್ಭಗಳಲ್ಲಿಯೂ ಸೂತಕ ತೆಗೆಯುವ ಆಚರಣೆಯೂ ನಮ್ಮ ಜನಪದರಲ್ಲಿದ್ದು, ಆ ಸಂದರ್ಭದಲ್ಲಿ ಕುಟುಂಬದವರೆಲ್ಲರೂ ಒಟ್ಟಾಗಿ ಸೇರಿ ಮನೆಯನ್ನು ಶುದ್ಧೀಕರಿಸಿ ಸೂತಕ ಕಳೆಯುವ ಪದ್ಧತಿಯಿದೆ.ಇನ್ನು ವಯಸ್ಸಿಗೆ ಬಂದ ಹೆಣ್ಣು ಮೈನೆರೆದಾಗ ಅವಳಿಗೆ ಮೊದಲು ಸೋದರಮಾವನಿಂದ ಅರಿಶಿಣದ ನೀರು ಹಾಕಿಸಿ ನಂತರದಲ್ಲಿ ಐದು ಜನ ಮುತ್ತೈದೆಯರು ಅರಿಶಿಣದ ನೀರು ಹಾಕುವುದರ ಮೂಲಕ ಅವಳ ಮುಂದಿನ ಜೀವನವೆಲ್ಲಾ ಸುಖಮಯವಾಗಿರಲೆಂದು ಶುಭ ಹಾರೈಸುತ್ತಾರೆ. ಹದಿನಾರನೆಯ ದಿನದಂದು ಮನೆಯಲ್ಲಿ ಮೈನೆರೆದ ಹುಡುಗಿಯ ಕೈಯಲ್ಲಿ ಗಂಗೆಯನ್ನು ಪೂಜೆಮಾಡಿಸಿ ಸೂತಕ ಕಳೆಯುವ ರೂಢಿಯಿದೆ.

ವೈವಾಹಿಕ ಜೀವನಕ್ಕೆ ಕಾಲಿಡುವ ಶುಭಸಂದರ್ಭದಲ್ಲಿ ಮಧು ಮಕ್ಕಳಿಗೆ ಅರಿಶಿಣಹಚ್ಚಿ ಶಾಸ್ತ್ರದ ನೀರು ಹುಯ್ಯುತ್ತಾರೆ. ಈ ಶಾಸ್ತ್ರದ ನೀರನ್ನು ಮದು ಮಕ್ಕಳಿಗೆ ಹಾಕಿದ ಮೇಲೆ ಅವರನ್ನು ಮದುವೆ ಮುಗಿಯುವವರೆಗೂ ಮನೆಯಿಂದ ಹೊರಕ್ಕೆ ಎಲ್ಲೂ ಅಡ್ಡಾಡಲು ಬಿಡುವುದಿಲ್ಲ. ಏಕೆಂದರೆ ಮಧು ಹಸಿ ಮೈನವರು ಅವರು ಈ ವೇಳೆಯಲ್ಲಿ ಹೊರಗೆಲ್ಲಾದರೂ ಅಡ್ಡಾಡಿದರೆ ಭೂತ ಪ್ರೇತಗಳು ಹಿಡಿದು ಕೊಳ್ಳುತ್ತವೆಯೆಂಬುದು ಜನಪದರ ನಂಬಿಕೆಯಾಗಿದೆ.ಮದುವೆ ಸಂದರ್ಭದಲ್ಲಿ ಗಂಡು ಮತ್ತು ಹೆಣ್ಣಿನ ಕಡೆಯವರೆಲ್ಲಾ ಸೇರಿ ಮದುವೆ ಹಿಂದಿನ ಅಥವಾ ಮದುವೆ ದಿನದಂದು ಅರಳಿಕಟ್ಟೆಯ ಬಳಿಗೆ ಹೋಗಿ ಐದು ಅಥವಾ ಒಂಭತ್ತು ಗಡಿಗೆಗಳಲ್ಲಿ ನೀರು ಅಡಿಕೆ ಹೊಂಬಾಳೆ ಇಟ್ಟು ಪೂಜೆ ಮಾಡಿ ದೇವರು ತರುವ ಶಾಸ್ತ್ರವನ್ನು ಮಾಡುವುದು ರೂಢಿಯಿದೆ. ಮಾಂಗಲ್ಯಧಾರಣೆ ನಂತರಲ್ಲಿ ಹೆಣ್ಣಿನ ಕೈಯಿಂದ ದೇವರನ್ನು ಬಿಡುವ ಶಾಸ್ತ್ರವನ್ನು ಮಾಡಿಸುತ್ತಾರೆ ಈ ರೀತಿಯ ಶಾಸ್ತ್ರ ಹಾಗೂ ನಂಬಿಕೆಗಳಿಂದ ಗಂಡ ಹೆಂಡತಿಯರ ಮುಂದಿನ ಜೀವನ ಸುಖಮಯವಾಗಿರುತ್ತದೆಂಬ ನಂಬಿಕೆ ಜನಪದರದಾಗಿದೆ.

ಜಲವನ್ನು ಕುರಿತ ಜನಪದ ನಂಬಿಕೆಗಳು ಮಾನವನ ಬದುಕಿನ ಪ್ರತಿ ಹಂತದಲ್ಲಿಯೂ ಹಾಸು ಹೊಕ್ಕಾಗಿವೆ. ಜನರು ಯಾವುದೇ ಶುಭಕಾರ್ಯಕ್ಕೆ ಹೊರಡುವ ಸಮಯದಲ್ಲಿ ತುಂಬಿದ ಕೊಡ ಹಿಡಿದವರು ಎದುರಾದರೆ ಹೋದ ಕೆಲಸ ನೆರವೇರುತ್ತದೆಯೆಂಬ ನಂಬಿಕೆಯ ಜೊತೆಗೆ ಪವಿತ್ರ ತೀರ್ಥಕ್ಷೇತ್ರಗಳಲ್ಲಿ ಸ್ನಾನ ಮಾಡಿದರೆ ಮಾಡಿದ ಪಾಪಕರ್ಮಗಳೆಲ್ಲ ಕಳೆಯುತ್ತವೆಯೆಂಬ ನಂಬಿಕೆ ಜನರದಾಗಿದೆ. ಇನ್ನು ವೈದ್ಯ ಸಂಬಂಧಿ ನಂಬಿಕೆಗಳು ಜನರಲ್ಲಿದ್ದು ಚರ್ಮ ವ್ಯಾದಿ ಕಾಯಿಲೆಯಿಂದ ಬಳಲುತ್ತಿದ್ದವರು ಹುತ್ತದ ಮಣ್ಣನ್ನು ಮೈಗೆ ಹಚ್ಚಿಕೊಂಡು ತೀರ್ಥಕ್ಷೇತ್ರಗಳಲ್ಲಿ ಸ್ನಾನ ಮಾಡಿದರೆ ರೋಗಗಳು ಮಾಯವಾಗುತ್ತವೆಯೆಂಬ ಜನರ ನಂಬಿಕೆಗಳು ಸ್ವೀಕಾರಯೋಗ್ಯವಾಗಿವೆ.

ನಂಬಿಕೆಗಳು ನಿಂತ ಮಡುವಲ್ಲ, ಅವು ಕಾಲದಿಂದ ಕಾಲಕ್ಕೆ ಬದಲಾಗುತ್ತವೆ. ಕೆಲವೊಮ್ಮೆ ಸಮಾಜದಲ್ಲಿ ನೀತಿಧರ್ಮಗಳು ಉಳಿದಿರುವುದು ಇಂತಹ ನಂಬಿಕೆಗಳಿಂದಲೇ ಎಂದರೂ ತಪ್ಪಾಗಲಾರದು. ಇದೇ ಸಂದರ್ಭದಲ್ಲಿ ಜಲ ಜಾನಪದವನ್ನು ಕುರಿತ ಇನ್ನಷ್ಟು ವಿಚಾರಗಳನ್ನು ನೋಡಬಹುದು. ಮನೆಯಲ್ಲಿ ಮಗು ಊಟಮಾಡದೇ ಹಠಮಾಡುತ್ತಿದ್ದಾರೆ, ಮಗುವಿಗೆ ಪದೇ ಪದೇ ಜ್ವರ ಕಾಡುತ್ತಿದ್ದರೆ, ಮಗು ಚಂಡಿ ಹಿಡಿಯುತ್ತಿದ್ದರೆ.

ಆ ಮನೆಯ ಹಿರಿಯರು ಮುಸ್ಸಂಜೆ ವೇಳೆಯಲ್ಲಿ ಅಂತಹ ಮಗುವನ್ನು ಮನೆಯಿಂದ ಹೊರಕ್ಕೆ ಕರೆದುಕೊಂಡು ಹೋಗಿ ,ತುಂಬಿದ ಕೊಡದ ನೀರನ್ನು ಮಗುವಿನ ಮುಖಕ್ಕೆ ಜೋರಾಗಿ ಎರಚುತ್ತಾರೆ. .ಹೀಗೆ ಮುಖಕ್ಕೆ ನೀರು ಎರಚಿದಾಗ ಮಗು ಜೋರಾಗಿ ಬೆಚ್ಚಿದರೆ ಮಗು ತುಂಬಾ ಹೆದರಿತ್ತು ಎಂಬ ನಂಬಿಕೆಯೂ ಇದೆ. ಇನ್ನು ರಾತ್ರಿ ವೇಳೆ ಮನೆಯವರೆಲ್ಲಾ ಊಟ ಮಾಡಿದ ಮೇಲೆ ಅಡುಗೆ ಮಾಡಿದ ಪಾತ್ರೆಯಲ್ಲಿ ಸ್ವಲ್ಪವಾದರೂ ಅಹಾರವನ್ನು ಉಳಿಸಿ, ಅದರ ಪಕ್ಕದಲ್ಲಿಯೇ ಒಂದು ಚೊಂಬಿನಲ್ಲಿ ನೀರನ್ನು ತುಂಬಿಡಬೇಕು ಎಂಬ ನಂಬಿಕೆಯು ಜನರಲ್ಲಿದ್ದೆ. ಏಕೆಂದರೆ ರಾತ್ರಿ ವೇಳೆ ಲಕ್ಷ್ಮಿ ಬಂದು ಅಡುಗೆ ಮಾಡಿದ ಪಾತ್ರೆಯನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನೋಡುತ್ತಾಳೆ. ಆ ಅಡುಗೆ ಪಾತ್ರೆಯಲ್ಲಿ ಆಹಾರವಿಲ್ಲದಿದ್ದರೆ ಇವರು ದರಿದ್ರವರೆಂದು ಬೈಯ್ದು, ದರಿದ್ರ ಬರುವಂತೆ ಮಾಡುತ್ತಾಳೆಂಬುದು ಜನರ ನಂಬಿಕೆಯಾಗಿದೆ.

ಮಾರಿಹಬ್ಬದ ಸಂದರ್ಭದಲ್ಲೂ ಜಲಜನಪದಕ್ಕೆ ಸಂಬಂಧಿಸಿದ ಅನೇಕ ಆಚರಣೆಗಳಿರುವುದನ್ನು ಕಾಣಬಹುದಾಗಿದೆ. ಊರಿನಲ್ಲಿರುವ ದನಗಳಿಗೋ, ಜನಗಳಿಗೋ ಸಾಂಕ್ರಾಮಿಕ ರೋಗಗಳು ಬಂದಿದ್ದಾದರೆ ಊರ ಮಾರಮ್ಮನಿಗೆ ತಂಪು ಮಾಡುವುದರಿಂದ ಮಾರಿಯ ರೂಪದ ರೋಗಗಳು ತೊಲಗುತ್ತವೆಯೆಂಬ ನಂಬಿಕೆಯಿದ್ದು. ಆ ಸಂದರ್ಭದಲ್ಲಿ ಜನರು ಮಾರಿಗುಡಿಗೆ ಹೋಗಿ ಶುದ್ಧವಾದ ನೀರಿನಿಂದ ಮಾರಮ್ಮನಿಗೆ ತಂಪು ಮಾಡಿ. ಆನಂತರ ಎಳೆನೀರು ಹಾಗೂ ಮೊಸರನ್ನು ಸುರಿದು ತಂಪು ಮಾಡುವ ನಂಬಿಕೆಯೂ ಜನರಲ್ಲಿದೆ.

ಕೃಷಿ ಪ್ರಧಾನವಾದ ದೇಶಗಳಲ್ಲಿ ಮಳೆ ಬರಿಸುವ ಸಂಪ್ರದಾಯಗಳು ಅಸಂಖ್ಯಾತವಾಗಿವೆ. ಕೆಲವು ಕಡೆ ಕುಂಬಾರರು ಮಣ್ಣಿನಲ್ಲಿ ಶಿವಲಿಂಗವನ್ನು ಮಾಡಿ ಮರದ ಮಣೆಯ ಮೇಲೆ ಪೂಜಿಸಿ ಬೆತ್ತಲೆ ಹುಡುಗನ ಮೇಲೆ ಹೊರಿಸುತ್ತಾರೆ. ಅವನು ಅದನ್ನು ಮನೆಯಿಂದ ಮನೆಗೆ ಒಯ್ದಾಗ ಹೆಂಗಸರು ಆ ಲಿಂಗದ ಮೇಲೆ ನೀರು ಹುಯ್ಯುತ್ತಾರೆ .ಇನ್ನು ಇಂತಹದೇ ಸಂದರ್ಭದ್ದಲ್ಲಿ ಥಾಣಾ ಜಿಲ್ಲೆಯ ಜನರು ನೀರೊಳಗಿನ ಕಲ್ಲನ್ನು ಪೂಜಿಸಿ ಹುಡುಗನೊಬ್ಬನ ಮೇಲೆ ಅದನ್ನು ಹೊರಿಸುತ್ತಾರೆ. ಅವನು ಆ ಕಲ್ಲನ್ನು ಹೊತ್ತು ಹೋದಾಗ ಮನೆಯವರು ಅದರ ಮೇಲೆ ನೀರು ಸುರಿಯುತ್ತಾರೆ, ಹೀಗೆ ಮಾಡಿದರೆ ಮಳೆ ಬರುತ್ತದೆಯೆಂಬುದು ನಂಬಿಕೆ ಕೆಲವರಲ್ಲಿದೆ. ಅನಾವೃಷ್ಟಿಯ ಸಂದರ್ಭದಲ್ಲೂ ಹುಡುಗನೊಬ್ಬನನ್ನು ಮಳೆರಾಯನೆಂದು ಭವಿಸಿ, ಹೂತಳಿರುಗಳಿಂದ ಅಲಂಕರಿಸಿ ಊರ ಸುತ್ತ ಕರೆದೊಯ್ದು, ಮನೆಮನೆಯ ಜನ ಬಿಸಿನೀರು ಹೊಯ್ದು ಅವರು ಕೊಟ್ಟ ಅಕ್ಕಿಪಡಿಯಿಂದ ಊರ ಮುಂದಿನ ಕೆರೆಯ ಬಳಿ ಪರ ಮಾಡಿ, ಮಳೆರಾಯನಿಗೆ ಮೊದಲು ನೈವೇದ್ಯ ಮಾಡಿ ಆನಂತರ ಊರವರೆಲ್ಲಾ ಪ್ರಸಾದ ಹಂಚಿಕೊಂಡು ಉಣ್ಣುವ ಪದ್ಧತಿ ಕರ್ನಾಟಕದ ಕೆಲವೆಡೆಗಳಲ್ಲಿ ರೂಢಿಯಲ್ಲಿದೆ.

ಹೀಗೆ ಶುಭ ಸಮಾರಂಭಗಳಲ್ಲಿ ಮಾತ್ರವಲ್ಲದೆ ಮನುಷ್ಯನ ಸಾವಿನ ಸಂದರ್ಭದಲ್ಲೂ ಅನೇಕ ಜಲಸಂಬಂಧಿತ ನಂಬಿಕೆಗಳಿರುವುದನ್ನು ಕಾಣಬಹುದು. ಸತ್ತ ಹೆಣಕ್ಕೆ ಸ್ನಾನ ಮಾಡಿಸುವುದರಿಂದ ಹಿಡಿದು ಶವ ಸಂಸ್ಕಾರ ಮಾಡುವವರೆಗೆ ಅನೇಕ ಕ್ರಿಯೆಗಳು ನಡೆಯುತ್ತವೆ , ಹೆಣಕ್ಕೆ ಸ್ನಾನ ಮಾಡಿಸುವಾಗ ಮನೆಯ ಹೊರಭಾಗದಲ್ಲಿ ನೀರು ಕಾಯಿಸುವುದು ರೂಢಿ. ಹೀಗೆ ನೀರು ಕಾಯಿಸುವ ನೀರನ್ನು ತುಂಬಾ ಬಿಸಿಯಾಗಿ ಕಾಯಿಸಿ ಅದಕ್ಕೆ ತಣ್ಣೀರು ಬೆರೆಸುವುದಾಗಲೀ, ಹೆಣಕ್ಕೆಂದು ಕಾಯಿಸಿದ ನೀರನ್ನು ಉಳಿಸುವುದಾಗಲೀ ಮಾಡಬಾರದೆಂಬ ನಂಬಿಕೆಯಿದೆ.ಇನ್ನು ಹೆಣಕ್ಕೆ ನೀರು ಹುಯ್ಯುವಾಗ ಒಬ್ಬರು ತೆಗೆದುಕೊಂಡ ನೀರನ್ನು ಮತ್ತೊಬ್ಬರ ಕೈಗೆ ಕೊಡಬಾರದೆಂಬ ನಂಬಿಕೆಯೂ ಇದೆ.ಸಾವಿಗೆ ಬಂದವರು ಶವಸಂಸ್ಕಾರದ ನಂತರದಲ್ಲಿ ನದಿ ಕೊಳ ಅಥವಾ ನಲ್ಲಿಯಲ್ಲಿ ಕೈಕಾಲು ಮುಖ ತೊಳೆದು ಸ್ವಲ್ಪ ನೀರನ್ನು ತಲೆಮೇಲೆ ಚಿಮುಕಿಸಿಕೊಂಡು ನಂತರ ಸಾವಿನ ಮನೆಗೆ ಹೋಗಿ ಹಚ್ಚಿಟ್ಟಿರುವ ದೀಪವನ್ನು ನೋಡಿ ಹುಳಿ ಮುಟ್ಟಿದ ಮೇಲೆ ಸ್ನಾನ ಮಾಡುವ ಪದ್ಧತಿಯಿದೆ. ವ್ಯಕ್ತಿಸತ್ತ ಮೂರು ಅಥವಾ ಐದನೆಯ ದಿನಕ್ಕೆ ಹಾಲು ತುಪ್ಪ ಬಿಡುವ ಶಾಸ್ತ್ರ ಮಾಡುತ್ತಾರೆ. ಹೆಣವನ್ನು ಸುಟ್ಟಿದ್ದರೆ ಹನ್ನೊಂದನೆಯ ದಿನ ಶವದ ಬೂದಿಯನ್ನು ಹೊಸ ಮಣ್ಣಿನ ಕುಡಿಕೆಯಲ್ಲಿ ತುಂಬಿ ತಿಥಿ ಮಾಡುವ ದಿನದಂದು ಹರಿಯುವ ನೀರಿನಲ್ಲಿ ತೇಲಿ ಬಿಡುತ್ತಾರೆ ಹೀಗೆ ಮಾಡಿದರೆ ಸತ್ತವರು ಸ್ವರ್ಗಕ್ಕೆ ಹೋಗುತ್ತಾರೆಯೆಂಬುದು ಜನಪದರ ನಂಬಿಕೆಯಾಗಿದೆ.

ಒಟ್ಟಾರೆ ಮಾನವನ ಬದುಕಿನಲ್ಲಿ ಹುಟ್ಟಿನಿಂದ ಸಾವಿನವರೆಗೂ ಪ್ರತಿ ಹಂತದಲ್ಲೂ ಜಲಕ್ಕೆ ಸಂಬಂಧಿಸಿದ ಅನೇಕ ನಂಬಿಕೆಗಳಿದ್ದು, ಈ ಬಗೆಯ ನಂಬಿಕೆಗಳೇನೂ ಅಪಾಯಕಾರಿಯಲ್ಲ. ಇವು ವೃತ್ತಿ, ಕಾಲ ದೇಶಗಳಿಗನುಗುಣವಾಗಿ ವೃದ್ಧಿಯಾಗುತ್ತದೆ. ವೈವಿಧ್ಯಮಯವಾಗಿರುತ್ತವೆ. ಒಟ್ಟಾರೆಯಾಗಿ ಜನಪದ ನಂಬಿಕೆಗಳು ಜಗತ್ತಿರುವ ತನಕ ವಿಜೃಂಭಿಸುತ್ತವೆಯೆಂದರೂ ತಪ್ಪಾಗಲಾರದು.

■■

– 9ನೇ ಪುಟದಿಂದ ಮುಂದುವರೆದುದು


- **ಜೋಶಿ ಜಿ. ವಿ.,** ದಕ್ಷಿಣ ಕನ್ನಡ ಜಿಲ್ಲೆಯ ರೈತ ಹೋರಾಟ, ಮಂಗಳೂರು ವಿಶ್ವವಿದ್ಯಾಲಯ, (ಮಂಗಳೂರು, 1999), ಪು.23–26.
- **ನಾರಾಯಣಸ್ವಾಮಿ ಜ. ಹೋ., (ಅನು)** : ಭಾರತದ ರೈತ, ನೆಲಮನೆ ಪ್ರಕಾಶನ, (ಮೈಸೂರು, 1981), ಪು. 42–48.
- **ರಾಜಶೇಖರ್ ಜಿ.,** ಶಿವಮೊಗ್ಗ ರೈತ ಚಳವಳಿಯ ತಾತ್ವಿಕ ನೆಲೆಗಳು, ಕಾಗೋಡು ಸತ್ಯಾಗ್ರಹ, ಅಕ್ಷರ ಪ್ರಕಾಶನ, (ಹೆಗ್ಗೋಡು, 1980), ಪು–414–415.
- **ಮೋಹನ್ ಹೆಚ್. ಎಸ್.,** ಕಾಗೋಡು ಚಳವಳಿಯ ನಂತರದ ರೈತ ಚಳವಳಿಗಳು, ಕಾಗೋಡು ಸತ್ಯಾಗ್ರಹ, ಸಂಪುಟ, (ಶಿವಮೊಗ್ಗ, 2002), ಪು. 499.
- **ಜಾರ್ನ್ ಹೆಟ್ನ.,** ಪೊಲಿಟಿಕಲ್ ಎಕಾನಮಿ ಆಫ್ ಇನ್‌ಡೈರೆಕ್ಟ್ ರೂಲ್ : ಮೈಸೂರು, 1881–1947, (ನವದೆಹಲಿ, 1978), ಪು. 1.30.
- **ದೇಸಾಯಿ ಎ. ಆರ್.,** ಸೂಫಿಸೆಂಟ್ ಸ್ಟ್ರಗಲ್ಸ್ ಇನ್ ಇಂಡಿಯಾ (ನವದೆಹಲಿ, 1982), ಪು–2–4.
- **ಜೋಶಿ ಜಿ. ವಿ.,** ಟೆನೆಂಟ್ಸ್ ಮೂವ್‌ಮೆಂಟ್ಸ್,ಲ್ಯಾಂಡ್ ಲೆಜಿಸ್ಲೇಶನ್ ಅಂಡ್ ಅಗ್ರೇರಿಯನ್ ಚೇಂಜ್ : ದಿ ಕೇಸ್ ಅಫ್ ನಾರ್ತ್ ಕರ್ನಾಟಕ (ಮಂಗಳೂರು, 1985) ಪು. 310–323.
- **ದೇಸಾಯಿ ಎ. ಆರ್.,** ಅದೇ, ನಂ9, ಪು189–194.
- **ಕ್ಯಾಥಲೀನ್ ಗಾಫ್.,** ಇಂಡಿಯನ್ ಫೆಸೆಂಟ್ ಅಪ್ರೈಸಿಂಗ್, (ನವದೆಹಲಿ, 1982), ಪು–189–196.
- **ಕಡಿದಾಳ್ ಮಂಜಪ್ಪ.,** ಕಾಗೋಡು ಚಳವಳಿ ಸಂಪುಟ, ಗೇಣಿ ರೈತರ ಬಗ್ಗೆ ಸರ್ಕಾರದ ಸಹಾನುಭೂತಿ ಇರಲಿಲ್ಲ, (ಶಿವಮೊಗ್ಗ 2002), ಪು–74–75
- **ವಿಧಾನಸಭಾ ನಡವಳಿಗಳು,** ಸಂಪುಟ IX, ರಾಜ್ಯಪತ್ರಾಗಾರ, (ಬೆಂಗಳೂರು, 1953), ಪುಟ–1536–1537.
- **ರಾಜಶೇಖರ್ ಜಿ.,** ಅದೇ, ನಂ.6, ಪು1–152–153.
- **ತಂಬಂಡ ವಿಜಯ್ ಪೂಣಚ್ಚ.,** ರೈತ ಚಳುವಳಿಗಳು, ಕನ್ನಡ ವಿಶ್ವವಿದ್ಯಾಲಯ, (ಹಂಪಿ, 1999), ಪು–12–13.
- **ವಿಧಾನಸಭಾ ನಡವಳಿಗಳು, ಸಂ.** XXXII, (1-6), 31–1–1981, ಪು–114–129.


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಕುರಿತು ಬಸವಣ್ಣನವರ ಚಿಂತನೆಗಳು

✍ **ಡಾ. ರಾಜು ಕೂಡಗಿ,** ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು ಕಲಘಟಗಿ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾಧಿಸುವ ಸಂಭ್ರಮದಲ್ಲಿ ಸಮಾಜೋದ್ದಾರದ ಬಗ್ಗೆ ತೀವ್ರ ಉಪೇಕ್ಷೆ ಬೆಳೆದಿದ್ದಂತಹ ಕಾಲದಲ್ಲಿ ಸಮಾನತೆ ಮತ್ತು ಸಾಮಾಜಿಕ ಕಾಳಜಿಯ ತತ್ವಗಳನ್ನು ಪ್ರತಿಪಾದಿಸುತ್ತಾ ಅಹಿಂಸಾತ್ಮಕ ಕ್ರಾಂತಿಯೊಂದರ ಹರಿಕಾರನಾಗಿ **'ತನಗೆ ಸ್ವಲ್ಪ ಸಮಾಜಕ್ಕಾಗಿ ಸರ್ವಸ್ವ'** ಎಂಬ ತತ್ವವನ್ನು ಮನಸಾರೆ ಒಪ್ಪಿಕೊಂಡು ಆ ದಿಸೆಯಲ್ಲಿ ಕಾರ್ಯ ಪ್ರವೃತ್ತರಾದ ವಿಶ್ವಗುರು ಮಾಹಾ ಮಾನವತಾವಾದಿ ಸಮಾನತೆಯ ಹರಿಕಾರರಾಗಿ ಶ್ರೇಷ್ಠ ಚೇತನರಾಗಿ ಪ್ರಕಾಶಿಸಲ್ಪಟ್ಟವರು ಬಸವಣ್ಣನವರು.

ಸಮಾಜದಲ್ಲಿ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ ಸಮಸ್ಥಿತಿಯನ್ನು ತರಲು ನಡೆಸಿದ ಜನಪರ ಆಂದೋಲನ ನಮ್ಮ ನಾಡಿನ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಕ್ರಾಂತಿಯಾಗಿದೆ. ಇವರು ಸಮಾಜದಲ್ಲಿ ಇರುವ ವಿವಿಧ ಸ್ಥರಗಳ ಜನತೆಯನ್ನು ಅದರಲ್ಲಿಯೂ ದೀನರು- ದಲಿತರು, ಅಸ್ಪೃಶ್ಯರು, ಮಹಿಳೆಯರು, ಕಾರ್ಮಿಕರು ಬೀದಿಗಿಳಿಯುವಂತೆ ಮಾಡಿ ನಡೆಸಿದ ಈ ಆಂದೋಲನವು 21 ನೇ ಶತಮಾನದಲ್ಲಿ ಆಶ್ಚರ್ಯಪಡುವಂತಾಗಿದೆ. ಸ್ತ್ರೀ ಪುರುಷ ಸಮಾನತೆ ಭಾರತೀಯ ಪರಂಪರೆಯಲ್ಲಿ ಕೇವಲ ವೇದಗಳ ಕಾಲಕ್ಕೆ ಬಂದು ಹೋದ ಒಂದು ಮೌಲ್ಯವಲ್ಲ ಎಂದು ನೆನಪಿಸಿದವರು ಬಸವಣ್ಣನವರು.

**ಬಸವ ತತ್ವಗಳು**
↓
**ಸಮಾನತೆ ತತ್ವ** | **ಕಾಯಕ ತತ್ವ** | **ದಾಸೋಹ ತತ್ವ**

ಬಸವ ಯುಗದ ಪೂರ್ವದಲ್ಲಿದ್ದ ಆಚಾರ ವಿಚಾರಗಳಿಂದ ಕೂಡಿದ ಅನಿಷ್ಟ ಜೀವನ ಪದ್ಧತಿಯಿಂದ ಅಂದಿನ ಸಮಾಜಿಕ ಸಂಧಿಗ್ದ ಸಂದರ್ಭದಲ್ಲಿ ಈ ತತ್ವಗಳನ್ನು ಪ್ರಚುರಪಡಿಸುವ ಬಸವಣ್ಣನವರ ತುಡಿತ ಅಂದಿನ ಕಾಲಕ್ಕೆ ಬಹು ಮುಖ್ಯವಾಗಿತ್ತು. ಈ ಸಾಧನೆಗಾಗಿ ಅವರು ತಮ್ಮ ವಚನಗಳನ್ನೆ ತಮ್ಮ ಹೋರಾಟದ ಅಸ್ತ್ರಗಳನ್ನಾಗಿ ಪ್ರಯೋಗಿಸಿ ಯಶಸ್ವಿಯಾದರು.

## ಸಮಾನತೆ

ಸಮಾನತೆಯ ಮೂಲ ಮಂತ್ರ **'ಕಾಯಕ'** ಏಕೆಂದರೆ ಅಂದಿನ ವೃತ್ತಿ ಆಧಾರಿತ, ಜಾತಿ ವ್ಯವಸ್ಥೆಯಲ್ಲಿನ ಮೇಲು-ಕೀಳು ಎಂಬ ಭಾವನೆಯನ್ನು ಹೋಗಲಾಡಿಸಿ ಎಲ್ಲಾ ವೃತ್ತಿಗಳಿಗೂ ಸಮಾನ ಗೌರವವನ್ನು ಕಲ್ಪಿಸಿಕೊಡುವುದಕ್ಕೋಸ್ಕರ **"ಕಾಯಕವೇ ಕೈಲಾಸ"** ಎಂಬ ಮಹಾ ಮಂತ್ರವನ್ನು ಭೋದಿಸಿದರು. ವೈಜ್ಞಾನಿಕವಾಗಿ ನೋಡಿದಾಗ ಪೃಥ್ವಿಯು ಸೂರ್ಯನ ತಿರುಗುವ ಕಾಯಕ ಮಾಡುವುದು. ಸೂರ್ಯನು ಬೆಳಕನ್ನು ಕೊಡುವ ಕಾಯಕ ಮಾಡುವನು. ಹೀಗೆ ಪ್ರತಿಯೊಂದು ವಸ್ತುವನ್ನು ನೋಡಿದಾಗ ಈ ಬ್ರಹ್ಮಾಂಡವು ಕಾಯಕ ತತ್ವದ ಮೇಲೆ ನಿಂತಿದೆ. ಎಂಬುದನ್ನು ಜನಸಾಮಾನ್ಯರ ಮನಮುಟ್ಟುವ ರೀತಿಯಲ್ಲಿ ಬಸವಣ್ಣನವರ ಬೋಧನೆ ಇಂದಿಗೂ ಪ್ರಸ್ತುತವಾಗಿದೆ.

## ಬಸವ ಪೂರ್ವಯುಗದ ಸಮಾನತೆ

ಸಮಗ್ರ ಕನ್ನಡ ನಾಡಿನ ಸಂಸ್ಕೃತಿಕ ಚರಿತ್ರೆಯಲ್ಲಿ ಬಸವ ಪೂರ್ವಯುಗ ಎಂಬುದು ಪಥನ ವೈಭವದ ಕಾಲ, ರಾಜಸತ್ತೆ, ಮತಸತ್ತೆಗಳು ಸಾಮ್ರಾಜ್ಯವನ್ನು ನಿಯಂತ್ರಿಸುವ ಶಕ್ತಿಗಳಾಗಿ ಸಾಮಾನ್ಯ ಪ್ರಜೆಗಳು ರಾಜಸತ್ತೆಯ ಶೋಷಣೆಗೆ ಯುದ್ಧನಿರತರಾಗುವದು ಸುಂಕ ತೆರುವುದಕ್ಕಾಗಿ ನಾಲಿಗೆ ಸತ್ತು ದುಡಿದು ಬದುಕುವದು ಸರ್ವೇ ಸಾಮಾನ್ಯವಾಗಿತ್ತು.

ಪ್ರತಿಷ್ಠಿತ ಮತಧರ್ಮಗಳು ವಿಚಾರಶೂನ್ಯವಾಗಿ ಮುಗ್ಧರ ಶೋಷಣಾ ಮಾಧ್ಯಮವಾಗಿ ಆಚಾರ ಆಡಂಬರದಿಂದ ಕೂಡಿದ್ದು, ಅರ್ಥವಿಲ್ಲದ ಆಚರಣೆಗಳಲ್ಲಿ ತೊಡಗಿ ಹಗಲಿರುಳು ಧರ್ಮ, ಕರ್ಮ, ಪಾಪ ಪ್ರಜ್ಞೆಗಳಲ್ಲಿ ನಲುಗಿ ಮೇಲ್ವರ್ಗದಿಂದ ತುಳುಸಿಕೊಂಡು ನರಸತ್ತವರಂತೆ ಬದುಕುತ್ತಿದ್ದ ಕೆಳವರ್ಗದ ಶೋಷಿತ ಜನಾಂಗ .

ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಚತುವರ್ಣ ವ್ಯವಸ್ಥೆಯಲ್ಲಿ ಬಂದಿತವಾಗಿದ್ದರೂ ರಾಜವರ್ಗ, ಪ್ರಜಾವರ್ಗ, ಪುರೋಹಿತ ವರ್ಗ, ಭಕ್ತಿ ವರ್ಗ, ಮೇಲು ವರ್ಗ, ಕೀಳುವರ್ಗ, ಶ್ರೇಷ್ಠ-ಕನಿಷ್ಠ ವರ್ಗ ಎಂಬುವುದಾಗಿ ಹೋಳು ಹೋಳಾಗಿ ವಿಭಜಿಸಿದ್ದು ಒಂದೆಡೆಯಾದರೆ ಈ ಸಮಾಜದ ಕಟ್ಟಕಡೆಯ ಹೆಣ್ಣುಮಗಳು ಎಲ್ಲಾ ವರ್ಗದ ಪುರುಷ ಸಮೂಹದಿಂದ ಶೋಷಣೆಗೊಳಗಾಗಿ ಅರ್ಥರಹಿತ ರಾಕ್ಷಸ, ಪಶು-ಪಕ್ಷಿ, ಪ್ರಾಣಿಗಳ ಸ್ಥಾನಮಾನನೀಡಿ ಅಮಾನವೀಯ ಬದುಕು ಮತ್ತೊಂದೆಡೆಗೆ ಇಂತಹ ಪ್ರಕ್ಷುಬ್ದ ಸ್ಥಿತಿಯ ಸಂಧರ್ಬದಲ್ಲಿ ನವೀನತೆಯ ಸಾಹಸ ಬುದ್ಧಿಯಿಂದ ಶತಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದ ಸ್ತ್ರೀಸಮುದಾಯದ ಧ್ವನಿಯಾದವರು ಬಸವಾದಿ ಶರಣರು ಹೆಣ್ಣು ಮಾಯೆಯಲ್ಲ ಎಂದು ಪ್ರತಿಪಾದಿಸುತ್ತಾ ಲಿಂಗಭೇದದ ವಿರುದ್ಧ ಸಿಡಿದೇಳುವ ಮೂಲಕ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದಿಸಿ ಸಮಾಜಕ್ಕೆ ದಾರಿ ತೋರಿ ಕೆಡಕನ್ನು ತಿದ್ದಬಲ್ಲ ಮಹಾವ್ಯಕ್ತಿಯಾಗಿ ಹೊರಹೊಮ್ಮಿದವರು ಬಸವಣ್ಣನವರು.

## ಸಮಾನತೆಯ ಪ್ರತಿಪಾದನೆ

ಸಮಾಜಿಕ ಸಮಾನತೆ ಎನ್ನುವುದು ಬಸವಣ್ಣನವರ ಒಂದು ಮುಖ್ಯ ಸಂದೇಶವಾಗಿದೆ. ಏಕೆಂದರೆ ಅಂದಿನ ಹಿಂದೂ ಧರ್ಮದ ಸಮಾಜವು ಅಂಧಕಾರವೆಂಬ ಅಜ್ಞಾನದ ಕೋಪದಲ್ಲಿ ಮುಳುಗಿಹೋಗಿತ್ತು. ಲಿಂಗ, ವರ್ಗ, ಜಾತಿ, ವೃತ್ತಿ ಎಲ್ಲಡೆಯಲ್ಲಿಯೂ ಅಸಮಾನತೆ ತಾಂಡವವಾಡುತ್ತಿತ್ತು. ಈ ಸಂದರ್ಭದಲ್ಲಿ ಬಸವಣ್ಣನವರ ವ್ಯಕ್ತಿಪರ ಚಿಂತನೆಗಿಂತ ಸಮಾಜಪರ ಚಿಂತನೆ ಬಹು ಮುಖ್ಯವಾದದ್ದು ಎಂಬ ಸತ್ಯವನ್ನು ಈ ಸಮಾಜಕ್ಕೆ ತಿಳಿಸಲು ಕಂಕಣಬದ್ಧರಾದರು. ಜಾತಿ ಸಮಾನತೆ, ವೃತ್ತಿ ಸಮಾಜನತೆ, ಹಾಗೂ ಲಿಂಗ ಸಮಾಜನತೆಯ ಅಂಶಗಳು ಅವರ ಸಮಾಜಿಕ ಸಮಾನತೆಯ ಚಿಂತನೆಯಲ್ಲಿ ಮೇಳೈಸಿವೆ. ಮಾನವೀಯ ಮೌಲ್ಯಕ್ಕೆ ಪುನರ್ಜೀವ ಕೊಟ್ಟವರು ಅವರೇ ಆಗಿದ್ದಾರೆ., ಕಾಯಕ ಕೈಗೊಳ್ಳುವದಕ್ಕೆ ಶಿವತತ್ವ ಸಾಧನೆಗೆ ಲಿಂಗ ದೀಕ್ಷೆಗೆ ಜಂಗಮದಾಸೋಹಕ್ಕೆ, ಹೆಣ್ಣಾದರೇನು ? ಗಂಡಾದರೇನು ? ಎಂದು ಪ್ರಶ್ನಿಸುವ ಅವರು ಸ್ತ್ರೀ ಸಾಮರ್ಥ್ಯಕ್ಕೆ ಒಂದು ಹೊಸ ಆಯಾಮ ನೀಡಿದರು. ಇದು ಅವರ ಅಮೋಘ ಸಾಧನೆಯೇ ಆಗಿದೆ.

UGC CARE APPROVED

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಬಸವಣ್ಣನವರು ಪ್ರತಿಪಾದಿಸಿರುವ ಸಮಾನತೆಯ ವಿವಿಧ ಆಯಾಮಗಳು:

**ಅ. ಸಾಮಾಜಿಕ ಸಮಾನತೆ :** ಬಸವಣ್ಣನವರ ಜೀವನ ಮತ್ತು ಸಾಧನೆಗಳನ್ನು ಗಮನಿಸಿದಾಗ ಅವರೊಬ್ಬ ಮಹಾ ಪುರುಷರು ಮಾತ್ರವಾಗಿರದೇ ಯುಗ ಪುರುಷರಾಗಿಯೂ ಕಂಡುಬರುತ್ತಾರೆ. ಅವರ ಕನಸಾದ ಸಮಾಜಿಕ ಸಮಾನತೆ, ಲಿಂಗ ಸಮಾನತೆ, ಮತ್ತು ಜಾತ್ಯಾತೀತತೆಯ ತತ್ವಗಳ ಆಧಾರದ ಮೇಲೆ ರಚಿತವಾದುದು. ಅವರು ಬೋಧಿಸಿದ ತತ್ವಾನುಷ್ಠಾನದಲ್ಲಿ ಜಾತಿ, ಮತ, ಉದ್ಯೋಗ, ಲಿಂಗ, ವಯಸ್ಸು ಯಾವುದು ಅಡ್ಡಿಯಾಗಕೂಡದು ಅಂತಹ ನೈತಿಕ ಜೀವನದ ಸಮಾಜಿಕ ಸಮಾನತೆಯನ್ನು ಸಾಧಿಸುವ ಸಾಹಸ ಅವರದು. ಅವರ ಬೋಧನೆಯಲ್ಲಿ ಕಾಣುವ ಅಂಶಗಳೆಂದರೆ **"ಕಾಯಕವೇ ಕೈಲಾಸ"** ಎಂಬ ಉದ್ಯೋಗ ತತ್ವ ಸ್ಪೃಶ್ಯ ಅಸ್ಪೃಶ್ಯರ ನಡುವೆ ಹಾಗೂ ಸ್ತ್ರೀ–ಪುರುಷರ ನಡುವೆ ಭೇದವೆನಿಸದ ಸಮಾನತೆಯ ತತ್ವವಾಗಿದೆ. ದುರ್ಬಲರ ಶೋಷಣೆಯಲ್ಲಿ ತೊಡಗಿದ ಉನ್ನತವರ್ಗದವರನ್ನು ಕಂಡು ಕೆರಳಿದ ಬಸವಣ್ಣನವರು

**"ಏನಯ್ಯಾ ಎದುರು ನುಡಿದಂತೆ ನಡೆಯರು ಇದೆಂತಯ್ಯ?**
**ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ ! ಎಂದು ಉದ್ಗರಿಸುತ್ತಾರೆ.**

**"ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ,**
**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ,**
**ಕರ್ಣನಲ್ಲಿ ಜನಿಸಿದವರುಂಟೆ ಜಗದೊಳಗೆ ?**
**ಇದು–ಕಾರಣ ಕೂಡಲ ಸಂಗಮದೇವಾ ಲಿಂಗಸ್ಥಳವನರಿದವನೆ ಕುಲಜನು"**

ಎಂದು ಜಾತಿ–ಮತ–ವರ್ಗ–ವರ್ಣಗಳು ಕುರಿತು ವೈಚಾರಿಕನಾಗಿ ಆಲೋಚಿಸಿದರು ಹಾಗೂ ಅರ್ಥೈಸಿದರು. ಸ್ಪೃಶ್ಯ ಅಸ್ಪೃಶ್ಯರ ನಡುವೆ, ಮೇಲ್ಜಾತಿ– ಕೆಳಜಾತಿಗಳ ನಡುವೆ ಬೆಳೆದು ಬಂದಿದ್ದ ಬೃಹತ್ ಗೋಡೆಗಳನ್ನು ಒಡೆದು ಅವರೆಲ್ಲರನ್ನು ಶರಣತತ್ವದ ನೆಲೆಯಲ್ಲಿ ಒಂದುಗೂಡಿಸುವ ಯತ್ನ ಬಸವೇಶ್ವರರ ಪ್ರಮುಖ ಚಿಂತನೆಯಾಗಿತ್ತು. ಸಾಂಪ್ರದಾಯಕವಾಗಿ ಮೂಲೆಗುಂಪಾಗಿ, ಉಳಿದಿದ್ದ ಸ್ತ್ರೀಯರನ್ನು ಉಚ್ಚಸ್ತರಕ್ಕೇರಿಸಿ ಲಿಂಗ ಸಮಾನತೆಯನ್ನು ಸಾಧಿಸುವ ಅವರ ಪ್ರಯತ್ನ ಅವಿಸ್ಮರಣೀಯವಾಗಿದೆ.

## ಬ. ಜಾತಿ ಸಮಾನತೆ

ಜಾತಿ–ಮತ–ಭೇದಗಳ ಕಂಡಿಸಿ ಸಾಮಾಜಿಕ ಸಮಾನತೆಯ ದೃಷ್ಟಿಯಿಂದ ಬಸವಣ್ಣನವರು ಸ್ಥಾಪಿಸಿರುವ ಅನುಭವ ಮಂಟಪವು ಸಮಾಜದಲ್ಲಿನ ಎಲ್ಲಾ ಜಾತಿ ಜನಾಂಗಗಳಲ್ಲದೇ ಅಸ್ಪೃಶ್ಯರಾಧಿಯಾಗಿ ಎಲ್ಲರೂ ಭಾಗಿಯಾಗಿ ಶರಣತ್ವದ ಕಡೆಗೆ ಸಮಾಜವನ್ನು ಒಯ್ಯುವ ಕಾರ್ಯ ಶ್ಲಾಘನೀಯವಾಗಿದೆ. ಅದರಂತೆ ಅಸ್ಪೃಶ್ಯ ಹರಳಯ್ಯನ ಮಗನಿಗೂ ಮತ್ತು ಬ್ರಾಹ್ಮಣರ ಮಧುವರಷನ ಮಗಳಿಗೂ ಬಸವಣ್ಣನವರು ಅಂತರ್ ಜಾತಿ ವಿವಾಹ ಮಾಡಿಸಿದ್ದು ಅಂದಿನ ಮತ್ತು ಇಂದಿನ ಬಹುದೊಡ್ಡ ಸಮಾನತೆಯ ಕ್ರಾಂತೀಯೇ ಆಗಿದೆ. ಆದರೆ ಈ ಇದನ್ನು ನಮ್ಮ ಸಮಾಜ ತಪ್ಪಾಗಿ ಗೃಹಿಸಿಕೊಂಡು ರಕ್ತ ಕ್ರಾಂತಿಯನ್ನು ಮಾಡಿದ್ದು ಅಸಹನೀಯವಾಗಿದೆ. ಎಂದೇ ಹೇಳಬಹುದು.

**"ದೇವ, ದೇವಾ ಬಿನ್ನಹನ ಅವಧಾರು:**
**ವಿಪ್ರ ಮೊದಲು, ಅಂತ್ಯಜ ಕಡೆಯಾಗಿ**
**ಶಿವಭಕ್ತರಾದವರನೆಲ್ಲವೊಂದೆ ಎಂಬೆ**
**ಹಾರುವ ಮೊದಲು, ಶ್ವಪಚ ಕಡೆಯಾಗಿ**
**ಭವಿಯಾದವರನ್ನೆಲರನೊಂದೆ ಎಂಬೆ**
**ಹೀಗೆಂದು ನಂಬುದೆನ್ನ ಮನ**
**ಈ ನುಡಿದ ನುಡಿಯೊಳಗೆ ಎಳ್ಳಮೊನೆಯಷ್ಟು ಸಂದೇಹವುಳ್ಳಡೆ**
**ಹಲ್ಲುದೊರೆ ಮೂಗ ಕೊಯಿ, ಕೂಡಲಸಂಗಮದೇವಾ".**

ಹೀಗೆ ವ್ಯಕ್ತಿ ಸಮಾಜಗಳ ನಡುವಣ ಹಾಗೂ ವ್ಯಕ್ತಿ ಮತ್ತು ವ್ಯಕ್ತಿಗಳ ನಡುವಣ ಸಂಬಂಧದ ಗಟ್ಟಿತನಕ್ಕಾಗಿ ಇಡೀ ಮಾನವ ಸಮುದಾಯವನ್ನು ಎರಡು ಗುಂಪುಗಳಾಗಿ ಪರಿಭಾವಿಸಿದರು.

ಅಂಧಕಾರದ ಕಗ್ಗತ್ತಲೆಯಲ್ಲಿ ಮುಳುಗಿ ಹೋಗಿದ್ದ ಸಮಾಜವನ್ನು ಶ್ರೀ ಬಸವೇಶ್ವರರು ತಮ್ಮ ನಿರ್ಮಲಾಂತ:ಕರಣದಿಂದ ಮೂಡಿಬಂದ ನುಡಿಗಳಾದ ವಚನಗಳು, ಭಕ್ತನ ಆಸ್ತಿಕ್ಯ, ಮಹೇಶನ ವಿರಾಗ, ಪ್ರಸಾಧೀಯ ಪ್ರಸನ್ನತೆ, ಪ್ರಾಣಲಿಂಗೆಯ ಅನುಸಂಧಾನ, ಶರಣರ ವಿಕಳಾವಸ್ಥೆ ಹಾಗೂ ಐಕ್ಯನ ಅಖಂಡೈಕರಸಸಿದ್ಧಿಗಳನ್ನು ಪ್ರತಿಬಿಂಬಿಸಿದವು. ಇವುಗಳ ಸೊಗಸು–ಸೌಂದರ್ಯ, ಅರ್ಥ–ಗಾಂಭಿರ್ಯಗಳನ್ನು ವರ್ಣಿಸಲು ಅಸಾಧ್ಯ. ಅವರ ಮಾತು ಮಂತ್ರಗಳು, ಅವುಗಳಲ್ಲಿ ಅತ್ಮಾನುಭೂತಿಯ ದಿವ್ಯಗಂಧ ತುಂಬಿದೆ. ಈ ಎಲ್ಲಾ ಅಂಶಗಳು ಜನ ಜೀವನಕ್ಕೆ ಒಂದು ಶಿಸ್ತುಬದ್ಧ ಜ್ಞಾನವನ್ನು ಒದಗಿಸಿದವು. "ನಾವೆಲ್ಲಾ ಒಂದು" ಎಂಬ ಭಾವನೆಯನ್ನು ಮೂಡಿಸಿತು. ಆದ್ದರಿಂದ ಶ್ರೀ ಬಸವೇಶ್ವರರು

**"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ**
**ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ**
**ಕೂಡಲಸಂಗಮದೇವಾ ಇವ ನಿಮ್ಮ ಮನೆಯ ಮಗನೆಂದೆನಿಸಯ್ಯ..**

ಎಂದು ಹೇಳಿದ ವಚನದಲ್ಲಿ ಮೇಲ್ವರ್ಗದ ದಬ್ಬಾಳಿಕೆಗೆ ಒಳಗಾಗಿ ಶತಶತಮಾನಗಳಿಂದ ನೋವನ್ನು ಅನುಭವಿಸುತ್ತಾ ಮೇಲೇಳಲಾರದೆ ನೆಲದಮೇಲೆಯೇ ಬಿದ್ದ ಸಹಸ್ರ ಸಹಸ್ರ ಸಂಖ್ಯೆಯ ಜನರನ್ನು ಎಚ್ಚರಿಸಿ ಆ ಮೂಲಕ ಸಮಾನತೆಯ ಸಮಾಜವನ್ನು ಕಟ್ಟಲು ಶರಣರಿಂದ ಸೃಷ್ಟಿಗೊಂಡ ಶರಣ ಸಂವಿಧಾನವೇ ಅನುಭವಮಂಟಪ. ಈ ಅನುಭವಮಂಟಪದ ಮೂಲಕ ಜಾತಿ, ಮತ, ಪಂಥ, ವರ್ಣ, ಲಿಂಗ ಎನ್ನದೆ ಪ್ರತಿಯೊಬ್ಬ ಭಾಗವಹಿಸುವಂತೆ ಮಾಡಿ ಅವರ ವಿಚಾರಧಾರೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶಮಾಡಿಕೊಟ್ಟರು. ಜಾತಿಯ ಆಧಾರದ ಮೇಲೆ ವ್ಯಕ್ತಿಯನ್ನು ಕಾಣುವುದಲ್ಲ ಅವರ ಜ್ಞಾನ, ವಿಚಾರಧಾರೆ ಮತ್ತು ಅವರ ಕಾಯಕದ ಮೇಲೆ ಅವರನ್ನು ಕಾಣಬೇಕು ಎಂದು ಸಾರಿದರು ಇದನ್ನು ನೋಡಿದರೆ ವಚನಕಾರರು ಸಮಾನತೆಗೆ ಕೊಟ್ಟ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

## ಕ. ಲಿಂಗ ಸಮಾನತೆ

ಬಸವೇಶ್ವರರಿಗೂ ಮುಂಚಿನ ಕಾಲದ ಭಾರತೀಯ ಸಮಾಜದಲ್ಲಿ, ಅದರಲ್ಲೂ ಸ್ಮೃತಿಗಳ ಕಾಲಾನಂತರದಲ್ಲಿ ಸ್ತ್ರೀಯರ ಸ್ಥಾನಮಾನಗಳು ಅಧೋಗತಿಗಿಳಿದವು. ಪುರುಷನ ಶ್ರೇಷ್ಠತೆ–ಸ್ತ್ರೀಯ ಹೀನತೆ ಇದು ಒಪ್ಪಿಕೊಂಡು ಬಂದ ಸಾಮಾಜಿಕ ತತ್ವವಾಗಿತ್ತು "ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ "ಎಂಬ ವಾದವು ಕೇಳಿಬರುತ್ತಿತ್ತು. ಇಂತಹ ಹಿನ್ನೆಲೆಯಲ್ಲಿ ಬಸವೇಶ್ವರರು ಸ್ತ್ರೀ–ಪುರುಷರ ಸಮಾನತೆಯ ಘೋಷಣೆಯನ್ನು ಮೊಳಗಿಸಿದುದು ಇಂದು ಪ್ರಚಲಿತವಿರುವ ಸ್ತ್ರೀಸ್ವಾತಂತ್ರ್ಯ ಅಥವಾ ಸ್ತ್ರೀ–ವಿಮೋಚನಾ ಚಳುವಳಿಗೆ ಬಸವೇಶ್ವರರು ಅಂದೇನಾಂದಿಹಾಡಿದ್ದರು. ಸ್ತ್ರೀಯರ ಧಾರ್ಮಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯದ ಬಗ್ಗೆ ಒತ್ತುನೀಡಿದ ಬಸವೇಶ್ವರರು ತಮ್ಮ ಒಡ್ಡೊಲಗದಲ್ಲಿ ಸ್ತ್ರೀ–ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು ಕಲ್ಪಿಸಿದ್ದರು.

ಬಸವಣ್ಣನವರ ಸಮಕಾಲಿನ ಶರಣರು ಏಕಕಾಲಕ್ಕೆ ಲಿಂಗಭೇದ, ಜಾತಿಭೇದದ ನೀತಿಯನ್ನು ಅಲ್ಲಗಳಿಯೂತ್ತಾ

**"ಮೊಲೆ ಮೂಡಿ ಬಂದರೆ ಹೆಣ್ಣೆಂಬರು,**
**ಗಡ್ಡ ಮೀಸೆ ಬಂದರೆ ಗಂಡೆಂಬರು,**
**ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥಾ"**

ಎಂಬುದಾಗಿ ಹೇಳುತ್ತಾ ಸ್ತ್ರೀ–ಪುರುಷರೀರ್ವರಲ್ಲಿ ಮಧ್ಯ ಕೇವಲ ಜೈವಿಕ ವ್ಯತ್ಯಾಸವಿದೆಯೆಂದು ನಮಗಿಗಾಗಲೆ ಗೋತ್ತಾಗಿದೆ. ಸಮಾನವಾದ

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆತ್ಮಶಕ್ತಿಯೂ ಅವಿನಾಶೀಯಾಗಿರುವಂತೆ ಅಭೇದ ಸ್ವರೂಪಿಯೂ ಹೌದೆಂಬ ಶರಣರ 'ಆತ್ಮ' ವಿಶ್ಲೇಷಣೆಯ ವಿಚಾರವು ಸ್ತ್ರೀ ಸಂಬಂಧಿಯಾದ ಅಪೂರ್ವದಲ್ಲಿರುವ ಅನೇಕ ತಪ್ಪು ಗ್ರಹಿಕೆಗಳನ್ನು ನಿವಾರಿಸಿ, ಸಾಮೂಹಿಕ ಮಟ್ಟದಲ್ಲಿ ಅರುಹಿ, ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ಜಾಗೃತಿಯನ್ನು ಮೂಡಿಸಿರುವ ಬಸವಣ್ಣನವರ ರೀತಿಯನ್ನು ನೋಡಿದರೆ ಅವರು ಲಿಂಗ ಸಮಾನತೆಗೆ ಕೊಟ್ಟ ಪ್ರಾಮೂಖ್ಯತೆ ತಿಳಿದು ಬರುತ್ತದೆ.

## ಡ. ಧಾರ್ಮಿಕ ಸಮಾನತೆ

**"ಮಾನವ ಧರ್ಮಕ್ಕೆ ಜಯವಾಗಲಿ"** ಎಂದು ಬಾಯಿ ಮಾತಲ್ಲಿ ಹೇಳುತ್ತಲೇ ಮಾನವರ ಮೇಲೆ ಸವಾರಿ ಮಾಡುವದು ಮಾನವೀಯತೆ ಎನಿಸದು. ಅದು ಮಾನವತೆಗೆ ಬಗೆದ ಅಪಚಾರ ಎಂದು ಹೇಳದೇ ವಿಧಿ ಇಲ್ಲ. **'ಎನಗಿಂತ ಕಿರಿಯರಿಲ್ಲ, ಶಿವ ಭಕ್ತರಿಗಿಂತ ಹಿರಿಯರಿಲ್ಲ'** ಎಂಬ ಉಕ್ತಿ ತಮ್ಮ ಕಿಂಕರತೆಯಿಂದ ಜನ ಸಾಮಾನ್ಯರಲ್ಲಿ ತುಳಿತಕ್ಕೊಳಗಾದವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ ಮಾನವ ಕಲ್ಯಾಣಕ್ಕೆ ಅವಿರತವಾಗಿ ಶ್ರಮಿಸಿದರು.

**"ಮೃತ್ಯುಲೋಕವೆಂಬುದು ಕರ್ತಾರನ ಕಮ್ಮಟವಯ್ಯ !**
**ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ**
**ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಕೂಡಲಸಂಗಮದೇವಾ"**

ಬಸವಣ್ಣನವರ ದೃಷ್ಟಿಯಲ್ಲಿ ಲೋಕವೇ ಸೃಷ್ಟಿಕರ್ತನ ಠಂಕಶಾಲೆ. ಇಲ್ಲಿರುವ ಜೀವಿಗಳೆಲ್ಲಾ ಅವನೇ ತಯಾರಿಸಿದ ನಾಣ್ಯಗಳಾದರೂ ಈ ನಾಣ್ಯಗಳು ಚಲಾವಣೆಗೆ ಬರಲು ಅವನ ಕೃಪಾ ಮುದ್ರೆಯ ಒಪ್ಪಿಗೆ ಬೇಕು ಅಂದರೆ ಪರಶುದ್ಧವಾದ ಜೀವನ ನಡೆಸಿದರೆ ಎಲ್ಲಡೆಯೂ ಸಲ್ಲುತ್ತಾರೆ ಎಂದಿದ್ದಾರೆ.

**"ದಯವಿಲ್ಲದ ಧರ್ಮದಾವುದಯ್ಯ,**
**ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲಿ !**
**ದಯವೇ ಧರ್ಮದ ಮೂಲವಯ್ಯಾ**
**ಕೂಡಲಸಂಗಯ್ಯನಂತ್ತಲ್ಲದೊಲ್ಲನಯ್ಯ"**

ಮಾತು, ಮನಸ್ಸು ಮತ್ತು ಕರ್ಮಗಳಿಂದ ಯಾವ ಜೀವಿಗೂ ನೋವನ್ನುಂಟು ಮಾಡದಿರುವುದು. ಸಮಾಜದಲ್ಲಿರುವ ವ್ಯಕ್ತಿ ದುಃಖದಲ್ಲಿರುವುದನ್ನು ಕಂಡು ಮರಗುವುದಲ್ಲದೇ ಅವರ ದುಃಖಗಳನ್ನು ದೂರಮಾಡಲು ತಮ್ಮ ಶಕ್ತಿಯನ್ನು ಮೀರಿ ಪ್ರಯತ್ನಿಸುವುದು 'ದಯೆ' ಎಂದೆನಿಸುವುದು. ಇಂಥಹ ದಯಾಗುಣವು ಧರ್ಮಕ್ಕೆ ಆಧಾರವಾಗಿದೆ. ದಯೆಯಿಲ್ಲದ ಧರ್ಮವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಮನುಷ್ಯನು ಮಾನಸಿಕವಾಗಿ ನೆಮ್ಮದಿಯನ್ನು ನೆಮ್ಮದಿಯನ್ನು ಹೊಂದಲು ಸಾಧ್ಯವಿಲ್ಲ. ಆದ್ದರಿಂದ ಬದುಕಿನಲ್ಲಿ ಸುಖಶಾಂತಿಯನ್ನು ಬಯಸುವವರು ತಮ್ಮ ಹೃದಯವನ್ನು ದಯೆಯಿಂದ ತುಂಬಿಕೊಳ್ಳಬೇಕು. ಇತರರ ದುಃಖಗಳನ್ನು ಕಂಡು ಮನಸ್ಸು ಕರಗಬೇಕು. ಇತರರ ಸುಖವನ್ನು ಕಂಡು ಮನಸ್ಸು ಪ್ರಸನ್ನವಾಗಬೇಕೆಂದು ವಚನಕಾರರು ತಮ್ಮ ವಚನಗಳಲ್ಲಿ ಸಾರಿಸಾರಿ ಹೇಳಿದ್ದಾರೆ.

## ಡ. ಆರ್ಥಿಕ ಸಮಾನತೆ

ಸಾಮಾಜಿಕ ಸಮಾನತೆಗೆ ಮೂಲವಾದುದು ಆರ್ಥಿಕ ಸಮಾನತೆ ಎಂದು ನಂಬಿದ್ದ ಬಸವೇಶ್ವರರು ನೀನಗೆ ಅಗತ್ಯವಿದ್ದುದಕ್ಕಿಂತ ಹೆಚ್ಚಿನದೆನ್ನನ್ನು ಎಂಬ ಸರಳ ಪರಿಹಾರವನ್ನು ಸೂಚಿಸಿದರು, **"ಗುರುವಿಗೆ ತನುದಾಸೋಹ, ಲಿಂಗಕ್ಕೆ ಮನದಾಸೋಹ, ಜಂಗಮಕ್ಕೆ ಧನ ದಾಸೋಹ"** ಮಾಡಬೇಕೆಂಬುದು ಶರಣ ಸಿದ್ಧಾಂತವಾಗಿದೆ ಶರಣ ಸಮಾಜದಲ್ಲಿ ಯಾರು ಶ್ರೀಮಂತರಿಲ್ಲ, ಯಾರು ದರಿದ್ರರಿಲ್ಲ, ಏಕೆಂದರೆ ಎಲ್ಲರೂ ತಮ್ಮ ಜೀವನ ನಿರ್ವಹಣೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತಮ್ಮ ಉತ್ಪಾದನೆಯಿಂದ ಸ್ವೀಕರಿಸಬೇಕೆಂಬ ಸರಳ ಸೂತ್ರವನ್ನು ಹೇಳಿದ್ದಾರೆ.

**"ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆಬಿಲಿವರಯ್ಯಾ,**
**ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ**
**ಮೊಲನಿಂದ ಕರಕಷ್ಟನರನ ಬಾಳುವೆ"**

ದೇಹದಿಂದ ಪ್ರಾಣವರ್ಜಿತವಾದ ಮೇಲೆ ದೇಹಕ್ಕೆ ಸ್ಥಾನಮಾನಗಳಿಗೆ ಯಾವ ಅರ್ಥವು ಇಲ್ಲ ಬೆಲೆಯೂಇಲ್ಲ ಮಾನವ ತನಗಾಗಿ ತನ್ನವರಿಗಾಗಿ ಎಂಬ ಭ್ರಮೆಯಲ್ಲಿ ಹುಚ್ಚುಮೋಹದಲ್ಲಿ ಗಳಿಸಿ ಬೆಳೆಸಿ ಯಾರಿಗೂ ಅರಿಯದಂತೆ ನೆಲದಲ್ಲಿ ಹುದುಗಿಡುವ ಅರ್ಥಮೋಹವನ್ನು ಬಸವಣ್ಣನವರು ಕಟುವಾಗಿ ಖಂಡಿಸಿದ್ದಾರೆ

**"ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು ?**
**ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ ?"**

ಇಲ್ಲಿ ಬಸವಣ್ಣನವರು ಸಂಪತ್ತಿನ ಅಸಮಾನತೆಯ ಕುರಿತು ಹೇಳಿದ್ದಾರೆ. ಪ್ರಾಣಿಪಕ್ಷಿಗಳು ತಮಗೆ ದೊರಕಿರುವ ಆಹಾರವನ್ನು ಇತರ ಪ್ರಾಣಿಪಕ್ಷಿಗಳೊಂದಿಗೆ ಹಂಚಿಕೊಂಡು ತಿಂದು ನೆಮ್ಮದಿಯಿಂದ ಬಳುತ್ತವೆ ಆದರೆ ಮಾನವನು ಅತೀಯಾಗಿ ಗಳಿಸಿದರು ಇತರರಿಗೆ ಕೊಡದೆ ಸ್ವಾರ್ಥಿಯಾಗಿ ಕಷ್ಟಕರ ಜಿವನವನ್ನು ನಡೆಸುತ್ತಾನೆ

## ಇ. ಕಾಯಕ ಸಮಾನತೆ

**"ಸಕಲ ಜೀವಾತ್ಮರಿಗೆ ಲೇಸ ಬಯಸುವುದು"** ಶ್ರೀ ಬಸವೇಶ್ವರರ ಬದುಕಿನ ಪರಮಗುರಿ. 'ದಯವೇ ಧರ್ಮದ ಮೂಲ' ಎಂಬುದು ಅವರ ಜೀವನದ ಮಂತ್ರ ನಡೆ-ನುಡಿ ಸಾಮರಸ್ಯ ಸತ್ಯ ಶುದ್ಧಕಾರ್ಯ ಸದ್‌ವಿನಯ, ಮೃದು ವಚನ, ಅವರ ವ್ಯಕ್ತಿತ್ವದ ವಿಶಿಷ್ಠ ಲಕ್ಷಣ.

**"ಹೊತ್ತಾರೆಯದ್ದು ಅಗ್ಗವಣಿ ಪತ್ರೆಯ ತಂದು**
**ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ.**
**ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು?**
**ಹೊತ್ತು ಹೋಗದ ಮುನ್ನ ಮೃತ್ಯು ಒಯ್ಯುವ**
**ಮುನ್ನ ತೊತ್ತು ಕೆಲಸವಮಾಡು ಕೂಡಲಸಂಗಮದೇವ"**

ಬ್ರಾಹ್ಮಿ ಮೂಹೂರ್ತದಲ್ಲಿ ಎದ್ದು ಮಾಡುವ ಪೂಜೆ ಶ್ರೇಷ್ಠವಾದದ್ದು. ಹೊತ್ತು ಕಳೆಯುವ ಮುನ್ನವೆ ಮತ್ತು ಮೃತ್ಯು ಮುಟ್ಟುವದಕ್ಕೆ ಮೊದಲೇ ತ್ತುತ್ತು ಕೆಲಸವನ್ನು ಮಾಡಬೇಕು ಅಂದರೆ ಪೂಜೆಯ ಜೊತೆಗೆ ಕಾಯಕ ದಾಸೋಹಗಳು ಸೇರುತ್ತವೆ. ಒಟ್ಟಿನಲ್ಲಿ ಸಮಯವನ್ನು ವ್ಯರ್ಥಮಾಡದೇ ಸಾಧನೆಯಲ್ಲಿ ತೊಡಗಬೇಕೆಂಬುದು ಇಲ್ಲಿ ಹೇಳುತ್ತಾರೆ.

**"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕನೆ**
**ತರ್ಕ ಬೆನ್ನ ಬಾರನೆತ್ತುವೆ ಆಗಮದ ಮೂಗ ಕೊಯುವೆ"**

ಶೋಷಣದ ಮಾದ್ಯಮದ ಮುಖ್ಯ ಕಾರ್ಯ, ಸೂತ್ರಗಳಾದ ಯಜ್ಞ ಯಾಗಗಳನ್ನಷ್ಟೇ ಅಲ್ಲದೆ ಆಧರ ಪ್ರಮಾಣಗಳಾದ ವೇದ, ಶಾಸ್ತ್ರ, ಶ್ರುತಿಗಳನ್ನು ಧಿಕ್ಕರಿಸಿದರು. ಏಕಕಾಲಕ್ಕೆ ಅಸಮಾನತೆ, ಶೋಷಣೆಗಳೆರಡನ್ನು ಪೋಷಿಸುವ ಪುರೋಹಿತ ಶಕ್ತಿ, ಪ್ರಭುಶಕ್ತಿಗಳೆರಡನ್ನು ವಿರೋಧಿಸಿ ಮಾನವನ ವೈಚಾರಿಕ ಸ್ವತಂತ್ರ್ಯವನ್ನು ಸಮಾನತೆಯನ್ನು ಎತ್ತಿ ಹಿಡಿದರು.

## ಸಮಾರೋಪ

ಒಟ್ಟಿನಲ್ಲಿ ಹೇಳುವದಾದಲ್ಲಿ ಭಾರತೀಯ ಸಾಮಾಜಿಕ ಚಿಂತನೆಯಲ್ಲಿ ಬಸವ ಚಿಂತನೆಗೊಂದು ವಿಶಿಷ್ಟ ಸ್ಥಾನವಿದೆ ಈ ಚಿಂತನೆಯ ಹರಿಕಾರರಾದ ಬಸವಣ್ಣನವರ ವ್ಯಕ್ತಿತ್ವವೇ ಸಮಾನತೆ ಹಾಗೂ ನ್ಯಾಯದ ಪ್ರತಿರೂಪದಂತಿದೆ ಬಸವ ಪೂರ್ವ ಯುಗದಲ್ಲಿದ್ದ ಅಂಧಕಾರ, ಮೂಢನಂಬಿಕೆ, ವರ್ಗ ಸಂಘರ್ಷಗಳನ್ನೆಲ್ಲಾ ದೂರಸರಿಸಿ ವಚನವೆಂಬ ದೀವ್ಯಾಸ್ತ್ರದ ಮೂಲಕ ಬಸವ ಬೆಳಕು ನೀಡಿದ ಅಣ್ಣ ಬಸವಣ್ಣನ ಕಾಲಾನಂತರ ಅವರ ತತ್ವಗಳನ್ನು

*– 34ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತದ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ದ ಪಾತ್ರ

✍ **ಡಾ. ಜಗದೀಶ ಹೆಚ್.** ಸಹಾಯಕ ಪ್ರಾಧ್ಯಾಪಕರು ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.

*ಪ್ರಸ್ತಾವನೆ*

*ಭಾರತದ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಚುನಾವಣಾ ಪ್ರಕ್ರಿಯೆಗೆ ದಕ್ಷತೆ, ನಿಖರತೆ ಮತ್ತು ಸುಧಾರಿತ ಭದ್ರತೆ ಸೇರಿದಂತೆ ಹಲವಾರು ಪ್ರಯೋಜನಗಳನ್ನು ತರುವ ಸಾಮರ್ಥ್ಯವನ್ನು ಹೊಂದಿವೆ. ಆದಾಗ್ಯೂ, ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ಬಳಕೆಯಲ್ಲಿ ಸಾರ್ವಜನಿಕ ನಂಬಿಕೆ ಮತ್ತು ವಿಶ್ವಾಸವನ್ನು ಖಚಿತಪಡಿಸಿಕೊಳ್ಳಲು ಪಾರದರ್ಶಕತೆ, ಭದ್ರತೆ ಹಾಗೂ ಹೊಣೆಗಾರಿಕೆಗೆ ಸಂಬಂಧಿಸಿದ ಕಾಳಜಿಗಳನ್ನು ಪರಿಹರಿಸುವುದು ಅತ್ಯಗತ್ಯ. ತಾಂತ್ರಿಕ ಪ್ರಗತಿಗಳು ಮತ್ತು ದೃಢವಾದ ಸುರಕ್ಷತೆಗಳ ನಡುವೆ ಸಮತೋಲನವನ್ನು ಸಾಧಿಸುವ ಮೂಲಕ, ನ್ಯಾಯಯುತ ಹಾಗೂ ಪ್ರಜಾಸತ್ತಾತ್ಮಕ ಚುನಾವಣೆಗಳನ್ನು ಸುಗಮಗೊಳಿಸುವಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಮಹತ್ವದ ಪಾತ್ರವನ್ನು ವಹಿಸಿರುವುದನ್ನು ಕಾಣಬಹುದು. ಈ ಲೇಖನದಲ್ಲಿ ಭಾರತದ ಚುನಾವಣಾ ಆಯೋಗ, ವಿದ್ಯುನ್ಮಾನ ಮತಯಂತ್ರ (ಇವಿಎಂ), ವಿದ್ಯುನ್ಮಾನ ಮತಯಂತ್ರದ (ಇವಿಎಂ) ಅನುಕೂಲಗಳು ಮತ್ತು ಅನಾನುಕೂಲಗಳು, ಸವಾಲುಗಳು ಮತ್ತು ಪರಿಹಾರಗಳನ್ನು ತಿಳಿಸಲಾಗಿದೆ.*

*ಮುಖ್ಯ ಪದಗಳು: ಚುನಾವಣೆ, ವಿದ್ಯುನ್ಮಾನ ಮತಯಂತ್ರ (ಇವಿಎಂ), ಪಾರದರ್ಶಕತೆ, ಭದ್ರತೆ, ಹೊಣೆಗಾರಿಕೆ, ಭಾರತದ ಚುನಾವಣಾ ಆಯೋಗ.*

## ಪರಿಚಯ

ಭಾರತದಲ್ಲಿ ಪ್ರಜಾಪ್ರಭುತ್ವವು ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆಗಳ ಮೇಲೆ ಅವಲಂಬಿತವಾಗಿದೆ. ಅದನ್ನು ಜಾರಿಗೆ ತರಲು ಭಾರತದ ಚುನಾವಣಾ ಆಯೋಗ (ಇಸಿಐ)ವು ಭಾರತದಲ್ಲಿ ಚುನಾವಣೆಗಳನ್ನು ನಿರ್ವಹಿಸುವ ಮತ್ತು ನಡೆಸುವ ಜವಾಬ್ದಾರಿ ಹೊಂದಿರುವ ಸ್ವಾಯತ್ತ ಸಾಂವಿಧಾನಿಕ ಪ್ರಾಧಿಕಾರವಾಗಿದೆ. ಇದನ್ನು ಭಾರತೀಯ ಸಂವಿಧಾನದ 324 ನೇ ವಿಧಿಯ ಅಡಿಯಲ್ಲಿ 25 ಜನವರಿ 1950 ರಂದು ಸ್ಥಾಪಿಸಲಾಯಿತು.ಭಾರತದ ಚುನಾವಣಾ ಆಯೋಗ (ಇಸಿಐ)ವು ಈ ಕೆಳಕಂಡ ಜವಾಬ್ದಾರಿಯನ್ನು ಹೊಂದಿದೆ.

**ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವುದು:** ಸಂಸದೀಯ, ರಾಜ್ಯ ಶಾಸನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ಸೇರಿದಂತೆ ವಿವಿಧ ಹಂತಗಳಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವುದನ್ನು ಭಾರತದ ಚುನಾವಣಾ ಆಯೋಗ ಖಚಿತಪಡಿಸುತ್ತದೆ. ಇದು ನಿಯಮಗಳು ಮತ್ತು ನಿಬಂಧನೆಗಳನ್ನು ರೂಪಿಸುತ್ತದೆ, ಮಾರ್ಗಸೂಚಿಗಳನ್ನು ನೀಡುತ್ತದೆ ಹಾಗೂ ನ್ಯಾಯಸಮ್ಮತತೆಯನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತದೆ.

**ಮತದಾರರ ನೋಂದಣಿ :** ಭಾರತದ ಚುನಾವಣಾ ಆಯೋಗ ಮತದಾರರ ನೋಂದಣಿ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತದೆ. ಇದು ಮತದಾರರ ಪಟ್ಟಿಗಳನ್ನು ನಿರ್ವಹಿಸುತ್ತದೆ, ಮತದಾರರ ಪಟ್ಟಿಗಳನ್ನು ನವೀಕರಿಸುತ್ತದೆ ಮತ್ತು ಅರ್ಹ ಮತದಾರರ ಸೇರ್ಪಡೆಯನ್ನು ಖಚಿತಪಡಿಸುತ್ತದೆ.

**ಚುನಾವಣಾ ವೇಳಾಪಟ್ಟಿ ಮತ್ತು ಮತದಾನ :** ಚುನಾವಣಾ ದಿನಾಂಕಗಳ ಘೋಷಣೆ, ನಾಮಪತ್ರ ಸಲ್ಲಿಕೆ, ಅಭ್ಯರ್ಥಿಗಳ ಪರಿಶೀಲನೆ ಮತ್ತು ಮತದಾನದ ನಡವಳಿಕೆ ಸೇರಿದಂತೆ ಚುನಾವಣಾ ವೇಳಾಪಟ್ಟಿಯನ್ನು ಭಾರತದ ಚುನಾವಣಾ ಆಯೋಗ ಸಿದ್ಧಪಡಿಸುತ್ತದೆ. ಇದು ಮತದಾನ ಕೇಂದ್ರಗಳನ್ನು ಸ್ಥಾಪಿಸುತ್ತದೆ, ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುತ್ತದೆ ಮತ್ತು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಂಪೂರ್ಣ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತದೆ.

**ಮಾದರಿ ನೀತಿ ಸಂಹಿತೆ (ಎಂಸಿಸಿ) :** ಚುನಾವಣಾ ಸಮಯದಲ್ಲಿ ನ್ಯಾಯಯುತವಾದ ಪಾತ್ರವನ್ನು ಖಚಿತಪಡಿಸಿಕೊಳ್ಳಲು ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ ಮಾರ್ಗಸೂಚಿಗಳನ್ನು ರೂಪಿಸುವ ಮಾದರಿ ನೀತಿ ಸಂಹಿತೆಯನ್ನು ಭಾರತದ ಚುನಾವಣಾ ಆಯೋಗ ಜಾರಿಗೊಳಿಸುತ್ತದೆ. ಮಾದರಿ ನೀತಿ ಸಂಹಿತೆ (ಎಂಸಿಸಿ)ಪ್ರಚಾರ ಚಟುವಟಿಕೆಗಳು, ಭಾಷಣಗಳು, ಜಾಹೀರಾತುಗಳು ಮತ್ತು ರಾಜಕೀಯ ಪಕ್ಷಗಳ ನಡವಳಿಕೆಯನ್ನು ನಿಯಂತ್ರಿಸುತ್ತದೆ.

**ಚುನಾವಣಾ ಮೇಲ್ವಿಚಾರಣೆ ಮತ್ತು ಜಾರಿ :** ಚುನಾವಣಾ ವಂಚನೆ, ಲಂಚ ಮತ್ತು ಭ್ರಷ್ಟಾಚಾರ ಸೇರಿದಂತೆ ದುಷ್ಕೃತ್ಯಗಳನ್ನು ತಡೆಗಟ್ಟಲು ಭಾರತದ ಚುನಾವಣಾ ಆಯೋಗ ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತದೆ. ಇದು ಉಲ್ಲಂಘನೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತದೆ, ತಪ್ಪಿತಸ್ಥರೆಂದು ಕಂಡುಬಂದ ಅಭ್ಯರ್ಥಿಗಳನ್ನು ಅನರ್ಹಗೊಳಿಸುತ್ತದೆ ಮತ್ತು ಚುನಾವಣಾ ಕಾನೂನುಗಳ ಅನುಸರಣೆಯನ್ನು ಖಚಿತಪಡಿಸುತ್ತದೆ.

**ಚುನಾವಣಾ ಸುಧಾರಣೆಗಳು :** ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ, ದಕ್ಷತೆ ಮತ್ತು ಸಮಗ್ರತೆಯನ್ನು ಹೆಚ್ಚಿಸಲು ಚುನಾವಣಾ ಸುಧಾರಣೆಗಳ ಮೇಲೆ ಭಾರತದ ಚುನಾವಣಾ ಆಯೋಗ ಕಾರ್ಯ ನಿರ್ವಹಿಸುತ್ತದೆ. ಇದು ಚುನಾವಣಾ ಕಾನೂನುಗಳಲ್ಲಿ ಬದಲಾವಣೆಗಳನ್ನು ಪ್ರಸ್ತಾಪಿಸುತ್ತದೆ, ತಾಂತ್ರಿಕ ಪ್ರಗತಿಯನ್ನು ಅಳವಡಿಸುತ್ತದೆ ಮತ್ತು ಚುನಾವಣಾ ವ್ಯವಸ್ಥೆಯನ್ನು ಸುಧಾರಿಸಲು ಕ್ರಮಗಳನ್ನು ಅನ್ವೇಷಿಸುತ್ತದೆ.

ಭಾರತದ ಚುನಾವಣಾ ಆಯೋಗವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ ಮತ್ತು ಇತರ ಚುನಾವಣಾ ಆಯುಕ್ತರೊಂದಿಗೆ ಮುಖ್ಯ ಚುನಾವಣಾ ಆಯುಕ್ತರನ್ನು (ಸಿಇಸಿ) ಅದರ ಮುಖ್ಯಸ್ಥರನ್ನಾಗಿ ಹೊಂದಿದೆ. ಅವರನ್ನು ಭಾರತದ ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ ಮತ್ತು ಕಾರ್ಯಕಾರಿ ಸ್ವಾಯತ್ತತೆ ಹಾಗೂ ಅಧಿಕಾರಾವಧಿಯ ಭದ್ರತೆಯನ್ನು ಹೊಂದಿದ್ದಾರೆ.ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವುದನ್ನು ಖಾತ್ರಿಪಡಿಸುವ ಮೂಲಕ, ಮತದಾರರ ಹಕ್ಕುಗಳನ್ನು ರಕ್ಷಿಸುವ ಮತ್ತು ಚುನಾವಣಾ ಪ್ರಕ್ರಿಯೆಯ ಸಮಗ್ರತೆಯನ್ನು ಕಾಪಾಡಿಕೊಳ್ಳುವ ಮೂಲಕ ಭಾರತದ ಪ್ರಜಾಸತ್ತಾತ್ಮಕ ತತ್ವಗಳನ್ನು ಎತ್ತಿಹಿಡಿಯುವಲ್ಲಿ ಭಾರತದ ಚುನಾವಣಾ ಆಯೋಗಪ್ರಮುಖ ಪಾತ್ರವನ್ನು ವಹಿಸುತ್ತದೆ.

## ವಿದ್ಯುನ್ಮಾನ ಮತಯಂತ್ರ (ಇವಿಎಂ)

ವಿದ್ಯುನ್ಮಾನ ಮತಯಂತ್ರ (ಇವಿಎಂ) ಮತಗಳನ್ನು ಚಲಾಯಿಸುವ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮತ್ತು ಎಣಿಸುವ ಕೆಲಸಗಳಿಗೆ ಸಹಾಯ ಮಾಡಲು ಅಥವಾ ನೋಡಿಕೊಳ್ಳಲು ವಿದ್ಯುನ್ಮಾನ ವಿಧಾನಗಳನ್ನು ಬಳಸಿ ಮತದಾನ ಮಾಡುವುದು. ವಿದ್ಯುನ್ಮಾನ ಮತಯಂತ್ರವನ್ನು ಎರಡು ಘಟಕಗಳೊಂದಿಗೆ ವಿನ್ಯಾಸಗೊಳಿಸಲಾಗಿದೆ. ಅವುಗಳೆಂದರೆ, ನಿಯಂತ್ರಣ ಘಟಕ (ಕಂಟ್ರೋಲ್ ಯೂನಿಟ್), ಮತದಾನ ಘಟಕ (ಬ್ಯಾಲೆಟ್ ಯೂನಿಟ್) ಇದ್ದು, ಹಾಗೂ ವೋಟರ್ ವೆರಿಫೈಯಬಲ್ ಪೇಪರ್ ಆಡಿಟ್ ಟ್ರಯಲ್ (ವಿವಿಪಿಎಟಿ) ಎಂಬುದು ಬ್ಯಾಲೆಟ್ ರಹಿತ ಮತದಾನ ವ್ಯವಸ್ಥೆಯನ್ನು ಬಳಸಿಕೊಂಡು ಮತದಾರರಿಗೆ ಪ್ರತಿಕ್ರಿಯೆ ನೀಡುವ ವಿಧಾನ ಹೊಂದಿದೆ.

ವಿದ್ಯುನ್ಮಾನ ಮತಯಂತ್ರ (ಇವಿಎಂ) ಅನ್ನು ಭಾರತದಲ್ಲಿ ಮೊದಲ ಬಾರಿಗೆ 1990 ರ ದಶಕದಲ್ಲಿ ಸಾಂಪ್ರದಾಯಿಕ ಪೇಪರ್ ಬ್ಯಾಲೆಟ್ ವ್ಯವಸ್ಥೆಗೆ ಬದಲಿಯಾಗಿ ಪರಿಚಯಿಸಲಾಯಿತು. 1982 ರಲ್ಲಿ ಕೇರಳ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಭಾರತದ ಚುನಾವಣಾ ಆಯೋಗ (ಇಸಿಐ) ಕೆಲವು ಕ್ಷೇತ್ರಗಳಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ಪ್ರಯೋಗವನ್ನು ಪ್ರಾರಂಭಿಸಿತು.

ಭಾರತದಲ್ಲಿ ಬಳಸಿದ ಆರಂಭಿಕ ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳನ್ನು ಚುನಾವಣಾ ಆಯೋಗವು ಸರ್ಕಾರಿ ಸ್ವಾಮ್ಯದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಮತ್ತು ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಇಸಿಐಎಲ್) ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ. ಈ ಯಂತ್ರಗಳನ್ನು ಟ್ಯಾಂಪರ್–ಪ್ರೂಫ್, ಬಳಕೆದಾರ ಸ್ನೇಹಿ ಮತ್ತು ನಿಖರವಾಗಿ ಮತಗಳನ್ನು ದಾಖಲಿಸಲು ಸಾಧ್ಯವಾಗುವಂತೆ ವಿನ್ಯಾಸಗೊಳಿಸಲಾಗಿದೆ.

ಯಶಸ್ವಿ ಪ್ರಯೋಗಗಳು ಮತ್ತು ನಂತರದ ಸುಧಾರಣೆಗಳು ಹಾಗೂ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಭಾರತೀಯ ಚುನಾವಣೆಗಳಲ್ಲಿ ವ್ಯಾಪಕವಾದ ಬಳಕೆಯನ್ನು ಪಡೆದುಕೊಂಡವು. ಭಾರತದ ಚುನಾವಣಾ ಆಯೋಗ ಕ್ರಮೇಣ ವಿವಿಧ ರಾಜ್ಯಗಳು ಮತ್ತು ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳೊಂದಿಗೆ ಪೇಪರ್ ಬ್ಯಾಲೆಟ್ ವ್ಯವಸ್ಥೆಯನ್ನು ಬದಲಾಯಿಸಿತು. 1998 ರಲ್ಲಿ, ಭಾರತದ ಚುನಾವಣಾ ಆಯೋಗ ತನ್ನ ಮೊದಲ ರಾಷ್ಟ್ರವ್ಯಾಪಿ ಚುನಾವಣೆಯನ್ನು ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳನ್ನು ಬಳಸಿಕೊಂಡು ಎಲ್ಲಾ ಸಂಸದೀಯ ಕ್ಷೇತ್ರಗಳಿಗೆ ಒಳಪಡಿಸಿತು.

ಭಾರತೀಯ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ಪರಿಚಯವು ಹಲವಾರು ಪ್ರಯೋಜನಗಳನ್ನು ತಂದಿತು. ಇದು ಮತ ಎಣಿಕೆಗೆ ಬೇಕಾದ ಸಮಯವನ್ನು ಕಡಿಮೆಗೊಳಿಸಿತು, ಮಾನವ ದೋಷಗಳನ್ನು ಕಡಿಮೆಗೊಳಿಸಿತು, ಅತಿಯಾದ ಮತದಾನ ಅಥವಾ ತಪ್ಪಾದ ಗುರುತುಗಳಿಂದಾಗಿ ಅಮಾನ್ಯವಾದ ಮತಗಳನ್ನು ತೆಗೆದುಹಾಕಿತು ಮತ್ತು ಮತದಾನದ ಗೌಪ್ಯತೆಯನ್ನು ಹೆಚ್ಚಿಸಿತು. ದೊಡ್ಡ ಪ್ರಮಾಣದ ಪೇಪರ್ ಬ್ಯಾಲೆಟ್‌ಗಳಿಗೆ ಹೋಲಿಸಿದರೆ,ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಮತ ಯಂತ್ರಗಳನ್ನು ಸಾಗಿಸಲು ಮತ್ತು ಸಂಗ್ರಹಿಸಲು ಸುಲಭಗೊಳಿಸಿದೆ.ಚುನಾವಣಾ ಆಯೋಗವು ಭದ್ರತೆಯನ್ನು ಹೆಚ್ಚಿಸಲು ವಿದ್ಯುನ್ಮಾನ ಮತಯಂತ್ರ (ಇವಿಎಂ)ತಂತ್ರಜ್ಞಾನವನ್ನು ಸುಧಾರಿಸುವುದನ್ನು ಮುಂದುವರೆಸಿತು ಮತ್ತು ವಿವಿಧ ಮಧ್ಯಸ್ಥಗಾರರು ಎತ್ತಿರುವ ಕಳವಳಗಳನ್ನು ಪರಿಹರಿಸಿತು. ಸುರಕ್ಷಿತ ಚಿಪ್‌ಗಳ ಬಳಕೆ, ಡೈನಾಮಿಕ್ ಕೋಡಿಂಗ್ ಮತ್ತು ಪಾಸ್‌ವರ್ಡ್ ರಕ್ಷಣೆಯ ಬಹು ಹಂತಗಳಂತಹ ಟ್ಯಾಂಪರಿಂಗ್ ಅನ್ನು ತಡೆಗಟ್ಟಲು ಹಲವಾರು ಭದ್ರತಾ ವೈಶಿಷ್ಟ್ಯಗಳನ್ನು ಸೇರಿಸಲಾಗಿದೆ.

ಭಾರತದಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ವ್ಯಾಪಕ ಅಳವಡಿಕೆಯ ಹೊರತಾಗಿಯೂ, ಅವುಗಳ ಬಳಕೆಯ ಸುತ್ತ ಸಾಂದರ್ಭಿಕ ಚರ್ಚೆಗಳು ಮತ್ತು ವಿವಾದಗಳು ನಡೆಯುತ್ತಿವೆ. ಕೆಲವು ರಾಜಕೀಯ ಪಕ್ಷಗಳು ಮತ್ತು ಕಾರ್ಯಕರ್ತರು ವಿದ್ಯುನ್ಮಾನ ಮತಯಂತ್ರ (ಇವಿಎಂ) ಟ್ಯಾಂಪರಿಂಗ್ ಸಾಧ್ಯತೆ ಮತ್ತು ವಿದ್ಯುನ್ಮಾನ ಮತಯಂತ್ರ (ಇವಿಎಂ) ನಿಯೋಜನೆಯ ಆರಂಭಿಕ ಹಂತಗಳಲ್ಲಿ ಮತದಾರರ–ಪರಿಶೀಲಿಸಿದ ಪೇಪರ್ ಆಡಿಟ್ ಟ್ರಯಲ್ (ವಿವಿಪ್ಯಾಟ್) ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಈ ಕಳವಳಗಳಿಗೆ ಪ್ರತಿಕ್ರಿಯೆಯಾಗಿ, ಭಾರತದ ಚುನಾವಣಾ ಆಯೋಗವು 2013 ರಲ್ಲಿ ವಿವಿಪ್ಯಾಟ್ ವ್ಯವಸ್ಥೆಯನ್ನು ಪರಿಚಯಿಸಿತು, ಇದು ಮತದಾರರು ತಮ್ಮ ಮತವನ್ನು ಮುಚ್ಚಿದ ಪೆಟ್ಟಿಗೆಯಲ್ಲಿ ಠೇವಣಿ ಮಾಡುವ ಮೊದಲು ಮುದ್ರಿತ ಸ್ಲಿಪ್ ಮೂಲಕ ಪರಿಶೀಲಿಸಲು ಅನುವು ಮಾಡಿಕೊಡುತ್ತದೆ.

ಭಾರತದ ಚುನಾವಣಾ ಆಯೋಗವು ಕಠಿಣ ಪರೀಕ್ಷೆ, ವಿದ್ಯುನ್ಮಾನ ಮತಯಂತ್ರ (ಇವಿಎಂ)ಹಂಚಿಕೆಯ ಯಾದೃಚ್ಛಿಕಗೊಳಿಸುವಿಕೆ ಮತ್ತು ಸುರಕ್ಷಿತ ಶೇಖರಣಾ ಸೌಲಭ್ಯಗಳ ಬಳಕೆ ಸೇರಿದಂತೆ ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳ ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ಕಾರ್ಯನಿರ್ವಹಣೆಯನ್ನು ವೀಕ್ಷಿಸಲು ಮತ್ತು ಅವುಗಳ ನಿಖರತೆಯನ್ನು ಪರಿಶೀಲಿಸಲು ಸ್ವತಂತ್ರ ತಜ್ಞರು, ರಾಜಕೀಯ ಪಕ್ಷಗಳು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಆಹ್ವಾನಿಸಿತ್ತು.

## ವಿದ್ಯುನ್ಮಾನ ಮತಯಂತ್ರ (ಇವಿಎಂ)ದ ಅನುಕೂಲಗಳು ಮತ್ತು ಅನಾನುಕೂಲಗಳು

### ವಿದ್ಯುನ್ಮಾನ ಮತಯಂತ್ರ (ಇವಿಎಂ)ದ ಅನುಕೂಲಗಳು

- **ನಿಖರತೆ :** ಇವಿಎಂ ಗಳನ್ನು ಹೆಚ್ಚು ನಿಖರವಾಗಿ ವಿನ್ಯಾಸ ಗೊಳಿಸಲಾಗಿದ್ದು, ಮತ ಎಣಿಕೆ ಪ್ರಕ್ರಿಯೆಯಲ್ಲಿ ದೋಷಗಳ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಮತಪತ್ರಗಳ ತಪ್ಪು ಎಣಿಕೆ ಅಥವಾ ತಪ್ಪಾಗಿ ಓದುವಂತಹ ಮಾನವ ದೋಷಗಳ ಸಾಧ್ಯತೆಯನ್ನು ಅವು ನಿವಾರಿಸುತ್ತವೆ.
- **ದಕ್ಷತೆ :** ಇವಿಎಂ ಗಳು ಮತದಾನ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತವೆ ಮತ್ತು ಮತಗಳನ್ನು ಚಲಾಯಿಸಲು ಮತ್ತು ಎಣಿಕೆ ಮಾಡಲು ಬೇಕಾದ ಸಮಯವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತವೆ. ಇದು ತ್ವರಿತ ಫಲಿತಾಂಶಗಳಿಗೆ ಕಾರಣವಾಗುತ್ತದೆ ಮತ್ತು ಚುನಾವಣೆಗಳ ಒಟ್ಟಾರೆ ವೆಚ್ಚವನ್ನು ಕಡಿಮೆ ಮಾಡುತ್ತದೆ.
- **ಬಳಸಲು ಸುಲಭ :** ಇವಿಎಂ ಗಳು ಬಳಕೆದಾರ ಸ್ನೇಹಿಯಾಗಿದ್ದು, ತಾಂತ್ರಿಕವಾಗಿ ಒಲವು ಹೊಂದಿರದ ಮತದಾರರಿಗೂ ಸಹ ಕಾರ್ಯ ನಿರ್ವಹಿಸಲು ಸುಲಭವಾಗಿದೆ. ಯಂತ್ರಗಳು ಸಾಮಾನ್ಯವಾಗಿ ಸ್ಪಷ್ಟ ಸೂಚನೆಗಳನ್ನು ಮತ್ತು ಸರಳ ಇಂಟರ್ಫೇಸ್ ಅನ್ನು ಹೊಂದಿದ್ದು, ಮತದಾರರು ತಮ್ಮ ಮತಗಳನ್ನು ನಿಖರವಾಗಿ ಚಲಾಯಿಸಲು ಅನುಕೂಲವಾಗುವಂತೆ ಮಾಡುತ್ತದೆ.
- **ಕಡಿಮೆಯಾದ ಬೂತ್ ಕ್ಯಾಪ್ಚರ್ :** ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳು ಬೂತ್ ಕ್ಯಾಪ್ಚರ್ ಮತ್ತು ಚುನಾವಣಾ ವಂಚನೆಯ ನಿದರ್ಶನಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಬಹು ಮತದಾನವನ್ನು ತಡೆಗಟ್ಟಲು ಮತ್ತು ಮತದಾನ ಪ್ರಕ್ರಿಯೆಯಲ್ಲಿ ತೊಂದರೆಯಾಗದಂತೆ ಮಾಡಲು, ಆ ಮೂಲಕ ಚುನಾವಣೆಗಳ ಸಮಗ್ರತೆಯನ್ನು ಹೆಚ್ಚಿಸಲು ಅವುಗಳನ್ನು ವಿನ್ಯಾಸಗೊಳಿಸಲಾಗಿದೆ.

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

- **ಪರಿಸರ ಸ್ನೇಹಿ :** ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಭೌತಿಕ ಮತಪತ್ರಗಳ ಅಗತ್ಯವಿಲ್ಲದ ಕಾರಣ ಕಾಗದದ ಬಳಕೆಯನ್ನು ಕಡಿಮೆ ಮಾಡುತ್ತವೆ. ಇದು ಕಾಗದದ ತ್ಯಾಜ್ಯವನ್ನು ಕಡಿಮೆ ಮಾಡುವ ಮೂಲಕ ಪರಿಸರ ಸುಸ್ಥಿರತೆಗೆ ಕೊಡುಗೆ ನೀಡುತ್ತದೆ.

## ವಿದ್ಯುನ್ಮಾನ ಮತಯಂತ್ರ (ಇವಿಎಂ)ನ ಅನಾನುಕೂಲಗಳು

- **ಪಾರದರ್ಶಕತೆಯ ಕೊರತೆ :** ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಪಾರದರ್ಶಕತೆಯ ಕೊರತೆಯಿಂದಾಗಿ ಸಾಮಾನ್ಯವಾಗಿ ಟೀಕೆಗೊಳಗಾಗುತ್ತವೆ. ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳಲ್ಲಿ ಬಳಸಲಾದ ತಂತ್ರಜ್ಞಾನವು ಸಂಕೀರ್ಣವಾಗಿದೆ ಮತ್ತು ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ ಎಂದು ವಿಮರ್ಶಕರು ವಾದಿಸುತ್ತಾರೆ, ಇದು ಮತದಾನ ಪ್ರಕ್ರಿಯೆಯ ನಿಖರತೆ ಮತ್ತು ನ್ಯಾಯಸಮ್ಮತತೆಯ ಬಗ್ಗೆ ಅನುಮಾನಗಳಿಗೆ ಕಾರಣವಾಗಬಹುದು.
- **ಕುಶಲತೆಯ ದುರ್ಬಲತೆ :** ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳನ್ನು ಭದ್ರತಾ ಕ್ರಮಗಳೊಂದಿಗೆ ವಿನ್ಯಾಸಗೊಳಿಸಲಾಗಿದ್ದರೂ, ಹ್ಯಾಕಿಂಗ್ ಅಥವಾ ಟ್ಯಾಂಪರಿಂಗ್‌ಗೆ ಅವುಗಳ ದುರ್ಬಲತೆಯ ಬಗ್ಗೆ ಕಳವಳವಿದೆ. ತಂತ್ರಜ್ಞಾನವು ರಾಜಿ ಮಾಡಿಕೊಂಡರೆ, ಅದು ಮತಗಳ ದುರ್ಬಳಕೆಗೆ ಕಾರಣವಾಗಬಹುದು ಮತ್ತು ಚುನಾವಣೆಯ ಸಮಗ್ರತೆಯನ್ನು ಹಾಳುಮಾಡುತ್ತದೆ.
- **ವೆಚ್ಚ :** ಇವಿಎಂಗಳನ್ನು ಅಳವಡಿಸುವುದು ದುಬಾರಿಯಾಗಬಹುದು, ವಿಶೇಷವಾಗಿ ಹೆಚ್ಚಿನ ಮತದಾರರನ್ನು ಹೊಂದಿರುವ ದೇಶಗಳಿಗೆ. ಯಂತ್ರಗಳನ್ನು ಖರೀದಿಸಲು ಮತ್ತು ನಿರ್ವಹಿಸಲು ಆರಂಭಿಕ ಹೂಡಿಕೆ, ಜೊತೆಗೆ ತರಬೇತಿ ಸಿಬ್ಬಂದಿ, ಗಮನಾರ್ಹವಾಗಿದೆ.
- **ಸೀಮಿತ ಪ್ರವೇಶ ಸಾಧ್ಯತೆ :** ಇವಿಎಂಗಳು ವಿಕಲಾಂಗ ವ್ಯಕ್ತಿಗಳಿಗೆ ಅಥವಾ ತಂತ್ರಜ್ಞಾನದ ಪರಿಚಯವಿಲ್ಲದವರಿಗೆ ಸವಾಲುಗಳನ್ನು ಒಡ್ಡಬಹುದು. ಪ್ರತಿಯೊಬ್ಬರೂ ತಮ್ಮ ಮತದಾನದ ಹಕ್ಕನ್ನು ಸ್ವತಂತ್ರವಾಗಿ ಮತ್ತು ಅಡೆತಡೆಗಳಿಲ್ಲದೆ ಚಲಾಯಿಸಬಹುದು ಎಂದು ಖಚಿತಪಡಿಸಿಕೊಳ್ಳಲು ಸಾಕಷ್ಟು ನಿಬಂಧನೆಗಳು ಜಾರಿಯಲ್ಲಿರಬೇಕು.

ಇವಿಎಂ ಗಳ ಅನುಕೂಲಗಳು ಮತ್ತು ಅನಾನುಕೂಲಗಳು ಅವುಗಳ ಅನುಷ್ಠಾನದ ನಿರ್ದಿಷ್ಟ ಸಂದರ್ಭ ಮತ್ತು ಅದರ ಜೊತೆಗಿನ ಸುರಕ್ಷತೆಗಳು ಮತ್ತು ನಿಬಂಧನೆಗಳನ್ನು ಆಧರಿಸಿ ಬದಲಾಗಬಹುದು ಎಂಬುದನ್ನು ಗಮನಿಸಬಹುದಾಗಿದೆ.

## ಸವಾಲುಗಳು ಮತ್ತು ಪರಿಹಾರಗಳು

ವಿದ್ಯುನ್ಮಾನ ಮತಯಂತ್ರ (ಇವಿಎಂ)ಹಲವು ದೇಶಗಳಲ್ಲಿ ಚುನಾವಣೆಗಳನ್ನು ನಡೆಸುವ ಸಾಧನವಾಗಿ ಬಳಸಲಾಗಿದೆ. ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ವೇಗ, ನಿಖರತೆ ಮತ್ತು ದಕ್ಷತೆಯಂತಹ ಕೆಲವು ಪ್ರಯೋಜನಗಳನ್ನು ನೀಡುತ್ತವೆಯಾದರೂ, ಅವುಗಳು ಹಲವಾರು ಸವಾಲುಗಳನ್ನು ಎದುರಿಸುತ್ತವೆ. ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳಿಗೆ ಸಂಬಂಧಿಸಿದ ಕೆಲವು ಸವಾಲುಗಳು ಮತ್ತು ಪರಿಹಾರಗಳು ಈ ಕೆಳಗಿನಂತಿವೆ.

**ಭದ್ರತಾ ಕಾಳಜಿಗಳು :** ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳೊಂದಿಗಿನ ಪ್ರಮುಖ ಸವಾಲುಗಳೆಂದರೆ ಅವುಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು. ಟ್ಯಾಂಪರಿಂಗ್, ಹ್ಯಾಕಿಂಗ್ ಅಥವಾ ಅನಧಿಕೃತ ಪ್ರವೇಶದ ಅಪಾಯವಿದೆ, ಇದು ಚುನಾವಣಾ ಪ್ರಕ್ರಿಯೆಯ ಸಮಗ್ರತೆಯನ್ನು ಹಾಳುಮಾಡುತ್ತದೆ. ಈ ಸವಾಲನ್ನು ಎದುರಿಸಲು, ಈ ಕೆಳಗಿನ ಪರಿಹಾರಗಳನ್ನು ಕಾರ್ಯಗತಗೊಳಿಸಬಹುದು.

- ವಿದ್ಯುನ್ಮಾನ ಮತಯಂತ್ರ (ಇವಿಎಂ)ದ ಸಾಫ್ಟ್‌ವೇರ್ ಮತ್ತು ಡೇಟಾವನ್ನು ರಕ್ಷಿಸಲು ದೃಢವಾದ ಎನ್‌ಕ್ರಿಪ್ಶನ್ ಮತ್ತು ದೃಢೀಕರಣ ಕಾರ್ಯವಿಧಾನಗಳನ್ನು ಅಳವಡಿಸಿ.
- ದುರ್ಬಲತೆಗಳನ್ನು ಗುರುತಿಸಲು ಮತ್ತು ಅವುಗಳನ್ನು ತ್ವರಿತವಾಗಿ ಪರಿಹರಿಸಲು ನಿಯಮಿತ ಭದ್ರತಾ ಲೆಕ್ಕಪರಿಶೋಧನೆ ಮತ್ತು ನುಗ್ಗುವ ಪರೀಕ್ಷೆಯನ್ನು ನಡೆಸುವುದು.
- ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ಹಾರ್ಡ್‌ವೇರ್ ಘಟಕಗಳನ್ನು ರಕ್ಷಿಸಲು ಟ್ಯಾಂಪರ್–ಸ್ಪಷ್ಟ ಮುದ್ರೆಗಳು ಮತ್ತು ಭೌತಿಕ ಭದ್ರತಾ ಕ್ರಮಗಳನ್ನು ಬಳಸುವುದು.
- ಇವಿಎಂಗಳ ನಿರ್ವಹಣೆ ಮತ್ತು ನಿರ್ವಹಣೆಯಲ್ಲಿ ತೊಡಗಿರುವ ಚುನಾವಣಾ ಅಧಿಕಾರಿಗಳಿಗೆ ಸರಿಯಾದ ತರಬೇತಿ ಮತ್ತು ಹಿನ್ನೆಲೆ ಪರಿಶೀಲನೆಗಳನ್ನು ಖಚಿತಪಡಿಸಿಕೊಳ್ಳುವುದು.

**ಪಾರದರ್ಶಕತೆ ಕೊರತೆ :** ಮತದಾನ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಕೊರತೆಯಿಂದಾಗಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಸಾಮಾನ್ಯವಾಗಿ ಟೀಕೆಗಳನ್ನು ಎದುರಿಸುತ್ತಿವೆ. ಮತದಾರರು ತಮ್ಮ ಮತಗಳನ್ನು ವಿದ್ಯುನ್ಮಾನ ಮತಯಂತ್ರ (ಇವಿಎಂ)ನಲ್ಲಿ ಹೇಗೆ ದಾಖಲಿಸಲಾಗುತ್ತದೆ ಮತ್ತು ಸಂಗ್ರಹಿಸಲಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿರುವುದಿಲ್ಲ. ಪಾರದರ್ಶಕತೆಯನ್ನು ಹೆಚ್ಚಿಸಲು, ಈ ಕೆಳಗಿನ ಪರಿಹಾರಗಳು ಈ ಕೆಳಗಿನಂತಿವೆ.

- ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳ ಜೊತೆಗೆ ಮತದಾರರ–ಪರಿಶೀಲಿಸಬಹುದಾದ ಪೇಪರ್ ಆಡಿಟ್ ಟ್ರಯಲ್ (ವಿವಿಪ್ಯಾಟ್) ವ್ಯವಸ್ಥೆಯನ್ನು ಒದಗಿಸಿ. ವಿದ್ಯುನ್ಮಾನವಾಗಿ ಸಂಗ್ರಹಿಸುವ ಮೊದಲು ಮತದಾರರು ತಮ್ಮ ಮತವನ್ನು ಕಾಗದದ ಮುದ್ರಣದಲ್ಲಿ ಭೌತಿಕವಾಗಿ ಪರಿಶೀಲಿಸಲು ಇದು ಅನುಮತಿಸುತ್ತದೆ.
- ದಾಖಲಾದ ಮತಗಳು ಮತದಾರರ ಉದ್ದೇಶಕ್ಕೆ ಹೊಂದಿಕೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ನಂತರದ ಲೆಕ್ಕಪರಿಶೋಧನೆ ಸೇರಿದಂತೆ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ನಿಯಮಿತ ಲೆಕ್ಕಪರಿಶೋಧನೆಗಳನ್ನು ನಡೆಸುವುದು.
- ಸ್ವತಂತ್ರ ವೀಕ್ಷಕರು, ರಾಜಕೀಯ ಪಕ್ಷದ ಪ್ರತಿನಿಧಿಗಳು ಮತ್ತು ನಾಗರಿಕ ಸಮಾಜ ಸಂಸ್ಥೆಗಳು ಸಂಪೂರ್ಣ ವಿದ್ಯುನ್ಮಾನ ಮತಯಂತ್ರ (ಇವಿಎಂ) ಪ್ರಕ್ರಿಯೆಯನ್ನು, ರಚನೆಯಿಂದ ಫಲಿತಾಂಶದ ಪಟ್ಟಿಯವರೆಗೆ ಮೇಲ್ವಿಚಾರಣೆ ಮಾಡಲು ಅನುಮತಿಸುವುದು.

**ಅಸಮರ್ಪಕ ಮತ್ತು ತಾಂತ್ರಿಕ ದೋಷಗಳು :** ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಎಲೆಕ್ಟ್ರಾನಿಕ್ ಸಾಧನಗಳಾಗಿವೆ ಮತ್ತು ಚುನಾವಣಾ ಸಮಯದಲ್ಲಿ ತಾಂತ್ರಿಕ ಸಮಸ್ಯೆಗಳು ಅಥವಾ ಅಸಮರ್ಪಕ ಕಾರ್ಯಗಳನ್ನು ಅನುಭವಿಸಬಹುದು. ಇದು ವಿಳಂಬ, ಮತದಾರರ ಹತಾಶೆ ಮತ್ತು ವ್ಯವಸ್ಥೆಯಲ್ಲಿ ಅಪನಂಬಿಕೆಗೆ ಕಾರಣವಾಗಬಹುದು. ಈ ಸವಾಲುಗಳನ್ನು ತಗ್ಗಿಸಲು, ಪರಿಹಾರಗಳು ಈ ಕೆಳಗಿನಂತಿವೆ.

- ಕೃತಕ ಚುನಾವಣಾ ಸನ್ನಿವೇಶಗಳು ಸೇರಿದಂತೆ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ನಿಯೋಜನೆಯ ಮೊದಲು ಕಠಿಣ ಪರೀಕ್ಷೆ ಮತ್ತು ಗುಣಮಟ್ಟದ ಭರವಸೆಯನ್ನು ನಡೆಸುವುದು.
- ಯಾವುದೇ ಅಸಮರ್ಪಕ ಕಾರ್ಯಗಳು ಅಥವಾ ತಾಂತ್ರಿಕ ದೋಷಗಳನ್ನು ತ್ವರಿತವಾಗಿ ಪರಿಹರಿಸಲು ಸಾಕಷ್ಟು ಸಂಖ್ಯೆಯ ಬ್ಯಾಕಪ್ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಮತ್ತು ತಾಂತ್ರಿಕ ಬೆಂಬಲ ಸಿಬ್ಬಂದಿಯನ್ನು ನಿರ್ವಹಿಸುವುದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

- ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳೊಂದಿಗಿನ ಸಾಮಾನ್ಯ ತಾಂತ್ರಿಕ ಸಮಸ್ಯೆಗಳನ್ನು ಹೇಗೆ ಕಾರ್ಯ ನಿರ್ವಹಿಸುವುದು, ದೋಷನಿವಾರಣೆ ಮಾಡುವುದು ಮತ್ತು ಪರಿಹರಿಸುವುದು ಎಂಬುದರ ಕುರಿತು ಚುನಾವಣಾ ಅಧಿಕಾರಿಗಳು ಮತ್ತು ಚುನಾವಣಾ ಕಾರ್ಯಕರ್ತರಿಗೆ ಸಮಗ್ರ ತರಬೇತಿಯನ್ನು ಒದಗಿಸುವುದು.

**ಪ್ರವೇಶಿಸುವಿಕೆ ಮತ್ತು ಒಳಗೊಳ್ಳುವಿಕೆ :** ವಿಕಲಾಂಗತೆ ಅಥವಾ ಸೀಮಿತ ತಾಂತ್ರಿಕ ಸಾಕ್ಷರತೆ ಸೇರಿದಂತೆ ಎಲ್ಲಾ ಮತದಾರರಿಗೆ ಅವಕಾಶ ಕಲ್ಪಿಸಲು ಇವಿಎಂಗಳನ್ನು ವಿನ್ಯಾಸಗೊಳಿಸಬೇಕು. ಪ್ರವೇಶಿಸುವಿಕೆ ಸವಾಲುಗಳನ್ನು ಎದುರಿಸಲು, ಪರಿಹಾರಗಳು ಈ ಕೆಳಗಿನಂತಿವೆ.

- ದೃಷ್ಟಿಹೀನ ಮತದಾರರಿಗೆ ಸಹಾಯ ಮಾಡಲು ಸ್ಪರ್ಶ ಇಂಟರ್ಫೇಸ್‌ಗಳು, ಆಡಿಯೊ ಪ್ರತಿಕ್ರಿಯೆ ಅಥವಾ ಬ್ರೈಲ್ ಲೇಬಲ್‌ಗಳಂತಹ ಪ್ರವೇಶ ವೈಶಿಷ್ಟಗಳೊಂದಿಗೆ ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳನ್ನು ಅಭಿವೃದ್ಧಿಪಡಿಸುವುದು.
- ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳನ್ನು ನಿರ್ವಹಿಸಲು ಕಷ್ಟಪಡುವ ಮತದಾರರಿಗೆ ತರಬೇತಿ ಮತ್ತು ಸಹಾಯವನ್ನು ಒದಗಿಸಿ, ಅವರು ಸ್ವತಂತ್ರವಾಗಿ ಮತದಾನ ಮಾಡುವ ಹಕ್ಕನ್ನು ಚಲಾಯಿಸಬಹುದು ಎಂದು ಖಚಿತಪಡಿಸಿಕೊಳ್ಳುವುದು.
- ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ಬಳಕೆಯ ಬಗ್ಗೆ ಮತದಾರರಿಗೆ ತಿಳುವಳಿಕೆ ನೀಡಲು ಜಾಗೃತಿ ಅಭಿಯಾನಗಳನ್ನು ನಡೆಸುವುದು ಮತ್ತು ಅವರು ಹೊಂದಿರುವ ಯಾವುದೇ ಕಾಳಜಿ ಅಥವಾ ತಪ್ಪು ಕಲ್ಪನೆಗಳನ್ನು ಪರಿಹರಿಸುವುದು.

**ಸಾರ್ವಜನಿಕ ನಂಬಿಕೆ ಮತ್ತು ವಿಶ್ವಾಸ :** ವಿದ್ಯುನ್ಮಾನ ಮತಯಂತ್ರ (ಇವಿಎಂ) ಗಳಲ್ಲಿ ಸಾರ್ವಜನಿಕ ನಂಬಿಕೆ ಮತ್ತು ವಿಶ್ವಾಸವನ್ನು ಹೆಚ್ಚಿಸುವುದು ವಿದ್ಯುನ್ಮಾನ ಮತಯಂತ್ರಗಳ ಯಶಸ್ವಿ ಅಳವಡಿಕೆಗೆ ನಿರ್ಣಾಯಕವಾಗಿದೆ. ನಂಬಿಕೆಯನ್ನು ಹೆಚ್ಚಿಸಲು, ಪರಿಹಾರಗಳು ಈ ಕೆಳಗಿನಂತಿವೆ.

- ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ವಿನ್ಯಾಸ, ಭದ್ರತಾ ಕ್ರಮಗಳು ಮತ್ತು ಪರೀಕ್ಷಾ ಶಿಷ್ಟಾಚಾರಗಳ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳುವ ಮೂಲಕ ಪಾರದರ್ಶಕತೆಯನ್ನು ಬೆಳೆಸಿಕೊಳ್ಳುವುದು.
- ರಾಜಕೀಯ ಪಕ್ಷಗಳು, ನಾಗರಿಕ ಸಮಾಜ ಸಂಸ್ಥೆಗಳು ಮತ್ತು ತಜ್ಞರು ಸೇರಿದಂತೆ ಮಧ್ಯಸ್ಥಗಾರರೊಂದಿಗೆ ತೊಡಗಿಸಿಕೊಂಡು, ಅವರ ಕಾಳಜಿಯನ್ನು ಪರಿಹರಿಸಲು ಮತ್ತು ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ವಿನ್ಯಾಸ ಮತ್ತು ಅನುಷ್ಠಾನದ ಕುರಿತು ಅವರ ಒಳಾಂಶಗಳನ್ನು ಅನ್ನು ಪಡೆದುಕೊಳ್ಳುವುದು.
- ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ನಿಯೋಜನೆ ಮತ್ತು ಬಳಕೆಯನ್ನು ಮೇಲ್ವಿಚಾರಣೆ ಮಾಡಲು ಸ್ವತಂತ್ರ ನಿಯಂತ್ರಕ ಸಂಸ್ಥೆ ಅಥವಾ ಆಯೋಗವನ್ನು ಸ್ಥಾಪಿಸಿ, ಸ್ಥಾಪಿತ ಮಾನದಂಡಗಳು ಮತ್ತು ಶಿಷ್ಟಾಚಾರಗಳ ಅನುಸರಣೆಯನ್ನು ಖಾತ್ರಿಪಡಿಸಿಕೊಳ್ಳುವುದು.

ಮೇಲೆ ತಿಳಿಸಲಾದ ಪರಿಹಾರಗಳು ಚುನಾವಣಾ ನ್ಯಾಯವ್ಯಾಪ್ತಿಯ ನಿರ್ದಿಷ್ಟ ಸಂದರ್ಭ ಮತ್ತು ಅವಶ್ಯಕತೆಗಳನ್ನು ಪರಿಗಣಿಸುವ ಸಮಗ್ರ ವಿಧಾನದ ಅಗತ್ಯವಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ.

## ಉಪಸಂಹಾರ

ಭಾರತದ ಚುನಾವಣಾ ಆಯೋಗದ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು ಚುನಾವಣಾ ಪ್ರಕ್ರಿಯೆಗೆ ದಕ್ಷತೆ, ನಿಖರತೆ, ಪಾರದರ್ಶಕತೆ ಮತ್ತು ನಂಬಿಕೆಯನ್ನು ತರುವ ಸಾಮರ್ಥ್ಯವನ್ನು ಹೊಂದಿವೆ. ಆದಾಗ್ಯೂ, ದುರ್ಬಲತೆಗಳನ್ನು ಪರಿಹರಿಸುವುದು, ದೃಢವಾದ ಭದ್ರತಾ ಕ್ರಮಗಳನ್ನು ಖಚಿತಪಡಿಸುವುದು ಮತ್ತು ಅಂತರ್ಗತ ಹಾಗೂ ಪಾರದರ್ಶಕ ವಿಧಾನದ ಮೂಲಕ ಸಾರ್ವಜನಿಕ ವಿಶ್ವಾಸವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳನ್ನು ಸರಿಯಾದ ಸುರಕ್ಷತೆಗಳು ಮತ್ತು ನಿಯಮಗಳೊಂದಿಗೆ ಕಾರ್ಯಗತಗೊಳಿಸಿದಾಗ, ಚುನಾವಣೆಯ ಸಮಗ್ರತೆ ಹಾಗೂ ನ್ಯಾಯಸಮ್ಮತತೆಗೆ ಕೊಡುಗೆ ನೀಡುವುದರ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸಬಹುದಾಗಿದೆ.

## ಪರಾಮರ್ಶನ ಗ್ರಂಥಗಳು


- **ಎಲೆಕ್ಷನ್ ಕಮಿಷನ್ ಆಫ್ ಇಂಡಿಯಾ (2018) :** "ಹ್ಯಾಂಡ್ ಬುಕ್ ಆಫ್ ಎಲೆಕ್ಟ್ರಾನಿಕ್ ವೋಟಿಂಗ್ ಮಿಷನ್".
- **ಪಬ್ಲಿಕ್ ನೋಟಿಸ್ :** ಪಿಎನ್/ಇಸಿಐ/41/2009 ಎಲೆಕ್ಷನ್ ಕಮಿಷನ್ ಅಫ್ ಇಂಡಿಯಾ (2009). ಎಲೆಕ್ಟ್ರಾನಿಕ್ ವೋಟಿಂಗ್ ಮಿಷನ್–ರಿಗಾರ್ಡಿಂಗ್.
- **ಎಸ್. ವೈ. ಖುರೈಶಿ (2019) :** "ಇವಿಎಂ: ದಿ ಮೇಕಿಂಗ್ ಆಫ್ ಎ ಟೆಕ್ನಾಲಜಿಕಲ್ ಕಾಂಟ್ರಾವರ್ಸಿ" ರೂಪ ಪಬ್ಲಿಕೇಷನ್ ಇಂಡಿಯಾ.
- **ಡಿ. ಅಶೋಕ್ ಕುಮಾರ್ ಮತ್ತು ಟಿ. ಉಮ್ಮಲ್ ಸರಿಬಾ ಬೇಗಂ (2012):** "ಎಲೆಕ್ಟ್ರಾನಿಕ್ ವೋಟಿಂಗ್ ಮಿಷನ್– ಎ ರಿವ್ಯೂ",2012, LEEE ಕನ್ಪರೆನ್ಸ್.
- **ಹರಿ ಕೆ. ಪ್ರಸಾದ್, ಜೆ. ಅಲೆಕ್ಸ್ ಹಾಲ್ಡರ್ಮನ್, ರಾಪ್ ಗಾಂಗ್ಲಿಜ್. (2010) :** "ಸೆಕ್ಯೂರಿಟಿ ಅನಾಲಿಸಿಸ್ ಆಫ್ ಇಂಡಿಯಾಸ್ ಎಲೆಕ್ಟ್ರಾನಿಕ್ ವೋಟಿಂಗ್ ಮಿಷನ್"ಪ್ರೊ. 17ಎಸಿಎಂ ಕಾನ್ಫರೆನ್ಸ್ ಆನ್ ಕಂಪ್ಯೂಟರ್ ಮತ್ತು ಕಮ್ಯುನಿಕೇಷನ್ಸ್ ಸೆಕ್ಯುರಿಟಿ.
- **ಸಾಹಿಬ್ಜಾದಾ ಮುಹಮ್ಮದ್ ಅಲಿ, ಚೌಧರಿ ಅರ್ಷದ್ ಮೆಹಮೂದ್, ಅಹ್ಸಾನ್ ಖವ್ಜಾ. (2013) :** "ಮೈಕ್ರೋ–ಕಂಟ್ರೋಲರ್ ಬೇಸ್ಡ್ ಸ್ಮಾರ್ಟ್ ಎಲೆಕ್ಟ್ರಾನಿಕ್ ವೋಟಿಂಗ್ ಮಿಷನ್ ಸಿಸ್ಟಂ" ಐಇಇಇ ಕಾನ್ಫರೆನ್ಸ್.
- **ಪಿಆರ್‌ಒ ಹ್ಯಾಂಡ್‌ಬುಕ್ 2022.**
- https://eci.gov.in/
- http://eci.nic.in/eci_main/ElectoralLaws/HandBooks/
- https://en.wikipedia.org/wiki/Electronic_voting_in_India


■■


ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com


ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಆಧುನಿಕ ಭಾಷಾ ವಿಜ್ಞಾನದ ಪಿತಾಮಹ ಅವ್ರಾಮ್ ನೋಮ್ ಚೋಮ್ಸ್ಕಿ ಒಂದು ಅವಲೋಕನ

✍ **ಡಾ. ಟಿ. ದೀಪಕ್ ಕುಮಾರ್** ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, (ಸ್ವಾಯತ್ತ) ಮಂಡ್ಯ.

## ಪೀಠಿಕೆ

ಅವ್ರಾಮ್ ನೋಮ್ ಚೋಮ್ಸ್ಕಿ ಅಮೇರಿಕದ ಭಾಷಾ ವಿಜ್ಞಾನಿ, ತತ್ವಜ್ಞಾನಿ, ಕಾಗ್ನಿಟಿವ್ ವಿಜ್ಞಾನಿ, ರಾಜನೀತಿಕ ಚಳುವಳಿಗಾರ, ಲೇಖಕ, ಹಾಗೂ ಉಪನ್ಯಾಸಕ. ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಭಾಷಾ ವಿಜ್ಞಾನದಲ್ಲಿ ಇನ್‌ಸ್ಟಿಟ್ಯೂಟ್ ಪ್ರಾಚಾರ್ಯ ಆಗಿ ಇರುವವರು. ವಿಜ್ಞಾನದ ಜಗತ್ತಿನಲ್ಲಿ **ಆಧುನಿಕ ಭಾಷಾ ವಿಜ್ಞಾನದ ಪಿತಾಮಹ** ಎಂದು ಪ್ರಖ್ಯಾತಿ ಹೊಂದಿರುವವರು.



ಒಬ್ಬ ಅಮೇರಿಕನ್ ಸಾರ್ವಜನಿಕ ಬುದ್ಧಿ ಜೀವಿಯಾಗಿದ್ದು, ಭಾಷಾಶಾಸ್ತ್ರ ರಾಜಕೀಯ ಕ್ರಿಯಾವಾದ ಮತ್ತು ಸಾಮಾಜಿಕ ಟೀಕೆಗಳಲ್ಲಿ ಅವರ ಕೆಲಸಕ್ಕೆ ಹೆಸರುವಾಸಿಯಾಗಿದ್ದಾರೆ. ಕೆಲವೊಮ್ಮೆ ***"ಆಧುನಿಕ ಭಾಷಾಶಾಸ್ತ್ರದ ಪಿತಾಮಹ"*** ಎಂದು ಕರೆಯಲಾಗುತ್ತದೆ, ಚೋಮ್ಸ್ಕಿರವರು ವಿಶ್ಲೇಷಣಾತ್ಮಕ ತತ್ತ್ವಶಾಸ್ತ್ರದಲ್ಲಿ ಪ್ರಮುಖ ವ್ಯಕ್ತಿ ಮತ್ತು ಅರಿವಿನ ವಿಜ್ಞಾನದ ಕ್ಷೇತ್ರದ ಸಂಸ್ಥಾಪಕರಲ್ಲಿ ಒಬ್ಬರು. ಅವರು ಅರಿಜೋನಾ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರದ ಪ್ರಶಸ್ತಿ ವಿಜೇತ ಪ್ರಾಧ್ಯಾಪಕರಾಗಿದ್ದರು ಮತ್ತು ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MIT) ಯಲ್ಲಿ ಇನ್‌ಸ್ಟಿಟ್ಯೂಟ್ ಪ್ರೊಫೆಸರ್ ಆಗಿದ್ದರು. ಚೋಮ್ಸ್ಕಿ ಭಾಷಾಶಾಸ್ತ್ರ, ಯುದ್ಧ ಮತ್ತು ರಾಜಕೀಯದಂತಹ ವಿಷಯಗಳ ಕುರಿತು 150 ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ.

ಅವ್ರಾಮ್ ನೋಮ್ ಚೋಮ್ಸ್ಕಿ ರವರು ಫಿಲಡೆಲ್ಫಿಯಾದಲ್ಲಿ (ರಷ್ಯಾ) ಇಂಡಿಯಾ ಡಿಸೆಂಬರ್ 7, 1928 ಜನಿಸಿದ್ದರು. **ತಂದೆ ಡಾ. ವಿಲಿಯಂ ಚೋಮ್ಸ್ಕಿ, ತಾಯಿ ಎಲ್ಸ ಸಿಮೋನೋಫ್‌ಸಿ, 1933 ರಲ್ಲಿ ತಾಯ್ನಾಡನ್ನು ತೊರೆದು ಅಮೆರಿಕಕ್ಕೆ ಬಂದು ನೆಲೆಸಿದ್ದರು.** ಫಿಲಡೆಲ್ಫಿಯಾದಲ್ಲಿ ಅಶ್ಕೆನಾಜಿ ಯಹೂದಿ ವಲಸಿಗರಿಗೆ ಜನಿಸಿದ ಚೋಮ್ಸ್ಕಿ ಅರಾಜಕತಾ ವಾದದಲ್ಲಿ ಆರಂಭಿಕ ಆಸಕ್ತಿಯನ್ನು ಬೆಳೆಸಿಕೊಂಡರು. ಇವರು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು. ಹಾರ್ವರ್ಡ್ ಸೊಸೈಟಿ ಆಫ್ ಫೆಲೋಸ್ನಲ್ಲಿ ತನ್ನ ಸ್ನಾತಕೋತ್ತರ ಪದವಿಯ ಸಮಯದಲ್ಲಿ, ಚೋಮ್ಸ್ಕಿ ರೂಪಾಂತರದ ವ್ಯಾಕರಣದ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿದರು, ಇದಕ್ಕಾಗಿ ಅವರು 1955 ರಲ್ಲಿ ಡಾಕ್ಟರೇಟ್ ಪಡೆದರು. ಆ ವರ್ಷ ಅವರು MIT ಯಲ್ಲಿ ಬೋಧನೆಯನ್ನು ಪ್ರಾರಂಭಿಸಿದರು ಮತ್ತು 1957 ರಲ್ಲಿ ಅವರ ಹೆಗ್ಗುರುತಾಗಿರುವ ಸಿಂಟ್ಯಾಕ್ಟಿಕ್ ಕೃತಿಯೊಂದಿಗೆ ಭಾಷಾಶಾಸ್ತ್ರದಲ್ಲಿ ಗಮನಾರ್ಹ ವ್ಯಕ್ತಿಯಾಗಿ ಹೊರಹೊಮ್ಮಿದರು. ಈ ಕೃತಿ ಭಾಷೆಯ ಅಧ್ಯಯನವನ್ನು ಮರುರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. 1958 ರಿಂದ 1959 ರವರೆಗೆ ಚೋಮ್ಸ್ಕಿ ಅವರು ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡಿಯಲ್ಲಿ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದ ಸಹವರ್ತಿಯಾಗಿದ್ದರು. ಅವರು ಸಾರ್ವತ್ರಿಕ ವ್ಯಾಕರಣ ಸಿದ್ಧಾಂತ, ಉತ್ಪಾದಕ ವ್ಯಾಕರಣ ಸಿದ್ಧಾಂತ, ಚೋಮ್ಸ್ಕಿ ಕ್ರಮಾನುಗತ ಮತ್ತು ಕನಿಷ್ಠ ಕಾರ್ಯಕ್ರಮವನ್ನು ರಚಿಸಿದರು. ಭಾಷಿಕ ನಡವಳಿಕೆಯ ಅವನತಿಯಲ್ಲಿ ಚೋಮ್ಸ್ಕಿ ಕೂಡ ಪ್ರಮುಖ ಪಾತ್ರವನ್ನು ವಹಿಸಿದರು.

ಮಾನವ ವಿಜ್ಞಾನದಲ್ಲಿ ಅರಿವಿನ ಕ್ರಾಂತಿಯನ್ನು ಹುಟ್ಟುಹಾಕಲು ಸಹಾಯ ಮಾಡಿದ ಚೋಮ್ಸ್ಕಿ ವ್ಯಾಪಕವಾಗಿ ಗುರುತಿಸಲ್ಪಟ್ಟಿದ್ದರು. ಭಾಷೆ ಮತ್ತು ಮನಸ್ಸಿನ ಅಧ್ಯಯನಕ್ಕಾಗಿ ಹೊಸ ಅರಿವಿನ ಚೌಕಟ್ಟಿನ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾನೆ. US ವಿದೇಶಾಂಗ ನೀತಿ, ಸಮಕಾಲೀನ ಬಂಡವಾಳಶಾಹಿ, US ಒಳಗೊಳ್ಳುವಿಕೆ ಮತ್ತು ಇಸ್ರೇಲಿ–ಪ್ಯಾಲೆಸ್ಟೀನಿಯನ್ ಸಂಘರ್ಷದಲ್ಲಿ ಇಸ್ರೇಲ್ನ ಪಾತ್ರ ಮತ್ತು ಸಮೂಹ ಮಾಧ್ಯಮಗಳ ಪ್ರಮುಖ ವಿಷಯಗಳ ಬಗ್ಗೆ ವಿಮರ್ಶಕರಾಗಿ ಚೋಮ್ಸ್ಕಿ ಉಳಿದಿದ್ದಾರೆ. ಬಂಡವಾಳಶಾಹಿ ವಿರೋಧಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗಳಲ್ಲಿ ಚೋಮ್ಸ್ಕಿ ಮತ್ತು ಅವರ ಆಲೋಚನೆಗಳು ಹೆಚ್ಚು ಪ್ರಭಾವ ಶಾಲಿಯಾಗಿವೆ.

## ಪ್ರಶಸ್ತಿಗಳು ಮತ್ತು ಗೌರವಗಳು

(ನೋಮ್ ಚೋಮ್ಸ್ಕಿಗೆ ನೀಡಲಾದ ಗೌರವ ಪದವಿಗಳ ಪಟ್ಟಿ)

- ನ್ಯೂಕ್ಲಿಯರ್ ಏಜ್ ಪೀಸ್ ಫೌಂಡೇಶನ್, ಡೇವಿಡ್ ಕ್ರೀಗರ್ (2014)
- 1970 ರಲ್ಲಿ, ಲಂಡನ್ ಟೈಮ್ಸ್ ಚೋಮ್ಸ್ಕಿಯನ್ನು **"ಇಪ್ಪತ್ತನೇ ಶತಮಾನದ ತಯಾರಕರು"** ಎಂದು ಹೆಸರಿಸಿತು. ಅಮೆರಿಕದ ನಿಯತಕಾಲಿಕೆ ಫಾರಿನ್ ಪಾಲಿಸಿ ಮತ್ತು ಬ್ರಿಟಿಷ್ ನಿಯತಕಾಲಿಕೆ ಪ್ರಾಸ್ಪೆಕ್ಟ್ ಜಂಟಿಯಾಗಿ ನಡೆಸಿದ
- 2005ರ ಗ್ಲೋಬಲ್ ಇಂಟೆಲೆಕ್ಚುಯಲ್ಸ್ ಪೋಲ್ನಲ್ಲಿ ಅವರು ವಿಶ್ವದ ಪ್ರಮುಖ ಸಾರ್ವಜನಿಕ ಬುದ್ಧಿಜೀವಿ ಎಂದು ಆಯ್ಕೆಯಾದರು.
- ನ್ಯೂ ಸ್ಟೇಟ್ಸ್‌ಮನ್ ಓದುಗರು 2006 ರಲ್ಲಿ ಚೋಮ್ಸ್ಕಿಯನ್ನು ವಿಶ್ವದ ಅಗ್ರಗಣ್ಯ ವೀರರ ಪಟ್ಟಿಯಲ್ಲಿ ಸೇರಿಸಿದರು.
- ದಿ ಏಷಿಯಾಟಿಕ್ ಸೊಸೈಟಿಯಿಂದ ರವೀಂದ್ರನಾಥ ಟ್ಯಾಗೋರ್ ಶತಮಾನೋತ್ಸವ ಪ್ರಶಸ್ತಿಯನ್ನೂ ಪಡೆದಿದ್ದಾರೆ.
- ರಾಜಕೀಯ ವಿಶ್ಲೇಷಕ ಮತ್ತು ಮಾಧ್ಯಮ ವಿಮರ್ಶಕರಾಗಿ ಅವರ ಕಾರ್ಯವನ್ನು ಅಂಗೀಕರಿಸಲು ಚೋಮ್ಸ್ಕಿಅವರು ಜರ್ಮನಿಯ ಓಲ್ಡೆನ್ಬರ್ಗ್ ನಗರದಿಂದ 2004 ರ ಕಾರ್ಲ್–ವಾನ್–ಒಸಿಟ್ಜ್ಕಿ ಪ್ರಶಸ್ತಿಯನ್ನು ಪಡೆದರು.

## ಬುದ್ಧಿಜೀವಿಗಳ ಜವಾಬ್ದಾರಿ ಕುರಿತು ನೋಮ್ ಚೋಮ್ಸ್ಕಿ ಅವರ ಅಭಿಪ್ರಾಯಗಳು

ನೋಮ್ ಚೋಮ್ಸ್ಕಿ ಅವರು ಅಮೆರಿಕದ ಪ್ರತ್ಯೇಕ ರಾಜಕೀಯ ಚಿಂತಕರಾಗಿದ್ದು, ಇವರು 1967ರಲ್ಲಿ ಬರೆದಿರುವ **ಬುದ್ಧಿಜೀವಿಗಳ ಜವಾಬ್ದಾರಿ** ಕುರಿತು ಪ್ರಬಂಧವು ಪ್ರಸಿದ್ಧಿಯನ್ನು ಪಡೆದಿದೆ.

ಹಲವಾರು ದಶಗಳ ಕಾಲ ನೋಮ್ ಚೋಮ್ಸ್ಕಿ ಅವರು ಪ್ರಬಲ ಸ್ವಾತಂತ್ರ್ಯವಾದಿ ಮತ್ತು ಸಮಾಜವಾದಿ ರಾಜಕೀಯ ಚಿಂತಕ ಮತ್ತು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬಂಡವಾಳಶಾಹಿ ವಿರೋಧಿ ಹೋರಾಟಗಾರರಾಗಿಯೂ ಬರಹಗಾರರಾಗಿ ವಿಶ್ವದಲ್ಲಿ ಗುರುತಿಸಿಕೊಂಡಿದ್ದಾರೆ.

1947 ರಲ್ಲಿ ಡ್ವೆಟ್ ಮೆಕ್ ಡೊನಾಲ್ಡ್ ರವರು ಜವಾಬ್ದಾರಿ ಕುರಿತು ಬರೆದಿರದ ಲೇಖನದಿಂದ ಪ್ರಭಾವಿತರಾಗಿ ಅಮೆರಿಕಾ–ವಿಯೆಟ್ನಾಂ ಯುದ್ಧದ ಸಂದರ್ಭದಲ್ಲಿ ಬುದ್ಧಿಜೀವಿಗಳ ಪಾತ್ರ ಮತ್ತು ಜವಾಬ್ದಾರಿಗಳ ಕುರಿತು ವಿಮರ್ಶಿಸುತ್ತಾರೆ.

- ಅಮೆರಿಕ ತನ್ನ ಮಿಲಿಟರಿ ಮತ್ತು ಆರ್ಥಿಕ ಶಕ್ತಿಯಿಂದಾಗಿ ನವ ಸಮಾಜವಾದಿ ಶಕ್ತಿಯಾಗಿ ಬೆಳೆದು ಇತರ ರಾಷ್ಟ್ರಗಳ ಮೇಲೆ ದಬ್ಬಾಳಿಕೆ ನಡೆಸಲು ತನಗೆ ರಾಷ್ಟ್ರದ ಮತದಾರ ಒಪ್ಪಿಗೆ ಇದೆ ಎಂದು ಬಿಂಬಿಸುತ್ತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರುಪಯೋಗ ಪಡಿಸುತ್ತಿದೆ ಚೋಮ್ಸ್ಕಿ ಅವರ ವಾದ.
- ಬುದ್ಧಿಜೀವಿಗಳ ಸರ್ಕಾರ ಪ್ರೇರಿತ ಯುದ್ಧಾಪರಾಧಗಳನ್ನು ಪ್ರೋತ್ಸಾಹಿಸದೆ ನೈತಿಕತೆ ಮತ್ತು ಪ್ರಾಮಾಣಿಕತೆಯಿಂದ ಸರ್ಕಾರಗಳು ಸತ್ಯಾನ್ವೇಷಣೆಯಲ್ಲಿ ತೊಡಗಬೇಕು ಎಂದು ನೋಮ್ ಚೋಮ್ಸ್ಕಿ ತಿಳಿಸುತ್ತಾರೆ.
- ಅಮೆರಿಕದ ವಿಯೆಟ್ನಾಂ ಯುದ್ಧದ ಸಂದರ್ಭದಲ್ಲಿ ವಿಯೆಟ್ನಾಂ ಜನರ ಮೇಲೆ ನಡೆದಂತಹ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಸರ್ಕಾರದ ಅಪರಾಧ ಚಟುವಟಿಕೆಗಳನ್ನು ಸಮರ್ಥಿಸಿ ಕೊಳ್ಳುವುದು ಅಸಾಧ್ಯ. ಇವರು ವಿಯೆಟ್ನಾಂ ಯುದ್ಧದಲ್ಲಿ ಅಮೆರಿಕದ ಭಾಗವಹಿಸಿಕೆಯ ಕಡುವಿರೋಧಿಯಾಗಿದ್ದರು. ಅಮೆರಿಕ ಅಧ್ಯಕ್ಷರಾಗಿರುವ ರಿಚರ್ಡ್ ನಿಕ್ಸನ್ ಅವರ ಶತ್ರುಗಳ ಪಟ್ಟಿಯಲ್ಲಿ ಇವರ ಹೆಸರನ್ನು ಸೇರಿಸಲಾಗಿತ್ತು ಮತ್ತು ಇವರ ಚಟುವಟಿಗಳಿಂದ ಹಲವಾರು ಬಾರಿ ಜೈಲುವಾಸಿಯನ್ನ ಅನುಭವಿಸಿದ್ದರು.
- ಸರ್ಕಾರ ನಡೆಸುವ ಅಪರಾಧಿ ಚಟುವಟಿಕೆಗಳಿಗೆ ಬುದ್ಧಿಜೀವಿಗಳ ಪಾತ್ರ ಜವಾಬ್ದಾರಿ ಏನು ಎಂಬುದು ನೋಮ್ ಚೋಮ್ಸ್ಕಿ ಅವರು ಸರಣಿ ಲೇಖನಗಳ ಮೂಲಕ ತಿಳಿಸಿದ್ದರಿಂದ ಅಮೆರಿಕದಲ್ಲಿ ಯುದ್ಧ ವಿರೋಧಿ ಚಳುವಳಿಗಳು ಆರಂಭವಾದವು. ಎರಡನೇ ಮಹಾ ಯುದ್ಧದ ಸಂದರ್ಭದಲ್ಲಿ ಅಮೆರಿಕ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ನಡೆಸಿದ ಪರಮಾಣು ದಾಳಿಗಳಿಂದಾಗಿ ಉಂಟಾಗಿರುವ ಪರಿಣಾಮಗಳಿಗೆ ಬುದ್ಧಿಜೀವಿಗಳ ಜವಾಬ್ದಾರಿ ಏನು ಎಂಬುದನ್ನು ಪ್ರಶ್ನಿಸಬೇಕು ಎಂದು ತಿಳಿಸುತ್ತಾರೆ.
- ಅಮೆರಿಕದಲ್ಲಿರುವ ಬುದ್ಧಿಜೀವಿಯ ಸಂಸ್ಕೃತಿಯು ಸರ್ಕಾರದ ಅಪ್ರಾಮಾಣಿಕ ಚಟುವಟಿಕೆಗಳನ್ನು ಬೆಂಬಲಿಸಿ ಸರ್ಕಾರಗಳ ದೃಷ್ಟಿಯಲ್ಲಿ ಉತ್ತಮರು ಎನಿಸಿಕೊಳ್ಳುವ ಪ್ರಯತ್ನದಲ್ಲಿ ಸರ್ಕಾರಗಳು ಇನ್ನಷ್ಟು ತಪ್ಪನ್ನು ಮಾಡುವಲ್ಲಿ ಪ್ರೋತ್ಸಾಹ ನೀಡುತ್ತದೆ ಎಂದು ಕಟುವಾಗಿ ಟೀಕಿಸುತ್ತಾರೆ.
- ನೋಮ್ ಚೋಮ್ಸ್ಕಿರವರ ಪ್ರಕಾರ ಬುದ್ಧಿ ಜೀವಿಗಳು ಸರ್ಕಾರದ ಅಪ್ರಮಾಣಿಕತೆ ಮತ್ತು ಕುಟಿಲತೆಯನ್ನು ಬಹಿರಂಗಪಡಿಸುವುದರಿಂದ ಜನರು ಸದಾ ಸರ್ಕಾರಗಳ ಬಗ್ಗೆ ಎಚ್ಚರ ವಹಿಸುವಂತೆ ಜಾಗೃತಿಗೊಳಿಸುತ್ತಾರೆ.
- ನೋಮ್ ಚೋಮ್ಸ್ಕಿರವರ ಬರಹಗಳು ಸರ್ಕಾರಗಳ ಗೌಪ್ಯ ಹಿತಾಸಕ್ತಿ, ಸರ್ಕಾರಗಳೆ ನಡೆಸುವ ಅಪರಾಧ ಚಟುವಟಿಕೆಗಳು ಮತ್ತು ರಾಜಕೀಯ ಮುಖಂಡರುಗಳ ಅಧಿಕಾರವನ್ನು ಸಾಕ್ಷಾಧಾರಗಳೊಂದಿಗೆ ಪ್ರಸ್ತುತ ಪಡಿಸುತ್ತಾರೆ.
- ಕೆಲವು ಸಂದರ್ಭಗಳಲ್ಲಿ ಬಂಡವಾಳಶಾಹಿಗಳ ಪರವಿರುವ ಕೆಲವು ಬುದ್ಧಿಜೀವಿಗಳು ದತ್ತಾಂಶಗಳನ್ನು ತಿರುಚಿ ಸುಳ್ಳನ್ನು ಸತ್ಯಾಂಶವೆಂದು ಬಿಂಬಿಸುವ ನಕಲಿ ಬುದ್ಧಿಜೀವಿಗಳಿಗೆ ಎಚ್ಚರಿಸುತ್ತಾರೆ.
- ಬುದ್ಧಿಜೀವಿಗಳ ನಿಜವಾದ ಜವಾಬ್ದಾರಿಯು ಸತ್ಯವನ್ನು ಹೇಳುವುದು ಮತ್ತು ಸರ್ಕಾರಗಳು ಹೇಳುವ ಸುಳ್ಳನ್ನು ಜನತೆಯ ಮುಂದೆ ಬಹಿರಂಗಪಡಿಸುವುದು.
- ಪಾಶ್ಚಿಮಾತ್ಯ ರಾಜಕೀಯ ವ್ಯವಸ್ಥೆಗಳ ಪ್ರಜಾಪ್ರಭುತ್ವ ಸರ್ಕಾರಗಳು ಜನತೆಗೆ ನೀಡಿರುವ ರಾಜಕೀಯ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಹಿತಿ ಹಕ್ಕುಗಳು ಬುದ್ಧಿಜೀವಿಗಳ ಜವಾಬ್ದಾರಿ ಮೂಲಗಳಾಗಿವೆ ಎಂದು ನೋಮ್ ಚೋಮ್ಸ್ಕಿ ತಿಳಿಸುತ್ತಾರೆ.
- ಬುದ್ಧಿಜೀವಿ ಜವಾಬ್ದಾರಿ ಸಮುದಾಯಿಕ ಹಿತ ಕಾಪಾಡುವಲ್ಲಿ ಪ್ರಯತ್ನಿಸಬೇಕೇ ಹೊರತು ನವ ರಾಜಕಾರಣಿಯಾಗಲು ಯೋಚಿಸಬರುವುದು ಎಂಬುದು ಚೋಮ್ಸ್ಕಿರವರ ನಿಲವು.
- ಸಮಾಜದಲ್ಲಿ ನಡೆಯುತ್ತಿರುವ ಶೋಷಣೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಸರ್ಕಾರದ ಹೆಸರಿನಲ್ಲಿ ನಡೆಯುವ ವಂಚನೆಗಳನ್ನು ಪ್ರತಿಭಟಿಸುವುದು ಬುದ್ಧಿಜೀವಿಗಳ ಪ್ರಮುಖ ಜವಾಬ್ದಾರಿ ಎಂದು ಚೋಮ್ಸ್ಕಿರವರು ತಿಳಿಸುತ್ತಾರೆ.

ಒಟ್ಟಿನಲ್ಲಿ ನಾನು ಚೋಮ್ಸ್ಕಿರವರು ಸರ್ಕಾರಿ ಪ್ರಾಯೋಜಿತ ಮತ್ತು ಸರ್ಕಾರಿ ಪೋಷಿತ ಯುದ್ಧಪರಾಧಗಳು, ಅಧಿಕಾರ ದುರುಪಯೋಗ, ಮತದಾರರ ಒಪ್ಪಿಗೆ ಹೆಸರಿನಲ್ಲಿ ನಡೆಯುವ ರಾಜಕಿಯ ವಂಚನೆಗಳನ್ನು ಪ್ರಬಲವಾಗಿ ಟೀಕಿಸಿದರು ಜೊತೆಗೆ ಬುದ್ಧಿಜೀವಿಗಳ ಜವಾಬ್ದಾರಿ ಮತ್ತು ಪಾತ್ರ ಹೇಗಿರಬೇಕು ಎಂಬುದರ ಬಗ್ಗೆ ಸವಿವರವಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

## ರಾಜಕೀಯದ ಬಗ್ಗೆ ನೋಮ್ ಚೋಮ್ಸ್ಕಿ ರವರ ಅಭಿಪ್ರಾಯಗಳು

ನೋಮ್ ಚೋಮ್ಸ್ಕಿಯವರ ರಾಜಕೀಯ ಸ್ಥಾನಗಳು ಚೋಮ್ಸ್ಕಿ ಕೊಡುಗೆ ನೀಡಿದ ಪ್ರಮುಖ ಕ್ಷೇತ್ರವಾಗಿದೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಇತಿಹಾಸ; ಮತ್ತು ಪ್ರಸ್ತುತ ರಾಜಕೀಯ ಸನ್ನಿವೇಶದ ನಿರ್ಣಾಯಕ ವಮೌಲ್ಯಮಾಪನ. ಚೋಮ್ಸ್ಕಿಯು ದೃಷ್ಟಿಯಲ್ಲಿ, ಅಧಿಕಾರದಲ್ಲಿರುವವರು ತಮ್ಮ ಉದ್ದೇಶಗಳನ್ನು ಮರೆಮಾಚಲು ಮತ್ತು ನಾಗರಿಕರಿಗೆ ಸ್ವೀಕಾರಾರ್ಹ ರೀತಿಯಲ್ಲಿ ತಮ್ಮ ಕಾರ್ಯಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರೂ–ಮಾಡಿದರೂ, ವಿಮರ್ಶಾತ್ಮಕ ವಾಗಿರಲು ಮತ್ತು ಸತ್ಯಗಳನ್ನು ಪರಿಗಣಿಸಲು ಸಿದ್ಧರಿರುವ ಯಾರಿಗಾದರೂ ಏನನ್ನು ವಿವೇಚಿಸುವುದು ಸುಲಭ.

ಚೋಮ್ಸ್ಕಿ ಯ ದೃಷ್ಟಿಯಲ್ಲಿ, ರಾಜಕೀಯ ವಾಸ್ತವಗಳು ಸತ್ಯವನ್ನು ವ್ಯವಸ್ಥಿತವಾಗಿ ವಿರೂಪಗೊಳಿಸಲಾಗಿದೆ ಅಥವಾ ಕಾರ್ಪೊರೇಟ್ ಪ್ರಭುತ್ವವು ನಿಗ್ರಹಿಸುತ್ತದೆ, ಕಾರ್ಪೊರೇಟ್ ಮಾಧ್ಯಮಗಳು, ಜಾಹೀರಾತುಗಳು ತನ್ನದೇ ಆದ ಪ್ರಚಾರವನ್ನು ಉತ್ತೇಜಿಸಲು ಬಳಸಲಾಗುತ್ತದೆ. ಅವರ ಕೆಲಸವು ಅಂತಹ ಕುಶಲತೆಗಳನ್ನು ಮತ್ತು ಅವರು ಮರೆಮಾಚುವ ಸತ್ಯವನ್ನು ಬಹಿರಂಗಪಡಿಸಲು ಪ್ರಯತ್ನಿಸುತ್ತದೆ. "ಸಾಮಾನ್ಯ ಜ್ಞಾನ", ವಿಮರ್ಶಾತ್ಮಕ ಚಿಂತನೆ ಮತ್ತು ಸ್ವ–ಆಸಕ್ತಿ ಮತ್ತು ಸ್ವಯಂ–ವಂಚನೆಯ ಪಾತ್ರಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಈ ಸುಳ್ಳಿನ ಜಾಲವನ್ನು ಮುರಿಯಬಹುದು ಎಂದು ಚೋಮ್ಸ್ಕಿ ಹೇಳುತ್ತಾರೆ ಮತ್ತು ಬುದ್ಧಿಜೀವಿಗಳು ಭಯದಿಂದ ಪ್ರಪಂಚದ ಬಗ್ಗೆ ಸತ್ಯವನ್ನು ಹೇಳುವ ತಮ್ಮ ನೈತಿಕ ಜವಾಬ್ದಾರಿಯನ್ನು ತ್ಯಜಿಸುತ್ತಾರೆ. ಪ್ರತಿಷ್ಠೆ ಮತ್ತು ನಿಧಿಯನ್ನು ಕಳೆದುಕೊಳ್ಳುವುದು. ಅಂತಹ ಬುದ್ಧಿಜೀವಿಯಾಗಿ, ಅವರ ಹೋರಾಟಗಳಲ್ಲಿ ಜನಪ್ರಿಯ ಪ್ರಜಾಪ್ರಭುತ್ವ ಚಳುವಳಿಗಳಿಗೆ ಸಹಾಯ ಮಾಡಲು ಅವರ ಸಾಮಾಜಿಕ ಸವಲತ್ತು, ಸಂಪನ್ಮೂಲಗಳು ಮತ್ತು ತರಬೇತಿಯನ್ನು ಬಳಸುವುದು ಅವರ ಕರ್ತವ್ಯವಾಗಿದೆ ಎಂದು ಅವರು ವಾದಿಸುತ್ತಾರೆ. ಅವರು ನೇರ ಕ್ರಿಯೆಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರದರ್ಶನಗಳಲ್ಲಿ ಭಾಗವಹಿಸಿದ್ದರೂ–ಪ್ರತಿಭಟನೆಗಳಿಗೆ ಸೇರುವುದು, ಬಂಧನಕ್ಕೊಳಗಾಗುವುದು, ಗುಂಪುಗಳನ್ನು ಸಂಘಟಿಸುವುದು–ಚೋಮ್ಸ್ಕಿಯ ಪ್ರಾಥಮಿಕ ರಾಜಕೀಯ ಮಾರ್ಗವೆಂದರೆ ಶಿಕ್ಷಣ, ಅಂದರೆ ಉಚಿತ ಸಾರ್ವಜನಿಕ ಪಾಠಗಳು. ಅವರು ತಮ್ಮ ತಂದೆಯಂತೆ ಇಂಡಸ್ಟ್ರಿಯಲ್ ವರ್ಕರ್ಸ್ ಆಫ್ ದಿ ವರ್ಲ್ಡ್ ಅಂತರಾಷ್ಟ್ರೀಯ ಒಕ್ಕೂಟದ ದೀರ್ಘ ಕಾಲದ ಸದಸ್ಯರಾಗಿದ್ದಾರೆ.

## ಸಮಾಜವಾದ ಮತ್ತು ಕಮ್ಯುನಿಸಂ ಬಗ್ಗೆ ನೋಮ್ ಚೋಮ್ಸ್ಕಿರವರ ಅಭಿಪ್ರಾಯಗಳು

ನೋಮ್ ಚೋಮ್ಸ್ಕಿಯವರು ಲಿಬರ್ಟೇರಿಯನ್ ಸಮಾಜವಾದವನ್ನು **"ಸುಧಾರಿತ ಕೈಗಾರಿಕಾ ಸಮಾಜದ ಯುಗಕ್ಕೆ"** ಶಾಸ್ತ್ರೀಯ ಉದಾರವಾದದ **"ಸರಿಯಾದ ಮತ್ತು ನೈಸರ್ಗಿಕ ವಿಸ್ತರಣೆ"** ಎಂದು ಪರಿಗಣಿಸುತ್ತಾರೆ. ಚೋಮ್ಸ್ಕಿ ಸ್ವಾತಂತ್ರ್ಯವಾದಿ ಸಮಾಜವಾದಿ ಕಲ್ಪನೆಗಳನ್ನು ಜ್ಞಾನೋದಯದ ಯುಗದ ಶಾಸ್ತ್ರೀಯ ಉದಾರವಾದಿ ಕಲ್ಪನೆಗಳು ಎಂದು ನೋಡುತ್ತಾರೆ, ಅವರ ಸೈದ್ಧಾಂತಿಕ ಸ್ಥಾನವು "ಮನುಷ್ಯನ ಸ್ವಾತಂತ್ರ್ಯವಾದಿ ಮತ್ತು ಸೃಜನಶೀಲ ಗುಣಗಳನ್ನು ಪೋಷಿಸುವ" ಸುತ್ತ ಸುತ್ತುತ್ತದೆ ಎಂದು ವಾದಿಸುತ್ತಾರೆ. ಸಾಮಾನ್ಯ ಸಭೆಗಳಲ್ಲಿ ಒಟ್ಟಾಗಿ ಭೇಟಿಯಾಗಲು ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಕಾರ್ಮಿಕರ ಮಂಡಳಿಗಳು ಉತ್ಪಾದನಾ ಸಾಧನಗಳು ಮತ್ತು ಸರ್ಕಾರದ ನೇರ ಕಾರ್ಮಿಕರ ನಿಯಂತ್ರಣದೊಂದಿಗೆ ಅರಾಜಕ ಭವಿಷ್ಯವನ್ನು ಚೋಮ್ಸ್ಕಿ ರೂಪಿಸುತ್ತಾರೆ. ಜೆಫರ್ಸನ್ ಅವರ ಮಾತಿನಲ್ಲಿ ಹೇಳುವುದಾದರೆ, ಈ ಸ್ವ–ಆಡಳಿತದ ಅಂಶವೆಂದರೆ ಪ್ರತಿಯೊಬ್ಬ ನಾಗರಿಕನನ್ನು "ವ್ಯವಹಾರಗಳ ಸರ್ಕಾರದಲ್ಲಿ ನೇರ ಭಾಗಿದಾರ" ಮಾಡುವುದು. ರಾಜಕೀಯ ಪಕ್ಷಗಳ ಅವಶ್ಯಕತೆ ಇರುವುದಿಲ್ಲ ಎಂದು ಚೋಮ್ಸ್ಕಿ ನಂಬಿದ್ದರು. ವ್ಯಕ್ತಿಗಳು ತಮ್ಮ ಉತ್ಪಾದಕ ಜೀವನವನ್ನು ನಿಯಂತ್ರಿಸುವ ಮೂಲಕ ಉದ್ಯೋಗ ತೃಪ್ತಿ ಮತ್ತು ನೆರವೇರಿಕೆ ಮತ್ತು ಉದ್ದೇಶದ ಅರ್ಥವನ್ನು ಪಡೆಯಬಹುದು ಎಂದು ಚೋಮ್ಸ್ಕಿ ಹೇಳುತ್ತಾರೆ. ಅಹಿತಕರ ಮತ್ತು ಜನಪ್ರಿಯವಲ್ಲದ ಕೆಲಸಗಳನ್ನು ಸಂಪೂರ್ಣವಾಗಿ ಸ್ವಯಂಚಾಲಿತಗೊಳಿಸಬಹುದು, ವಿಶೇಷವಾಗಿ ಸಂಭಾವನೆ ಪಡೆಯುವ ಕೆಲಸಗಾರರು ನಿರ್ವಹಿಸಬಹುದು ಅಥವಾ ಎಲ್ಲರ ನಡುವೆ ಹಂಚಿಕೊಳ್ಳಬಹುದು ಎಂದು ಚೋಮ್ಸ್ಕಿ ವಾದಿಸುತ್ತಾರೆ.

## ನೋಮ್ ಚೋಮ್ಸ್ಕಿರವರ ಇತರೆ ಚಿಂತನೆಗಳು

- ಅಮೇರಿಕನ್ ಲಿಬರ್ಟೇರಿಯನ್ ಮೇಲಿನ ಅಭಿಪ್ರಾಯಗಳು
- ಕಲ್ಯಾಣ ರಾಜ್ಯದ ಬಗ್ಗೆ ಚಿಂತೆಗಳು
- ಯುನೈಟೆಡ್ ಸ್ಟೇಟ್ಸ್ ಸರ್ಕಾರದ ಮೇಲಿನ ಟೀಕೆಗಳು
- ಭಯೋತ್ಪಾದನೆಯ ಬಗ್ಗೆ ಅಭಿಪ್ರಾಯಗಳು
- ಮಾರ್ಕ್ಸ್‌ವಾದದ ಮೇಲಿನ ಅಭಿಪ್ರಾಯಗಳು
- ಬೌದ್ಧಿಕ ಸಮುದಾಯಗಳ ಟೀಕೆಗಳು
- ಉತ್ಪಾದನಾ ಒಪ್ಪಿಗೆಯ ಬಗ್ಗೆ ಅಭಿಪ್ರಾಯಗಳು

## ಉಪಸಂಹಾರ

ನೋಮ್ ಚೋಮ್ಸ್ಕಿ ಜಗತ್ತಿನಲೇ ಜೀವಂತವಿರುವ ಬಹುದೊಡ್ಡ ಬುದ್ಧಿಜೀವಿ. ಭಾಷೆಯನ್ನು ಅರಿಯುವುದಾದರೆ ಮನುಷ್ಯತ್ವವನ್ನು ಅರಿತಂತೆ ಮತ್ತು ಮನುಷ್ಯತ್ವನ ಮೂಲ ದ್ರವ್ಯವೆಂದರೆ ಆತನಿಗೆ ಇರುವ **'ಸ್ವಾತಂತ್ರ್ಯ'** ಮತ್ತು **'ಸ್ವತಂತ್ರ್ಯ ಪ್ರಜ್ಞೆ'** ಎಂದು ಪ್ರತಿಪಾದಿಸಿದ ಜಗತ್ತಿನ ಬಹುದೊಡ್ಡ ಭಾಷಾ ವಿಜ್ಞಾನಿ. ಪ್ರಖ್ಯಾತ ವಿದ್ವಾಂಸ, ತತ್ವಜ್ಞಾನಿ ಮತ್ತು ಸಮಾಜ ಸಿದ್ಧಾಂತಿ. ರಾಜಕೀಯ ಕಾರ್ಯಕರ್ತ, ಯುನೈಟೆಡ್ ಸ್ಟೇಟ್ಸ್ ಮತ್ತು ಇತರ ಸರ್ಕಾರಗಳ ವಿದೇಶಾಂಗ ನೀತಿಯ ವಿಮರ್ಶಕ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಎಡಪಂಥೀಯ ರಾಜಕೀಯದಲ್ಲಿ ಪ್ರಮುಖ ಬೌದ್ಧಿಕ ವ್ಯಕ್ತಿ ಎಂದು ಪರಿಗಣಿಸಲಾಗಿದೆ.

## ಪರಾಮರ್ಶನ ಗ್ರಂಥಗಳು


- **ಡಾ. ಕವಂಟೆ ಎಸ್. ಎಚ್. :** ರಾಜಕೀಯ ಸಿದ್ಧಾಂತ ಮತ್ತು ರಾಜಕೀಯ ಚಿಂತಕರು
- **ನ. ರವಿಕುಮಾರ (ಸಂ.) :** ನೋಮ್ ಚಾಮ್ಸ್ಕಿ ಮನು ಕುಲದ ಮಾತುಗಾರ.
- **James Mc Gilvray :** Chomsky : Language, Mind and Politics
- **Wilkin P :** Noam Chomsky : On Power, Knowledge and Human Nature


■■

– *27ನೇ ಪುಟದಿಂದ ಮುಂದುವರೆದುದು*

ರಕ್ತಗತವಾಗಿ ಮೈಗೂಡಿಸಿಕೊಂಡು ರೂಢಿಗತವಾಗಿ ಮಾಡುವಲ್ಲಿ ಯಾವುದೇ ಸಮರ್ಥ ಶಕ್ತಿ ಇಲ್ಲದಂತಾಗಿ ಇಂದಿಗೂ ಅಣ್ಣನ ಸಾಮಾಜಿಕ ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಬರಿಕನಸಾಗಿಯೇ ಇಲ್ಲವೆ ಕಲ್ಪನೆಯಾಗಿಯೇ ಇಲ್ಲವೆ ಭಾಷಣಕಾರರಿಗೆ ಸಮಾನತೆಯ ನ್ಯಾಯದ ವಿಷಯದ ಸರಕಾಗಿ ಕೇಳುಗರಿಗೆ ಭಾವತುಂಬಿ ಚಪ್ಪಾಳೆ ಬರಿಸುವದಕ್ಕೆ ಮಾತ್ರ ಸಿಮಿತವಾಗಿರುವದರ ಜೊತೆಗೆ ವಿಶ್ವಮಾನವತಾವಾದಿಯನ್ನು ನಮ್ಮ ಆಧುನಿಕ ಸಮಾಜವೊಂದು ಜಾತಿವರ್ಗಕ್ಕೆ ಸೀಮಿತವಾಗಿಡುವ ಒಂದು ವ್ಯವಸ್ಥಿತ ಷಡ್ಯಂತ್ರ ಪ್ರತಿನಿತ್ಯ ನಡೆಯುವದು ವಿಷಾಧನೀಯವಾಗಿದೆ. ಆಧಾಗ್ಯೂ ಕೂಡಾ ಅಂದಿನ ಅವರ ಶಕ್ತಿಯುತ ಬರವಣಿಗೆ ಪ್ರಸ್ತುತ ಸಾಮಾಜಿಕ ಸಮಾನತೆ ಮತ್ತು ನ್ಯಾಯವನ್ನು ಸರಿದುಗಿಸಿಕೊಂಡು ಹೊಗುವದರಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ.

## ಪರಾಮರ್ಶನ ಗ್ರಂಥಗಳು


- **ಕನ್ನಡ ಪುಸ್ತಕ ಪ್ರಾಧಿಕಾರ :** ಸಂಕೀರ್ಣ ವಚನ ಸಂಪುಟ– 1–15
- **ಎಮ್.ಎಮ್. ಕಲಬುರ್ಗಿ (ಸಂ.) :** ಬಸವಸ್ತೋತ್ರದ ವಚನಗಳು.
- **ವೀರಣ್ಣ ರಾಜೂರ (ಸಂ.) :** ವಚನಸಾರ
- **ಬಿ.ಆರ್. ಹಿರೇಮಠ (ಸಂ.) :** ಸುಖಸಂಪಾದನೆಯ ವಚನಗಳು
- **ಪ್ರೊ. ಬಸವನಾಳ ಶಿವಲಿಂಗಪ್ಪನವರು :** ಬಸವಣ್ಣನವರ ಷಟ್‌ಸ್ಥಳದ ವಚನಗಳು
- **ಚ.ನ. ಶಂಕರರಾವ್ :** ಸಾಮಾಜಿಕ ಚಿಂತನೆಯ ಅಧ್ಯಯನ
- **ವೆಂಕಟರೆಡ್ಡಿ ಗು. ದೇಸಾಯಿ :** ಬಸವಣ್ಣನವರ ವಚನಗಳು
- **ಕೆ. ಮರುಳ ಸಿದ್ದಪ್ಪ ಮತ್ತು ಕಿ.ರಂ. ನಾಗರಾಜ (ಸಂ.) :** ವಚನ ಕಮ್ಮಟ.
- **ಡಾ. ಎಲ್. ಬಸವರಾಜು (ಸಂ.) :** ಬಸವಣ್ಣನವರ ವಚನಗಳು
- **ಡಾ. ಎಚ್.ಟಿ. ಪೋತೆ :** ಶರಣ ಸಂಸ್ಕೃತಿ


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಚಿತ್ರದುರ್ಗ ಜಿಲ್ಲೆಯ ಹಬ್ಬ – ಉತ್ಸವಗಳು

✍ **ಡಾ. ಬಿ ಜಯಮ್ಮ,** ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಇತಿಹಾಸ ವಿಭಾಗ, ಹೆಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.

ಶಾಶ್ವತ ಬರಪೀಡಿತ ಪ್ರದೇಶವೆಂದೇ ಗುರುತಿಸಲ್ಪಟ್ಟಿರುವ ಚಿತ್ರದುರ್ಗ ಜಿಲ್ಲೆಯು ಕರ್ನಾಟಕದಲ್ಲೇ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ಆದಾಗ್ಯೂ ಈ ಪ್ರದೇಶದ ಜನರ ಪ್ರಮುಖ ವೃತ್ತಿ ಕೃಷಿಯೇ ಆಗಿರುವುದು ವಿಪರ್ಯಾಸವೇ ಸರಿ. ನಾಯಕ, ಗೊಲ್ಲ, ಲಂಬಾಣಿ, ಬೋವಿ, ಹೀಗೆ ಹೆಚ್ಚಿನದಾಗಿ ಬುಡಕಟ್ಟು ಸಮುದಾಯದವರೇ ಇಲ್ಲಿ ವಾಸಿಸುತ್ತಿದ್ದು, ಇವರೊಂದಿಗೆ ವಿರಳವಾಗಿ ಮುಸ್ಲಿಂರನ್ನು ಒಳಗೊಂಡಂತೆ ಇತರ ಎಲ್ಲಾ ಕೊಮಿನವರೂ ಸೌಹಾರ್ದಾಯುತವಾಗಿ ಜೀವಿಸುತ್ತಿದ್ದಾರೆ. ಯುಗಾದಿ, ದೀಪಾವಳಿ, ದಸರ, ಮೊಹರಂ, ಕ್ರಿಸ್‌ಮಸ್ ಇತ್ಯಾದಿ ಹಬ್ಬಗಳನ್ನು ಕರ್ನಾಟಕದಾದ್ಯಂತ ಆಚರಿಸುವಂತೆಯೇ ಇಲ್ಲಿಯೂ ಆಚರಿಸಲಾಗುತ್ತದೆ. ಜಿಲ್ಲೆಯಲ್ಲಿ ಪ್ರಮುಖ ಹಾಗೂ ವಿಶೇಷವಾಗಿ ಆಚರಿಸುವ ಸ್ಥಳೀಯ ಹಬ್ಬ–ಉತ್ಸವಗಳನ್ನಷ್ಟೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಚಿತ್ರದುರ್ಗ ನಗರದಲ್ಲಿ ಚೈತ್ರಮಾಸದಲ್ಲಿ ನಡೆಯುವ 'ಭೇಟಿ ಉತ್ಸವ' ಮತ್ತು 'ಸಿಡಿ ಉತ್ಸವ' ಗಳು ಸ್ಥಳೀಯ ಧಾರ್ಮಿಕ ಮನೋಭಾವವನ್ನು ತಿಳಿಸುತ್ತವೆ. ಚಿತ್ರದುರ್ಗ ಪಾಳೆಯಪಟ್ಟನ್ನು ನಿರ್ಮಿಸಿ, ಸುಮಾರು ಎರಡು ಶತಮಾನಗಳಿಗೂ ಹೆಚ್ಚುಕಾಲ ಆಳ್ವಿಕೆ ನಡೆಸಿದ ಚಿತ್ರದುರ್ಗದ ಪಾಳೆಯಗಾರರ ಮನೆದೇವತೆಯಾದ ಶ್ರೀ ಏಕನಾಥೇಶ್ವರಿ ದೇವತೆಯ ಸಿಡಿ ಉತ್ಸವ ತುಂಬ ವಿಶಿಷ್ಟವಾದುದು. ಯುಗಾದಿ ಹಬ್ಬ ಮುಕ್ತಾಯಗೊಂಡು ಹದಿನೈದು ದಿನಗಳ ನಂತರದ ಶನಿವಾರದಂದು ನಡೆಯುವ ಈ ಸಿಡಿ ಉತ್ಸವವು ಕೇವಲ ಜಿಲ್ಲೆಯನ್ನಷ್ಟೆ ಅಲ್ಲದೆ ರಾಜ್ಯಾದ್ಯಂತ ಭಕ್ತಾದಿಗಳ ಗಮನವನ್ನು ಸೆಳೆದಿದೆ. ಪಾಳೆಯಗಾರರ ಆಳ್ವಿಕೆಯ ಹಾಗೂ ನಂತರದ ಕಾಲದಲ್ಲಿ ಈ ಸಿಡಿ ಉತ್ಸವವನ್ನು ಬೆಟ್ಟದ ಮೇಲಿರುವ ಶ್ರೀ ಏಕನಾಥೇಶ್ವರಿ ದೇವಾಲಯದ ಮುಂಭಾಗದಲ್ಲಿರುವ ವಿಶಾಲವಾದ ಪ್ರದೇಶದಲ್ಲಿ ಆಚರಿಸುತ್ತಿದ್ದುದು ತಿಳಿದುಬರುತ್ತದೆ. ಆದರೆ ಇತ್ತೀಚಿಗೆ ಬೆಟ್ಟದ ತಪ್ಪಲಿನಲ್ಲಿರುವ ದೇವಿಯ ಪಾದಗಟ್ಟೆಯ (ಫಿಲ್ಟರ್ ಹೌಸ್) ಬಳಿ ಆಚರಿಸುತ್ತಿರುವುದನ್ನು ಕಾಣುತ್ತೇವೆ. ಸಿಡಿ ಆಚರಣೆಯ ಸಂದರ್ಭದಲ್ಲಿ ನೆರೆದಿರುವ ಭಕ್ತರಲ್ಲಿ ಭೀತಿಯೇ ಭಕ್ತಿಯಾಗಿ ಹರಿಯುವಂಥ ಸನ್ನಿವೇಶ ಸೃಷ್ಟಿಯಾಗಿರುತ್ತದೆ. ಕೊಂಬು, ಕಹಳೆ, ಉರಿಮೆ, ಡೋಲುಗಳ ಸದ್ದು ಭಕ್ತಾದಿಗಳಲ್ಲಿ ರೋಮಾಂಚನವನ್ನುಂಟು ಮಾಡುತ್ತದೆ. ಹರಕೆ ಹೊತ್ತ ಭಕ್ತರು ಸಿಡಿ ಆಡಲು–ನೋಡಲು ಉತ್ಸುಕರಾಗಿ ಭಾಗವಹಿಸುವುದನ್ನು ಕಂಡರೆ, ಮಾನವ ಎಷ್ಟೇ ವೈಚಾರಿಕನಾದರೂ ಅದಕ್ಕೆ ಧಾರ್ಮಿಕ ತಳಹದಿ ಇರುವುದು ಸ್ಪಷ್ಟವಾಗುತ್ತದೆ.

ಪಾಳೆಯಗಾರರ ಕಾಲದಲ್ಲಿ ಸಿಡಿ ಆಡುವ ಭಕ್ತನ ಬೆನ್ನೆಲುಬಿನ ಹುರಿಗೇ ಸಿಡಿ ಕಂಬದ ಕೊಕ್ಕೆಯನ್ನು ನೆಟ್ಟು 'ಸಿಡಿ' ಆಡಿಸುತ್ತಿದ್ದ ವಿವರಗಳನ್ನು ಹಿರಿಯರು ಹೇಳುವುದನ್ನು ಕೇಳಿದರೆ ಸಾಕು ಮೈ ಒಂದುಕ್ಷಣ ತಲ್ಲಣಗೊಳ್ಳುತ್ತದೆ. ಅದು ಅವರ ಕ್ರೌರ್ಯ ಸಂಪ್ರದಾಯಕ್ಕೆ ಉದಾಹರಣೆಯಂತೆನಿಸುತ್ತದೆ. ಆದರೆ ಪ್ರಸ್ತುತ ನಡೆಯುವ ಸಿಡಿ ಉತ್ಸವವು ಸಾಕಷ್ಟು ಬದಲಾವಣೆಗಳನ್ನು ಕಂಡು ಸುಧಾರಿಸಿದೆ ಎಂದೇ ಹೇಳಬಹುದು. ಸಿಡಿ ಆಡುವ ಭಕ್ತನ ಸೊಂಟವನ್ನು ಸಿಡಿ ಕಂಬಕ್ಕೆ ಕಟ್ಟುವುದನ್ನು ಗಮನಿಸಿದರೇ ಸಾಕು ಸಂಪ್ರದಾಯ ಎಷ್ಟೊಂದು ಸಡಿಲಗೊಂಡಿದೆ ಎಂದು ಯಾರಿಗಾದರೂ ಅರ್ಥವಾಗುತ್ತದೆ. ಇದು ಇಂದು ಕೇವಲ ಸಾಂಕೇತಿಕ ಉತ್ಸವವಾಗಿ ಉಳಿದುಕೊಂಡು ಬಂದಿದೆಯಾದರೂ ರಾಜ್ಯಾದ್ಯಂತ ಭಕ್ತರನ್ನು ಆಕರ್ಷಿಸುತ್ತ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ.

ಸಿಡಿ ಉತ್ಸವವಾದ ನಂತರದ ಮಂಗಳವಾರದಂದು ನಡೆಯುವ ಭೇಟಿ ಉತ್ಸವವು ಇಲ್ಲಿನ ಮತ್ತೊಂದು ವಿಶಿಷ್ಟ ಆಚರಣೆ ಎಂದೇ ಹೇಳಬೇಕಾಗುತ್ತದೆ. ಸ್ಥಳೀಯ ಮಟ್ಟದಲ್ಲಿ ಬಹುದೊಡ್ಡ ಜಾತ್ರಾ ಸ್ವರೂಪವನ್ನು ಪಡೆದಿರುವ ಈ ಆಚರಣೆಯು ಬೇರಾವ ಕಡೆಯೂ ನಡೆಯುವುದರ ಬಗ್ಗೆ ಮಾಹಿತಿ ಲಭ್ಯವಿಲ್ಲ. ಅಷ್ಟರ ಮಟ್ಟಿಗೆ ಈ ಉತ್ಸವ ತನ್ನ ವಿಶಿಷ್ಟತೆಯಿಂದ ಪ್ರಸಿದ್ಧಿ ಪಡೆದಿದೆ.

ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ 'ನವದುರ್ಗಿಯರ' ಪ್ರತಿಷ್ಠಾಪನೆಯ ಬಗ್ಗೆ ವಿವರಗಳು ದೊರೆಯುತ್ತವೆ. ಅವರೆಂದರೆ, ಉಚ್ಚಂಗಿಯಮ್ಮ (ಉತ್ಸವಾಂಭ), ಕಾಳಿಕಾಂಬ, ತಿಪ್ಪಿನಘಟ್ಟಮ್ಮ, ಬರಗೇರಮ್ಮ, ಕೆರೆ ಅಂಗಳದ ಚೌಡಮ್ಮ, ಗೌರಸಮುದ್ರದ ಮಾರಮ್ಮ, ಕಣಿವೆಮಾರಮ್ಮ, ಕುಕ್ಕವಾಡದಮ್ಮ, ಹಾಗೂ ಶ್ರೀ ಏಕನಾಥೇಶ್ವರಿ, ಈ ನವದೇವತೆಯರ ಆಲಯಗಳು (ಉಚ್ಚಂಗಿ ದೇವಾಲಯವನ್ನು ಹೊರತುಪಡಿಸಿ) ಅಷ್ಟೇನೂ ಬೃಹದಾಕಾರವಾಗಿ, ಆಕರ್ಷಣೀಯವಾಗಿ, ಹಾಗೂ ವಾಸ್ತುಶೈಲಿ ದೃಷ್ಟಿಯಿಂದ ಪ್ರಮುಖವಾಗಿರದೆ ಸಾದಾರಣವಾಗಿರುವ ದೇವಾಲಯಗಳಾಗಿವೆ. ಆದರೆ ಇವುಗಳಲ್ಲಿ ಇಂದಿಗೂ ಪೂಜಾದಿಕಾರಿಗಳು ನಡೆಯುತ್ತಿದ್ದು ಜನರ ನಂಬಿಕೆಗಳ ಆಗರಗಳಾಗಿವೆ. ಈ ನವದುರ್ಗಿಯರಲ್ಲಿ ತಿಪ್ಪಿನ ಘಟ್ಟಮ್ಮ (ತ್ರಿಪುರ ಸುಂದರಿ) ಮತ್ತು ಬರಗೇರಮ್ಮ ಎನ್ನುವ ಸಹೋದರಿಯರು ಪರಸ್ಪರ ಭೇಟಿಯಾಗುವ ಉತ್ಸವವನ್ನೆ ಭೇಟಿ ಉತ್ಸವ ಎಂದು ಕರೆಯಲಾಗುತ್ತದೆ. ಈ ಭೇಟಿಯ ಹಿನ್ನೆಲೆಯ ಸೂಕ್ಷ್ಮತೆಯನ್ನು ಗಮನಿಸಿದರೆ ಯಾರಿಗಾದರೂ ಆಶ್ಚರ್ಯವೆನಿಸುತ್ತದೆ. ಈ ಉತ್ಸವ ಕುರಿತು ಹೇಳುವ ಜನಪದ ಕಥೆಯನ್ನು ಈ ಪ್ರದೇಶದಾದ್ಯಂತ ಯಾವುದೇ ಹಿರಿಯ ವ್ಯಕ್ತಿಯನ್ನು ಕೇಳಿದರೂ ಮಾಹಿತಿ ನೀಡುವುದನ್ನು ಗಮನಿಸಿದರೆ ಇದರ ಸತ್ಯಾಸತ್ಯತೆ ಮತ್ತು ವ್ಯಕ್ತಿ ನಿಷ್ಠತೆ ಅರಿವಾಗುತ್ತದೆ. "ಮಕ್ಕಳಿಲ್ಲದವರ ಮನನೋಹಿಸುವುದು ಸ್ತ್ರೀ ಲಕ್ಷಣವಲ್ಲ ಎನ್ನುವ ನೀತಿಪಾಠ ಹೇಳುವುದರ ಜೊತೆಗೆ ಸುಳ್ಳು ಹೇಳುವುದು, ಅಸೂಹೆ ಪಡುವುದು ಎಂದಿಗೂ ಅಪಾಯ" ಎನ್ನುವ ಸತ್ಯ ಈ ಕಥೆಯಲ್ಲಿ ಅಡಗಿದೆ.

ನಗರದ ದೊಡ್ಡಪೇಟೆಯ ರಾಜ ಬೀಧಿಯಲ್ಲಿ ನಡೆಯುವ ಈ ಭೇಟಿ ಉತ್ಸವ ಇಂದು ಸರ್ಕಾರಿ ಉತ್ಸವವಾಗಿ ಮಾರ್ಪಟ್ಟಿದೆ. ಒಂದು ವರ್ಷದ ನಂತರ ಭೇಟಿಗಾಗಿ ಪೂರ್ವ–ಪಶ್ಚಿಮ ದಿಕ್ಕುಗಳಿಂದ ಪರಸ್ಪರ ಅಭಿಮುಖವಾಗಿ ಬರುವ ಈ ಸಹೋದರಿಯರ ರಭಸ, ವೈಭವದ ನಡಿಗೆ, ಸುತ್ತಮುತ್ತಲಿನ ಹಾಗೂ ಸ್ವತಃ ದೇವಿಯರ ಕುಣಿತ ನೋಡುಗರ ಮೈನವಿರೇಳಿಸುವಂತಿರುತ್ತದೆ. ಪರಸ್ಪರ ಮೂರು ಬಾರಿ ಮುಖಕ್ಕೆ ಮುಖ ತಾಕಿಸಿಕೊಳ್ಳುವ ಈ ಸನ್ನಿವೇಶ, ಸಂದರ್ಭದಲ್ಲಿ ಭಕ್ತಾದಿಗಳು ಹೂವಿನ ಮಳೆಗರೆಯುತ್ತಾರೆ.ಸೀಟಿ, ಚಪ್ಪಾಳೆ, ಉರುಮೆಗಳ ಸದ್ದು ಮುಗಿಲು ಮುಟ್ಟಿರುವಂತೆ ಭಾಸವಾಗುತ್ತದೆ. ಪುನಃ ಕೆಲವೇ ಕ್ಷಣಗಳಲ್ಲಿ ಈರ್ವರೂ ತಾವು ಬಂದ ದಿಕ್ಕಿನೆಡೆಗೆ ತಿರುಗಿ ಸಂತೋಷ ಭರಿತರಾಗಿ ಕುಣಿಯುತ್ತಾ ಸಾಗುತ್ತಾರೆ. ಅಂತಿಮವಾಗಿ ತಡರಾತ್ರಿ ತಮ್ಮ ತಮ್ಮ ದೇವಾಲಯಗಳಲ್ಲಿ ಪ್ರತಿಷ್ಠಾಪನೆಗೊಳ್ಳುತ್ತಾರೆ. ಭೇಟಿಯ ದಿನಕ್ಕಿಂತ ಮೂರುದಿನ ಮುಂಚೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹಾಗೂ ಭೇಟಿಯ ನಂತರದ ದಿನಗಳಲ್ಲಿ ಬರಗೇರಮ್ಮ ಹಾಗೂ ತಿಪ್ಪಿನ ಗಟ್ಟಮ್ಮ ದೇವತೆಗಳನ್ನು ಭಕ್ತರು ತಲೆಯ ಮೇಲೆ ಹೊತ್ತು ಪ್ರತೀ ಮನೆಗೆ ಹೋಗುವುದು, ಆ ಸಂದರ್ಭದ ಸೋಮನ ಕುಣಿತ, ಡೊಳ್ಳು, ಉರುಮೆಗಳ ಸದ್ದು ಉತ್ಸವಕ್ಕೆ ರಂಗೇರಿಸುತ್ತದೆ. ಈ ಭೇಟಿ ಉತ್ಸವವನ್ನು ಸ್ಥಳೀಯರು ಹಾಗೂ ಜಿಲ್ಲೆಯಾದ್ಯಾಂತ ಭಕ್ತಾದಿಗಳು ಎತ್ತಿನ ಬಂಡಿಗಳಲ್ಲಿ ಬಂದು ವೀಕ್ಷಿಸುತ್ತಾರೆ. ಭೇಟಿ ಉತ್ಸವವು ಸಾಮಾನ್ಯವಾಗಿ ಸಾಯಂಕಾಲ ಏಳರಿಂದ–ಎಂಟು ಗಂಟೆ ಮಧ್ಯೆ ನಡೆಯುವುದರಿಂದ ಝಗಮಗಿಸುತ್ತಿರುವ ದೀಪಾಲಂಕಾರ ನಗರವನ್ನು ಹಾಗೂ ಉತ್ಸವವನ್ನು ನೋಡುಗರಲ್ಲಿ ಚಕಿತವನ್ನುಂಟು ಮಾಡುವಂತಿರುತ್ತದೆ. ಇದೇ ಸಂದರ್ಭದಲ್ಲಿ ನಾನಾ ಕಾರಣಗಳಿಂದಾಗಿ ಹತ್ತಾರು ವರ್ಷಗಳಿಂದ ಪರಸ್ಪರ ಒಬ್ಬರನ್ನೊಬ್ಬರು ಮಾತನಾಡಿಸದೆ ಮಾತು ಬಿಟ್ಟವರನ್ನು ಹಿಡಿದು ತಂದು ಮುಖ ಭೇಟಿ ಮಾಡಿಸಿ ವ್ಯಾಜ್ಯ ಬಗೆಹರಿಸುವ ಸಂಪ್ರದಾಯ ಇಂದಿಗೂ ಇಲ್ಲಿನ ಜನರಲ್ಲಿದೆ. ನ್ಯಾಯಾಲಯಗಳಲ್ಲಿ ಬಗೆಹರಿಯದ ಎಷ್ಟೋ ವ್ಯಾಜ್ಯಗಳು ಈ ಭೇಟಿ ಉತ್ಸವ ಸಂದರ್ಭದಲ್ಲಿ ಬಗೆಹರಿದಿರುವ ಅನೇಕ ಉದಾಹರಣೆಗಳನ್ನು ಗಮನಿಸಿದರೆ ಈ ಉತ್ಸವವು ಸ್ಥಳೀಯ ಜನರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಪರಿಯನ್ನು ಅರ್ಥಪಡಿಸಿಕೊಳ್ಳಬಹುದು.

ಭೇಟಿ ಉತ್ಸವದ ನಂತರ ಚಿತ್ರದುರ್ಗ ನಗರದಲ್ಲಿ ನಡೆಯುವ ಮತ್ತೊಂದು ಉತ್ಸವವೆಂದರೆ, ಉಚ್ಚಂಗಿಯಮ್ಮನ ಸಿಡಿ ಉತ್ಸವ. ಈ ಸಿಡಿಯು ಶ್ರೀ ಏಕನಾಥೇಶ್ವರಿ ದೇವಿಯ ಸಿಡಿ ಉತ್ಸವದ ನಂತರ ಸರಿಸುಮಾರು ಒಂದು ತಿಂಗಳಲ್ಲಿ ನಡೆಯುತ್ತದೆ. ಹೆಚ್ಚು ಕಡಿಮೆ ಅದೇ ವೈಭವದಲ್ಲಿ ನಡೆಯುವ ಈ ಸಿಡಿ ಉತ್ಸವಕ್ಕೆ ಚಿತ್ರದುರ್ಗ ಜಿಲ್ಲೆಯ ಜನರು ಸಾಕ್ಷಿಗಳಾಗುತ್ತಾರೆ. ಈ ಮೂರು ಉತ್ಸವಗಳು ಒಂದು ತಿಂಗಳ ಅಂತರದಲ್ಲೇ ನಡೆದು ನಾಡಿನ ಸಾಂಸ್ಕೃತಿಕ ವೈಭವವನ್ನು ಸಾರುತ್ತವೆ. ಮುಖ್ಯವಾಗಿ ಈ ಮೂರು ಉತ್ಸವಗಳಲ್ಲೂ ಬಹುತೇಕ ಎಲ್ಲ ಧರ್ಮೀಯರು, ಜಾತಿಗಳವರೂ ಪಾಲ್ಗೊಳ್ಳುವುದರ ಮೂಲಕ ತಮ್ಮ ಜಾತ್ಯಾತೀತ ಮನೋಭಾವವನ್ನು ತೋರ್ಪಡಿಸುವರು.

ಆಷಾಢ ಮಾಸದಲ್ಲಿ ಸಾಮಾನ್ಯವಾಗಿ ಯಾವುದೇ ಹಬ್ಬ ಉತ್ಸವಗಳು ನಡೆಯುವುದಿಲ್ಲ. ನಂತರದ ಶ್ರಾವಣದಲ್ಲಿ ಚಿತ್ರದುರ್ಗ ನಗರದ ಉತ್ತರ ದಿಕ್ಕಿನ ಹೊರವಲಯದಲ್ಲಿರುವ ಶ್ರೀ ವೆಂಕಟರಮಣ ದೇವಾಲಯದಲ್ಲಿ ಪ್ರತೀ ಶನಿವಾರ ವಿಶೇಷ ಪೂಜಾಧಿಕಾರ್ಯಗಳು ನಡೆಯುವವು. ಈ ದೇವಾಲಯವು ಚಿತ್ರದುರ್ಗದ ಪಾಳೆಯಗಾರರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವುದರಿಂದ ಪ್ರಾಯಶಃ ಈ ಸಂಪ್ರದಾಯ ಅಂದಿನಿಂದಲೇ ಪ್ರಾರಂಭವಾದಂತೆ ಕಂಡು ಬರುತ್ತದೆ.ಈ ಉತ್ಸವದಲ್ಲಿ ಎಲ್ಲ ಜಾತಿ ಧರ್ಮದವರು ಭಾಗವಹಿಸಿದರೂ ಸಹ ನಾಯಕ ಜನಾಂಗದವರು 'ನಿಶಾನಿ' ಗಳನ್ನಿಡಿದು ಪ್ರಮುಖ ಪಾತ್ರವಹಿಸುವರು. ವಿಶೇಷವಾಗಿ ನಡೆಯುವ ಈ ರಥೋತ್ಸವವನ್ನು ಮೇಲು ವರ್ಗದವರು 'ಮೈಲಿಗೆ ತೇರು' ಎಂದು ಕರೆಯುವರು. ಪ್ರಾಯಶಃ ಬ್ರಾಹ್ಮಣೇತರರೇ ಈ ರಥೋತ್ಸವವನ್ನು ನಡೆಸುವುದರಿಂದ ಹಾಗೆ ಕರೆದಿರುವ ಸಾಧ್ಯತೆಯಿದೆ.

ಮೈಸೂರಿನಲ್ಲಿ ನಡೆಯುವ ದಸರ ಉತ್ಸವದ ಸಂದರ್ಭದಲ್ಲಿ ಅದೇ ಮಾದರಿಯಲ್ಲೇ ಚಿತ್ರದುರ್ಗ ನಗರದ ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ 'ಶರಣ ಸಂಸ್ಕೃತಿ' ಉತ್ಸವ ನಡೆಯುತ್ತದೆ. ಶ್ರೀ ಮುರುಘಾಮಠದ ವತಿಯಿಂದ ಹತ್ತು ದಿನಗಳ ಕಾಲ ನಡೆಯುವ ಈ ಉತ್ಸವವು ನಾಡಿನಾದ್ಯಂತ ಖ್ಯಾತಿಗಳಿಸಿದೆ. ಪ್ರತಿದಿನ ಸಾಯಂಕಾಲ ಪ್ರವಚನ ನಡೆಯುತ್ತದೆ. ಈ ಪ್ರವಚನ ಕಾರ್ಯಕ್ರಮಗಳಲ್ಲಿ ನಾಡಿನ, ರಾಷ್ಟ್ರದ ಅನೇಕ ಖ್ಯಾತ ವಿದ್ವಾಂಸರು, ಬುದ್ದಿಜೀವಿಗಳು, ವಿವಿಧ ಸಮುದಾಯದ ಮುಖಂಡರುಗಳು, ಮಠಾಧಿಪತಿಗಳು ಆಗಮಿಸಿ ತಮ್ಮ ಪ್ರವಚನಗಳನ್ನು ನೀಡುವರು. ಇದೇ ಸಂದರ್ಭದಲ್ಲಿ ಶ್ರೀ ಶೃಂಗೇರಿ ಮಠದ ವತಿಯಿಂದ ನವರಾತ್ರಿ ಉತ್ಸವ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಈ ಉತ್ಸವದಲ್ಲಿಯೂ ಸಹ ಅನೇಕ ವಿದ್ವಾಂಸರು, ಕವಿಗಳು, ಸಂಶೋಧಕರುಗಳು ಭಾಗವಹಿಸುವುದರ ಮೂಲಕ ಕಾರ್ಯಕ್ರಮವನ್ನು ಅರ್ಥಪೂರ್ಣ ಗೊಳಿಸುವರು.

ಚಿತ್ರದುರ್ಗ ಜಿಲ್ಲೆಯಲ್ಲಿ ಜಾತ್ಯಾತೀತ ಧೋರಣೆಯನ್ನು ಹೊಂದಿ ಆಚರಿಸಲ್ಪಡುವ ಮತ್ತೊಂದು ಉತ್ಸವವೆಂದರೆ 'ಮೊಹರಂ', ಈ ಉತ್ಸವವನ್ನು ಪ್ರಮುಖವಾಗಿ ಮುಸ್ಲಿಂ ಬಾಂಧವರು ಆಚರಿಸಿದರೂ ಸಹ ಹಿಂದುಗಳು ಭಾಗವಹಿಸುವುದರ ಮೂಲಕ ಅಷ್ಟೇ ಪ್ರಮುಖವಾದ ಪಾತ್ರವನ್ನು ವಹಿಸುವರು. ಜಿಲ್ಲೆಯಾದ್ಯಂತ ಮುಸ್ಲಿಂ ಜನಾಂಗದವರಿರುವ ಬಹತೇಕ ಹಳ್ಳಿ–ಪಟ್ಟಣಗಳಲ್ಲಿ ಈ ಉತ್ಸವ ನಡೆಯುತ್ತದೆ. ಚಿತ್ರದುರ್ಗ ನಗರದಲ್ಲಂತೂ ಈ ಉತ್ಸವ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಈ ಸಂದರ್ಭದಲ್ಲಿ ಭಕ್ತಾದಿಗಳು ಹುಲಿವೇಷ, ಕರಡಿವೇಷ, ಪಾಳೆಯಗಾರರ ವೇಷ ಇತ್ಯಾದಿ ವೇಷಗಳನ್ನು ಹಾಕುವುದರ ಮೂಲಕ ಉತ್ಸವಕ್ಕೆ ಹಿಂದಿನ ರಂಗನ್ನುತರುತ್ತಾರೆ. ಈ ಹಬ್ಬದ ವೈಶಿಷ್ಟವೆಂದರೆ ಭಕ್ತಾದಿಗಳು ಅಗ್ನಿಕುಂಡದಲ್ಲಿ ಧುಮುಕಿ ಬೆಂಕಿಯನ್ನು ತುಳಿಯುವುದು. ಹಿಂದೂ ಮುಸ್ಲಿಂರೆನ್ನದೆ ಭಕ್ತಾದಿಗಳು ತಮ್ಮ ಹರಕೆಯನ್ನು ಬೆಂಕಿ ತುಳಿಯುವುದರ ಮೂಲಕ ಈಡೇರಿಸುವರು. ಮೊಹರಂನ ಕಡೆಯ ದಿನ 'ಹಸೇನ್–ಹುಸೇನ್' ದೇವರುಗಳು ನೀರಿಗೆ ಬೀಳುವರು. ಈ ಸಂರ್ಭದಲ್ಲಿ ದೇವರುಗಳನ್ನು ರಾಜಬೀದಿಯಲ್ಲಿ ಮಾಡುತ್ತಾರೆ. ಅಸಂಖ್ಯಾತ ಸ್ರೀ–ಪುರುಷರು ಬೆಲ್ಲ, ಮಂಡಕ್ಕಿಯನ್ನು ತೂರುವುದರ ಮೂಲಕ ತಮ್ಮ ಭಕ್ತಿಯನ್ನು ತೋರ್ಪಡಿಸುವರು. ಮಧ್ಯಾಹ್ನ ಆರಂಭವಾದ ಈ ಮೆರವಣಿಗೆ ಸಾಯಂಕಾಲ ಎಂಟುಗಂಟೆ ಸುಮಾರಿಗೆ ಸಂತೇ ಹೊಂಡದ ಬಳಿ ಆಗಮಿಸುತ್ತದೆ. ಅಂತಿಮವಾಗಿ ದೇವರುಗಳನ್ನು ನೀರಿನಲ್ಲಿ ಬಿಡುವುದರ ಮೂಲಕ ಹಿಂದೂ ಮುಸ್ಲಿಂರು ತಮ್ಮ ಜಾತ್ಯಾತೀತ ಮನೋಭಾವವನ್ನು ತೋರ್ಪಡಿಸುವರು.

ಇದೇ ಸಂದರ್ಭದಲ್ಲಿ ದೇಶಾದ್ಯಂತ ಅತ್ಯಂತ ಉತ್ಸವದಿಂದ ಜರುಗುವ ಉತ್ಸವವೆಂದರೆ 'ಗಣಪತಿ ಉತ್ಸವ'. ಚಿತ್ರದುರ್ಗ ನಗರ ಹಾಗೂ ಪ್ರತೀ ಹಳ್ಳಿಗಳಲ್ಲಿ ಈ ಉತ್ಸವ 3 ರಿಂದ 16 ದಿನಗಳವರೆಗೆ ನಡೆಯುತ್ತದೆ. ಚಿತ್ರದುರ್ಗ ನಗರದ ಆನೆಬಾಗಿಲು ಮತ್ತು ರಂಗಯ್ಯನ ಬಾಗಿಲುಗಳ ಬಳಿ ಬೃಹದಾಕಾರದ ಗಣೇಶನನ್ನು ಪ್ರತಿಷ್ಠಾಪಿಸುವುದರ ಮೂಲಕ ಅತ್ಯಂತ ವಿಜೃಂಭಣೆಯಿಂದ ಈ ಉತ್ಸವವನ್ನು ಆಚರಿಸುತ್ತಾರೆ. 11 ಅಥವಾ 16 ದಿನಗಳವರೆಗೆ ಪ್ರತಿದಿನ ಪೂಜಾದಿ ಕಾರ್ಯಗಳು ನಡೆಯುತ್ತವೆ. ಇತ್ತೀಚೆಗೆ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆ ಮಾಡುವರು 21 ದಿನಗಳ ಕಾಲ ಪ್ರತೀ ದಿನ ಸಾಯಂಕಾಲ ಹಲವಾರು ಸಾಂಸ್ಕೃತಿಕ, ಜಾಗೃತಿ ಕಾರ್ಯಕ್ರಮಗಳು, ನಾಟಕಗಳನ್ನು ಪ್ರದರ್ಶಿಸುವ ಪರಿಪಾಠವಿದೆ. ಅಂತಿಮವಾಗಿ ರಾಜ ಬೀದಿಗಳಲ್ಲಿ ಮೆರವಣಿಗೆ ಮಾಡುವದರ ಮೂಲಕ ಚಂದ್ರವಳ್ಳಿ ಕೆರೆಯಲ್ಲಿ ವಿಸರ್ಜಿಸುವರು. ಹಿಂದೂ ಮಹಾಗಣಪತಿಯ ವಿಸರ್ಜನೆಯಂದು ಬೇರೆ ಬೇರೆ ಜಿಲ್ಲೆ ರಾಜ್ಯಗಳಿಂದ ಲಕ್ಷಾಂತರ ಜನ ಸೇರುವರು.

ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಮಾರಮ್ಮ ಜಾತ್ರೆಯು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯುವ ಮತ್ತೊಂದು ಪ್ರಮುಖ ಉತ್ಸವಎಂದೇ ಹೇಳಬಹುದು. ಗಣಪತಿ ಉತ್ಸವದ ನಂತರ ಬರುವ ಮಂಗಳವಾರದಂದು ಈ ಜಾತ್ರೆ ನಡೆಯುತ್ತದೆ. ಬುಡಕಟ್ಟು ಸಮುದಾಯದವರೇ ಹೆಚ್ಚಾಗಿರುವ ಈ ಪರಿಸರದಲ್ಲಿ ಆಚರಿಸಲ್ಪಡುವ ವಿಶೇಷ ಹಬ್ಬ ಎಂದೇ ಇದನ್ನು ಹೇಳಬೇಕಾಗುತ್ತದೆ. 'ಪ್ರಾಣಿಬಲಿ' ಈ ಹಬ್ಬದ ವೈಶಿಷ್ಟ. ಸರ್ಕಾರವು ಒಂದು ಕಡೆ ಪ್ರಾಣಿ ಬಲಿಯನ್ನು ನಿಷೇಧಿಸಿದ್ದರೂ ಸಾಮಾನ್ಯ ಜನರ ಭಾವನೆಗಳನ್ನು

*– 46ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಪುರಾಣಗಳ ವಿಶೇಷ ಲಕ್ಷಣಗಳು

✍ ಡಾ. ಎಚ್.ಎಸ್. ಮೇಲಿನಮನಿ, ಕನ್ನಡ ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ

✍ ಡಾ. ಎಸ್.ಎಸ್. ಭಗವತಿ, ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಧಾರವಾಡ

**"ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ**
**ವಂಶಾನುಚರಿತಾನುಚೈವ ಪುರಾಣಂ ಪಂಚಲಕ್ಷಣಂ ॥"**

ಎಂದು ಅಮರಕೋಶ ಪುರಾಣದ ವ್ಯಾಖ್ಯೆಯನ್ನು ಹೇಳುತ್ತದೆ. ವೈದಿಕಪುರಾಣಗಳು ಸಾಗರದಂತೆ ವಿಶಾಲವಾದವು, ಅಪಾರವಾದುವು ಮತ್ತು ಆಳವಾದುವು. ಪ್ರಾಚೀನ ಭಾರತೀಯ ಜ್ಞಾನವನ್ನೆಲ್ಲಾ ಅವು ತನ್ನೊಳಗೆ ಅಳವಡಿಸಿಕೊಂಡಿವೆ. ವಿಶ್ವೋತ್ಪತ್ತಿ ಶಾಸ್ತ್ರ, ಭೂಗರ್ಭಶಾಸ್ತ್ರ, ಭೂಗೋಳಶಾಸ್ತ್ರ, ಇತಿಹಾಸ, ನೀತಿಶಾಸ್ತ್ರ, ತತ್ತ್ವಶಾಸ್ತ್ರ ಮೊದಲಾದ ಎಲ್ಲವನ್ನೂ ಪುರಾಣಗಳು ಒಳಗೊಂಡಿವೆ. ಸುವ್ಯವಸ್ಥಿತವಾದ ಜೋಡಣೆ ಇಲ್ಲದಿದ್ದರೂ ಪುರಾಣಗಳನ್ನು 'ವಿಶ್ವಕೋಶ' ಎಂದು ಕರೆಯಬಹುದು. ಕಲಾಕೌಶಲ್ಯದ ಅಂಶವನ್ನು ಗಣನೆಗೆ ತೆಗೆದುಕೊಂಡರೆ ಪುರಾಣಗಳು ಅಷ್ಟೇನೂ ಉತ್ಕೃಷ್ಟವೆನಿಸಲಾರವಾದರೂ, ಸಾಂಸ್ಕೃತಿಕವಾಗಿ ಇವುಗಳ ಮಟ್ಟ ಅತ್ಯುನ್ನತವೆನ್ನಬಹುದು. ಪ್ರಾಚೀನ ಭಾರತದಲ್ಲಿ ಚಾರಿತ್ರಿಕ ದಾಖಲೆಗಳು ದೊರಕಲಾರವಾದರೂ, ಪುರಾಣಗಳು, ಇತಿಹಾಸಕ್ಕೆ ಸಂಬಂಧಪಟ್ಟ ಕೆಲವು ಅಂಶಗಳನ್ನು ಒದಗಿಸುತ್ತವೆ. ಆದರೆ ಈ ಎಲ್ಲ ಅಂಶಗಳೂ ವಿಶ್ವಸನೀಯ ಎನಿಸಿಕೊಳ್ಳಲಾರವು. ಬೇರೆ ಆಧಾರಗಳ ಬೆಂಬಲದಿಂದ ದೃಢಪಡಿಸಬೇಕು. ಪೌರಾಣಿಕ ಕಥೆಗಳ ತಾತ್ವಿಕ ಮಹತ್ವ, ಸಾಂಕೇತಿಕತೆ ಮತ್ತು ನೈತಿಕ ಅಂಶಗಳು ಜನರ ಮನದ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ. ಪುರಾಣಗಳು ಧಾರ್ಮಿಕ, ತಾತ್ವಿಕ, ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ಒಳಗೊಂಡಿವೆ. ಈ ಎಲ್ಲ ದೃಷ್ಟಿಯಿಂದ ಪುರಾಣಗಳ ಅಭ್ಯಾಸ ಪ್ರಯೋಜನಕರ. ಈಗಾಗಲೆ ಈ ದಿಸೆಯಲ್ಲಿ ವಿದ್ವಾಂಸರು ಅಭ್ಯಾಸ ಮಾಡುತ್ತಿದ್ದಾರೆ.

ಪುರಾಣಗಳ ಕಲ್ಪನೆ ಭಾರತಕ್ಕಷ್ಟೇ ಮೀಸಲಾಗಿಲ್ಲ. ಪ್ರತಿಯೊಂದು ಧರ್ಮವೂ ತನ್ನದೇ ಆದ ದೇವತಾಖ್ಯಾನಗಳಿಂದ ಕೂಡಿದ ಸಾಹಿತ್ಯವನ್ನು ಹೊಂದಿರುತ್ತದೆ. ಉದಾಹರಣೆಗೆ : ಗ್ರೀಕರ ದೇವತಾಖ್ಯಾನ, ಕ್ರಿಶ್ಚಿಯನ್ ದೇವತಾಖ್ಯಾನ, ಇಸ್ಲಾಂ ದೇವತಾಖ್ಯಾನ ಮೊದಲಾದುವು. ಭಾರದಲ್ಲಿಯೇ ಹಲವಾರು ಧರ್ಮಗಳು ತಲೆಯೆತ್ತಿವೆ. ಧರ್ಮಗಳೊಡನೆಯೆ ಅವುಗಳಿಗೆ ಸಂಬಂಧಪಟ್ಟ ದೇವತಾಖ್ಯಾನಗಳೂ ಸಹ ಹುಟ್ಟಿಕೊಂಡಿವೆ. ಇಂತಹ ಧರ್ಮಗಳಲ್ಲಿ ಜೈನಧರ್ಮವೂ ಒಂದು. ಎಲ್ಲ ಧರ್ಮಗಳಂತೆ ಈ ಧರ್ಮವೂ ಸಹ ತನ್ನದೇ ಆದ ವಿಶಿಷ್ಟ ಪೌರಾಣಿಕ ಸಾಹಿತ್ಯವನ್ನು ಒಳಗೊಂಡಿದೆ. ಜೈನಧರ್ಮದ ಉಗಮವಾದಂದಿನಿಂದ ಮತಪ್ರಸಾರಗಳೆ ಆ ಧರ್ಮದ ಪೌರಾಣಿಕ ಸಾಹಿತ್ಯ. ಜೈನಪುರಾಣಗಳು, ವೈದಿಕ ಪುರಾಣಗಳಿಂದ ಭಿನ್ನವಾದ ಕೆಲವು ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿವೆ. ಜೈನಪುರಾಣದ ಎಂಟು ಪ್ರಮುಖ ಅಂಗಗಳು ಇಂತಿವೆ:

1. ತೀರ್ಥಂಕರರ ಭವಾವಳಿ
2. ಪಂಚ ಕಲ್ಯಾಣಗಳು
3. ವಿಶ್ವೋತ್ಪತ್ತಿ
4. ಜೈನ ಪರಮಾರ್ಥವಿದ್ಯೆ
5. ಕರ್ಮತತ್ತ್ವ
6. ಅಣುವ್ರತಗಳು
7. ಗುಣವ್ರತಗಳು
8. ಹನ್ನೆರಡು ಬಗೆಯ ತಪಸ್ಸು

ಇವುಗಳೆಲ್ಲಾ ಜೈನ ಪುರಾಣಗಳಲ್ಲಿ ಚಿತ್ರಿತವಾಗಿರುತ್ತವೆ.

ಜೈನಪುರಾಣಗಳು ತಮ್ಮದೇ ಆದ ಐಕಮತ್ಯವನ್ನು ಸಾಧಿಸಿಕೊಂಡಿವೆ. ಅಸಂಖ್ಯಾತವಾಗಿ ಕಂಡುಬರುವ ಉಪಕಥೆಗಳು ತಮ್ಮ ನೆರಳಿನಿಂದ ಮೂಲ ಕಥೆಯನ್ನು ಮುಚ್ಚಿಬಿಟ್ಟಿವೆಯಲ್ಲದೆ ಸಾಮಾನ್ಯ ಓದುಗ ಭವಾವಳಿಗಳ ಅರಣ್ಯದಲ್ಲಿ ದಿಕ್ಕೆಟ್ಟು ಅಲೆಯುವಂತೆ ಆಗುತ್ತದೆ.

ಸಾಂಪ್ರದಾಯಿಕತೆಯ ಹಾದಿಯಲ್ಲಿಯೇ ನಡೆದುಬಂದ ಪುರಾಣಗಳಲ್ಲಿ ಪರಂಪರೆಯಿಂದ ಬಂದ ಪಂಚಕಲ್ಯಾಣಗಳ ವರ್ಣನೆ, ಪರಾವಿದ್ಯೆ, ಕರ್ಮತತ್ವ, ನರಕ ವರ್ಣನೆ ಮೊದಲಾದುವುಗಳಿಂದ ಕೂಡಿ ಜೈನಪುರಾಣಗಳು ಒಂದೇ ಇವುಗಳಲ್ಲಿ ವೈವಿಧ್ಯತೆ ಮತ್ತು ಕಲಾಪರಿಪೂರ್ಣತೆಯ ಕೊರತೆ ಇದೆ.

ವೀರಶೈವ ಧರ್ಮ ಹಿಂದೂ ಧರ್ಮದ ಮತ್ತೊಂದು ವಿಶಿಷ್ಟ ಉಪಭಾಗವಾದರೂ, ಅದು 18 ವೈದಿಕ ಪುರಾಣಗಳನ್ನು ಒಪ್ಪುವುದಿಲ್ಲ. ವೈದಿಕ ಮತ್ತು ವೀರಶೈವ ಧರ್ಮಗಳ ನಡುವೆ ಕೆಲವು ಮೂಲಭೂತ ತತ್ವಗಳಲ್ಲಿ ಸಾಮ್ಯ ಕಂಡು ಬಂದರೂ ವೀರಶೈವ ವೈದಿಕದಿಂದ ಭಿನ್ನವಾಗಿ ನಿಲ್ಲುತ್ತದೆ. ಇದು ಪೌರಾಣಿಕ ಸಾಹಿತ್ಯವನ್ನು ತನ್ನದೇ ಆದ ರೀತಿಯಲ್ಲಿ ಬೆಳೆಸಿಕೊಂಡಿದೆ. ರೂಪ, ಆತ್ಮ ಮತ್ತು ವಸ್ತುಗಳಲ್ಲಿ ತನ್ನದೇ ವೈಶಿಷ್ಟ್ಯವನ್ನು ರೂಪಿಸಿ, ರೂಢಿಸಿಕೊಂಡಿದೆ.

ಬಸವಪುರಾಣ, ಪದ್ಮಪುರಾಣ, ಪ್ರಭುದೇವರ ಪುರಾಣ, ಮಹದೇವಿಯಕ್ಕನ ಪುರಾಣ, ದೇವರದಾಸಿಮಯ್ಯನ ಪುರಾಣ, ದೇವಾಂಗ ದಾಸಿಮಯ್ಯ ಪುರಾಣ, ಶಿವತತ್ವ ಚಿಂತಾಮಣಿ. ಚನ್ನಬಸವಪುರಾಣ, ವೀರಶೈವಾಮೃತ ಮಹಾ ಪುರಾಣ, ಶಂಕರದಾಸಿಮಯ್ಯನ ಪುರಾಣ, ಚತುರಾಚಾರ್ಯ ಪುರಾಣ, ರೇವಣಸಿದ್ಧೇಶ್ವರ ಪುರಾಣ, ಏಕೋರಾಮೇಶ್ವರ ಪುರಾಣ–ಇಂತಿವೆಲ್ಲ ಪುರಾಣವೆಂದು ರಚಿತವಾದುವು. ಸಿದ್ಧನಂಜೇಶನ ರಾಘವಾಂಕ ಚಾರಿತ್ರ, ಗುರುರಾಜ ಚಾರಿತ್ರ, ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ ಮುಂತಾದ ಕೃತಿಗಳು ಚಾರಿತ್ರ ಪ್ರಧಾನವಾಗುವುದನ್ನು ಬಿಟ್ಟು ಪುರಾಣದ ಹಾದಿಯನ್ನು ಹಿಡಿದಿವೆ. ಷಟ್ಪದಿ, ಸಾಂಗತ್ಯ ಮುಂತಾದ ನಡುಗನ್ನಡದ ಸುಲಭ ಶೈಲಿಯಲ್ಲಿ ಬರೆದ ವೀರಶೈವ ಕೃತಿ ಮೇಲಿನ ಯಾವುದೇ ಗುಂಪಿಗೆ ಸೇರಿದ್ದರೂ ಜನತೆ ಅದನ್ನು ಪುರಾಣ ಪ್ರವಚನಕ್ಕಾಗಿ ಉಪಯೋಗಿಸಬಹುದು; ಭಕ್ತಿಯಿಂದ ಲಾಲಿಸಬಹುದು. ಹಾಗೆಂದ ಮಾತ್ರಕ್ಕೆ ಅವನ್ನು ಪುರಾಣಗಳೆಂದು ಪರಿಗಣಿಸಲಾಗದು.

ಶಿವನ ಲೀಲೆಯಲ್ಲಿ ಪಂಚವಿಂಶತಿ ಲೀಲೆಗಳು ಪ್ರಸಿದ್ಧವಾಗಿವೆ. ಶೈವಸಾಹಿತ್ಯದಲ್ಲಿ ಅವುಗಳ ಉಲ್ಲೇಖ ವಿಪುಲವಾಗಿದೆ. ಆ ಪಂಚವಿಂಶತಿ ಲೀಲೆಗಳೆಂದರೆ –

1. ಸೋಮಧರಲೀಲೆ
2. ಉಮಾಮಹೇಶ್ವರಲೀಲೆ
3. ವೃಷಭಾರೂಢಲೀಲೆ
4. ತಾಂಡವಲೀಲೆ

*– 92ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಬೆಳ್ವೊಲನಾಡಿನ ನಿಸಿದಿ ಶಾಸನಗಳು

✍ ಡಾ. ಶರಣಪ್ಪ ಬಸಪ್ಪ ಜಗ್ಗಲ, ಇತಿಹಾಸ ಉಪನ್ಯಾಸಕರು, ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಕಾಲೇಜು, ಹಾವೇರಿ.

## ಪ್ರಸ್ತಾವನೆ

ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೆ ವಿಸ್ತಾರವಾಗಿದ್ದ ಕರ್ನಾಟಕವನ್ನು ಶಾಸನಗಳು 'ಕುಂತಳದೇಶ' ಎಂದು ಕರೆದಿವೆ. ಈ ಪ್ರದೇಶವನ್ನಾಳಿದ ಮೌರ್ಯರು ಸೇರಿದಂತೆ ವಸಾಹತುಶಾಹಿ ಬ್ರಿಟಿಷರವರೆಗೆ ಪ್ರತಿಯೊಬ್ಬರೂ ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಭುಕ್ತಿ, ರಟ್ಟ, ರಾಷ್ಟ್ರ, ದೇಶ, ಮಂಡಲ, ಆಹಾರ, ವಿಷಯ, ಭೋಗ, ನಾಡು, ಸೀಮೆ, ಪ್ರಾಂತ, ಜಿಲ್ಲೆ ಮೊದಲಾದ ಹಲವು ವಿಭಾಗಗಳಲ್ಲಿ ವಿಂಗಡಿಸಿದ್ದರು.[1] ಭೌಗೋಳಿಕ ಸ್ಥಿತಿಯ ಹಿನ್ನೆಲೆಯಲ್ಲಿ ರಚನೆಯಾಗಿರುವ 'ಬೆಳ್ವೊಲನಾಡು' ವಿಭಾಗವು "ಕುಂತಳದೇಶವೆಂಬ ಭೂಲತಾಂಗಿಯ ಮುಖಕಮಲದಲ್ಲಿ ತಾರಾಮಣಿಗಳಿಂದ ಅಲಂಕರಿಸಲ್ಪಟ್ಟ ಹಣೆಯಂತೆ ಒಪ್ಪಿ ತೋರುತ್ತಿದ್ದಿತು", "ಕುಂತಳ ಎಂಬ ಕಾಂತೆಯ ಮುಡಿಯಲ್ಲಿ ಚಿನ್ನದ ಹೂವಿನ ಗರಿಯಂತೆ ಬೆಳಗುತ್ತಿದ್ದಿತು".[2] ಬೆಳ್ವೊಲ-300 ಆಡಳಿತ ಪ್ರದೇಶದ ಮಣ್ಣಿನಲ್ಲಿ ಪ್ರಾಚೀನ ಕಾಲದಿಂದಲೂ ಜೈನಧರ್ಮದ ಪುನುರುಜ್ಜೀವನ ಮತ್ತು ಪ್ರಸಾರ ಕಾರ್ಯದಲ್ಲಿ ಬಹು ಮುಖ್ಯವಾದ ಪಾತ್ರವಹಿಸಿರುವ ಮುನಿಗಳನ್ನು ನಿರ್ಮಿಸುವ ಅಭೂತಪೂರ್ವ ಶಕ್ತಿ ಅಡಗಿದೆ. ಈ ನಾಡು ಅನೇಕ ಮಹಾಮುನಿಗಳಿಗೆ ಜನ್ಮಕೊಟ್ಟಿದೆ. ಆ ಕಾರಣದಿಂದಲೇ ಈ ಪ್ರದೇಶದಲ್ಲಿ ಸಹಸ್ರಾರು ಮುನಿಗಳು ಬದುಕಿಬಾಳಿ, ಈ ಪ್ರದೇಶವನ್ನು ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿಸಿದ್ದಾರೆ. ಅವರ ವಿಶಿಷ್ಟವಾದ ಧರ್ಮಪ್ರಸಾರದಿಂದ ಜೈನ ಧರ್ಮವು ಈ ಪ್ರದೇಶದ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ಜೊತೆಗೆ ಈ ಪ್ರದೇಶದ ವಾಸ್ತು, ಶಿಲ್ಪ, ಶಾಸನ, ಸಂಸ್ಕೃತಿ, ಸಮಾಜ, ಇತಿಹಾಸ, ಧರ್ಮ, ಸಾಹಿತ್ಯ ಮೊದಲಾದ ಕ್ಷೇತ್ರಗಳನ್ನೂ ಶ್ರೀಮಂತವಾಗಿಸಿ, ಕರ್ನಾಟಕದ ಚರಿತ್ರೆಯ ಪುಟದಲ್ಲಿ ಇದಕ್ಕೊಂದು ಮಹತ್ವವಾದ ಸ್ಥಾನವನ್ನೂ ಕಲ್ಪಿಸಿಕೊಟ್ಟಿದೆ. ಕೇಶಿರಾಜನು 'ಶಬ್ದಮಣಿದರ್ಪಣ' ಕೃತಿಯ (ಕ್ರಿ. ಶ. 1260) 178ನೆಯ ಸೂತ್ರದಲ್ಲಿ ಅರಿಸಮಾಸ ನಿರ್ದೋಷಕ್ಕೆ ಕೊಟ್ಟಿರುವ ಉದಾಹರಣೆಯಲ್ಲಿ–

> **ಸವಣಂ ಬಳಪಂಗೊಳೆ ಗಾಂ**
> **ಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ ದಾ**
> **ನವರಿಪು ಚಕ್ರಂಗೊಳೆ ಕೌ**
> **ರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ ॥**

"ಸವಣನು ತನ್ನ ಲೇಖನಿಯನ್ನೆತ್ತಿದೊಡನೆ ಯಾವ ವೀರನು ಅವನನ್ನು ಎದುರಿಸಬಲ್ಲವನಾಗಿದ್ದನು?" ಎಂದು ಬಣ್ಣಿಸಿದ್ದಾನೆ. ಇದು ಜೈನ ಮುನಿಗಳ ವಿದ್ವತ್ತೆಗೆ ಉತ್ತಮ ನಿದರ್ಶನವಾಗಿದೆ. ಎಂತಲೇ ಧರ್ಮನಿರಪೇಕ್ಷೆ ಭಾವನೆಯಿಂದ ಕನ್ನಡ ಭಾಷೆಯ ಸೇವೆಯನ್ನು ಯಾರಾದರೂ ಮಾಡಿದ್ದರೆ, ಆ ಕೀರ್ತಿ, ಜ್ಞಾನ ಮತ್ತು ವಿವೇಕಪ್ರದವಾದ ಜೈನ ಮುನಿಗಳು ಹಾಗೂ ಕವಿಗಳಿಗೆ ಸಲ್ಲುತ್ತದೆ. ಅಹಿಂಸಾ ಪಾಲನೆಯನ್ನು ಎಚ್ಚರಿಕೆಯಿಂದ ವಹಿಸುತ್ತ, ನಿವೃತ್ತಿಮಾರ್ಗದಲ್ಲಿ ಸಂಚಾರವನ್ನು ಕೈಗೊಂಡು, ಲೌಕಿಕ ಅಪೇಕ್ಷೆಗಳನ್ನು ಗೆಲಿದು, ಹೃದಯವನ್ನು ಸಂಪೂರ್ಣವಾಗಿ ಬರಿದು ಮಾಡಿ ನಿರ್ವಾಣವನ್ನು ಸಾಧಿಸುವ ಜೈನ ಮುನಿಗಳನ್ನು ಮ್ಯಾಕ್ಸ್ ವೇಬರ್‌ನು 'ಸುಸಂಸ್ಕೃತ ವೃತ್ತಿಸಂಪನ್ನರು' ಎಂದು ಕರೆದಿರುವನು.[3]

## ಬೆಳ್ವೊಲನಾಡಿನ ನಿಸಿದಿ ಶಾಸನಗಳು

ಜೈನ ಪರಂಪರೆಯಲ್ಲಿ ಮುನಿಗಳು ಮತ್ತು ಶ್ರಾವಕರು ಆತ್ಮನಿಗೆ ಅಂಟಿದ ಕರ್ಮಗಳನ್ನು ಸಂಪೂರ್ಣವಾಗಿ ಕಿತ್ತೊಗೆದು ಮೋಕ್ಷವನ್ನು ಸಂಪಾದಿಸಲು ತಮ್ಮ ಜೀವಿತದ ಕೊನೆಯಲ್ಲಿ 'ಸಲ್ಲೇಖನ ವ್ರತ'ವನ್ನು ಸ್ವೀಕರಿಸಿ ಸಮಾಧಿಮರಣ ಹೊಂದುವುದು ರೂಢಿಯಲ್ಲಿದೆ. ಸಮಾಧಿಮರಣವನ್ನು ಕೆಲವರು 'ಆತ್ಮಘಾತ' ಎಂದು ಭಾವಿಸಿದ್ದಾರೆ. ಆದರೆ ಅದು ತಪ್ಪು ತಿಳುವಳಿಕೆ. ನಾವು ಬೇಡವೆಂದರೂ ಸಾವು ನಮ್ಮನ್ನು ಬಿಡುವುದಿಲ್ಲವೆಂಬ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಹಾಗೆ ಬರುವ ಸಾವನ್ನು ಸಾರ್ಥಕ ಸಾವನ್ನಾಗಿ ಮಾರ್ಪಡಿಸಿಕೊಂಡು, ಮುಂದಿನ ಅಸೀಮ ಸುಖಕ್ಕೆ ಇದನ್ನೊಂದು ಸಾಧನವನ್ನಾಗಿ ಮಾಡಿಕೊಳ್ಳಬೇಕೆಂದು ಜೈನಾಗಮಗಳು ಬೋಧಿಸುತ್ತವೆ.[4] ಜೈನಧರ್ಮದಲ್ಲಿ ಸುಮಾರು ನಲವತ್ತೆಂಟು ಮರಣವನ್ನಪುವ ವಿಧಾನಗಳಿವೆ. ಆದರೆ ವ್ರತಸ್ಥನು ಅವುಗಳಲ್ಲಿ ಒಂದನ್ನು ಮಾತ್ರ ಪ್ರಾಣೋತ್ಕ್ರಮಣ ಪರ್ಯಂತ ಪಾಲಿಸಬೇಕಾಗುತ್ತದೆ. ಕನ್ನಡನಾಡಿನಲ್ಲಿ ಸಮಾಧಿಮರಣ ವಿಧಾನವನ್ನೇ ಪ್ರಧಾನವಾಗಿ ಮತ್ತು ಇಂಗಿನೀಮರಣ, ಪ್ರಯೋಪಗಮನಮರಣ, ಪಂಡಿತಮರಣ ವಿಧಾನಗಳನ್ನು ಕ್ವಚಿತ್ತಾಗಿ ಅನುಸರಿಸಿದುದು ಗೋಚರಿಸುತ್ತದೆ.[5] ಸಲ್ಲೇಖನ ವ್ರತವನ್ನು ಸಾಮಾನ್ಯವಾಗಿ ಎಲ್ಲರೂ ಗುರುವಿನ ಸನ್ನಿಧಿಯಲ್ಲಿಯೇ ಕೈಗೊಳ್ಳುತ್ತಿದ್ದರು. ಗುರುವಾದವನು ವ್ರತಧಾರಿಗೆ ವ್ರತವಿಧಾನಗಳ ಮಾರ್ಗದರ್ಶನ ಮಾಡುವ ಮತ್ತು ಅಲ್ಲಿ ಧರ್ಮಸಂಕೀರ್ತನ ನಡೆಸುವ ಕಾರ್ಯವನ್ನು ಕೈಗೊಳ್ಳುತ್ತಿದ್ದನು. ಹೀಗೆ ಮರಣವನ್ನಪ್ಪಿದವರ ಪರೋಕ್ಷ ವಿನಯಾರ್ಥವಾಗಿ ನಿಲ್ಲಿಸಿದ ಶಿಲಾಫಲಕಗಳೇ ನಿಸಿದಿಗಲ್ಲುಗಳಾಗಿವೆ. ಶಾಸನಗಳಲ್ಲಿ ಇವುಗಳನ್ನು ನಿಶೀಧಿಕಾ, ನಿಶಿಧಿ, ನಿಶಿದಿ, ನಿಶಿದಿಗೆ, ನಿಶೀಧಿಗೆ, ನಿಷದ್ಯಿಕಾ, ನಿಷಧಿ, ನಿಶಿಧ್ಯಾಲಯ, ನಿಷಿದ್ದಿ, ನಿಷಿಧಿಗೆ, ನಿಷದ್ಯಾಂ, ನಿಷಿದಿ, ನಿಸ್ತಿಗೆ ಎಂದೆಲ್ಲ ಕರೆಯಲಾಗಿದೆ.[6] ಸಮಾಧಿಮರಣ ಹೊಂದಿದವರ ಪರೋಕ್ಷ ವಿನಯಾರ್ಥವಾಗಿ ಬಸದಿಗಳನ್ನು ನಿರ್ಮಿಸುವುದು, ನಿಷಿಧಿಗಲ್ಲುಗಳನ್ನು ನಿಲ್ಲಿಸುವುದು, ನಿಷಿಧಿ ಮಂಟಪಗಳನ್ನು ಕಟ್ಟಿಸುವುದು, ಶಾಸನಗಳನ್ನು ಹಾಕಿಸುವುದು, ಚತುರ್ದಾನಗಳನ್ನು(ಆಹಾರ, ಅಭಯ, ಔಷಧ, ಶಾಸ್ತ್ರ) ಮಾಡುವುದು ಮೊದಲಾದವುಗಳು ರೂಢಿಯಲ್ಲಿದ್ದವು. ನಿಸಿದಿಗಲ್ಲುಗಳ ಆಕಾರವನ್ನ ಅವಲಂಬಿಸಿ ಇವುಗಳನ್ನು ನಿಸಿಧಿಸ್ತಂಭಗಳು, ನಿಷಿಧಿ ಫಲಕಗಳು, ನಿಸಿಧಿ ಪಾದಗಳು ಎಂದೆಲ್ಲ ವರ್ಗೀಕರಿಸಲಾಗಿದೆ.[7] ಜೈನ ಸಮಾಜದಲ್ಲಿ ಇಂದಿಗೂ ಮುನಿಗಳು ಮತ್ತು ಶ್ರಾವಕರು ಸಲ್ಲೇಖನ ವ್ರತವನ್ನು ಸ್ವೀಕರಿಸಿ ಸಮಾಧಿಮರಣ ಹೊಂದುವುದು ಮತ್ತು ಅವರ ಪರೋಕ್ಷ ವಿನಯಾರ್ಥವಾಗಿ ನಿಸಿದಿ ಮಂಟಪಗಳನ್ನು ನಿರ್ಮಿಸುವುದು ರೂಢಿಯಲ್ಲಿದೆ.

ಗದಗ ತಾಲೂಕಿನ ಮುಳಗುಂದದ ಪಾರ್ಶ್ವನಾಥ ಬಸದಿಯ ಹಿಂದಿನ ಬೃಹತ್ ಬಂಡೆಗಲ್ಲಿನಲ್ಲಿ ನಿಸಿದಿ ಶಾಸನವಿದೆ. ಇದು ಕ್ರಿ. ಶ. 1010ರ ಕಾಲದ್ದಾಗಿದೆ. ಈ ಶಾಸನದಲ್ಲಿ ಸಕವರುಷ 932ನೆಯ ಬಹುಧಾನ್ಯ ಸಂವತ್ಸರದ ಫಾಲ್ಗುಣ ಬಹುಳ 5, ಸೋಮವಾರದಂದು ವಸಂತ ದೇವರ ಶಿಷ್ಯ ದೇವಂಣನ ನಿಸಿದಿಯಾದದ್ದನ್ನು ತಿಳಿಸುತ್ತದೆ. ಅವರ ಮಗ ಮತ್ತು ಮೊಮ್ಮಗ ನಿಸಿದಿ ಮಾಡಿದಂತೆ ತೋರುತ್ತದೆ.[8] ಇದೇ ಸ್ಥಳದಲ್ಲಿ 10ನೆಯ ಶತಮಾನದ ನಿಸಿದಿ ಶಾಸನದಲ್ಲಿ ವಸಂತ ಕೀರ್ತಿದೇವರ ಶಿಷ್ಯರ ನಿಸಿದಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂದು ಉಲ್ಲೇಖಿತವಾಗಿದೆ. ವಸಂತದೇವರ ಜೈನ ಮುನಿಯ ಶಿಷ್ಯರು ಸಲ್ಲೇಖನ ಕೈಗೊಂಡು ನಿಸಿದಿಯಾದರೆಂದು ಈ ಶಾಸನದಿಂದ ತಿಳಿಯುತ್ತದೆ.[9] ಇದೆ ಗ್ರಾಮದ ಪಾರ್ಶ್ವನಾಥ ಜಿನಾಲಯದ ಒಳಗೋಡೆಗೆ ಸೇರಿದ ನಿಸಿದಿ ಶಾಸನವು 1275ಕ್ಕೆ ಸೇರಿದ್ದಾಗಿದೆ. ಈ ಶಾಸನವು ಸಹ ಶ್ರೇಷ್ಠವೂ ಗಂಭೀರವೂ ಆದ ಸ್ಯಾದ್ವಾದವೆಂಬ ಲಾಂಛನವನ್ನು ಹೊಂದಿರುವ ಮೂರು ಲೋಕಗಳಿಗೆ ಒಡೆಯನಾದ ಜಿನನ ಶಾಸನವು ಜಯಿಸಲಿ ಎಂದಿದೆ. ಇದು ಸೊರಟೂರ ತಿಳಕರಸ ಭುಜಾದೋರ್ದ್ಧಂಡ ಸನ್ನಂಡನ, ಮಹಾಪ್ರಧಾನ ಬಾಹತ್ತರ ನಿಯೋಗಾಧಿಪತಿ ಮಂತ್ರಿಲಲಾಮನಾದ ಹೆಗ್ಗಡೆ ದೇವಣ್ಣನ ಮಗ ಅಮೃತೆಯ್ಯನು ಸ್ವರ್ಗಸ್ಥನಾದನೆಂದು ಶಾಸನವು ತಿಳಿಸುತ್ತದೆ. ಇವನು ದೇವಸೇನ ಮುನಿಗಳಿಂದ ದೀಕ್ಷೆ ಪಡೆದು ಸನ್ಯಸನವನ್ನು ಧರಿಸಿ ಸ್ವರ್ಗಸ್ಥನಾದನೆಂದು ಉಲ್ಲೇಖಿಸುತ್ತದೆ.[10] ಇದೇ ಗ್ರಾಮದ ಇದೇ ಸ್ಥಳದಲ್ಲಿಯೇ ಕ್ರಿ.ಶ. 1399ರ ಕಾಲದ ನಿಸಿದಿ ಶಾಸನವಿದೆ. ಇದರಲ್ಲಿ ಹೇಮಸೇನ ದೇವರ ಶಿಷ್ಯರು ನಿಸಿದಿಯಾಗಿರುವ ಉಲ್ಲೇಖವಿದೆ.[11]

ಗದಗ ತಾಲೂಕಿನ ಕಣವಿ ಗ್ರಾಮದ ಅಲ್ಲಮಪ್ರಭು ದೇವಾಲಯದ ಪಕ್ಕದಲ್ಲಿ ಒಂದು ನಿಸಿದಿ ಶಿಲ್ಪವಿದೆ. ಈ ಶಿಲ್ಪದ ವಿನ್ಯಾಸವನ್ನು ಗಮನಿಸಿದರೆ ಇದು ಸುಮಾರು 10ನೆಯ ಶತಮಾನಕ್ಕೆ ಸೇರಿದ ಶಿಲ್ಪವಾಗಿದೆ. ಇದು ಮೂರು ಹಂತದಲ್ಲಿದ್ದು ಮೊದಲನೆಯ ಹಂತದಲ್ಲಿ ಬೆಂಕಿಯನ್ನು ಹೊತ್ತಿಸಿರುವಂತೆ ಕಾಣುತ್ತದೆ. ಎರಡನೆಯ ಹಂತದಲ್ಲಿ ಜಿನಮುನಿಯು ಬಲಭಾಗದಲ್ಲಿದ್ದು, ಪೀಠದ ಮೇಲೆ ಪರ್ಯಂಕಾಸನದಲ್ಲಿ ವ್ಯಾಸಪೀಠದ ಮುಂದೆ ಮುಖಮಾಡಿ ಕುಳಿತಿದ್ದು ಅವನು ಒಬ್ಬ ಸ್ತ್ರೀಗೆ ಬೋಧಿಸುತ್ತಿರುವಂತೆ ಕಾಣುತ್ತದೆ. ಮಧ್ಯದಲ್ಲಿ ವ್ಯಾಸಪೀಠವಿದ್ದು ಎಡಭಾಗದಲ್ಲಿ ಸ್ತ್ರೀಯು ಪರ್ಯಂಕಾಸನದಲ್ಲಿ ವ್ಯಾಸಪೀಠದ ಮುಂದೆ ಕೈಮುಗಿದು ಕುಳಿತಿದ್ದು ಈತನ ಮೇಲೆ ಮುಕ್ಕೊಡೆಯ ಚಿತ್ರವಿದೆ. ಮೂರನೆಯ ಹಂತದ ಮಂಟಪದಲ್ಲಿ ಜಿನನು ಅರ್ಧ ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿ ಕುಳಿತಿರುವನು. ಬಲಭಾಗದಲ್ಲಿ ವ್ರತದಾರಿ ಮುನಿಯು ಪರ್ಯಂಕಾಸನದಲ್ಲಿ ಜಿನನಿಗೆ ಕೈಮುಗಿದು ಕುಳಿತಿರುವನು. ಎಡಭಾಗದಲ್ಲಿ ಸ್ತ್ರೀಯು ಪರ್ಯಂಕಾಸನದಲ್ಲಿ ಜಿನನಿಗೆ ಕೈಮುಗಿದು ಕುಳಿತಿದ್ದಾಳೆ. ಇವರಿಬ್ಬರು ಸತಿಪತಿಯರಂತೆ ತೋರುತ್ತದೆ. ಇವರು ಒಟ್ಟಿಗೆ ವ್ರತಾಚರಣೆಯನ್ನು ಮಾಡಿ ಮರಣಿಸಿರಬಹುದೆಂದು ಇದರಿಂದ ತಿಳಿಯಬಹುದು. ಮಂಟಪದ ಮೇಲೆ ಕಳಸಾಕೃತಿ ಇದೆ. ಸೂರ್ಯ ಚಂದ್ರರ ಉಬ್ಬುಶಿಲ್ಪಗಳಿವೆ. ಈ ಶಿಲ್ಪದ ಮೇಲ್ಭಾಗದಲ್ಲಿ ಕೀರ್ತಿಮುಖವಿದ್ದು, ಸುತ್ತಲೂ ಲತಾ ಬಳ್ಳಿಗಳಿಂದ ಅಲಂಕರಣ ಮಾಡಿರುವುದನ್ನು ಕಾಣಬಹುದು.[12]

ನವಲಗುಂದ ತಾಲೂಕಿನ ಮೊರಬ ಗ್ರಾಮದ ಹನುಮಂತ ದೇವಾಲಯದ ಮುಂಭಾಗದಲ್ಲಿ ಕ್ರಿ. ಶ. ಸುಮಾರು 11ನೆಯ ಶತಮಾನದ ನಿಸಿದಿ ಶಾಸನವಿದೆ. ಇದರ ಮೇಲಿರುವ ಶಿಲ್ಪಪಟ್ಟಿಕೆಯಲ್ಲಿ ಸಿಂಹಪೀಠದ ಮೇಲೆ ಪರ್ಯಂಕಾಸನದಲ್ಲಿರುವ ತೀರ್ಥಂಕರ, ಈತನ ಬಲಬದಿಯಲ್ಲಿ ಸಲ್ಲೇಖನ ವ್ರತವನ್ನು ಬೋಧಿಸುತ್ತಿರುವ ಮುನಿ, ಎಡಬದಿಯಲ್ಲಿ ಅಂಜಲಿಮುದ್ರಾಸಕ್ತನಾಗಿ ಸಲ್ಲೇಖನ ವ್ರತವನ್ನು ಆಲಿಸುತ್ತಿರುವ (ಸ್ವೀಕರಿಸುತ್ತಿರುವ) ಮುನಿಯ ಉಬ್ಬುಶಿಲ್ಪಗಳಿವೆ. ಶಿಲ್ಪಪಟ್ಟಿಕೆಯ ಕೆಳಬದಿಯಲ್ಲಿ ಕನ್ನಡ ಲಿಪಿ ಮತ್ತು ಸಂಸ್ಕೃತ ಭಾಷೆಯ ಐವತ್ತೊಂಭತ್ತು ಸಾಲುಗಳ ಶಾಸನವಿದೆ. ಇದರಲ್ಲಿ "ಮೂರು ಲೋಕಗಳಿಗೂ ಒಡೆಯನಾದ ತೀರ್ಥಂಕರ ಸ್ವಾಮಿಯಿಂದ ಪ್ರಣೀತವಾದ ಪರಮಗಂಭೀರ ಸ್ಯಾದ್ವಾದ ಅಮೋಘವಾದ ಲಾಂಛನವನ್ನು ಹೊಂದಿರುವ ಜಿನಶಾಸನವು ಗೆಲುವನ್ನು ಪಡೆಯಲಿ. ಯಾಪನೀಯ ಸಂಘದ ಕಾರೆಯಗಣದ ಮೈಳಾಪತೀರ್ಥ ಪರಂಪರೆಯ ಜಯಕೀರ್ತಿಸಿದ್ಧಾಂತದೇವನ ಪಾಂಡಿತ್ಯ, ವಿದ್ವತ್ತು ಮತ್ತು ಪ್ರಶಸ್ತಿಗಳ ವರ್ಣನೆಗಳಿವೆ. ಆತನ ಶಿಷ್ಯ ನಾಗಚಂದ್ರಮುನಿಯ ಪಾಂಡಿತ್ಯ, ವಿದ್ವತ್ತು ಮತ್ತು ಪ್ರಶಸ್ತಿಗಳ ವರ್ಣನೆಗಳಿವೆ. ಈತನು ಮೊರಬದ ಘಟಾಂತಕಿಯ ಬಸದಿಯಲ್ಲಿ ಕ್ರಿ. ಶ. 1059ರ ನವೆಂಬರ್ 10ರಂದು ಸನ್ಯಸನ ವಿಧಿಯಿಂದ ಮುಡಿಪಿ ಸ್ವರ್ಗಸ್ಥನಾದನು. ಆತನ ಪರೋಕ್ಷ ವಿನಯಾರ್ಥವಾಗಿ ಆತನ ಶಿಷ್ಯ ಕನಕಶಕ್ತಿಸಿದ್ಧಾಂತದೇವನು ನಿಸಿದಿಕಲ್ಲನ್ನು ನಿಲ್ಲಿಸಿದನು. ಈ ನಿಸಿದಿ ಶಾಸನ ಶಿಲೆಯನ್ನು ಸರಸ್ವತಿ ಗಣದಾಸಿ ಬಮ್ಮೋಜನು ಬೆಸಗೆಯ್ದನು" ಎಂದು ವಿವರಗಳಿವೆ.[13]

ಗದಗ ತಾಲೂಕಿನ ಕಳಸಾಪುರ ಗ್ರಾಮದ ಬಾಹುಬಲಿ ಮೂರ್ತಿಯ ಹತ್ತಿರ ಕ್ರಿ.ಶ. 11–12ನೆಯ ಶತಮಾನದ ಎರಡು ನಿಸಿದಿ ಶಿಲ್ಪಗಳಿವೆ. ಅದರಲ್ಲಿ ಒಂದು ನಿಸಿದಿ ಶಿಲ್ಪವು ಸು. 3 ಅಡಿ ಉದ್ದ, 3 ಅಡಿ ಅಗಲವಾಗಿದೆ. ಇದು 2 ಹಂತದಲ್ಲಿ ಇದ್ದು, ಮೊದಲನೆಯ ಹಂತದಲ್ಲಿ ಜಿನಮುನಿಯು ಒಂದು ಪೀಠದ ಮೇಲೆ ಅರ್ಧ ಪದ್ಮಾಸನದಲ್ಲಿ ಯೋಗ ಮುದ್ರೆಯಲ್ಲಿ ಕುಳಿತಿದ್ದಾನೆ. ಅವನ ಬಲಭಾಗದಲ್ಲಿ ಒಬ್ಬ ಸ್ತ್ರೀಯು ಖಡ್ಗಾಸನದಲ್ಲಿ ಕೈಮುಗಿದು ಜಿನನ ಕಡೆಗೆ ಮುಖಮಾಡಿ ಕುಳಿತಿರುವಳು. ಅವಳ ತಲೆಯ ಮೇಲೆ ಮುಡಿಯ ಚಿತ್ರವನ್ನು ದೊಡ್ಡದಾಗಿ ತೋರಿಸಲಾಗಿದೆ. ಮುನಿಯ ಎಡಭಾಗದಲ್ಲಿ ಪಿಂಛಿ ಚಿತ್ರವಿದೆ. ಇಲ್ಲಿಯೇ ಇರುವ ಇನ್ನೊಂದು ನಿಸಿದಿ ಶಿಲ್ಪದಲ್ಲಿ ಒಂದು ಹಂತವನ್ನು ಕಾಣಬಹುದು. ಇದು 4 ಅಡಿ ಉದ್ದ, 2 ಅಡಿ ಅಗಲವಾಗಿದೆ. ಕೆಳಭಾಗದಲ್ಲಿ ಮುಕ್ಕೊಡೆಯ ಚಿತ್ರವಿದೆ. ಮೇಲೆ ಮಧ್ಯದಲ್ಲಿ ಜಿನನು ಧ್ಯಾನಾಸಕ್ತನಾಗಿ ಅರ್ಧ ಪದ್ಮಾಸನದಲ್ಲಿ ಯೋಗ ಮುದ್ರೆಯಲ್ಲಿ ಕುಳಿತಿದ್ದಾನೆ. ಅವನ ಬಲಭಾಗದಲ್ಲಿ ಒಬ್ಬ ಸ್ತ್ರೀಯು ಕುಳಿತಿರುವಂತೆ ಕಾಣುತ್ತದೆ. ಅದು ಅಸ್ಪಷ್ಟವಾಗಿದ್ದು ಮುನಿಯ ತಲೆಯ ಮೇಲೆ ಮುಕ್ಕೊಡೆಯ ಚಿತ್ರವಿದೆ.

ಭದ್ರಾಪುರದ ದ್ಯಾಮವ್ವ ದೇವಾಲಯದ ಮುಂಭಾಗದಲ್ಲಿ ಕ್ರಿ. ಶ. ಸುಮಾರು 1248ರ ನಿಸಿದಿ ಶಾಸನವಿದೆ. ಇದು ಕೀಲಕ ಸಂವತ್ಸರದ ವೈಶಾಖ ಬಹುಳ ಪಡಿ ಬುಧವಾರದಂದು ಶ್ರೀ ಮೂಲಸಂಘದ ಸೇನಗಣದ ರತ್ನಸೇನಸಿದ್ಧಾಂತದೇವ ಮುನಿ ಮೋಕ್ಷಕ್ಕೆ ಸಂದ ಕುರಿತು ಉಲ್ಲೇಖಿಸಿದೆ.[14] ಇದೇ ಗ್ರಾಮದ ವಿಠ್ಠಲಸ್ವಾಮಿ ಮಠದ ಹತ್ತಿರ ಕ್ರಿ. ಶ. ಸುಮಾರು 12–13ನೆಯ ಶತಮಾನದ ನಿಸಿದಿಗಲ್ಲು ಕಪ್ಪುಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಇದು 48 ಸೆಂ. ಮೀ. ಎತ್ತರ ಮತ್ತು 32 ಸೆಂ. ಮೀ. ಅಗಲವಾಗಿದೆ. ಇದರಲ್ಲಿ ಎರಡು ಶಿಲ್ಪಪಟ್ಟಿಕೆಗಳಿದ್ದು, ಕೆಳಗಿನ ಪಟ್ಟಿಕೆಯಲ್ಲಿ ಸಲ್ಲೇಖನ ವ್ರತವನ್ನು ಧರಿಸಿ ದೇಹತ್ಯಾಗ ಮಾಡಿದ ಮುನಿ ಅಸೀನನಾಗಿರುವ ಮಂಟಪವಿದೆ. ಇದರ ಪಾರ್ಶ್ವಗಳಲ್ಲಿ ವಿವಿಧ ವಸ್ತ್ರಾಭರಣಗಳಿಂದ ಭೂಷಿತರಾದ ಇಬ್ಬರು ದ್ವಿಭುಜ ಚಾಮರಧಾರಿಣಿಯರಿದ್ದಾರೆ. ಪ್ರಸ್ತುತ ಶಾಸನ ಮತ್ತು ನಿಸಿದಿ ಶಿಲ್ಪಗಳ ಕಾಲಮಾನ ಒಂದೇ ಆಗಿರುವುದರಿಂದ, ಪ್ರಾಯಶಃ ಈ ಮೇಲಿನ ನಿಸಿದಿ ಶಾಸನೋಕ್ತ ರತ್ನಸೇನಸಿದ್ಧಾಂತದೇವ ಮುನಿ ಸಲ್ಲೇಖನ ವ್ರತದಿಂದ ಸಮಾಧಿಮರಣವನ್ನಪ್ಪಿದ ತರುವಾಯ ಶಾಸನವನ್ನು ಬರೆಸಿರಬಹುದು. ಕಾಲಾಂತರದಲ್ಲಿ ಆತನ ಪರೋಕ್ಷ ವಿನಯಾರ್ಥವಾಗಿ ಈ ನಿಸಿದಿಶಿಲ್ಪವನ್ನು ಮಾಡಿಸಿದಂತೆ ತೋರುತ್ತದೆ.

ಅಣ್ಣಿಗೇರಿ ಪಟ್ಟಣದ ಪಾರ್ಶ್ವನಾಥ ಬಸದಿಯ ಮುಂಭಾಗದಲ್ಲಿ ಕ್ರಿ.ಶ. 1267ರ ನಿಸಿದಿಗಲ್ಲುವಿದೆ. ಇದರಲ್ಲಿ ದ್ರಾವಿಡ ಶೈಲಿಯ ಬಸದಿಯ ಪ್ರತಿರೂಪವಿದ್ದು, ಮಧ್ಯದಲ್ಲಿ ತೀರ್ಥಂಕರನು ಪೀಠದ ಮೇಲೆ ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಪಾರ್ಶ್ವದಲ್ಲಿ ಹಿಡಿಸಹಿತ ಎರಡು ಚಾಮರಗಳಿವೆ. ಬಲಬದಿಯಲ್ಲಿ ಜೈನಾಚಾರ್ಯನು ವೀರಾಸನದಲ್ಲಿ ಆಸೀನನಾಗಿದ್ದು, ಸಲ್ಲೇಖನ ವ್ರತವನ್ನು ಉಪದೇಶಿಸುತ್ತಿದ್ದಾನೆ. ಎಡಬದಿಯಲ್ಲಿ ಸಲ್ಲೇಖನ ವ್ರತಧಾರಿಣಿ ಅಂಜಲಿಮುದ್ರಾಸಕ್ತಳಾಗಿ ಪರ್ಯಂಕಾಸನದಲ್ಲಿ ಆಸೀನಳಾಗಿ ಉಪದೇಶವನ್ನು ಆಲಿಸುತ್ತಿದ್ದಾಳೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಚಿತ್ರಣಗಳಿವೆ. ಈ ಶಿಲ್ಪಪಟ್ಟಿಕೆಯ ಕೆಳಭಾಗದಲ್ಲಿರುವ ಶಾಸನದಲ್ಲಿ "ಮೂಲಸಂಘದ ಕೊಂಡಕುಂದಾನ್ವಯ ಪರಂಪರೆಯ ಸೋಮದೇವ ಆಚಾರ್ಯನ ಗುಡ್ಡಿ(ಶಿಷ್ಯೆ)

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನೋಂಪಿಯಸೆಟ್ಟಿಯ ಮಗನಾದ ವೀರಯ್ಯನ ಧರ್ಮಪತ್ನಿ ಕೆಳದಿಯವ್ವೆ ಕ್ರಿ.ಶ. 1267ರ ಮಾರ್ಚ್ 15, ಮಂಗಳವಾರದಂದು ಸಮಾಧಿ ವಿಧಿಯಿಂದ ಶರೀರ ತ್ಯಾಗ ಮಾಡಿ ಸ್ವರ್ಗಸ್ಥಳಾದಳು. ಅವಳ ಪರೋಕ್ಷ ವಿನಯಾರ್ಥವಾಗಿ ಈ ನಿಸಿದಿಗಲ್ಲನ್ನು ನಿಲ್ಲಿಸಲಾಯಿತು" ಎಂಬ ವಿವರವಿದೆ.[15]

ಲಕ್ಕುಂಡಿಯ ಸೂರ್ಯ ದೇವಾಲಯದಲ್ಲಿರುವ ನಿಸಿದಿಗಲ್ಲಿನ ಮೇಲೆ ಕ್ರಿ. ಶ. 12ನೆಯ ಶತಮಾನಕ್ಕೆ ಸೇರಿದ ಶಾಸನವಿದೆ. ಈ ಶಾಸನವು ಪ್ರಾರಂಭದಲ್ಲಿ ಒಬ್ಬ ರಾಜನನ್ನು ಹೊಗಳಿದೆ. ನಾಗಾಂಬಿಕೆ ಎಂಬುವವಳ ಹೆಸರಿದೆ. ಕಾಳಿಕಾದೇವಿಯ ಭಕ್ತಿ ಪರಾಯಣರೆಂದು ಒಬ್ಬ ಸೆಟ್ಟಿಯನ್ನು ಹೊಗಳಿದೆ. ಇದು ತೃಟಿತವಾಗಿರುವುದರಿಂದ ಮಾಹಿತಿ ಅಸ್ಪಷ್ಟವಾಗಿದೆ.[16] 12ನೆಯ ಶತಮಾನದ ಹೊಸೂರಿನ ನಿಸಿದಿ ಶಾಸನವೊಂದರಲ್ಲಿ ಜೈನ ಮೂಲಸಂಘ ಕಾಣೂರ್ಗಣದ ಸಕಳ ಪಂಥದ ಭಟ್ಟಾರಕರ ಗಡ್ಡರು, ಗಾಣಿಗ, ಹೊಂಚಿಸೆಟ್ಟಿ, ಸಕರಸೆಟ್ಟಿ ನಿಸಿದಿಗೆ ಎಂದು ಉಲ್ಲೇಖಿಸಲಾಗಿದೆ.[17] ಸವದತ್ತಿ ತಾಲೂಕಿನ ಮುನವಳ್ಳಿ ಗ್ರಾಮದ ಕರೆವ್ವನ ದೇವಾಲಯದ ಹತ್ತಿರದಲ್ಲಿ ಎರಡು ನಿಸಿದಿ ಕಲ್ಲುಗಳಿವೆ. ಅವು ಸುಮಾರು ನಾಲ್ಕು ಅಡಿ ಎತ್ತರವಾಗಿವೆ. ಮಧ್ಯದಲ್ಲಿ ಜಿನ ಬಿಂಬದ ಕೆತ್ತನೆಯಿದೆ. ಇವು ಕ್ರಿ.ಶ. 12ನೆಯ ಶತಮಾನದ್ದಾಗಿವೆ. ಅದರಲ್ಲಿ ಮುನಿಚಂದ್ರನ ವಿವರಗಳಿವೆ. ಈ ಮುನಿಚಂದ್ರನು ರಟ್ಟರ ರಾಜಗುರುವಾಗಿರಬಹುದು. ಮತ್ತೊಂದು ನಿಸಿದಿ (12ನೆಯ ಶತಮಾನ) ಕಲ್ಲಿನಲ್ಲಿ ಮುನಿಚಂದ್ರನ ಶಿಷ್ಯ ಶಿಷ್ಯದೇವ ಮುನಿಯ ವರ್ಣನೆಯಿದೆ.[18]

ಕೊಪ್ಪಳ ಜಿಲ್ಲಾ ಯಲಬುರ್ಗಾ ತಾಲೂಕಿನ ಗೋರ್ಲೆಕೊಪ್ಪ ಗ್ರಾಮದಿಂದ ಕುಕನೂರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಸೆಕ್ರೆಟರಿ ಸೋಬಾನದವರ ಹೊಲದಲ್ಲಿರುವ ಬೇವಿನಮರದ ಕೆಳಗೆ ಎಂಟು ಅಪ್ರಕಟಿತ ನಿಸಿದಿ ಶಾಸನ ದೊರೆತಿವೆ. ಇವುಗಳಲ್ಲಿ ನಾಲ್ಕು ಶಾಸನ ಸಹಿತವಾಗಿವೆ. ಅವುಗಳಲ್ಲಿ ಒಂದು ನಿಸಿದಿ ತುಂಬಾ ಮಹತ್ವದ್ದಾಗಿದೆ. ಉಳಿದಂತೆ ಎಲ್ಲಾ ನಿಸಿದಿಗಳು ಒಂದೆ ತೆರನಾಗಿವೆ. ಉತ್ತರಾಭಿಮುಖವಾಗಿರುವ ಒಂದು ನಿಸಿದಿ ಶಾಸನವು ಕ್ರಿ. ಶ. ಸುಮಾರು 12–13ನೆಯ ಶತಮಾನದ ಕಪ್ಪು ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಇದರಲ್ಲಿ ಬೇಡರ ಕಾಳಿಸೆಟ್ಟಿ ಎಂಬಾತನು ಕೊನೆಯ ಹಂತದಲ್ಲಿ ಜೈನಧರ್ಮವನ್ನು ಸ್ವೀಕರಿಸಿ ಸಲ್ಲೇಖನ ವ್ರತವನ್ನು ಆಚರಿಸುತ್ತಾನೆ. ಶಾಸನದಲ್ಲಿ ಆತನ ಮಡದಿ ಮತ್ತು ಮಗನ ಹೆಸರು ಇರಬಹುದು. ಆದರೆ ಶಾಸನ ಅಸ್ಪಷ್ಟವಾಗಿರುವುದರಿಂದ ಮಾಹಿತಿ ಲಭ್ಯವಾಗಿಲ್ಲ. ಶಿಲೆಯ ಮೇಲ್ತುದಿಯಲ್ಲಿ ಸೂರ್ಯ–ಚಂದ್ರನ ನಿರೂಪಣೆಗಳಿವೆ. ಪ್ರಸ್ತುತ ನಿಸಿದಿ ಶಾಸನ ಮತ್ತು ನಿಸಿದಿಗಲ್ಲಿನ ಕಾಲಮಾನ ಒಂದೇಯಾಗಿರುವುದರಿಂದ, ಪ್ರಾಯಶಃ ಈ ಮೇಲಿನ ನಿಸಿದಿ ಶಾಸನೋಕ್ತ ಬೇಡರ ಕಾಳಿಸೆಟ್ಟಿಯು ಸಲ್ಲೇಖನ ವ್ರತದಿಂದ ಸಮಾಧಿಮರಣವನ್ನಪ್ಪಿದ ತರುವಾಯ ಶಾಸನವನ್ನು ಬರೆಸಿರಬಹುದು. ಕಾಲಾಂತರದಲ್ಲಿ ಆತನ ಪರೋಕ್ಷ ವಿನಯಾರ್ಥವಾಗಿ ಈ ನಿಸಿದಿಗಲ್ಲನ್ನು ಮಾಡಿಸಿದಂತೆ ತೋರುತ್ತದೆ.[19]

ಇದೇ ಸ್ಥಳದಲ್ಲಿರುವ ಅದೇ ಕಾಲದ ಇನ್ನೊಂದು ನಿಸಿದಿ ಶಾಸನವು ಕಣ ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಇದು $1^1/_2$ ಅಡಿ ಎತ್ತರ ಮತ್ತು 1 ಅಡಿ ಅಗಲವಾಗಿದೆ. ಸಿಂಹಪೀಠದ ಮೇಲೆ ವೀರಾಸನದಲ್ಲಿ ಆಸೀನನಾಗಿ ವ್ರತವನ್ನು ಬೋಧಿಸುತ್ತಿರುವ ಮುನಿಯ ಉಬ್ಬುಶಿಲ್ಪವಿದೆ. ಈ ಯತಿಯ ಮೇಲೆ ಮುಕ್ಕೊಡೆಯ ಶಿಲ್ಪವಿದೆ. ಮುನಿಯ ಶಿಲ್ಪದ ಇಕ್ಕೆಲಗಳಲ್ಲಿ ಚಾಮರಧಾರಣಿಯರಿದ್ದಾರೆ. ಇವರು ಕಿರೀಟಮುಕುಟ, ಕರ್ಣಕುಂಡಲ, ಕಂಠಹಾರ, ಮಣಿಸರ, ಕೈಗಡಗ, ಕಟಿವಸ್ತ್ರ, ಕಾಲ್ಗಡಗ ಮೊದಲಾದ ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ಶಿಲ್ಪದ ಕೆಳಗೆ ಪರ್ಯಂಕಾಸನದಲ್ಲಿ ಅಂಜಲಿಮುದ್ರಾಸಕ್ತರಾಗಿ ವ್ರತವನ್ನು ಆಲಿಸುತ್ತಿರುವ ವ್ರತಧಾರಿಯ ಶಿಲ್ಪವಿದೆ. ಈ ಶಿಲ್ಪದ ಎಡಭಾಗದಲ್ಲಿ ಒಂದು ಸಾಲಿನ ಶಾಸನವಿದೆ. **ಶ್ರೀ ದಿಗ ರಕ** ಎಂಬ ಉಲ್ಲೇಖವಿದೆ.[20] ಶಿಲೆಯ ಮೇಲ್ಭಾಗದಲ್ಲಿ ಸೂರ್ಯ–ಚಂದ್ರನ ನಿರೂಪಣೆಗಳಿವೆ. ಇದೆ ಸ್ಥಳದಲ್ಲಿರುವ ಅದೇ ಕಾಲದ ಇನ್ನೂ ಆರು ಅಪ್ರಕಟಿತ ನಿಸಿದಿ ಶಾಸನಗಳು ಕ್ಷೇತ್ರಕಾರ್ಯದ ಅವಧಿಯಲ್ಲಿ ಬೆಳಕಿಗೆ ಬಂದಿವೆ.[21]

ಹುಬ್ಬಳ್ಳಿ ತಾಲೂಕಿನ ಮಂಟೂರು ಗ್ರಾಮದ ವಲ್ಲಭೇಶ್ವರ ದೇವಾಲಯದ ಮುಂಭಾಗದಲ್ಲಿ ಕ್ರಿ. ಶ. ಸುಮಾರು 12ನೆಯ ಶತಮಾನದ ನಿಸಿದಿ ಶಾಸನಗಲ್ಲುವಿದೆ. ಇದರ ಮೇಲ್ಭಾಗದ ಶಿಲ್ಪಪಟ್ಟಿಕೆಯಲ್ಲಿ ಪರ್ಯಂಕಾಸನದಲ್ಲಿರುವ ತೀರ್ಥಂಕರ ಮತ್ತು ಈತನ ಪಾರ್ಶ್ವಗಳಲ್ಲಿ ಇಬ್ಬರು ಚಾಮರಧಾರರ ಚಿತ್ರಣಗಳಿವೆ. ಕೆಳಗಿನ ಪಟ್ಟಿಕೆಯಲ್ಲಿ ಸಲ್ಲೇಖನ ವ್ರತವನ್ನು ಬೋಧಿಸುತ್ತಿರುವ ಮುನಿ, ಸಲ್ಲೇಖನ ವ್ರತಧಾರಿ, ಇವರಿಬ್ಬರ ಮಧ್ಯದಲ್ಲಿ ಶ್ರುತಪೀಠದ ಚಿತ್ರಣಗಳಿವೆ. ನಂದಿಭಟ್ಟಾರಕನ ಶಿಷ್ಯ ನಾಗಚಂದ್ರನು ಸಲ್ಲೇಖನ ವ್ರತವನ್ನು ಸ್ವೀಕರಿಸಿ ಸಮಾಧಿಮರಣವನ್ನಪ್ಪಿದ ಪರೋಕ್ಷ ವಿನಯಾರ್ಥವಾಗಿ ಈ ನಿಸಿಧಿಗಲ್ಲನ್ನು ಮಾಡಿಸಲಾಗಿದೆ.[22]

ರೋಣ ತಾಲೂಕಿನ ಇಟಗಿ ಗ್ರಾಮದ ಶಂಭುಲಿಂಗ ದೇವಾಲಯದ ಹೊರಗೋಡೆಯಲ್ಲಿ ಒಂದು ಕ್ರಿ.ಶ. 12ನೆಯ ಶತಮಾನದ ನಿಸಿದಿ ಶಿಲ್ಪವಿದೆ. ಇದು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿದೆ. ಇದರಲ್ಲಿ ಎರಡು ಹಂತಗಳಿವೆ. ಮೊದಲನೆಯ ಹಂತದಲ್ಲಿ ಮಧ್ಯದಲ್ಲಿ ವ್ಯಾಸಪೀಠವಿದೆ. ಬಲಭಾಗದಲ್ಲಿ ಮುನಿಯು ಸ್ತ್ರೀಯೊಬ್ಬಳಿಗೆ ಉಪದೇಶ ಮಾಡುತ್ತಿರುವನು. ಇದೆ ತಾಲೂಕಿನ ಕತ್ರಾಳ ಗ್ರಾಮದ ಹನುಮಂತ ದೇವಾಲಯದ ಮುಂಭಾಗದಲ್ಲಿ ಕಪ್ಪು ಕಲ್ಲಿನಲ್ಲಿ ಕಂಡರಿಸಲಾದ ಕ್ರಿ.ಶ. 12ನೆಯ ಶತಮಾನದ ನಿಸಿದಿ ಶಿಲ್ಪವಿದೆ.[23] ಇದು 2 ಅಡಿ ಉದ್ದ, 1 ಅಡಿ ಅಗಲವಾಗಿದೆ. ಇದರಲ್ಲಿ ಎರಡು ಹಂತಗಳಿವೆ. ಮೊದನೆಯ ಹಂತದಲ್ಲಿ ಸಲ್ಲೇಖನ ವ್ರತವನ್ನು ಆಚರಿಸಿದ ಮುನಿ ಮಂಟಪದಲ್ಲಿ ಕುಳಿತಿದ್ದಾನೆ. ಮಂಟಪದ ಅಕ್ಕ ಪಕ್ಕದಲ್ಲಿ ಇಬ್ಬರು ಚಾಮರಧಾರಿಣಿಯರಿದ್ದಾರೆ. ಮೇಲಿನ ಹಂತದಲ್ಲಿ ಅರ್ಧ ಪದ್ಮಾಸನದಲ್ಲಿ ಯೋಗ ಮುದ್ರೆಯಲ್ಲಿ ಆಸೀನನಾದ ಮುನಿಯಿದ್ದಾನೆ. ಈ ಶಿಲ್ಪಕ್ಕೆ ಎಣ್ಣೆ ಹಾಕಿರುವುದರಿಂದ ಅದು ಅಸ್ಪಷ್ಟವಾಗಿದೆ. ಇದೇ ತಾಲೂಕಿನ ಅಬ್ಬಿಗೇರಿ ಗ್ರಾಮದಲ್ಲಿರುವ ಉಡಚಮ್ಮನ ದೇವಾಲಯದ ಮುಂದೆ ಕ್ರಿ. ಶ. 13ನೆಯ ಶತಮಾನಕ್ಕೆ ಸೇರಿದ ನಿಸಿದಿಗಲ್ಲು ಸು. 3 ಅಡಿ ಉದ್ದ, 1 ಅಡಿ ಅಗಲವಾಗಿದೆ. ಮಧ್ಯದಲ್ಲಿ ಜೈನ ಮುನಿಯು ನಿಂತಿರುವನು. ಅವನ ಎಡಭಾಗದಲ್ಲಿ ಸಲ್ಲೇಖನ ವ್ರತಧಾರಿ ಕುಳಿತಿದ್ದಾನೆ.[24] ಎಡಭಾಗದಲ್ಲಿ ಸ್ತ್ರೀಯು ಕೈಮುಗಿದು ಕುಳಿತಿದ್ದಾಳೆ. ಮೇಲೆ ಸೂರ್ಯ ಚಂದ್ರರ ಚಿತ್ರಗಳಿವೆ. ಈ ಶಿಲ್ಪದ ಮೇಲ್ಭಾಗ ತೃಟಿತವಾಗಿದೆ. ಕೆಳ ಭಾಗದ ಪಟ್ಟಿಕೆಯಲ್ಲಿ ಯಾವುದೇ ಚಿತ್ರಗಳಿಲ್ಲ.

ಅಣ್ಣಿಗೇರಿಯಿಂದ ಪಶ್ಚಿಮಕ್ಕೆ ಮೂರು ಕಿ. ಮೀ. ಅಂತರದಲ್ಲಿರುವ ಶರಣಬಸಪ್ಪ ದೇಸಾಯಿ ಅವರ ಹೊಲದಲ್ಲಿ ಕ್ರಿ. ಶ. ಸುಮಾರು 13ನೆಯ ಶತಮಾನದ ಚತುರ್ಮುಖ ನಿಸಿದಿಸ್ತಂಭವಿದೆ. ಒಂದು ಮುಖದಲ್ಲಿ ಎರಡು ಶಿಲ್ಪಪಟ್ಟಿಕೆಗಳು ಮತ್ತು ಇನ್ನುಳಿದ ಮೂರು ಮುಖಗಳಲ್ಲಿ ತಲಾ ಒಂದು ಶಿಲ್ಪಪಟ್ಟಿಕೆಗಳಿವೆ. ಎರಡು ಪಟ್ಟಿಕೆಗಳಿರುವ ಭಾಗದ ಕೆಳಗಿನ ಪಟ್ಟಿಕೆಯಲ್ಲಿ ಜೈನಾಚಾರ್ಯನು ವೀರಾಸನದಲ್ಲಿ ಆಸೀನನಾಗಿ ಸಲ್ಲೇಖನ ವ್ರತವನ್ನು ಬೋಧಿಸುತ್ತಿದ್ದಾನೆ. ಮೇಲಿನ ಪಟ್ಟಿಕೆಯಲ್ಲಿ ಮತ್ತು ಇನ್ನುಳಿದ ಮೂರೂ ಮುಖದ ಪಟ್ಟಿಕೆಗಳಲ್ಲಿ ಪೀಠದ ಮೇಲೆ ತೀರ್ಥಂಕರನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರದ ಹಿಂಬದಿಯಲ್ಲಿ ಪ್ರಭಾಮಂಡಲ ಮತ್ತು ಮೇಲ್ಭಾಗದಲ್ಲಿ ಮುಕ್ಕೊಡೆಗಳಿವೆ. ಶಿರದ ಪಾರ್ಶ್ವದಲ್ಲಿ ಹಿಡಿಸಹಿತ ಎರಡು ಚಾಮರಗಳಿವೆ. ಒಂದು ಮುಖದ ಪಟ್ಟಿಕೆಯ ಕೆಳಭಾಗದಲ್ಲಿ ನಾಲ್ಕು ಸಾಲುಗಳ ತೃಟಿತ ಶಾಸನವಿದ್ದು, ಇದರಲ್ಲಿ "ಅಣ್ಣಿಗೇರಿಯ ಚಂದಲದೇವಿಯರು" ಎಂಬ ನಿರೂಪಣೆಯಿದೆ.[25] ಅಣ್ಣಿಗೇರಿ ಪಟ್ಟಣದ ಚಂದಲದೇವಿ ಎಂಬ ಶ್ರಾವಕಿ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಸಮಾಧಿಮರಣವನ್ನಪಿದ ಪರೋಕ್ಷ ವಿನಯಾರ್ಥವಾಗಿ ಈ ನಿಸಿದಿಸ್ತಂಭವನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಿಲ್ಲಿಸಲಾಗಿದೆ. ಸ್ಥಳೀಯರು ಈ ನಿಸಿದಿಗಲ್ಲನ್ನು 'ಕೊರಮ್ಮದೇವಿ' ಎಂದು ಆರಾಧಿಸುತ್ತಿದ್ದಾರೆ. ಕೊರಮ್ಮದೇವಿಯ ಬಳಗವೆಂದು ಈ ನಿಸಿದಿಗಲ್ಲಿನ ಸುತ್ತಲೂ ಚಿಕ್ಕ ಚಿಕ್ಕ ಗುಂಡುಕಲ್ಲುಗಳನ್ನಿಟ್ಟು ಪೂಜಿಸಲಾಗಿದೆ. ಈ ಕೊರಮ್ಮದೇವಿಯಿಂದಾಗಿ ಇಲ್ಲಿಯ ಹೊಲವನ್ನು 'ಕೊರಮ್ಮದೇವಿ ಮಾನೇದ ಹೊಲ' ಎಂದು ಕರೆಯಲಾಗುತ್ತದೆ.[26] ಯಲಬುರ್ಗಾ ತಾಲೂಕಿನ ಇಟಗಿ ಗ್ರಾಮದ ಮಹದೇವ ದೇವಾಲಯದ ಆವರಣದಲ್ಲಿ ಕ್ರಿ.ಶ. 13ನೆಯ ಶತವಾನದ ನಿಸಿಧಿ ಶಿಲ್ಪವಿದೆ.[27] ಅಣ್ಣಿಗೇರಿಯ ಸಂಗಾಪುರ ಬಡಾವಣೆಯಲ್ಲಿರುವ ಶಿಕ್ಕೆದೇಸಾಯಿಯವರ ರುದ್ರಭೂಮಿಯಲ್ಲಿ ಕ್ರಿ.ಶ. ಸುಮಾರು 14ನೆಯ ಶತಮಾನದ ನಿಸಿದಿಗಲ್ಲುವಿದೆ. ಇದರಲ್ಲಿ ಎರಡು ಶಿಲ್ಪಪಟ್ಟಿಕೆಗಳಿವೆ. ಎರಡೂ ಪಟ್ಟಿಕೆಗಳ ಮಧ್ಯದಲ್ಲಿ ತೀರ್ಥಂಕರನು ಪೀಠದ ಮೇಲೆ ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಈತನ ಪಾರ್ಶ್ವದಲ್ಲಿ ಇಬ್ಬರು ದ್ವಿಭುಜ ಚಾಮಧಾರರಿದ್ದಾರೆ. ಕೆಳಗಿನ ಪಟ್ಟಿಕೆಯ ಕೆಳಬದಿಯಲ್ಲಿ ಮೂರು ಸಾಲುಗಳ ಶಾಸನವಿದ್ದು, ಇದರಲ್ಲಿ ಅಣ್ಣಿಗೇರಿಯ ಮುನಿ ಅಥವಾ ಶ್ರಾವಕನು ಪಂಚಪದಗಳನ್ನು(ಪಂಚ ಣಮೋಕಾರ ಮಂತ್ರ) ಪಠಿಸುತ್ತ ಸವಾಧಿವಿಧಿಯಿಂದ ಮುಡುಪಿ ಮೋಕ್ಷವನ್ನು ಸಂಪಾದಿಸಿದ ವಿವರಗಳಿರುವಂತೆ ತೋರುತ್ತದೆ.[28]

## ಸಮಾರೋಪ

ಜೈನ ಮುನಿಗಳು ಮತ್ತು ಕಂತಿಯರು ಬೆಳ್ವೊಲನಾಡಿನ ಜೈನ ಪರಂಪರೆಗೆ ಅಪಾರವಾದ ಕೊಡುಗೆಗಳನ್ನು ನೀಡಿದ್ದು ಅವರ ಧಾರ್ಮಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳಿಂದ ವೇದ್ಯವಾಗುತ್ತದೆ. ಅವರ ಕುರಿತು ಕಂಡುಬರುವ ಶಾಸನಗಳು, ನಿಸಿದಿಗಳು ಹಾಗೂ ಜೈನ ಪುರಾತತ್ವ ಪುರಾವೆಗಳು ಅಮೂಲ್ಯವಾದ ಕೊಡುಗೆ ಸಲ್ಲಿಸಿವೆ. ಆದ್ದರಿಂದಲೇ ಈ ಪಂಥದ ಮುನಿಗಳು ಈ ನಾಡಿನಲ್ಲಿ ಹೆರಳವಾಗಿ ಕಂಡುಬರುತ್ತಾರೆ. ಒಟ್ಟಿನಲ್ಲಿ ತ್ಯಾಗ ಮತ್ತು ತಪಸ್ಸಿನ ಪ್ರತಿರೂಪವಾಗಿರುವ ಮುನಿಗಳ ಬಗ್ಗೆ, ಜೈನಧರ್ಮೀಯರಷ್ಟೇ ಅಲ್ಲ, ಎಲ್ಲ ಧರ್ಮೀಯರೂ ತಿಳಿದುಕೊಂಡಲ್ಲಿ ಪರಸ್ಪರ ಸಹನೆ, ಪ್ರೀತಿ ವಿಶ್ವಾಸದೊಂದಿಗೆ ಶಾಂತಿ ಸಾಮರಸ್ಯದ ಜೀವನ ಸಾಧ್ಯವಾಗಬಹುದು. ಒಟ್ಟಾರೆಯಾಗಿ ಜೈನಧರ್ಮದ ಆಚಾರ್ಯರು, ಕಂತಿಯರು ಕನ್ನಡ ಸಂಸ್ಕೃತಿಗೆ ಕೊಟ್ಟಿರುವ ಕಾಣಿಕೆ ಅಪರಿಮಿತ, ಅಷ್ಟೇ ಉಪಮಾತೀತ. ಕನ್ನಡನಾಡಿನ ಜೀವನಕ್ಕೆ ಶಾಸ್ತ್ರದ ಬೆಳಕನ್ನು, ಕಾವ್ಯದ ಕಮನೀಯತೆಯನ್ನು ತಂದುಕೊಟ್ಟು ಅದನ್ನು ರೂಪಿಸಿದವರು ಜೈನ ಆಚಾರ್ಯ ಹಾಗೂ ಕಂತಿಯರು ಎಂದು ಹೇಳಿದರೆ ಅತೀಶ ಯೋಕ್ತಿಯಾಗಲಾರದು. ಜೈನ ಪರಂಪರೆಯಲ್ಲಿ ಪ್ರಾಚೀನ ಕಾಲದಿಂದ ಇಂದಿಗೂ ಪ್ರಚಲಿತದಲ್ಲಿರುವ ಹಲವು ವ್ರತಾಚರಣೆಗಳಲ್ಲಿ ಸಮಾಧಿ ಮರಣವು ಒಂದಾಗಿದೆ. ಜೈನ ಮುನಿಗಳು ಮತ್ತು ಶ್ರಾವಕರು(ಗೃಹಸ್ಥರು) ತಮ್ಮ ಬದುಕಿನ ಅಂತ್ಯದಲ್ಲಿ ಸಲ್ಲೇಖನ ವ್ರತ ಕೈಗೊಂಡು ಮರಣ ಹೊಂದುವುದನ್ನು 'ಸಮಾಧಿಮರಣ' ಎಂದು ಕರೆಯುವರು. ಈ ರೀತಿ ಮರಣ ಹೊಂದಿದವರ ಪರೋಕ್ಷ ವಿನಯಾರ್ಥಕವಾಗಿ ನಿಲ್ಲಿಸುತ್ತಿದ್ದ ಕಲ್ಲುಗಳನ್ನು ನಿಸಿದಿ ಕಲ್ಲುಗಳೆಂದು ಗುರುತಿಸಲಾಗುತ್ತದೆ.

## ಪರಾಮರ್ಶನ ಗ್ರಂಥಗಳು


1. ಕಲಬುರ್ಗಿ ಎಂ.ಎಂ. (ಸಂ.), 1999, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.
2. ಎಸ್.ಆಯ್.ಆಯ್. ಸಂ. XI-ii, ಶಾ.ಸಂ. 134. ಕೆ.ಆಯ್. ಸಂ. ೫, ಶಾ.ಸಂ. 24.
3. ಶಾಮರಾಯ ತ. ಸು.(ಸಂ.), ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣ, ಪು. 207–208.
4. ಮಿರ್ಜಿ ಅಣ್ಣಾರಾಯ.(ಅನು.), ರತ್ನಕರಂಡಕ ಶ್ರಾವಕಾಚಾರ, ಪ.ಸಂ. 122–130, ಪು. 516–557.
5. ಕಲಬುರ್ಗಿ ಎಂ.ಎಂ., ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಪು. 6.
6. ಅದೇ, ಪು. 10.
7. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನಶಿಲ್ಪ, ಪು. 117–126.
8. ಕ. ಜೈ. ಶಾ. ಸಂ. 4, ಶಾ.ಸಂ. 257.
9. ಅದೇ, ಸಂ. 4, ಶಾ.ಸಂ, 259.
10. ಎಸ್.ಆಯ್.ಆಯ್. 15, ಶಾ.ಸಂ. 615.
11. ಕ. ಜೈ. ಶಾ. ಸಂ. 4, ಶಾ.ಸಂ, 258.
12. ಜಗ್ಗಲ ಶರಣಪ್ಪ, ಬೆಳ್ವೊಲನಾಡಿನ ಜೈನ ಪರಂಪರೆ,(ಅಪ್ರಕಟಿತ ಮಹಾಪ್ರಬಂಧ), ಪು. 212.
13. ಎಸ್.ಆಯ್.ಆಯ್ ಸಂ.15, ಶಾ.ಸಂ. 530.
14. ಹಂಜೆ ಅಪ್ಪಣ್ಣ ಎನ್., ಭದ್ರಾಪುರದ ನಿಸಿದಿಗಲ್ಲು ಮತ್ತು ನಿಸಿದಿಶಾಸನ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. 84/3 (ಜುಲೈ/ಸಪ್ಟೆಂಬರ್–2006), ಪು. 70–71.
15. ಎಸ್.ಆಯ್.ಆಯ್. ಸಂ.15, ಶಾ.ಸಂ. 613.
16. ಗೋಗಿ ಹನುಮಾಕ್ಷಿ, ಲಕ್ಕುಂಡಿ ಶಾಸನಗಳು, ಶಾ.ಸಂ. 82.
17. ನರೇಗಲ್ ಎಂ.ಎಸ್., ಉತ್ತರ ಗದಗ ಜಿಲ್ಲೆಯ ಶಾಸನಗಳು, ಪು. 235.
18. ಎ.ಆರ್.ಎಸ್.ಆಯ್.ಇ., 1940–41, ಶಾ.ಸಂ. 63, ಪು.ಸಂ. 245.
19. ಜಗ್ಗಲ ಶರಣಪ್ಪ, ಪೂರ್ವೋಕ್ತ, ಪು. 215.
20. ಅದೇ, ಪು. 215.
21. ಅದೇ, ಪು. 215.
22. ಎ.ಆರ್.ಎಸ್.ಆಯ್.ಇ. 1946–47, ಶಾ.ಸಂ. 244.
23. ಜಗ್ಗಲ ಶರಣಪ್ಪ, ಪೂರ್ವೋಕ್ತ, ಪು. 215.
24. ಅದೇ, ಪು. 216.
25. ಹಂಜೆ ಸಂಜಯ್ ಎನ್., ಅಣ್ಣಿಗೇರಿ ತಾಲೂಕಿನ ಜೈನ ಪುರಾತತ್ವ ಪುರಾವೆಗಳು, ಪುಟ–34.
26. ಅಲ್ಲಯ್ಯನವರ ಪಾ.ನಾ., ಅಣ್ಣಿಗೇರಿ ಒಂದು ಜೈನ ಐತಿಹ್ಯ, ಜೈನ ಕ್ಷೇತ್ರಗಳ ಐತಿಹ್ಯ, ಪು. 27..
27. ಜಗ್ಗಲ ಶರಣಪ್ಪ, ಪೂರ್ವೋಕ್ತ, ಪು. 216.
28. ಹಂಜೆ ಸಂಜಯ್ ಎನ್. ಅಣ್ಣಿಗೇರಿ ತಾಲೂಕಿನ ಜೈನ ಪುರಾತತ್ವ ಪುರಾವೆಗಳು, ಪುಟ–34.


■■


ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com


APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತದಲ್ಲಿನ ನಿರಾಶ್ರಿತ ಸಮುದಾಯಗಳ ಸಮಸ್ಯೆಗಳು ಮತ್ತು ಸವಾಲುಗಳಿಗೆ ಭಾರತ ಸರ್ಕಾರದ ಸ್ಪಂದನೆ

✍ **ಶ್ರೀ ಹನಮಗೌಡ,** ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

✍ **ಡಾ. ದಯಾನಂದ ನಾಯ್ಕ್,** ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

*ಸಾರಾಂಶ*

*ವಲಸೆಯು ಮಾನವ ಸಹಜ ವಿಧ್ಯಮಾನವಾಗಿದ್ದು ಇದನ್ನು ಮಾನವನ ನಾಗರಿಕ ಜೀವನದ ಆರಂಭಕ್ಕಿಂತ ಪೂರ್ವದಿಂದಲೂ ಗುರುತಿಸಬಹುದಾಗಿದೆ. ಹೀಗಾಗಿ ಮಾನವನ ಇತಿಹಾಸವು ವಲಸೆಯ ಇತಿಹಾಸವಾಗಿದೆ. ಆದಿ ಮಾನವನು ಆಹಾರವನ್ನು ಅರಸಿಕೊಂಡು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವುದು ಸಾಮಾನ್ಯ ಮತ್ತು ಸಹಜ ವಿಧ್ಯಮಾನವಾಗಿತ್ತು. ನಾಗರಿಕತೆಯು ಬೆಳೆದಂತೆ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಮೊದಲಾದ ಕಾರಣಗಳಿಗಾಗಿ ವಲಸೆಯು ಸಹಜವಾಗಿ ಘಟಿಸುತಿತ್ತು. ಜಗತ್ತಿನಾದ್ಯಂತ ರಾಷ್ಟ್ರರಾಜ್ಯದ ಪರಿಕಲ್ಪನೆಯು ಬೆಳವಣಿಗೆ ಹೊಂದುತ್ತ ಹೋದಂತೆ ಎಲ್ಲಾ ರಾಷ್ಟ್ರರಾಜ್ಯಗಳಲ್ಲಿ ಪೌರತ್ವದ ಪರಿಕಲ್ಪನೆ ಬೆಳೆಯುತ್ತ ಸಾಗಿತು. ಇದು ಸರ್ಕಾರಗಳಿಗೆ ಪೌರರು ಮತ್ತು ವಲಸಿಗರ ನಡುವೆ ತಾರತಮ್ಯವನ್ನು ಮಾಡಲು ಅವಕಾಶ ಕಲ್ಪಿಸಿಕೊಟ್ಟಿತು. ಪೌರರಲ್ಲದ ಅಂತರ್ ರಾಷ್ಟ್ರೀಯ ವಲಸಿಗರನ್ನು ನಿರಾಶ್ರಿತರು ಎಂದು ಕರೆಯಲಾಯಿತು. ದ್ವಿತೀಯ ವಿಶ್ವಯುದ್ಧದ ನಂತರ ವಸಹಾತುಶಾಯಿತ್ವ ಕೊನೆಗೊಂಡ ನಂತರ ನಿರಾಶ್ರಿತರ ಸಮಸ್ಯೆಯು ಜಾಗತಿಕ ಸಮಸ್ಯೆಯಾಗಿ ಪರ್ಯಾವಸನಗೊಂಡಿತು. ಈ ಹಿನ್ನಲೆಯಲ್ಲಿ ನಿರಾಶ್ರಿತರ ಕುರಿತ ಆಳವಾದ ಅಧ್ಯಯನದ ಅಗತ್ಯತೆ ಇದೆ.*

*ಈ ನಿಟ್ಟಿನಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದು, ಪ್ರಸ್ತುತ ಲೇಖನವು ಪ್ರಾಥಮಿಕ ದತ್ತಾಂಶಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸಿ, ದ್ವಿತೀಯ ದತ್ತಾಂಶಗಳನ್ನು ಹೆಚ್ಚಾಗಿ ಬಳಸಿಕೊಂಡಿದೆ. ವಿವರಣಾತ್ಮಕ ಮತ್ತು ವಿಶ್ಲೇಷಣಾ ಪದ್ಧತಿಯನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಲೇಖನವು ನಿರಾಶ್ರಿತರ ಪರಿಭಾಷೆಯನ್ನು ಅರ್ಥೈಸುವುದರ ಜೊತೆಗೆ ನಿರಾಶ್ರಿತರ ಪ್ರಕಾರಗಳು, ಭಾರತದಲ್ಲಿನ ಪ್ರಮುಖ ನಿರಾಶ್ರಿತ ಸಮುದಾಯಗಳು, ಜಾಗತಿಕ ನಿರಾಶ್ರಿತರ ನೀತಿಗೆ ಭಾರತ ಸ್ಪಂದನೆ ಮತ್ತು ನಿರಾಶ್ರಿತರ ನಿರ್ವಹಣೆಯಲ್ಲಿ ಭಾರತದ ಮಾದರಿಯನ್ನು ವಿಮರ್ಶಾತ್ಮವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.*

*ಪ್ರಮುಖ ಪದಗಳು : 'ನಿರಾಶ್ರೀತರು', 'ವಲಸಿಗರು', 'ರಾಷ್ಟ್ರೀಯ ಕಾಯ್ದೆ', 'ಮಾನವ ಹಕ್ಕುಗಳು' 'ಪೌರತ್ವ'*

## ಸಂಶೋಧನೆಯ ಉದ್ದೇಶಗಳು

- ನಿರಾಶ್ರಿತರ ವಲಸೆಗೆ ಕಾರಣಗಳನ್ನು ಅರಿಯುವುದು.
- ಭಾರತದಲ್ಲಿ ನಿರಾಶ್ರಿತರ ಕುರಿತು ರಾಷ್ಟ್ರೀಯ ಕಾಯ್ದೆಯ ರಚನೆಯ ಪ್ರಯತ್ನಗಳನ್ನು ಮತ್ತು ಅದಕ್ಕಿರುವ ಅಡಚಣೆಗಳನ್ನು ಪರಿಶೀಲಿಸುವುದು.
- ನಿರಾಶ್ರಿತರ ಪುನರ್ವಸತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿಯುವುದು.
- ನಿರಾಶ್ರಿತ ಸಮುದಾಯಗಳ ಕುರಿತ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಪ್ರಾವಧಾನಗಳನ್ನು ಗುರುತಿಸುವುದು.

## ಪ್ರಸ್ತಾವನೆ

ಮಾನವನು ಸಮಾಜ ಜೀವಿ ಅವನು ಸಮಾಜವನ್ನು ಬಿಟ್ಟು ಬದುಕಲಾರ. ತನ್ನ ಜೀವನದ ಸುರಕ್ಷತೆ ಮತ್ತು ಸಾಮಾಜಿಕ ಗುಣಮಟ್ಟದ ಸುಧಾರಣೆಗಾಗಿ ಆತನು ಸದಾ ಪ್ರಯತ್ನಿಸುತ್ತಿರುತ್ತಾನೆ. ಶಿಕ್ಷಣ, ಉದ್ಯೋಗ ವ್ಯಾಪಾರ ಮೊದಲಾದವುಗಳನ್ನು ಪಡೆಯಲು ಅಥವಾ ಜೀವನಕ್ಕಿರುವ ಕಂಟಕಗಳಿಂದ ಪಾರಾಗಲು ಕೆಲವು ಬಾರಿ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ವಲಸೆ ಹೋಗುತ್ತಾನೆ. ಒಂದು ದೇಶದ ಒಳಗಿನ ವಲಸೆಯು ಸಾಮಾನ್ಯ ಸರಳ ವಿಧ್ಯಮಾನವಾದರೆ ಅಂತಾರಾಷ್ಟ್ರೀಯ ವಲಸೆಯು ಅತ್ಯಂತ ಕಷ್ಟದ, ಅಪಾಯಕರವಾದ ಮತ್ತು ಅಪರೂಪದ ವಿಧ್ಯಮಾನವಾಗಿದೆ. ಹೀಗೆ ಅಕ್ರಮವಾಗಿ ಅಥವಾ ರಾಜತಾಂತ್ರಿಕ ಒಪ್ಪಂದ ಮೂಲಕ ಮತ್ತೊಂದು ದೇಶದ ಗಡಿ ಪ್ರವೇಶಿಸಿದವರನ್ನು ಆ ದೇಶದಲ್ಲಿ ನಿರಾಶ್ರಿತರು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ವಲಸಿಗರು ಮತ್ತು ನಿರಾಶ್ರಿತರು ಎನ್ನುವ ಪದಗಳನ್ನು ಸಮನಾರ್ಥಕವಾಗಿ ಬಳಸುತ್ತಾರೆ ಆದರೆ ಅವುಗಳ ನಡುವೆ ಭಿನ್ನತೆ ಇದೆ. ಹೇಗೆಂದರೆ ವಲಸಿಗರು ತಮ್ಮ ಸ್ವಇಚ್ಛೆಯಿಂದ ಉದ್ಯೋಗ ಮತ್ತಿತರ ಕಾರಣಗಳಿಗಾಗಿ ತಮ್ಮ ವಾಸಸ್ಥಳವನ್ನು ತೊರೆದವರಾಗಿದ್ದು ತಾವು ಇಚ್ಚಿಸಿದ ಸಮಯದಲ್ಲಿ ತಮ್ಮ ಸ್ವಸ್ಥಾನಕ್ಕೆ ವಾಪಸಾತಿಯ ಅವಕಾಶವನ್ನು ಹೊಂದಿರುತ್ತಾರೆ. ಆದರೆ ನಿರಾಶ್ರಿತರು ರಾಜಕೀಯ ಕಾರಣಗಳಿಗಾಗಿ ಒತ್ತಾಯ ಪೂರ್ವಕವಾಗಿ ತಮ್ಮ ವಾಸಸ್ಥಳವನ್ನು ತೊರೆದು ಶಾಶ್ವತವಾಗಿ ಪರದೇಶದಲ್ಲಿ ಆಶ್ರಯ ಪಡೆದ ಅಥವಾ ಆಶ್ರಯದ ನಿರೀಕ್ಷೆಯಲ್ಲಿರುವವರಾಗಿರುತ್ತಾರೆ. ರಾಜತಾಂತ್ರಿಕ ಒಪ್ಪಂದವಾಗದ ಹೊರೆತು ಅವರು ತಮ್ಮ ಸ್ವಸ್ಥಾನಕ್ಕೆ ವಾಪಸಾತಿಯಾಗಲು ಸಾಧ್ಯವಾಗುವುದಿಲ್ಲ. ತಮ್ಮ ಮೂಲ ದೇಶದಲ್ಲಿ ಯುದ್ಧ, ಜನಾಂಗೀಯ ಸಂಘರ್ಷ, ಮಾನವ ಹಕ್ಕುಗಳ ಉಲ್ಲಂಘನೆ, ಅಭಿವೃದ್ಧಿ ಯೋಜನೆಗಳಿಂದ ಉಂಟಾದ ಪರಿಸರ ಮತ್ತು ಹವಾಮಾನದ ತೊಂದರೆಗಳು, ತನ್ನ ಜೀವಕ್ಕೆ, ಧಾರ್ಮಿಕ ನಂಬಿಕೆಗಳಿಗೆ, ಸಂಪ್ರದಾಯಗಳಿಗೆ ಕುಂದು ತರುವಂತಹ ಸನ್ನಿವೇಶಗಳು ಸೃಷ್ಟಿಯಾದಾಗ ಅಥವಾ ನಮ್ಮ ಮಾತೃ ದೇಶಕ್ಕಿಂತ ನಿರಾಶ್ರಿತರ ಆತಿಥ್ಯ ವಹಿಸಿದ ದೇಶದಲ್ಲಿ ಆರ್ಥಿಕ ಭದ್ರತೆಯ ಅವಕಾಶಗಳ ಲಭ್ಯತೆಯ ಖಾತ್ರಿಯ ಸುಳಿವು ಸಿಕ್ಕಾಗ ನೆಮ್ಮದಿಯ ಮತ್ತು ಸುರಕ್ಷಿತ ಜೀವನಕ್ಕಾಗಿ ತನ್ನ ಮಾತೃ ದೇಶವನ್ನು ತೊರೆದು ತನ್ನ ಜನಾಂಗ ಮತ್ತು ಸಂಸ್ಕೃತಿಗೆ ಹೊಂದಾಣಿಕೆಯಾಗುವ ಹತ್ತಿರದ ದೇಶಗಳಲ್ಲಿ ಆ ದೇಶದ ನಿರಾಶ್ರಿತರ ನೀತಿಗೆ ಅನುಗುಣವಾಗಿ ಸರ್ಕಾರಿ ಪ್ರಾಯೋಜಕತ್ವದಲ್ಲಿ ಅಥವಾ ಒಂದು ವೇಳೆ ಅದು ಸಾಧ್ಯವಾಗದ ಸಂದರ್ಭದಲ್ಲಿ ಅಕ್ರಮವಾಗಿ ನುಸುಳಿ ವಾಸಿಸಲು ಪ್ರಾರಂಭಿಸುತ್ತಾರೆ.

ನಿರಾಶ್ರಿತರ ಸಮಸ್ಯೆಯು ಜಾಗತಿಕ ವಿಧ್ಯಮಾನವಾಗಿದೆ. ಈ ಅಂಶವು ವಿಶಾಲವಾದ ಭೌಗೋಳಿಕ ಮತ್ತು ಜನಾಂಗೀಯ ವ್ಯಾಪ್ತಿಯನ್ನು ಹೊಂದಿದೆ.ಎರಿಟ್ರಿಯಾ, ಮಧ್ಯ ಆಫ್ರಿಕಾದ ಗಣರಾಜ್ಯ, ಸೊಮಾಲಿಯಾ, ಸುಡಾನ್, ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ರೋಹಿಂಗ್ಯಾ, ದಕ್ಷಿಣ ಸುಡಾನ್, ಅಫಘಾನಿಸ್ತಾನ್, ಉಕ್ರೇನ್, ಮತ್ತು ಸಿರಿಯಾ ನಿರಾಶ್ರಿತರು ಜಗತ್ತಿನ ಅತಿದೊಡ್ಡ ಮತ್ತು ಬಹು ಚರ್ಚಿತ ನಿರಾಶ್ರಿತ ಸಮುದಾಯಗಳಾಗಿವೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಯುರೋಪ್, ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ಅತಿಹೆಚ್ಚು ನಿರಾಶ್ರಿತರಿದ್ದಾರೆ. ಜಾಗತಿಕ ಮಟ್ಟದಲ್ಲಿ ಯು.ಎನ್.ಹೆಚ್.ಸಿ. ಆರ್ (United Nations High Commissioner for Refugees) ಆದೇಶದ ಅಡಿಯಲ್ಲಿ 29.4 ಮಿಲಿಯನ್ ಮತ್ತು ಯು.ಎನ್.ಆರ್.ಡಬ್ಲು.ಎ (United Nations Relief and Works Agency) ಅಡಿಯಲ್ಲಿ 5.9 ಮಿಲಿಯನ್ ಹೀಗೆ ಒಟ್ಟಾರೆ 35.3 ಮಿಲಿಯನ್ ನೊಂದಾಯಿತ ನಿರಾಶ್ರಿತರಿದ್ದಾರೆ. ಈ ಅಂಕಿ ಅಂಶಗಳು ಅನಧಿಕೃತ ಮತ್ತು ಯು.ಎನ್.ಹೆಚ್.ಸಿ.ಆರ್. ಅಡಿಯಲ್ಲಿ ನೊಂದಾಯಿಸದ ನಿರಾಶ್ರಿತರನ್ನು ಒಳಗೊಂಡಿಲ್ಲ.ಇವರೆಲ್ಲರನ್ನು ಸೇರಿಸಿ ಅಂದಾಜು ಮಾಡುವುದಾದರೆ ಒಟ್ಟು ನಿರಾಶ್ರಿತರ ಸಂಖ್ಯೆ 108.4 ಮಿಲಿಯನ್ ದಾಟಬಹುದು ಎಂದು ಯು.ಎನ್.ಹೆಚ್.ಸಿ.ಆರ್. 2023 ರಲ್ಲಿ ವರದಿ. ಈ ಅಂಕಿಅಂಶಗಳು ನಿರಾಶ್ರಿತರ ಸಮಸ್ಯೆಯ ತೀವ್ರತೆಯನ್ನು ಸೂಚಿಸುತ್ತವೆ. ಸಂಖ್ಯೆಯ ಗಾತ್ರದಲ್ಲಿ ಕಡಿಮೆ ಇರುವ ಮತ್ತು ಯು.ಎನ್.ಹೆಚ್.ಸಿ.ಆರ್.ಯ ಭಾಗವಲ್ಲದ ನಿರಾಶ್ರಿತ ಸಮುದಾಯಗಳ ಸಮಸ್ಯೆಗಳು ಚರ್ಚೆಗೆ ಬರದೆ ಅವಜ್ಞೆಗೆ ಒಳಗಾಗಿವೆ. ಇಂತಹ ನಿರಾಶ್ರಿತರ ಪಟ್ಟಿಗೆ ಭಾರತದಲ್ಲಿನ ನಿರಾಶ್ರಿತರು ಸೇರುತ್ತಾರೆ.

## ಯಾರನ್ನು ನಿರಾಶ್ರಿತರು ಎಂದು ಕರೆಯುವರು ?

ನಿರಾಶ್ರಿತರು ಎನ್ನುವ ಪದಕ್ಕೆ ಜಾಗತಿಕವಾಗಿ ಒಪ್ಪಿತವಾಗಿರುವ ಒಂದು ವ್ಯಾಖ್ಯಾನವನ್ನು ಇದುವರೆಗೆ ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಬಹುಬಳಕೆಯಲ್ಲಿರುವ ವ್ಯಾಖ್ಯಾನಗಳನ್ನು ಪರಿಶೀಲಿಸುವುದಾದರೆ ಜಾಗತಿಕವಾಗಿ ನಿರಾಶ್ರಿತರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಜಗತ್ತಿನ ಅತಿದೊಡ್ಡ ಸಂಸ್ಥೆಯಾದ ಯು.ಎನ್.ಹೆಚ್.ಸಿ.ಆರ್. ನ 1951 ರ ಒಡಂಬಕೆಯ ಪ್ರಕಾರ–

**"ಎರಡನೆಯ ಮಹಾಯುದ್ಧದಿಂದಾಗಿ ಯೂರೋಪಿನ ದೇಶದ ಪ್ರಜೆಯು ತನ್ನ ಮೂಲದೇಶದಲ್ಲಿ ತನ್ನ ಜನಾಂಗ, ಧರ್ಮ, ರಾಷ್ಟ್ರೀಯತೆ ಅಥವಾ ಒಂದು ನಿರ್ದಿಷ್ಟ ಸಾಮಾಜಿಕ ಸಮುದಾಯದ ಸದಸ್ಯನಾಗಿರುವ ಕಾರಣಕ್ಕೆ ಕಿರುಕುಳಕ್ಕೆ ಒಳಗಾಗಿ ದೇಶದಿಂದ ಬಲತ್ಕಾರದಿಂದ ಹೊರ ಹಾಕಲ್ಪಟ್ಟವರು"** ಎಂದು ನಿರಾಶ್ರಿತರನ್ನು ವ್ಯಾಖ್ಯಾನಿಸಿದೆ.

1967 ರ ವಿಶ್ವಸಂಸ್ಥೆಯ ಶಿಷ್ಟಾಚಾರದ ಪ್ರಕಾರ–

ಯು.ಎನ್.ಹೆಚ್.ಸಿ.ಆರ್. 1967ರಲ್ಲಿ ತನ್ನ 1951 ಒಡಂಬಡಿಕೆಯ ವ್ಯಾಖ್ಯೆಯನ್ನು ತಿದ್ದುಪಡಿ ಮಾಡಿ ಅದರಲ್ಲಿನ **ಭೌಗೋಳಿಕ ನಿರ್ಬಂಧವನ್ನು ಮತ್ತು ಕಾಲದ ನಿರ್ಬಂಧವನ್ನು** ತೆಗೆದು ಹಾಕಿ ಅಂತರಾಷ್ಟ್ರೀಯ ಕಾನೂನು ಮತ್ತು ಮಾನವೀಯ ಮಾನದಂಡಗಳಿಗೆ ಅನುಗುಣವಾಗಿ ರಕ್ಷಣೆ, ಮೂಲಭೂತ ಹಕ್ಕುಗಳ ಖಾತ್ರಿಯನ್ನು ನೀಡುವುದರ ಜೊತೆಗೆ ನ್ಯಾಯಯುತ ಮತ್ತು ಪರಿಣಾಮಕಾರಿ ಆಶ್ರಯದ ಕಾರ್ಯವಿಧಾನ ನೀಡುವುದು ಒಡಂಬಡಿಕೆಗೆ ಸಹಿ ಹಾಕಿದ ರಾಷ್ಟ್ರಗಳ ಬಾಧ್ಯತೆಯಾಗಿರುತ್ತದೆ ಎಂದು ಘೋಷಿಸಿತು.

1984 ರ ಕಾರ್ಟಜಿನಾ ಘೋಷಣೆಯ ಪ್ರಕಾರ–

**"ಬಡತನ, ಆರ್ಥಿಕ ಕುಸಿತ, ಹಣದುಬ್ಬರ, ಹಿಂಸೆ, ರೋಗ, ಆಹಾರ ಅಭದ್ರತೆ, ಅಪೌಷ್ಠಿಕತೆ ಮತ್ತು ಸ್ಥಳಾಂತರದ ಕಾರಣದಿಂದ ಅಂತರ ರಾಷ್ಟ್ರೀಯ ಗಡಿ ದಾಟಿದ ವ್ಯಕ್ತಿಗಳನ್ನು ನಿರಾಶ್ರಿತರು"** ಎಂದು ವ್ಯಾಖ್ಯಾನಿಸಿತು. ಯು.ಎನ್.ಹೆಚ್.ಸಿ.ಆರ್ ಒಡಂಬಡಿಕೆಯು ಕೇವಲ ರಾಜಕೀಯ ಮತ್ತು ಧಾರ್ಮಿಕ ನಿರಾಶ್ರಿತರನ್ನು ಮಾತ್ರ ಗುರುತಿಸಿ ಇತರ ಬಗೆಯ ನಿರಾಶ್ರಿತರನ್ನು ನಿರಾಶ್ರಿತರ ವ್ಯಾಖ್ಯೆಯಿಂದ ಹೊರಗಿಟ್ಟಿದ್ದು ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳು ಯು.ಎನ್.ಹೆಚ್.ಸಿ.ಆರ್ ಒಡಂಬಡಿಕೆಯ ಭಾಗವಾಗಲು ನಿರಾಕರಿಸಿದ ಕಾರಣಕ್ಕೆ ಸಂಕೀರ್ಣ ಸಮಸ್ಯೆಯಾಗಿದ್ದ ನಿರಾಶ್ರಿತರ ಪದದ ಅರ್ಥವನ್ನು 1984 ರಲ್ಲಿ 10 ಲ್ಯಾಟಿನ್ ಅಮೇರಿಕದ ದೇಶಗಳು ಕಾರ್ಟಜಿನಾ ಘೋಷಣೆಯನ್ನು ಹೊರಡಿಸಿ ಯು.ಎನ್.ಹೆಚ್.ಸಿ.ಆರ್ 1951 ಮತ್ತು 1967 ರ ಶಿಷ್ಟಾಚಾರ ಸಂಹಿತೆಯ ವ್ಯಾಖ್ಯಾನವನ್ನು ವಿಸ್ತರಿಸಿದವು.

ಈ ಮೇಲಿನ ಮೂರು ವ್ಯಾಖ್ಯಾನಗಳು ಬಳಕೆಯಲ್ಲಿ ಇದ್ದರೂ ಇಂದಿಗೂ ನಿರಾಶ್ರಿತರು ಎನ್ನುವ ಪದಕ್ಕೆ ಜಾಗತಿಕವಾಗಿ ಒಪ್ಪಿತವಾದ ಅರ್ಥವನ್ನು ನೀಡಲು ಸಾಧ್ಯವಾಗದೇ ಇರುವುದು ಈ ಸಮುದಾಯದ ಸಮಸ್ಯೆಯ ಸಂಕೀರ್ಣತೆಗೆ ಹಿಡಿದ ಕೈಗನ್ನಡಿಯಾಗಿದೆ. ಭಾರತಕ್ಕೆ ಒಂದು ರಾಷ್ಟ್ರೀಯ ನಿರಾಶ್ರಿತರ ನೀತಿ ಇಲ್ಲದೇ ಇರುವುದರಿಂದ ಇದುವರೆಗೆ ಈ ಪದವನ್ನು ಯಾವುದೇ ಕಾಯ್ದೆ ವ್ಯಾಖ್ಯಾನಿಸಿಲ್ಲ. ಭಾರತದಲ್ಲಿ ನಿರಾಶ್ರಿತರನ್ನು ವಿದೇಶಿಗರು ಎನ್ನುವ ಅರ್ಥದ ಪರಿಭಾಷೆಯಲ್ಲಿ ಪರಿಗಣಿಸಲಾಗಿದೆ.

## ನಿರಾಶ್ರಿತರ ಪ್ರಕಾರಗಳು

ಕುಂಜ್ ಅವರು ಕೈನೆಟಿಕ್ ಮಾಡಲ್ ರೆಫ್ಯೂಜಿ ಸಿದ್ಧಾಂತದ ಪ್ರಕಾರ ನಿರಾಶ್ರಿತರಲ್ಲಿ ಎರಡು ಪ್ರಕಾರಗಳಿವೆ. ಒಂದು ಅಪಾಯದ ಮುನ್ಸೂಚನೆ ದೊರೆತ ಕೂಡಲೆ ತಮ್ಮ ಸಕಲ ಸಂಪತ್ತಿನೊಂದಿಗೆ ಆತಿಥ್ಯ ನೀಡುವ ದೇಶವನ್ನು ಪ್ರವೇಶಿಸುವ ನಿರಾಶ್ರಿತರು. ಇವರು ಶ್ರೀಮಂತರಾಗಿರುವುದರಿಂದ ಇವರು ಅತಿಥ್ಯವಹಿಸಿದ ದೇಶದ ಮೇಲಿನ ಅವಲಂಬನೆ ನಿರೀಕ್ಷಿಸುವುದಿಲ್ಲವಾದ್ದರಿಂದ ಇವರ ಸಮಸ್ಯೆಗಳು ಕಡಿಮೆ. ಇನ್ನೊಬ್ಬರು ಅಪಾಯಕ್ಕೆ ಸಿಲುಕಿ ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ದೇಶ ತೊರೆಯುವ ನಿರಾಶ್ರಿತರು. ಇವರು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಹೊಸ ಆಶ್ರಯ ತಾಣದಲ್ಲಿ ಹಲವಾರು ಸಮಸ್ಯೆಗಳನ್ನು ಅನುಭವಿಸುವರು. ಇದು ಇವರನ್ನು ಆಘಾತಕರ ಬದುಕಿಗೆ ದೂಡುತ್ತದೆ. ಅವರು ತಮ್ಮ ಮೂಲ ವಾಸಸ್ಥಳಕ್ಕೆ ಮರಳುವ ಅವಕಾಶವನ್ನೇ ಕಳೆದುಕೊಂಡು ಆತಿಥ್ಯ ವಹಿಸಿಕೊಂಡ ದೇಶ ಸ್ಥಾಪಿಸಿದ ನಿರಾಶ್ರಿತರ ಪುನರ್ವಸತಿ ಕೇಂದ್ರದಲ್ಲಿ ಅನ್ಯಗ್ರಹ ಜೀವಿಯಂತೆ ಬದುಕುತ್ತಾರೆ. ಇದು ಅವರನ್ನು ಅವರ ಕುಟುಂಬವನ್ನು ಅಪಾರವಾದ ಆಘಾತಕ್ಕೆ ತಳ್ಳುತ್ತದೆ. ಈ ಏಕಾಂಗಿ ಭಾವ ಅವರ ತಲೆಮಾರುಗಳಲ್ಲಿಯೂ ಮುಂದುವರೆಯುತ್ತದೆ. (ಇ.ಎಫ್.ಕುಂಜ್ 1973). 1981 ರಲ್ಲಿ ಎಕ್ಸೈಲ್ ಅಯಿಂಡ್ ರಿಸೆಟಲ್‌ಮೆಂಟ್: ರೆಫ್ಯೂಜಿ ಥಿಯರಿ ಕೃತಿಯಲ್ಲಿ ತಮ್ಮ ಕೈನೆಟಿಕ್ ಮಾಡಲ್ ರೆಫ್ಯೂಜಿ ಸಿದ್ಧಾಂತವನ್ನು ಪರಿಷ್ಕರಿಸಿ ಬಹುಸಂಖ್ಯಾತ ಅಸ್ಮಿತೆಯ ನಿರಾಶ್ರಿತರು, ಪರಿಸ್ಥಿತಿ ನಿರಾಶ್ರಿತರು ಮತ್ತು ಸ್ವಯಂ ಪರಕೀಯ ನಿರಾಶ್ರಿತರು ಎಂದು ಮತ್ತೆ ಮೂರು ರೀತಿಯ ನಿರಾಶ್ರಿತರನ್ನು ಗುರುತಿಸುತ್ತಾನೆ. (ಇ.ಎಫ್.ಕುಂಜ್, 1981) ಇವರಲ್ಲಿ ಬಹುಸಂಖ್ಯಾತ ಅಸ್ಮಿತೆಯ ನಿರಾಶ್ರಿತರು ಮೂಲ ದೇಶದ ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶಗಳನ್ನು ವಿರೋಧಿಸುವವರಾಗಿರುತ್ತಾರೆ. ಇವರು ಇವರ ಧರ್ಮ, ಭಾಷೆ ಅಥವಾ ಜನಾಂಗ ಸಂಬಂಧದ ಕಾರಣಕ್ಕೆ ಸುಲಭವಾಗಿ ಪರದೇಶದಲ್ಲಿ ಆಶ್ರಯ ಪಡೆಯುತ್ತಾರೆ. ಇವರು ಸಮಾನ ಅಸ್ಮಿತೆಯ ಜನರೊಂದಿಗೆ ಬೆರೆಯುವುದರಿಂದ ಇವರ ಮೇಲಿನ ಆಘಾತಗಳು ಕಡಿಮೆ ಇರುತ್ತವೆ. ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ದೌರ್ಜನ್ಯಗಳು ಜರುಗಿದಾಗ ಆ ಸಮುದಾಯ ದೇಶ ತೊರೆಯುವದನ್ನು ಪರಿಸ್ಥಿತಿ ಆಧಾರಿತ ನಿರಾಶ್ರಿತರು ಎಂದು ಕರೆಯುವರು. ಇನ್ನು ತಮ್ಮ ವೈಯುಕ್ತಿಕ ಕಾರಣಗಳಿಗಾಗಿ ದೇಶ ತೊರೆಯುವ ನಿರಾಶ್ರಿತರಿಗೆ ಸ್ವಯಂ ಪರಕೀಯ ನಿರಾಶ್ರಿತರು ಎಂದು ಗುರುತಿಸಿದ್ದಾರೆ. ನಿರಾಶ್ರಿತರನ್ನು ಇನ್ನೊಂದು ಬಗೆಯಲ್ಲಿ ಹೊಸ ನಿರಾಶ್ರಿತರು ಮತ್ತು ಸಾಂಪ್ರದಾಯಿಕ ನಿರಾಶ್ರಿತರು ಎಂದು ವರ್ಗೀಕರಿಸಬಹುದು. (ಅನ್ನೆ ಪಾಲುಧಾನ್, 1981). ಇವರಲ್ಲಿ ಹೊಸ ನಿರಾಶ್ರಿತರು ಆತಿಥ್ಯ ವಹಿಸಿಕೊಂಡ ದೇಶದ ಭಾಷೆ, ಧರ್ಮ, ಜನಾಂಗ, ಪರಿಸರ, ಹವಮಾನ, ಜೀವನ ವಿಧಾನ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಇದರಿಂದಾಗಿ ಅವರ ಬದುಕು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹಲವರು ಆಘಾತಗಳಿಗೆ ಒಳಗಾಗುತ್ತದೆ. ಇನ್ನು ಸಾಂಪ್ರದಾಯಿಕ ನಿರಾಶ್ರಿತರು ತಮ್ಮ ಬಂಧುಗಳು, ಅಥವಾ ಭಾಷೆ, ಧರ್ಮ, ಜನಾಂಗ ಮೊದಲಾದ ಕಾರಣಗಳಿಂದ ಆಹ್ವಾನಿತರಾಗಿ ಪರದೇಶದಲ್ಲಿ ವಾಸಿಸುವುದರಿಂದ ಅವರ ಆಘಾತಗಳು ಕಡಿಮೆ ಇರುತ್ತವೆ.

ಅಂತರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಜಾಗತಿಕವಾಗಿ 7 ಬಗೆಯ ನಿರಾಶ್ರಿತರನ್ನು ಗುರುತಿಸಿದೆ.

**1. ನಿರಾಶ್ರಿತರು (Refugees) :** ಯುದ್ದದ ಭಯ, ರಾಷ್ಟ್ರೀಯತೆ, ಜನಾಂಗ, ರಾಜಕೀಯ ಸಂಬಂಧ, ಧರ್ಮ, ಬಡತನ, ಹವಾಮಾನದ ವೈಪರೀತ್ಯ, ಆಹಾರದ ಅಭದ್ರತೆ ಮೊದಲಾದ ಕಾರಣಗಳಿಂದ ಶಾಶ್ವತವಾಗಿ ತಮ್ಮ ಮನೆ ಅಥವಾ ನಿವಾಸದ ಸ್ಥಳದಿಂದ ಪಲಾಯನಗೈದು ರಾಷ್ಟ್ರೀಯ ಗಡಿಯನ್ನು ದಾಟಿ ಪರದೇಶದಲ್ಲಿ ಬದುಕುವವರನ್ನು ನಿರಾಶ್ರಿತರು ಎಂದು ಕರೆಯಬಹುದಾಗಿದೆ. ಪ್ರಸ್ತುತ 27.1 ಮಿಲಿಯನ್ ನಿರಾಶ್ರಿತರಿದ್ದು ಅವರಲ್ಲಿ ಅರ್ಧದಷ್ಟು 18 ವಯೋಮಿತಿಗಿಂತ ಕಡಿಮೆ ವಯೋಮಾನದವರಾಗಿದ್ದಾರೆ.

**2. ಆಶ್ರಯದ ನಿರೀಕ್ಷಕರು (Asylum Seekers) :** ಒಂದು ದೇಶದ ಸರ್ಕಾರದಿಂದ ಯಾವುದೇ ಅಧಿಕೃತವಾದ ಪರವಾನಗಿಯನ್ನು ಪಡೆಯದೆ ದೇಶವನ್ನು ಪ್ರವೇಶಿಸಿ ಆ ದೇಶದಲ್ಲಿ ಆಶ್ರಯದ ನಿರೀಕ್ಷೆಯಲ್ಲಿ ಬದುಕುವವರಾಗಿದ್ದು, ಇವರು ಕಷ್ಟದ ಬದುಕನ್ನು ಬದುಕುವರು ಇವರಿಗೆ ಬದುಕಲು ಅಗತ್ಯವಾದ ವಾಸಸ್ಥಳವೇ ಇಲ್ಲದೆ ಅಲೆಯುವರು. ಪ್ರಸ್ತುತ ಜಾಗತಿಕವಾಗಿ 6.08 ಮಿಲಿಯನ್ ಜನರು ಈ ಪ್ರಕಾರಕ್ಕೆ ಸೇರಿದವರಿದ್ದಾರೆ.

**3. ಆಂತರಿಕವಾಗಿ ಸ್ಥಳಾಂತರಗೊಂಡ ವ್ಯಕ್ತಿಗಳು (Internally Displaced Persons) :** ಯುದ್ದದ ಕಾರಣದಿಂದ ತಮ್ಮ ಕುಟುಂಬ ಮತ್ತು ಮನೆಯನ್ನು ಕಳೆದುಕೊಂಡ, ಆ ಸ್ಥಳದಲ್ಲಿ ಬದುಕುವುದು ಅಸಾಧ್ಯವೆಂದಾದಾಗ ಪರದೇಶದಲ್ಲಿ ವಾಸಿಸುವ ಜನರನ್ನು ಆಂತರಿಕವಾಗಿ ಸ್ಥಳಾಂತರಗೊಂಡ ವ್ಯಕ್ತಿಗಳು ಎಂದು ಕರೆಯುವರು. ಪ್ರಸ್ತುತ ಇವರ ಸಂಖ್ಯೆ 62.4 ಮಿಲಿಯನ್ ಇದೆ.

**4. ರಾಷ್ಟ್ರರಹಿತ ಪ್ರಜೆಗಳು (Stateless Persons) :** ಇವರು ಯಾವುದೇ ಒಂದು ರಾಷ್ಟ್ರದ ರಾಷ್ಟ್ರೀಯತೆಯನ್ನು ಹೊಂದಿರುವ ಕುರಿತು ಅಧಿಕೃತವಾಗಿ ದಾಖಲೆಗಳಿಲ್ಲದ ವ್ಯಕ್ತಿಗಳಾಗಿದ್ದು ಆರೋಗ್ಯ ಮತ್ತು ಶಿಕ್ಷಣದಂತಹ ಮೂಲಭೂತ ಸೌಕರ್ಯಗಳಿಂದಲೂ ವಂಚಿತರಾಗಿ ಬದುಕುವವರಾಗಿರುತ್ತಾರೆ. ಪ್ರಸ್ತುತ ಇವರ ಸಂಖ್ಯೆ 4.3 ಮಿಲಿಯನ್ ಇದೆ.

**5. ಧಾರ್ಮಿಕ ಅಥವಾ ರಾಜಕೀಯ ಗುಂಪಿನ ಸದಸ್ಯತ್ವ (Religious or Political Affiliation) :** ಒಂದು ನಿರ್ದಿಷ್ಟ ಧಾರ್ಮಿಕ ಅಥವಾ ರಾಜಕೀಯ ಗುಂಪಿನ ಸದಸ್ಯನಾಗಿರುವ ಕಾರಣಕ್ಕೆ ಬಲವಂತವಾಗಿ ದೇಶದಿಂದ ಹೊರದೂಡಲ್ಪಟ್ಟ ಮತ್ತು ಹೊರದೇಶದಲ್ಲಿ ಆಶ್ರಯದ ನಿರೀಕ್ಷೆಯಲ್ಲಿರುವವರಾಗಿದ್ದಾರೆ. ಪ್ರಸ್ತುತ ಇವರ ಸಂಖ್ಯೆ 25 ಮಿಲಿಯನ್ ಇದೆ.

**6. ಯುದ್ದದ ನಿರಾಶ್ರಿತರು (War Refugees) :** ಯುದ್ಧ ಪೀಡಿತ ಸನ್ನಿವೇಶದಿಂದ ಬೇಸತ್ತು, ಹೆದರಿ ಪರದೇಶಕ್ಕೆ ಪಲಾಯನ ಮಾಡಿ ಅಲ್ಲಿ ಆಶ್ರಯದ ನಿರೀಕ್ಷೆಯಲ್ಲಿರುವರಾಗಿರುತ್ತಾರೆ.

**7. ಹಸಿವಿನ ನಿರಾಶ್ರಿತರು (Hunger Refugees) :** ಅನಿರೀಕ್ಷಿತವಾಗಿ ಬದಲಾಗುತ್ತಿರುವ ಹವಮಾನ ಪರಿಸ್ಥಿತಿಯಿಂದ ಆಹಾರದ ಕೊರತೆಯನ್ನು ಅನುಭವಿಸಿ, ಆಹಾರವನ್ನು ಹುಡುಕುತ್ತ ತಮ್ಮ ಮನೆಯನ್ನು ತೊರೆದು ಬೇರೆ ದೇಶ ಸೇರುವ ಜನವರ್ಗ ಇದಾಗಿದೆ.

### ಭಾರತದಲ್ಲಿನ ನಿರಾಶ್ರಿತ ಸಮುದಾಯಗಳ ಪರಿಚಯ

ಏಷ್ಯಾ ಖಂಡದಲ್ಲಿಯೇ ಅತಿ ಹೆಚ್ಚು ನಿರಾಶ್ರಿತರು ಭಾರತದಲ್ಲಿ ವಾಸವಾಗಿದ್ದಾರೆ. ಭಾರತವು ಏಷ್ಯಾ ಖಂಡದ ದೇಶಗಳಲ್ಲಿ ನಿರಾಶ್ರಿತರ ಪಾಲಿನ ಸ್ವರ್ಗವೆಂದು ಬಿಂಬಿತವಾಗಿದೆ. ಭಾರತಕ್ಕೆ ನಿರಾಶ್ರಿತರ ಕುರಿತು ಒಂದು ಸ್ಪಷ್ಟ ಯೋಜನಾಬದ್ಧ ಅಥವಾ ದೂರಗಾಮಿ ಚಿಂತನೆಯ ಕೊರತೆ ಇದೆ (ಅನುಪ್ರೊವಾ ಘೋಷ್ 2021). ಇದು ಒಂದೊಂದು ನಿರಾಶ್ರಿತ ಸಮುದಾಯದ ಪುನರ್ವಸತಿಗೆ ಒಂದೊಂದು ರೀತಿಯ ಕಾರ್ಯತಂತ್ರವನ್ನು ಅನುಸರಿಸುತ್ತ ಬಂದಿದೆ. ಅದು ಟಿಬೇಟಿಯನ್ ನಿರಾಶ್ರಿತರು ಮತ್ತು ಶ್ರೀಲಂಕಾ, ಬರ್ಮಾ ವಾಪಸಾತಿಗರ ಪುನರ್ವಸತಿಯಲ್ಲಿ ವಹಿಸುತ್ತಿರುವ ಕಾಳಜಿಯನ್ನು ಇತರ ನಿರಾಶ್ರಿತರ ವಿಷಯದಲ್ಲಿ ತೋರುತ್ತಿಲ್ಲ. ಬಾಂಗ್ಲಾದೇಶದ ನಿರಾಶ್ರಿತರ ಪುನರ್ವಸತಿಯಲ್ಲಿ ಸರ್ಕಾರಕ್ಕೆ ಸ್ಪಷ್ಟ ನಿಲುವು ಇಲ್ಲದೆ ಇರುವುದು ಗಮನಾರ್ಹವಾದ ಸಂಗತಿಯಾಗಿದೆ.

ಭಾರತದಲ್ಲಿ ಅಧಿಕೃತವಾಗಿ 4.88 ಮಿಲಿಯನ್ ನಿರಾಶ್ರಿತರು ಆಶ್ರಿತರಾಗಿದ್ದಾರೆ. ಇವರಲ್ಲಿ ಬಹುಪಾಲು ಭಾರತದ ನೆರೆಹೊರೆಯ ದೇಶಗಳಿಂದ ಭಾರತವನ್ನು ಪ್ರವೇಶಿಸಿದ ನಿರಾಶ್ರಿತರಿದ್ದಾರೆ. ಅವರಲ್ಲಿ ಶೇ.51 ರಷ್ಟು ಬಾಂಗ್ಲಾದೇಶ, ಶೇ.17 ರಷ್ಟು ಪಾಕಿಸ್ತಾನ, ಶೇ.15% ರಷ್ಟು ನೇಪಾಳ, ಶೇ.3.8 ರಷ್ಟು ಶ್ರೀಲಂಕಾ ಮತ್ತು ಶೇ.2.2 ರಷ್ಟು ಚೀನಾ ದೇಶಕ್ಕೆ ಸೇರಿದವರಾಗಿದ್ದಾರೆ. ಈ ಸಂಖ್ಯೆಯು ಅಕ್ರಮ ವಲಸಿಗರನ್ನು ನಿರಾಶ್ರಿತರ ಸ್ಥಾನಮಾನದ ನಿರೀಕ್ಷೆಯಲ್ಲಿರುವವರನ್ನು ಒಳಗೊಂಡಿಲ್ಲ ಇವರೆಲ್ಲರನ್ನು ಸೇರಿಸಿದರೆ ನಿರಾಶ್ರಿತರ ಸಂಖ್ಯೆ 10 ಮಿಲಿಯನ್ ದಾಟುತ್ತದೆ. ಹೀಗಾಗಿ ಭಾರತವು ಏಷ್ಯಾ ಖಂಡದ ರಾಷ್ಟ್ರಗಳಲ್ಲಿಯೇ ಅತಿ ಹೆಚ್ಚಿನ ನಿರಾಶ್ರಿತರನ್ನು ಹೊಂದಿದ ದೇಶವಾಗಿದೆ.

ವಸಾಹತುಶಾಯಿ ಆಡಳಿತವು ರಾಜಕೀಯ ಆಡಳಿತದ ಅನುಕೂಲಕ್ಕಾಗಿ ದೇಶಗಳಿಗೆ ರಾಜಕೀಯ ಗಡಿಯನ್ನು ನಿಗದಿಪಡಿಸಿತು. ಅದು ಜನಾಂಗೀಯ ಮತ್ತು ಭಾಷಿಕ ಗಡಿಗಳನ್ನು ಗಮನಿಸಲಿಲ್ಲ. ವಸಾಹತು ಆಡಳಿತವು ಅಂತ್ಯಗೊಂಡ ನಂತರವೂ ಅವರು ಗುರುತಿಸಿದ ರಾಜಕೀಯ ಗಡಿಗಳನ್ನು ದೇಶದ ಗಡಿಗಳೆಂದು ಹೊಸದಾಗಿ ಉಗಮಗೊಂಡ ರಾಷ್ಟ್ರಗಳಲ್ಲಿ ಘೋಷಿಸಲಾಯಿತು. ಇದು ಆ ರಾಷ್ಟ್ರಗಳಲ್ಲಿ ರಾಜಕೀಯ, ಜನಾಂಗೀಯ, ಮತ್ತು ಧಾರ್ಮಿಕ ಸಂಘರ್ಷಗಳಿಗೆ ಕಾರಣವಾಗಿ ನಿರಾಶ್ರಿತರ ಸಮಸ್ಯೆಯ ಹುಟ್ಟಿಗೆ ಕಾರಣವಾಯಿತು (ಎಸ್.ಡಿ.ಮುನಿ ಮತ್ತು ಲೋಕರಾಜ್ ಬರಾಲ್, 1996). ನೈಸರ್ಗಿಕ ವಿಪತ್ತುಗಳು ಅಥವಾ ಅಭಿವೃದ್ಧಿ ಯೋಜನೆಗಳಿಂದ ಬಲವಂತವಾಗಿ ಆಂತರಿಕವಾಗಿ ಸ್ಥಳಾಂತರಕ್ಕೆ ಪ್ರೇರೇಪಿಸುತ್ತವೆ (ಸವ್ಯಸಾಚಿ ಬಸು ರೇ ಚೌಧರಿ, 2005). ಈ ಮೊದಲಾದ ಕಾರಣಗಳಿಂದ ಈ ಕೆಳಗಿನ ನಿರಾಶ್ರಿತ ಸಮುದಾಯಗಳು ಭಾರತ ಪ್ರವೇಶಿಸಿದ ಪ್ರಮುಖ ನಿರಾಶ್ರಿತ ಸಮುದಾಯಗಳು ಪ್ರಮುಖವಾಗಿವೆ.

- ಭಾರತ ವಿಭಜನೆಯಿಂದಾಗಿ ಭಾರತಕ್ಕೆ ಬಂದ ನಿರಾಶ್ರಿತರು.–1947
- ಚಿತ್ತಗಾಂಗ ಪರ್ವತ ಪ್ರದೇಶ ಬಾಂಗ್ಲಾದೇಶಕ್ಕೆ ಹಂಚಿಕೆಯಾದ್ದರಿಂದ ಅಲ್ಲಿದ್ದ ಶೇ.97 ರಷ್ಟು ಬೌದ್ಧ ಬುಡಕಟ್ಟುಗಳಿಗೆ ಅರುಣಾಚಲ ಪ್ರದೇಶದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ.–1948
- ಟಿಬೇಟಿಯನ್ ನಿರಾಶ್ರಿತರು–1959
- ಚಕ್ಮಾ ಮತ್ತು ಹೋಜಾಂಗ ನಿರಾಶ್ರಿತರು–1960
- ಬಾಂಗ್ಲಾದೇಶದ ವಿಮೋಚನಾ ಯುದ್ಧ ಕಾಲದ ಜನಾಂಗೀಯ ಸಂಘರ್ಷದ ಬಾಂಗ್ಲಾ ದೇಶದ ನಿರಾಶ್ರಿತರು–1969–1971
- ಶ್ರೀಲಂಕಾ ಮತ್ತು ಬರ್ಮಾ ತಮಿಳು ವಾಪಸಾತಿಗರು–1980
- ಮಯನ್ಮಾರನ ರೋಹಿಂಗ್ಯಾ ನಿರಾಶ್ರಿತರು–2017

### ಭಾರತದಲ್ಲಿ ಸಂವಿಧಾನಾತ್ಮಕವಾಗಿ ನಿರಾಶ್ರಿತರ ಸ್ಥಾನಮಾನ

ಭಾರತ ಸಂವಿಧಾನದ 14, 21 ನೇ ವಿಧಿಗಳು ಭಾರತೀಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಾಗರಿಕರು ಮತ್ತು ನಿರಾಶ್ರಿತರಿಗೆ ಸಮಾನವಾಗಿ ಅನ್ವಯಿಸುತ್ತವೆ. 22, 25–28, 32 ಮತ್ತು 226ನೇ ವಿಧಿಗಳು ನಿರಾಶ್ರಿತರಿಗೆ ಕೆಲವು ಹಕ್ಕುಗಳ ಖಾತ್ರಿಯನ್ನು ನೀಡಿವೆ. ಆದರೆ ಈ ಹಕ್ಕುಗಳ ಜಾರಿಯ ವಿಚಾರದಲ್ಲಿ ಪೌರರು ಮತ್ತು ನಿರಾಶ್ರಿತರ ನಡುವೆ ಸಹಜವಾಗಿ ತಾರತಮ್ಯಗಳು ಕಂಡುಬರುತ್ತವೆ. ಅಂದರೆ ನಿರಾಶ್ರಿತರು ಮಾನವೀಯ ನೆಲೆಯಲ್ಲಿ ಹಕ್ಕುಗಳಿಗೆ ಅರ್ಹರಾಗಿರುವಷ್ಟು, ಶಾಸನೀಯ ಅಥವಾ ಕಾನೂನಿನ ನೆಲೆಯಲ್ಲಿ ಅರ್ಹರಾಗಿಲ್ಲ. 51 ನೇ ವಿಧಿಯ ಅಡಿ ಬರುವ ಅಂತರಾಷ್ಟ್ರೀಯ ಶಾಂತಿಯ ಮತ್ತು ಸಹಕಾರದ ತತ್ವವು ನಿರಾಶ್ರಿತರ ಸಮಸ್ಯೆಯೊಂದಿಗೆ ತಳುಕು ಹಾಕಿಕೊಂಡಿದೆ. 253 ನೇ ವಿಧಿಗೆ ಅನುಗುಣವಾಗಿ ರಾಷ್ಟ್ರೀಯ ನಿರಾಶ್ರಿತರ ಕಾಯ್ದೆಯನ್ನು ರೂಪಿಸುವ ಅಧಿಕಾರ ಭಾರತದ ಸಂಸತ್ತಿಗಿದೆ. ಈ ಎಲ್ಲಾ ಅಂಶಗಳು ಭಾರತಕ್ಕೆ ಪರೋಕ್ಷವಾಗಿ ನಿರಾಶ್ರಿತರ ನಿರ್ವಹಣೆ ಅಗತ್ಯತೆಯನ್ನು, ಅನಿವಾರ್ಯತೆಯನ್ನು ಮತ್ತು ಅವಕಾಶಗಳನ್ನು ಸೃಷ್ಟಿಸಿವೆ. ಭಾರತದಲ್ಲಿ ನಿರಾಶ್ರಿತರ ಸ್ಥಾನಮಾನವನ್ನು ಪಡೆದವರು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು, ಖಾಸಗಿ ಉದ್ಯೋಗಕ್ಕೆ ಸೇರಲು, ಶಾಂತಿಯುತವಾಗಿ ಸಭೆ ಸೇರಲು , ತಮ್ಮ ಧಾರ್ಮಿಕ ನಂಬಿಕೆಗಳನ್ನು ಅನುಸರಿಸಲು, ಸ್ವ ಉದ್ಯೋಗವನ್ನು ಕೈಗೊಳ್ಳಲು, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸಲು ಕೆಲವು ಮಿತಿಗಳಿಗೆ ಒಳಪಟ್ಟು ಅವಕಾಶವನ್ನು ಹೊಂದಿದ್ದಾರೆ.

## ಭಾರತದಲ್ಲಿ ಶಾಸನಾತ್ಮಕವಾಗಿ ನಿರಾಶ್ರಿತರ ಸ್ಥಾನಮಾನ

ಯು.ಎನ್.ಹೆಚ್.ಸಿ.ಆರ್ ಯುರೋಪ್ ಕೇಂದ್ರಿತವಾಗಿದ್ದರೂ ಯುರೋಪಿಯನ್ ಒಕ್ಕೂಟ ನಿರಾಶ್ರಿತರ ನಿರ್ವಹಣೆಯಲ್ಲಿ ಅದು ವಿಫಲವಾಗಿದೆ. ಅಂತರರಾಷ್ಟ್ರೀಯ ಸಮುದಾಯದ ಪೂರ್ಣ ಬೆಂಬಲವಿಲ್ಲದೆ, ನಿರಾಶ್ರಿತರ ನಿರ್ವಹಣೆಯ ಭಾರತದ ವಿಧಾನವು ಜಗತ್ತಿನ ಇತರ ದೇಶಗಳಿಗೆ ಮಾದರಿಯಾಗಿದೆ. ಜಾಗತಿಕವಾಗಿ 137 ದೇಶಗಳು ಒಪ್ಪಿಕೊಂಡಿರುವ ಯು.ಎನ್.ಹೆಚ್.ಸಿ.ಆರ್‌ನ 1951 ಒಡಂಬಡಿಕೆ ಮತ್ತು 1967 ರ ಶಿಷ್ಟಾಚಾರಗಳನ್ನು ಭಾರತವು ಅಂಗೀಕರಿಸಿಲ್ಲ. ಏಕೆಂದರೆ ಇವು ಮೂಲತಃ ಯೂರೋಪ್ ಕೇಂದ್ರಿತ ಅಂಶಗಳನ್ನು ಒಳಗೊಂಡಿವೆ, ಇದರ ಕರಡನ್ನು ಭಾರತದ ಪ್ರಾತಿನಿಧಿತ್ವವಿಲ್ಲದೆ ಸಿದ್ಧಪಡಿಸಲಾಗಿದೆ, ದಕ್ಷಿಣ ಏಷ್ಯಾದ ಯಾವ ರಾಷ್ಟ್ರಗಳು ಈ ಒಪ್ಪಂದವನ್ನು ಅಂಗೀಕರಿಸಿ ಒಪ್ಪಿಕೊಂಡಿರುವುದಿಲ್ಲ, ಈ ಒಡಂಬಡಿಕೆಗಳು ಬಹಳ ಹಳೆಯವುಗಳಾಗಿದ್ದು ಸಮಕಾಲಿನ ಸಮಸ್ಯೆಗಳಿಗೆ ಪರಿಹಾರ ನೀಡುವ ದಿಸೆಯಲ್ಲಿ ಅಗತ್ಯ ತಿದ್ದುಪಡಿಗೆ ಒಳಗಾಗದೆ ಇರುವುದರಿಂದ ಅವು ಪ್ರಸ್ತುತತೆಯನ್ನು ಕಳೆದುಕೊಂಡಿವೆ, ಕೇವಲ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳ ಖಾತ್ರಿ ನೀಡುತ್ತವೆ ವಿನಃ ಆರ್ಥಿಕ ಹಕ್ಕುಗಳ ಖಾತ್ರಿ ನೀಡುವುದಿಲ್ಲ ಇವೆ ಮೊದಲಾದ ಕಾರಣಗಳನ್ನು ಮುಂದಿಟ್ಟು ಜಾಗತಿಕಮಟ್ಟದ ತೀವ್ರ ಒತ್ತಡದ ನಡುವೆಯು ಯು.ಎನ್.ಹೆಚ್.ಸಿ.ಆರ್‌ನ ಸದಸ್ಯೇತರ ರಾಷ್ಟ್ರವಾಗಿ ಮುಂದುವರೆದಿದೆ. ಅಭಿವೃದ್ಧಿಶೀಲ ರಾಷ್ಟ್ರವಾಗಿ ಭಾರತವು ಅಂತರಾಷ್ಟ್ರೀಯ ಮಟ್ಟದಲ್ಲಿ ತಾನು ನಿರ್ವಹಿಸಬೇಕಾದ ಪಾತ್ರದ ಕುರಿತು ಸದಾ ಎಚ್ಚರಿಕೆಯ ಹೆಜ್ಜೆಯನ್ನು ಇಡುತ್ತಾ ಬಂದಿದೆ. ಭಾರತವು ನಿರಾಶ್ರಿತರ ನಿರ್ವಹಣೆಗೆ ಸಂಬಂಧಿಸಿದಂತೆ ಪುರಾತನ ಹಿನ್ನಲೆಯನ್ನು ಹೊಂದಿದಾಗ್ಯೂ ನಿರಾಶ್ರಿತರ ಕುರಿತು ಒಂದು ರಾಷ್ಟ್ರೀಯ ಕಾಯ್ದೆಯನ್ನು ಹೊಂದಿಲ್ಲ. 2015 ರಲ್ಲಿ ಸಂಸತ್ತಿನ ಸದಸ್ಯರಾದ ಡಾ. ಶಶಿ ತರೂರ ಅವರು ಮಂಡಿಸಿದ ಆಶ್ರಯ ಮಸೂದೆ (2015), ಫಿರೋಜ್ ವರುಣ್ ಗಾಂಧಿ ಅವರು ಮಂಡಿಸಿದ ರಾಷ್ಟ್ರೀಯ ಆಶ್ರಯ ಮಸೂದೆ (2015) ಮತ್ತು ರವೀಂದ್ರಕುಮಾರ ಜೆನಾ ಅವರು ಮಂಡಿಸಿದ ನಿರಾಶ್ರಿತರು ಮತ್ತು ಆಶ್ರಯ ಪಡೆಯುವವರ ರಕ್ಷಣೆ ಮಸೂದೆ (2015) ಗಳು ನಿರಾಶ್ರಿತರಿಗೆ ಶಾಸನಾತ್ಮಕ ರಕ್ಷಣೆಯ ಖಾತ್ರಿ ನೀಡುವ, ಪೌರತ್ವನೀಡುವ, ಸಹಜೀಕರಣಕ್ಕೆ ಒಳಪಡಿಸುವ ಅಂಶಗಳನ್ನು ಒಳಗೊಂಡಿದ್ದವು ಆದರೆ ಈ ಮಸೂದೆಗಳನ್ನು ಸಂಸತ್ತು ತಿರಸ್ಕರಿಸಿದ್ದರಿಂದ ಇವು ಶಾಸನವಾಗುವಲ್ಲಿ ಸೋತವು. ಇದು ನಿರಾಶ್ರಿತರ ಕುರಿತ ಗೊಂದಲ ಮುಂದುವರೆಯಲು ಅವಕಾಶ ನೀಡಿತು.

ದೇಶಿ ಕಾಯ್ದೆಯ ಗೈರು ಹಾಜರಿಯಲ್ಲಿಯೂ ತನ್ನ ಗಡಿಯ ವ್ಯಾಪ್ತಿಯಲ್ಲಿ ಯಾವುದೇ ನಿರಾಶ್ರಿತ ಪ್ರಜೆಯು ಕಂಡು ಬಂದಲ್ಲಿ ಕೂಡಲೇ ಸಂಬಂಧಿತ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವು ಕೇಂದ್ರ ಗೃಹ ಮಂತ್ರಾಲಯಕ್ಕೆ ಸದರಿ ನಿರಾಶ್ರಿತರಿಗೆ ದೀರ್ಘಾವಧಿ ವೀಸಾ ಮಂಜೂರಾತಿಗೆ ಶಿಫಾರಸ್ಸು ಸಲ್ಲಿಸಬೇಕು. ಆಗ ಗೃಹ ಮಂತ್ರಾಲಯವು ವಿದೇಶಿಗರ ಪ್ರಮಾಣಿತ ಕಾರ್ಯಾಚರಣೆ ಕಾರ್ಯವಿಧಾನ, 2011 ರ ಪ್ರಕಾರ ತನಿಖೆಯನ್ನು ನಡೆಸಿ ಯು.ಎನ್.ಹೆಚ್.ಸಿ.ಆರ್‌ನೊಂದಿಗೆ ಸಮಾಲೋಚಿಸಿ, ಅದರ ಶಿಫಾರಸ್ಸಿನ ಮೇರೆಗೆ ಅವರಿಗೆ ದೀರ್ಘಾವಧಿ ವೀಸಾವನ್ನು ಮಂಜೂರು ಮಾಡುತ್ತದೆ. ಆ ಮೂಲಕ ಅವರಿಗೆ ಭಾರತದಲ್ಲಿ ತಾತ್ಕಾಲಿಕವಾಗಿ ವಾಸಿಸಲು ಅನುಮತಿ ನೀಡುತ್ತದೆ. ಭಾರತವು ಈ ಕೆಳಗಿನ ಕಾಯ್ದೆಗಳ ಮೂಲಕ ನಿರಾಶ್ರಿತರ ಸಮಸ್ಯೆಗೆ ಸ್ಪಂಧಿಸುತ್ತ ಬಂದಿದೆ.

1. ಭಾರತೀಯ ದಂಡ ಸಂಹಿತೆ ಕಾಯ್ದೆ, 1860
2. ಪಾಸ್‌ಪೋರ್ಟ್ (ಭಾರತ ಪ್ರವೇಶ) ಕಾಯ್ದೆ, 1920.
3. ವಿದೇಶಿಗರ ನೋಂದಣಿ ಕಾಯ್ದೆ, 1939.
4. ವಿದೇಶಿಗರ ಕಾಯ್ದೆ, 1946.
5. ವಿದೇಶಿಗರ ಆದೇಶ, 1948.
6. ಪಾಸ್‌ಪೋರ್ಟ್ ಕಾಯ್ದೆ, 1967.
7. ಅಕ್ರಮ ವಲಸಿಗ (ನ್ಯಾಯಮಂಡಳಿಗಳ ನಿರ್ಣಯ) ಕಾಯ್ದೆ, 1983.
8. ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ, 1993.

ಈ ಯಾವ ಕಾಯ್ದೆಗಳೂ ನಿರಾಶ್ರಿತರು ಮತ್ತು ವಿದೇಶಿಗರ ನಡುವೆ ಯಾವುದೇ ವ್ಯತ್ಯಾಸವನ್ನು ತೋರಿಸುವುದಿಲ್ಲ. ಈ ಅಂಶವು ನಿರಾಶ್ರಿತರನ್ನು ಬಹುಪಾಲು ಸಂದರ್ಭದಲ್ಲಿ ಕಷ್ಟಕ್ಕೆ ದೂಡುತ್ತದೆ. ಮತ್ತು ಈ ಕಾಯ್ದೆಗಳು ಕೆಲವು ಬಾರಿ ನಿರಾಶ್ರಿತರಿಗೆ ರಕ್ಷಣೆಯನ್ನು ನೀಡುವಲ್ಲಿ ಸೋಲುತ್ತವೆ.

## ಜಾಗತಿಕ ನಿರಾಶ್ರಿತರ ಸಮಸ್ಯೆಗೆ ಭಾರತದ ಸ್ಪಂದನೆ

ಭಾರತವು ನಿರಾಶ್ರಿತರ ಕುರಿತ ಯಾವುದೇ ಜಾಗತಿಕ ಒಡಂಬಡಿಕೆ ಅಥವಾ ಘೋಷಣೆಯ ಭಾಗಿದಾರನಾಗಿರದೆ ಇರುವುದರಿಂದ ಈ ಮೇಲಿನ ಯಾವ ವ್ಯಾಖ್ಯಾನಗಳು ಭಾರತಕ್ಕೆ ಬಂಧನಕಾರಿಯಾಗಿಲ್ಲ. ಆದರೂ 1948 ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆ, ಅಂತರ ರಾಷ್ಟ್ರೀಯ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಒಪ್ಪಂದ (ICCPR), ಅಂತರ ರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಒಪ್ಪಂದ–1976 (ICESCR), ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಪ್ಪಂದ –1989 ಅಂತಾರಾಷ್ಟ್ರಿಯ ಮಹಿಳೆಯರ ಎಲ್ಲಾ ಮೇಲಿನ ತಾರತಮ್ಯಗಳ ವಿರುದ್ದದ ಒಪ್ಪಂದಗಳನ್ನು ಅಂಗೀಕರಿಸಿದೆ. ಮುಂದುವರೆದು 1995 ರಲ್ಲಿ ಯು.ಎನ್.ಹೆಚ್.ಸಿ.ಆರ್‌ನ ಕಾರ್ಯಕಾರಿ ಸಮಿತಿಯ ಸದಸ್ಯತ್ವವನ್ನು ಪಡೆದಿದೆ. ಈ ಮೂಲಕ ನಿರಾಶ್ರಿತರ ಬದುಕು ಹಸನಾಗಿಸುವಲ್ಲಿ ಕೈಜೋಡಿಸುತ್ತಿದೆ.

## ಉಪಸಂಹಾರ

ಭಾರತವು ಒಂದು ಅಭಿವೃದ್ಧಿಶೀಲ ದೇಶವಾಗಿ ನಿರಾಶ್ರಿತರ ನಿರ್ವಹಣೆಯಲ್ಲಿ ಸದಾ ಎಚ್ಚರಿಕೆಯ ಹೆಜ್ಜೆಯನ್ನು ಇಡುತ್ತಲೇ ಬಂದಿದೆ. ಸ್ವಾತಂತ್ರ್ಯದ ನಂತರ ದೇಶವಿಭಜನೆಯಿಂದ ಉಂಟಾದ ನಿರಾಶ್ರಿತರ ಪುನರ್ವಸತಿಯು ಜಾಗತಿಕ ಮಟ್ಟದಲ್ಲಿ ಅತಿದೊಡ್ಡ ಪುನರ್ವಸತಿ ಯೋಜನೆಯಾಗಿದೆ. ಒಂದು ಸ್ಪಷ್ಟ ರಾಷ್ಟ್ರೀಯ ನಿರಾಶ್ರಿತರ ನೀತಿಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅನುಪಸ್ಥಿತಿಯಲ್ಲಿಯೂ 10 ಮಿಲಿಯನ್‌ಗಿಂತ ಹೆಚ್ಚು ನಿರಾಶ್ರಿತರನ್ನು ಭಾರತವು ನಿರ್ವಹಿಸುತ್ತಿದೆ. ಬಾಂಗ್ಲಾದೇಶದ ನಿರಾಶ್ರಿತರು ಮತ್ತು ರೋಹಿಂಗ್ಯಾ ನಿರಾಶ್ರಿತರ ಕುರಿತು ಭಾರತ ಸರ್ಕಾರಕ್ಕೆ ಒಂದು ಸ್ಪಷ್ಟ ನಿಲುವು ಇಲ್ಲದೇ ಇರುವುದು ಆ ಸಮುದಾಯಗಳ ಬದುಕನ್ನು ಅನಿಶ್ಚಿತತೆಗೆ ದೂಡಿದೆ. ಭಾರತದ ನೆರೆಯ ರಾಷ್ಟ್ರಗಳೆಲ್ಲವೂ ಯು.ಎನ್.ಹೆಚ್.ಸಿ.ಆರ್ ನ ನಿರಾಶ್ರಿತರ ನೀತಿಯಿಂದ ಅಂತರ ಕಾಯ್ದುಕೊಂಡಿರುವುದರಿಂದ ಭಾರತವು ಈ ಒಡಂಬಡಿಕೆಯ ಭಾಗವಾಗಲು ಅಡ್ಡಿಯಾಗಿದೆ. ಆದರೆ ಸಾರ್ಕ್ (SAARC) ಸದಸ್ಯ ರಾಷ್ಟ್ರಗಳು ಒಂದು ನಿರಾಶ್ರಿತರ ನೀತಿಯನ್ನು ರೂಪಿಸಿಕೊಳ್ಳುವ ಜರೂರು ಇದೆ. ಭಾರತವು ಅಗಾಧವಾದ ಸಂಖ್ಯೆಯ ನಿರಾಶ್ರಿತರನ್ನು ನಿರ್ವಹಿಸುತ್ತಿದೆ. ಆದರೆ ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆಗಳು ನಿರಾಶ್ರಿತರನ್ನು ವಿದೇಶಿಗರ ಪರಿಭಾಷೆಯಲ್ಲಿ ಅರ್ಥೈಸುತ್ತಿವೆ. ಇದು ನಿರಾಶ್ರಿತರ ಪುನರ್ವಸತಿಗೆ ಅಡ್ಡಿಯಾಗಿದೆ. ಪೌರತ್ವ ತಿದ್ದುಪಡಿ ಕಾಯ್ದೆ–2019 ಭಾಗಶಃ ನಿರಾಶ್ರಿತರ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲದಾದರೂ ಮುಸ್ಲಿಂ ಸಮುದಾಯಕ್ಕೆ ಸೇರಿದ ನಿರಾಶ್ರಿತರ ಬದುಕನ್ನು ಮತ್ತಷ್ಟು ಅನಿಶ್ಚಿತತೆಗೆ ದೂಡುವ ಸಾಧ್ಯತೆಗಳು ಹೆಚ್ಚಾಗಿವೆ. ಆದ್ದರಿಂದ ಭಾರತವು ನೆರೆಯ ರಾಷ್ಟ್ರಗಳನ್ನು ವಿಶ್ವಾಸಕ್ಕೆ ತೆಗೆಕೊಂಡು ಒಂದು ರಾಷ್ಟ್ರೀಯ ನಿರಾಶ್ರಿತರ ನೀತಿಯನ್ನು ರೂಪಿಸಿಕೊಳ್ಳುವ ಜರೂರಿದೆ.

## ಪರಾಮರ್ಶನ ಗ್ರಂಥಗಳು


- **ಜಾನ್ ಆರ್. ರೋಗ್ (1979) :** ರೆಫ್ಯೂಜಿಸ್ : ಎ ಥರ್ಡವರ್ಲ್ಡ್ ಡೆಲೆಮ್ಮಾ.ರಾವ್ಮೆನ್ ಆ್ಯಂಡ್ ಲಿಟ್ಲ್‌ಫಿಲ್ಡ ಪುಬ್‌ಇಂಕ್ ಪ್ರಕಾಶನ.
- **ಮುನಿ ಎಸ್.ಡಿ. ಮತ್ತು ಲೋಕರಾಜ್ ಬರಾಲ್ (1996) :** ರೆಫ್ಯೂಜಿಸ್ ಆ್ಯಂಡ್ ರಿಜನಲ್ ಸೆಕ್ಯೂರಿಟಿ ಇನ್ ಸೌಥ್ ಏಷಿಯಾ. ನವ ದೇಹಲಿ. ಕೋನಾರ್ಕ ಪ್ರಕಾಶನ.
- **ಯು.ಎನ್.ಹೆಚ್.ಸಿ.ಆರ್. ಕನ್ವೇನ್ಶನ್ ಆನ್ ರೇಫ್ಯೂಜಿಸ್– 1951 (1951):** ಜಿನೇವಾ.ಯು.ಎನ್.ಹೆಚ್.ಸಿ.ಆರ್.
- **ರಿಜ್ವಾನ್ ಶಾಮ್ಸದ್ (2017) :** ಬಾಂಗ್ಲಾದೇಶಿ ಮೈಗ್ರಂಟ್ಸ್ ಇನ್ ಇಂಡಿಯಾ: ಫಾರೆನೆರ್ಸ್, ರೆಫ್ಯೂಜಿಸ್ ಆರ್ ಇನ್ಫಿಲ್ರೇಟರ್ಸ್. ಆಕ್ಸಫರ್ಡ್ ಯುನಿವರ್ಸಿಟಿ ಪ್ರೆಸ್.
- **ಸವ್ಯಸಾಚಿ ಬಸುರಾಯ್ ಚೌದರಿ (2022) :** ಗೌವ್ಹರ್ನನ್ಸ ಆಫ್ ಮೈಗ್ರೇಶನ್ ಇನ್ ಸೌತ್ ಏಷಿಯಾ : ದಿ ನೀಡ್ ಫಾರ್ ದಿ ಡಿ ಕಲೋನಿಯಲ್. ಅಪ್ರೋಚ್ ತಾಮರ್ ಮೇಯರ್ ಮತ್ತು ತ್ರಿಯಾನ್ ತ್ರಾನ್ (ಸಂ) ಡಿಸ್ಪ್ಲೇಸ್ಮೆಂಟ್. ಬಿಲೊಂಗಿಂಗ್ ಆ್ಯಂಡ್ ಮೈಗ್ರೆಂಟ್ ಎಜೆನ್ಸಿ ಇನ್ ದ ಫೇಸ್ ಆಫ್ ಪವರ್. ಲಂಡನ್.ರಾಟಲ್ಡ್ವೇಜ್ ಪ್ರಕಾಶನ.
- **ಅಬ್ದುಲ್ ಹಸ್ಸನ್ ಮಿಲ್ಟನ್, ಮಿಜಾನೂರ್ ರೇಹಮಾನ್(ಸಂ)(2017):** ಟ್ರ್ಯಾಪ್ಡ್ ಇನ್ ಸ್ಟೇಟ್ಲೆಸ್ನೆಸ್ : ರೋಹಿಂಗ್ಯಾ ರೆಫ್ಯೂಜಿಸ್ ಇನ್ ಬಾಂಗ್ಲಾದೇಶ್. ಇಂಟೆರನ್ಯಾಷನಲ್ ಜರ್ನಲ್ ಆಫ್ ಎನ್ವಿರಾನ್ಮೆಂಟ್ ರಿಸರ್ಚ್ ಆಯಿಂಡ್ ಪಬ್ಲಿಕ್ ಹೆಲ್ತ
- **ಕುಂಜ್.ಇ.ಎಫ್. (1973) :** ದಿ ರೆಫ್ಯೂಜಿ ಇನ್ ದ ಫ್ಲೈಟ್: ಕೈನೆಟಿಕ್ ಮೋಡೆಲ್ ಆ್ಯಂಡ್ ಫಾರ್ಮ ಆಫ್ ಡಿಸ್ಲೆಸ್ಮೆಂಟ್. ದಿ ಇಂಟರ್‌ನ್ಯಾಷನಲ್ ಮೈಗ್ರೇಶನ್ ರಿವ್ಹಿವ್. ಸೇಜ್ ಪಬಿಕೇಶನ್, ಇಂಕ್. ಪು. 125–146
- **ಕುಂಜ್.ಇ.ಎಫ್.(1981) :** ಎಕ್ಸೈಲ್ ಆ್ಯಂಡ್ ರೆಸೆಟಲ್ಮೆಂಟ್: ರೆಫ್ಯೂಜಿ ಥಿಯರಿ. ದಿ ಇಂಟರ್ ನ್ಯಾಷನಲ್ ಮೈಗ್ರೇಶನ್ ರಿವ್ಹಿವ್. ಸೇಜ್ ಪಬಿಕೇಶನ್, ಇಂಕ್. ವಾಲ್ಯೂಂ 15 ಪು. 42–51
- **ಡಾ. ಪ್ರಿಯಾದತ್ತಾ.(2022) :** ಇಶ್ಯೂಸ್ ಆಫ್ ಮೈಗ್ರೇಶನ್ ಆ್ಯಂಡ್ ರೆಫ್ಯೂಜಿಸ್ ಬಿಟವಿನ್ ಇಂಡಿಯಾ ಆಯಿಂಡ್ ಬಾಂಗ್ಲಾದೇಶ್: ದ ಪ್ರಾಬ್ಲೆಮ್, ಇಟ್ಸ ಮ್ಯಾಗ್ನಿಟ್ಯೂಡ್ ಆ್ಯಂಡ್ ಇಂಪ್ಲಿಕೇಶನ್ಸ. ಇಂಟರ್ ನ್ಯಾಶನಲ್ ಜರ್ನಲ್ ಆಫ್ ಕ್ರಿಯೆಟಿವ್ ರಿಸರ್ಚ್ ಥಾಟ್ಸ್, ವ್ಯಾಲ್ಯಂ 10.


■■

*– 36ನೇ ಪುಟದಿಂದ ಮುಂದುವರೆದುದು*

ನಿಯಂತ್ರಿಸುವುದು ತುಂಬಾ ಕಷ್ಟದ ಸಂಗತಿ ಎನ್ನುವುದು ಈ ಜಾತ್ರೆಯಲ್ಲಿ ನಡೆಯುವ ಪ್ರಾಣಿ ಬಲಿಯಿಂದ ವೇದ್ಯವಾಗುತ್ತದೆ. ಹರಕೆ ಹೊತ್ತ ಭಕ್ತರು ಸಾವಿರಾರು ಆಡು–ಕುರಿಗಳನ್ನು ಬಲಿ ನೀಡುತ್ತಾರೆ. ಎತ್ತಿನ ಬಂಡಿಗಳಲ್ಲಿ, ವಾಹನಗಳಲ್ಲಿ ಇಲ್ಲಿಗೆ ಆಗಮಿಸಿದ ಸಹಸ್ರಾರು ಸಂಖ್ಯೆಯ ಭಕ್ತ ಕುಟುಂಬಗಳು ಇಲ್ಲಿಯೇ ಅಡಿಗೆಯನ್ನು ಸಿದ್ದಪಡಿಸಿ, ಊಟ ಮಾಡಿ ಕತ್ತಲಾಗುವುದರೊಳಗೆ ತಮ್ಮ ತಮ್ಮ ಹಳ್ಳಿಗಳ ಕಡೆ ವಾಪಾಸಾಗುತ್ತಾರೆ. ಆಶ್ಚರ್ಯವೆಂದರೆ ಜಾತ್ರೆ ನಡೆದ ರಾತ್ರಿಯಂದು ಒಂದು ನರಪಿಳ್ಳೆಯೂ ಆ ಪ್ರದೇಶದಲ್ಲಿರುವುದಿಲ್ಲ. ಹಾಗೇನಾದರೂ ಇದ್ದರೆ ಕೇಡಾಗುತ್ತದೆ ಎನ್ನುವುದು ಇಲ್ಲಿನ ಜನರ ಬಹುದೊಡ್ಡ ನಂಬಿಕೆ. ನಂತರದ ಮೂರು ಮಂಗಳವಾರಗಳ ಅವಧಿಯಲ್ಲಿ ಜಿಲ್ಲೆಯಾದ್ಯಂತ ಜನರು ತಮ್ಮ ಅನುಕೂಲಕರ ಮಂಗಳವಾರದಂದು ತಮ್ಮ ತಮ್ಮ ಗ್ರಾಮಗಳಲ್ಲಿ 'ಮಾರಮ್ಮನ ಹಬ್ಬ'ವನ್ನು ಆಚರಿಸುತ್ತಾರೆ. ಈ ಹಬ್ಬಗಳಲ್ಲಿ ಪ್ರಾಣಿಬಲಿ ಸಾಮಾನ್ಯ. ಮಾಂಸಹಾರಿಗಳಲ್ಲದವರು ಸಿಹಿ ಅಡಿಗೆಯನ್ನು ತಯಾರಿಸಿ ಸೇವಿಸುವರು.

ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯುವ ಮತ್ತೊಂದು ಬೃಹತ್ ಉತ್ಸವವೆಂದರೆ **"ಶ್ರೀ ನಾಯಕನ ಹಟ್ಟಿ ಜಾತ್ರಾ ಉತ್ಸವ"** ಚಳ್ಳಕೆರೆ ತಾಲ್ಲೂಕಿನ ನಾಯಕನ ಹಟ್ಟಿಯಲ್ಲಿ ಪ್ರತೀ ವರ್ಷ **'ಶ್ರೀ ತಿಪ್ಪೇಸ್ವಾಮಿ ಜಾತ್ರೆ'** ನಡೆಯುತ್ತದೆ. ಶ್ರೀ ತಿಪ್ಪೇಸ್ವಾಮಿಯ ವ್ಯಕ್ತಿತ್ವ, ಪವಾಡ, ಸ್ವರೂಪ, ಇತ್ಯಾದಿ ವಿವರಗಳನ್ನು ಕುರಿತಂತೆ ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಅವರಲ್ಲಿ ಭಿನ್ನ ಅಭಿಪ್ರಾಯಗಳಿದ್ದು ಅವರು ಒಬ್ಬ **'ಶರಣ'**, ಅವಧೂತ, ಬುಡಕಟ್ಟು ಸಾಂಸ್ಕೃತಿಕ ವೀರ ಇತ್ಯಾದಿ ಹಿನ್ನೆಲೆಯನ್ನು ನೀಡುವರು. ಸ್ಥಳೀಯ ಸಂಸ್ಕೃತಿ, ಆಚಾರ ವಿಚಾರಗಳನ್ನು ಗಮನಿಸಿ ಅವರು **'ಸಾಂಸ್ಕೃತಿಕ ವೀರ'** ಎನ್ನುವುದನ್ನು ಒಪ್ಪಲೇ ಬೇಕಾಗುತ್ತದೆ. ಈತನ ನೆಲೆಯಾದ ನಾಯಕನ ಹಟ್ಟಿಯಲ್ಲಿ ನಡೆಯುವ ಜಾತ್ರೆಯು ಕರ್ನಾಟಕದ ಜಾತ್ರೆಗಳಲ್ಲಿ ಎಲ್ಲ ದೃಷ್ಟಿಯಿಂದಲೂ ಮುಖ್ಯವಾದುದು. ಯಾವುದೇ ಜಾತಿ, ಮತ, ಭೇದಭಾವವಿಲ್ಲದೆ, ಹಿಂದೂ–ಮುಸ್ಲಿಂ ಎನ್ನುವ ತಾರತಮ್ಯವಿಲ್ಲದೆ ಎಲ್ಲ ವರ್ಗದ ಜನರು ಈ ಜಾತ್ರೆಗೆ ಆಗಮಿಸುವರು.

ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕ ಮಹತ್ವ ಪಡೆದಂತೆಯೇ ಧಾರ್ಮಿಕ, ಸಾಂಸ್ಕೃತಿಕ ಮಹತ್ವವನ್ನು ಪಡೆದಿದೆ. ಈ ಪರಿಸರದಲ್ಲಿ ನಡೆಯುವ ಕೆಲವು ಜಾತ್ರೆ, ಉತ್ಸವಗಳು ಎಂಥವರ ಮೇಲೂ ಪ್ರಭಾವ ಬೀರುವ ವೈಶಿಷ್ಟ್ಯವನ್ನು ಹೊಂದಿವೆ. ಇಲ್ಲಿ ಆಳ್ವಿಕೆ ನಡೆಸಿದ ಚಿತ್ರದುರ್ಗದ ಪಾಳೆಯಗಾರರು ಧಾರ್ಮಿಕ ಸಹಿಷ್ಣುಗಳಾಗಿದ್ದುದು ಇಲ್ಲಿನ ಜನರ ಜೀವನದ ಮೇಲೆ ಅಗಾಧ ಪರಿಣಾಮ ಬೀರಿದೆ. ಹಾಗಾಗಿಯೇ ಇಲ್ಲಿ ಧಾರ್ಮಿಕ ಸಂಘರ್ಷಗಳು ತೀರಾವಿರಳ ಎಂದು ಹೇಳಬಹುದು. ಮೇಲೆ ಚರ್ಚಿಸಿದ ಸ್ಥಳೀಯ ಮಟ್ಟದ ಹಬ್ಬ ಉತ್ಸವಗಳಷ್ಟೆ ಅಲ್ಲದೇ ರಾಜ್ಯ–ರಾಷ್ಟ್ರದಾದ್ಯಂತ ಆಚರಿಸುವ ಹಬ್ಬಗಳನ್ನು ಆಚರಿಸುವರು.

- **ಕ್ಷೇತ್ರಕಾರ್ಯ ಆಧಾರತ ಮಾಹಿತಿ.**

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಹಾವಿನಹಾಳ ಕಲ್ಲಯ್ಯನ ವಚನಗಳು

✍ **ಡಾ. ಎಂ.ಎಸ್. ಮಾಗಣಗೇರಿ,** ಮುಖ್ಯಸ್ಥರು ಕನ್ನಡ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ, ವಿಜಯಪುರ ಜಿಲ್ಲೆ.

ಕಲ್ಲಯ್ಯನು ತನ್ನ ಆರಾಧ್ಯ ದೈವವಾದ 'ಮಹಾಲಿಂಗ ಕಲ್ಲೇಶ್ವರಾ' ಅಂಕಿತದಿಂದ 105 ವಚನಗಳನ್ನು ರಚಿಸಿದ್ದಾನೆ. (ಕಲ್ಲಯ್ಯನ ವಚನಗಳು 106 ಎಂದು ಸಂಕೀರ್ಣ ವಚನ ಸಂಪುಟ–4ರ ಪ್ರಸ್ತಾವನೆಯಲ್ಲಿ ಡಾ. ಬಿ. ಆರ್. ಹಿರೇಮಠರು ಅಭಿಪ್ರಾಯಪಡುತ್ತಾರೆ) ಈತನ ವಚನಗಳು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಬಹು ಭಾವಗರ್ಭಿತ ಹಾಗೂ ವಿಚಾರಪೂರಿತವಾಗಿವೆಯಲ್ಲದೆ ಬಹು ದೀರ್ಘವಾಗಿವೆ. ಎಲ್ಲಾ ವಚನಕಾರರಂತೆ ಕಲ್ಲಯ್ಯನ ವಚನಗಳಲ್ಲಿ ಭಕ್ತಿ, ಶಿವಜ್ಞಾನ, ಧರ್ಮಾಚರಣೆ, ಸಮಾಜ ವಿಡಂಬನೆ ಹೀಗೆ ಹಲವು ವಿಚಾರಗಳು ವ್ಯಕ್ತವಾಗಿವೆ. ಕಲ್ಲಯ್ಯನಿಗೆ ಸಂಸ್ಕೃತದಲ್ಲಿ ಅಪಾರವಾದ ಪಾಂಡಿತ್ಯವಿದ್ದು, ಆ ಜ್ಞಾನವನ್ನು ವಚನಗಳಲ್ಲಿ ಬಳಸಿಕೊಂಡಿರುವುದು ಆತನ ವಚನಗಳಿಂದ ತಿಳಿದುಬರುತ್ತದೆ.

ಕಲ್ಯಾಣದ ಅನುಭವ ಮಂಟಪದಲ್ಲಿ, ಶಿವಶರಣರೆಲ್ಲ ಕೂಡಿಕೊಂಡು ಶಿವಾನುಭವವನ್ನು ಚರ್ಚಿಸುತ್ತಿದ್ದರು. ಅದರಕ್ಕೆ ಪ್ರಭುದೇವರೇ ಅಧ್ಯಕ್ಷರು. ಅದರಂತೆ ಸೊನ್ನಲಿಗೆಯಲ್ಲಿ ಒಂದು ಚಿಕ್ಕ ಅನುಭವ ಮಂಟಪ ರೂಪುಗೊಂಡಿತ್ತು. ಅದಕ್ಕೆ ರುದ್ರಮುನಿಗಳೇ ಅಧ್ಯಕ್ಷರೆನ್ನಬಹುದು. ಕಲ್ಯಾಣದ ಅನುಭವ ಮಂಟಪದಲ್ಲಿ ಚೆನ್ನಬಸವಣ್ಣನ ಪಾತ್ರವನ್ನು ಸೊನ್ನಲಿಗೆಯ ಅನುಭವ ಮಂಟಪದಲ್ಲಿ ಸಿದ್ಧರಾಮ ಶಿವಯೋಗಿಗಳು ವಹಿಸುತ್ತಿದ್ದರು. ಹಾವಿನಹಾಳ ಕಲ್ಲಯ್ಯನವರು ಒಬ್ಬ ಪ್ರಮುಖ ಸದಸ್ಯರೆನಿಸಿದ್ದರು. ಕೇದಾರ ಗುರುಗಳು ಇನ್ನೊಬ್ಬ ಸದಸ್ಯರು. ಅನುಭವ ಗೋಷ್ಠಿಯಲ್ಲಿ ಹಲವು ಜನ ಶಿವಶರಣೆಯರು ಭಾಗವಹಿಸುತ್ತಿದ್ದಂತೆ ಆ ಅನುಭವ ಗೋಷ್ಠಿಯಲ್ಲಿಯೂ ಒಬ್ಬಿಬ್ಬರು ಶಿವಶರಣೆಯರು ಆಸ್ಥೆಯಿಂದ ಭಾಗವಹಿಸುತ್ತಿದ್ದರೆಂದು ತೋರುತ್ತದೆ.

ಸಿದ್ಧರಾಮ ಶಿವಯೋಗಿಗಳು ಸಾಮ್ಯಯೋಗಿ ಎನಿಸಿದ್ದರು, ಅವರು ಆಗಾಧವಾದ ಸಮತಾಭಾವವನ್ನು ಸಾಧಿಸಿದ್ದರು. ಆ ಮಾತಿಗೆ ಅವರ ವಚನಗಳೇ ಸಾಕ್ಷಿಯಾಗಿವೆ. ಸಾಮ್ಯಯೋಗಿ ಸಿದ್ಧರಾಮನ ಸಮತಾಭಾವವನ್ನು ಬಹಳವಾಗಿ ಮೆಚ್ಚಿಕೊಂಡವರಲ್ಲಿ ಹಾವಿನಹಾಳ ಕಲ್ಲಯ್ಯನೂ ಒಬ್ಬನು. ಆ ಮೆಚ್ಚಿಕೆಯನ್ನು ಅವನು ತನ್ನ ವಚನಗಳಲ್ಲಿ ತೋರ್ಪಡಿಸಿದ್ದಾನೆ. ಮತ್ತು ಸಿದ್ಧರಾಮನು ಕೈಕೊಂಡ ಕರ್ಮ ಯೋಗದಲ್ಲಿ ಸಹಭಾಗಿಯಾಗಿ ಆ ಮೆಚ್ಚಿಕೆಯನ್ನು ಹೆಚ್ಚು ಸ್ಪಷ್ಟಪಡಿಸಿದ್ದಾನೆ.

ಕಲ್ಲಯ್ಯನ ವಚನಗಳಲ್ಲಿ ಜಾತಿ ಪದ್ಧತಿಗಳ ಖಂಡನೆಯನ್ನು ಕಾಣುತ್ತೇವೆ. ಪುರೋಹಿತರ ಅರ್ಥಹೀನ ಆಚಾರ, ಅನ್ಯಾಯ, ಶೋಷಣೆಗಳು ಸಾಮಾನ್ಯ ಜನರಲ್ಲಿ ನೋವನ್ನುಂಟು ಮಾಡಿತ್ತು. ಅಂತಹ ಶೋಷಣೆ ಕಲ್ಲಯ್ಯನ ಮೇಲೂ ನಡೆದಿತ್ತು. ಇಂತಹ ಅಸಮಾನತೆಯನ್ನು ಸಹಿಸದ ಕಲ್ಲಯ್ಯ ಅವುಗಳನ್ನು ನೇರವಾಗಿ ಪ್ರತಿಭಟಿಸಿದ್ದಾನೆ. ತನ್ನ ವಚನಗಳಲ್ಲಿ ವೈದಿಕ ಧರ್ಮದಲ್ಲಿರುವ ಅಸಮಾನತೆ ಮತ್ತು ಜಾತಿಯ ವಿರುದ್ಧ ಖಂಡನೆ ಮಾಡಿದ್ದಾನೆ. ವಿಪ್ರರು ನಾವೇ ಶ್ರೇಷ್ಠರು ಎಂಬ ಅಹಂಕಾರದಿಂದ ನಿಮ್ನ ವರ್ಗದವರು ದೇವಾಲಯ ಪ್ರವೇಶಿಸಿದರೆ ಅದು ಅಪವಿತ್ರ ಮೈಲಿಗೆ ಎಂಬ ಶೋಷಣೆಗಳು ಮೊದಲಾದವುಗಳು ಶ್ರೀಸಾಮಾನ್ಯರ ಮೇಲೆ ನಡೆಯುತ್ತಿದ್ದ ವರ್ತನೆಯ ವಿರುದ್ಧ ಕಲ್ಲಯ್ಯ ತೀಕ್ಷ್ಣವಾಗಿ ತನ್ನ ವಚನಗಳಲ್ಲಿ ಖಂಡಿಸಿದ್ದಾನೆ.

**"ಹಾಹಾ! ವೇದವೆ ತತ್ವವಾದಡೆ, ಮಾದಾರನ ಮನೆಯಲುಂಡನೊಬ್ಬ**
**ನಿಧಾನವುಳ್ಳ ಉಪಾಧ್ಯಾಯರಾರೂ ಇಲ್ಲದಾದಡೆ**
**ಶಾಸ್ತ್ರವೆ ತತ್ವವಾದಡೆ ಶಿವರಾತ್ರಿಯನೊಬ್ಬ**
**ಬೇಡಂಗಿತ್ತುದನೊಬ್ಬ ಪ್ರೋತ್ರಿಯಂಗೀಯಲಾಗದೆ ?**
**ಆಗಮವಿಧಿಯಲ್ಲಿ ಮಂತ್ರ ಮೂರುತಿಯೆಂಬ ಮಾತಂತಿರಲಿ**
**ಆದ ಕೇಳಲಾಗದು, ಭ್ರಾಂತು ಬೇಡ**
**ಭಾವಮೂರುತಿ ಬಲ್ಲ ಪ್ರಮಾಣವಿದೆ,**
**ಆ ಕುಲವೆಂದಡೆ ಹೊಕ್ಕ ಕಕ್ಕಯ್ಯಗಳ ಮನೆಯ**
**ಅಕ್ಕಟಾ, ನಿಮ್ಮ ತರ್ಕ ಮುಕ್ಕಾಯಿತ್ತು, ಲೋಕವರಿಯದೇ?**
**ಕಲ್ಲಲಿಟ್ಟು ಕಾಲಲೊದೆದಡೆ, ಅಲ್ಲ ಮೂರುತಿ ನುಡಿಯಿತ್ತಲ್ಲಯ್ಯಾ**
**ಬಲ್ಲವದನು ದ್ವಿಜರು ನೀವೆಲ್ಲರೂ ಹೇಳಿರೆ**
**ಸಲ್ಲದು, ನಿಮ್ಮ ವಾದ ನಿಲ್ಲಲಿ, ಬಲ್ಲದ ನಡೆದುದೇ ಬಟ್ಟೆ**
**ಮಹಾಲಿಂಗ ಕಲ್ಲೇಶ್ವರಾ, ಲಿಂಗಾಚಾರಿಗಳು ನಿಸ್ಸೀಮರಯ್ಯಾ"**[1]

'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಹತ್ತನೆಯ ಶತಮಾನದ ಪಂಪನಿಂದ ಹಿಡಿದು 12ನೇ ಶತಮಾನದ ವಚನಕಾರರು, 16ನೇ ಶತಮಾನದ ಹರಿದಾಸರು, 17ನೇ ಶತಮಾನದ ತೀಂಥಣಿ ಮೌನೇಶ್ವರ, 19ನೇ ಶತಮಾನದಲ್ಲಿ ಅದನ್ನು ಸಾದರಪಡಿಸಿದವರು ಸಂತ ಶಿಶುನಾಳ ಶರೀಫರು. ಹೀಗೆ ಎಲ್ಲರೂ ಸರ್ವಧರ್ಮದ ಸಮನ್ವಯವಾಗಿ ಕಂಡಿದ್ದಾರೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ನಾವು ಮತ್ತೆ ಶರಣರ ವಚನಗಳಿಗೆ ಮೊರೆ ಹೋಗುವುದೇ ಒಳ್ಳೆಯದು. ಬಸವಾದಿ ಶರಣರೆಲರ್ಲೂ ಈ ರೀತಿಯ ಮೇಲು ಕೀಳು ಭಾವನೆಯನ್ನು ವೈಜ್ಞಾನಿಕ ಆಧಾರಗಳ ಸಮೇತ ವಿರೋಧಿಸುತ್ತಾರೆ. ಹಾವಿನಾಳ ಕಲ್ಲಯ್ಯನು ತನ್ನ ಒಂದು ವಚನದಲ್ಲಿ ಹೀಗೆ ಪ್ರತಿಪಾದಿಸುತ್ತಾನೆ:

**ಬ್ರಾಹ್ಮಣ ಮೊದಲಾಗಿ ಸ್ವಪಚ ಕಡೆಯಾಗಿ**
**ಎಲ್ಲರಿಗೂ ಜನನವೊಂದೆ,**
**ಆಹಾರ ನಿದ್ರೆ, ಭಯ ಮೈಥುನವೊಂದೆ,**
**ಪಾಪ ಪುಣ್ಯವೊಂದೆ, ಸ್ವರ್ಗವೊಂದೆ,**
**ಬೇರೆಂಬ ಭಂಗಿತರೆ ನೀವು ಕೇಳಿರೆ!**
**ಅರಿವೇ ಸತ್ಕುಲ, ಮರವೇ ದುಃಕುಲ**

ಮೇಲ್ಜಾತಿಯವನೆನಿಸಿಕೊಂಡಿರುವ ಬ್ರಾಹ್ಮಣನಾಗಲಿ, ಕೀಳು ಕುಲದವನೆನಿಸಿಕೊಂಡ 'ಸ್ವಪಚ'ನಾಗಲಿ ಎಲ್ಲರ ಜನನವು ಒಂದೇ ರೀತಿಯಿಂದ ಆಗಿರುತ್ತದೆ. ಅವರ ಆಹಾರ, ವಿಹಾರ, ವಿರಾಮ, ಭಾವನೆಗಳು ಒಂದೇ ರೀತಿಯಾಗಿರುತ್ತವೆ. ಅದೇ ರೀತಿ ಅವರ ಧಾರ್ಮಿಕ, ಆಧ್ಯಾತ್ಮಿಕ, ಅಲೌಕಿಕ ನಂಬಿಕೆಗಳಾದ ಪಾಪ–ಪುಣ್ಯ, ಸ್ವರ್ಗ–ನರಕಗಳೂ ಒಂದೇಯಾಗಿರುತ್ತವೆ. ಇವುಗಳನ್ನು ಅರಿತವರು 'ಮೇಲು–ಕೀಳು' ಎಂದು ಭೇದಭಾವ ಮಾಡುವುದಿಲ್ಲ. ಈ ಸತ್ಯವನ್ನು ಅರಿಯದೆ, ತಾರತಮ್ಯ ಮಾಡುವವರನ್ನು ಹಾವಿನಹಾಳ ಕಲ್ಲಯ್ಯನು 'ಬೇರೆಂಬ ಭಂಗಿತರೆ' ಎಂದು ಛೇಡಿಸುತ್ತಾನೆ. ಈ ವಚನದ ಕೊನೆಯ ಸಾಲು ಅತ್ಯಂತ ಅರ್ಥಪೂರ್ಣವಾಗಿದೆ. ಮನುಷ್ಯರೆಲ್ಲರೂ ಒಂದೇ ಎಂಬ ಜ್ಞಾನವೇ 'ಸತ್ಕುಲ'; ಅದರ ಬಗೆಗಿನ ಅಜ್ಞಾನವೇ 'ದುಃಕುಲ'ವೆಂಬ ಮಾತು 'ಉಚ್ಚ–ನೀಚ' ಎಂಬ ಮಾನದಂಡಗಳನ್ನು ಬುಡಮೇಲಾಗಿಸುತ್ತದೆ.

ಆದ್ದರಿಂದ ಮೇಲು ಕೀಳು ಭಾವನೆಯನ್ನು ಬಿಟ್ಟು ದೇವರಿಗೆ 'ಶರಣ'ನಾಗಬೇಕು. ಅಂತಹ ಶರಣರು "ಮಲಗಿದಾಗ ಎದ್ದಾಗ ಕುಳಿತಾಗ ನಿಂತಾಗ ಸದಾಕಾಲವೂ ಮಹಾತ್ಮರು ಆ ಪರಮಾತ್ಮನ ಧ್ಯಾನದಲ್ಲಿಯೇ ಇರುತ್ತಾರೆ" ಅವರಿಂದ ಮಾತ್ರ ಸಮಾಜ ಉದ್ಧಾರ ಸಾಧ್ಯವಾಗುತ್ತದೆ. ಈ ಶರಣರು ತಾವು ಸಜ್ಜನರೆಂದು ಹೇಳಿಕೊಂಡು ಓಡಾಡುವ ಬಾಯಿಬಡುಕರಲ್ಲ. ಅವರು ಎಲ್ಲಿದ್ದರೂ ಅವರ ಸತ್ಕಾರ್ಯಗಳಿಂದಲೇ ಗುರುತಿಸಲ್ಪಡುತ್ತಾರೆ.

**ಅರಳಿದ ಪುಷ್ಪ ಪರಿಮಳಿಸದಿಹುದೆ ?**
**ತುಂಬಿದ ಸಾಗರ ನೊರೆತೊರೆಯಾಡದಿಹುದೆ ?**
**ಆಕಾಶ ಮುಟ್ಟುವ ದೋಂಟಿಗೋಲವಿಡಿವನೆ ?**
**ಪರಮಪರಿಣಾಮಿ ಕರ್ಮವತಿಗಳೆಯದಿಹನೆ**
**ಮಹಾಲಿಂಗ ಕಲ್ಲೇಶ್ವರಾ ?**

ಸುಂದರವಾಗಿ ಅರಳಿದ ಹೂವು ತನ್ನ ನೋಡುವಂತೆ ರಸಿಕನನ್ನು ಆಹ್ವಾನಿಸದಿದ್ದರೂ ಅದರ ಪರಿಮಳ ಮಾತ್ರದಿಂದ ದುಂಬಿಯು ಅದರ ಇರವನ್ನು ಗುರುತಿಸುತ್ತದೆ. ತುಂಬಿರುವ ಸಾಗರದಲ್ಲಿ ಅಲೆಗಳ ನರ್ತನವು ಸರ್ವೇ ಸಾಮಾನ್ಯ. ಆಕಾಶ ಮುಟ್ಟುವಷ್ಟು ಎತ್ತರವಾಗಿರುವವನು ಎಂದಿಗೂ ಕಿರುಗೋಲಿನ ನೆರವಿಗೆ ಅಂಗಲಾಚುವುದಿಲ್ಲ. ಅದೇ ರೀತಿ ಶರಣನಾದವನು, ಸನ್ಮಾರ್ಗದಲ್ಲಿರುವವನು ಪಾಪಕರ್ಮಗಳಿಂದ ಬಹುದೂರದಲ್ಲಿರುತ್ತಾನೆ; ದೂರವಿರಬೇಕು ಎಂಬುದು ಕಲ್ಲಯ್ಯನ ಆಶಯವಾಗಿದೆ. ಸಾಮಾಜಿಕ ಕಳಕಳಿಯಿಂದ ಕೂಡಿರುವ ವಚನಗಳು ಕಲ್ಲಯ್ಯನವರ ಸಾಮಾಜಿಕ ತುಡಿತವನ್ನು ವ್ಯಕ್ತಪಡಿಸುತ್ತವೆ. ಅದೇ ಬಸವಣ್ಣನವರ ಜನಪ್ರಿಯ ವಚನ 'ಕಳಬೇಡ, ಕೊಲಬೇಡ'ವನ್ನು ನೆನಪಿಸುವ ಹಾವಿನಾಳ ಕಲ್ಲಯ್ಯನ ಈ ವಚನವು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ.

**"ತನ್ನ ಗುಣವ ಹೊಗಳಬೇಡ, ಇದಿರ ಗುಣವ ಹಳಿಯಬೇಡ**
**ಕೆಮ್ಮನೊಬ್ಬರ ನುಡಿಯಬೇಡ, ನುಡಿದು ನುಂಪಿತನಾಗಬೇಡ**
**ಇದಿರ ಮುನಿಯಿಸಬೇಡ, ತಾ ಮುನಿಯಬೇಡ**
**ತಾನು ಬದುಕವೈಸುದಿನ ಸಮತೆ ಸಮಾಧಾನ ತುಂಬಿ ತುಳಕದಿರಬೇಕು**
**ಮಹಾಲಿಂಗ ಕಲ್ಲೇಶ್ವರದೇವರ ನಿಚ್ಚಳ ನಿಜವನರಿದಡೆ,**
**ಬಚ್ಚಬರಿಯ ಸಹಜ ಸಮಾಧಾನವಳಪಟ್ಟಿರಬೇಕು"**[2]

ಈ ವಚನದಲ್ಲಿ ಕಲ್ಲಯ್ಯನು ಸಮಾಜದಲ್ಲಿರುವ ವ್ಯಕ್ತಿ ಯಾವ ರೀತಿಯ ನಡತೆ, ವರ್ತನೆಗಳನ್ನು ಹೊಂದಿರಬೇಕೆಂಬ ನೀತಿಯನ್ನು ವಿವರಿಸಿದ್ದಾನೆ. ತನ್ನನ್ನು ತಾನು ಬೇರೆಯವರ ಎದುರಲ್ಲಿ ಹೊಗಳಿಕೊಳ್ಳಬೇಡ, ಮತ್ತೊಬ್ಬರ ಗುಣವನ್ನು ಹಳಿಯಬೇಡ, ನಿಂದಿಸಬೇಡ, ಮುನಿಯಬೇಡ, ತಾನು ಬದುಕುವ ದಿನಗಳಷ್ಟು ಸಮತೆ ಸಮಧಾನವಿರಬೇಕು. ಮಹಾಲಿಂಗ ಕಲ್ಲೇಶ್ವರನಲ್ಲಿ ನಿಚ್ಚಳ ನಿಜವ ಅರಿತು ಸಮಾಧಾನವಿರಬೇಕು. ಆತ್ಮ ಪ್ರಶಂಸೆ ಇತರರ ನಿಂದನೆ ಬಿಟ್ಟರೆ ಅದೇ ಅಂತರಂಗ ಹಾಗೂ ಬಹಿರಂಗದ ಶುದ್ಧಿ ಎಂದು ಕಲ್ಲಯ್ಯ ಪ್ರತಿಪಾದಿಸುತ್ತಾನೆ. ಇದನ್ನೆ ಬಸವಣ್ಣ ಹೀಗೆ ಹೇಳುತ್ತಾನೆ:

**"ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ**
**ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ**
**ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ"** [3]

ಜ್ಞಾನಿ, ಸಜ್ಜನ, ಶರಣನಾದವನು ತನ್ನನ್ನು ತಾನು ಹೊಗಳಿಕೊಳ್ಳಬಾರದು, ಎದುರಿರುವವರ ಗುಣವನ್ನು ಒಪ್ಪಿಕೊಳ್ಳಬೇಕೇ ಹೊರತು, ಹಳಿಯಬಾರದು. ಕಠೋರವಾಗಿ ಮಾತನಾಡಬಾರದು, ಮಾತು ಕೊಟ್ಟ ಮೇಲೆ ಅದನ್ನು ಎಂತಹ ಕ್ಷಣದಲ್ಲೂ ಈಡೇರಿಸಬೇಕು. ಇತರರ ಕೋಪಕ್ಕೂ ಕಾರಣನಾಗದೆ, ತಾನೂ ಕೋಪಿಸಿಕೊಳ್ಳದಿರಬೇಕು. ಇಂತಹ ಸಮತೆ, ಸಮಾಧಾನದ ಮನಸ್ಥಿತಿ ಕಲ್ಲಯ್ಯನ ಕಾಲಕ್ಕಿಂತಲೂ ಇಪ್ಪತ್ತೊಂದನೆಯ ಶತಮಾನದ ಪ್ರಸ್ತುತ ಸಂದರ್ಭದಲ್ಲಿ ಅತ್ಯವಶ್ಯವೆನಿಸುತ್ತದೆ. ಮನುಷ್ಯನು ಸದ್ಗುಣಗಳಿಂದ ತುಂಬಿರಬೇಕೆ ಹೊರತು, ಅವು ತುಳಕಬಾರದು ಎಂಬ ಮಾತು ಹೆಚ್ಚು ಅರ್ಥಪೂರ್ಣವಾದುದಾಗಿದೆ.

ಮನುಷ್ಯನು ಇಂತಹ ಸದ್ಗುಣಗಳ ಗಣಿಯಾಗಲು ಒಳ್ಳೆಯ ಗುರುವಿನ ಅವಶ್ಯಕತೆಯಿದೆ. ಆ ಗುರುವು ಬಾಹ್ಯದಲ್ಲಿ ಹುಡುಕುವುದಲ್ಲ. ಉಚಿತಾನುಚಿತ ವಿವೇಕವೇ ಗುರು. ಅದನ್ನು ಅರಿಯದ ಅವಿವೇಕಿಗಳನ್ನು ಕಲ್ಲಯ್ಯ ಹೀಗೆ ಖಂಡಿಸುತ್ತಾನೆ:

**ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ**
**ಪರಿಣಾಮವೇ ತಪ, ಸಮತೆಯೆಂಬುದೇ ಯೋಗದಾಗು ನೋಡಾ,**
**ಈಸುವನರಿಯದೆ ವೇಷವ ಧರಿಸಿ, ಲೋಚು ಬೋಳಾದಡೆ**
**ಮಹಾಲಿಂಗ ಕಲ್ಲೇಶ್ವರದೇವರು ನಗುವರು !**

ನಾವು ಏನು ಮಾಡಬೇಕು, ಏನನ್ನು ಮಾಡಬಾರದು, ನಮ್ಮ ಇತಿಮಿತಿಗಳೇನು ಎಂಬ ಅರಿವೇ ನಮಗೆ ಗುರುವಾಗಬೇಕು. ಬಾಹ್ಯದ ಗುರುವಿಗಿಂತಲೂ ಅಂತರಂಗದ ಈ ವಿವೇಕವೂ ನಮ್ಮನ್ನು ಬದುಕಿನುದ್ದಕ್ಕೂ ಸರಿ ದಾರಿಯಲ್ಲಿ ನಡೆಯುವಂತೆ ಮಾಡುತ್ತದೆ. ಇದರೊಂದಿಗೆ ಸದಾಚಾರವನ್ನು ರೂಢಿಸಿಕೊಂಡರೆ ಮಾತ್ರ ಶಿಷ್ಯ. ಈ ಉಭಯ ಜ್ಞಾನದ ಪ್ರತೀಕವೇ ಲಿಂಗವಾಗಿದೆ. ಹೀಗೆ ಒಬ್ಬನೇ ವ್ಯಕ್ತಿಯು ಏಕಕಾಲಕ್ಕೆ 'ತನ್ನ ತಾನರಿತು' ಗುರುವಾಗಿ, ಆ ಅರಿವನ್ನು ಆಚರಿಸಿ ಶಿಷ್ಯನಾಗಿ ಹಾಗೂ ಈ ಜ್ಞಾನವನ್ನು ಹೊಂದಿದ ಲಿಂಗವೂ ಆಗುವುದರ ಪರಿಣಾಮವೇ ತಪವಾಗುತ್ತದೆ. ಇಂತಹ ಕಾರ್ಯದಲ್ಲಿ ಸಮತೆ, ಸೈರಣೆಗಳು ಅತ್ಯವಶ್ಯಕ. ಅವುಗಳಿಂದ ಯೋಗ ದೊರೆಯುತ್ತದೆ. ಇವುಗಳನ್ನು ಅರಿಯದೆ ವೇಷ ಧರಿಸುವವರು ಹಾಗೂ ತಲೆ ಬೋಳಿಸಿಕೊಳ್ಳುವವರು ನಗೆಗೀಡಾಗುತ್ತಾರೆ.

'ವ್ಯಕ್ತಿಯು ಈ ರೀತಿ ನಗೆಗೀಡಾಗಬಾರದೆಂದರೆ, ವೈಚಾರಿಕ ಮಾರ್ಗದಲ್ಲಿ ನಡೆಯಬೇಕು' ಎಂದು ಹಾವಿನಹಾಳ ಕಲ್ಲಯ್ಯ ಪ್ರತಿಪಾದಿಸುತ್ತಾನೆ. ದೇವರನ್ನು, ದೇವಾಲಯವನ್ನು ಹೊರಗಡೆ ಹುಡುಕದೆ, ಪ್ರತಿಯೊಬ್ಬ ವ್ಯಕ್ತಿಯು ತನ್ನೊಳಗೇ ಇರುವ ದೈವತ್ವವನ್ನು ಪ್ರಕಟಪಡಿಸಬೇಕು' ಎಂಬುದು ಎಲ್ಲ ಶರಣರ ನಿಲುವಾಗಿತ್ತು. ಅದೇ ರೀತಿ ಕಲ್ಲಯ್ಯನೂ ದೇವರು ಹಾಗೂ ದೇವಾಲಯಗಳನ್ನು ದೇಹದಲ್ಲಿಯೇ ಕಂಡುಕೊಳ್ಳುತ್ತಾನೆ.

**ಉರವೆ ಕುರುಕ್ಷೇತ್ರ, ಶಿರವೆ ಶ್ರೀಪರ್ವತ,**
**ಲಲಾಟವೆ ಕೇದಾರ, ಭ್ರೂನಾಸಿಕದ ಮಧ್ಯವೆ ವಾರಣಾಸಿ ನೋಡಾ !**
**ಹೃದಯವೇ ಪ್ರಯಾಗ, ಸರ್ವಾಂಗವೇ ಸಕಲತೀರ್ಥಂಗಳಾಗಿ**
**ಮಹಾಲಿಂಗ ಕಲ್ಲೇಶ್ವರನ ಶರಣರ ಸುಳಿಹು ಜಗತ್ಪಾವನ !**

ಮಾನವನ ಹೃದಯವೇ ಮಹಾಭಾರತದ ಕುರುಕ್ಷೇತ್ರದಂತಿದೆ. ಶಿರವೇ ಶ್ರೇಷ್ಠವಾದ ಪರ್ವತ. ಹಣೆಯೇ ಕೇದಾರ, ನಾಸಿಕದ ಮಧ್ಯವೇ ವಾರಣಾಸಿ, ಹೃದಯವೇ ಪ್ರಯಾಗ. ಇದನ್ನರಿತು ಈ ಸರ್ವಾಂಗಗಳನ್ನೇ ತೀರ್ಥಕ್ಷೇತ್ರಗಳೆಂದು ಅರಿತು, ಅವುಗಳನ್ನು ಶುಚಿಯಾಗಿಟ್ಟುಕೊಳ್ಳುವ ಶರಣರು ಇರುವ ಜಗತ್ತು ಪಾವನವಾಗುತ್ತದೆ, ಎಂದು ಹೇಳುವ ಮೂಲಕ ಪಾರಂಪರಿಕ ತೀರ್ಥಕ್ಷೇತ್ರಗಳ ಅರ್ಥವನ್ನೂ ಕಲ್ಲಯ್ಯನು ಈ ವಚನದ ಮೂಲಕ ವಿಶಾಲಗೊಳಿಸುತ್ತಾನೆ.

ಭಗವಂತನನ್ನು ಕುರಿತು ನೋಡುವುದು, ಕೇಳುವುದು, ಪೂಜಿಸುವುದು, ಸ್ಮರಿಸುವುದು ಇವುಗಳೆಲ್ಲವನ್ನು ಗಮನಿಸಿದರೆ ಭಕ್ತ ಮತ್ತು ಭಗವಂತನ ನಡುವಿನ ಅವಿನಾಭಾವ ಸಂಬಂಧ ದೊರೆಯುತ್ತದೆ. ಇದುವೇ ಆಧ್ಯಾತ್ಮಿಕ ಅನುಭವ. ಇದಕ್ಕೆ ಕಲ್ಲಯ್ಯನ ವಚನವೂ ಹೊರತಾಗಿಲ್ಲ.

**"ಕರ್ತೃ ನೃತ್ಯನ ವಾಸಕ್ಕೆಯಿದ್ದಲ್ಲಿ ಆತನ ಭಕ್ತಿಯನರಿತು, ತಾ ಒಡಗೂಡಿದಲ್ಲಿ**
**ಆತ ಕೊಟ್ಟುದ ತಾ ಮುಟ್ಟದೆ,**
**ಆತನಲ್ಲಿ ದುರ್ವಾಕ್ಯ ದುಶ್ಚರಿತ್ರ ಪಗುಡಿ ಪರಿಹಾಸಕಂಗಳಂ ಬೀರದೆ,**
**ಆತನ ಚಿತ್ತ ನೋವಂತೆ ಮತ್ತಾವ ಬಂಧನದ ಕಟ್ಟನಿಕ್ಕದೆ,**
**ಕೃತ್ಯವೆಮಗೊಂದ ಮಾಡೆಂದು ನೇಮವ ಲಕ್ಷಿಸದ**

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಆತ ತನ್ನ ತಾನರಿತು ಮಾಡಿದಲ್ಲಿ**
**ಅದು ತನಗೆ ಮುನ್ನಿನ ಸೋಂಕೆಂಬುದನರಿತು,**
**ಗನ್ನಗದುಕಿನಿಂ ಬಿನ್ನಾಣದಿಂದೊಂದುವ ಮಟ್ಟದೆ,**
**ಆ ಪ್ರಸನ್ನವಪ್ಪ ವಸ್ತು, ಮಹಾಮಹಿಮ ಕಲ್ಲೇಶ್ವರಲಿಂಗ**
**ತಾನಾದ ಶರಣ"**[4]

ಎನ್ನುತ್ತಾನೆ. ಈ ವಚನದಲ್ಲಿ ಕಲ್ಲಯ್ಯನು ಶರಣನಾದವನು ಭಗವಂತನನ್ನು ಹೇಗೆ ಅರಿತಿರಬೇಕೆಂದು ಸ್ಪಷ್ಟಪಡಿಸುತ್ತಿದ್ದಾನೆ. ಆತನಲ್ಲಿ ಯಾವುದೇ ಅವಗುಣಗಳನ್ನು ಹೊಂದಿರದೆ ಅವುಗಳಿಂದ ದೂರಿರಬೇಕು. ಆತನ ಚಿತ್ತ ಮತ್ತಾವ ಬಂಧನಕ್ಕೊಳಗಾಗದೆ ತನ್ನ ತಾನರಿತುಕೊಳ್ಳಬೇಕು. ಅಂತಹ ಭಕ್ತನು ಮಹಾಮಹಿಮ ಕಲ್ಲೇಶ್ವರ ಶರಣನಾಗುತ್ತಾನೆ ಎಂಬ ಅಧ್ಯಾತ್ಮದ ನಿಲುವನ್ನು ವ್ಯಕ್ತಪಡಿಸುತ್ತಾನೆ.

**"ಗುರುವೆನ್ನ ಪ್ರಾಣಲಿಂಗವ**
**ಕರುಣದಿಂದನುಗ್ರಹವ ಮಾಡಿದ ಪರಿ ಎಂತೆಂದಡೆ**
**ಪಚ್ಚೆಯ ನೆಲಗಟ್ಟಿನ ಮೇಲೆ ಚೌಮಾಲೆಯ ಸರಿಸದಲ್ಲಿ**
**ಷೋಡರ ಕಂಬಂಗಳ ಮಂಟಪವ ಮಾಡಿ**
**ಮಧ್ಯದಲ್ಲಿ ಕುಳ್ಳಿರ್ದ ಉಪದೇಶವ ಪಡೆಯಲೆಂದು ಹೋದಡೆ**
**ಎನ್ನಂತರಂಗದಲ್ಲಿ ಚತುಷೋಣೆಯ ಚತುರ್ದಳದ ನೆಲಗಟ್ಟಿನ ಮೇಲೆ**
**ಷೋಡಶ ಕಲೆಗಳೆಂಬ ಹದಿನಾರು ಕಂಬವ ನೆಟ್ಟು**
**ಧ್ಯಾನ ವಿಶ್ರಾಮದ ಮೇಲೆ ಆದಿ ಮಧ್ಯ ತ್ರಿಕೂಟವೆಂಬ ಮಂಟಪವನಿಕ್ಕಿ**
**ಆ ಮಂಟಪ ಸ್ಥಾನದಲ್ಲಿ ಎನ್ನ ಗುರು ಕುಳ್ಳಿರ್ದು ಅನುಗ್ರಹ ಮಾಡಿದಡೆ**
**ನುಡಿಯಡಗಿದ, ಒಡಲಳಿದ ಸ್ವಯಲಿಂಗ ಸಂಬಂಧವಾದ ಭೇದವ**
**ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣ ಬಲ್ಲ"**[5]

ಇಲ್ಲಿ ಕಲ್ಲಯ್ಯ ದೇಹವನ್ನು ಮಂಟಪಕ್ಕೆ ಹೋಲಿಸಿದ್ದಾನೆ. ನಾಲ್ಕು ಮೂಲೆಯ ಮೇಲೆ ಹದಿನಾರು ಕಂಬಂಗಳ ಮಂಟಪವ ಮಾಡಿ, ನಾಲ್ಕು ದಳದ ನೆಲಗಟ್ಟಿನ ಮೇಲೆ ಪರಮಾತ್ಮನ ಅವಸ್ಥಾನವನ್ನು ಇರಿಸಿ, ಆತನ ಅನುಗ್ರಹವನ್ನು ಪಡೆಯುವವನೇ ಶರಣ ಎನ್ನುತ್ತಾನೆ. ಅದೇ ರೀತಿ ಇನ್ನೊಂದು ವಚನದಲ್ಲಿ;

**"ಆವ ನೇಮವನು ಮಾಡ, ಆವ ಕರ್ಮವನ್ನು ಹೊದ್ದ**
**ಬಿಡಿ ಆವ ಶೀಲವ ಹಿಡಿಯ, ಆವ ತಪಕ್ಕೂ ನಿಲ್ಲ**
**ಆವ ಜಂಜಡಕ್ಕೂ ಹಾರ, ಕೇವಲಾತ್ಮಕನು**
**ಸಾವಯ ನಿರವಂದುವೆನಿಸಿದ ಸಹಜವು ತಾನೆ**
**ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣ"**[6]

ಈ ವಚನದಲ್ಲಿ ಕಲ್ಲಯ್ಯ ಶರಣನು ಪರಮಾತ್ಮನದೇ ಎಲ್ಲಾ ಆದಾಗ 'ಯಾವ ನೇಮವನು ಮಾಡಲಾರ, ಯಾವ ಕರ್ಮವನ್ನು ಅನುಸರಿಸನು, ಯಾವ ಶೀಲವ ಹಿಡಿಯಲಾರ, ಯಾವ ತಪಸ್ಸಿಗೂ ಮತ್ತು ಲೌಕಿಕ ಬದುಕಿನ ಜಂಜಡಕ್ಕೂ ಹಾರಲಾರ, ಕೇವಲ ಆತ್ಮಕನು ಆಗಿರುವ ಶರಣ ಪರಮಾತ್ಮ ಮತ್ತು ಜೀವಾತ್ಮದ ಸಂಬಂಧವಾಗಿರುತ್ತದೆ. ಅದು ಸಹಜವು ನಿಯಮ ಎನ್ನುತ್ತಾನೆ.

ಹಾವಿನಹಾಳ ಕಲ್ಲಯ್ಯ ಅನುಭಾವ ವಚನಗಳನ್ನೂ ರಚಿಸಿದ್ದಾನೆ. ರೇವಣಸಿದ್ದರು, ರುದ್ರಮುನಿದೇವ, ಸಿದ್ಧರಾಮರ ಪ್ರಭಾವ ಹೆಚ್ಚು ಬೀರಿದ್ದರಿಂದ ಆತನ ವಚನಗಳಲ್ಲಿ ಸಾಮಾಜಿಕಕ್ಕಿಂತ ಆಧ್ಯಾತ್ಮಿಕ ಅಥವಾ ಅನುಭಾವದ ವಚನಗಳೇ ಅಧಿಕವಾಗಿವೆ.

**"ಬಾಲಕ ಹಾಲ ಸವಿದಂತೆ, ಮರಳಿನ ಮನದ ನೆನಹಿನಂತೆ**
**ಮೂಗ ಕಂಡ ಕನಸಿನಂತೆ, ಮೈಯರಿಯದ ನೆಳಲಿನಂತೆ**
**ಬಂಜೆಯ ಮನದ ಸ್ನೇಹದಂತೆ,**
**ಮಹಾಲಿಂಗ ಕಲ್ಲೇಶ್ವರನಲ್ಲಿ ಎನಗೆ ಲಿಂಗೈಕ್ಯವು"**[7]

ಈ ವಚನದಲ್ಲಿ ಭಗವಂತನು ಸಾಕ್ಷಾತ್ಕಾರವಾದಾಗ ಅವನ ಸ್ವರೂಪವನ್ನು ವರ್ಣಿಸುವುದು ಅಸಾಧ್ಯವೆನ್ನುತ್ತಾನೆ. ಚಿಕ್ಕ ಮಗು ಹಾಲನ್ನು ಕುಡಿದು ಅದರ ಸವಿಯನ್ನು ವರ್ಣಿಸಲು ಸಾಧ್ಯವಿಲ್ಲ. ಹುಚ್ಚನ ಮನಸ್ಸು ಸ್ನೇಹವನ್ನು ಬಯಸಿದಂತೆ, ಕನಸಿನಲ್ಲಿ ಕಂಡದ್ದನ್ನು ಇನ್ನೊಬ್ಬರ ಜೊತೆ ಹಂಚಿಕೊಳ್ಳಲಾರದ ಮೂಗನಂತೆ, ಬಂಜೆಯ ಮನಸ್ಸಿನ ಸ್ನೇಹದಂತೆ ಹಾಗೆಯೇ ಮಹಾಲಿಂಗ ಕಲ್ಲೇಶ್ವರನ ಸ್ವರೂಪವನ್ನು ವರ್ಣಿಸುವುದು ಅಸಾಧ್ಯ ಎಂದು ಭಕ್ತ ಮತ್ತು ಭಗವಂತನ ನಡುವಿನ ಅನುಭಾವದ ಚಿಂತನೆಯನ್ನು ಶಬ್ದದ ಮುಖಾಂತರ ವಿವರಿಸುವುದು ಅಸಾಧ್ಯ ಎನ್ನುತ್ತಾನೆ.

**"ಹಗಲು ಹಸಿವಿಂಗೆ ಕುದಿದು, ಇರುಳು ನಿದ್ದೆಗೆ ಸಂದು,**
**ಎಚ್ಚತ್ತು ಉಳಿದಾದ ಹೊತ್ತಿನಲ್ಲೆಲ್ಲಾ ಪಂಚೇಂದ್ರಿಯಗಳ ವಿಷಯಕ್ಕೆ ಹರಿದು**
**ಅಯ್ಯಾ, ನಿಮ್ಮ ನೆನೆಯಲರಿಯದ ಪಾಪಿಯಯ್ಯಾ**
**ಅಯ್ಯಾ, ನಿಮ್ಮ ದೆಸೆಯ ನೋಡದ ಕರ್ಮಿಯಯ್ಯಾ**
**ಮಹಾಲಿಂಗ ಕಲ್ಲೇಶ್ವರಾ, ಅಸಗ ನೀರಡಿಸಿ ಸಾವಂತೆ ಎನ್ನ ಭಕ್ತಿ"**[8]

ಶರಣರು ಸಂಪತ್ತಿಗೆ ಆಸೆಪಟ್ಟವರಲ್ಲ, ಅದನ್ನವರು ನಿರಾಕರಿಸಿದರು. ಹಾಗೆಯೇ ಕಲ್ಲಯ್ಯನು ಕೂಡ ಸಂಪತ್ತಿನ ವಿಷಯವಾಗಿ ನಿರಾಕರಣೆಯ ಶರಣನ ಗುಣವನ್ನು ಅರಿಯಬಹುದು. ಅರ್ಥವೆಂಬುದು ಪಾಪ ಎನ್ನುವುದರಲ್ಲಿ ಸಂಪತ್ತಿನ ಬೆನ್ನು ಹತ್ತಬಾರದು ಎನ್ನುವ ಸಾಮಾಜಿಕ ಪ್ರಜ್ಞೆ ಮೂಡಿಸುವ ಅರ್ಥಗರ್ಭಿತವಾದ ವಿಚಾರ ಈ ಕೆಳಗಿನ ವಚನದಲ್ಲಿ ವಿವರಿಸಲಾಗಿದೆ.

**"ಅರ್ಥವೆಂಬುದೆ ಪಾಪ, ಬೇರೆ ಪಾಪವಿಲ್ಲ ಕಂಡಯ್ಯಾ**
**ಪರಿಣಾಮವೆಂಬುದೆ ಪುಣ್ಯ, ಬೇರೆ ಪುಣ್ಯವಿಲ್ಲ ಕಂಡಯ್ಯಾ**
**ಪಾಪಪುಣ್ಯಗಳನತಿಗಳೆದ ಉಳುಮೆ, ಶಿವಯೋಗ**
**ಮಹಾಲಿಂಗ ಕಲ್ಲೇಶ್ವರನು ಬಲ್ಲ ಸಿದ್ಧರಾಮನ ಪರಿಯ"**[9]

ಈ ವಚನದಲ್ಲಿ ಪಾಪ-ಪುಣ್ಯಗಳಿಂದ ಉಳಿದುದೇ ಶಿವಯೋಗವೆನ್ನುತ್ತಾನೆ. 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂಬಂತೆ ಪಾಪ-ಪುಣ್ಯವೆನ್ನುವ ಸರಳ ವೈಚಾರಿಕತೆಯ ನುಡಿಗಳು ಶರಣ ಕಲ್ಲಯ್ಯನ ವಚನದಿಂದ ಹೊರಹೊಮ್ಮಿದೆ.

ಕಲ್ಲಯ್ಯ ತನ್ನ ಮತ್ತೊಂದು ವಚನದಲ್ಲಿ ಲೌಕಿಕವಾಗಿ ದೊರಕುವ ಸ್ಥಾನಮಾನ ಪದವಿಗಳನ್ನು ನಯವಾಗಿ ತಿರಸ್ಕರಿಸುವುದನ್ನು ಕಾಣುತ್ತೇವೆ. ಶರಣನಾದವನು ಸಂಸಾರದಲ್ಲಿದ್ದರೂ ಇಲ್ಲದಂತಿರುವನು. ಅವನಿಗೆ ಧನ-ಕನಕ ಬೇಕಿಲ್ಲ, ಒಡವೆ-ವಸ್ತ್ರ ಬೇಕಿಲ್ಲ, ಯಾವ ಹಿರಿಯ ಪದವಿಯು ಬೇಕಿಲ್ಲ. ಅವನು ಹಂಬಲಿಸುವುದು ಪರಮಾತ್ಮನ ಸನ್ನಿಧಿ ಮತ್ತು ಶರಣರ ಸಂಗವನ್ನು ಬಯಸುವುದು ಈ ಕೆಳಗಿನ ವಚನದಲ್ಲಿ ನೋಡಬಹುದು.

**"ಪರಮ ಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ**
**ಪರಮ ಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ**
**ಎನಗೆ ನಿಮ್ಮ ತೊತ್ತು ಸೇವೆಯೇ ಸಾಕು, ಮಹಾಲಿಂಗ ಕಲ್ಲೇಶ್ವರಾ"**[10]

ಹೀಗೆ ಕಲ್ಲಯ್ಯನು ಶರಣರ ಸಾನಿಧ್ಯ, ಅವರ ಸಂಗವೇ ತನಗೆ ಅತ್ಯಂತ ಪ್ರಿಯವಾದದ್ದು. ನಿಮ್ಮ ನಿಮ್ಮ ಪದವಿಯನ್ನು ಕೊರಳಲ್ಲಿ ಕಟ್ಟಿಕೊಳ್ಳಿ, ಎದೆಯಲ್ಲಿ ಇರಿದುಕೊಳ್ಳಿ. ನನಗೆ ನಿಮ್ಮ ತೊತ್ತು ಸೇವೆಯ ಸೌಭಾಗ್ಯ ಸಾಕು ಎಂಬುದು ಕಲ್ಲಯ್ಯನ ದೃಢವಾದ ನಂಬುಗೆಯಾಗಿದೆ.

ಸಮಾಜದಲ್ಲಿರುವ ಮೂಢನಂಬಿಕೆಗಳಿಗೆ ದಾಸರಾಗಿದ್ದ ಜನರನ್ನು ಶರಣರು ಎಚ್ಚರಿಸಿ ಅರ್ಥವಿಲ್ಲದ ಪದ್ಧತಿಗಳನ್ನು ತಮ್ಮ ವಚನಗಳಲ್ಲಿ ವಿಡಂಬಿಸಿದ್ದಾರೆ. ಅವುಗಳಲ್ಲಿಯ ವಿಡಂಬನೆ ಹಾಗೂ ತೀವ್ರ ಟೀಕೆಗಳ ವಚನಗಳನ್ನು ಬಸವಣ್ಣನವರ ವಚನಗಳೊಂದಿಗೆ ಹೋಲಿಸಿ ನೋಡಿದಾಗ ಕಲ್ಲಯ್ಯನ ವಚನಗಳ ರೀತಿ ನೀತಿಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಬಸವಣ್ಣನವರ ಒಂದು ವಚನದಲ್ಲಿ,

**"ಲೋಕದ ಡೊಂಕ ನೀವೇಕೆ ತಿದ್ದುವಿರಿ?**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ"[11]**

ಎಂದು ಹೇಳಿದರೆ ಕಲ್ಲಯ್ಯನ ವಚನವೂ ಅದನ್ನೇ ಪ್ರತಿಪಾದಿಸುತ್ತದೆ.

**"ಕುಲಹೀನ ಶಿಷ್ಯಂಗೆ ಅನುಗ್ರಹವ ಕೊಟ್ಟು,**
**ತನ್ನ ಪ್ರಾಣಲಿಂಗವ ನಿಕ್ಷೇಪಿಸಿ ಕರ್ಣಮಂತ್ರವ ಹೇಳಿ,**
**ಆ ಶ್ರೀಗುರು ಬಂದು, ಆ ಶಿಷ್ಯನ ಮನೆಯ ಹೊಗಲೊಲ್ಲದೆ**
**ಅಕ್ಕಿ ತುಪ್ಪದ ನೀಡಿಸಿಕೊಂಡುಂಬವನ ಕೇಡಿಂಗೆನ್ನೇವೆನಯ್ಯಾ?**
**ತನ್ನ ಪ್ರಾಣಲಿಂಗವನವರಿಗೆ ಕೊಟ್ಟು**
**ತಾ ಹೋಗೆನೆಂಬ ವ್ರತಗೇಡಿಗಿನ್ನೇವನಯ್ಯಾ?**
**ಅವನ ಧನಕ್ಕೆ ತಂದೆಯಾದನಲ್ಲದೆ, ಅನವಕುಲಕ್ಕೆ ತಂದೆಯಲ್ಲ**
**ಇದು ಕಾರಣ ಮಹಾಲಿಂಗ ಕಲ್ಲೇಶ್ವರಾ**
**ಲಿಂಗವ ಮಾರಿಕೊಂಡುಂಬ ಭಂಗಗಾರರು ಕೆಟ್ಟ ಕೇಡನೇನೆಂಬನಯ್ಯ"[12]**

ಹೆಣ್ಣಿನ ಬಗ್ಗೆ ಹಲವು ಆಸೆ–ಆಮಿಷಗಳನ್ನು ಇಟ್ಟುಕೊಂಡವರು ಮೇಲ್ನೋಟಕ್ಕೆ ಬ್ರಹ್ಮಚಾರಿಗಳಂತೆ ಒಳಗೊಳಗೆ ಕಾಮತೃಷೆಯನ್ನು ಅನುಭವಿಸುವರು ಮತ್ತು ಸನ್ಯಾಸಿಗಳಂತೆ ಕಾಣುವ ಕಾಮಿಗಳನ್ನು ಕಲ್ಲಯ್ಯನು ಈ ಕೆಳಗಿನ ವಚನದಲ್ಲಿ ವಿಡಂಬಿಸಿದ್ದಾನೆ.

**"ಪರಸ್ತ್ರೀಯರ ರೂಪ ಕಾಯದ ಕಣ್ಣಿನಲ್ಲಿ ಕಂಡು**
**ಮನ ಹರಿದು, ತನು ಕರಗಿ ಬೆರಸಿದ ಬಳಿಕ ಸಂಗವಲ್ಲದೇನು ಹೇಳಾ**
**ಮನ ಬೆರೆಸಿ, ತನು ತಳಿತು, ಇಂದ್ರಿಯಂಗಳು ತುಳುಕಿದ ಬಳಿಕ**
**ಸಂಗವಲ್ಲದೇನು ಹೇಳಾ?**
**ಮಹಾಲಿಂಗ ಕಲ್ಲೇಶ್ವರ ಬಲ್ಲ ಸಿದ್ಧರಾಮನ ಪರಿಯ**
**ಮನದ ಹಾದರಿಗಳು ಶಬ್ದ ರುಚಿಕರನು"[13]**

ಮನಸ್ಸಿನಲ್ಲಿ ಹೆಣ್ಣನ್ನು ಬಯಸುವವರನ್ನು ಕುರಿತು ಮನದ ಹಾದರಿಗರು ಎಂದು ಕರೆದಿರುವನು. ಬರಿ ದೈಹಿಕ ಸಂಯೋಗದಿಂದ ಎಸಗಿದ ಹಾದರ ಮಾತ್ರ ಹಾದರಲ್ಲ. ಮನಸ್ಸಿನ ಸಂಯೋಗದಿಂದ ಮಾಡಿದ ಹಾದರವೂ ಅಷ್ಟೇ ಕೆಟ್ಟದ್ದು ಎಂದು ಹೇಳುತ್ತ ಕಾಮುಕ ದೃಷ್ಟಿಯಿಂದ ನೋಡುವ ಕಾಮುಕರನ್ನು ಕಲ್ಲಯ್ಯನು ಟೀಕಿಸಿದ್ದಾನೆ. ಅಲ್ಲದೆ ವೇದವನೋದಿದಡೇನು ಶಾಸ್ತ್ರ ಪುರಾಣಗಳ ಕೇಳಿದಡೇನು? ಲಿಂಗನಿಷ್ಠೆಯಿಲ್ಲದ ಪೂಜೆ ಮಾಡುವುದು ವ್ಯರ್ಥ ಎಂದು ವಿಡಂಬಿಸುತ್ತಾನೆ.

**"ವೇದವನೋದಿದಡೇನು? ಶಾಸ್ತ್ರಪುರಾಣಾಗಮಂಗಳ ಕೇಳಿದಡೇನು?**
**ಗುರುಕಾರುಣ್ಯವಿಲ್ಲದವನು ಲಿಂಗವ ಮುಟ್ಟಿ ಪೂಜಿಸಲಾಗದು**
**ಜಪತಪಧ್ಯಾನ ವಿಭೂತಿ ರುದ್ರಾಕ್ಷಿಯ ಧರಿಸಿದಡೇನು?**
**ಗುರೂಪದೇಶವಿಲ್ಲದೆ ಲಿಂಗವ ಪೂಜಿದಡೇನು?**
**ಅವನು ಪಂಚಮಹಾಪಾತಕನು, ಅವನ ಮುಖವ ನೋಡಲಾಗದು**
**ಇದನರಿದು ಗುರುಕರುಣವಿಡಿದು ಮಾಡುವ ಪೂಜೆಯೇ ಶಿವಂಗೆ ಪ್ರೀತಿ**
**ಇದನರಿಯದೆ ಗುರುಕರುಣವಿಲ್ಲದವ ಶಿವಲಿಂಗಪೂಜೆಯ ಮಾಡಿದನಾದಡೆ**
**ಅಘೋರ ನರಕ ತಪ್ಪದು ಮಹಾಲಿಂಗ ಕಲ್ಲೇಶ್ವರಾ"[14]**

ಗುರುಕಾರುಣ್ಯವಿಲ್ಲದವನು, ಗುರೂಪದೇಶವಿಲ್ಲದೆ ಲಿಂಗವ ಪೂಜಿಸದ ಭಕ್ತನಿಗೆ ಯಾವ ಸಿದ್ಧಿಯೂ ಸಹ ಸಿಗಲಾರದು. ಗುರುಕರುಣವಿಡಿದು ಮಾಡುವ ಪೂಜೆಯೇ ಶಿವನಿಗೆ ಪ್ರೀತಿ. ಇಂತಹ ಶಿವತತ್ವವನು ಅರಿಯದೆ ಶಿವಲಿಂಗಪೂಜೆ ಮಾಡಿದನಾದಡೆ ಆ ಭಕ್ತನಿಗೆ ಅಘೋರವಾದ ನರಕ ತಪ್ಪದು ಎಂದು ಡಾಂಭಿಕ ಭಕ್ತನನ್ನು ವಿಡಂಬಿಸುತ್ತಾನೆ.

ಹೀಗೆ ಹಾವಿನಹಾಳ ಕಲ್ಲಯ್ಯನ ವಚನಗಳು 'ಸಾಮಾಜಿಕ ಸಮಾನತೆ, ಮರ್ತ್ಯಲೋಕದ ಹಿರಿಮೆ, ಆತ್ಮವಿಮರ್ಶೆ, ನಡೆ–ನುಡಿಯಲ್ಲಿ ಒಂದಾಗುವಿಕೆ, ಸಂಸಾರದಲ್ಲಿ ಸಹಿಷ್ಣುತೆ, ಸಾಮಾಜಿಕ ಬದ್ಧತೆ, ವೈಚಾರಿಕತೆ, ಸರ್ವರಿಗೂ ಸಮಬಾಳು, ಸರ್ವರಿಗೂ ಸಮ ಪಾಲು' ಎಂಬುದನ್ನು ಪ್ರತಿಪಾದಿಸುತ್ತವೆ. ಅಲ್ಲದೆ ಮೌಢ್ಯ, ಶ್ರೇಣೀಕೃತ ಸಮಾಜ, ವರ್ಣಬೇಧ, ಶೋಷಣೆ, ಅಸಮಾನತೆ, ವೇದ ಆಗಮ–ಪುರಾಣ, ಬಹುದೇವತಾರಾಧನೆ ಮುಂತಾದವುಗಳನ್ನು ಪ್ರಬಲವಾಗಿ ವಿರೋಧಿಸುತ್ತವೆ.

## ಕೊನೆಟಿಪ್ಪಣಿ

1. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–402
2. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–385
3. ಬಸವಣ್ಣನವರ ವಚನ ಸಂಗ್ರಹ–ಸ.ಸ.ಮಾಳವಾಡ ಪು–93
4. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–378
5. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–376
6. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–274
7. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–392
8. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–401
9. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–369
10. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–389
11. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–385
12. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–379
13. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–385
14. ಸಂಕೀರ್ಣ ವಚನ ಸಂಪುಟ–4(ಸಂ)–ಡಾ.ಬಿ.ಆರ್.ಹಿರೇಮಠ ಪು–392

## ಪರಾಮರ್ಶನ ಗ್ರಂಥಗಳು


- **ಗಿರಡ್ಡಿ ಗೋವಿಂದರಾಜ ( 2018)** : ವಚನ ವಿನ್ಯಾಸ, ಧಾರವಾಡ ಮನೋಹರ ಗ್ರಂಥಮಾಲಾ.
- **ದರ್ಗಾ ರಂಜಾನ್ (2013)** : ಜಾತಿ ವ್ಯವಸ್ಥೆಗೆ ಸವಾಲಾದ ಶರಣರು ಬಳ್ಳಾರಿ ಲೋಹಿಯಾ ಪ್ರಕಾಶನ.
- **ಡಾ. ಶಾಂತಲಾ ಎಸ್. ಮುಕ್ಕುಂದಿಮಠ (2020)** : ಶರಣ ಹಾವಿನಹಾಳ ಕಲ್ಲಯ್ಯ, ಹುಬ್ಬಳ್ಳಿ ಶ್ರೀ ವಿಶ್ವಮತ ಸಾಹಿತ್ಯ ಪ್ರಚಾರ ಸಮಿತಿ.
- **ಸಿಂಪಿ ಲಿಂಗಣ್ಣ (1982)** : ಹಾವಿನಹಾಳ ಕಲ್ಲಯ್ಯ, ವೀರಶೈವ ಭಾರತಿ, ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠ.
- **ಎಂ. ಆರ್. ಶ್ರೀ (2013)** : ವಚನ ಧರ್ಮಸಾರ, ಕನ್ನಡ ಸಾಹಿತ್ಯ ಪರಿಷತ್ತು.
- **ಡಾ. ಎಂ.ಎಂ. ಕಲಬುರ್ಗಿ (1999)** : ಹರಿಹರನ ರಗಳೆಗಳು (ಸಂ.) – ಹಂಪಿ
- **ಶ್ರೀ ಧರೆಪ್ಪ ಅಣ್ಣಪ್ಪ ಶಿರನಾಳ (2018)** : ಶರಣ ಹಾವಿನಹಾಳ ಕಲ್ಲಯ್ಯ, ಚಡಚಣ ರವಿಕಿರಣ ಆಫ್ ಸೆಟ್,
- **ಡಾ. ಮೃತ್ಯುಂಜಯ ರುಮಾಲೆ (2008)** : ಹಾವಿನಹಾಳು ಕಲ್ಲಪ್ಪಯ್ಯಗಳ ಪವಾಡ ಸಾಂಗತ್ಯ, ಹೊಸಪೇಟೆ ಪ್ರಣವ ಪ್ರಕಾಶನ
- **ಡಾ.ಎ.ಜಿ. ಪೂಜಾರ (1991)** : ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಕಲಬುರ್ಗಿ.


APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವ್ಯಕ್ತಿತ್ವ ನಿರಸನ

✍ **ಡಾ. ಕರಿಬಸಪ್ಪ ಎನ್.**, ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ದಾವಣಗೆರೆ.

ಟಿ.ಎಸ್. ಎಲಿಯಟ್ 1919 ರಲ್ಲಿ "ಟ್ರೆಡಿಶನ್ ಅಂಡ್ ದಿ ಇಂಡಿವಿಜುಯಲ್ ಟ್ಯಾಲಂಟ್" ಎಂಬ ಲೇಖನದಲ್ಲಿ ಹೇಳುವ "Impersenal Theory" ಗೂ ವ್ಯಕ್ತಿತ್ವ ನಿರಸನಕ್ಕೂ ಹತ್ತಿರದ ಹೋಲಿಕೆ ಕಂಡುಬರುತ್ತದೆ. ವ್ಯಕ್ತಿತ್ವ ನಿರಸನವೆಂದರೆ ಸಾಧಕನೊಬ್ಬನು ಭಾಷೆ, ಧರ್ಮ, ದೇಶ, ದೇವರು ಮತ್ತು ಸಂಪೂರ್ಣ ಜಗತ್ತಿಗೆ ಅತೀತನಾಗುವುದು. ಈಗಾಗಲೇ ಇತಿಹಾಸ ಪುರಾಣಗಳ ಮುಖಾಂತರ ಉಳಿದಿರುವವರು, ಎಲ್ಲಾ ಮಹನೀಯರು ಒಂದಲ್ಲ ಒಂದು ರೀತಿಯಲ್ಲಿ ವ್ಯಕ್ತಿತ್ವ ನಿರಸನಗೊಳಿಸಿ ಕೊಂಡವರು. ತತ್ವಜ್ಞಾನಿಗಳಾದ ಅರಿಸ್ಟಾಟಲ್, ಅಲ್ಲಮಪ್ರಭು, ಕವಿ ಕುಮಾರವ್ಯಾಸ ಈ ಮೂರು ಜನ ಮಹನೀಯರನ್ನು ಉದಾಹರಣೆಗೆ ನೋಡಿದಾಗ, ಭಿನ್ನ ಅಂಶಗಳಲ್ಲಿ ವ್ಯಕ್ತಿತ್ವ ನಿರಸನಗೊಂಡಿರುವುದು ಕಂಡುಬರುತ್ತದೆ. ಅರಿಸ್ಟಾಟಲ್ ತನ್ನ ಗುರು ಪ್ಲೇಟೋನಲ್ಲಿ ಕಾಣುವ ಉಟೋಪಿಯನ್ ಸಮಾಜದ ಕಲ್ಪನೆಗಳನ್ನು ಒಪ್ಪದಿದ್ದರೂ ಪ್ಲೇಟೋನನ್ನು ಒಬ್ಬ ಚಿಂತಕನನ್ನಾಗಿ ಒಪ್ಪಿಕೊಳ್ಳುವನು, ಬಸವಣ್ಣ ಹೇಳುವ "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ವಾಖ್ಯದ ಸೂಚಿತಾರ್ಥದಲ್ಲಿ ಬಸವಣ್ಣನೂ ಸಹ ತತ್ವಜ್ಞಾನಿಯ ಗುಣವನ್ನು ಪೂರಣಗೊಳಿಸಿಕೊಳ್ಳುತ್ತಾನೆ. ಈ ಜಗತ್ತು ನಶ್ವರ ಮತ್ತು ನಿರಾಶಾವಾದದ ರೀತಿ ತೆಗೆದುಕೊಳ್ಳದೆ ಧನಾತ್ಮಕವಾಗಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಬಗೆ. ಅರಿಸ್ಟಾಟಲ್‌ನಲ್ಲಿ ಬಹಳ ಮುಖ್ಯವಾಗಿ ಗುರುತಿಸಬಹುದು. ಒಂದು ರೀತಿಯಲ್ಲಿ ಬಾಹ್ಯ ಮತ್ತು ಆಂತರಿಕ ನಿಯಮ ಮತ್ತು ಬದ್ಧತೆಗಳಿಂದ ಸರ್ವತಂತ್ರ ಸ್ವತಂತ್ರವಾಗುವುದು.

ಪ್ರಾಕೃತಿಕ ನಿಯಮಗಳನ್ನು ಮೀರದ, ಕುವೆಂಪು ಅವರು ಹೇಳುವ ವಿಶ್ವಮಾನವತ್ವಕ್ಕಿಂತ ಮಿಗಿಲಾದ ಭಾವ. ವಿಶ್ವಮಾನವನೆಂದರೆ ಇಡೀ ಜಗತ್ತಿನಲ್ಲಿ ವಾಸಿಸುವ ಮಾನವ ಕುಲವೊಂದೆ ಮತ್ತು ಸರ್ವರಿಗೂ ಸಮಬಾಳು ಮತ್ತು ಸರ್ವರಿಗೂ ಸಮಪಾಲು ಎಂಬ ಉಪಾದೇಯ ವಾಗುತ್ತದೆ. ಒಂದು ಅರ್ಥಗಂಭೀರವನ್ನು ಪರಿಗಣಿಸಿದಾಗ, ಕುವೆಂಪು ವಿಶ್ವಮಾನವತ್ವ ಅವರ ಕಾವ್ಯಗಳಲ್ಲಿ ಕವಿ ಋಷಿಗೆ ಸಮಾನವೆಂದು ಹೇಳುವಾಗ ತತ್ವಜ್ಞಾನಿಯ ಮಟ್ಟವನ್ನು ತಲುಪುತ್ತದೆ. ಮತ್ತು "ಇಲ್ಲಿ ಹುಗಲಿಲ್ಲ ನಿನಗೆ ಓ ಬಿಯದ ಇದು ಪಕ್ಷಿಕಾಶಿ" ವ್ಯಕ್ತಿತ್ವ ನಿರಸನ ಪ್ರಕ್ರಿಯೆ. "ಇಕ್ಷು ಮಧುರಮನೆ ಮೋಕ್ಷ ಪಕ್ಷಿಯವೊಲ್ ನಾಡಿನಾಡಿಯಲಿ ಹಾಡಿ ಹರಿದು ನಲಿದಾಡಬಹುದು ಬಾ' ಎಂಬಲ್ಲಿ ಆರಂಭವಾಗುತ್ತದೆ. ಅರಿಸ್ಟಾಟಲ್ ನ ಅನುಕರಣ ಸಿದ್ಧಾಂತದಲ್ಲಿ ಬರುವ (IMITATION) ಸಾರ್ವತ್ರಿಕ ಏಕಗುಣ. ಪ್ರಾಣಿ ಸಹಜ ಸ್ವಾಭಾವಿಕ ಎಂಬುದು ನೈಸರ್ಗಿಕ ಸತ್ಯ. ಇಲ್ಲಿ ಅರಿಸ್ಟಾಟಲ್ ನ ವ್ಯಕ್ತಿತ್ವ ನಿರಸನಗೊಳ್ಳುವಿಕೆಯಿದೆ, ಪ್ಲೋಟೋನ 'ದಿ ರಿಪಬ್ಲಿಕ್' ಬಗ್ಗೆ ಅರಿಸ್ಟಾಟಲ್ ಸ್ವಭಾವ ವೈರುಧ್ಯ ಗುಣಗಳ ತುಲನೆಯನ್ನು ಮಾಡಿಯೇ ಅನುಕರಣವನ್ನು ಸಿದ್ಧಾಂತವನ್ನಾಗಿ ರೂಪಿಸಿದನೆಂದು ತೋರುತ್ತದೆ. ಸಾಕ್ರೆಟಿಸ್‌ನ ತಾತ್ವಿಕ ನಿಲುವು ಅರಿಸ್ಟಾಟಲ್‌ನಲ್ಲಿ ಅನುರಣನಗೊಳ್ಳುತ್ತದೆ. ವೈಜ್ಞಾನಿಕ ಚಿಂತನೆಗಳ ಆಧಾರದಲ್ಲಿ ತಾತ್ವಿಕ ಚಿಂತನೆಗಳನ್ನು ರೂಪಿಸಿದ ಮೊದಲ ವಿದ್ವಾಂಸ ಅರಿಸ್ಟಾಟಲ್. ಟಿ.ಎಸ್. ಎಲಿಯಟ್ ಹೇಳುವ "Impersenal Theory" ಯು ವ್ಯಕ್ತಿತ್ವದ ಅಂಶಗಳನ್ನು ನಾವು ಅರಿಸ್ಟಾಟಲ್‌ನಲ್ಲಿ ಆಂಶಿಕವಾಗಿ ಕಾಣಬಹುದು.

ಕುಮಾರವ್ಯಾಸನಲ್ಲಿ ಅದು ಕವಿ ಆರೋಪಿಸಿಕೊಳ್ಳುವುದು "ವೀರನಾರಾಯಣನೇ ಕವಿ ಕುಮಾರವ್ಯಾಸ ಲಿಪಿಕಾರ" ಎಂಬಲ್ಲಿ ಕುಮಾರವ್ಯಾಸನೆಂಬ ನಾರಾಯಣಪ್ಪ ಕಾವಯೋಗಿ ದೇವರು ರಚಿತ ಈ ಕಾವ್ಯ ಎಂದಾಗ, ದೇವರು ಯಾರು. ಎಲ್ಲಿ ಹೇಗೆ ಎಂಬ ಪ್ರಶ್ನೆಗಳಿಗೆ ಸಹಜ ಸ್ವಾಭಾವಿಕ ಉತ್ತರಗಳೇ ಹೊರತು ಕುಮಾರವ್ಯಾಸ ಸ್ಪಷ್ಟಪಡಿಸಿದವುಗಳಲ್ಲ. ಆದ್ದರಿಂದ ದೇವರು ರಚಿಸಿದ ಎಂದು ಕುಮಾರವ್ಯಾಸ ಹೇಳಿದರೂ ಕಾವ್ಯದಲ್ಲಿ ಆ ಅಂಶ ಕ್ವಚಿತ್ ಎನ್ನುವಷ್ಟರ ಮಟ್ಟಿಗಿದೆ. ಜನಪ್ರಿಯ ಮತ್ತು ಜನಮಾನಸವನ್ನು ಸೇರಿ ಕವಿ ನಾರಾಯಣಪ್ಪನಿಂದ ರಚಿತವಾದ ಕಾವ್ಯವಾಗಿದೆ. ವೀರ ನಾರಾಯಣನ ಆಶ್ರಯಿಸಿದ ಕುಮಾರವ್ಯಾಸನು ದೇವರಿಗಿಂತ ಅತೀತ ಎಂದು ಎಲ್ಲಿಯೂ ಹೇಳಿಕೊಳ್ಳದೆಯೇ ಇರುತ್ತಾನೆ.

**"ಮಣಿದು ಬದುಕುವನಲ್ಲ**
**ಹಗೆಯಲಿ ಸೆಣಸಿ ಬಿಡುವವನಲ್ಲ**
**ದಿಟ ಧಾರುಣಿಯ ಸಿರಿಗೆಳಸುವನಲ್ಲಳುಕಿಲ್ಲ ಕಾಯದಲಿ!**
**ರಣ ಮಹೊತ್ಸವವೆನ್ನಮತ, ಕೈದಣಿಯ**
**ಹೊಯ್ದಾಡುವೆನು"**

**(ಕರ್ನಾಟಕ ಭಾರತ ಕಥಾ ಮಂಜರಿ –ಕುಮಾರವ್ಯಾಸ)**

ಮುಂದಿನ ಪದ ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ. ಮೇಲಿನ ಪದ್ಯದಲ್ಲಿ ಕೌರವನ ಔನತ್ಯವನ್ನು ವರ್ಣಿಸಿ ಹೊಯ್ದಾಡುವೆನು ಎಂಬಲ್ಲಿಗೆ ಮುಗಿದು ಕೃಷ್ಣ ಕೆಣಕಿದಲ್ಲದೆ. ಎಂಬಲ್ಲಿ ರಸಾಭಾಸ ಉಂಟಾಗಿದೆ. ಬಹಳಷ್ಟು ಕಡೆಗಳಲ್ಲಿ ಕುಮಾರವ್ಯಾಸನ ಕಥಾನಾಯಕ ಅರ್ಜುನನ ಶೌರ್ಯ ಸಾಹಸಗಳು ದೈವಶಕ್ತಿಯನ್ನು ಹೊಂದಿದ ಕೃಷ್ಣ ಅವನೊಟ್ಟಿಗೆ ಇರುವುದರಿಂದಲೇ ಎಂಬಂತೆ ಭಾಸವಾಗಿ ಬಿಡುತ್ತದೆ. ದೇವರು ಸರ್ವಶಕ್ತನಾಗಿರುವುದರಿಂದ ಸೋಲುವುದಿಲ್ಲವೆಂದು ಸತ್ಯ ಗೊತ್ತಾದ ಮೇಲೆ ಕದನ ಕುತೂಹಲ, ಯುದ್ಧ ಫಲಿತಾಂಶವು ಮೊದಲೇ ತಿಳಿದರೆ ಶೌರ್ಯ ಸಾಹಸಗಳ ವರ್ಣಿತ ಕಾವ್ಯ ರಸಭಂಗವಾಗುವುದು. ವ್ಯಕ್ತಿತ್ವ ನಿರಸನದ ಪೂರ್ಣರೂಪವನ್ನು ಕಾಣಬೇಕಾದರೆ ಅಲ್ಲಮನ ಇಡೀ ವಚನಗಳು, ಅವನ ಬದುಕು, ಜಗತ್ತನ್ನು ಕಾಣುವ ರೀತಿ, ಅಲ್ಲದೆ ದೇವರು, ನಂಬಿಕೆ, ಧರ್ಮ ಮತ್ತು ಸಮಾಜವನ್ನು ಕಟುವಾಗಿ ಚಿಕಿತ್ಸಕ ದೃಷ್ಟಿಯಿಂದ ನಿರ್ಮಲಗೊಳಿಸುವ ಅಲ್ಲಮ ಪ್ರಭುವೇ ರೂಪಕವೆಂದು ತೆಗೆದುಕೊಳ್ಳಬಹುದು.

**ತನ್ನ ಮನದ ಕೊನೆಯ ಮೊನೆಯ ಮೇಲೆ**
**ಅಂಗವಿಲ್ಲದ ರೂಪನ ಕಂಡು ಮರುಳಾದೆನವ್ವ**
**ಆತನ ಕಂಡು ಬೆರಗಾದೆನವ್ವ**
**ಎನ್ನಂತರಂಗದ ಆತ್ಮನೊಳಗೆ(ಮ)**
**ಅನಿಮಿಷ ನಿಜೈಕ್ಯ ಗುಹೇಶ್ವರನಕಂಡು.**

(Note–1 : **ಅಲ್ಲಮನ ವಚನ ಚಂದ್ರಿಕೆ ಪದ್ಯ–20 ಡಾ. ಎಲ್. ಬಸವರಾಜು)**

ಮನ ಮನ ಒಂದಾಗಿ ಅರಿವು ಸಮವಾದ ಬಳಿಕ ಕೊಂಡಾಡಲಿಕ್ಕಿಂಬುಂಟೆ ಹೇಳಾ ! ಶಬ್ದಕ್ಕೆ ತೆರಹಿಲ್ಲ ಎಂದು ಹೇಳುವ

*– 55ನೇ ಪುಟಕ್ಕೆ ಮುಂದುವರೆದುದು*


APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮಾನವನ ಆರೋಗ್ಯ : ಪತಂಜಲಿಯ 'ಯೋಗ ಸೂತ್ರ' ಸುಸೂತ್ರ

✍ **ಡಾ. ಶಂಕರ ಬಾರಿಕೇರ,** ಕನ್ನಡ ಸಹಾಯಕ ಪ್ರಾಧ್ಯಾಪಕರು, ಶ್ರೀ ಜ. ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಹಟ್ಟಿ. ಜಿಲ್ಲೆ ಗದಗ.

ಪ್ರಸ್ತುತ ಮನುಷ್ಯ ಒತ್ತಡದ ಜೀವನದಲ್ಲಿ ಬಿಡುವಿಲ್ಲದ ದುಡಿಮೆಯ ಜೊತೆಗೆ ಆರೋಗ್ಯ ಕಡೆಗಣಿಸಿ ನಾನಾ ರೋಗಗಳಿಗೆ ತುತ್ತಾಗುತ್ತಿದ್ದಾನೆ. ವರ್ತಮಾನದ ತೋರಿಕೆಯ ಬದುಕಿಗೋಳಗಾಗಿ ದೈಹಿಕ ಆರೋಗ್ಯ ನಿರ್ಲಕ್ಷಿಸುವುದರ ಜತೆಗೆ ಮನಸ್ಸಿನ ನೆಮ್ಮದಿ ಕಳೆದುಕೊಂಡಿದ್ದಾನೆ. ಪ್ರಕೃತಿಮಾತೆಯ ಮಹಿಮೆಯರಿಯದೆ ಆಡಂಬರದ ಈ ಆಧುನಿಕ ಪ್ರಪಂಚದಲ್ಲಿ ಹಣ, ಆಸ್ತಿ, ಅಂತಸ್ತು, ಗೌರವ ಗಳಿಕೆಗೆ ಪ್ರಾಮುಖ್ಯತೆ ನೀಡಿ; ಪರಿಶುದ್ಧ ಭಾವನೆಗಳಿಲ್ಲದ ಯಾಂತ್ರಿಕ ಬದುಕು ಸಾಗಿಸುತ್ತಿರುವುದು ಮನುಕುಲದ ದುರಂತ ಸಂಗತಿ ! ಇಂತಹ ಸಂದರ್ಭದಲ್ಲಿ ಮನುಷ್ಯನ ಆರೋಗ್ಯ ಸಂಬಂಧವಾಗಿ ವಿವೇಚಿಸಿದ ಪತಂಜಲಿಯ 'ಯೋಗ ಸೂತ್ರ'ವು ತುಂಬ ಮಹತ್ವ ಪಡೆದಿದೆ. ಯೋಗ ಮೂಲತಃ ಆರೋಗ್ಯ ಸಂಬಂಧಿತ ಅತ್ಯಂತ ಪ್ರಾಚೀನ ಕಲೆಯಾಗಿದೆ. ಇದು ಆರೋಗ್ಯಕರ ದೇಹದೊಳಗೆ ಆರೋಗ್ಯಕರ ಮನಸ್ಸನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಯೋಗ ಮಾನವನ ದೈಹಿಕ, ಆಧ್ಯಾತ್ಮಿಕ, ಮಾನಸಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಹೆಚ್ಚಿಸುತ್ತದೆ. ಯೋಗ ಎನ್ನುವ ಪದ ಸಂಸ್ಕೃತದ ಮೂಲ ಧಾತುವಾದ 'ಯುಜ್'ನಿಂದ ಬಂದಿದ್ದು; ಕೂಡಿಸು, ಕೇಂದ್ರಿಕರಿಸು ಎನ್ನುವ ಅರ್ಥವನ್ನು ನೀಡುತ್ತದೆ. ಎರಡುಸಾವಿರ ವರ್ಷಗಳ ಹಿಂದೆಯೇ ಭರತಖಂಡದ ಪತಂಜಲಿ ಮಹರ್ಷಿಯು ಮನುಕುಲಕ್ಕೆ ಯೋಗದ ಅಗತ್ಯತೆ ಅರಿತು, ಸ್ವತಃ ಬದುಕಿಗೆ ಅಳವಡಿಸಿ; ಪ್ರಾಮುಖ್ಯತೆ ಹೆಚ್ಚಿಸಿದ್ದಾನೆ. ಈಗ 'ಯೋಗ'ಅಮೂಲ್ಯ ಸಂಪತ್ತು ಇಡೀ ಜಗತ್ತಿಗೆ ಪರಿಚಯವಾಗಿ, ಮಾನವರು ಸಮಗ್ರ ಸ್ವಾಸ್ಥ್ಯ(ಆರೋಗ್ಯ) ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಪತಂಜಲಿ ಮಹರ್ಷಿಯನ್ನು ಯೋಗ ಸೂತ್ರದ ಸಂಸ್ಥಾಪಕ ಎನ್ನಲಾಗಿದೆ. ಈ ಮಹರ್ಷಿಯು ಪ್ರಾಚೀನ ಕಾಲದ ಶ್ರೇಷ್ಠ ಆಧ್ಯಾತ್ಮಿಕ ಸಾಧಕ ಮತ್ತು ಮನೋವಿಜ್ಞಾನಿಯಾಗಿದ್ದು, ಆಧ್ಯಾತ್ಮಿಕ ಚೈತನ್ಯವನ್ನು ಯೋಗ ಸೂತ್ರಗಳಲ್ಲಿ ವ್ಯವಸ್ಥಿತವಾಗಿ ಬಣ್ಣಿಸಿದ್ದಾನೆ. ಪ್ರತಿಯೊಬ್ಬರ ಆತ್ಮವು ಜೀವನದ ಹಾದಿಯಲ್ಲಿ ಅನಂತ ಚೇತನದತ್ತ ಸಾಗಬೇಕೆಂದು ಜ್ಞಾನಿ ಪತಂಜಲಿ ವ್ಯಾಖ್ಯಾನಿಸಿದ್ದಾನೆ. ಮತ್ಸ್ಯ, ವಾಯು ಮತ್ತು ಸ್ಕಂದ ಪುರಾಣಗಳಲ್ಲಿ ಪತಂಜಲಿಯ ಬಗ್ಗೆ ಉಲ್ಲೇಖವಿರುವುದರಿಂದ ವ್ಯಾಸ ಮತ್ತು ಪಾಣಿನಿಯ ಅವಧಿಯಲ್ಲಿದ್ದಿರಬಹುದು. ಈತನ 'ಯೋಗ ಸೂತ್ರ' ಗ್ರಂಥವು ಹಿಂದು ತತ್ತ್ವಶಾಸ್ತ್ರದ ಪ್ರಸಿದ್ಧ ದರ್ಶನಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಇದು ನಾಲ್ಕು ಅಧ್ಯಾಯಗಳಲ್ಲಿ 196 ಸಂಸ್ಕೃತ ಸೂತ್ರಗಳನ್ನು ಅಳವಡಿಸಿಕೊಂಡಿದೆ. ಯೋಗ ಸೂತ್ರದಲ್ಲಿ ಸಮಾಧಿಪಾದ, ಸಾಧನಾ ಪಾದ, ವಿಭೂತಿ ಪಾದ ಮತ್ತು ಕೈವಲ್ಯ ಪಾದ ಎನ್ನುವ ನಾಲ್ಕು ಅಧ್ಯಾಯಗಳಿವೆ.

1. **ಸಮಾಧಿ ಪಾದ :** ಇದು ಪತಂಜಲಿ ಯೋಗ ಸೂತ್ರಗಳಲ್ಲಿ ಮೊದಲ ಅಧ್ಯಾಯವಾಗಿದೆ. ಇದರಲ್ಲಿ ಯೋಗ ಎಂದರೇನು? ಅದರ ಉದ್ದೇಶವನ್ನು ಉಲ್ಲೇಖಿಸಲಾಗಿದೆ. ಯೋಗವನ್ನು ಮಾಡುವ ವಿವಿಧ ವಿಧಾನಗಳನ್ನೂ ಕೂಡ ಇಲ್ಲಿ ಹೇಳಲಾಗಿದೆ.
2. **ಸಾಧನಾ ಪಾದ :** ಯೋಗ ಸೂತ್ರದ ಎರಡನೆಯ ಪಾದವಾಗಿದ್ದು, ಇದರಲ್ಲಿ ಯೋಗದ ಗುರಿಗಳನ್ನು ಹೇಗೆ ಸಾಧಿಸಬೇಕೆನ್ನುವುದರ ಪ್ರಾಯೋಗಿಕ ವಿಧಾನಗಳನ್ನು ಹೇಳಲಾಗಿದೆ. ಜತೆಗೆ ಅಷ್ಟಾಂಗ ಯೋಗವನ್ನು ಕೂಡ ತಿಳಿಸಲಾಗಿದೆ.
3. **ವಿಭೂತಿ ಪಾದ :** ಯೋಗ ಸೂತ್ರದ ಈ ಮೂರನೇ ಪಾದದಲ್ಲಿ ಯೋಗದಿಂದ ಪಡೆದ ಫಲಿತಾಂಶಗಳನ್ನು, ಶಕ್ತಿ ಮತ್ತು ಅಭಿವ್ಯಕ್ತಿಗಳ ಬಗ್ಗೆ ಉಲ್ಲೇಖಿಸಲಾಗಿದೆ.
4. **ಕೈವಲ್ಯ ಪಾದ :** ಇದು ಪತಂಜಲಿ ಯೋಗ ಸೂತ್ರದ ಕೊನೆಯ ಅಧ್ಯಾಯವಾಗಿದ್ದು; ಭಕ್ತಿಯ ಮಾರ್ಗ, ಕರ್ಮದ ಹಾದಿ ಮತ್ತು ಜ್ಞಾನದ ಪರಿಯನ್ನು ಒಳಗೊಂಡಿದೆ.

## ಯೋಗಾಸನದ ಅರ್ಥ

ಯೋಗ ಎಂಬ ಸಂಸ್ಕೃತ ಶಬ್ದವು 'ಯುಜ್' ಧಾತುವಿನಿಂದ ಉದಯಿಸಿದ್ದು, ಹಾಗೆಂದರೆ ಬಂಧಿಸು, ಸೇರಿಸು, ಕೇಂದ್ರೀಕರಿಸು, ಜೋಡಿಸುವುದು, ಕೂಡಿಸುವುದು ಎಂದರ್ಥವಾಗುತ್ತದೆ. ಆಸನವೆಂದರೆ– ಪತಂಜಲಿ ಮಹರ್ಷಿಗಳು ಹೇಳುವಂತೆ ಸ್ಥಿರವಾಗಿ, ಸುಖಕರವಾಗಿ, ದೀರ್ಘಕಾಲ ಒಂದೇ ಭಂಗಿಯಲ್ಲಿ ಶರೀರವನ್ನು ಇರಿಸಿಕೊಳ್ಳುವುದೇ 'ಆಸನ'ವಾಗಿದೆ. ಯೋಗಾಸನದ ಸಾಂಪ್ರದಾಯಿಕ ಅರ್ಥ ನೋಡುವುದಾದರೆ, ಪರಮಾತ್ಮನೊಡನೆ ಆತ್ಮವನ್ನು ಕೂಡಿಸುವುದು ಎಂದರ್ಥವಾಗುತ್ತದೆ. ಆಧುನಿಕ ಪರಿಭಾಷೆಯಲ್ಲಿ "ಬಿಂದು, ಸಿಂಧುವಾಗುವಂತೆ ಸ್ವಾರ್ಥಪೂರಿತ ವ್ಯಷ್ಟಿ ಪ್ರಜ್ಞೆ ಕರಗಿ; ಸಮಷ್ಟಿ ಪ್ರಜ್ಞೆಯಲ್ಲಿ ಒಂದಾಗುವುದೇ ಯೋಗ." ಮನುಷ್ಯನ ಬದುಕಲ್ಲಿ ಯೋಗವೆಂಬುದು ಕೇವಲ ಆಸನ ಮತ್ತು ಪ್ರಾಣಾಯಾಮಗಳಿಗೇ ಸೀಮಿತವಾಗಿಲ್ಲ. ದೈಹಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯೇ ಇದರ ಮುಖ್ಯ ಉದ್ದೇಶವಾಗಿದೆ.

**ಯೋಗ ವ್ಯಾಖ್ಯೆಗಳು :** ಯೋಗವನ್ನು ಕುರಿತಂತೆ ಹಲವಾರು ವ್ಯಾಖ್ಯೆಗಳು ಬಹು ಹಿಂದಿನಿಂದಲೂ ಲಭ್ಯವಿದೆ. ಕೆಲವನ್ನು ಇಲ್ಲಿ ವಿವೇಚಿಸಿದೆ –

- "ಯೋಗಃ ಕರ್ಮಸು ಕೌಶಲಂ" ಅಂದರೆ ಕೆಲಸದಲ್ಲಿ ನೈಪುಣ್ಯತೆ ಅಥವಾ ಕುಶಲತೆ ಪಡೆಯುವುದೇ ಯೋಗವೆನಿಸಿಕೊಳ್ಳುತ್ತದೆ.
- "ಸಮತ್ವಂ ಯೋಗಮುಚ್ಯತೇ" ಅಂದರೆ ಜೀವನದಲ್ಲಿ ಕಷ್ಟ ಸುಖ, ನೋವು–ನಲಿವು, ಸಹಿ–ಕಹಿ, ಕತ್ತಲೆ–ಬೆಳಕು ಇತ್ಯಾದಿ ದ್ವಂದ್ವಗಳನ್ನು ಹಾಗು ಸಮಾನವಾಗಿ ಸ್ವೀಕರಿಸುವ ಮನೋಸ್ಥೈರ್ಯ ರೂಪಿಸಿಕೊಳ್ಳುವುದೇ ಯೋಗ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

- "ಯೋಗಶ್ಚಿತ ವೃತ್ತಿ ನಿರೋಧ" ಅಂದರೆ ಚಿತ್ತವೃತ್ತಿ ನಿರೋಧ. ಪ್ರಮಾಣ, ವಿಪರ್ಯಾಯ, ವಿಕಲ್ಪ, ನಿದ್ರಾ, ಸ್ಮೃತಿ ಎಂಬ ಚಿತ್ತವೃತ್ತಿಗಳು ಮತ್ತು ಅವುಗಳ ನಿಯಂತ್ರಣವೇ ಯೋಗ.
- "ಮನಃ ಪ್ರಶಮನೋಪಾಯಃ ಯೋಗಃ ಇತ್ಯಭಿಧೀಯತೇ" ಅಂದರೆ ಮನಸ್ಸನ್ನು ನಿಯಂತ್ರಿಸುವ, ಶಾಂತಗೊಳಿಸುವ ಉಪಾಯವೇ ಯೋಗ. ಇದರಲ್ಲಿ ಗುರಿ ತಲುಪಲು ವಿವಿಧ ಮಾರ್ಗಗಳಿವೆ. ಜೀವಾತ್ಮ, ಪರಮಾತ್ಮ ಸಂಯೋಗ ಹೊಂದಲು ಬಹು ಬಗೆಯ ದಾರಿ(ಪಥ)ಗಳಿವೆ.

**ಯೋಗದ ಪಥಗಳು :** ಇಲ್ಲಿ ನಾಲ್ಕು ಮುಖ್ಯ ಪಥಗಳಿವೆ. ಅವುಗಳೆಂದರೆ –

ಅ. **ಜ್ಞಾನಯೋಗ :** ವೇದ, ಜ್ಞಾನದ ಮೂಲಕ ಯೋಗವನ್ನು ಪಡೆಯುವುದಕ್ಕಾಗಿ ಜ್ಞಾನಯೋಗ ಎನ್ನುವರು. ಉಪನಿಷತ್ತು, ಪುರಾಣ, ಆಧ್ಯಾತ್ಮಿಕ ವಿಷಯಗಳ ಅಧ್ಯಯನದ ಮೂಲಕ ಸಜ್ಜನರ ಸಹವಾಸ, ಸತ್ಸಂಗ, ತರ್ಕ ಮಾರ್ಗದಲ್ಲಿ ಮುಂದುವರೆದು ಗುರಿ ತಲುಪುವುದಾಗಿದೆ. ದೇವರನ್ನು ತನ್ನ ಆಲೋಚನೆ ಹಾಗೂ ವಿವೇಚನೆಗಳ ಮೂಲಕ ತಿಳಿಯುವ ಪ್ರಯತ್ನವಾಗಿದೆ.

ಆ. **ಭಕ್ತಿಯೋಗ :** ಭಕ್ತಿಯ ಮಾರ್ಗದಿಂದ ಯೋಗ ಸಾಧನೆಗೆ ಭಕ್ತಿಯೋಗ ಎನ್ನುವರು. ದೇವರು, ಧರ್ಮ ಇತ್ಯಾದಿಗಳ ಬಗ್ಗೆ ಗಮನ ನೀಡಬಲ್ಲವರಾಗಿದ್ದಲ್ಲಿ ಭಕ್ತಿಯೋಗದ ಮಾರ್ಗದಲ್ಲಿ ಮುನ್ನಡೆಯ ಗುರಿ ಸೇರಬಹುದು. ಭಾವಾವೇಶಕ್ಕೊಳಗಾಗುವ ಮಾನವನು ದೇವರ ಮೇಲೆ ಅಪಾರವಾದ ಪ್ರೀತಿ–ಆಸಕ್ತಿಗಳನ್ನು ತೋರಿಸಲು ಅಭ್ಯಾಸಗೈಯ್ಯುತ್ತಾನೆ. ಈ ಮಾರ್ಗವನ್ನು ಭಕ್ತಿಯೋಗವೆನ್ನುತ್ತಾರೆ.

ಇ. **ಕರ್ಮಯೋಗ :** ತನ್ನ ನಿಸ್ವಾರ್ಥ ಕಾಯಕದ ಮೂಲಕ ದೇವರನ್ನು ಒಲಿಯಲು ಪ್ರಯತ್ನಿಸುವುದೇ ಕರ್ಮಯೋಗ. ನಾವು ಮಾಡುವ ಕೆಲಸಗಳಿಗೆಲ್ಲಾ ಫಲ ನಿರೀಕ್ಷಿಸುವ ಆಶಾಭಾವನೆಯಿಂದ ಹೊರಬಂದು ನಿರ್ಮಲ ಮನಸ್ಸಿನಿಂದ ಅಚ್ಚುಕಟ್ಟಾಗಿ ಮಾಡುವ ಕೆಲಸವೇ ಇದಾಗಿದೆ. ಮಾಡುವ ಕೆಲಸದಲ್ಲಿ ವ್ಯಾಮೋಹವಿಲ್ಲದೆ ಇದ್ದಾಗ ಮನಸ್ಸು ಕರ್ಮಗಳ ಬಂಧನದಿಂದ ವಿಮುಕ್ತವಾಗಿರುವುದು. ಆಗ ಮನಸ್ಸು ಸ್ಥಿರತೆ ಮತ್ತು ಶಾಂತಿಯಿಂದ ಕೂಡಿರುವುದೇ ಕರ್ಮಯೋಗ.

ಈ. **ರಾಜಯೋಗ :** ನಮ್ಮ ಸ್ವಭಾವ, ನಡಾವಳಿಗಳ ಮೂಲ ನಿಯಂತ್ರಣ ಕೇಂದ್ರವಾಗಿರುವ ಉಸಿರಾಟದ ಮೂಲಕ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುವ ಮಾರ್ಗವೇ ರಾಜಯೋಗ. ಮನಸ್ಸನ್ನು ಪಳಗಿಸಲು, ನಿಯಂತ್ರಿಸಲು ಹಂತ ಹಂತವಾಗಿ ಸಾಧನಾ ಪಥದಲ್ಲಿ ಮೇಲೇರಬೇಕಾಗುತ್ತದೆ. ಅದಕ್ಕಾಗಿ ಪತಂಜಲಿ ಮಹರ್ಷಿಗಳು ರಾಜಯೋಗದಲ್ಲಿ ಎಂಟು ಮೆಟ್ಟಿಲುಗಳನ್ನು ಸೂಚಿಸಿದ್ದಾರೆ. ಆದ್ದರಿಂದಲೇ ರಾಜಯೋಗವನ್ನು ಅಷ್ಟಾಂಗಯೋಗ (ಅಷ್ಟಾಂಗ ಮಾರ್ಗ) ಎಂದು ಕರೆಯಲಾಗಿದೆ. ತನ್ನ ಸಂಕಲ್ಪ ಶಕ್ತಿ ಅಥವಾ ಇಚ್ಛಾ ಶಕ್ತಿಯನ್ನು ಬಳಸಿ, ಮನಸ್ಸನ್ನು ಪ್ರಶಮನಗೊಳಿಸುವ ಮಾರ್ಗವೇ ರಾಜಯೋಗವೆನಿಸುತ್ತದೆ.

ಪರಿಪೂರ್ಣ ಆರೋಗ್ಯದಿಂದ ಮಾನವನ ಜೀವಮಾನ ಕೇವಲ ಕಾಲಮಾಪನದಿಂದಷ್ಟೇ ಅಲ್ಲ, ಗುಣಮಾಪನದಿಂದಲೂ ಉಜ್ವಲವಾಗುತ್ತದೆ. ಇಂತಹ ಆರೋಗ್ಯವನ್ನು ಪಡೆಯಲು ಸಾಧ್ಯವೇ ? ಎರಡು ಸಾವಿರ ವರ್ಷಕ್ಕೂ ಹಿಂದೆ ಪತಂಜಲಿ ಮಹರ್ಷಿಗಳು ಈ ಪ್ರಶ್ನೆಗೆ ಸಮರ್ಪಕವಾದ, ವೈಜ್ಞಾನಿಕ ತಳಹದಿಯುಳ್ಳ ಪರಿಹಾರವನ್ನು ಸೂಚಿಸಿದ್ದಾರೆ. ಪತಂಜಲಿ ಮಹರ್ಷಿಯು ತಮ್ಮ ಯೋಗ ಸೂತ್ರಗಳಲ್ಲಿ ಸೂಚಿತವಾದ ಪರಿಹಾರವೇ – ಅಷ್ಟಾಂಗ ಯೋಗ. ಪತಂಜಲಿಯ ಯೋಗ ಸೂತ್ರವು ರಾಜ ಯೋಗ ಅಥವಾ ಶ್ರೀಮಂತ ಯೋಗವೆಂದು ಖ್ಯಾತಿಗಳಿಸಿದೆ. ಯೋಗ ಸೂತ್ರದ ಎರಡನೇ ಅಧ್ಯಾಯವಾದ ಸಾಧನಾ ಪಾದದಲ್ಲಿ ಇದರ ಎಂಟು ಸೂತ್ರಗಳು ಉಲ್ಲೇಖವಾಗಿವೆ. ಇವುಗಳೇ ಅಷ್ಟಾಂಗ ಯೋಗಗಳೆಂದು ಪ್ರಸಿದ್ಧವಾಗಿವೆ. ಅಷ್ಟಾಂಗ ಯೋಗವೆಂದರೆ ಎಂಟು ಅಂಗಗಳುಳ್ಳದ್ದು. ಅವುಗಳೆಂದರೆ–

- **ಯಮ :** ಸಾಮಾಜಿಕ ಬದ್ಧತೆಗಳು (ಸಂಸ್ಕೃತಿ) ಮತ್ತು ವಿಧಿ ನಿಷೇಧಗಳು (ಅಹಿಂಸೆ, ಸತ್ಯ, ಆಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಅನುಸರಿಸುವುದು)
- **ನಿಯಮ :** ವೈಯಕ್ತಿಕ ಕಟ್ಟಳೆಗಳು (ಸ್ವಭಾವ) ಮತ್ತು ಶೌಚ, ಸಂತೋಷ, ಸ್ವಾಧ್ಯಾಯ, ತಪಸ್ಸು.
- **ಆಸನ :** ದೇಹ ಮತ್ತು ಮನಸ್ಸಿಗೆ ಸ್ಥಿರತೆ ನೀಡುವ ಭಂಗಿ ಹಾಗು ಶರೀರದ ನಿಲುವುಗಳು.
- **ಪ್ರಾಣಾಯಾಮ :** ಪ್ರಾಣಶಕ್ತಿಯ ನಿಯಂತ್ರಣ (ಸ್ಥೂಲವಾಗಿ ಹೇಳುವುದಾದರೆ– ಉಸಿರಾಟದ ನಿಯಂತ್ರಣ) ಮತ್ತು ಉಸಿರಾಟದ ವಿಶೇಷ ವಿಧಿಗಳು.
- **ಪ್ರತ್ಯಾಹಾರ :** ಇಂದ್ರಿಯಗಳನ್ನು ಅನ್ಯ ವಿಷಯಗಳಿಂದ ಸೆಳೆದು ಅಂತರ್ಮುಖವಾಗಿಸುವುದು ಮತ್ತು ಮನಸ್ಸನ್ನು ಒಂದು ವಸ್ತುವಿನಿಂದ ಹಿಂದೆ ತೆಗೆದುಕೊಳ್ಳುವುದು.
- **ಧಾರಣ(ಏಕಾಗ್ರತೆ) :** ಮನಸ್ಸನ್ನು ಒಂದು ವಸ್ತು ಅಥವಾ ವಿಷಯದಲ್ಲಿ ಏಕಾಗ್ರ ಮಾಡುವುದು ಅಥವಾ ಕೇಂದ್ರೀಕರಣಗೊಳಿಸುವುದು.
- **ಧ್ಯಾನ :** ಪ್ರಯತ್ನ ಸಹಿತವಾಗಿ ಮನಸ್ಸನ್ನು ಒಂದು ವಸ್ತು ಅಥವಾ ವಿಷಯದಲ್ಲಿ ದೀರ್ಘಕಾಲ ತಲ್ಲೀನ ಮಾಡುವುದು.
- **ಸಮಾಧಿ :** ವಸ್ತು–ವ್ಯಕ್ತಿಯ ಭಾವ ಅಳಿಯುವುದು ಮತ್ತು ಧ್ಯಾನದ ವಸ್ತುವಿನೊಡನೆ ಒಂದಾಗುವುದು.

ಮೇಲಿನವುಗಳನ್ನು ಎಂಟು ಹಂತಗಳೆಂದೂ, ಒಂದಾದ ನಂತರ ಮತ್ತೊಂದನ್ನು ತಲುಪಬೇಕೆನ್ನುವ ಅರ್ಥವಲ್ಲ. ಇವು ಎಂಟು ಅಂಗಗಳಾಗಿದ್ದು, ಪರಸ್ಪರ ಪೂರಕ ಮತ್ತು ಪೋಷಕವಾಗಿವೆ. ಮೊದಲು ಮೂರು ಹಂತಗಳಲ್ಲಿ ಪರೋಕ್ಷವಾಗಿ ಪ್ರಶಮನ(ನಿಯಂತ್ರಣ) ಮಾಡಲಾಗುವುದು. ಇದನ್ನು 'ಬಹಿರಂಗ ಯೋಗ' ಎನ್ನುತ್ತಾರೆ. (1 ರಿಂದ 3) ನಡುವಿನ ಎರಡು ಹಂತಗಳು ಅಂತರಂಗ ಬಹಿರಂಗ ಯೋಗಗಳೆರಡೂ ಹೌದು. (4 ರಿಂದ 5) ಕೊನೆಯ ಮೂರು ಹಂತಗಳು ಮನಸ್ಸನ್ನು ನೇರವಾಗಿ ಹಿಡಿಯಲಾಗುವುದು. ಇದನ್ನು 'ಅಂತರಾಗ ಯೋಗ' ಎನ್ನಲಾಗಿದೆ. ಅಷ್ಟಾಂಗ ಯೋಗದ ಅಭ್ಯಾಸ ಎಳೆಯ ವಯಸ್ಸಿನಲ್ಲಿಯೇ ಪ್ರಾರಂಭವಾಗಬೇಕು. ಇದು ಜೀವನದ ಅವಿಭಾಜ್ಯ ಅಂಗವಾದರೆ ಸಂಪೂರ್ಣ ಆರೋಗ್ಯ ಮತ್ತು ಉತ್ತಮ ವ್ಯಕ್ತಿತ್ವ ನಿರ್ಮಾಣ ಸಾಧ್ಯವಾಗುತ್ತದೆ.

ಸ್ನಾಯು, ಆಸ್ಥಿ, ನರಜಾಲ, ರಕ್ತನಾಳಗಳು ಮತ್ತು ವಿವಿಧ ಅಂಗಾಂಗಗಳ ಸಂಕೀರ್ಣ ಸಂಯೋಜನೆಯೇ ದೇಹ. ನಮ್ಮ ಎಲ್ಲ ಗ್ರಹಿಕೆಗಳಿಗೆ ಮೂಲವೇ ಮನಸ್ಸು. ನಮ್ಮ ಇರುವಿಕೆಗೆ ಅತ್ಯಾವಶ್ಯಕವಾದ ಚೈತನ್ಯವೇ ಆತ್ಮ. ಈ ದೇಹ, ಮನಸ್ಸು ಮತ್ತು ಆತ್ಮಗಳು ಪ್ರತ್ಯೇಕಿಸಲ್ಪಡುವಂತಹ ವ್ಯವಸ್ಥೆಗಳಲ್ಲ. ಅವು ಒಂದಕ್ಕೊಂದು ಪೂರಕವಾಗಿರುವ, ಒಂದರೊಳಗಿನ್ನೊಂದು ಹಾಸುಹೊಕ್ಕಿರುವ ಸಮಗ್ರ, ಪರಿಪೂರ್ಣ ವ್ಯವಸ್ಥೆ. ಇದನ್ನು ಹೊಂದಿರುವ ಮಾನವನ ಜೀವನ ಅರ್ಥಪೂರ್ಣವಾಗಬೇಕಾದರೆ ಆತ ಸಾಮಾಜಿಕ ಜೀವಿ ಎಂಬುದನ್ನೂ ಮನಗಾಣಬೇಕು. ಈ ದೃಷ್ಟಿಕೋನದಿಂದ ಪರಿಪೂರ್ಣ ಆರೋಗ್ಯದ ನಾಲ್ಕು ಆಯಾಮಗಳನ್ನು ಗುರುತಿಸಬಹುದು. ಅವುಗಳೆಂದರೆ– ದೈಹಿಕ, ಮಾನಸಿಕ, ಆಧ್ಯಾತ್ಮಿಕ ಹಾಗು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಾಮಾಜಿಕ ಆರೋಗ್ಯ. ಮನುಷ್ಯನ ಬಾಳಿನಲ್ಲಿ ಆರೋಗ್ಯದ ಈ ನಾಲ್ಕು ಆಯಾಮಗಳು ಪ್ರತ್ಯೇಕವಲ್ಲ. ಒಂದಕ್ಕೊಂದು ಹೊಂದಿಕೊಂಡಿರುವಂತಹಗಳಾಗಿವೆ.

**ದೈಹಿಕ ಆರೋಗ್ಯ :** ಶರೀರದ ಎಲ್ಲ ಅಂಗಾಂಗಗಳ ಕಾರ್ಯಕ್ಷಮತೆ ಉತ್ತಮವಾಗಿದ್ದು, ಎಲ್ಲ ಐಚ್ಛಿಕ ಮತ್ತು ಅನೈಚ್ಛಿಕ ಕ್ರಿಯೆಗಳು ಸರಿಯಾಗಿ ನಡೆಯುವುದಾಗಿದೆ. ದೈಹಿಕ ಆರೋಗ್ಯ ಉತ್ಸಾಹಯುಕ್ತ ಚಟುವಟಿಕೆಯ ಜೀವನಕ್ಕೆ ತಳಹದಿ. ರೋಗ ನಿರೋಧಕ ಶಕ್ತಿ ಗರಿಷ್ಠ ಪ್ರಮಾಣದಲ್ಲಿರುವುದು.

**ಮಾನಸಿಕ ಆರೋಗ್ಯ :** ಮನಸ್ಸಿನ ಪ್ರಸನ್ನತೆಯನ್ನು ಎಲ್ಲ ಸಂದರ್ಭಗಳಲ್ಲಿಯೂ ಕಾಯ್ದುಕೊಳ್ಳುವುದಾಗಿದೆ. ದೈಹಿಕ ಆರೋಗ್ಯ ಎಷ್ಟೇ ಉತ್ತಮವಾಗಿದ್ದರೂ, ಮನಸ್ಸಿಗೆ ಶಾಂತಿ ಇಲ್ಲದಿದ್ದರೆ ಬದುಕು ದುಸ್ತರವಾಗುತ್ತದೆ. ಮನಸ್ಸಿನ ಶಾಂತಿ ಕದಡಲು ಮುಖ್ಯ ಕಾರಣ ಒತ್ತಡಗಳನ್ನು ಸರಿಯಾಗಿ ನಿರ್ವಹಿಸದಿರುವುದು. ಯಾವುದೇ ರೀತಿಯ ಬದಲಾವಣೆಯ ಸ್ಪಂದನಕ್ಕೆ ಉಂಟಾಗುವ ಆಂತರಿಕ ಪ್ರತಿಕ್ರಿಯೆಯೇ ಮಾನಸಿಕ ಒತ್ತಡ. ಜೀವನದಲ್ಲಿ ಬದಲಾವಣೆಗಳು ಅನಿವಾರ್ಯ. ಆದರೆ ಇವುಗಳಿಗೆ ಸರಿಯಾಗಿ ಪ್ರತಿಕ್ರಿಯಿಸುವುದರಿಂದ ಒತ್ತಡರಹಿತ ಶಾಂತ ಮನಸ್ಸನ್ನು ಹೊಂದಲು ಸಾಧ್ಯವಾಗುತ್ತದೆ. ಒತ್ತಡಗಳಿಗೆ ಪ್ರತಿರೋಧವನ್ನು ಬೆಳೆಸಿಕೊಳ್ಳುವುದೇ ಮನೋನಿರೋಧ ಶಕ್ತಿ. ಇದು ಮಾನಸಿಕ ಆರೋಗ್ಯದ ತಳಹದಿಯಾಗಿದೆ.

**ಆಧ್ಯಾತ್ಮಿಕ ಆರೋಗ್ಯ :** ಮನುಷ್ಯ ತನ್ನ ನಿಜ ಸ್ವರೂಪವನ್ನು ಅರಿತುಕೊಂಡು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು. ಮಾನಸಿಕ ಆರೋಗ್ಯದ ಸ್ಥಿರತೆ ಆಧ್ಯಾತ್ಮಿಕ ಆರೋಗ್ಯಕ್ಕೆ ಪೋಷಕ. ಸ್ಥೂಲವಾಗಿ, ಆಧ್ಯಾತ್ಮಿಕ ಆರೋಗ್ಯವೆಂದರೆ ತನ್ನನ್ನು ತಾನು ಅರಿಯುವುದಾಗಿದೆ.

**ಸಾಮಾಜಿಕ ಆರೋಗ್ಯ :** ಮಾನವರಿಂದಲೇ ನಿರ್ಮಿತವಾಗಿರುವ ಸಮಾಜದ ಸಾಮರಸ್ಯಕ್ಕೆ ಧಕ್ಕೆ ಬರದಂತೆ ನಡೆದಕೊಳ್ಳುವುದು ಹಾಗು ಎಲ್ಲರೊಡನೆ ಹೊಂದಿಕೊಂಡು ಇರುವುದಾಗಿದೆ. ಒಬ್ಬ ವ್ಯಕ್ತಿ ಸಂಪೂರ್ಣ ಆರೋಗ್ಯವನ್ನು ಪಡೆಯಬೇಕಾದರೆ ಸಮಾಜವನ್ನು ಕಡೆಗಣಿಸಲಾಗದು. ಮಾನವ ಮತ್ತು ಸಮಾಜದ ನಡುವಿನ ಸಾಮರಸ್ಯಕ್ಕೆ ಅಗತ್ಯವಾಗಿರುವುದೇ ಸಾಮಾಜಿಕ ಆರೋಗ್ಯವಾಗಿದೆ. ಇದು ಸಮಾಜದಲ್ಲಿ ನೆಮ್ಮದಿ ನೆಲೆಸಲು ಮತ್ತು ಸಮಾಜದಿಂದ ನಮ್ಮ ಆರೋಗ್ಯಕ್ಕೆ ಕುಂದುಬಾರದಂತೆ ಮಾಡುತ್ತದೆ.

ಸಂಕುಚಿತವಾದ ಅಹಂಕಾರ ತುಂಬಿದ ವ್ಯಕ್ತಿತ್ವವನ್ನು ವಿಶಾಲಗೊಳಿಸಿ ಉನ್ನತ ಸ್ಥಾನಕ್ಕೆ ಕರೆದೊಯ್ಯುತ್ತದೆ. ಹಾಗೆಯೇ ದೈಹಿಕ ಸಕ್ರಿಯವಾಗಿ ಮಾಡುವ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಹಾಗು ಖಿನ್ನತೆಯ ಲಕ್ಷಣಗಳೂ ಪರಿಹಾರವಾಗುತ್ತವೆ. ಸತತ ಯೋಗಾಭ್ಯಾಸದಿಂದ ನಮ್ಮನ್ನು ನಾವೇ ಮರುರೂಪಿಸಿಕೊಳ್ಳುತ್ತೇವೆ. ನಮ್ಮ ಚೈತನ್ಯವು ಉನ್ನತ ಸ್ಥಾಯಿಯಲ್ಲಿದ್ದರೆ, ನಮ್ಮ ಶರೀರವು ಬಹಳ ಸುಲಭವಾಗಿ ಕೆಲಸ ಮಾಡುತ್ತದೆ. ನಿರಂತರತೆ ಕಾಯ್ದುಕೊಂಡರೆ ಮೂರರಿಂದ ಆರು ವಾರಗಳಲ್ಲಿ ಉತ್ತಮ ಫಲಿತಾಂಶ ಬರುತ್ತದೆ. ನಾವು ಯೋಗದ ಅಭ್ಯಾಸಗಳನ್ನು ಮಾಡಿ ನಮ್ಮ ಚೈತನ್ಯವನ್ನು ಒಂದು ಮಟ್ಟಕ್ಕೆ ತರಲು ಸಾಧ್ಯವಾದರೆ; ನಮ್ಮ ಭೌತಿಕ ಅಂಶಗಳು ನಿರಾಯಾಸವಾಗಿ ಸಾಗುತ್ತವೆ.

## ಧ್ಯಾನ ಮತ್ತು ಯೋಗ ಮಾಡಲು ಅತ್ಯುತ್ತಮ ಸಮಯ:

ಸೂರ್ಯ ನಮಸ್ಕಾರ ಮತ್ತು ಶಿವ ನಮಸ್ಕಾರದಂತಹ ಅಭ್ಯಾಸಗಳನ್ನು ಹಗಲು–ರಾತ್ರಿಗಳ ನಡುವಿನ ಸಂಧಿ ಸಮಯವಾದ ಪರಿವರ್ತನಾ ಸಮಯದಲ್ಲಿಯೇ ಅಭ್ಯಾಸ ಮಾಡಬೇಕು. ಸಂಧ್ಯಾಕಾಲಗಳಲ್ಲಿ, ಅಂದರೆ ಸೂರ್ಯೋದಯ ಅಥವಾ ಸೂರ್ಯಾಸ್ತದ ಸಮಯದಲ್ಲಿ ಸಮಸ್ತವೂ ಪರಿವರ್ತಿತವಾಗುವ ಸಮಯ. ನಿಮ್ಮ ಅಭ್ಯಾಸಗಳನ್ನು ಈ ಸಮಯದಲ್ಲಿ ಮಾಡುವುದರಿಂದ, ಸೀಮಿತತೆಯನ್ನು ದಾಟುವ ನಿಮ್ಮ ಸಾಮರ್ಥ್ಯ ಉತ್ತಮವಾಗಿರುತ್ತದೆ. ಏಕೆಂದರೆ ನಿಮ್ಮ ಪ್ರಾಣಶಕ್ತಿಯು ಪರಿವರ್ತನ ಅವಸ್ಥೆಯಲ್ಲಿ ಇರುತ್ತದೆ. ಭಾರತದಂತಹ ಉಷ್ಣವಲಯದ ಪ್ರದೇಶಗಳಲ್ಲಿ ಯೋಗದ ವಿಕಸನವಾಗಿದ್ದರಿಂದ ನಾವು ಪ್ರಾತಃಕಾಲ 8:30 ರ ಮೊದಲು ಅಥವಾ ಸಾಯಂಕಾಲ 4:30 ರ ನಂತರ ಯಾವುದೇ ಯೋಗಾಭ್ಯಾಸ ಮಾಡಲು ಒಳ್ಳೆಯ ಸಮಯವಾಗಿದೆ. ನಾವು ಭವಿಷ್ಯದ ಉಜ್ವಲ ಮಾನವ ಜೀವಿಯಾಗಲು ಬಯಸಿದರೆ, ನಮ್ಮ ಮೂಲ ಮರುರೂಪಾಂತರ ಅನಿವಾರ್ಯ. ಇದು ಯೋಗಾಭ್ಯಾಸದಿಂದ ಸಾಧ್ಯವಾಗುತ್ತದೆ.

ಯೋಗಾಭ್ಯಾಸ ಮಾಡುವಾಗ ಮನಸ್ಸಿನ ಏಕಾಗ್ರತೆ, ಶ್ವಾಸ ನಿಯಂತ್ರಣಗಳೆಡೆಗೆ ವಿಶೇಷ ಲಕ್ಷ್ಯಕೊಡುವುದು ಅವಶ್ಯ. ಯೋಗಾಸನಗಳಲ್ಲಿ ಶರೀರವನ್ನು ವಿವಿಧ ರೀತಿಯಲ್ಲಿ ಬಗ್ಗಿಸಬೇಕಾಗುವುದು. ಸ್ವಲ್ಪಕಾಲ ಒಂದೇ ಆಸನದಲ್ಲಿ ಶರೀರವನ್ನು ಸ್ಥಿರವಾಗಿಡಬೇಕು. ಚಲನವಲನ ಕೂಡ ನಿಧಾನವಾಗಿರುತ್ತದೆ. ಯೋಗಾಸನಗಳು ಆರೋಗ್ಯ ಸಾಧನ ಹಾಗು ಮನಸ್ಸಿನ ಸ್ಥಿರೀಕರಣಕ್ಕೆ ಯೋಜಿಸಿದ ವ್ಯಾಯಾಮಗಳಾಗಿವೆ ಎಂಬುದು ನಿಜ. ಆದರೂ ಅವುಗಳ ಆಚರಣೆಗಳಿಂದ ಕೆಲವು ಯೌಗಿಕ ನಾಡೀಚಕ್ರಗಳ ಮೇಲೆ ಒತ್ತಡ ಬೀಳುವುದರಿಂದ ತಜ್ಞರ ಮೇಲ್ವಿಚಾರಣೆಯಲ್ಲಿಯೇ ಅವನ್ನು ಮಾಡಬೇಕು. ಆಸನ ಸ್ವರೂಪದ ಯೋಗಗಳನ್ನು ಮಾಡುವ ಪೂರ್ವದಲ್ಲಿ ಯಮ, ನಿಯಮ ಮುಂತಾದ ನಾಡಿಶುದ್ಧಿಯ ಸಾಧನಗಳನ್ನು ಕೈಕೊಳ್ಳಬೇಕಾಗುವುದು. ಯುಕ್ತಿ ಯುಕ್ತವಾದ ಯೋಗಾಸನಾಭ್ಯಾಸಗಳಿಂದ ಅನೇಕ ರೋಗಗಳು ದೂರವಾಗುವುದಲ್ಲದೇ ರೋಗ ನಿರೋಧಕ ಶಕ್ತಿಯು ವೃದ್ಧಿಯಾಗುತ್ತದೆ.

## ದಿನನಿತ್ಯದ ಯೋಗಾಭ್ಯಾಸದ ಉಪಯೋಗಗಳು

- ದೇಹ ಮತ್ತು ಮನಸ್ಸು ಸಮತೋಲನದಲ್ಲಿರುತ್ತದೆ. ಜತೆಗೆ ದೇಹಕ್ಕೆ ಚೈತನ್ಯ ಸಿಗುವುದು.
- ದೇಹದ ಉರಿಯೂತ ಶಮನವಾಗುತ್ತದೆ. ಅಷ್ಟಲ್ಲದೇ ಶರೀರದಲ್ಲಿನ ಹಲವಾರು ಕಾಯಿಲೆಗಳು ಗುಣವಾಗುತ್ತವೆ. ನಿರಂತರ ಯೋಗಾಭ್ಯಾಸದಿಂದ ಸ್ಥೂಲಕಾಯ, ಹೃದ್ರೋಗ, ರಕ್ತದಒತ್ತಡ, ಮಧುಮೇಹ ಮುಂತಾದ ಜೀವನ ಶೈಲಿ ರೋಗಗಳನ್ನು ತಡೆಗಟ್ಟಬಹುದು.
- ಮಾನಸಿಕ ಸಮಸ್ಯೆಗಳಾದ ಆತಂಕ, ಭಯ, ಮಿದುಳಿನ ವಿಕಾರತೆ, ಖಿನ್ನತೆ, ಕೀಳರಿಮೆ ಹಾಗು ಉದ್ವೇಗವನ್ನು ನಿಯಂತ್ರಿಸುತ್ತದೆ.
- ಯೋಗವು ನೆನಪಿನ ಶಕ್ತಿ, ಸೃಜನಶೀಲತೆ, ಮಾನಸಿಕ ಸಮತೋಲನ ಕಾಯ್ದುಕೊಳ್ಳಲು ಸಹಕಾರಿಯಾಗಿದೆ.
- ಚಂಚಲವಾದ ಮನಸ್ಸು ಹತೋಟಿಯಲ್ಲಿ ಬರುತ್ತದೆ. ಹೃದಯ ಸಂಬಂಧಿ ರೋಗಗಳು ತಡೆಗಟ್ಟುತ್ತದೆ. ಪ್ರತಿರೋಧಕವಾದ ಶಕ್ತಿಯನ್ನು ಹೆಚ್ಚಿಸುತ್ತದೆ. ತೂಕ ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಾಯವಾಗುತ್ತದೆ. ಬೆನ್ನು ನೋವು, ಕೀಲುನೋವು, ಗಂಟುನೋವುಗಳು ಕಡಿಮೆಯಾಗುತ್ತದೆ. ಒತ್ತಡವನ್ನು ನಿವಾರಿಸಿಕೊಳ್ಳಬಹುದು. ಯೋಗವು ಒಬ್ಬ ವ್ಯಕ್ತಿಯ ನಡುವಿನ ಸೌಹಾರ್ದತೆಯನ್ನು ಸೃಷ್ಟಿಸುತ್ತದೆ.

ಯೋಗವು ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಗುಣಲಕ್ಷಣಗಳು ತೆರೆದುಕೊಳ್ಳಲು ಸಹಾಯ ಮಾಡುತ್ತದೆ. ಮಕ್ಕಳು, ವಯಸ್ಕರಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದ ಮೂಲಕ ಯೋಗದ ಮಹತ್ವ ತಿಳಿಸಲಾಗಿದೆ. ಇದರ ಫಲವಾಗಿ ಇತ್ತೀಚಿನ ದಿನಗಳಲ್ಲಿ ಯೋಗವನ್ನು ಹೆಚ್ಚು ಜನರು ಮಾಡುತ್ತಿದ್ದಾರೆ. ಅದರ ಪ್ರಯೋಜನವನ್ನೂ ಕೂಡ ಪಡೆದುಕೊಂಡಿದ್ದಾರೆ. ಆದರೆ ಕೆಲವರು ಕೆಲಸದ ಒತ್ತಡ ಮತ್ತು ಇನ್ನು ಕೆಲವರು ದಾರಿದ್ರ್ಯತನದಿಂದ ಮಾಡುತ್ತಿಲ್ಲ. ಯೋಗಾಭ್ಯಾಸ ಮಾಡುವಂತೆ ಸರ್ಕಾರ, ಸಂಘ–ಸಂಸ್ಥೆಗಳು ಮತ್ತು ಮಾಧ್ಯಮದವರು ಎಲ್ಲರ ಮನಸ್ಸಿಗೆ ಮುಟ್ಟುವಂತಹ ಪ್ರಚಾರ ಮಾಡುತ್ತಿದ್ದಾರೆ.

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಭರತಖಂಡದಲ್ಲಿ ಯೋಗಾಸನದ ಇತಿಹಾಸ ತುಂಬ ದೀರ್ಘವಾಗಿದೆ. ನಮ್ಮ ಭಾರತ ದೇಶದ ಯೋಗ ಶಿಕ್ಷಣವು ಇಡೀ ವಿಶ್ವದ ಮಾನವ ಕೋಟಿಗೆ ನೀಡಿದ ಮಹತ್ವದ ಕೊಡುಗೆಯಾಗಿದೆ. ಪತಂಜಲಿ ಮಹರ್ಷಿಯನ್ನು 'ಯೋಗಾಸನಗಳ ಪಿತಾಮಹ' ಎಂದು ಕರೆಯುತ್ತಾರೆ. ಈ ಮಹರ್ಷಿಯಿಂದ ರಚಿತವಾದ 'ಯೋಗಸೂತ್ರ' ಗ್ರಂಥವೇ ಯೋಗಾಸನಗಳ ಬಗ್ಗೆ ಮಾಹಿತಿ ಸಾರುವ ಪ್ರಾಚೀನ ಗ್ರಂಥವಾಗಿದೆ. ಯೋಗವು ದೇಹ ಮತ್ತು ಮನಸ್ಸಿನ ಅಭ್ಯಾಸಗಳಲ್ಲಿ ಪ್ರಮುಖ ಪಾತ್ರವಹಿಸಿದ್ದು; ವಿಶ್ವದ ಅತ್ಯಂತ ಪ್ರಯೋಜನಕಾರಿ ಕ್ರಿಯೆಯಾಗಿದೆ. ದೇಹದ ನಮ್ಯತೆ ಮತ್ತು ಸ್ನಾಯುವಿನ ಬಲವನ್ನು ಹೆಚ್ಚಿಸುವ ಮೂಲಕ ಮನುಷ್ಯರ ಜೀವನವನ್ನು ಗಮನಾರ್ಹವಾಗಿ ಸುಧಾರಿಸಲು ಇದು ಸಹಾಯ ಮಾಡುತ್ತದೆ. ಯೋಗವು ಪ್ರಪಂಚದಾದ್ಯಂತ ಲಕ್ಷಾಂತರ ಜೀವನ ಶೈಲಿಯಾಗಿದೆ. ದಿನನಿತ್ಯ ಯೋಗ ಮಾಡುವವರಿಗೆ ಇದು ಉತ್ತಮ ಆರೋಗ್ಯ ಮತ್ತು ಶಾಂತಿಯುತ ಮನಸ್ಸನ್ನು ತರುತ್ತದೆ. ಯೋಗವನ್ನು ನಿಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳುವುದು ಮತ್ತು ಅದನ್ನು ದಿನದಿಂದ ದಿನಕ್ಕೆ ಅಭ್ಯಾಸ ಮಾಡುವುದು ಹೆಚ್ಚು ಪ್ರಯೋಜನಕಾರಿಯಾಗಿದೆ.

ಸಂಪೂರ್ಣ ಆರೋಗ್ಯದ ಕಾಳಜಿ ಹಾಗು ಚಿಂತನೆ ಇಂದಿನದಲ್ಲ. ಪ್ರಾಚೀನಕಾಲದಿಂದಲೂ ಈ ಆರೋಗ್ಯದ ಕುರಿತು ಅನೇಕರು ಆಳವಾದ ಅಧ್ಯಯನ ಮಾಡಿದ್ದಾರೆ. ಆ ದಿಸೆಯಲ್ಲಿ ಕ್ರಿ. ಪೂ. ಸು. 250 ರಲ್ಲಿ ಬದುಕಿದ್ದ ಮಹರ್ಷಿ ಪತಂಜಲಿಯ 'ಯೋಗ ಸೂತ್ರಗಳು' ಇಂದಿಗೂ ಪ್ರಸ್ತುತ. ಸಂಪೂರ್ಣ ಆರೋಗ್ಯಕ್ಕೆ ಯೋಗ ಸೂತ್ರಗಳು ಸುಸೂತ್ರಗಳಾಗಿವೆ. ಉತ್ತಮ ಆರೋಗ್ಯದಿಂದ ಪರಿಪೂರ್ಣ ವ್ಯಕ್ತಿತ್ವ ಸಹಜ ಸಾಕಾರವಾಗುತ್ತದೆ. ಯೋಗ ಕಲಿಕೆಯಿಂದ ಮಕ್ಕಳಲ್ಲಿ ವೈಚಾರಿಕತೆ, ಭಾವನಾತ್ಮಕ ರಚನೆ ಮತ್ತು ಸೃಜನಶೀಲತೆಯನ್ನು ಗಮನಿಸಬಹುದಾಗಿದೆ. 'ಯಮ-ನಿಯಮ ಅನುಷ್ಠಾನೇ ಪಾಪ ನಿವೃತ್ತಿ' ಅಂದರೆ ಯಮ-ನಿಯಮಗಳ ಅಭ್ಯಾಸವು ವ್ಯಕ್ತಿಯ ಮನಸ್ಸಿನಲ್ಲಿ ಬರುವ ಪಾಪಕರ್ಮಗಳನ್ನು ಮಾಡುವ ಯೋಚನೆ-ಯೋಜನೆಗಳನ್ನು ನಾಶಗೊಳಿಸುತ್ತದೆ. ಯೋಗವು ದೇಹ, ಮನಸ್ಸು ಮತ್ತು ಆತ್ಮವನ್ನು ಪುನರ್ ಯೌವನಗೊಳಿಸುವ ಸಾಮರಸ್ಯ ವ್ಯವಸ್ಥೆ ಎಂದು ಪರಿಗಣಿಸಲಾಗಿದೆ. ಇಂದಿನ ಕಾಲದ ಯಾಂತ್ರಿಕ ಜೀವನದ ಜಂಜಾಟದಲ್ಲಿ ಯೋಗಾಭ್ಯಾಸಕ್ಕೆ ಮಹತ್ವವಿದೆ. ಹಾಗೆ ವಿದ್ಯಾರ್ಥಿಗಳಿಗೆ ಯೋಗ ಶಿಕ್ಷಣವು ಮಕ್ಕಳ ಮನೋವಿಜ್ಞಾನದ ಬೆಳವಣಿಗೆಗೆ ಕಾರಣವಾಗುತ್ತದೆ. ಆದುದರಿಂದ ಪ್ರಸ್ತುತ ಶಾಲಾ-ಕಾಲೇಜುಗಳಲ್ಲಿ ಪಠ್ಯಕ್ರಮಗಳ ಜತೆಗೆ ಯೋಗ ಕಲಿಕೆಯನ್ನು ಆರಂಭಿಸಲಾಗಿದೆ.

## ಪರಾಮರ್ಶನ ಗ್ರಂಥಗಳು


- **ಅರವಿಂದರು** (1997) : ಯೋಗಸಾಧನೆಯ ಮೂಲಾಧಾರಗಳು, ಪುದುಚೇರಿ ಶ್ರೀ ಅರವಿಂದ ಆಶ್ರಮ.
- **ಓಂಕಾರ್ ಎಸ್. ಎನ್.** (2007) : ಪತಂಜಲಿಯ ಯೋಗಸೂತ್ರಗಳು ಮತ್ತು ವ್ಯಕ್ತಿತ್ವ ವಿಕಾಸ, ಬೆಂಗಳೂರು ನವಕರ್ನಾಟಕ ಪ್ರಕಾಶನ.
- **ಸೀತಾರಾಮ್ ಎ. ಆರ್.** (2004) : ಸ್ವಾಸ್ಥ್ಯ ಬದುಕಿಗೆ ಯೋಗ, ಮೈಸೂರು ಪರಮಹಂಸ ಯೋಗ ಚಿಕಿತ್ಸಾ ಕೇಂದ್ರ.
- **ಧನ್ಯಕುಮಾರ ಇಜಾರಿ** (1996) : ಸಂಪೂರ್ಣ ಆರೋಗ್ಯ, ಹುಬ್ಬಳ್ಳಿ ಪದ್ಮಶ್ರೀ ಪ್ರಕಾಶನ.
- **ಜಯದೇವ ಎಂ. ಮೆಣಸಗಿ** (2016) : ಯೋಗ, ಗದಗ ವಿದ್ಯಾನಿಧಿ ಪ್ರಕಾಶನ.


■■

*– 51ನೇ ಪುಟದಿಂದ ಮುಂದುವರೆದುದು*

ಅಲ್ಲಮ ಪ್ರಭು ತನ್ನತನವನ್ನು ಸಂಪೂರ್ಣವಾಗಿ ಕಳಚಿಕೊಳ್ಳುವ ನಿರ್ವಯಲುವಾಗುತ್ತಾನೆ. ಅಂದರೆ, ವ್ಯಕ್ತಿತ್ವ ನಿರಸನವೆಂದರೆ ಎಲ್ಲವನ್ನೂ ಕಳೆದುಕೊಳ್ಳುವುದು ಮಾತ್ರವಲ್ಲ. ಈ ಜಗತ್ತಿನ ಗಮನಕ್ಕೆ ಹೊರತುವಾಗುವುದು. ಸಂಪೂರ್ಣತ್ವದಿಂದ ಜೀವಜಾಲವನ್ನು ಸ್ವೀಕರಿಸುವುದು ಇಲ್ಲಿ ಟಿ.ಎಸ್. ಎಲಿಯಟ್ ನ ವ್ಯಕ್ತಿತ್ವ ನಿರಸನ ತತ್ವದ (Impersenal Theory) ಪ್ರಕಾರ ದಾರ್ಶನಿಕ ಕವಿ ಅಥವಾ ಋಷಿ "ಈ ಸಿದ್ಧಾಂತಕ್ಕೆ ಬದ್ಧನಾದಷ್ಟೂ ಕಾವ್ಯಕ್ಕೆ ಅರ್ಥಪ್ರಾಪ್ತಿಯಾಗುತ್ತದೆ. ವ್ಯಕ್ತಿತ್ವ ವಿಕಾಸ ಆತ್ಮಾವಧಾರಣೆ ವೈಯಕ್ತಿಕತೆಯನ್ನು ನಿರಸನ ಮಾಡಿಕೊಂಡು ಸಾರ್ವತ್ರಿಕತೆಯನ್ನು ಆತ್ಮೀಕರಿಸಿಕೊಳ್ಳುವಿಕೆ ಇದರಿಂದ ಕವಿ ಕಲಾ ಮಾಧ್ಯಮವಾಗಿ ಕಾವ್ಯವು ಲೋಕ ಸಂವೇದನೆಗಳನ್ನು ಸಮಗ್ರವಾಗಿ ಮೈಗೂಡಿಸಿಕೊಳ್ಳುತ್ತದೆ". (Note-2) (ಮಾರ್ಗ ಸಂಪುಟ-1-ಪುಟ-56ಜೆ ಎಂ.ಎಂ. ಕಲಬುರ್ಗಿಯವರ ವಿಮರ್ಶೆ ಮಾರ್ಗ) ಟಿ.ಎಸ್. ಎಲಿಯಟ್‌ನ ಈ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಮನ ಎನ್ನಂತರಂಗದ ಆತುಮನೊಳಗೆ ಅನಿಮಿಷ ನಿಜೈಕ್ಯ ಎಂಬಲ್ಲಿನ ಮಾತಿಗೂ ವಿಲಿಯಟ್‌ನ ಸಾರ್ವತ್ರಿಕತೆಯನ್ನು ಆತ್ಮೀಕರಿಸಿಕೊಳ್ಳುವಿಕೆಗಳ ತುಲನೆ ಮಾಡಿದರೆ ಆತ್ಮ ನಿರಸನದ ನಿರಂತರವಾದ ಪ್ರಕ್ರಿಯೆಯ ಫಲಿತಾಂಶ ವ್ಯಕ್ತಿತ್ವ ನಿರಸನ ಎಂದು ಗ್ರಹಿಸಬಹುದು.

ಗ್ರೀಕರಲ್ಲಿ ಮಾನವ ಪಂಥೀಯರಲ್ಲಿಯೇ ವ್ಯಕ್ತಿತ್ವ ನಿರಸನದ ಪ್ರಕ್ರಿಯೆ ಆರಂಭವಾಗಿರುವ ಕುರುಗಳನ್ನು ನೋಡಬಹುದು. ಮನುಷ್ಯನೇ ಶ್ರೇಷ್ಠನೆಂದು ಗ್ರಹಿಸುವ ಮಾನವ ಪಂಥೀಯರು ಬೇರೆ ಯಾವ ಮತ, ಧರ್ಮ, ಆದ್ಯಾತ್ಮ ಇವುಗಳೆಂದಾಚೆಗೆ "ಮಾನವ ಶ್ರೇಷ್ಠ ವಾದವನ್ನು ಪ್ರತಿಪಾದಿಸುತ್ತಾರೆ, ಇದು ಪಾಶ್ಚಾತ್ಯ ಗ್ರೀಕರಲ್ಲಿ ಮುಂದೆ ವೇದಗಳ ಕಾಲದ ಆರ್ಯರನ್ನು ಎದುರಿಸಲು ಪರ್ಯಾಯ ಮಾರ್ಗ"ವನ್ನು ಅನುಸರಿಸಿದಾಗ "ಮಾನವ ಶ್ರೇಷ್ಠ ವಾದ" ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತದೆ.

ಕೃತಿ ಮಾತ್ರವಲ್ಲದೆ ದಾರ್ಶನಿಕರ ಬದುಕು ಕೃತಿ ರಚನೆಗಳಿಲ್ಲದೆಯೂ ವ್ಯಕ್ತಿತ್ವ ನಿರಸನಗೊಂಡಿರುವುದನ್ನು ನಾವು ಸಾಕ್ರಟಿಸ್‌ನ ಚಿಂತನೆಗಳಲ್ಲಿ ನೋಡಬಹುದು. ವ್ಯಕ್ತಿತ್ವ ನಿರಸನವೆನ್ನುವುದು ಹಲವು ಸ್ವರೂಪಗಳನ್ನು ಹೊಂದಿದ್ದರೂ ಸಹ ಭವ್ಯವಾಗದ ಸಹಜ-ಪ್ರಕೃತಿಯ ಪ್ರವೃತ್ತ ಭ್ರಮಣ ಪ್ರಕ್ರಿಯೆಯ ಭಾಗವಾಗುವುದು. ಇಲ್ಲಿ ಉಳಿಯುವುದು ವಾಸ್ತವದ ಸತ್ಯ. ಯಾವತ್ತು ಸತ್ಯ. ನಿರಂತರ ಸತ್ಯಗಳನ್ನು ಕಾಲಾತೀತವಾಗಿ ಅನ್ವಯಿಸುವುದು. ವ್ಯಕ್ತಿ ಇಲ್ಲಿ ಒಮ್ಮೊಮ್ಮೆ ದೇವರ ರೂಪವಾಗುವುದು. ದಾರ್ಶನಿಕನಾಗುವುದು. ತತ್ವಜ್ಞಾನಿಯಾಗುವುದು ಕವಿಯಾಗುವುದು ನಡೆದೇ ಇರುತ್ತದೆ.

## ಪರಾಮರ್ಶನ ಗ್ರಂಥಗಳು


- **ಕೆ. ಆ. ಶ್ರೀನಿವಾಸಯ್ಯಂಗಾರ್ (ಸಂ.)** : ಗ್ರೀಕರ ತತ್ವಶಾಸ್ತ್ರಸಾರ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ-17
- **ಡಾ. ಎಲ್. ಬಸವರಾಜು** : ಅಲ್ಲಮನ ವಚನ ಚಂದ್ರಿಕೆ, ಬೆಂಗಳೂರು. ಕನ್ನಡ ಸಂಸ್ಕೃತಿ ಇಲಾಖೆ, ಜೆ.ಸಿ.ರಸ್ತೆ.
- **ಎಂ.ಎಂ. ಕಲಬುರ್ಗಿ** : ವಿಮರ್ಶೆ ಮಾರ್ಗ-ಸಂಪುಟ-1, ಬೆಂಗಳೂರು ಸಪ್ನ ಬುಕ್ ಹೌಸ್
- **ಕುಮಾರವ್ಯಾಸ** : ಕರ್ನಾಟಕ ಭಾರತ ಕಥಾಮಂಜರಿ.
- **ಕುವೆಂಪು ಕವನ ಪಕ್ಷಿಕಾಶಿ.**


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸರ್ವಜ್ಞನ ವಚನಗಳಲ್ಲಿ ಮನೋವಿಜ್ಞಾನದ ಗ್ರಹಿಕೆಗಳು

✍ **ಡಾ. ಶಿವಲಿಂಗೇಗೌಡ ಡಿ.** ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ, ರಾಮನಗರ ಜಿಲ್ಲೆ.

ಮನೋವಿಜ್ಞಾನವೆಂಬುದು ಮನುಷ್ಯನ ಮನಸ್ಸಿನ ಅಧ್ಯಯನವೇ ಆಗಿದೆ. ಮನುಷ್ಯರ ಎಲ್ಲ ನಡೆವಳಿಕೆಗಳ ಮೇಲೆ ಅವರ ಮನಸ್ಸಿನ ಪ್ರಭಾವವಿರುತ್ತದೆ. ಮನುಷ್ಯ ಸಂಘ ಜೀವಿ, ಸಾಮಾಜಿಕ ಜೀವಿ. ಹಾಗಾಗಿಯೇ ಅವರ ಮನಸ್ಥಿತಿ, ವರ್ತನೆಗಳು ಸಮಾಜದ ಮೇಲೆ ಹಾಗೂ ಸಾಮಾಜಿಕ ನಡಾವಳಿಗಳು ಅವರ ಮನಸ್ಸಿನ ಮೇಲೆ ಪರಸ್ಪರ ಪ್ರಭಾವಬೀರುವುದು ಸಹಜವೇ ಆಗಿದೆ. ಮನುಷ್ಯರ ಮಾನಸಿಕ ಸ್ವಾಸ್ಥ್ಯ ಹಾಗೂ ಸಾಮಾಜಿಕ ಸ್ವಾಸ್ಥ್ಯಗಳು ಒಂದನ್ನೊಂದು ಅವಲಂಬಿಸಿವೆ. ಅತ್ಯಂತ ಬುದ್ಧಿವಂತ ಪ್ರಾಣಿಯಾದ ಮನುಷ್ಯ ಚಿಂತಿಸಬಲ್ಲ, ಆಲೋಚಿಸಬಲ್ಲ, ಅಭಿವ್ಯಕ್ತಿಸಬಲ್ಲ, ಕನಸುಕಾಣಬಲ್ಲ, ಭಿನ್ನವಾಗಿ ಬದುಕು ಕಟ್ಟಿಕೊಳ್ಳ ಬಲ್ಲವನಾಗಿದ್ದಾನೆ. ಕುಟುಂಬ, ಸಮಾಜ, ಸರ್ಕಾರವೆಂಬ ವ್ಯವಸ್ಥೆಗಳು ಮತ್ತು ಸಾಮಾಜಿಕ ನಂಬಿಕೆ, ಆಚರಣೆ, ಕಟ್ಟಳೆಗಳು ಹಾಗೂ ಸಾಂಸ್ಕೃತಿಕ ಬದುಕಿನ ಆಯಾಮಗಳು ಆತನ ಮನಸ್ಸು ಮತ್ತು ಬದುಕನ್ನು ಸಮೃದ್ಧವಾಗಿಸಿರುವುದಷ್ಟೇ ಅಲ್ಲ ಸಂಕೀರ್ಣಗೊಳಿಸಿವೆ ಕೂಡ. ತನ್ನ ಬದುಕಿನ ಶ್ರೀಮಂತಿಕೆಗಾಗಿ ತಾನು ರೂಪಿಸಿಕೊಂಡಿರುವ ವ್ಯವಸ್ಥೆಗಳೇ ತನಗೆ ಮಾರಕವಾಗಿ ಪರಿಣಮಿಸಿ ಮಾನಸಿಕ ಕ್ಷೋಭೆಗೆ ಒಳಗಾಗಿದ್ದಾನೆ. ಆಧುನಿಕ ಬದುಕು ಮನುಷ್ಯನ ಮಾನಸಿಕ ಸ್ವಾಸ್ಥ್ಯವನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. ಮನುಷ್ಯರ ಸ್ವಭಾವ, ವರ್ತನೆಗಳೇ ಅವರ ಮಾನಸಿಕ ಅನಾರೋಗ್ಯ ಹಾಗೂ ಸಾಮಾಜಿಕ ಅಸ್ವಾಸ್ಥ್ಯತೆಗೆ ಕಾರಣವಾಗಿ ಪರಿಣಮಿಸುತ್ತಿವೆ. ಮನೋವಿಜ್ಞಾನ ಮನುಷ್ಯನ ಮಾನಸಿಕ ಅನಾರೋಗ್ಯದ ಕಾರಣ, ಪರಿಣಾಮ, ಪರಿಹಾರಗಳನ್ನು ಗಂಭೀರವಾಗಿ ಚಿಂತಿಸುತ್ತದೆ. ಗತಿಶೀಲ ಬದುಕಿನ ಬಿಂಬವಾದ ಸಾಹಿತ್ಯ ಮನುಷ್ಯನ ಮಾನಸಿಕ ವ್ಯಾಪಾರವನ್ನು, ಅದರ ಕಾರಣ ಪರಿಣಾಮಗಳನ್ನು ಸೂಕ್ಷ್ಮವಾಗಿ ವಿವೇಚಿಸುತ್ತದೆ. ಆ ಮೂಲಕ ಮನೋವಿಜ್ಞಾನಕ್ಕೂ ವಿಶಿಷ್ಟ ಒಳನೋಟಗಳನ್ನು ನೀಡುತ್ತಾ ಬಂದಿರುವುದನ್ನು ಕಾಣಬಹುದು.

ವೈಯಕ್ತಿಕ ಜೀವನಾನುಭವ, ಜನರ ಒಡನಾಟ, ದಣಿವರಿಯದ ಸುತ್ತಾಟ, ಅಪಾರವಾದ ಲೋಕಾನುಭವ ಹಾಗೂ ಸರ್ವರಿಂದಲೂ ಒಂದೊಂದು ನುಡಿಕಲಿವ ಆಸಕ್ತಿಯಿಂದಾಗಿ ವಿದ್ಯೆಯ ಪರ್ವತವೇ ಆಗಿ ಪರಿಣಮಿಸಿದ ಸರ್ವಜ್ಞ ಒಬ್ಬ ಸಾಮಾಜಿಕ ಚಿಂತಕ ಅಷ್ಟೇ ಅಲ್ಲ ಮನೋಚಿಂತಕ ಕೂಡಾ ಹೌದು. ಮನುಷ್ಯರ ಒಡನಾಟ, ಸಾಮಾಜಿಕ ಬದುಕಿನ ಸೂಕ್ಷ್ಮಗಳ ಅರಿವಿದ್ದ ಸರ್ವಜ್ಞ ತನ್ನ ತ್ರಿಪದಿಗಳಲ್ಲಿ ಅಪಾರವಾದ ಲೋಕಸತ್ಯಗಳನ್ನು ಅತ್ಯಂತ ನಿಷ್ಠುರವಾಗಿ ಹೇಳಿದ್ದಾನೆ. ಮನುಷ್ಯ ಸ್ವಭಾವಗಳು, ವರ್ತನೆಗಳು ಅವರು ಬದುಕುತ್ತಿರುವ ಸಮಾಜದ ಮೇಲೆ ಹಾಗೂ ಅವರ ವೈಯಕ್ತಿಕ ಬದುಕಿನ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ್ದಾನೆ. ಮನುಷ್ಯ ಜೀವನದ ಸಾರ್ಥಕತೆ– ನಿರರ್ಥಕತೆ, ನೆಮ್ಮದಿ– ಹತಾಶೆ, ಸುಖ– ಸಂತೋಷ, ದುಃಖ– ದುಮ್ಮಾನ, ಶ್ರೀಮಂತಿಕೆ– ಬಡತನ, ಚಿಂತೆ, ಭಯ, ಕೋಪ, ಆಸೆ, ನಿರಾಸೆ, ಹೆಣ್ಣು– ಗಂಡಗಳ ಸ್ವಭಾವ ಮುಂತಾದವುಗಳನ್ನು ಮನುಷ್ಯನ ಮಾನಸಿಕ ವರ್ತನೆಗಳ ಹಿನ್ನೆಲೆಯಿಂದ ವಿವೇಚಿಸುವ ಸರ್ವಜ್ಞನ ವಿವೇಚನೆಯಲ್ಲಿ ಮನೋಚಿಕಿತ್ಸಕ ಗುಣಗಳ ಭಂಡಾರವೇ ಇರುವುದನ್ನು ಕಾಣಬಹುದು.

ಮನುಷ್ಯ ಸ್ವಭಾವಗಳ ಸೂಕ್ಷ್ಮ ಅರಿವಿರುವ ಸರ್ವಜ್ಞನ ವಚನಗಳ ಕೇಂದ್ರ ಮನುಷ್ಯನೇ ಆಗಿದ್ದಾನೆ. ಸಮಾಜದ ಮೂಲ ಘಟಕ ಮನುಷ್ಯನೇ ಆಗಿರುವುದರಿಂದ ಮನುಷ್ಯನ ಸುಧಾರಣೆ ಸಮಾಜದ ಸುಧಾರಣೆಯೂ ಹೌದು ಎಂಬುದು ಸರ್ವಜ್ಞನ ಕಾಣ್ಕೆ. ಹಾಗಾಗಿ ಸರ್ವಜ್ಞ ಸಮಾಜ ಸುಧಾರಣೆ, ಬದಲಾವಣೆಯ ಪ್ರಯತ್ನವಾಗಿ ಮನುಷ್ಯನನ್ನು ಸುಧಾರಿಸುವ ಪ್ರಯತ್ನದಲ್ಲಿ ತೊಡಗುತ್ತಾನೆ. ಅಪಾರವಾದ ಲೋಕಾನುಭವದಿಂದ ಕಂಡುಕೊಂಡ ಲೋಕಸತ್ಯಗಳನ್ನು ಹೇಳುವಲ್ಲಿ ತೋರುವ ನಿಷ್ಠುರತೆ, ಮನುಷ್ಯನನ್ನು ತಿದ್ದುವ ಹುಚ್ಚು ಹಠ, ಮನುಷ್ಯತ್ವದ ಮಾದರಿಗಳನ್ನು ಕಟ್ಟಿಕೊಡುವಲ್ಲಿ ತೋರುವ ಕಳಕಳಿ ಇವೆಲ್ಲಾ ಸರ್ವಜ್ಞನಿಗಿರುವ ಮನೋವ್ಯಾಪಾರಗಳ ಗಾಢ ಅರಿವನ್ನು ಧ್ವನಿಸುತ್ತವೆ. ಪ್ರತಿಯೊಬ್ಬ ಮನುಷ್ಯರೂ ಅಂತಿಮವಾಗಿ ಮನುಷ್ಯತ್ವದ ಔನ್ನತ್ಯಕ್ಕೇರಬೇಕೆಂದು ಬಯಸುವ ಸರ್ವಜ್ಞ ತನ್ನ ತ್ರಿಪದಿಗಳ ಮೂಲಕ ಮನುಷ್ಯ ತನ್ನ ನರಕಗಳನ್ನು ಸೃಷ್ಟಿಸಿಕೊಳ್ಳುತ್ತಿರುವುದು ಎಲ್ಲಿ ಹಾಗೂ ಆತನ ಸಾರ್ಥಕತೆಯ ಹಾದಿ ಯಾವುದು ಎಂಬುದನ್ನು ಗಂಭೀರವಾಗಿ ವಿವೇಚಿಸಿದ್ದಾನೆ.

ಮನುಷ್ಯನ ಕೋಪ, ಚಿಂತೆ, ಆಸೆ, ನಿರಾಸೆ, ಭಯ, ಹತಾಶೆ, ಹೊಟ್ಟೆಕಿಚ್ಚು, ಕ್ರೂರತೆ ಇತ್ಯಾದಿ ವರ್ತನೆಗಳು ಆತನ ಮತ್ತು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತವೆ. ಇವುಗಳ ಮೂಲ ಯಾವುದು ಎಂದು ವಿವೇಚಿಸುವ ಸರ್ವಜ್ಞನಿಗೆ ಕಾಣಿಸುವುದು ಮನುಷ್ಯನ ಅಜ್ಞಾನ. ಅಜ್ಞಾನವೆಂಬುದು ಮನುಷ್ಯನನ್ನು ವಿವೇಚನಾ ಶೂನ್ಯನನ್ನಾಗಿಯೂ, ಕ್ರೂರಿಯಾಗಿಯೂ, ದುರ್ಬಲನನ್ನಾಗಿಯೂ ಮಾಡುತ್ತದೆ. ಇಂಥ ವ್ಯಕ್ತಿಗಳು ತಮಗರಿವಿಲ್ಲದೆಯೇ ಸಮಾಜದ ಸ್ವಾಸ್ಥ್ಯವನ್ನು ಕದಡುವ ಪ್ರಯತ್ನ ದಲ್ಲಿರುತ್ತಾರೆ. ಮನುಷ್ಯ ಜ್ಞಾನಿಯಾದಂತೆ ತನ್ನ ವರ್ತನೆಗಳ ಬಗೆಗೆ ವಿವೇಚನೆಯನ್ನು ಬೆಳೆಸಿಕೊಳ್ಳುತ್ತಾನೆ. ಆಮೂಲಕ ತನ್ನ ಮತ್ತು ಸಮಾಜದ ಔನ್ನತ್ಯಕ್ಕೆ ಕಾರಣನಾಗುತ್ತಾನೆ ಎಂಬುದು ಸರ್ವಜ್ಞನ ವಿವೇಕವಾಗಿದೆ.

**"ಜ್ಞಾನವುಳ್ಳವನೊಡಲು ಭಾನುವಿನಂತಹುದು**
**ಜ್ಞಾನವಿಲ್ಲದವನ ಬರಿಕಾಯ ಹಾಳೂರ**
**ಶ್ವಾನದಿಂ ಕಡೆಯು ಸರ್ವಜ್ಞ"**

**"ಆತುಮದ ಲಿಂಗವನು ಪ್ರೀತಿಯಿಂದರಿದಡೆ**
**ಸೂತಕವಿಲ್ಲ ಭವವಿಲ್ಲ ಪಂಚಮಹಾ**
**ಪಾತಕವಿಲ್ಲ ಸರ್ವಜ್ಞ"**

ತನ್ನ ಮತ್ತು ಲೋಕದ ಬಗೆಗಿನ ಅರಿವು ಮನುಷ್ಯನಲ್ಲಿ ಹುಟ್ಟಿಸುವ ಭರವಸೆ, ಆತ್ಮವಿಶ್ವಾಸ, ಸಾರ್ಥಕತಾ ಭಾವಗಳು ಅವನ ಪರಿಪೂರ್ಣತ್ವದ ಸಂಕೇತಗಳು. ಅಂಥ ಮನುಷ್ಯ ತನ್ನ ಮತ್ತು ಸಮಾಜದ ಸ್ವಾಸ್ಥ್ಯಕ್ಕೆ ಕಾರಣನಾಗುತ್ತಾನೆ. ಅಜ್ಞಾನವು ದುರ್ಬಲತೆ ಮತ್ತು ಮಾನಸಿಕ ಅಸ್ವಸ್ಥತೆಗೆ ಕಾರಣವಾಗಿ ವ್ಯಕ್ತಿ ತನ್ನ ಮತ್ತು ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುತ್ತಾನೆ. ಹೀಗೆ ಸರ್ವಜ್ಞ ಮನುಷ್ಯನ ಅಜ್ಞಾನಕ್ಕೂ ಅವನ ವರ್ತನೆಗಳಿಗೂ ಸಂಬಂಧವಿರುವುದನ್ನು ಗುರುತಿಸುತ್ತಾನೆ.

ಮನುಷ್ಯನ ಚಿಂತೆಗೆ ಕಾರಣ ಮತ್ತು ಪರಿಹಾರಗಳನ್ನು ಆತನಲ್ಲಿಯೇ ಹುಡುಕುವ ಸರ್ವಜ್ಞ ಮನುಷ್ಯ ತನ್ನ ಆತ್ಮದ ನೆಲೆಯನ್ನ ಅರಿತು ಎಲ್ಲಾ ಭ್ರಾಂತಿಗಳನ್ನು ಕಳೆದುಕೊಂಡಾಗ ಚಿಂತೆಯಿಂದ ಮುಕ್ತಿಪಡೆಯುತ್ತಾನೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎನ್ನುತ್ತಾನೆ. ತನ್ನಲ್ಲಿನ ಅಜ್ಞಾನವನ್ನು ನೀಗಿಕೊಂಡು ತನ್ನ ತಾನು ಅರಿಯುವುದಲ್ಲಿಯೇ ಎಲ್ಲ ಬಗೆಯ ಚಿಂತೆ, ಭಯ, ಅಂಜಿಕೆ, ಮಾಯೆಗಳಿಂದ ಬಿಡುಗಡೆಯಿದೆ ಎನ್ನುತ್ತಾನೆ.

**"ಜಾತಿಸೂಚಕವಳಿದು ಭ್ರಾಂತಿಯ ಗುಣವಳಿದು**
**ಆತುಮನ ನೆಲೆಯ ನೆರೆಯರಿದುನಿಂದವನಿ**
**ಗೇತರ ಚಿಂತೆ ಸರ್ವಜ್ಞ"**

ತನ್ನನ್ನು ತಾನು ಅರಿಯುವುದೇ ಜ್ಞಾನ. ಎಲ್ಲ ಬಗೆಯ ಮಾಯೆ, ಭ್ರಾಂತಿಗಳ ಬಿಡುಗಡೆಯ ಮಾರ್ಗವೂ ಅದೇ. ಅದು ಮನುಷ್ಯನಲ್ಲಿ ಹುಟ್ಟಿಸುವ ಆತ್ಮವಿಶ್ವಾಸ, ದೃಢತೆ, ಧೈರ್ಯಗಳು ಅವನ ವ್ಯಕ್ತಿತ್ವಕ್ಕೆ ಮೆರಗುತಂದುಕೊಡುತ್ತವೆ. ಮನುಷ್ಯನ ಬಹುತೇಕ ಸಮಸ್ಯೆಗಳಿಗೆ ಅವನೇ ಕಾರಣನಾಗಿರುತ್ತಾನೆ. ಅಷ್ಟೇ ಅಲ್ಲ ಅವನೇ ಪರಿಹಾರವೂ ಆಗಿರುತ್ತಾನೆ. ಹಾಗಾಗಿ ಸರ್ವಜ್ಞ ಮನುಷ್ಯನ ಸಮಸ್ಯೆಗಳಿಗೆ ಅವನಲ್ಲಿಯೇ ಪರಿಹಾರಗಳನ್ನು ಸೂಚಿಸುವ ಪ್ರಯತ್ನ ಮಾಡುತ್ತಾನೆ.

**"ಎಂಜಲು ಹೊಲೆಯಿಲ್ಲ ಸಂಜೆಗತ್ತಲೆಯಿಲ್ಲ**
**ಅಂಜಿಕೆಯಿಲ್ಲ ಭಯವಿಲ್ಲ ಜ್ಞಾನವೆಂ**
**ಬಂಜನವಿರಲು ಸರ್ವಜ್ಞ"**

ಮನುಷ್ಯನ ಅನೇಕ ಸಮಸ್ಯೆಗಳಿಗೆ ಅವನ ಅಜ್ಞಾನವೇ ಕಾರಣವೆಂಬುದು ಸರ್ವಜ್ಞನ ಅಭಿಮತ. ಅಜ್ಞಾನವೆಂಬುದು ಮನುಷ್ಯನ ಹಲವು ದೌರ್ಬಲ್ಯ ಹಾಗೂ ಮಾನಸಿಕ ತೊಳಲಾಟಗಳ ಮೂಲವಾಗಿದೆ. ಅದರಲ್ಲೂ ಅವನನ್ನು ಅವನು ಅರಿತುಕೊಳ್ಳುವುದು ಬಹುಮುಖ್ಯ. ತನ್ನನ್ನು ತಾನು ಅರಿಯದವನು ಪರರನ್ನೂ, ಲೋಕವನ್ನೂ ಅರಿಯಲಾರ.

**"ಏನಾದಡೇನಯ್ಯಾ ತಾನಾಗದನ್ನಕ್ಕ**
**ತಾನಾಗಿ ತನ್ನನರಿದಡೆ ಲೋಕ ತಾ**
**ನೇನಾದೊಡೇನು ಸರ್ವಜ್ಞ"**

ತನ್ನನ್ನು ತಾನು ಅರಿತು ತಾನು ತಾನೇ ಆಗಿ ರೂಪುಗೊಳ್ಳುವುದರಲ್ಲಿ ಮನುಷ್ಯತ್ವದ ಸಾರ್ಥಕತೆಯಿದೆ. ತನ್ನನ್ನು ತಾನು ಅರಿತ ಜ್ಞಾನಿ ಪರಿಪೂರ್ಣನಾಗಿರುತ್ತಾನೆ. ಆಗ ಆತನಿಗೆ ದೌರ್ಬಲ್ಯಗಳಿಲ್ಲ, ಗೊಂದಲಗಳಿಲ್ಲ, ಅಸ್ವಸ್ಥತೆಗಳಿಲ್ಲ. ಆತನಿಂದ ಪರರಿಗೆ, ಸಮಾಜಕ್ಕೆ ಕೇಡಿಲ್ಲ. ಆತನನ್ನು ಯಾರೂ ಶೋಷಿಸಲು ಸಾಧ್ಯವಿಲ್ಲ. ಜ್ಞಾನಿ ತಾನು ಉದ್ಧಾರವಾಗುವುದರೊಂದಿಗೆ ಇತರರನ್ನೂ ಉದ್ಧರಿಸುತ್ತಿರುತ್ತಾನೆ. ಇತರರಲ್ಲೂ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತಿರುತ್ತಾನೆ.

**"ಎತ್ತಹೋದರೆ ಮನವ ಹತ್ತಿಕೊಂಡಿರುತಿಹುದು**
**ಮತ್ತೊಬ್ಬ ಮುನಿದುಕೊಳಲರಿಯ ಜ್ಞಾನದ**
**ಬಿತ್ತು ಲೇಸಯ್ಯ ಸರ್ವಜ್ಞ"**

ಮನುಷ್ಯನ ಬದುಕಿನ ಸಾರ್ಥಕತೆ ಅವನು ಗಳಿಸುವ ಜ್ಞಾನದಲ್ಲಿದೆ. ಹೀಗೆ ಜ್ಞಾನಿಯಾದವನು ಸಮಾಜದಲ್ಲಿ ಯಾವಯಾವ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು ಎಂಬುದೂ ಮುಖ್ಯ. ಏಕೆಂದರೆ ಮನುಷ್ಯರ ಸ್ವಭಾವಗಳು ಒಂದೇ ತೆರನಾಗಿಲ್ಲ. ವಿಭಿನ್ನ ಮನಸ್ಥಿತಿ, ಅಭಿರುಚಿಗಳುಳ್ಳ ಮನುಷ್ಯರ ನಡುವೆ ಜ್ಞಾನಿಯೊಬ್ಬ ಹೇಗೆ ವರ್ತಿಸಬೇಕು ಎಂಬ ವಿವೇಕವನ್ನೂ ಆತ ತಿಳಿದಿರಬೇಕು.

**"ತತ್ವವನರಿದಡೆ ಸತ್ತಹಾಗಿರಬೇಕು**
**ತತ್ವವನರಿದು ಉಸುರಿದರೆ ಸತ್ತವರಿ**
**ಗತ್ತ ಹಾಗಕ್ಕು ಸರ್ವಜ್ಞ"**

ಜ್ಞಾನಿಗೆ 'ಮೌನ'ವೆಂಬುದು ಭೂಷಣವಿದ್ದಂತೆ. ಜ್ಞಾನಕ್ಕೂ ಮೌನಕ್ಕೂ ಸಂಬಂಧವಿದೆ. ತನಗೆ ತಿಳಿದಿರುವುದನ್ನೆಲ್ಲಾ ಎಲ್ಲಾ ಕಡೆ, ಎಲ್ಲಾ ಸಂದರ್ಭದಲ್ಲಿ, ಎಲ್ಲರೆದುರಿಗೆ ಹೇಳುವುದು ಅಪಾಯಕಾರಿ ಹಾಗೂ ನಿಷ್ಪ್ರಯೋಜಕವಾಗುವ ಸಂದರ್ಭಗಳೇ ಹೆಚ್ಚು. ಹಾಗಾಗಿ ಜ್ಞಾನಿ ಮೌನಿಯಾಗಿರಬೇಕಾದ ಅವಶ್ಯಕತೆಯೂ ಇದೆ. ಆದರೆ ಈ ಮೌನ ಸಮಾಜದ ಬಗೆಗೆ ಇರುವ ನಿರ್ಲಿಪ್ತ ಭಾವವಲ್ಲ. ಮೌನವೂ ಪರಿಣಾಮಕಾರಿ ಸಂವಹನ ಎಂಬ ವಿವೇಕ ಸರ್ವಜ್ಞನದು. ಬುದ್ಧನ ಮೌನದ ಹಿಂದಿನ ಅರ್ಥ ಇದು. ಏಕೆಂದರೆ ಮಾತು ಉಂಟುಮಾಡದ ಪರಿಣಾಮವನ್ನು ಮೌನ ಮಾಡಿರುತ್ತದೆ. ಮಾತಿನಿಂದ ಅಪಾರ್ಥಗಳೂ ಆಗಬಹುದು. ಅಭಿಮಾನದ ಹಾನಿಯೂ ಆಗಬಹುದು.

**"ಆನೆ ಬಟ್ಟೆಯಲಿ ಬರೆ ಶ್ವಾನನು ಬೊಗಳಲಾ**
**ಶ್ವಾನನಿಗೆ ಆನೆ ಗಜರಿದಡೆ ಆನೆಗಭಿ**
**ಮಾನದ ಹಾನಿ ಸರ್ವಜ್ಞ"**

ಜ್ಞಾನಕ್ಕೂ ಮೌನಕ್ಕೂ, ಮಾತಿನ ವಿವೇಕಕ್ಕೂ, ಸಂದರ್ಭ–ಸೊಲ್ಲಿನ ಭೇದವರಿತು ನುಡಿಯುವುದಕ್ಕೂ ಸಂಬಂಧವಿದೆ. ಅಜ್ಞಾನಿ ಮಾತಾಡಿ ವೈಮನಸ್ಯಕ್ಕೆ ಕಾರಣವಾದರೆ ಜ್ಞಾನಿ ಮೌನವಾಗಿದ್ದು ಸಮರಸತೆಗೆ ಕಾರಣನಾಗುತ್ತಾನೆ.

**" ಜ್ಞಾನಿಯಜ್ಞಾನಿಗೆ ತಾನೊಂದು ಕುರುಹುಂಟು**
**ಏನೊಂದನಾರು ನುಡಿದರೆ ಜ್ಞಾನಿ ಮಾ**
**ತಾಡದಿರುತಿಹನು ಸರ್ವಜ್ಞ"**

ಅಜ್ಞಾನಿ ಮಾತಾಡಿ ಅಪಾಯಗಳಿಗೆ ಕಾರಣನಾಗುವುದರ ಜೊತೆಗೆ ವೈರತ್ವಕ್ಕೂ ಕಾರಣನಾಗುತ್ತಾನೆ. ಆದರೆ ಜ್ಞಾನಿ ಸ್ವತಹ ವೈರವನ್ನು ತೊರೆಯುವುದರ ಜೊತೆಗೆ ಇತರರಲ್ಲೂ ವೈರತ್ವದ ನಾಶಕ್ಕೆ ಕಾರಣನಾಗುತ್ತಾನೆ. ಇದು ಜ್ಞಾನದ ಮಹತ್ವ. ಜ್ಞಾನ ಮನುಷ್ಯ ವರ್ತನೆಗಳನ್ನು ಸಕಾರಾತ್ಮಕವಾಗಿ ಬದಲಾಯಿಸುವ ಮೂಲಕ ಮನುಷ್ಯನ ಆತ್ಮೋನ್ನತಿಗೆ ಕಾರಣವಾಗುತ್ತದೆ ಎನ್ನುತ್ತಾನೆ ಸರ್ವಜ್ಞ.

**"ಜಾತಿ ಜಾತಿಗೆ ವೈರ ನೀತಿ ಮೂರ್ಖಗೆ ವೈರ**
**ಪಾತಕ ವೈರ ಸುಜನರಿಗೆ ಅರಿವವನಿ**
**ಗೇತರ ವೈರ ಸರ್ವಜ್ಞ"**

ನೀತಿ, ಸನ್ಮಾರ್ಗ, ಲೋಕಸತ್ಯಗಳನ್ನು ವಿರೋಧಿಸುವ ಮನುಷ್ಯ ಗುಣಗಳನ್ನು ಹೇಳುತ್ತಲೇ ಜ್ಞಾನಿ ಇವೆಲ್ಲವನ್ನೂ ಮೀರಿ ನಿಲ್ಲುತ್ತಾನೆ ಎನ್ನುತ್ತಾನೆ. ಮನುಷ್ಯ ಗುಣಗಳನ್ನು ಮೀರಿ ಮನುಷ್ಯತ್ವದ ಕಡೆಗೆ, ದೈವತ್ವದ ಕಡೆಗೆ ಚಲಿಸುವುದೇ ನಿಜವಾದ ಚಲನೆ.

ಜ್ಞಾನ, ಸತ್ಯ, ಪ್ರಾಮಾಣಿಕತೆ, ನೀತಿ ಇವುಗಳು ಮನುಷ್ಯನನ್ನು ಮನುಷ್ಯ ಸಹಜ ದೌರ್ಬಲ್ಯ ವರ್ತನೆಗಳಿಂದ ಊರ್ಧ್ವಮೂಖದ ಕಡೆಗೆ ಕರೆದುಕೊಂಡು ಹೋದರೆ, ಅಸತ್ಯ, ಅಪ್ರಾಮಾಣಿಕತೆ, ಅಜ್ಞಾನ, ಅನೈತಿಕತೆಗಳು ಮನುಷ್ಯನನ್ನು ಅಧೋಮುಖದ ಕಡೆಗೆ ಚಲಿಸುವಂತೆ ಮಾಡುತ್ತವೆ. ಅಸತ್ಯದ ಹಾದಿಯಲ್ಲಿ ಸಾಗುವವನು ಮೌಢ್ಯಗಳ ದಾಸನಾಗಿ ಮಾನಸಿಕ ಗೊಂದಲ, ಕ್ಷೋಬೆಗೊಳಗಾಗಬೇಕಾಗುತ್ತದೆ. ಆದರೆ ಸತ್ಯದ ಹಾದಿಯಲ್ಲಿ ಸಾಗುವವರಿಗೆ ಈ ಗೊಂದಲಗಳಿರುವುದಿಲ್ಲ.

**"ನಿತ್ಯನೇಮಗಳೇಕೆ ಮತ್ತೆ ಪೂಜೆಗಳೇಕೆ**
**ನೆತ್ತಿಬೋಳೇಕೆ ಜಡೆಯೇಕೆ ಅರಿದು ನೆರೆ**
**ಸತ್ಯವುಳ್ಳವಗೆ ಸರ್ವಜ್ಞ"**

ಮಾನಸಿಕ ಗೊಂದಲ, ಆತಂಕಗಳಿಗೂ, ಮೌಢ್ಯಗಳಿಗೂ, ಅಸತ್ಯ ಅಜ್ಞಾನಗಳಿಗೂ ನೇರ ಸಂಬಂಧವನ್ನು ಗುರುತಿಸುವ ಸರ್ವಜ್ಞ ಮನುಷ್ಯನ ಮಾನಸಿಕ ತೊಳಲಾಟಗಳಿಗೆ ಕಾರಣ ಮತ್ತು ಪರಿಹಾರವನ್ನು ಹುಡುಕುತ್ತಿದ್ದಾನೆ. ಮನುಷ್ಯ ತನ್ನ ಅಜ್ಞಾನವನ್ನು ತೊರೆಯುವುದರ ಜೊತೆಗೆ ಇನ್ನಿತರ ಸ್ವಭಾವಗಳನ್ನು ತೊರೆಯಬೇಕು. ಇಲ್ಲವಾದರೆ ಅವು ಅವನ ಮಾನಸಿಕ ಗೊಂದಲಕ್ಕೆ ಕಾರಣವಾಗುವುದರ ಜೊತೆಗೆ ಸಾಮಾಜಿಕ ಮೌಢ್ಯ ಹಾಗೂ ಸಮಸ್ಯೆಗಳಿಗೂ ಕಾರಣವಾಗುತ್ತವೆ. ಆಸೆ, ಲೋಭ, ಕೋಪ,

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವೈರ, ಕಪಟ, ಮೋಸ, ವ್ಯಭಿಚಾರ ಈ ಮುಂತಾದ ವರ್ತನೆಗಳನ್ನು ನಿಯಂತ್ರಿಸಿಕೊಳ್ಳದ ಹೊರತು ಅವನಿಗೆ ಮಾನಸಿಕ ಸ್ವಾಸ್ಥ್ಯ ಲಭಿಸಲಾರದು. ಅಂಥವರಿಂದ ಸ್ವಸ್ಥ ಸಮಾಜದ ನಿರ್ಮಾಣವೂ ಅಸಾಧ್ಯವಾಗುತ್ತದೆ.

**"ಕಾಸೆಕಚ್ಚುಟವೇಕೆ ಆಸುರದ ಜಡೆಯೇಕೆ**
**ಕೇಶವ ಕಿತ್ತುಕೊಳಲೇಕೆ ಅರುವಿಲ್ಲ**
**ದಾಸೆಬಿಡದನಕ ಸರ್ವಜ್ಞ"**

ಮನುಷ್ಯ ತನ್ನ ಮಾನಸಿಕ ವಿಕಾಸಕ್ಕೆ ಅಡ್ಡಿಯಾಗಿರುವ ಸ್ವಭಾವಗಳನ್ನು ತೊರೆಯದೆ ಬೇರೆ ಏನೇ ಆಚರಣೆ, ನಂಬಿಕೆ, ಮೌಢ್ಯಗಳಲ್ಲಿ ತೊಡಗಿದರೂ ಅವು ಇನ್ನಷ್ಟು ಮಾನಸಿಕ ಗೊಂದಲ, ಕ್ಷೋಭೆಗಳಿಗೆ ಕಾರಣವಾಗುತ್ತದೆಯೇ ಹೊರತು ಅದರಿಂದ ಬಿಡುಗಡೆಯಂತೂ ಸಾಧ್ಯವಿಲ್ಲ. ಮನುಷ್ಯನ ಮಾನಸಿಕ ಕಾಯಿಲೆಗಳ ಬಿಡುಗಡೆ ಅವನ ಮನಸ್ಸನ್ನೇ ಅವಲಂಬಿಸಿರುತ್ತದೆಯೇ ಹೊರತು ಬಾಹ್ಯ ಆಚರಣೆಗಳಲ್ಲ.

ಮನಸ್ಸಿನ ದೃಢತೆ ಎಲ್ಲ ಬಗೆಯ ಸಾಧನೆಗಳ ಮೆಟ್ಟಿಲು. ಮಾನಸಿಕ ದೃಢತೆಯನ್ನು ಕಳೆದುಕೊಂಡವ ಮಾನಸಿಕ ರೋಗಿಯೇ ಸರಿ. ಆತ ತನ್ನ ಬದುಕನ್ನು ನರಕಗೊಳಿಸಿಕೊಳ್ಳುವುದರೊಂದಿಗೆ ಇತರರ ಬದುಕನ್ನೂ ನರಕವಾಗಿಸುತ್ತಾನೆ.

**"ಒಮ್ಮನದಿ ಬಿತ್ತಕ್ಕು ಇಮ್ಮನದಿ ಜಳ್ಳಕ್ಕು**
**ಒಮ್ಮನದಿ ಮೋಕ್ಷಪದವಕ್ಕು ಲೋಕ ತಾ**
**ಇಮ್ಮನದಿ ಕೆಡುಗು ಸರ್ವಜ್ಞ"**

ಲೋಕದ ನಾಶಕ್ಕೆ, ಲೋಕದ ಅಸ್ವಸ್ಥತೆಗೆ ಮನಸ್ಸಿನ ಗೊಂದಲಗಳೇ ಕಾರಣವೆನ್ನುತ್ತಾನೆ ಸರ್ವಜ್ಞ. ಮಾನಸಿಕ ದೃಢತೆ, ಗಟ್ಟಿತನಗಳಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಉತ್ತಮ ಬದುಕನ್ನು ರೂಪಿಸಿಕೊಳ್ಳಲೂ ಸಾಧ್ಯವಿಲ್ಲ. ನೆಮ್ಮದಿ, ಸುಖಗಳನ್ನು, ಸಾರ್ಥಕತೆಯನ್ನು ಪಡೆಯಲೂ ಸಾಧ್ಯವಿಲ್ಲ.

ಮನುಷ್ಯನ ನೆಮ್ಮದಿಗೂ ಆತನ ನಡೆ ನುಡಿಗಳ ಪ್ರಾಮಾಣಿಕತೆಗೂ ಸಂಬಂಧ ಕಲ್ಪಿಸುವ ಸರ್ವಜ್ಞ ನಡೆ–ನುಡಿಯಲ್ಲಿ ಏಕತೆ ಸಮನಿಸದಿದ್ದರೆ ಬದುಕಿನ ಸಂಕೋಲೆಗಳನ್ನು ತಾನೇ ಸೃಷ್ಟಿಸಿಕೊಂಡಂತೆ ಎನ್ನುತ್ತಾನೆ. ಬದುಕಿನಲ್ಲಿ ಎದುರಾಗುವ ಸಂಕಷ್ಟಗಳು ಆಕಸ್ಮಿಕವಲ್ಲ, ದೈವ ಸೃಷ್ಟಿಯೂ ಅಲ್ಲ. ಜನ್ಮಾಂತರದ ಕರ್ಮಫಲವೂ ಅಲ್ಲ. ಅವು ನಮ್ಮ ನಡೆ–ನುಡಿಯ ಅಸಂಬದ್ಧತೆಯ ಫಲಗಳಷ್ಟೇ ಎಂಬುದು ಸರ್ವಜ್ಞನ ಗ್ರಹಿಕೆ.

**"ಅಡವಿಯಲಿ ಮೋನದಲಿ ದೃಢದೆ ತಪವಿರ್ದೊಡಂ**
**ನುಡಿಯಲ್ಲಿ ಶಿವನ ಮರೆದೊಡೆ ಭವಬೆನ್ನ**
**ಬಿಡದಿಹುದು ನೋಡ ಸರ್ವಜ್ಞ"**

ಮನುಷ್ಯನ ಕೋಪದ ಕಾರಣ, ಪರಿಣಾಮಗಳ ಬಗ್ಗೆ ಮಾತನಾಡುವ ಸರ್ವಜ್ಞ ಆ ಕೋಪವನ್ನು ನಿಯಂತ್ರಿಸಿಕೊಳ್ಳದಿದ್ದರೆ ಎದುರಿಸಬೇಕಾದ ಅಪಾಯಗಳ ಬಗ್ಗೆ ಎಚ್ಚರಿಸುತ್ತಾನೆ. ಕೋಪ ಮನುಷ್ಯನ ಮಾನಸಿಕ ಸ್ಥಿಮಿತತೆಯನ್ನು ಹಾಳುಮಾಡುತ್ತದೆ. ಕೋಪವಿದ್ದವರು ದುಡುಕುತ್ತಾರೆ. ಕೋಪ ಮನುಷ್ಯನ ಬುದ್ಧಿ, ವಿವೇಕಗಳನ್ನು ಮಸಕುಗೊಳಿಸುತ್ತದೆ. ಕೋಪ ಮಾನಸಿಕ ಕ್ಷೋಭೆಗೆ, ದೈಹಿಕ ಅಸ್ವಸ್ಥತೆಗೆ ಕಾರಣವಾಗುತ್ತದೆ. ಇದನ್ನರಿತ ಸರ್ವಜ್ಞ ಕೋಪವನ್ನು ನಿಯಂತ್ರಿಸಿಕೊಳ್ಳಬೇಕಾದ ಅಗತ್ಯದ ಬಗ್ಗೆ ಮಾತನಾಡುತ್ತಾನೆ.

**"ಸಾವಿಂಗೆ ಸಮತೆಗೆ ಆವುದಂತರವಯ್ಯ**
**ಸಾವು ತಾ ಸಮತೆಯೊಳಗಲ್ಲ ಕೋಪವ**
**ಸಾವುದೆ ಸಮತೆ ಸರ್ವಜ್ಞ"**

ಕೋಪವನ್ನು ಸಾಯಿಸದಿದ್ದರೆ ಆ ಕೋಪವೇ ತನ್ನನ್ನು ಸಾಯಿಸುತ್ತದೆ ಎನ್ನುತ್ತಾನೆ ಸರ್ವಜ್ಞ. ಕೋಪವನ್ನು ನಿಯಂತ್ರಿಸಿಕೊಳ್ಳದೆ ಮಾನಸಿಕ ಸಮತೆ ದೊರೆಕೊಳ್ಳದು.

**ಪಾಪವೆಂಬುದು ಕೇಳಿ ಕೋಪವೆ ನೆಲೆಗಟ್ಟು**
**ಕೂಪದಲಿ ನೇಣ ಹರಿದಂತೆ ನರಕಕ್ಕೆ**
**ಕೋಪಿ ತಾನಿಳಿದ ಸರ್ವಜ್ಞ"**

ಎಲ್ಲ ಪಾಪಗಳ ನೆಲೆಗಟ್ಟು ಕೋಪ ಎಂದು ಹೇಳುತ್ತಲೇ ಕೋಪದಿಂದ ನಮ್ಮ ನರಕವನ್ನು ನಾವೇ ಸೃಷ್ಟಿಸಿಕೊಂಡು ಅವಸಾನ ಹೊಂದಬೇಕಾಗುತ್ತದೆ ಎನ್ನುತ್ತಾನೆ. ಕೋಪ ಎನ್ನುವುದು ಒಂದು ಮಾನಸಿಕ ವ್ಯಾಪಾರ. ಇದು ಅಪಾಯಕಾರಿ ಅಷ್ಟೇ ಅಲ್ಲ. ಇದು ಕೋಪ ಮಾಡಿಕೊಂಡವರನ್ನೇ ಮೊದಲು ಬಲಿತೆಗೆದುಕೊಳ್ಳುತ್ತದೆ ಎನ್ನುತ್ತಾನೆ. 'ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರಮನೆಯ ಸುಡುವುದೇ' ಎಂದು ಕೇಳುವ ಬಸವಣ್ಣನ ವಚನದ ಇಂಗಿತವೂ ಇದೇ ಆಗಿದೆ. ಕೋಪ ಮನುಷ್ಯನನ್ನು ಮಾನಸಿಕವಾಗಿ, ದೈಹಿಕವಾಗಿ ಜರ್ಜರಿತಗೊಳಿಸಿಬಿಡುತ್ತದೆ. ನಮ್ಮ ಕೋಪ ಮೊದಲು ನಮ್ಮ ಮೇಲೇ ಪರಿಣಾಮ ಬೀರುತ್ತದೆ. ಕೋಪದ ಮೊದಲ ಬಲಿ ಕೋಪಿಸಿಕೊಂಡವರೇ ಆಗಿರುತ್ತಾರೆ ಎನ್ನುತ್ತಾನೆ ಸರ್ವಜ್ಞ.

ಮನುಷ್ಯ ವರ್ತನೆಗಳ ಗಾಢ ಅನುಭವಗಳಿಂದ ಹುಟ್ಟಿದ ಸರ್ವಜ್ಞನ ವಚನಗಳು ಮನುಷ್ಯನ ಮನೋವ್ಯಾಪಾರಗಳ ಆಗರಗಳಾಗಿವೆ. ಸರ್ವಜ್ಞನ ವಚನಗಳ ಕೇಂದ್ರ ಮನುಷ್ಯನೇ ಆಗಿದ್ದು ಮನುಷ್ಯ ಮತ್ತು ಸಮಾಜದ ಸ್ವಾಥ್ಯವನ್ನು ಕಾಪಾಡಬೇಕಾದರೆ ಮನುಷ್ಯನ ವರ್ತನೆಗಳಲ್ಲಿ ಬದಲಾವಣೆಗಳಾಗಬೇಕಾದುದನ್ನು ನಿಷ್ಠುರವಾಗಿ ಪ್ರತಿಪಾದಿಸುತ್ತವೆ. ಮನುಷ್ಯನ ಮಾನಸಿಕ ಸ್ಥಿತಿ ಸುಧಾರಣೆಗೊಳ್ಳದ ಹೊರತು ಮನುಷ್ಯ ಮತ್ತು ಸಮಾಜ ಸುಧಾರಣೆಯಾಗಲು ಸಾಧ್ಯವಿಲ್ಲ ಎಂಬ ಅರಿವಿನಿಂದ ಹೊರಡುವ ಸರ್ವಜ್ಞನ ವಚನಗಳು ಮನೋಚಿಕಿತ್ಸಕ ಗುಣಗಳಿಂದ ಕೂಡಿವೆ. ಯಾವ ವರ್ತನೆಗಳಿಂದ ಮನುಷ್ಯ ಮತ್ತು ಸಮಾಜಕ್ಕೆ ಒಳಿತಾಗುವುದೋ ಅಂತಹ ವರ್ತನೆಗಳ ಬಾಹುಳ್ಯವನ್ನೇ ಸರ್ವಜ್ಞನ ವಚನಗಳು ಬೋಧಿಸುತ್ತವೆ. ಮನುಷ್ಯ ಸ್ವಭಾವಗಳನ್ನು ಸಮಗ್ರವಾಗಿ ವಿವೇಚಿಸುವ ಸರ್ವಜ್ಞನ ವಚನಗಳು ಮನೋವ್ಯಾಪಾರಗಳನ್ನು ಅಭ್ಯಸಿಸುವವರಿಗೆ ಅಮೂಲ್ಯ ಆಕರಗಳಾಗುತ್ತವೆ. ಆಧುನಿಕ ಬದುಕು ಮನುಷ್ಯನ ಮಾನಸಿಕ ಆರೋಗ್ಯದ ಮೇಲೆ ಎಸೆಯುತ್ತಿರುವ ಸವಾಲುಗಳಿಗೆ ಸರ್ವಜ್ಞನ ವಚನಗಳಲ್ಲಿ ಪರಿಹಾರಗಳಿವೆ. ಮನೋವಿಜ್ಞಾನದ ಸಿದ್ಧಾಂತ ಮತ್ತು ವಿಶ್ಲೇಷಣೆಗಳ ವಿಸ್ತರಣೆಗೆ, ಸಂದೇಹಗಳಿಗೆ ಸರ್ವಜ್ಞನ ವಚನಗಳು ಅಮೂಲ್ಯ ಒಳನೋಟಗಳನ್ನು ಒದಗಿಸುವುದರಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತವೆ.

■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನ್ನಡ ಜನಪದ ಸಾಹಿತ್ಯ – ಸಂಸ್ಕೃತಿ ಮತ್ತು ತಾತ್ವಿಕತೆ

✍ **ಡಾ. ಎಸ್. ಶಶಿರೇಖಾ,** ಸಹ ಪ್ರಾಧ್ಯಾಪಕರು, ನಂ. ೪೭೦, ತಿಮ್ಮನಹಳ್ಳಿ, ಕಂದಿಕೆರೆ (ಹೋ), ಚಿಕ್ಕನಾಯಕನಹಳ್ಳಿ (ತಾ.) ತುಮಕೂರು ಜಿಲ್ಲೆ –೫೭೨೨೨೮.

ಸಂಸ್ಕೃತಿ ಅಧ್ಯಯನದ ಸಂದರ್ಭದಲ್ಲಿ ಜನಪದ ಸಾಹಿತ್ಯದಲ್ಲಿ ಸಂಸ್ಕೃತಿ, ಶಿಷ್ಟ ಸಾಹಿತ್ಯದಲ್ಲಿ ಸಂಸ್ಕೃತಿ ಎಂದು ವಿಭಾಗಿಸಿ ನೋಡುತ್ತೇವೆ. ಸಹಸ್ರಾರು ವರ್ಷಗಳಿಂದ ಮಾನವ ತನ್ನ ಜೀವನ ಯಾತ್ರೆಯಲ್ಲಿ ಒಂದು ಕಾಲದಲ್ಲಿ ಕಂಠಸ್ಥ ಸಂಪ್ರದಾಯದಲ್ಲಿ ಮಾತ್ರವಿದ್ದನು. ಜೀವನದ ರೀತಿ ನೀತಿಗಳು, ಆಚಾರ ವಿಚಾರಗಳು, ಸಂಪ್ರದಾಯಗಳು, ನಂಬಿಕೆಗಳು ಎಲ್ಲವೂ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಕಂಠಸ್ಥ ರೂಪದಲ್ಲಿಯೇ ಚಲಿಸುತ್ತಿದ್ದಿತು. ಬಾಯಿಂದ ಬಾಯಿಗೆ ಜನಪದರಲ್ಲಿದ್ದ ಎಲ್ಲ ಜ್ಞಾನ ಸಂಪತ್ತು ಹರಿದು ಬರುತ್ತಿತ್ತು. ಜನಪದ ಅನುಭವ ಬಂಡಾರದೊಂದಿಗೆ ಸಂಸ್ಕೃತಿ ಮತ್ತು ತಾತ್ವಿಕತೆ ವಿಚಾರಗಳು ಕೂಡ ನಿರಂತರವಾಗಿ ಚಲಿಸುತ್ತಿದ್ದವು. ಜಾನಪದ ಸಾಹಿತ್ಯದ ಸಂಗ್ರಹ ಮತ್ತು ವಿವೇಚನೆ ಇತ್ತೀಚಿನ ಎರಡು ಶತಮಾನಗಳ ಪರಿಕಲ್ಪನೆ. ಕಂಠಸ್ಥವಾಗಿದ್ದ ಎಲ್ಲ ಸಂಪತ್ತನ್ನು ಅದು ನಶಿಸಿ ಹೋಗುವ ಮುಂಚೆ ಸಂಗ್ರಹಿಸಿಕೊಳ್ಳುವ ಕೆಲಸ ವಿದ್ವಾಂಸರಿಂದ ಆರಂಭವಾಯಿತು. ಕನ್ನಡ ನಾಡಿನಲ್ಲಿ 1931 ರಿಂದ ಈಚೆಗೆ ಜನಪದ ಜ್ಞಾನ ಭಂಡಾರದ ಸಂಗ್ರಹಣೆ ಆರಂಭವಾಗಿದೆ. ಆಚಾರ, ವಿಚಾರ, ರೂಢಿ ಪದ್ಧತಿ, ನಂಬಿಕೆ, ಸಾಹಿತ್ಯ, ಮದ್ದು, ಕ್ರೀಡೆ, ಕಲೆ, ನೃತ್ಯ, ನಾಟಕ, ಅಡುಗೆ, ಉಡುಗೆ–ತೊಡುಗೆ, ಮನೋರಂಜನಾ ಮಾಧ್ಯಮಗಳು, ಧಾರ್ಮಿಕ ಕ್ರಿಯೆಗಳು ಮತ್ತು ಜೀವನ ವಿಧಾನಗಳು ಎಲ್ಲವನ್ನೂ ಒಳಗೊಂಡ ಸಂಸ್ಕೃತಿಯ ಪೂರ್ಣ ಚೌಕಟ್ಟನ್ನು ನಾವು 'ಜಾನಪದ' ಎಂದು ಅಧ್ಯಯನಕ್ಕೆ ಒಳಪಡಿಸಬಹುದು. ಗೀತೆ, ಲಾವಣಿ, ಕಾವ್ಯ, ಕಥೆ, ಗಾದೆ, ಒಗಟು ಇತ್ಯಾದಿಗಳನ್ನು ಒಳಗೊಂಡ ಜನಪದ ಸಾಹಿತ್ಯವು ಜಾನಪದ ಸಂಸ್ಕೃತಿಯ ಒಂದು ಸಣ್ಣ ಅಂಗವೆಂದು ಗುರುತಿಸಬಹುದು. ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಬರುವಾಗ ಪರಿಷ್ಕರಣಗೊಂಡು, ಹೊಸ ಹೊಸ ವಿಚಾರಗಳನ್ನು ಮೈಗೂಡಿಸಿಕೊಂಡು ನಿರಂತರವಾಗಿ ನದಿಯಂತೆ ಹರಿದು ಬಂದ ಸಾಹಿತ್ಯ ಜನಪದ ಸಂಸ್ಕೃತಿ ಮತ್ತು ತಾತ್ವಿಕತೆಯ ಕನ್ನಡಿ ಎಂದೇ ಹೇಳಬಹುದು.

## ಸಂಸ್ಕೃತಿ ವಿಶ್ಲೇಷಣೆ ಮತ್ತು ಜನಪದ ಸಾಹಿತ್ಯ

ಸಂಸ್ಕೃತಿ ಎಂಬ ಪದವು 'ಕಲ್ಚರ್' ಎಂಬ ಇಂಗ್ಲಿಷ್ ಪದದಿಂದ ಬಂದಿದೆ. ಕಲ್ಚರ್ ಎಂಬ ಪದ ಲ್ಯಾಟಿನ್ ಭಾಷೆಯ ಕಲ್ಟ್, ಕಲರಸ್ ಎಂಬ ಶಬ್ದಗಳಿಂದ ಬಂದಿವೆ. 'ಕಲ್ಚರ್' ಎಂದರೆ 'ಭೂಮಿ ದೈವದ ಆರಾಧನೆ' ಮತ್ತು ಪೈರು ಬೆಳೆಯುವುದು ಎಂದು ಅರ್ಥವಿದೆ. ಜಗತ್ತಿನ ಅತ್ಯುತ್ತಮ ಚಿಂತನೆಗಳು, ಆದರ್ಶಗಳು ಬೋಧನೆಗಳು, ಮಾನವನ ಅಂತರಂಗದ ಪರಿಪೂರ್ಣತೆಯ ಸಾಧನೆಗಾಗಿ ಅನುಸರಿಸುವ ಮಾರ್ಗಗಳು ಸಂಸ್ಕೃತಿಯ ಪರಿಧಿಯಲ್ಲಿ ಬರುತ್ತವೆ. ಟಿ.ಎಸ್.ಎಲಿಯಟ್ " ನೋಟ್ಸ್ ಟು ವರ್ಡ್ಸ್ ದಿ ಡೆಫಿನೇಷನ್ ಆಫ್‌ಕಲ್ಚರ್" ಎಂಬ ಕೃತಿಯಲ್ಲಿ ಸಂಸ್ಕೃತಿ ಕುರಿತು ಹೇಳಿರುವ ವಿಶ್ಲೇಷಣೆ ಬಹಳ ಪ್ರಾಮುಖ್ಯತೆ ಪಡೆದಿದೆ. "ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಸಮಗ್ರ ಜನರ ಜೀವನ ವಿಧಾನವೇ ಸಂಸ್ಕೃತಿ. ಸಮಗ್ರ ಜೀವನವೆಂದರೂ ಅದರಲ್ಲಿ ಶ್ರೇಷ್ಠ/ ಶ್ರೇಷ್ಠವಲ್ಲದ ಸಂಸ್ಕೃತಿ ಸ್ತರಗಳು ಇವೆ. ಇವು ಆರೋಗ್ಯಕರವಾದ ಸಮಾಜಕ್ಕೆ ಅಗತ್ಯ." ಸಮಗ್ರ ಜೀವನ ವಿಧಾನವನ್ನು ಸಂಸ್ಕೃತಿ ಎಂದು ತೆಗೆದುಕೊಳ್ಳುತ್ತೇವೆ. ಒಂದು ಅರ್ಥದಲ್ಲಿ ಈ ವ್ಯಾಖ್ಯಾನ ನಿತ್ಯ ಜೀವನದ ಜೊತೆಗೆ ಹೊಸದಾಗಿ ಕಾಲಾನುಸಾರ ಹುಟ್ಟಲಿರುವ ಹೊಸ ಹೊಸ ಜೀವನ ವಿಧಾನಗಳನ್ನು, ಸಾಂಸ್ಕೃತಿಕ ಸಂಘರ್ಷ ಮತ್ತು ಸವಾಜಿಕ ಬದಲಾವಣೆಗಳನ್ನು ಸಾಂಸ್ಕೃತಿಕ ಪಲ್ಲಟಗಳನ್ನು ಕೂಡಾ ಸಂಸ್ಕೃತಿಯ ಪರಿಧಿಗೆತಂದಿದೆ. ಕಾಲ ಕಾಲಕ್ಕೆ ಘಟಿಸುವ ಬದಲಾವಣೆಗಳು ಜ್ಞಾನ, ನಂಬಿಕೆ, ಕಲೆ, ನೀತಿ ನಿಯಮ, ಸಾಮರ್ಥ್ಯ ಮತ್ತು ಅನ್ವೇಷಣೆಗಳು ಸಂಸ್ಕೃತಿಗೆ ಹೊಸ ಆಯಾಮವನ್ನು ತಂದು ಕೊಡುತ್ತವೆ. ಸೃಜನಶೀಲ ಸನ್ನಿವೇಶಗಳಲ್ಲಿ ಸಂಸ್ಕೃತಿ ವಿಭಿನ್ನ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಕನ್ನಡ ಸಾಹಿತ್ಯದ ಸಮೃದ್ಧ ಘಟ್ಟಗಳಲ್ಲಿ ಬರುವ ವಿಭಿನ್ನ ಗ್ರಹಿಕೆಗಳು, ನಂಬಿಕೆಗಳು, ಅಭಿವ್ಯಕ್ತಿ ಕ್ರಮಗಳು ಸಂಸ್ಕೃತಿ ಬದಲಾವಣೆಯ ಹಿನ್ನಲೆಯಲ್ಲಿಯೇ ಹೊಸದೊಂದು ತಾತ್ವಿಕ ಸಿದ್ಧಾಂತವನ್ನು ಮಂಡಿಸುತ್ತವೆ.

ಜಾನಪದ ಸಾಹಿತ್ಯ ಅಧ್ಯಯನದಿಂದ ಕನ್ನಡ ನಾಡಿನ ಸಂಸ್ಕೃತಿಯ ಸಿದ್ಧ ಮಾದರಿ ಚೌಕಟ್ಟುಗಳು ನಮ್ಮ ಕಣ್ಣಿನಿಂದ ದೂರ ಸರಿಯುತ್ತವೆ. ಹೊಸದೊಂದು ಸಂಸ್ಕೃತಿಯ ನಿರ್ಮಾಣಕ್ಕೆ ಆಧಾರಗಳು ದೊರೆಯುತ್ತವೆ. ಕನ್ನಡ ನಾಡಿನ ಇತಿಹಾಸವನ್ನು ವಿಭಿನ್ನ ನೆಲೆಗಳಲ್ಲಿ ಅಧ್ಯಯನಕ್ಕೆ ಒಳಪಡಿಸುವ ಎಲ್ಲ ಸಾಧ್ಯತೆಗಳಿಗೆ ದಾರಿ ಸಿಗುತ್ತದೆ. ಸಾಂಸ್ಕೃತಿಕ ವೈಭವೀಕರಣಕ್ಕಿಂತ ಜೀವನಯಾತ್ರೆಯಲ್ಲಿ ಬಹುಮುಖಿ ನೆಲೆಗಳಲ್ಲಿ ನಡೆದ ದಬ್ಬಾಳಿಕೆ, ದೌರ್ಜನ್ಯಗಳು, ಮೂಢ ನಂಬಿಕೆ, ಕಂದಾಚಾರ, ಸುಲಿಗೆಗಳ ಮಧ್ಯೆಯೇ ಮಾನವೀಯತೆ ಮೆರೆದ ಜನಪದರ ಸರಳತೆ, ಸಂಸ್ಕೃತಿ, ಮತ್ತು ಜೀವನ ತತ್ವಗಳು ಮುಖ್ಯವಾಗುತ್ತವೆ. ಸವಾಜದಲ್ಲಿ ಬಲಹೀನತೆಯಿಂದ ಬಳಲಿದವ, ಹೆಳವ, ಕಿವುಡ, ಕುಂಟ, ಮುದುಕ, ರೋಗಿ, ಬಡವ, ಸಮಾಜದಲ್ಲಿ ನಿಂದನೆಗೆ ತುಳಿತಕ್ಕೆ ಒಳಗಾದ ವರ್ಗದವರು ಶೋಷಿತ ವರ್ಗಕ್ಕೆ ಸೇರಿದ ಹೆಂಗಸರು ಮೊದಲಾದವರು ಕಥೆಗಳ ಗೀತೆಗಳ ನಾಯಕ ನಾಯಕಿಯಾಗಿ ನಿಲ್ಲುವುದು ಮಾನವೀಯ ಸಂಸ್ಕೃತಿಯನ್ನು ದರ್ಶಿಸುತ್ತದೆ. ಜನಪದ ಸಾಹಿತ್ಯ, ಸಮಾಜಶಾಸ್ತ್ರ, ತತ್ವಶಾಸ್ತ್ರ ಮತ್ತು ಮನಃಶಾಸ್ತ್ರ ಮುಂತಾದ ವಿಭಿನ್ನ ನೆಲೆಗಳಲ್ಲಿ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ.

## ಜನಪದ ಸಂಸ್ಕೃತಿ ಮತ್ತು ತಾತ್ವಿಕತೆ

ಜನಪದರು ಕುಟ್ಟುವಾಗ, ಬೀಸುವಾಗ, ನಾಟಿ ಹಾಕುವಾಗ, ಕಣಗಳಲ್ಲಿ ಕೆಲಸ ಮಾಡುವಾಗ ಬೇಸರ ನಿವಾರಣೆಗಾಗಿ ಹಾಗೂ ಬಿಡುವಿನ ವೇಳೆಯಲ್ಲಿ ಅಂದರೆ ಕೃಷಿ ಚಟುವಟಿಕೆಗಳಿಲ್ಲದ ಬೇಸಿಗೆಯಲ್ಲಿ ಕಥೆ, ಲಾವಣಿ, ಗೀತೆಕಟ್ಟಿ ಹಾಡಿರಂಜನೆಯನ್ನು ಪಡೆಯುತ್ತಿದ್ದರು. ದೇವರ ಉತ್ಸವ, ಜಾತ್ರೆ ಮತ್ತು ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಗೀತೆಗಳು, ಕಥೆಗಳು, ಮಹಾಕಾವ್ಯಗಳು ಹೇಳಲ್ಪಡುತ್ತಿದ್ದರು. ಜನಪದಗದ್ಯ ಕಥನಗಳಲ್ಲಿ ಪುರಾಣ ಕಥೆಗಳು, ಕಟ್ಟು ಕಥೆಗಳು, ಐತಿಹ್ಯ, ಕಥನಗೀತೆ, ಮಹಾಕಾವ್ಯಗಳನ್ನು ನೋಡಬಹುದು. ಜನಪದ ಗೀತೆಗಳಲ್ಲಿ ಬೀಸುವ ಪದ, ಹಂತಿ ಹಾಡು, ಕುಟ್ಟುವ ಹಾಡು, ನಾಟಿ ಹಾಡು, ಲಾಲಿಪದಗಳು, ಸಂಪ್ರದಾಯದ ಆಚರಣೆಯ ಹಾಡುಗಳು, ಮದುವೆ ಒಸಗೆ ಹಾಡುಗಳು, ಮೊಹರಂ ಪದಗಳು, ಡೊಳ್ಳಿನ ಪದಗಳನ್ನು ನೋಡಬಹುದು. ಜನಪದ ಪ್ರದರ್ಶನ ಕಲೆಗಳು ಜನಪದ ಅಭಿವ್ಯಕ್ತಿಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರಮುಖ ಮಾಧ್ಯಮಗಳಾಗಿ ಮೂಡಿ ಬಂದಿವೆ. ಮೂಡಲಪಾಯ ಪಡುವಲಪಾಯ, ಬಯಲಾಟ, ದೊಡ್ಡಾಟ, ಸಣ್ಣಾಟ, ಯಕ್ಷಗಾನ ದಾಸರಾಟ, ದೊಂಬರಾಟ, ಗೊಬೆಯಾಟ ಮೊದಲಾದವು ಸಾಹಿತ್ಯ ಸಂಸ್ಕೃತಿ ಮತ್ತು ತಾತ್ವಿಕತೆಯನ್ನು ಪ್ರತಿಪಾದಿಸಿವೆ. ಮಲೆ ಮಾದೇಶ್ವರ ಮತ್ತು ಮಂಟೇಸ್ವಾಮಿ ಇಬ್ಬರೂ ಹಿಂದುಳಿದ ಜನಾಂಗಗಳಿಂದ ಬಂದ ಸಾಂಸ್ಕೃತಿಕ ನಾಯಕರು ಇವರ ಮಹಾಕಾವ್ಯಗಳನ್ನು ಹಾಡುವ ನೀಲಗಾರರು, ದೇವರಗುಡ್ಡದ ಗೊರವರು, ಚೌಡಿಕೆಯವರು, ಕಂಸಾಳೆಯವರು ಮೊದಲಾದ ವೃತ್ತಿಗಾಯಕರು ಜನಪದ ಸಂಸ್ಕೃತಿಯ ಪ್ರವರ್ಧಕ ಶಕ್ತಿಗಳು ಎಂದೇ ಪರಿಗಣಿಸಬಹುದು. ಮಕ್ಕಳ ಕುರಿತು ತಾಯಿ ಹಾಡುವ ಅನೇಕ ತ್ರಿಪದಿಗಳನ್ನು ಕನ್ನಡ ಜನಪದ ಸಾಹಿತ್ಯದಲ್ಲಿ ನೋಡಬಹುದು.ತಾಯಿಗೆ ಮಗು ಅಪ್ಯಾಯಮಾನ, ಸುಖದ ಗಣಿ. ತನ್ನೆಲ್ಲ ನೋವುಗಳನ್ನು ದುಃಖ ದುಮ್ಮಾನಗಳನ್ನು ಮಗುವಿನ ಮುಖನೋಡಿ ಮರೆಯುತ್ತಾಳೆ. ಎಲ್ಲವನ್ನ ತೊರೆದು ಸನ್ಯಾಸವನ್ನು ಸ್ವೀಕರಿಸಿದವನು ಕೂಡಾ ಮಕ್ಕಳ ಆಟವನ್ನು ಕಂಡು ಜಪವನ್ನು ಮರೆತು ಬಿಡುತ್ತಾನೆ. ತಾಯಿ ತನ್ನ ಮಕ್ಕಳ ಬಗೆಗೆ ತೋರುವ ಅಭಿಮಾನ, ಪ್ರೀತಿ ಅಸಮಾನ್ಯವೆಸುತ್ತದೆ. ಅನ್ನ ನೀಡುವ ಭೂಮಿ ತಾಯಿಯನ್ನು ಕೃತಜ್ಞತೆಯಿಂದ ನೆನೆಯುವ ಸಂಸ್ಕೃತಿ ನಮ್ಮದು. ಜನಪದರ ಜೀವನಾದರ್ಶಗಳು ಸರಳವಾಗಿ ವ್ಯಕ್ತವಾಗಿ ಇತರರಿಗೆ ಮಾದರಿಯೊಂದನ್ನು ರೂಪಿಸಿಕೊಡುವ ತಾತ್ವಿಕ ಚಿಂತನೆಗೆ ಇದು ದಾರಿಮಾಡಿಕೊಟ್ಟಿದೆ.

ಜನಪದರು ಬಳಸುವ ಪ್ರತಿಯೊಂದು ವಸ್ತುಗಳನ್ನು ತಮ್ಮ ಜೀವನದ ಭಾಗವಾಗಿ ಪ್ರೀತಿಯನ್ನು ಸ್ವೀಕರಿಸಿದ್ದರು. ಬೀಸುವ ಕಲ್ಲಿಗೆ ಕೊಟ್ಟಿದ್ದ ಮಹತ್ವ ಇಲ್ಲಿ ವ್ಯಕ್ತವಾಗುತ್ತದೆ. ಬೀಸುವ ಕಲ್ಲುಜನಪದ ಹೆಣ್ಣು ಮಗಳಿಗೆ 'ಕಲ್ಲಮ್ಮ' ಮಾತೆಯ ಸ್ವರೂಪವೆಂಬಂತೆ ಗೋಚರವಾಗಿದೆ. ರಾಗಿಯನ್ನು ಮೆಲ್ಲ ಮೆಲ್ಲನೆ ಪುಡಿಮಾಡಿ ಉದುರಿಸಮ್ಮ ಎಂದು ಕೇಳುವ ಹೆಣ್ಣು ಬೆಲ್ಲದಾರತಿಯ ಮಾಡುತ್ತೇನೆಂದು ಹೇಳುತ್ತಾಳೆ. ದಿನ ನಿತ್ಯ ಬಳಸುವ ವಸ್ತುಗಳು ಅವರ ಜೀವನದ ಅವಿಭಾಜ್ಯ ಅಂಗಗಳು ಹಾಗೂ ತಮ್ಮ ಒಳಗನ್ನು ಹಂಚಿಕೊಳ್ಳಲು ಸಿಗುವ ಭಾವಸ್ಪಂದನ ನೆಲೆಗಳು ಎಂದೇ ಹೇಳಬಹುದು.'ತಾಯಿ' ಎಲ್ಲ ಮಕ್ಕಳ ಸುಖ ಬಯಸುವವಳು ಹೆಣ್ಣು ತನ್ನ ತವರು ಮನೆ ಮತ್ತು ತಾಯಿಯ ನೆನಪುಗಳನ್ನು ಇಟ್ಟುಕೊಂಡು ಹಾಡುವ ತ್ರಿಪದಿಗಳ ಮಾನವೀಯ ಸಂಬಂಧಗಳ ನವಿರು ಭಾವನೆಗಳನ್ನು ಪರಿಚಯಿಸುತ್ತದೆ. ಎಲ್ಲ ಹೆಣ್ಣು ಮಕ್ಕಳಿಗೆ ತವರು ಮನೆ ಅದರಲ್ಲಿಯೂ ಹಡೆದವ್ವನ ಮಡಿಲು ತಂಪು. ತಾಯಿಯ ಮಹತ್ವವನ್ನು ತಿಳಿಸುವ ಈ ತ್ರಿಪದಿಯು ಹೆಣ್ಣಿನ ಭಾವ ಸೂಕ್ಷ್ಮತೆಗೆ ಸಾಕ್ಷಿಯಾಗಿದೆ.

ಹೆಣ್ಣು ಮಗಳು ಹುಟ್ಟಿ ಬೆಳೆದ ತವರನ್ನು ಹೊಳೆಯ ದಂಡೆಯಲ್ಲಿರುವ ಗರಿಕೆಯಂತೆ ರಸಬಳ್ಳಿಯಾಗಿ ನಿರಂತರವಾಗಿ ಹಬ್ಬುತ್ತಿರಲಿ ಎಂದು ಬಯಸುತ್ತಾಳೆ. ಇಲ್ಲಿತಂಪಾಗಿ ಮನದಲ್ಲಿ ಹಚ್ಚಹಸಿರಾಗಿ ಉಳಿದಿರುವ ತವರಿನ ಪ್ರೀತಿಯ ಮತ್ತು ಹೊಳೆ ದಂಡೆಯಲ್ಲಿರುವ ಸದಾ ಚಿಗಿತು ಬೆಳೆದು ಹಸಿರಾಗಿ ಕಂಗೊಳಿಸುವ ಗರಿಕೆಯ ಸಾದೃಶ್ಯಕಾಣಬಹುದು. ಹೆಣ್ಣಿನ ಅಂತರಂಗದಲ್ಲಿ ತವರಿನ ಬಗೆಗಿರುವ ಭಾವಗಳ ಶ್ರೇಷ್ಠ ನೆಲೆಯನ್ನು ಸ್ಪಷ್ಟೀಕರಿಸುತ್ತದೆ. ಹೆಣ್ಣಿನ ತಾಯ್ತನ, ಸಂಬಂಧಗಳ ಬಗೆಗಿನ ಆಪ್ತತೆ, ಹೆಣ್ಣುಗಂಡಿನ ಪರಸ್ಪರ ಆಕರ್ಷಣೆ, ಜೀವನದ ಕಷ್ಟಗಳ ನಡುವೆ ಬದುಕುವ ಛಲ, ಬದುಕಿನ ಆಶಾವಾದ, ಕನಸುಗಳು, ಜೀವನದ ಅನಂತ ನಂಬಿಕೆಗಳು, ಹಾಗೂ ಜನಪದ ಸಂಸ್ಕೃತಿಯನ್ನು ಕಟ್ಟಿಕೊಡುವ ಜನಪದ ಗೀತೆಗಳು ಜೀವನದ ವೈವಿಧ್ಯತೆಯ ಅನಾವರಣ ಮಾಡುತ್ತವೆ. ಹೆಂಗಸರ ಲಾವಣಿಗಳು ಹೆಣ್ಣಿನ ನೋವು ನಲಿವುಗಳನ್ನು ಚಿತ್ರಿಸುತ್ತವೆ. ಕನ್ನಡಜನಪದ ಸಾಹಿತ್ಯದಲ್ಲಿ ಉತ್ತರಾದೇವಿ, ಗುಣಸಾಗರಿ, ಜಾಗಲೆ, ನಾಗರಗನ್ನೆ, ನಾಗವ್ವ ಹಿರಿದಿಮ್ಮಿ, ಈರೋಬಿ, ಹೊನ್ನಲಾದೇವಿ ಲಾವಣಿಗಳು ಹಾಗೂ ಪುರಾಣಿಕ ಸೀತೆ, ದ್ರೌಪದಿ, ಕುಂತಿ, ಕುರಿತ ಲಾವಣಿಗಳು ಹೆಣ್ಣಿನ ಕಷ್ಟಕೋಟಲೆಗಳ ನಾನಾ ಕಥೆಗಳನ್ನು ಬಿಂಬಿಸುತ್ತವೆ. ಸಾಮಾಜಿಕ ದೌರ್ಜನ್ಯದ ಕರಾಳತೆಯನ್ನು ಕೂಡಾ ಈ ಕಥೆಗಳು ಬಿಂಬಿಸುತ್ತವೆ.

ಸಂಪ್ರದಾಯ ಮತ್ತು ಆಚರಣೆಯ ಸಂದರ್ಭದಲ್ಲಿ ಹಾಡುವ ಹಾಡುಗಳು ಜನಪದ ಸಂಸ್ಕೃತಿಯನ್ನು ಪರಿಚಯಿಸುತ್ತವೆ. ತಿಂಗಳ ಮಾಮನ ಪೂಜೆ, ಕೊಂತಿ ಪೂಜೆ, ಶೀಗಿಗೌರಿ ಪೂಜೆ, ಬಸವನ ಪೂಜೆ, ಜೋಕುಮಾರನ ಪೂಜೆ ಮೊದಲಾದವು ವಿವಿಧ ಸಂಪ್ರದಾಯಿಕ ಆಚರಣೆಗಳ ಸಂದರ್ಭದಲ್ಲಿ ಹಾಡುವ ಗೀತೆಗಳು ಜನರಲ್ಲಿ ಸಂಸ್ಕೃತಿಯ ಬಗೆಗೆ ಅರಿವು ಮತ್ತು ಶ್ರದ್ಧೆ ಮೂಡಿಸುತ್ತವೆ. ಜನಪದರು ಪೂಜಿಸುವ ರೀತಿ ನೀತಿಗಳು ಹೆಣ್ಣಿನ ಸ್ವಭಾವಾನುಸಾರಿಯಾಗಿ ತೆರೆದುಕೊಳ್ಳುವ ವಿಚಾರಗಳ ಮಹಾ ಭಂಡಾರ ನಮಗೆ ಇಲ್ಲಿ ಸಿಗುತ್ತದೆ. ಪ್ರತಿಯೊಂದು ಆಚರಣೆಯ ಸಂದರ್ಭದಲ್ಲಿ ಬದುಕಿನ ತಾತ್ವಿಕತೆಯನ್ನು ಮುಂದಿನ ತಲೆಮಾರಿಗೆ ನೀಡಿರುವುದು ಸ್ಪಷ್ಟವಾಗುತ್ತದೆ.

ಜನಪದ ಪ್ರದರ್ಶನ ಕಲೆ ಮತ್ತು ಜನಪದ ಆಟಗಳಲ್ಲಿ ಜನಪದರ ತಾತ್ವಿಕತೆಯ ಅಗಾದ ದರ್ಶನ ನಮಗಾಗುತ್ತದೆ. ಮಕ್ಕಳು ಆಡುವಂತ ಆಟಗಳು, ಪ್ರದರ್ಶನ ಕಲೆಗಳು, ವೃತ್ತಿ ಕಲೆಗಳನ್ನು ಕೂಡಾ ಆಟವೆಂದೇ ಪರಿಗಣಿಸುತ್ತೇವೆ. ಜನಪದ ಆಟಗಳನ್ನು ಇಷ್ಟೇ ಜನ ಆಡಬೇಕೆಂಬ ನಿಯಮಗಳಿಲ್ಲ. ಗೋಲಿ, ಬುಗುರಿ, ಚಿನ್ನಿದಾಂಡು, ಲಗೋರಿ. ಕಣ್ಣಾ ಮುಚ್ಚಾಲೆ, ಮರಕೋತಿ ಆಟ – ಇವುಗಳಿಗೆ ಎಷ್ಟು ಜನ ಬೇಕಾದರೂ ಸೇರಿ ಆಡಬಹುದಾಗಿದೆ. ಇವತ್ತಿನ ನಾಗರಿಕ ಆಟಗಳಿಗೆ ಬೇಕಾಗುವ ತರಬೇತಿಯಾಗಲಿ, ಉಪಕರಣಗಳಾಗಲಿ, ಸಜ್ಜಾದ ಕ್ರೀಡಾಂಗಣವಾಗಲಿ ಜನಪದ ಆಟಗಳಿಗೆ ಅಗತ್ಯವಿಲ್ಲ. ಜನಪದ ಆಟಗಳು ನಿಸರ್ಗಜನ್ಯ ಆಟಗಳಾಗಿವೆ. ಆಯಾ ಪರಿಸರಕ್ಕೆ ತಕ್ಕಂತೆ ಮಕ್ಕಳ ಆಟಗಳು ರೂಪುಗೊಂಡು, ಮುಂದುವರಿದುಕೊಂಡು ಬಂದಿರುತ್ತವೆ. ಜನಪದ ಆಟಗಳು ಗಾಢವಾದ ಅನುಭವಗಳಿಂದ ಮತ್ತು ಸಹಜವಾದ ಅಭಿವ್ಯಕ್ತಿಯಿಂದ ಕೂಡಿರುತ್ತವೆ. ಸಮಸ್ಯೆಯನ್ನು ಹುಟ್ಟಿಸಿ, ಸಮಸ್ಯೆಯನ್ನು ಬಗೆಹರಿಸುವುದು ಇಲ್ಲಿಯ ಮುಖ್ಯ ಉದ್ದೇಶ. ಗೆಲುವಿನಿಂದ ದೊರೆಯುವ ಉತ್ಸಾಹ, ಅಭಿರುಚಿ, ಸಂಭಾವನೆ ಇಂಥವುಗಳೆಲ್ಲ ಪ್ರೇರಕ ಶಕ್ತಿಯಾಗಿ ನಿಂತುಕೊಳ್ಳುತ್ತವೆ. ಧ್ವನಿ, ಸಂಜ್ಞೆ, ಭಾಷೆ, ಆಟಿಕೆ ಇವು ಅತ್ಯಾವಶ್ಯಕ ಅಂಶಗಳಾಗಿ ಬರುತ್ತವೆ. ಜನಪದ ಸಾಹಿತ್ಯದಲ್ಲಿ ಸಂಸ್ಕೃತಿ ಮತ್ತು ತಾತ್ವಕತೆ ಒಂದರೊಳಗೊಂದು ಬೆಸೆದುಕೊಂಡು ಜನರ ಜೀವನವನ್ನು ಉನ್ನತೀಕರಿಸುವಲ್ಲಿ, ಸಾರ್ಥಕ ಸಂತೃಪ್ತವಾದ ಬದುಕು ಕಟ್ಟಿಕೊಡುವಲ್ಲಿ ಮಹತ್ವದ ಪಾತ್ರವಹಿಸುತ್ತದೆ.

## ಪರಾಮರ್ಶನ ಗ್ರಂಥಗಳು


- **ಡಾ. ಕಾಳೇಗೌಡ ನಾಗವಾರ (2008)** : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂ. 07 ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ, ಪ್ರಸಾರಾಂಗ ಬೆಂಗಳೂರು ವಿವಿ ಪ್ರಕಟಣೆ
- **ರಾಜಪ್ಪ ದಳವಾಯಿ (1996)** : ಕನ್ನಡ ಸಾಹಿತ್ಯ ಕೋಶ ಸಂ. ಮೈಸೂರು ಕದಿರು ಪ್ರಕಾಶನ.
- **ಡಾ. ಅರವಿಂದ ಮಾಲಗತ್ತಿ (1999)** : ಪುರಾಣ ಜಾನಪದ ಮತ್ತು ದೇಶಿವಾದ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಅಂಬಿಗರ ಚೌಡಯ್ಯನ ವಚನಗಳಲ್ಲಿ ಬಂಡಾಯ ಪ್ರಜ್ಞೆ

✍ **ಡಾ. ತಿಪ್ಪೇರುದ್ರ ಸಂಡೂರು,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪರಶುರಾಮಪುರ, ಚಳ್ಳಕೆರೆ ತಾ. ಚಿತ್ರದುರ್ಗ ಜಿ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 12ನೇ ಶತಮಾನ ಬಹುಮುಖ್ಯವಾದ ಕಾಲಘಟ್ಟವಾಗಿದ್ದು, ಕನ್ನಡ ಸಂಸ್ಕೃತಿಯ ಅಸ್ಮಿತೆಯಾಗಿರುವ ವಚನ ಚಳವಳಿ ರೂಪುಗೊಂಡ ಕಾಲವಾಗಿದೆ. ಇದು ಐತಿಹಾಸಿಕವಾಗಿ, ವೈಚಾರಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಅನೇಕ ಆಯಾಮಗಳಲ್ಲಿ ಮನುಕುಲದ ಮೇಲೆ ಪ್ರಭಾವ ಬೀರಿದ ವಿಶಿಷ್ಟವಾದ ಚಳವಳಿಯಾಗಿದೆ. ಅಂದಿನ ಸಮಾಜದಲ್ಲಿ ತುಂಬಿ ತುಳುಕುತ್ತಿದ್ದ ಮೂಢನಂಬಿಕೆಗಳು, ಆಚಾರ-ವಿಚಾರಗಳಲ್ಲಿ ಅಂಧಾನುಕರಣೆ ಇನ್ನು ಮುಂತಾದ ಸಾಮಾಜಿಕ ಪಿಡುಗುಗಳ ನಿವಾರಣೆಗಾಗಿ ಹುಟ್ಟಿಕೊಂಡ, ಪ್ರಗತಿಪರವಾಗಿ ಆಲೋಚಿಸುವ ಮನುಷ್ಯನ ಜೀವನ ಕ್ರಮವನ್ನು ಮಾನವೀಯ ನೆಲೆಯಲ್ಲಿ ಸುಧಾರಿಸುವುದು ಈ ವಚನ ಚಳವಳಿಯ ಪ್ರಮುಖ ಉದ್ದೇಶವಾಗಿತ್ತು.

ಇಂತಹ ಬಹುಮುಖಿ ನೆಲೆಯ ಶರಣ ಚಳುವಳಿಯ ಬಸವಾದಿ ಶಿವಶರಣರಲ್ಲಿ **'ನಿಜಶರಣ'** ಎನ್ನುವ ಹೆಗ್ಗಳಿಕೆಗೆ ಪಾತ್ರನಾಗಿದ್ದ ಅಂಬಿಗರ ಚೌಡಯ್ಯನೂ ಒಬ್ಬ. ಈತನು ನ್ಯಾಯನಿಷ್ಠುರಿ, ಖಂಡಿತವಾದಿಯಾಗಿದ್ದು, ಜೀವನಾನುಭವದ ಚಿಂತನೆಗಳು, ಸಾಹಿತ್ಯದ ಮೂಲಕ ಸಾರಿದ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಇದ್ದದ್ದನ್ನು ಇದ್ದಹಾಗೆ ಹೇಳುವ ನಿರಂಕುಶಮತಿಯಾಗಿ, ಆಚಾರ ಹೇಳುತ್ತ ದ್ವಂದ್ವ ಬದುಕನ್ನು ನಡೆಸುವವರ ವಿರುದ್ಧ ಬಂಡಾಯದ ಧ್ವನಿಯಾಗಿ, ಭವಸಾಗರವನ್ನು ದಾಟಿಸುವ ಅಂಬಿಗನಾಗಿ ವಚನ ಸಾಹಿತ್ಯದಲ್ಲಿ ಪ್ರಸಿದ್ಧಿ ಪಡೆದಿದ್ದಾನೆ.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಶಿವಪುರದಲ್ಲಿ (ಇಂದಿನ ಚೌಡದಾನಪುರ) ಜನಿಸಿದ ಈ ಮಹಾಶಿವಶರಣರಿಗೆ ಉದ್ದಾಲಕರೆಂಬ ಗುರುಗಳು. **'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ'** ಎಂಬ ವಚನಕ್ಕೆ ತಕ್ಕಂತೆ ಇರುವ ಧರ್ಮಪತ್ನಿ ಮತ್ತು ಪುರವಂತ ಎಂಬ ಪುತ್ರ. ಚೌಡದಾನಪುರದಲ್ಲಿ ಪೂರ್ವ ಪಶ್ಚಿಮವಾಹಿನಿಯಾಗಿ ಹರಿಯುತ್ತಿರುವ ತುಂಗಭದ್ರಾನದಿಯಲ್ಲಿ ದೋಣಿ ಮೂಲಕ ನದಿ ದಾಟಿಸುವ ಕಾಯಕ ಮಾಡುತ್ತ ಬಸವಾದಿ ಶರಣರ ಪ್ರಭಾವಕ್ಕೆ ಒಳಗಾಗಿ ವಚನಗಳನ್ನು ರಚಿಸಿದ್ದಾರೆ. ಈತನ ಕಾಲ ಕ್ರಿ. ಶ. ಸುಮಾರು 1160. ಸುಮಾರು 330 ವಚನಗಳನ್ನು ರಚಿಸಿದ್ದು,ತನ್ನ ವಚನಗಳಲ್ಲಿ ಯಾವ ಇಷ್ಟದೈವಕ್ಕೆ ಋಣಿಯಾಗದೆ ತನ್ನ ಹೆಸರನ್ನೇ ವಚನಗಳ ಅಂಕಿತವಾಗಿಯೂ ಬಳಸಿಕೊಂಡು ದಿಟ್ಟತನವನ್ನು ತೋರಿಸಿದ್ದಾನೆ.

ವಚನಕಾರರಲ್ಲಿಯೇ ನಿರ್ಭೀತ ಮಾತುಗಾರಿಕೆ, ಮುಕ್ತ ಚಿಂತನೆ, ನೇರನುಡಿ ಮತ್ತು ತೀವ್ರ ವಿಧಾನದ ಮೂಲಕ ಸಮಾಜಮುಖಿ ಚಿಂತನೆಗಳನ್ನು ಅಭಿವ್ಯಕ್ತಪಡಿಸಿದ ವಚನಕಾರನೆಂದರೆ ಅಂಬಿಗರ ಚೌಡಯ್ಯ. ಈತನ ವಚನಗಳನ್ನು ಕಂಡ ಕವಿ ಸಿದ್ಧಯ್ಯ ಪುರಾಣಿಕ(ಕಾವ್ಯಾನಂದ)ರು.

**'ನಿಜದ ನಗಾರಿ**
**ನಿರ್ಭಯತೆಯ ಭೇರಿ**
**ಈ ಅಂಬಿಗರ ಚೌಡಯ್ಯ'** ಎಂದಿದ್ದಾರೆ.

ಮುಪ್ಪಿನ ಷಡಕ್ಷರಿಯವರು ತಮ್ಮ ಸುಬೋಧ ಸಾಗರದಲ್ಲಿ –

**'ಅಂಬಿಗರ ಚೌಡಯ್ಯನ ಮುಂಬಾಗಿಲನ್ನು**
**ಕಾಯುವ ನಂಬಿಗೆಯ ಸೇವಕರು**
**ಕುಂಭಿನಿಯೊಳಗಿನ್ನು ಸರಿಯದಾರು?'** ಎಂದು ಹಾಡಿ ಹರಸಿದ್ದಾರೆ.

ಘನಲಿಂಗದೇವನು (1480)

**'ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ,**
**ಅಂಬಿಗರ ಚೌಡಯ್ಯಯಿಂತಿಪ್ಪ ಶಿವಶರಣರ**
**ಮನೆ ಬಾಗಿಲನಿಕ್ಕುವ ಸೊಣಗನ ಮಾಡಿ ಎನ್ನಿರಿಸಯ್ಯ**

ಎಂದು ತಮ್ಮ ವಚನವೊಂದರಲ್ಲಿ ಹೇಳಿರುವುದೇ ಚೌಡಯ್ಯನ ಪ್ರತಿಭೆಗೆ ನಿದರ್ಶನವಾಗಿದೆ.

ಬಸವಣ್ಣನಾದಿಯಾಗಿ ಆಗಿನ ವಚನಕಾರರೆಲ್ಲರೂ ತಾವು ನಂಬಿದ ದೈವ, ಗುರು, ಪ್ರಭಾವಿ ವ್ಯಕ್ತಿ, ಪತಿ, ಸ್ಥಳವನ್ನು ತಮ್ಮ ಅಂಕಿತದಲ್ಲಿ ಕಲಿಸಿ ಹೇಳುವ ಸಂದರ್ಭದಲ್ಲಿಯೇ ಅಂಬಿಗರ ಚೌಡಯ್ಯನು ತನ್ನ ಹೆಸರನ್ನೇ ಅಥವಾ ತನ್ನನ್ನೇ ಅಂಕಿತವಾಗಿಸಿರುವುದು ಈತನ ಮತ್ತೊಂದು ವೈಶಿಷ್ಟ್ಯತೆಯಾಗಿದೆ. ತನ್ನ ಎಲ್ಲಾ ಪ್ರಮಾಣಬದ್ಧ ಅಭಿವ್ಯಕ್ತಿಗೆ ತನ್ನ ಬಳಗವನ್ನು, ಅಂತರಂಗದ ಸಾಕ್ಷ್ಯವನ್ನು ಮುಂದಿರಿಸಿಕೊಂಡಿರುವುದು ಈತನ ಮುಕ್ತ ಮತ್ತು ಪೂರ್ಣ ಪ್ರಮಾಣದ ವ್ಯಕ್ತಿತ್ವದ ಮಾನದಂಡವಾಗಿದೆ.

ವೈಚಾರಿಕ ಪ್ರಜ್ಞೆ, ಬಂಡಾಯ ಪ್ರಜ್ಞೆ, ಜನಪರ ಕಾಳಜಿ, ಸಾಮಾಜಿಕ ಚಿಂತನೆ, ಧಾರ್ಮಿಕ ಪ್ರಜ್ಞೆ ಮೈಗೂಡಿಸಿಕೊಂಡು ಜನ ಸಾಮಾನ್ಯರಿಗೆ ತಮ್ಮ ವಚನಗಳ ಮೂಲಕ ಬದುಕಿಗೆ ಬೆಳಕಾಗಿ ನಿಂತ ಶರಣ ಅಂಬಿಗರ ಚೌಡಯ್ಯನು ಲೌಕಿಕ ಜಗತ್ತಿನ ಸಾಮಾಜಿಕ ಅವ್ಯವಸ್ಥೆ ಮತ್ತು ಅನಿಷ್ಟಗಳ ವಿರುದ್ಧ ನೇರವಾಗಿ ಪ್ರತಿಭಟಿಸುವ ಈತನ ಪ್ರತಿಯೊಂದು ವಚನಗಳು ಬಂಡಾಯ ಪ್ರಜ್ಞೆಯನ್ನು ಪ್ರಕಟಪಡಿಸಿವೆ.

ಬಂಡಾಯ ಎಂದರೆ 'Quarelling, revolt' ಎನ್ನುವ ಅರ್ಥಗಳಿವೆ. ಸಂಸ್ಕೃತದ 'ಭಣ್ಣು' ಮೂಲದಿಂದ ಬಂದಿದ್ದು 'ಯುದ್ಧ', 'ದಂಗೆ ಏಳು' ಎನ್ನುವ ಅರ್ಥವನ್ನು ಹೊಂದಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ ವಲಯವನ್ನೊಳಗೊಂಡ ಸಾಂಸ್ಕೃತಿಕ ವಲಯದ ಬದಲಾವಣೆಯ ಆಶಯವುಳ್ಳ ಧೋರಣೆಯೇ ಬಂಡಾಯವಾಗಿದ್ದು, ಇಂತಹ ಬಂಡಾಯ ಪ್ರಜ್ಞೆಯನ್ನು ಅತ್ಯಂತ ಪ್ರಖರವಾಗಿ, ನೇರವಾಗಿ, ತೀಕ್ಷ್ಣವಾಗಿ ಇದ್ದದ್ದನ್ನು ಇದ್ದಹಾಗೆ ಹೇಳುವ ಮನೋಪ್ರವೃತ್ತಿಯನ್ನು ಅಂಬಿಗರ ಚೌಡಯ್ಯ ತನ್ನ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾನೆ.

ಸಾಮಾಜಿಕ ಅಸಮಾನತೆಯ ಎಲ್ಲ ವ್ಯವಸ್ಥೆಯ ಪೂರ್ಣ ಅರಿವಿದ್ದು, ಅದನ್ನು ಬದಲಾಯಿಸಿ ಜನಪರವಾದ ವ್ಯವಸ್ಥೆಯನ್ನು ಕಟ್ಟಲು ನಡೆಯುವ ವೈಜ್ಞಾನಿಕ ಚಿಂತನೆಯ ಅರಿವುಳ್ಳವನೇ ನಿಜವಾದ ಬಂಡಾಯಗಾರ. ಕೇವಲ ಪ್ರತಿಭಟಿಸುವುದು, ಸಿಡಿದೇಳುವುದಷ್ಟೇ ಬಂಡಾಯವಲ್ಲ. ಅದನ್ನು ಬದಲಾಯಿಸಲು ಪ್ರಯತ್ನಿಸಿದಾಗಲೇ ಬಂಡಾಯವಾಗುತ್ತದೆ. ಅಂತೆಯೇ ಅಂಬಿಗರ ಚೌಡಯ್ಯನು ತನ್ನ ವಚನಗಳ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸುವ ಬಂಡಾಯಗಾರನಾಗಿ ನಮಗೆ ಕಂಡುಬರುತ್ತಾನೆ.

**ಉಣದಿದ್ದರೆ ಚಾತಕನೆಂಬರು,**
**ಭೋಗಿಸಿದರೆ ಕಾಮಿಯೆಂಬರು**
**ಭೋಗಿಸಿದರೆ ಮುನ್ನ ಮಾಡಿದ ಕರ್ಮಿ ಎಂಬರು**
**ಊರೊಳಗಿದ್ದರೆ ಸಂಸಾರಿ ಎಂಬರು,**
**ಅಡವಿಯೊಳಗಿದ್ದರೆ ಮೃಗಜಾತಿ ಎಂಬರು**

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ನಿದ್ರೆಗೈದರೆ ಜಡದೇಹಿ ಎಂಬರು,**
**ಎದ್ದಿದ್ದರೆ ಚಕೋರನೆಂಬರು**
**ಇಂತೀ ಜನಮೆಚ್ಚಿ ನಡೆದವರ**
**ಎಡದ ಪಾದ ಕಿರಿ ಕಿರುಗುಣಿಯಲ್ಲಿ ಮನೆ ಮಾಡು,**
**ಮನೆ ಮಾಡು ಎಂದಾತ ನಮ್ಮ ಅಂಬಿಗರ ಚೌಡಯ್ಯ.**

ಮನುಷ್ಯನಾದವ ಅಂತರಂಗದಂತೆ ನಡೆಯಬೇಕಲ್ಲದೆ ಲೋಕ ಮೆಚ್ಚುವಂತೆ ಅಲ್ಲ. ಲೋಕದ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಜನರು ಹೇಗಿದ್ದರೂ ಟೀಕೆ ಮಾಡುತ್ತಾರೆ ಎಂಬುದನ್ನು ಚೌಡಯ್ಯ ಸುಂದರವಾಗಿ ಹೇಳಿದ್ದಾರೆ.

ಹೀಗೆ ಜನರು ಹಲವು ರೀತಿ ಹೆಸರಿಡುತ್ತಾರೆ, ಜನ ಮೆಚ್ಚಿ ನಡೆಯುವುದಕ್ಕಿಂತ ಮನ ಮೆಚ್ಚಿ ನಡೆಯುವುದೇ ಚೆಂದ ಎನ್ನುತ್ತಾನೆ. ಈ ಕಾರಣದಿಂದ ನಾವು ಜನರ ಮೆಚ್ಚುಗೆಗೆ ಪಾತ್ರರಾಗುವ ಅವಶ್ಯಕತೆಯಿಲ್ಲ ಎನ್ನುವ ಆಶಯ ಈ ವಚನದಲ್ಲಿದೆ. ಮನುಷ್ಯ ಜಗವನ್ನು ಮೆಚ್ಚಿಸಲು ಸಾಧ್ಯವೇ ಇಲ್ಲ. ಆದ್ದರಿಂದ, ನಮ್ಮ ಮನಸ್ಸೇ ನಮಗೆ ದಾರಿದೀಪವಾಗಬೇಕು ಎನ್ನುವ ತತ್ವವನ್ನು ತಿಳಿಸಿದ್ದಾನೆ.

**ಕರ್ಮೇಂದ್ರಿಯ ಕಾಯವ ಕೂಡಿಪ್ಪುದು,**
**ಜ್ಞಾನೇಂದ್ರಿಯ ಜೀವವ ಕೂಡಿಪ್ಪುದು,**
**ಭಾವೇಂದ್ರಿಯ ಪರಮನ ಕೂಡಿಪ್ಪುದು**
**ಕಾಯ ಜೀವ ಪರಮನ ಕೂಡುವ**
**ಠಾವನರಿಯಬೇಕೆಂದನಂಬಿಗರ ಚೌಡಯ್ಯ**

ಇಂದ್ರಿಯಗಳನ್ನು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎಂದು ಎರಡು ಬಗೆಯಾಗಿ ವಿಂಗಡಿಸಿದ್ದಾರೆ. ಜ್ಞಾನವನ್ನುಂಟು ಮಾಡುವ ಸಾಮರ್ಥ್ಯವುಳ್ಳ ಇಂದ್ರೀಯಗಳಾದ ಕಣ್ಣು, ಕಿವಿ, ನಾಲಗೆ, ಮೂಗು, ಚರ್ಮ ಇವು ಜ್ಞಾನೇಂದ್ರಿಯಗಳಾಗಿವೆ.

ಉಚ್ಚಾರಣೆ ಮೊದಲಾದ ಕ್ರಿಯೆಗಳಲ್ಲಿ ಯಾವುದಾದರೊಂದನ್ನು ಮಾಡುವ ಸಾಮರ್ಥ್ಯವುಳ್ಳ ಇಂದ್ರೀಯಗಳು ಕರ್ಮೇಂದ್ರಿಯಗಳು. ಕರ್ಮೇಂದ್ರಿಯಗಳು ಐದು ಬಗೆಯಾಗಿವೆ. ಅವೆಂದರೆ ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥ. 1. ವರ್ಣೋಚ್ಚಾರಣೆಗೆ ಸಾಧನವಾದ ಇಂದ್ರಿಯವೇ ವಾಕ್ಕು. ಇದು ಹೃದಯ, ಗಂಟಲು, ಜಿಹ್ವಾಮೂಲ, ನಾಲಗೆ, ಹಲ್ಲು, ತುಟಿ, ಮೂಗು ಮತ್ತು ಮೂರ್ಧ ಎಂಬ ಎಂಟು ಸ್ಥಾನದಲ್ಲಿದೆ. ಪಶು ಪ್ರಾಣಿಗಳಲ್ಲಿ ಇದು ಸ್ಪಷ್ಟವಾಗಿಲ್ಲ. 2. ಕೈಕೆಲಸ ಮೊದಲಾದವನ್ನು ಮಾಡಲು ಸಾಧನವಾದ ಇಂದ್ರಿಯ ಪಾಣಿ. 3. ಸಂಚಾರಕ್ಕೆ ಸಾಧನವಾದ ಇಂದ್ರಿಯವೇ ಪಾದ. 4. ಮಲಮೂತ್ರಾದಿಗಳ ವಿಸರ್ಜನೆಗೆ ಸಾಧನವಾದ ಇಂದ್ರಿಯಗಳೇ ಪಾಯು ಎನಿಸುತ್ತದೆ. 5. ಆನಂದವಿಶೇಷಕ್ಕೆ ಸಾಧನವಾದ ಇಂದ್ರಿಯ ಉಪಸ್ಥ. ಇದು ಜನನಾಂಗಗಳಲ್ಲಿದೆ. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಸಮನ್ವಯತೆಯಿಂದ ಮುಕ್ತಿಯನ್ನು ಪಡೆಯಬೇಕು ಎಂದು ಈ ವಚನದಲ್ಲಿ ತಿಳಿಸಿದ್ದಾನೆ.

**ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ,**
**ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,**
**ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ,**
**ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು,**
**ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ**
**ನಮ್ಮ ಅಂಬಿಗರ ಚೌಡಯ್ಯ ನಿಜಶರಣನು**

ಇದೊಂದು ಅಂಬಿಗರ ಚೌಡಯ್ಯನ ಪ್ರಸಿದ್ಧ ವಚನವಾಗಿದ್ದು, ಈ ವಚನದಿಂದ ಯಾವ ಮನೆಯೂ ಚಿಂತೆಯಿಂದ ಬಿಡುಗಡೆ ಆಗಿಲ್ಲವೆಂಬ ಮಾತು ಮನದಟ್ಟಾಗುತ್ತದೆ.ಮನುಷ್ಯ ತನ್ನ ಬಗ್ಗೆ ಸದಾ ಚಿಂತಿಸುತ್ತಿರುವುದನ್ನು ಬಿಟ್ಟು ಚಿಂತನ ಮಾಡುತ್ತಾ ಬದುಕಿನ ನಿಜದ ನಿಲುವನ್ನು ಕಂಡುಕೊಳ್ಳಬೇಕೆಂದು ಕರೆ ನೀಡುತ್ತಾನೆ.

ಇಂದಿನ ಅಮಾನವೀಯ ಸ್ವಾರ್ಥಪರಿಸರದ ತಾರತಮ್ಯದ ವ್ಯವಸ್ಥೆಯಲ್ಲಿ ಬಹಳಷ್ಟು ಜನ ತಾನು, ತನ್ನ ಬದುಕು, ತನ್ನವರು, ತನ್ನ ಭವಿಷ್ಯತ್ತಿಗಾಗಿ ಮಾತ್ರವೇ ಸದಾ ಚಿಂತಿತರಾಗಿರುತ್ತಾರೆ. ಮೇಲಿನ ವಚನದಲ್ಲಿ ತಿಳಿಸಿದಂತೆ ಆರಂಭದಲ್ಲಿ ಬಡವನಿಗೆ ಹಸಿವನ್ನು ಎದುರಿಸುವಾಗ ಊಟದ ಚಿಂತೆಯಾದರೆ, ಹೊಟ್ಟೆ ತುಂಬಿದ ನಂತರ ಬಟ್ಟೆ ಉಡುವ ಚಿಂತೆ, ಅದಾದ ನಂತರ ನಾಳೆಗಾಗಿ ಕಾಪಿಡುವ ಚಿಂತೆ, ಸಂಗ್ರಹ ಮಾಡಿಕೊಳ್ಳುವ ತವಕ, ತನ್ನದಾದ ನಂತರ ಹೆಂಡತಿಗಾಗಿ, ಹೆಂಡತಿಯಾದ ನಂತರ ಮಕ್ಕಳ ಚಿಂತೆ, ಮಕ್ಕಳಾದರೆ ಮುಂದಿನ ಬದುಕಿನ ಚಿಂತೆಯನ್ನು ಮಾಡುತ್ತಾನೆ.ಹೀಗೆ ಮನುಷ್ಯನು ಸ್ವಾರ್ಥದಿಂದ ಬದುಕುವ ಬದಲು ಸಮಾಜಮುಖಿಯಾಗಿ ಬದುಕುವ ಅಗತ್ಯತೆಯನ್ನು ಪ್ರಸ್ಥಾಪಿಸಿದ್ದಾನೆ.

**ದೇಹಾರವ ಮಾಡುವಣ್ಣಗಳಿರಾ, ಒಂದು ತುತ್ತು ಆಹಾರವನಿಕ್ಕಿರೆ**
**ದೇಹಾರಕ್ಕೆ ಆಹಾರವೆ ನಿಚ್ಚಣಿಗೆ**
**ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ**
**ಆ ಹರನಿಲ್ಲೆಂದನಂಬಿಗ ಚೌಡಯ್ಯ**

ಕರುಣೆ ಇಲ್ಲದ ಬದುಕನ್ನು ನಡೆಸುವವರಿಗೆ ದೇವರ ಸಂಬಂಧವಿರಲಾರದು ಎಂದು ಚೌಡಯ್ಯ ಈ ವಚನದಲ್ಲಿ ತಿಳಿಸಿದ್ದಾನೆ. ಬಡವರ ಬಗ್ಗೆ ಕಾಳಜಿ ಇಲ್ಲದೆ ದೇವರ ಪೂಜೆ ಮಾಡಿದರೆ ಅದು ಡಂಬಾಚಾರದಿಂದ ಕೂಡಿರುತ್ತದೆ. ಅಂತಃಕರಣದಿಂದ ಕೂಡಿದ, ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದೇ ಪೂಜೆಯೇ ನಿಜವಾದ ಪೂಜೆಯಾಗಿದ್ದು, ಪರೋಪಕಾರಕ್ಕೆ ಇಲ್ಲದ ಈ ಜೀವ ಮಾಡಿದ ಪೂಜೆ ವ್ಯರ್ಥ ಎನ್ನುವ ಅನಿಸಿಕೆಯನ್ನು ಈ ವಚನದಲ್ಲಿ ಸೊಗಸಾಗಿ ನಿರೂಪಿಸಿದ್ದಾನೆ. ದೀನದಲಿತರ ಬಗ್ಗೆ, ಬಡವರ ಬಗೆಗಿನ ಕಾಳಜಿ ಪ್ರತಿಯೊಬ್ಬ ಮನುಷ್ಯನಿಗೆ ಇರಬೇಕೆಂಬ ಎಂಬ ಆಶಯವನ್ನು ಈ ವಚನ ವ್ಯಕ್ತಪಡಿಸುತ್ತದೆ.

**ಬ್ರಹ್ಮನ ನಾವು ಬಲ್ಲೆವು, ವಿಷ್ಣುವ ನಾವು ಬಲ್ಲೆವು**
**ತೆತ್ತೀಸಕೋಟಿ ದೇವತೆಗಳ ನಾವು ಬಲ್ಲೆವು**
**ಅದೇನು ಕಾರಣವೆಂದಡೆ,**
**ಇವರು ಹಲವು ಕಾಲ ನಮ್ಮ ನೆರೆಮನೆಯಲ್ಲಿದ್ದರಾಗಿ,**
**ಇವರು ದೇವರೆಂಬುದ ನಾ ಬಲ್ಲೆನಾಗಿ,**
**ಒಲ್ಲೆನೆಂದಾತಂಬಿಗ ಚೌಡಯ್ಯ**

ಏಕದೇವೋಪಾಸನೆ ಶರಣ ಚಳವಳಿಯ ಬಹುಮುಖ್ಯ ಸಿದ್ಧಾಂತವಾಗಿದ್ದು, ದೇಶದ ತುಂಬ ದೇವಾನುದೇವತೆಗಳೇ ಇದ್ದಾರೆ. ಬ್ರಹ್ಮ, ವಿಷ್ಣು, ಅಷ್ಟೇ ಅಲ್ಲ ಮೂವತ್ಮೂರು ಕೋಟಿ ದೇವತೆಗಳನ್ನು ನಾವು ಬಲ್ಲೆವು ಆದರೆ ಕಣ್ಣಿಗೆ ಕಾಣದ ದೇವರುಗಳಿಗಿಂತ ನಮ್ಮ ತಂದೆ–ತಾಯಿಗಳೇ ದೇವರು ಆದ್ದರಿಂದ ದೇವರುಗಳನ್ನು ನಾನು ಒಲ್ಲೆ ಎಂದು ನಿರಾಕರಿಸಿ ಮೇಲ್ವರ್ಗದವರ ವರ್ಣಭೇದ, ಜಾತಿಭೇದ, ಅಸ್ಪೃಶ್ಯತೆ ಮುಂತಾದ ಆಚರಣೆಗಳಿಗೆ ಕಾರಣವಾಗುವ ಬಹುದೇವತೆಗಳನ್ನು ನಿರಾಕರಿಸಿ ಏಕದೇವೋಪಾಸನೆಯ ಮಹತ್ವವನ್ನು ಚೌಡಯ್ಯನು ಈ ವಚನದಲ್ಲಿ ಸಾರಿದ್ದಾನೆ.

**ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ**
**ಹೊಟ್ಟಡಿಯಾಗಿ ಬೀಳುವ ಲೊಟ್ಟೆ ಮೂಳನ ಕಂಡರೆ,**
**ಮೆಟ್ಟಿದ ಎಡದ ಪಾದರಕ್ಷೆಯ ತಕ್ಕೊಂಡು ಲಟಲಟನೇ ಹೊಡೆ**
**ಎಂದಾತ ನಮ್ಮ ಅಂಬಿಗರ ಚೌಡಯ್ಯ**

ಶರಣ ಸಂಸ್ಕೃತಿಯಲ್ಲಿ ಸ್ಥಾವರ ಲಿಂಗಕ್ಕಿಂತ ಇಷ್ಟಲಿಂಗವೇ ಶ್ರೇಷ್ಠವಾಗಿದೆ. ಇಂತಹ ಕಟ್ಟಿದ ಇಷ್ಟಲಿಂಗವನ್ನು ಬಿಟ್ಟು ಬೆಟ್ಟದ ಲಿಂಗಕ್ಕೆ ಪೂಜಿಸಲು ಹೋಗುವವರಿಗೆ ಎಡಕಾಲಿನ ಚಪ್ಪಲಿಯನ್ನು ತೆಗೆದುಕೊಂಡು ಲಟಲಟನೇ ಹೊಡೆ ಎಂದು ಈ ವಚನದಲ್ಲಿ ನಿಷ್ಠುರವಾಗಿ ನುಡಿದಿರುವುದು ಚೌಡಯ್ಯನ ಬಂಡಾಯದ ನಿಲುವನ್ನು ಪ್ರತಿನಿಧಿಸುತ್ತದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಅರಿಕೆ ಬಿತ್ತಿದ ಗಿಡುವಿನ ಹೂವ ಕೊಯಿದು**
**ಊರೆಲ್ಲರೂ ಕಟ್ಟಿಸಿದ ಕೆರೆಯ ನೀರು ತಂದು;**
**ನಾಡೆಲ್ಲರೂ ನೋಡಿರೆಂದು ಪೂಜಿಸುತ್ತ**
**ಪೂಜಿಸಿದ ಪುಣ್ಯ ಹೂವಿಗೋ? ನೀರಿಗೋ?**
**ನಾಡೆಲ್ಲಕ್ಕೋ? ಪೂಜಿಸಿದಾತಗೋ?**
**ಇದ ನಾನರಿಯೆ, ನೀನೇ ಹೇಳೆಂದನಂಬಿಗರ ಚೌಡಯ್ಯ!**

ಡಾಂಬಿಕ ಪೂಜೆಗಿಂತ ನಿಷ್ಕಲ್ಮಷ ಭಕ್ತಿಯೇ ಶ್ರೇಷ್ಠ ಎಂದು ಸಾರುವ ಚೌಡಯ್ಯನ ವಚನವಿದು. ಪಾಪ–ಪುಣ್ಯದ ಪರಿಕಲ್ಪನೆಯನ್ನು ವಿಡಂಬಿಸುತ್ತಾ, ಗಿಡದಲ್ಲಿ ಅರಳಿದ ಹೂವು, ಕೆರೆಯಲ್ಲಿ ನಿಂತ ನೀರು ಇವು ಯಾರ ಸೊತ್ತು ಅಲ್ಲ. ಆದರೆ ಅವು ತನ್ನದೆಂದು ಭಾವಿಸುವ ಭ್ರಮೆಯಲ್ಲಿರುವವರನ್ನು ಕಂಡು ಸಿಗದ ವಸ್ತುವಿಗಾಗಿ ಹಂಬಲಿಸುವುದು ವ್ಯರ್ಥವೆಂದು ತಿಳಿಸುವ ಮೂಲಕ ದೇವರು–ಧರ್ಮದ ಹೆಸರಲ್ಲಿ ಶೋಷಣೆ ಮಾಡುವ ಜನರ ಮನೋಭಾವವನ್ನು ಪ್ರತಿಭಟಿಸುತ್ತಾನೆ.

**ವೇದದಲುಳ್ಳೊಡೆ ಪ್ರಾಣವಧೆಯಪ್ಪುದೇ?**
**ಶಾಸ್ತ್ರದಲುಳ್ಳೊಡೆ ಸಮಯವಾದವಪ್ಪುದೇ?**
**ಪರ್ವತದಲುಳ್ಳೊಡೆ ಹೋದವರು ಮರಳಿ ಬಹರೆ?**
**ನಿರ್ಬುದ್ಧಿ ಮಾನವನೇನೆಂಬೆನು**
**ಮನ–ವಚನ ಕಾಯಶುದ್ಧರಾಗಿಪ್ಪಾತರನ**
**ಹೃದಯದಲ್ಲಿ ನಿಮ್ಮ ಕಂಡೆನೆಂದನಂಬಿಗರ ಚೌಡಯ್ಯ ।**

ಮೂಢನಂಬಿಕೆ, ಕಂದಾಚಾರಗಳನ್ನು ಬಿತ್ತುವ ವೈದಿಕ ನಂಬಿಕೆಗಳನ್ನು ತನ್ನ ಬಂಡಾಯದ ಮೂಲಕ ಅಲ್ಲಗಳೆಯುತ್ತಾನೆ. ವೇದ–ಶಾಸ್ತ್ರ–ಪರ್ವತದಲ್ಲಿರಲಾರದ ದೇವರನ್ನು ಚೌಡಯ್ಯನು ಮನುಷ್ಯನಲ್ಲಿ ಕಾಣುತ್ತಾನೆ. ಮಾನವನ ಮಾತು, ಮನಸ್ಸು, ದೇಹ ಇವು ಶುದ್ಧವಾಗಿದ್ದರೆ ಅವೇ ದೈವಸ್ವರೂಪ ಎಂದು ತಿಳಿಸುವ, ಜೀವ–ದೇವರ ಸಂಬಂಧವನ್ನು ಮಾನವೀಯ ನೆಲೆಯಲ್ಲಿ ಸಂಯೋಜಿಸುವ ಪರಿ ಅಚ್ಚರಿಯನ್ನುಂಟು ಮಾಡುತ್ತದೆ.

**ಅಂಗವ ಅಂದ ಮಾಡಿಕೊಂಡು ತಿರುಗುವ ಭಂಗಗೇಡಿಗಳು ನೀವು ಕೇಳಿರೋ**
**ಅಂಗಕ್ಕೆ ಅಂದವಾವುದೇನೆಂದರೆ, ಗುರುವಿಗೆ ತನುವ ಕೊಟ್ಟಿರುವುದೇ ಚಂದ**
**ಲಿಂಗಕ್ಕೆ ಮನವ ಕೊಟ್ಟಿರುವುದೇ ಚಂದ,**
**ಜಂಗಮಕ್ಕೆ ಧನವ ಕೊಟ್ಟಿರುವುದೇ ಚಂದ,**
**ಅಷ್ಟಾವರಣದಲ್ಲಿ ನಿಬ್ಬೆರಗಿನಿಂದ ಕೂಡಿ, ಭಕ್ತಿಯೆಂಬ ಸಮುದ್ರದಲ್ಲಿ**
**ಈಸಾಡುವುದೇ ಚಂದ, ಶಿವಪಾದವ ಹೊಂದುವುದೇ ಚೆಂದ**
**ಈ ಮಾರ್ಗವ ಬಿಟ್ಟು ಸಂಸಾರವೇ ಅಧಿಕವೆಂದು ತನ್ನ ಹೆಂಡಿರು**
**ಮಕ್ಕಳು ಸಂಪತ್ತು ಇವು ನನಗೆ ಶಾಶ್ವತ ಎಂದು ತಿಳಿದು**
**ಒಂದು ಕಾಸನನಾದರೂ ಪರರಿಗೆ ಕೊಡದೆ, ತಾವೆ ತಿಂದು**
**ನೆಲದಲ್ಲಿ ಮಡಗಿ, ಕಡೆಗೆ ಯಮನ ಕೈಯಲ್ಲಿ ಸಿಲ್ಕಿ**
**ನರಕ ಕೊಂಡದಲ್ಲಿ ಮುಳುಗೇಳುವುದೇ ನಿಶ್ಚಯ**
**ಇಂತಹ ಅಂದಗೇಡಿಗಳ ಮುಖವ ನೋಡಲಾಗದು ಎಂಬಾತ**
**ಅಂಬಿಗರ ಚೌಡಯ್ಯ ನಿಜಶರಣನು**

ಶರಣ ಚಳವಳಿಯ ಆಂತರಿಕ ಪ್ರಜಾಪ್ರಭುತ್ವದ ನಿದರ್ಶನದಂತೆ ಕಾಣುವ ಈ ವಚನದಲ್ಲಿ ಶರಣರು ಅಂತರಂಗದ ಸೌಂದರ್ಯಕ್ಕಿಂತಲೂ ಬಹಿರಂಗ ಸೌಂದರ್ಯಕ್ಕೆ ಒತ್ತು ನೀಡಿದ ವಿಚಾರವನ್ನು ಚೌಡಯ್ಯ ಹತ್ತಿರದಿಂದ ಗಮನಿಸಿ ನಿಜವಾದ ಶರಣನು ಗುರುವಿಗೆ ತನುವು, ಲಿಂಗಕ್ಕೆ ಮನವು, ಜಂಗಮಕ್ಕೆ ಧನವ ಕೊಟ್‌ಟಿರುವುದು ಚಂದ. ಅಲ್ಲದೇ ಭಕ್ತಿಯೆಂಬ ಸಮುದ್ರದಲ್ಲಿ ಈಸಾಡುವುದು, ಶಿವ ಪಾದವ ಹೊಂದುವುದು ಚಂದ. ಅದು ಬಿಟ್ಟು ಸಂಸಾರ, ಸಂಪತ್ತು, ಹೆಂಡತಿ, ಮಕ್ಕಳು ಹೆಚ್ಚು ಎಂದು ತಿಳಿದವರನ್ನು ಈ ವಚನದಲ್ಲಿ ತರಾಟೆಗೆ ತೆಗೆದುಕೊಂಡು ಅಂತಹವರ ಮುಖ ನೋಡಲಾಗದು ಎಂದು ನಿಷ್ಠುರವಾಗಿ ನುಡಿಯುತ್ತಾನೆ.

APPROVED BY UGC CARE

**ಕೇಳಿರಯ್ಯಾ ಮಾನವರೆ,**
**ಗಂಡ ಹೆಂಡಿರ ಮನಸ್ಸು ಒಂದಾಗಿದ್ದರೆ**
**ದೇವರ ಮುಂದೆ ನಂದಾದೀವಿಗೆಯ ಮುಡಿಸಿದ ಹಾಗೆ**
**ಗಂಡ ಹೆಂಡಿರ ಮನಸ್ಸು ಬೇರಾದರೆ**
**ಗಂಜಳದೊಳಗೆ ಹಂದಿ ಹೊರಳಾಡಿ**
**ಒಂದರ ಮೇಲೆ ಒಂದು ಬಂದು ಮೂಸಿದ ಹಾಗೆ**

ಜೇಡರ ದಾಸಿಮಯ್ಯ–ದುಗ್ಗಳೆ, ಆಯ್ದಕ್ಕಿ ಮಾರಯ್ಯ–ಲಕ್ಕಮ್ಮ, ಉರಿಲಿಂಗಪೆದ್ದಿ–ಕಾಳವ್ವೆ, ಹಡಪದ ಅಪ್ಪಣ–ಲಿಂಗಮ್ಮ ಹೀಗೆ ಅನೇಕ ಶರಣರು ಶಬ್ದಕ್ಕೊಂದು ಅರ್ಥ, ಹೂವಿಗೊಂಡು ಪರಿಮಳ ಇರುವಂತೆ ಸಂತೃಪ್ತ ದಾಂಪತ್ಯವನ್ನು ನಡೆಸಿದವರು. ಅಂಬಿಗರ ಚೌಡಯ್ಯನೂ ಇದಕ್ಕೆ ಹೊರತಲ್ಲ, ಸಮರಸ ದಾಂಪತ್ಯದ ಕುರಿತ ಅವನ ವಿಚಾರಗಳು ಪರಿಣಾಮಕಾರಿಯಾಗಿದ್ದು, ಈ ವಚನದಲ್ಲಿ ಅವು ಅಭಿವ್ಯಕ್ತಿಗೊಂಡಿವೆ. ದೇವರ ಮುಂದಿರುವ ನಂದಾದೀವಿಗೆಯಂತೆ ಪರಿಶುದ್ದವಿದ್ದರೆ, ಗಂಜಳದೊಳಗೆ ಹಂದಿ ಹೊರಳಾಡಿದಂತೆ ಮುರಿದ ದಾಂಪತ್ಯವಿರುತ್ತದೆ ಎಂದು ಸಮರಸ ದಾಂಪತ್ಯದ ಮಹತ್ವವನ್ನು ಪ್ರಸ್ಥಾಪಿಸಿದ್ದಾನೆ.

ಹೀಗೆ, ಬಹುದೇವೋಪಾಸನೆ, ವೈದಿಕ ಗ್ರಂಥಗಳ ಪಾವಿತ್ರ್ಯತೆಯ ವಿಡಂಬನೆ, ಗಂಡು–ಹೆಣ್ಣಿನ ಸಮಾನತೆ; ಕಾಯಕಕ್ಕೆ ಕೊಟ್ಟ ಮಹತ್ವ, ಬಡವ–ಬಲ್ಲಿದ,ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ವರ್ಗಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ಬಂಡಾಯ ಪ್ರಜ್ಞೆಯ ನೆಲೆಗಳಾಗಿದ್ದು, ಆತನ ವಚನಗಳುದ್ದಕ್ಕೂ ಕಂಡುಬರುತ್ತದೆ. ಅಲ್ಲದೇ ಈತನು ಜನಪರ ನಿಲುವುಗಳಿಗೆ ಬೆಂಬಲ ನೀಡುವುದು, ಜನಪರವಾದ ಹೋರಾಟವನ್ನು ಮಾಡುವುದು ಈತನಬಂಡಾಯದ ಮುಖ್ಯ ಲಕ್ಷಣವಾಗಿದ್ದು, ವಚನಗಳ ಮೂಲಕ ಸಮಾಜ ಸುಧಾರಣೆಯ ಬಂಡಾಯದ ಪ್ರಖರ ದನಿಯಾಗಿ ಚೌಡಯ್ಯನು ಕಂಡುಬರುತ್ತಾನೆ.

ತಾನು ಪರಿಶುದ್ಧನಾಗಿ ಶುದ್ಧ ಬಾಳನ್ನು ಬಾಳಿ ಬದುಕನ್ನು ಬೆಳಗಿಸಿಕೊಂಡವನು ಚೌಡಯ್ಯ. ಬಸವಾದಿ ಶರಣರಿಂದ ನಿಜಶರಣ ಎಂಬ ಗೌರವಕ್ಕೆ ಪಾತ್ರರಾದ ಈತನ ಜೀವನ ಸಂದೇಶಗಳು ಕಾಲಧರ್ಮಗಳನ್ನು ಮೀರಿ ಇಂದಿಗೂ ಪ್ರಸ್ತುತವಾಗಿವೆ. ಒಟ್ಟಾರೆಯಾಗಿ ಸಮಾಜಮುಖಿಯಾದ ಬಾಳನ್ನು ಬಾಳಿ, ಸಮಾಜಸುಧಾರಕನಾಗಿ, ಬಂಡಾಯಗಾರನಾಗಿ, ಪ್ರಗತಿಪರ ಚಿಂತಕನಾಗಿ, ಆಧ್ಯಾತ್ಮಿಕ, ತಾತ್ವಿಕದಲ್ಲಿ ಹೊಸ ನೆಲೆಯನ್ನು ಕಂಡುಕೊಂಡವನಾಗಿದ್ದಾನೆ. ಸಮಾಜಕ್ಕೆ ಸನ್ಮಾರ್ಗ ತೋರಿಸುವ ವಚನ ಸಾಹಿತ್ಯಕ್ಕೆ ಚೌಡಯ್ಯನವರು ಅಮೂಲ್ಯವಾದ ಕೊಡುಗೆ ಕೊಟ್ಟು, ತನ್ನ ಸಾರ್ಥಕ ಬದುಕಿನ ಸಾರವನ್ನು, ಸಮಾನತೆಯ ಸಮಾಜ ಕಟ್ಟಲು ನೆರವಾಗುವ ಚಿಂತನೆಗಳನ್ನು ನೀಡಿದ ಪ್ರಮುಖ ವಚನಕಾರ ನಾಗಿದ್ದಾನೆ.

## ಪರಾಮರ್ಶನ ಗ್ರಂಥಗಳು


- **ಸರಜೂ ಕಾಟ್ಕರ್** (ಸಂ.) **(2012) :** ಕನ್ನಡ ಬಂಡಾಯ ಸಾಹಿತ್ಯ, ನವದೆಹಲಿ ಸಾಹಿತ್ಯ ಅಕಾಡೆಮಿ.
- **ಡಾ. ನಾಗಪ್ಪ ಟಿ. ಗೋಗಿ (2022) :** ಕಲ್ಯಾಣ ಕರ್ನಾಟಕ ಸಾಹಿತ್ಯ ಸಂಸ್ಕೃತಿ ಮಾಲೆ, ಕಲಬುರಗಿ ಅಂಬಿಗರ ಚೌಡಯ್ಯ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃತಿ ಮತ್ತು ಸಾಂಸ್ಕೃತಿಕ ಸಂಘ (ರಿ).
- **ಡಾ. ಎ. ವಿ. ಲಕ್ಷ್ಮೀನಾರಾಯಣ (2015) :** ವಚನ ಚಿಂತನ ಮಾಲೆ, ಅಂಬಿಗರ ಚೌಡಯ್ಯ ಶ್ರೀ ಬಸವ ಅಧ್ಯಯನ ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು


*– 112ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಜೈನ ಬಸದಿಗಳು ರೂಪಾಂತರ – ನಾಶ ಪುನರ್‌ನಿರ್ಮಾಣ

## (ಕರ್ನಾಟಕ ಜೈನ ಶಾಸನಗಳನ್ನು ಅನುಲಕ್ಷಿಸಿ)

✍ **ಡಾ. ಅಡಿವೆಪ್ಪ ಚ. ವಾಲಿ** ಕನ್ನಡ ಸಹ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ಶಿಗ್ಗಾಂವ, ಜಿ. ಹಾವೇರಿ.

ಇತ್ತೀಚಿಗೆ ಮಾಧ್ಯಮಗಳಲ್ಲಿ ಬಹಳಷ್ಟು ಸುದ್ದಿ ಮಾಡುತ್ತಿರುವ 'ನಾಶ' ಎಂಬ ಶಬ್ದದ ಆಳ–ಅಗಲ–ವಿಸ್ತಾರ ಗಮನಿಸುತ್ತಾ ಹೋದರೆ ಇದು ಭಾಷೆಗಳ ಉಗಮದಿಂದಲೂ ಅಂಟಿದ ನಂಟು ಎನಿಸುತ್ತದೆ. 'ಸೃಷ್ಟಿ'ಯಾದರೆ 'ನಾಶ' ಆಗಲೇಬೇಕು. ನಿರ್ಮಾಣವಾದದ್ದು ನಿರ್ನಾಮ ಹೊಂದುತ್ತದೆ. ಧರ್ಮ ಜಾತಿಗಳ ಸಂಘರ್ಷಗಳು ತಾರಕಕ್ಕೇರಿದಾಗ ಈ 'ನಾಶ'ಪದ ಭೌತಿಕವಾಗಿ ಮತ್ತೊಮ್ಮೆ ಬೌದ್ಧಿಕವಾಗಿ ನರ್ತನವಾಡುತ್ತಲೇ ಇರುತ್ತದೆ. ಕನ್ನಡವನ್ನು ಕಟ್ಟಿ ಬೆಳೆಸಿದ ಜೈನರ ಬಸದಿಗಳು ಸಾಕಷ್ಟು ಬಾರಿ ದಾಳಿಗೊಳಗಾದವು. ಮತ–ಧರ್ಮದ ಪ್ರಾಬಲ್ಯಗಳ ಕಾಲ ಘಟ್ಟದಲ್ಲಿ ಕೆಲ ಬಸದಿಗಳು ರೂಪಾಂತರವಾದರೆ, ಇನ್ನು ಕೆಲವುಗಳು ನಾಶವಾದವು. ಹೀಗೆ ರೂಪಾಂತರ ಹಾಗೂ ನಾಶವಾದ ಬಸದಿಗಳು ಕಾಲನಂತರದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಪುನರ್‌ನಿರ್ಮಾಣಗೊಂಡವು.

ರಾಜ ಮಹಾರಾಜರು ಯಾವ ಧರ್ಮದವರಾಗಿರುತ್ತಿದ್ದರೋ ಅವರು ತಮ್ಮ ತಮ್ಮ ಧರ್ಮಗಳನ್ನು ಪೋಷಿಸುತ್ತಿದ್ದರು. ಜೊತೆಗೆ ಸ್ಮಾರಕಗಳನ್ನು ನಿರ್ಮಿಸಿ ದಾನ–ದತ್ತಿಗಳನ್ನು ನೀಡುತ್ತಿದ್ದರು. ಜೈನ ಧರ್ಮದ ರಾಜರ ಆಡಳಿತ ರಾಜ್ಯಗಳು ಇಲ್ಲವಾದಾಗ ಅನ್ಯಮತ ಧರ್ಮದ ರಾಜರ ದಬ್ಬಾಳಿಕೆ ದೌರ್ಜನ್ಯ ಅಥವಾ ಒಪ್ಪಂದಗಳ ಮೇರೆಗೆ ಬಸದಿಗಳು ರೂಪಾಂತರ–ನಾಶ– ಪುನರ್ ನಿರ್ಮಾಣ ಕ್ರಿಯೆ ನಡೆದವು. ಮತ–ಧರ್ಮಗಳು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವುದರೊಟ್ಟಿಗೆ ತಮ್ಮ ವಲಯ ವಿಸ್ತಾರಗೊಳಿಸಿಕೊಳ್ಳುತ್ತ ಸಬಲತೆಯೆಡೆಗೆ ಅಡಿಯಿಟ್ಟವು. ಅನ್ಯ ಧರ್ಮಿಯರನ್ನು ಅದರ ಸ್ಮಾರಕಗಳನ್ನು ದುರ್ಬಲಗೊಳಿಸುವುದರ ಜೊತೆಗೆ ರೂಪಾಂತರ ಮತ್ತು ನಿರ್ಮೂಲನೆಗೆ ಕೈ ಹಾಕಿದವು. ಇದನ್ನು ಡಾ. ಎಂ. ಎಂ. ಕಲಬುರ್ಗಿಯವರು ಸಮೂಲನಾಶ ಕ್ರಿಯೆ, ರೂಪಾಂತರ ಕ್ರಿಯೆ, ನಾಶ ಪ್ರಯತ್ನ ಹೀಗೆ ಮೂರು ಬಗೆಯಾಗಿ ಗುರುತಿಸಿದ್ದಾರೆ. "ರೂಪಾಂತರ ಕ್ರಿಯೆ ವಿರೋಧಿಗಳಿಂದ ಘಟಿಸಿರಬಹುದು. ಇಲ್ಲದೆ, ಯಾವುದೋ ಕಾರಣಕ್ಕಾಗಿ ಸಾಮೂಹಿಕ ಮತಾಂತರಗೊಂಡ ಒಂದು ಗ್ರಾಮದ ಒಂದು ಮತೀಯರು, ತಮ್ಮ ದೇವಾಲಯ ನಿಷ್ಪ್ರಯೋಜಕವಾಗಿ ಉಳಿಯಬಾರದೆಂದು ತಾವೇ ಅದನ್ನು ರೂಪಾಂತರಿಸಿರಬಹುದು. ದೇವಾಲಯದ ಸಮೂಲ ನಾಶ, ರೂಪಾಂತರ ಮತ್ತು ನಾಶ ಪ್ರಯತ್ನಗಳಿಗೆ ಮತ ದ್ವೇಷಕಾರಣವಾಗಿದ್ದರೂ ಕೆಲವೊಮ್ಮೆ ವಾದ ಸ್ಪರ್ಧೆಯ ಸೋಲು ಕಾರಣವಾಗಿರುತ್ತದೆ"[1]. ಪ್ರಾಚೀನ ಕರ್ನಾಟಕದಲ್ಲಿ ಬೌದ್ಧರ ಸ್ತೂಪಗಳನ್ನು ಜೈನರು ನಾಶ ಮಾಡಿದರು. ಜೈನರು ಸಾವಿರಾರು ಸಂಖ್ಯೆಯಲ್ಲಿ ಬಸದಿಗಳನ್ನು ನಿರ್ಮಿಸಿದರು. ಬರಬರುತ್ತ ಜೈನರು ವೈಷ್ಣವರ ಜೊತೆ ಒಪ್ಪಂದ ಮಾಡಿಕೊಂಡು ಇಳಿಮುಖವಾಗುವಾಗ ತಮ್ಮ ಬಸದಿಗಳಿಗೆ 'ಬ್ರಹ್ಮಜಿನಾಲಯ' ವೆಂದು ರೂಪಾಂತರ ಮಾಡಿಕೊಂಡರು. ತದನಂತರ ಶೈವರು, ವೈಷ್ಣವರು, ಶ್ರೀವೈಷ್ಣವರು ಬಸದಿಗಳನ್ನು ನಾಶಗೊಳಿಸಿದರು. ಆದರೇ ಬೆರಳೆಣಿಕೆ ಸಂಖ್ಯೆಯಲ್ಲಿ ಬಸದಿಗಳನ್ನು ಪುನರುಜ್ಜೀವನ ಅಥವಾ ಪುನರ್ ನಿರ್ಮಾಣ ಮಾಡಿದ್ದು ಕಂಡುಬರುತ್ತದೆ.

**ರೂಪಾಂತರಕ್ರಿಯೆ :** ರಾಷ್ಟ್ರಕೂಟರು ಮತ್ತು ಗಂಗರು ಜೈನ ಧರ್ಮದವರು ಅವರು ತಮ್ಮ ಧರ್ಮದ ಸ್ಮಾರಕ, ಬಸದಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಿರ್ಮಿಸಿದರು. 10–11ನೇ ಶತಮಾನದ ಹೊತ್ತಿಗೆ ಇವರ ಪತನ ಆರಂಭವಾಯಿತು. ಅರಸರ ಆಶ್ರಯವಿಲ್ಲದ ಧರ್ಮ ಹಾಗೂ ಬಸದಿಗಳ ಬೇರು ಸಡಿಲಗೊಂಡವು. ಜೈನರು ಬೇರೆ ಧರ್ಮಕ್ಕೆ ಮತಾಂತರಗೊಳ್ಳಲಾರಂಭಿಸಿದರು. 1055ರ ಕೋಗಳಿ ಶಾಸನದಲ್ಲಿ "ತೊಲಗದೆ ಜೈನಮಾರ್ಗ್ಗದೊಳ್ ನಿಶ್ಚಳರಪ್ಪುದು"[2] ಎಂದು ಜೈನರಿಗೆ ಸಾರಿದೆ. ತಮ್ಮ ಬಸದಿಗಳನ್ನು ವೈಷ್ಣವರ ಸುಪರ್ದಿಗೆ ಕೊಡುವ ಅನಿವಾರ್ಯತೆ ಬಂದಿರಬೇಕು. ಅಂತೆಯೇದುರ್ವ್ವಿನೀತನಿಂದರಚಿತವಾದ ಬಸದಿಗೆ ಕೋಗಳಿಯಲ್ಲಿ 24 ಮತ್ತರು ಭೂಮಿಯನ್ನುದಾನ ಮಾಡಿದ್ದು ನಂತರ "ಕೋಟಿ ಕವಿಲೆಯುಂ ಬ್ರಾಹ್ಮಣರ್ಗ್ಗೆದಾನಂಗೈಯುದ್ದು ಪು(ಣ್ಯಮಿದನಳಿ)"[3] ಎಂಬ ಸಾಲು ನಮ್ಮ ಗಮನ ಸೆಳೆಯುತ್ತದೆ.

ದಾನಚಿಂತಾಮಣಿ ಅತ್ತಿಮಬ್ಬೆ ಲೊಕ್ಕಿಗುಂಡಿ (ಲಕ್ಕುಂಡಿ)ಯಲ್ಲಿ ಕ್ರಿ.ಶ. 27 ಫೆಬ್ರುವರಿ, 1007ರ ಗುರುವಾರ ಜೈನ ಬಸದಿ ನಿರ್ಮಿಸಿ ಶಾಸನ ಕೊರೆಯಿಸಿದ್ದಾಳೆ. ಅದಕ್ಕೆ 'ಬ್ರಹ್ಮಜಿನಾಲಯ' ಎಂದು ಪುನರ್ ನಾಮಕರಣ ಮಾಡುತ್ತಾಳೆ. ಅತ್ತಿಮಬ್ಬೆಯ ಮೊದಲು ಕಟ್ಟಿಸಿರುವ 1500 ಬಸದಿಗಳಿಗೆ ಇದು ಕಲಶವಿಟ್ಟಂತೆ ಎಂದು ಶಾಸನ ತಿಳಿಸುತ್ತದೆ. ಲೊಕ್ಕಿಗುಂಡಿಯ (ಮಹಾಜನ) ಸಹಸ್ರರು ಬ್ರಹ್ಮನೇತಮಗೆ ಮೂಲವಲ್ಲವೇ ಎಂದು 'ಬ್ರಹ್ಮಜಿನಾಲಯ' ಎಂದು ಹೆಸರಿಟ್ಟರು. ಲಕ್ಕುಂಡಿಯ ಒಡೆಯರೂ ಪ್ರಮುಖರೂ ಆದ ಮಹಾಜನ ಸಹಸ್ರರ ಕೈಯಲ್ಲಿ ತನ್ನ ಬಸದಿಗೆ ಪೂಜಾರ್ಥವಾಗಿ ತೋಟವೊಂದನ್ನು ಬೇಡಿ ಪಡೆದಳು. ಇದರಿಂದ ಈ ವೇಳೆಗಾಗಲೇ ಬಸದಿಗಳು ರೂಪಾಂತರಗೊಳ್ಳಲು ಆರಂಭವಾದ ಕಾಲ ಎನ್ನಬೇಕು. ಶಾಸನದ ಪಾಠ ಹೀಗಿದೆ –

> **ಬ್ರಹ್ಮನೆದಲ್ಲಮಗಾದೀ ಬ್ರಹ್ಮಜಿನಂತಾನೆನುತ್ತೆ**
> **ಸಾಸಿರ್ವ್ವರುಮೀ ಬ್ರಹ್ಮಜಿನನಿಳಯಕಿತ್ತರ್ವ್ವ್ರಹ್ಮಜಿನಾಳಯ**
> **ಮೆನಿಪ್ಪ ಪೆಸರಂ ಮದದಿಂ**[4]

10ನೇ ಶತಮಾನದ ಉತ್ತರಾರ್ಧದಿಂದ ಜೈನ ಧರ್ಮಕ್ಕೆ ಪೋಷಕವಾಗಿ ವೈದಿಕ ಶೈವ ಬ್ರಾಹ್ಮಣರು ಆಶ್ರಯ ನೀಡಿದ ಪ್ರಮುಖ ಉಲ್ಲೇಖವೇ ಈ ಮೇಲಿನ ಶಾಸನವಾಗಿದೆ. ಜೈನರ ಪ್ರಭಾವ ಕಡೆಮೆಯಾದ ತರುವಾಯ ಪ್ರಭಾವಶಾಲಿಗಳಾದ ಮಹಾಜನರ ವಶವಾದ ಜೈನ ಬಸದಿಗಳು ಕ್ರಮೇಣ ರೂಪಾಂತರ ಹೊಂದಿದವು. ಅಮರಾಪುರದ ಶಾಸನದಲ್ಲಿ ದತ್ತಿ ನೀಡಿದವನ ಬಗ್ಗೆ ಹೇಳುತ್ತ ಯಜುರ್ವೇದದಐತ್ರೇಯ ಶಾಖೆಯ ವಶಿಷ್ಠಗೋತ್ರದ ಕೌಂಡಿನ್ಯ ಮೈತ್ರಾವರಣ ವಿಶಿಷ್ಟವೆಂಬ ಪ್ರವರದ ಪೊರಜಿನ ಬ್ರಾಹ್ಮಣನಾದ ದೀಪನಾಯಕ ಮತ್ತು ಪೊನ್ನವ್ವೆಯ ಮಗ ಶ್ರೀಸಯನಗಿರಿ ಎಂಬುವವನು ಬಾಳೆಂದು ಮಲಧಾರಿಗಳ ಶಿಷ್ಯ ಚೆಲ್ಲಪಿಳ್ಳೆಯ ಉಲ್ಲೇಖ ಬಂದಿದೆ. ಇಲ್ಲಿ ಮುಖ್ಯವಾದುದು ಏನೆಂದರೆ ವೈದಿಕರು ತಾವು ನೋಡಿಕೊಳ್ಳುತ್ತಿದ್ದ ಅಥವಾ ಕಟ್ಟಡಕ್ಕೆ ಸಹಾಯ ಮಾಡಿರುವ ಬಸದಿಗಳಲ್ಲಿ ತಮ್ಮ ಧರ್ಮದ ಸಂಕೇತವಾಗಿ ಯೋಗ ದಂಡವನ್ನು ಇರಿಸುತ್ತಿದ್ದರು.

ಶೈವರೊಡಗೂಡಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಜೈನರು ಮಾಡಿಕೊಂಡ ಅಲಿಖಿತ ಒಪ್ಪಂದದ ಫಲವೇ ಯೆಕ್ಕೋಟಿ, ಏಳುಕೋಟಿ, ಎಕ್ಕೋಟಿ ಜಿನಾಲಯಗಳಾಗಿವೆ. ಗುಂಡ್ಲುಪೇಟೆಯ ಕ್ರಿ.ಶ. 1196ರ ಶಾಸನ, ವಕ್ಕಲಗೆರೆಯ 1202ರ ಶಾಸನ ಇದಕ್ಕೆ ಸಾಕ್ಷಿಯಾಗಿವೆ. ಕ್ರಿ.ಶ. 13ನೆಯ

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶತಮಾನದ ಕಂಬದಹಳ್ಳಿ ಶಾಂತೀಶ್ವರನ ಬಸದಿಯ ರಂಗಮಂಟಪದ ಈಶಾನ್ಯ ಕಂಬದ ಬೋದಿಗೆ ಪಟ್ಟಿಯ ಸುತ್ತಲೂ ಕೊರೆದಿರುವ ಶಾಸನದಲ್ಲಿ ಏಳುಕೋಟಿ(ಎಕ್ಕೋಟಿ) ರುದ್ರರ ವರ್ಣನೆಯಿದೆ. ಈ ಕಂಬದಹಳ್ಳಿ ಪುಣ್ಯಕ್ಷೇತ್ರವನ್ನು "ಎಕ್ಕೋಟಿಜಿನಾಲೆಯವೆಂದು ಹೆಸರುಂ ಭೇರೀ ಪಂಚ ಮಹಾಶಬ್ದವಂ ಎಕ್ಕೋಟಿ ಮಹಾರುದ್ರರಿಳ್ದುಕೊಟ್ಟರು"[5] ಎಂದಿದೆ.

ಡಾ. ಎಂ.ಎಂ. ಕಲಬುರ್ಗಿಯವರು ತಿಳಿಸಿದಂತೆ ಹಾಸನ ತಾಲೂಕಿನ ಮುತ್ತತ್ತಿ ಗ್ರಾಮದ ವಿನಯಾದಿತ್ಯ ಜಿನಾಲಯ (1120) ಇಂದು ಮಾಧವ ದೇವಾಲಯವಾಗಿದೆ. ಮೂಲತಃ ಜೈನ ಬಸದಿಯಾಗಿದ್ದುದು ಇಂದು ಕೊಲ್ಲಾಪುರ ಲಕ್ಷ್ಮೀ ದೇವಾಲಯವಾಗಿದೆ. ಅರಸಿಕೆರೆ ಶಾಸನದಲ್ಲಿ ಸಹಸ್ರಕೂಟ ಜಿನಾಲಯುವನ್ನು 'ಕಾಳಾಮುಖಪ್ರತಿಬ್ಧ' ವೆಂದು ಕರೆಯಲಾಗಿದೆ. ಮೂಲತಃ ಕೊಲ್ಲಾಪುರದ ರೂಪ ನಾರಾಯಣ ಬಸದಿಗೆ ಪ್ರತಿಬದ್ಧವಾಗಿದ್ದ ತೇರಿದಾಳ ನೇಮಿತೀರ್ಥಂಕರ ಬಸದಿಯನ್ನು ಅದೇ ಗ್ರಾಮದ ಶೈವ ಕಲಿದೇವರ ದೇವಾಲಯಕ್ಕೆ ಪ್ರತಿಬದ್ಧ ಮಾಡಿದ ವಿಷಯ ಶಾಸನದಲ್ಲಿದೆ. ಐಹೊಳೆಯ ಮೇಗೂತಿದೇವಾಲಯ ಮೂಲತಃಜೈನ ಬಸದಿಯಾಗಿತ್ತು. ನರಗುಂದ ತಾಲೂಕಿನ ಕೊಣ್ಣೂರು ಗ್ರಾಮದ ಜಿನಾಲಯ ಪರಮೇಶ್ವರ ದೇವಾಲಯವಾಗಿದೆ. ಹಾವೇರಿಯ ಜಿನಾಲಯ ಇಂದು ವೀರಭದ್ರ ದೇವಾಲಯವಾಗಿ ರೂಪಾಂತರಗೊಂಡಿದೆ. ಹೂಲಿಯ ಪಂಚಕೂಟ ಬಸದಿ ಇಂದು ಪಂಚಲಿಂಗ ದೇವಾಲಯವೆನಿಸಿದೆ. ಸವದತ್ತಿಯ ಶ್ರೀ ಯಲ್ಲಮ್ಮದೇವಿ ದೇವಸ್ಥಾನ ಮೊದಲಿಗೆ ಜೈನ ಬಸದಿ ಎಂಬುವುದನ್ನು ನೆನೆದುಕೊಳ್ಳಬೇಕು.

**ನಾಶ:** ಕರ್ನಾಟಕದಲ್ಲಿ 12ನೆಯ ಶತಮಾನದ ನಂತರ ಜೈನ ಧರ್ಮ ಕ್ಷೀಣಿಸತೊಡಗಿತು. ಒಂದು ಕಡೆ ವೀರಶೈವ ಧರ್ಮ ಇನ್ನೊಂದು ಕಡೆಗೆ ಶ್ರೀವೈಷ್ಣವ ಪ್ರಬಲಗೊಂಡವು. ರಾಷ್ಟ್ರಕೂಟರು ಮತ್ತು ಗಂಗರ ಆಶ್ರಯದಲ್ಲಿ ಉನ್ನತವಾಗಿ ಬೆಳೆದಿದ್ದ ಜೈನ ಧರ್ಮ ಅವರ ಪ್ರಾಬಲ್ಯ ಕಡಿಮೆಯಾದ ತರುವಾಯ ದೊಡ್ಡ ಗಂಡಾಂತರಗಳನ್ನು ಎದುರಿಸಿತು.

ಜೈನ ಪಂಡಿತರು ವಾದ ಪ್ರತಿವಾದಕ್ಕೆ ಬಿದ್ದು ತಮ್ಮ ಜಿನಾಲಯ ಅಥವಾ ಬಸದಿಗಳನ್ನು ಪಣಕ್ಕೆ ಒಡ್ಡಿ ಸೋತು ನಾಶ ಪಡಿಸಿಕೊಂಡರು. ದಾಸಿಮಯ್ಯನ ಘಟಸರ್ಪ ಪವಾಡ ಸ್ಪರ್ಧೆಯಲ್ಲಿ ಸೋತಾಗಜೈನರ 700 ಬಸದಿಗಳು ನಾಶವಾದ ಉಲ್ಲೇಖ ವೀರಶೈವ ಪುರಾಣ ಮತ್ತು ಶಾಸನಗಳಲ್ಲಿ ಸಿಗುತ್ತವೆ. ಪುಲಿಗೆರೆಯ ಸುರ ಹೊನ್ನೆ ಬಸದಿಯ ಜಿನನನ್ನು ನಾಶ ಮಾಡಿ ಆ ಸ್ಥಳದಲ್ಲಿ ಸೋಮೇಶ್ವರನನ್ನುಆದಯ್ಯ ಸ್ಥಾಪನೆ ಮಾಡಿದ ಸಂಗತಿ ಪ್ರಸಿದ್ಧವಾಗಿದೆ.

ವೀರಗೊಗ್ಗಿದೇವನು ಜೈನ ಬಸದಿಗಳನ್ನು ನಾಶ ಮಾಡಿದ ಸಂಗತಿಯನ್ನು ಅಣ್ಣಿಗೇರಿ ಶಾಸನ ಹೀಗೆ ತಿಳಿಸುತ್ತದೆ:

**ಜೈನಮೃಗ ಬೇಂಟೆಕಾರಂ ।**
**ಜೈನಾಗಮಧೂಮಕೇತುಜೈನಕುಠಾರಂ ॥**
**ಜೈನಫಣಿ ಮೈನತೀಯಂ ।**
**ಜೈನಾಂತರನೆನಿಸಿ ನೆಗಳ್ದನೀ ಗೊಗ್ಗರಸಂ ॥**[6]

ದೇವರ ದಾಸಿಮಯ್ಯ, ಆದಯ್ಯ, ಏಕಾಂತದ ರಾಮಯ್ಯ, ಹಗರಟಿಗೆಯ ವಿರುಪರಸ, ಅಣ್ಣಿಗೇರಿಯ ವೀರಗೊಗ್ಗಿದೇವ ಈ ಮುಂತಾದವರು ಜೈನ ಬಸದಿ, ಸಂಸ್ಕೃತಿ ಇತ್ಯಾದಿಗಳನ್ನು ನಾಶ ಮಾಡಿದ ಸಂಗತಿ ತಿಳಿದು ಬರುತ್ತದೆ. ಇನ್ನು ಹತ್ತು ಹಲವು ಸ್ವಾರಸ್ಯ ಮತ್ತು ಆಘಾತಕಾರಿ ಸಂಗತಿಗಳನ್ನು ರಾಜಾವಳಿ ಕಥೆ ನಮಗೆ ವಿವರವನ್ನುಒದಗಿಸುತ್ತದೆ. ಹೊಯ್ಸಳ ರಾಜಾ ವಿಷ್ಣುವರ್ಧನ ಜೈನರ ಸಾವಿರಾರು ಬಸದಿಗಳನ್ನು ನಾಶ ಪಡಿಸಿದನೆಂದು, ಮೇಲುಕೋಟೆಯ ಜಿನಾಲಯ ನಾಶ ಮಾಡಿ 'ಚಲುವರಾಯ'ನೆಂದು ಸ್ಥಾಪಿಸಿದ ಸಂಗತಿ ಅದು ತಿಳಿಸುತ್ತದೆ. ಲಕ್ಕುಂಡಿ ಮತ್ತು ಶ್ರವಣಬೆಳಗೊಳದ ಪರಿಸರದಲ್ಲಿದ್ದ ಸಾವಿರಾರು ಜೈನ ಬಸದಿಗಳು ನಾಶವಾದ ಸಂಗತಿ ಬೆಳಕಿಗೆ ಬಂದಿದೆ.

ತಲಕಾಡಿನ ಗಂಗರು ಕ್ರಿ.ಶ. 1004ರಲ್ಲಿ ಸೋತು ಗಂಗವಾಡಿಯನ್ನು ಚೋಳರಿಗೆ ಒಪ್ಪಿಸಿದರು. ಚೋಳರು ಶೈವ (ವೈದಿಕ)ರಾಗಿದ್ದರೆ ಅವರ ಸಾಮಂತರು ಶ್ರೀವೈಷ್ಣವರಾಗಿದ್ದರು. ಚೋಳರ ದಾಳಿ ಕರ್ನಾಟಕ್ಕೆ ಬಂದಾಗ ಅವರ ಸೈನ್ಯ ಎಲ್ಲೆಲ್ಲಿ ಹೋಗಿದಿಯೋ ಆಯಾ ಪ್ರದೇಶದಲ್ಲಿ ತಲೆ ಎತ್ತಿ ನಿಂತಿದ್ದ ಬಸದಿಗಳು ನಾಶ ಹೊಂದಿದವು. ಚೋಳರ ದಾಳಿಗೆ ತುತ್ತಾದ ಜೈನರು ಅವರ ಸ್ಮಾರಕಗಳು ಕರ್ನಾಟಕದ ಪಶ್ಚಿಮ ಪ್ರದೇಶಕ್ಕೆ ವಲಸೆ ಹೋಗುವ ಅನಿವಾರ್ಯತೆ ಉಂಟಾಯಿತು.

**ಪುನರ್ ನಿರ್ಮಾಣ :** ಶೈವ, ವೈಷ್ಣವ, ಶ್ರೀವೈಷ್ಣವರ ದಾಳಿಗೆ ಸಿಲುಕಿ ನಲುಗಿ ಹೋಗಿದ್ದ ಬಸದಿಗಳು ಹೊಯ್ಸಳ ಮಂತ್ರಿಗಳಾದ ಗಂಗರಾಜ, ಹುಳ್ಳರಿಂದ ಪುನರ್ ನಿರ್ಮಾಣ ಪಡೆದಂತೆ ತೋರುತ್ತದೆ. ಕರ್ನಾಟಕದ ಪಶ್ಚಿಮದ ಕಡೆಯಾವಾಗ ಜೈನ ಧರ್ಮ ಮತ್ತು ಬಸದಿಗಳು ಮುಖ ಮಾಡಿದವೋ ಆಗ ಹುಂಚದ ಶಾಂತರರು, ಹೊಯ್ಸಳರ ರಾಜಾಶ್ರಯದಿಂದ ಮರುಜೀವ ಪಡೆದವು. ಕಲ್ಯಾಣಿ ಚಾಲುಕ್ಯರ ಮಾಂಡಳಿಕರಾಗಿದ್ದ ಅನೇಕ ಜೈನ ಅಧಿಕಾರಿಗಳು ನಿಷ್ಠೆಗೆ ಹೆಸರಾಗಿ ತಮ್ಮ ಧರ್ಮ, ಜಿನಾಲಯಗಳ ಅಸ್ತಿತ್ವವನ್ನು ಬೇರು ಬಿಡಿಸಿದರು. ಹುಂಚ, ತೇರದಾಳ, ಬಂದಳಿಕೆ, ಹಾನಗಲ್ಲು ಹೀಗೆ ಅನೇಕ ಪ್ರದೇಶಗಳಿಗೆ ಹಬ್ಬಿತು. ವಿಜಯನಗರ ಸ್ಥಾಪನೆಯಾದ ಹೊಸದರಲ್ಲಿ ಬೈಚಪ್ಪ ಅವನ ಮಗ ಇರುಗಪ್ಪ ದಂಡನಾಯಕರಾದ ಇವರು ಜೈನರಾಗಿದ್ದು ಧರ್ಮಕ್ಕೆ ಜೀವಯಿತ್ತರು. ಆದರೂ ಶ್ರೀವೈಷ್ಣವ, ವೀರಶೈವ ಧರ್ಮಗಳ ಭರಾಟೆಯಲ್ಲಿ ಅಷ್ಟೊಂದು ಪ್ರಬಲವಾದ ಜೈನ ಧರ್ಮ ಮತ್ತು ಬಸದಿಗಳು ತಲೆಯೆತ್ತಲಿಲ್ಲ. ಜೈನ ಬಸದಿಗಳ ನಾಶದಂತಹ ಕೆಲಸಕ್ಕೆ ಕೈ ಹಾಕಿದ ಅನ್ಯ ಮತೀಯರು ತಮ್ಮ ತಮ್ಮ ಧರ್ಮಕ್ಕೆ ಮತಾಂತರಿಸಲು ಪ್ರಯತ್ನಿಸಿದರು. ಜೈನ ಬಸದಿಗಳು ಶ್ರೀವೈಷ್ಣವ ಮತ್ತು ವೀರಶೈವ ಕೇಂದ್ರಗಳಾಗಿ ಪರಿವರ್ತನೆಯಾದುದರ ದ್ಯೋತಕ ಎಂಬಂತೆ ನಮಗೆ ಶ್ರವಣಬೆಳಗೊಳದ ಭಂಡಾರಿ ಬಸದಿಯ ಒಂದನೆಯ ಬುಕ್ಕರಾಯನ 24–08–1368ರ ಶಾಸನ ತಿಳಿಸುತ್ತದೆ. ಕಲ್ಲೆಹದ ಹರ್ವಿಸೆಟ್ಟಿಯ ಪುತ್ರ ಬುಸವಿಸೆಟ್ಟಿಯು ಬುಕ್ಕರಾಯನಿಗೆ ಮನವಿ ಮಾಡಿದ ಪರಿಣಾಮ ಈ ಶಾಸನವಾಗಿದೆ.

"....ಶ್ರೀವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವ ದರ್ಶನಕ್ಕೆ ಊಜೈನ ದರ್ಶನಕ್ಕೆ ಊ ಭೇದವಿಲ್ಲವೆಂದುರಾಯನು ವೈಷ್ಣವರ ಕೈಯ್ಯಲು ಜೈನರ ಕೈವಿಡಿದು ಕೊಟ್ಟು ಯೀ ಜೈನ ದರ್ಶನಕ್ಕೆ ಪೂರ್ವ್ವ ಮರಿಯಾದೆಯಲು ಪಂಚ ಮಹಾವಾದ್ಯಾಂಗಳೂ ಕಳಶಉ ಸಲು ಉದು ಜೈನದರ್ಶನಕ್ಕೆ ಭಕ್ತರದೆಸೆಯಿಂದ ಹಾನಿ ವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು ಯೀ ಮರ್ಯ್ಯಾದೆಯಲುಯಲ್ಲಾ ರಾಜ್ಯದೊಳಗುಳ್ಳಂತಹ ಲಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಿಟ್ಟು ಪಾಲಿಸುವರು...."[7]

ಜೈನ ಧರ್ಮದವರಿಗೆ ವೈಷ್ಣವರಿಂದ ಹಾನಿವೃದ್ಧಿಗಳಾದವರೆ ವೈಷ್ಣವರೇ ಆ ಹಾನಿ ವೃದ್ಧಿಯನ್ನು ಪಾಲಿಸಬೇಕು ಎಂಬ ರಾಜನ ಕಟ್ಟಪ್ಪಣೆ ಜೈನ ಧರ್ಮ ಹಾಗೂ ಅವರ ಬಸದಿಗಳನ್ನು ಉಳಿಯುವಂತೆ ಮಾಡಿತು.

10ನೇ ಶತಮಾನಕ್ಕಿಂತ ಮೊದಲು ಜೈನ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಅತ್ತಿಮಬ್ಬೆಯು ಧರ್ಮದ ಏಳು ಬೀಳುಗಳನ್ನು ಕಂಡಳು. ಹಾಗೇ ನೋಡಿದರೆ ಕೊಪ್ಪಳವು ಕರ್ನಾಟಕದ ಪ್ರಥಮ ಜೈನ ಕ್ಷೇತ್ರವೆಂದು ಡಾ. ಎಂ.ಎಂ. ಕಲಬುರ್ಗಿಯವರು ಗುರುತಿಸಿದ್ದಾರೆ. ಅದಕ್ಕೆ 'ಆದಿತೀರ್ಥ' ಎನ್ನುತ್ತಿದ್ದರು. ರನ್ನ 'ನೆಗಳ್ದ ಕೊಪಣಾಚಳ' ವೆಂದು ಕರೆದಿದ್ದಾನೆ. ನಂತರ

*– 110ನೇ ಪುಟಕ್ಕೆ ಮುಂದುವರೆದುದು*

UGC CARE APPROVED

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕರ್ನಾಟಕದ ಸ್ವತಂತ್ರ್ಯ ಚಳುವಳಿಯಲ್ಲಿ ಮಹಿಳೆಯರು
# ಕಮಲಾದೇವಿ ಚಟ್ಟೋಪಾಧ್ಯಾಯ
## (1903–1988)

✍ **ಶಶಿಕುಮಾರ್ ಬಿ.ಎಸ್.** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪೇಟೆ.

ಭಾರತದ ಸ್ವಾತಂತ್ರ್ಯ ಹೋರಾಟವು ಜಗತ್ತಿನ ಬೇರೆ ಎಲ್ಲಾ ದೇಶಗಳ ಸ್ವಾತಂತ್ರ್ಯ ಹೋರಾಟ ವಿಧಾನಗಳಿಗಿಂತ ತುಂಬಾ ಆಸಕ್ತಿದಾಯಕವಾದ, ಕುತೂಹಲಕಾರಿಯಾದ, ವಿಶಿಷ್ಟವಾದ ಹೋರಾಟವಾಗಿದೆ. ಭಾರತದ ಸ್ವಾತಂತ್ರ್ಯ ಇತಿಹಾಸವು ಹಲವು ಯುದ್ಧಗಳಿಂದ, ತ್ಯಾಗ–ಬಲಿಧಾನಗಳಿಂದ, ಅಹಿಂಸಾತ್ಮಕ ಹೋರಾಟಗಳ ಫಲದಿಂದ ಹೊರಹೊಮ್ಮಿದ ಅಂತಿಮ ಸಿಹಿಯಾಗಿದೆ. ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ನಮ್ಮ ರಾಜ್ಯಕ್ಕೆ ವಿಶೇಷ ಸ್ಥಾನಮಾನವಿದ್ದೂ, ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟದ ಕಾಲದಿಂದ ಹಿಡಿದು ಮುಂದೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯ ಕಾಲಾವಧಿ ಮತ್ತು ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದ ಕಾಲದವರೆಗೆ ಕನ್ನಡನಾಡಿನ ನೂರಾರು ಸ್ವಾತಂತ್ರ್ಯ ಹೋರಾಟಗಾರರು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ತೊಡಗಿಕೊಂಡಿದ್ದನ್ನು ಗುರುತಿಸ ಬಹುದಾಗಿದೆ.

1857ರ ಮಹಾಕ್ರಾಂತಿಯು ಬ್ರಿಟೀಷರ ವಸಾಹತು ಆಡಳಿತದ ವಿರುದ್ಧ ಆರಂಭವಾದ ಮೊದಲ ಹೋರಾಟವಾಗಿತ್ತು. ಭಾರತ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪನೆಯಾದ ನಂತರ ದೇಶದ ಸ್ವಾತಂತ್ರ್ಯ ಹೋರಾಟ ವಿಧಾನವು ವೇಗಪಡೆದುಕೊಂಡಿತು, ಅದರಲ್ಲೂ ಗಾಂಧೀಜಿಯವರ ಅಹಿಂಸಾತ್ಮಕ ಯುಗದಲ್ಲಿ ಸ್ವಾತಂತ್ರ್ಯ ಹೋರಾಟವಂತು ದೇಶದ ಮೂಲೆ–ಮೂಲೆಗೂ ಪಸರಿಸಿ, ದೇಶದಲ್ಲಿನ ರೈತರು, ಕಾರ್ಮಿಕರು, ವಿಧ್ಯಾರ್ಥಿಗಳು, ಮಧ್ಯಮ ವರ್ಗದವರು, ಮಹಿಳೆಯರು ಮುಂತಾದ ಎಲ್ಲಾ ವರ್ಗದ ಜನರು ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟಕ್ಕೆ ದುಮುಖಿದರು. ಈ ಕಾಲಾವಧಿಯಲ್ಲಿ (1920–47) ಸ್ವಾತಂತ್ರ್ಯ ಹೋರಾಟದ ಕಿಚ್ಚು ಜ್ವಾಲೆಯಾಗಿ ಹೊರಹೊಮ್ಮಿತು. ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಪುರುಷರೊಂದಿಗೆ ಸ್ತ್ರೀಯರು ಸಹಾ ಸರಿಸಮಾನವಾಗಿ ಭಾಗವಹಿಸಿ, ಅಪಾರ ತ್ಯಾಗ ಮತ್ತು ಕಷ್ಟಸಹಿಷ್ಣುತೆಯೊಂದಿಗೆ ಸ್ವಾತಂತ್ರ್ಯ ಸಾಧನೆಯಲ್ಲಿ ಪುರುಷರೊಂದಿಗೆ ಸಮಾನ ಪಾತ್ರವಹಿಸಿ ವಿಜೃಂಬಿಸಿದ ಮಹಿಳಾ ಸ್ವಾತಂತ್ರ್ಯ ಹೋರಾಟ ಗಾರ್ತಿಯರು ಅನೇಕರಿದ್ದಾರೆ. ಇಂತಹ ಮಹಾನ್ ಹೋರಾಟಗಾರ್ತಿಯರ ಬಗ್ಗೆ ತಿಳಿಯಬೇಕಾದದ್ದು ನಮ್ಮ ಪ್ರಮುಖ ಕರ್ತವ್ಯವಾಗಿದೆ.

ಕನ್ನಡ ನಾಡಿನಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದ ಮಹಿಳಾ ಹೋರಾಟಗಳನ್ನು ಎರಡು ಭಾಗಗಳಾಗಿ ಕಾಣಬಹುದು. ಅವು – (1) ಸಶಸ್ತ್ರ ಹೋರಾಟಗಳ ಕಾಲದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ– ಈ ಅವಧಿಯಲ್ಲಿ ಪ್ರಮುಖ ಹೋರಾಟಗಾರ್ತಿಯರೆಂದರೆ– ಉಲ್ಲಾಳದ ಹಿರಿಯ ರಾಣಿ ಅಬ್ಬಕ್ಕ (ವಿದೇಶಿಯರನ್ನು ಸೋಲಿಸಿದ ಮೊದಲ ಮಹಿಳೆ), ಉಲ್ಲಾಳದ ರಾಣಿ ಕಿರಿಯ ಅಬ್ಬಕ್ಕ, ಗೇರುಸೊಪ್ಪಾದ ರಾಣಿ ಚನ್ನ ಭೈರಾದೇವಿ, ಕೆಳದಿಯ ಚನ್ನಮ್ಮ, ಬೆಳವಾಡಿ ಮಲ್ಲಮ್ಮ, ಕಿತ್ತೂರಿನ ಚನ್ನಮ್ಮ ಮುಂತಾದವರು. (2) ಅಹಿಂಸಾತ್ಮಕ ಚಳುವಳಿಗಳ ಕಾಲದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ– ಈ ಅವಧಿಯಲ್ಲಿ ಪ್ರಮುಖ ಹೋರಾಟಗಾರ್ತಿಯರೆಂದರೆ– ಬಳ್ಳಾರಿ ಸಿದ್ಧಮ್ಮ, ಉಮಾಬಾಯಿ ಕುಂದಾಪುರ, ಯಶೋಧರಮ್ಮ ದಾಸಪ್ಪ, ಸುನಂದಮ್ಮ, ಭಗೀರತಮ್ಮ, ಕೃಷ್ಣಬಾಯಿ, ದೇವಮ್ಮ ಹರಿಜನ, ಜಯದೇವಿತಾಯಿ ಲಿಗಾಡೆ, ನಾಗಮ್ಮ ಪಾಟೇಲ್, ಲೀಲಾವತಿ ಮಾಗಡಿ, ಸುಬ್ಬಮ್ಮ ಜೋಯಿಸಾ, ಪಾರ್ವತಮ್ಮ, ಹಾಲಮ್ಮ, ನಾಗರತ್ನಮ್ಮ, ರಾಜಮ್ಮ, ಮುದ್ದಮ್ಮ, ಕಮಲಾದೇವಿ ಚಟ್ಟೋಪಾಧ್ಯಾಯರು ಸೇರಿದಂತೆ ಮುಂತಾದ ನಾಯಕಿಯರು ರಾಜ್ಯದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ತಮ್ಮ ಹೆಗ್ಗುರುತು ನೀಡಿದ್ದಾರೆ.

ವಿದ್ಯೆ, ವಿದ್ವತ್ತು, ವಾಕ್ಪಟುತ್ವಗಳಲ್ಲಿ ಸರೋಜಿನಿ ನಾಯ್ಡುರವರಿಗೆ ಹೋಲಿಸುವ ಕರ್ನಾಟಕ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರ್ತಿ, ಸಾಮಾಜಿಕ ಕಾರ್ಯಕರ್ತೆ, ಮಹಾನ್ ಮಹಿಳಾವಾದಿ ನಾಯಕಿ ಕಮಲಾದೇವಿ ಚಟ್ಟೋಪಾಧ್ಯಾಯರು. ತಂದೆಯ ಅಕಾಲಿಕ ಮರಣ, ಚಿಕ್ಕವಯಸ್ಸಿಗೆ ವಿಧವೆಯತೆ, ಮರು ವಿವಾಹದಲ್ಲಿ ನಿರಾಸೆ, ಕೌಟುಂಬಿಕ ಸಮಸ್ಯೆಗಳ ಸರಣಿಯಲ್ಲಿಯೇ ರಾಜ್ಯದ ಸ್ವಾತಂತ್ರ್ಯ ಹೋರಾಟದಲ್ಲಿ, ಸಮಾಜದ ಪರಿವರ್ತನಾ ಕೆಲಸಗಳಲ್ಲಿ ಪ್ರಮುಖವಾಗಿ ತೊಡಗಿಸಿ ಕೊಂಡವರು.

ಕಮಲಾದೇವಿ ಚಟ್ಟೋಪಾಧ್ಯಾಯರು ಏಪ್ರಿಲ್ 03, 1903 ರಲ್ಲಿ ಮಂಗಳೂರಿನ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ದಕ್ಷಿಣ ಕೆನಾರದ ಜಿಲ್ಲಾಧಿಕಾರಿಯಾದ ಅನಂತಯ್ಯ ಧಾರೇಶ್ವರ್ ಮತ್ತು ಗಿರಿಜಾಬಾಯಿ ಎಂಬ ದಂಪತಿಗಳ ನಾಲ್ಕನೇ ಮಗಳಾಗಿ ಜನಿಸಿದರು. ಶ್ರೀಮಂತ ಮತ್ತು ವಿದ್ಯಾವಂತ ಕುಟುಂಬದಲ್ಲಿ ಜನಿಸಿದ್ದರಿಂದ ಇವರಿಗೆ ಬಾಲ್ಯದಲ್ಲಿ ಉತ್ತಮ ಶಿಕ್ಷಣದ ಜೊತೆಗೆ ಸಂಗೀತ, ನೃತ್ಯ, ಲಲಿತಕಲೆ ಮುಂತಾದರಲ್ಲಿ ಶಿಕ್ಷಣ ದೊರೆಯಿತು. ಕಮಲಾದೇವಿ ಚಟ್ಟೋಪಾಧ್ಯಾಯರು ಚಿಕ್ಕ ವಯಸ್ಸಿನಲ್ಲಿದ್ದಾಗಲೇ ಇವರ ತಂದೆ ವಿಧಿವಶರಾದರು, ಹೀಗಾಗಿ ತಾಯಿ ಗಿರಿಜಾಬಾಯಿಯವರು ತಮ್ಮ ಮಕ್ಕಳ ಜವಾಬ್ದಾರಿ ತೆಗೆದುಕೊಂಡು ಶಿಕ್ಷಣಕ್ಕೆ ಗಮನ ನೀಡಿದರು. ಗಿರಿಜಾಬಾಯಿಯವರು ಕಮಲಾದೇವಿಯವರ ಭವಿಷ್ಯದ ಉದ್ಧೇಶದಿಂದ ಹದಿನಾಲ್ಕನೇ ವಯಸ್ಸಿಗೆ ವಿವಾಹ ನೆಡೆಸಿದರು. ಆದರೆ ಮಧುವೆಯಾದ ಎರಡು ವರ್ಷ ಕಳೆಯುವುದರೊಳಗೆ ಕಮಲಾದೇವಿಯವರು ವಿಧವೆಯಾಗಬೇಕಾಯ್ತು. ಇದರಿಂದ ದೃತಿಗೆಡದ ಗಿರಿಜಾಬಾಯಿಯವರು ಕಮಲಾದೇವಿ ಚಟ್ಟೋಪಾಧ್ಯಾಯರನ್ನು ಮಂಗಳೂರಿನಲ್ಲಿ ಫ್ರೌಡಶಾಲಾ ಶಿಕ್ಷಣ ಮುಗಿದ ನಂತರ ಮದ್ರಾಸ್‌ನ ಕ್ವೀನ್ ಮೇರಿ ಕಾಲೇಜಿನಲ್ಲಿ ಓದಿಸುವ ವ್ಯವಸ್ಥೆ ಮಾಡಿದರು.

ಕಮಲಾದೇವಿಯವರು ಮದ್ರಾಸಿನಲ್ಲಿ ಅಧ್ಯಯನ ಮಾಡುತ್ತಿದ್ದಾಗ ಪಠ್ಯ ಅಧ್ಯಯನದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರತಿಭಾವಂತ ವಿದ್ಯಾರ್ಥಿನಿ ಎಂದು ಹೆಸರು ಮಾಡಿದರು. 1920ರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗ ಬಂಗಾಳದ ಹರೀಂದ್ರನಾಥ ಚಟ್ಟೋಪಾಧ್ಯಾಯರ ಪರಿಚಯವಾಯಿತು. ಇವರು ಕವಿ, ನಾಟಕಕಾರರಾಗಿದ್ದು ಮುಂದೆ ಇವರೊಂದಿಗಿನ ಸ್ನೇಹ ಮಧುವೆಗೆ ಬಂದು ತಲುಪಿತು. ಆ ದಿನಗಳಲ್ಲಿ ವಿಧವಾ ಪುನರ್ ವಿವಾಹವು ಅಪರೂಪದ ವಿದ್ಯಮಾನವಾಗಿದ್ದರು ಎರಡನೇ ವಿವಾಹವಾಗಿ ಸಾಮಾಜಿಕ ನಿರ್ಬಂಧಗಳ ವಿರುದ್ಧ ಬಂಡೆದ್ದರು. ವಿವಾಹವಾದ ಕೆಲವು ತಿಂಗಳುಗಳ ಬಳಿಕ ಪತಿ ಹರೀಂದ್ರನಾಥ ಚಟ್ಟೋಪಾಧ್ಯಾಯರು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೇಂಡಿಗೆ ತೆರಳಿದಾಗ ಕಮಲಾದೇವಿಯವರು ಮಂಗಳೂರಿಗೆ ಹಿಂತಿರುಗಿ ಬಂದು ತಾಯಿಯೊಂದಿಗೆ ನೆಲೆಸಿದರು. ಆರಂಭದಿಂದಲೂ ಸ್ವಾತಂತ್ರ್ಯ ಹೋರಾಟ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮತ್ತು ಸಾಮಾಜಿಕ ಕಳಕಳಿ ಹೊಂದಿದ್ದರಿಂದ ಇದೇ ವೇಳೆಗೆ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಸಾಮಾಜಿಕ ಕಳಕಳಿ ಹೊಂದಿದ್ದ ಅನಿಬೆಸೆಂಟ್ ಮತ್ತು ಮಾರ್ಗರೇಟ್ ಕಸಿನ್ಸ್ ರವರ ಕಾರ್ಯ ವಿಧಾನಗಳಿಂದ, ಅವರುಗಳ ಆದರ್ಶ ವ್ಯಕ್ತಿತ್ವಕ್ಕೆ ಮಾರುವೋಗಿ, ಅನಿಬೆಸೆಂಟ್‌ರ ಸಾಮಾಜಿಕ ಸುಧಾರಣೆ, ರಾಷ್ಟ್ರೀಯ ಚಳುವಳಿಯ ಹೋರಾಟ, ಶಿಕ್ಷಣ ಕ್ಷೇತ್ರದಲ್ಲಿನ ಚಿಂತನೆಗಳ ಲೇಖನಗಳಿಂದ ತುಂಬಾ ಪ್ರಭಾವಿತರಾದರು. ಅದೇ ರೀತಿಯಾಗಿ ಮಾರ್ಗರೇಟ್ ಕಸಿನ್ಸ್ ರವರು ಐರ್ಲೆಂಡಿನಲ್ಲಿ ಸ್ತ್ರೀಪರ ಹೋರಾಟಗಾರ ರಾಗಿದ್ದು, ಮಹಿಳೆಯರ ಹಕ್ಕು ರಕ್ಷಣೆಗಾಗಿ ಹೋರಾಡಿ ಸೆರೆಮನೆ ವಾಸವನ್ನು ಅನುಭವಿಸಿ, ಬಂಧನದ ಬಿಡುಗಡೆಯ ನಂತರ ತಮ್ಮ ಪತಿಯೊಂದಿಗೆ ಭಾರತಕ್ಕೆ ಬಂದು ನೆಲೆಸಿ, ಭಾರತೀಯ ಸ್ತ್ರೀಯರ ವಿದ್ಯಾಭ್ಯಾಸಕ್ಕಾಗಿ ಶ್ರಮಿಸಿದರು. ಹೀಗಾಗಿ ಇವರಿಬ್ಬರ ಹೋರಾಟಗಳಿಂದ ಸ್ಫೂರ್ತಿ ಪಡೆದು ಮುಂದೆ ಜೀವನ ಪರ್ಯಾಂತ ದೇಶ ಸೇವೆ ಮತ್ತು ಸಮಾಜಸೇವೆ ಮಾಡಬೇಕೇಂದು ಪಣತೊಟ್ಟರು.

1919 ರಲ್ಲಿ ಗಾಂಧೀಜಿಯವರು ಕಪ್ಪು ಕಾಯಿದೆ ಎಂದೇ ಹೆಸರಾದ ರೌಲತ್ ಕಾಯಿದೆಯನ್ನು ವಿರೋಧಿಸುವ ಸಲುವಾಗಿ ಭಾರತ ರಾಷ್ಟ್ರೀಯ ಚಳುವಳಿಯ ನಾಯಕತ್ವವಹಿಸಿಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ದುಮುಖಿದರು. 1920ರಲ್ಲಿ ಗಾಂಧೀಜಿಯವರು ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ನ್ಯಾಯ ಒದಗಿಸುವುದು, ಖಿಲಾಫತ್ ಸಮಸ್ಯೆಗೆ ಪರಿಹಾರ, ಮೊದಲ ಜಾಗತಿಕ ಯುದ್ಧದ ಪ್ರಭಾವದಿಂದಾದ ಬೆಲೆ ಏರಿಕೆಗಳಿಂದಾಗಿ ಅಸಹಕಾರ ಚಳುವಳಿಗೆ ಕರೆ ನೀಡಿದರು. ಈ ಸಮಯದಲ್ಲಿ ಕಮಲಾದೇವಿಯವರು ತಮ್ಮನ್ನು ನೇರವಾಗಿ ಅಸಹಕಾರ ಚಳುವಳಿಯಲ್ಲಿ ತೊಡಗಿಸಿಕೊಂಡರು. ಈ ವೇಳೆ ನಿಷೇಧಕ್ಕೆ ಒಳಗಾಗಿದ್ದ ಹಿಂದ್ ಸ್ವರಾಜ್ ಮತ್ತು ಅನ್ ಟು ದಿ ಲಾಸ್ಟ್ ಪುಸ್ತಕಗಳನ್ನು ಕಾನೂನುಭಂಗದ ಅಂಗವಾಗಿ ಮಾರಾಟ ಮಾಡುವ ಕಾರ್ಯಕ್ರಮವಿತ್ತು. ಸರ್ಕಾರ ಈ ಪುಸ್ತಕವನ್ನು ಮಾರಾಟ ಮಾಡುವವರನ್ನು ಮತ್ತು ಕೊಂಡುಕೊಳ್ಳುವವರನ್ನು ಬಂದಿಸಿ ಶಿಕ್ಷಿಸುವುದಾಗಿ ಪ್ರಕಟಣೆ ಹೊರಡಿಸಿತು. ಈ ವೇಳೆ ಕಮಲಾದೇವಿಯವರು ಇತರ ಸತ್ಯಾಗ್ರಹಿಗಳೊಡನೆ ಸೇರಿ ಈ ಪುಸ್ತಕಗಳನ್ನು ಮಾರಾಟ ಮಾಡಲು ಹೊರಟರು. ಸರ್ಕಾರ ಎಷ್ಟೇ ಕಠಿಣಕ್ರಮ ತೆಗೆದುಕೊಂಡರು ಜನರು ಮಾತ್ರ ಈ ಪುಸ್ತಕಗಳನ್ನು ಮುದ್ರಿತ ಬೆಲೆಗಿಂತ ಹೆಚ್ಚಿನ ಬೆಲೆ ನೀಡಿ ಕೊಂಡುಕೊಂಡರು ಹೀಗಾಗಿ ಈ ಪುಸ್ತಕಗಳು ಅನೇಕ ಆವೃತ್ತಿಗಳಲ್ಲಿ ಪ್ರಕಟಣೆಗೊಂಡು ಮಾರಾಟವಾದವು. 1922ರ ವೇಳೆಗೆ ಅಸಹಕಾರ ಚಳುವಳಿಯು ಯಶಸ್ವಿಯಾಗಿ ಮುಂದುವರೆಯುತ್ತಿದ್ದಾಗ ಚೌರಿ–ಚೌರಾ ಘಟನೆಯಿಂದಾಗಿ ಅಹಿಂಸಾತ್ಮಕ ಚಳುವಳಿ ಹಿಂಸಾರೂಪ ಪಡೆದು ಕೊಂಡಿದ್ದರಿಂದ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ರದ್ದುಪಡಿಸಿದರು. ಹೀಗಾಗಿ ಸ್ವತಂತ್ರ್ಯ ಚಳುವಳಿ ಇಳಿಮುಖವಾಗಿದ್ದರಿಂದ ಕಮಲಾದೇವಿಯವರು ಇಂಗ್ಲೇಂಡಿಗೆ ತೆರಳಿ ತಮ್ಮ ಪತಿಯೊಂದಿಗೆ ನೆಲೆಸಲು ನಿರ್ಧರಿಸಿದರು.

1922ರಲ್ಲಿ ಕಮಲಾದೇವಿಯವರು ಇಂಗ್ಲೆಡಿಗೆ ತೆರಳಿ ಒಂದು ವರ್ಷಕ್ಕೂ ಹೆಚ್ಚು ಕಾಲ ತಮ್ಮ ಪತಿಯೊಂದಿಗೆ ಅಲ್ಲಿಯೇ ಇದ್ದು ನಂತರ ಫ್ರಾನ್ಸ್, ಜರ್ಮನಿ, ಮತ್ತಿತ್ತರ ಯೂರೋಪಿನ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ವಿಚಾರಗಳೊಂದಿಗೆ ಭಾರತಕ್ಕೆ ಹಿಂತಿರುಗಿ ಬಂದರು. ನಂತರ ಪತಿಯೊಂದಿಗೆ ಗಾಂಧೀಜಿಯವರ ಆಶ್ರಮಕ್ಕೆ ತೆರಳಿ ಸ್ವಲ್ಪ ಕಾಲ ಅಲ್ಲಿಯೇ ಉಳಿದುಕೊಂಡು ನೂಲುವುದು, ನೇಯುವುದನ್ನು ಕಲಿತು ಖಾದಿಯ ಮಹತ್ವವನ್ನು ಅರಿತರು. ನಂತರ ದೇಶದ ಪ್ರಮುಖ ನಗರಗಳಿಗೆ ಭೇಟಿ ನೀಡಿ ಸಾಂಸ್ಕೃತಿಕ ಯಾತ್ರೆ ಕೈಗೊಂಡು ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ನಾಟಕಗಳನ್ನು ರಚಿಸಿ ಪ್ರದರ್ಶಿಸಿ ಸಾಮಾಜಿಕ ಅರಿವು ಮೂಡಿಸಲು ಶ್ರಮಿಸಿದರು.

1924ರ ನಂತರ ಕಮಲಾದೇವಿಯವರು ತಮ್ಮನ್ನು ಸಂಪೂರ್ಣವಾಗಿ ಸ್ವಾತಂತ್ರ್ಯ ಹೋರಾಟ ಮತ್ತು ಮಹಿಳಾ ಜಾಗೃತಿಯ ಆಂದೋಲನ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡರು. ಇವರು ಅಸಹಕಾರ ಚಳುವಳಿಯ ಸಮಯದಲ್ಲಿ ವಿದೇಶಿ ಶಾಲಾ ಕಾಲೇಜುಗಳ ಬಹಿಷ್ಕಾರಕ್ಕೆ ಕರೆ ನೀಡಿದ್ದರಿಂದ ನೂರಾರು ವಿದ್ಯಾರ್ಥಿಗಳು ವಿದೇಶಿ ಶಿಕ್ಷಣ ನೀಡುತ್ತಿದ್ದ ಶಾಲಾ ಕಾಲೇಜುಗಳಿಂದ ಹೊರಬಂದರು. ಹೀಗಾಗಿ ಇಂತಹ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಮೂಲಕ ಶಿಕ್ಷಣದ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿತ್ತು, ಈ ಯೋಜನೆಯ ಅಂಗವಾಗಿ ಕಮಲಾದೇವಿಯವರು ಮಂಗಳೂರಿನ ತಮ್ಮ ತಾಯಿಯವರ ವಿಶಾಲವಾದ ಮನೆಯನ್ನು ರಾಷ್ಟ್ರೀಯ ಶಾಲೆಯಾಗಿ ಕಾರ್ಯನಿರ್ವಹಿಸಲು ಬಿಟ್ಟುಕೊಟ್ಟರು. ಹಾಗೆಯೇ ಡಾ.ಎನ್.ಎಸ್.ಹರ್ಡೀಕರ್ ರವರು ಆರಂಭಿಸಿದ್ದ ಹಿಂದೂಸ್ಥಾನಿ ಸೇವಾದಳಕ್ಕೆ ಸ್ವಯಂಸೇವಕಿಯಾಗಿ ಸೇರಿಕೊಂಡರು. 1924 ರಲ್ಲಿ ಬೆಳಗಾವಿ ರಾಷ್ಟ್ರೀಯ ಕಾಂಗ್ರೇಸ್ ಅಧಿವೇಶನವು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನೆಡೆದಾಗ ಹಿಂದೂಸ್ಥಾನಿ ಸೇವಾದಳದ ಮಹಿಳಾ ಶಾಖೆಯ ಮುಖ್ಯಸ್ಥೆಯಾಗಿ ನೇಮಕವಾಗಿ ತಾವೇ ಮುಂಚೂಣಿಯಲ್ಲಿ ನಿಂತು ಕಾರ್ಯನಿರ್ವಹಿಸಿ ಇತರ ಸ್ವಯಂ ಸೇವಕರಿಗೆ ಮಾಧರಿಯಾದರು. ಸ್ವತಹಃ ಅವರೇ ಹೇಳಿರುವಂತೆ "ಇಲ್ಲಿ ನನ್ನ ರಾಜಕೀಯ ಜೀವನ ಪೊರಕೆ ಮತ್ತು ಬುಟ್ಟಿ ಹಿಡಿಯುವುದರಿಂದ ಆರಂಭವಾಯಿತು" ಎಂದಿದ್ದಾರೆ. 1927 ರಲ್ಲಿ ಮದ್ರಸಿನಲ್ಲಿ ನೆಡೆದ ಕಾಂಗ್ರೇಸ್‌ನ ಅದಿವೇಶನದಲ್ಲೂ ಸ್ವಯಂಸೇವಕಿಪಡೆಯ ಮುಖ್ಯಸ್ಥರಾಗಿ ತಮ್ಮದೆ ಆದ ನೂತನ ರೀತಿಯ ಕೇಸರಿ ಮತ್ತು ಬಿಳಿ ಬಣ್ಣದ ಸಮವಸ್ತ್ರದ ವಿನ್ಯಾಸ ರೂಪಿಸಿ, ತಮ್ಮ ಸ್ವಯಂ ಸೇವಕಿಪಡೆಯ ಚುರುಕಿನಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಂಡರು. ಈ ಕೆಂಪು ಮತ್ತು ಬಿಳಿ ಬಣ್ಣದ ಸಮವಸ್ತ್ರದಲ್ಲಿದ್ದ ಸ್ವಯಂಸೇವಕಿಯರ ಪಡೆಯನ್ನು 'ಆರೇಂಜ್ ಬ್ರಿಗೇಡ್' ಎಂದು ಕರೆಯಲಾಯಿತು.

ಸ್ತ್ರೀ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದ ಬರೋಡದ ಮಹಾರಾಣಿಯವರ ಅಧ್ಯಕ್ಷತೆಯಲ್ಲಿ 1927ರಲ್ಲಿ ನೆಡೆದ ಅಖಿಲ ಭಾರತ ಮಹಿಳಾ ಸಮ್ಮೇಳನವು ಪುಣೆಯಲ್ಲಿ ಆಯೋಜನೆಯಾಗಿತ್ತು. ಮಾರ್ಗರೇಟ್ ಕಸಿನ್ಸ್, ಸರೋಜಿನಿ ನಾಯ್ಡು ಈ ಸಮ್ಮೇಳನದ ವ್ಯವಸ್ಥಾಪಕರಾಗಿದ್ದರು, ಈ ಸಮ್ಮೇಳನಕ್ಕೆ ಕಮಲಾದೇವಿಯವರು ಸ್ವಯಂಸೇವಕಿಯಾಗಿ ಭಾಗವಹಿಸಿ ಉತ್ತಮವಾಗಿ ಕಾರ್ಯನಿರ್ವಹಿಸುವುದನ್ನು ಗುರುತಿಸಿದ ಮಾರ್ಗರೇಟ್ ಕಸಿನ್ಸ್ ಮತ್ತು ಸರೋಜಿನಿ ನಾಯ್ಡುರವರು ಇವರನ್ನು ಅಖಿಲ ಭಾರತ ಮಹಿಳಾ ಸಮ್ಮೇಳನದ ಪದಾಧಿಕಾರಿಗಳಾಗಿ ನೇಮಿಸಿದರು. ಕೇವಲ ಇಪ್ಪತ್ತೈದು ವರ್ಷಕ್ಕೆ ಇಂತಹ ಜವಾಬ್ದಾರಿಯುತ ಕೆಲಸ ವಹಿಸಿಕೊಂಡು ದೇಶದಾದ್ಯಂತ ಸಂಚರಿಸಿ ದೇಶದ ಪ್ರಮುಖ ನಗರಗಳಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಶಾಖೆಗಳನ್ನು ಆರಂಭಿಸಿದರು. ಕೇಂದ್ರಶಾಸನಸಭೆಯ ಸದಸ್ಯರುಗಳನ್ನು ಭೇಟಿಮಾಡಿ ಸ್ತ್ರೀಪರವಾದ ಸಾಮಾಜಿಕ ಸುಧಾರಣೆಯ ಮಸೂದೆಗಳಿಗೆ ಬೆಂಬಲ ಸೂಚಿಸುವಂತೆ ಆಗ್ರಹಪಡಿಸಿದರು ಮತ್ತು ಈ ಸಮಯದಲ್ಲಿಯೇ ಐತಿಹಾಸಿಕ ಶಾರದಾ ಕಾನೂನು ಅಂಗೀಕಾರವಾದದ್ದು.

ಕಮಲಾದೇವಿಯವರು ಅಖಿಲ ಭಾರತ ಮಹಿಳಾ ಸಮ್ಮೇಳನದ ಪರವಾಗಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ ಮತ್ತು ಭತ್ಯೆ ನೀಡಬೇಕೆಂಬ ಬೇಡಿಕೆಯಿಟ್ಟು ಕಾರ್ಮಿಕರನ್ನು ಸಂಘಟಿಸಿದರು. ಹಾಗೆಯೇ ಗಣಿಗಳಲ್ಲಿ ಭೂಮಿಯೊಳಗಿನ ಕೆಲಸಗಳಿಗೆ ಸ್ತ್ರೀ ಕಾರ್ಮಿಕರನ್ನು ನಿಯುಕ್ತಿಗೊಳಿಸುತ್ತಿದ್ದ ವಿರುದ್ಧ ಯಶಸ್ವಿಚಳುವಳಿ ನೆಡೆಸಿದರು, ಮಂಗಳೂರಿನಲ್ಲಿ ಪ್ಲಾಂಟೇಷನ್ ಕಾರ್ಮಿಕರ ಹಿತರಕ್ಷಣೆಗೆ ಹೋರಾಡಿದರು, ಮಹಿಳಾ ಕಾರ್ಮಿಕರಿರುವ ಕಡೆಗಳಲ್ಲಿ ಮಕ್ಕಳ ಆಶ್ರಯ ಕೇಂದ್ರಗಳನ್ನು ಸ್ಥಾಪಿಸಲು ಕಾನೂನಿನ ಬೆಂಬಲಕ್ಕಾಗಿ ಹೋರಾಡಿದರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

1928ರಲ್ಲಿ ಸೈಮನ್ ಆಯೋಗವು ಭಾರತದ ಸಂವಿಧಾನಾತ್ಮಕ ಸುಧಾರಣಾ ಉದ್ದೇಶಗಳಿಂದ ದೇಶದ ವಿವಿಧ ಭಾಗಗಳಿಗೆ ಭೇಟಿ ನೀಡಿ ಮಾಹಿತಿ ಮತ್ತು ಅಹವಾಲು ಸ್ವೀಕರಿಸಲು ಮುಂದಾಯಿತು. ಆದರೆ ಈ ಆಯೋಗದಲ್ಲಿ ಯಾವೊಬ್ಬ ಭಾರತೀಯರನ್ನು ಸದಸ್ಯರನ್ನಾಗಿ ನೇಮಿಸದಿದ್ದರಿಂದ ಭಾರತೀಯರು ಒಕ್ಕೊರಲಿನಿಂದ ಈ ಆಯೋಗವನ್ನು ಬಹಿಷ್ಕರಿಸುವ ಆಂಧೋಲನ ಕೈಗೊಳ್ಳಲಾಯಿತು. ಈ ಆಯೋಗ ದೇಶದ ಯಾವುದೇ ಪ್ರದೇಶಗಳಿಗೆ ತೆರಳಿದರು ಅಲ್ಲೆಲ್ಲಾ ಸೈಮನ್ ಹಿಂತಿರುಗಿ ಎಂಬ ಘೋಷಣೆ ಕೂಗಲಾಯಿತು. ಇದೇ ರೀತಿ ಸೈಮನ್ ಆಯೋಗವು ದೆಹಲಿಗೆ ಆಗಮಿಸಿದಾಗ ಈ ಆಯೋಗದ ವಿರುದ್ಧ ನೆಡೆದ ಬಹಿಷ್ಕಾರ ಚಳುವಳಿಯಲ್ಲಿ ಕಮಲಾದೇವಿಯವರು ಭಾಗವಹಿಸಿದರು. ಹಾಗೆಯೇ 1928ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧಿವೇಶನ ದೆಹಲಿಯಲ್ಲಿ ಸಮಾವೇಶಗೊಂಡಿತು. ಈ ಸಮಾವೇಶವನ್ನು ಅಂದಿನ ಭಾರತದ ವೈಸರಾಯ್‌ರ ಪತ್ನಿ ಉದ್ಘಾಟಿಸಬೇಕಿತ್ತು, ಆದರೆ ಸೈಮನ್ ಆಯೋಗದ ಬಹಿಷ್ಕಾರ ಚಳುವಳಿಯಲ್ಲಿ ಕಮಲಾದೇವಿಯವರು ಭಾಗವಹಿಸಿದ್ದರಿಂದ ಉಂಟಾದ ಸಂದಿಗ್ಧ ಪರಿಸ್ಥಿತಿಯಿಂದಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯದರ್ಶಿ ಹುದ್ದೆಗೆ ರಾಜಿನಾಮೆ ನೀಡಿ ಸಂಪೂರ್ಣವಾಗಿ ಸ್ವತಂತ್ರ್ಯ ಹೋರಾಟಕ್ಕೆ ಮುಂದಾದರು, ಆದರೆ ಮಾರ್ಗರೇಟ್‌ರ ಮನವೊಲಿಕೆಯಿಂದ ಕಾರ್ಯದರ್ಶಿ ಹುದ್ದೆಯಲ್ಲಿ ಮುಂದುವರೆದರು. ಆದರೆ ಇನ್ನು ಮುಂದೆ ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷತೆಗೆ ರಾಣಿಯರನ್ನೊ ಅಥವಾ ಯಾವುದೋ ಅಧಿಕಾರಿಗಳ ಪತ್ನಿಯರನ್ನೊ ಕರೆತಂದು ಅಧ್ಯಕ್ಷತೆಗೆ ಕೂರಿಸುವ ಬದಲು ಅಧ್ಯಕ್ಷತೆಗೆ ಚುನಾವಣೆ ನೆಡೆಸಿ ಆಯ್ಕೆಮಾಡಬೇಕೆಂದು ಆಗ್ರಹಿಸಿದರು, ಹೀಗಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷತೆಗೆ ಚುನಾವಣೆ ನೆಡೆದು ಸರೋಜಿನಾಯ್ಡುರವರು ಇದರ ಮೊದಲ ಚುನಾಯಿತ ಅಧ್ಯಕ್ಷರಾದರು.

1929ರಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ಸಮ್ಮೇಳನಕ್ಕೆ ಜಗತ್ತಿನ ಹಲವು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು ಅದರಂತೆ ಭಾರತದಿಂದ ಸರೋಜಿನಿನಾಯ್ಡುರವರ ನಾಯಕತ್ವದಲ್ಲಿ ಭಾಗವಹಿಸಿದ್ದ ಭಾರತೀಯ ತಂಡದಲ್ಲಿ ಕಮಲಾದೇವಿಯವರು ಕೂಡ ಇದ್ದರು. ಪ್ರತಿ ದೇಶದ ನಿಯೋಗದ ಬಿಡಾರದ ಮೇಲೆ ಆಯಾ ದೇಶದ ಧ್ವಜ ಹಾರಾಡುತ್ತಿತ್ತು, ಆದರೆ ಭಾರತೀಯ ನಿಯೋಗ ಉಳಿದುಕೊಂಡಿದ್ದ ಕಟ್ಟಡದ ಮೇಲೆ ಬ್ರಿಟನ್ ದೇಶದ ಧ್ವಜ ಹಾರಾಡುತ್ತಿತ್ತು. ಕಮಲಾ ದೇವಿಯವರು ಇದನ್ನು ಪ್ರತಿಭಟಿಸಿ ಭಾರತೀಯ ಕಾಂಗ್ರೆಸ್‌ನ ತ್ರಿವರ್ಣ ಧ್ವಜ ಹಾರಾಡಬೇಕೆಂದು ವ್ಯವಸ್ಥಾಪಕರಲ್ಲಿ ಒತ್ತಾಯಿಸಿದರು, ಆದರೆ ಕಾರ್ಯಕ್ರಮದ ವ್ಯವಸ್ಥಾಪಕರು ನಿಮ್ಮ ಧ್ವಜದ ಬಗ್ಗೆ ನಮಗೆ ಗೊತ್ತಿಲ್ಲ ಆ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ ನಾಳೆ ಕಾರ್ಯಕ್ರಮ ಆರಂಭವಾಗುವುದರೊಳಗೆ ಯೋಚಿಸಲಾಗುವುದು ಎಂದಾಗ ಇದೊಂದು ದೇಶದ ಪ್ರತಿಷ್ಠೆಯ ವಿಷಯವಾಗಿದ್ದರಿಂದ, ಈ ಸಮಸ್ಯೆ ಬಗಹರಿಸಲು ತೀರ್ಮಾನಿಸಿದರು,

ಕಾರ್ಯಕ್ರಮದ ವ್ಯವಸ್ಥಾಪಕರು ನಿಮ್ಮ ದೇಶದ ಧ್ವಜವನ್ನು ನೀಡಿದರೆ ಬಿಡಾರದ ಮೇಲೆ ಹಾರಿಸಲಾಗುವುದು ಎಂದರು ಆದರೆ ಭಾರತೀಯ ನಿಯೋಗವು ಕಾರ್ಯಕ್ರಮಕ್ಕೆ ತಮ್ಮ ತ್ರಿವರ್ಣ ಧ್ವಜವನ್ನು ತೆಗೆದುಕೊಂಡು ಹೋಗಿರುವುದಿಲ್ಲ ಹೀಗಾಗಿ ಕಮಾಲಾದೇವಿಯವರು ತಮ್ಮ ನಿಯೋಗದ ಸದಸ್ಯರು ತಂದಿದ್ದ ಸೀರೆಗಳಿಂದಲೇ ಕೇಸರಿ, ಬಿಳಿ, ಹಸಿರು ಬಣ್ಣದ ಬಟ್ಟೆಗಳಿಂದ ಧ್ವಜಕ್ಕೆ ಬೇಕಾಗುವಷ್ಟು ಬಟ್ಟೆಯನ್ನು ಕತ್ತರಿಸಿ, ಹೊಲಿದು, ಧ್ವಜವನ್ನು ಸಿದ್ಧಪಡಿಸಿ ಬೆಳಗ್ಗೆ ವೇಳೆಗೆ ಬಿಡಾರದ ಮೇಲೆ ಧ್ವಜ ಹಾರಾಡುವಂತೆ ಮಾಡಿದರು.

ಕಮಾಲಾದೇವಿಯವರು 1929ರ ಡಿಸೆಂಬರ್‌ನಲ್ಲಿ ಅಹಾಮದಾಬಾದ್ ನಲ್ಲಿ ನಡೆದ ಅಖಿಲ ಭಾರತ ಯುವ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿ, 'ಪೂರ್ಣಸ್ವಾತಂತ್ರಕ್ಕಾಗಿ ನೇರ ಹೋರಾಟ ಆರಂಭವಾಗಬೇಕು ಇದ್ದಕ್ಕಾಗಿ ಯುವ ಜನಾಂಗ ಎಲ್ಲಾ ತ್ಯಾಗಗಳಿಗೂ ಸಿದ್ಧರಿರಬೇಕು' ಎಂದು ಕರೆನೀಡಿದರು ಜೊತೆಗೆ ಇದೇ ವರ್ಷ ಜರುಗಿದ ಲಾಹೋರ್ ರಾಷ್ಟ್ರಿಯ ಕಾಂಗ್ರೆಸ್ ಅಧಿವೇಶನದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ್ದರು. ಜನವರಿ26 1930ರ ಸಂಪೂರ್ಣ ಸ್ವಾತಂತ್ರ್ಯ ಸಾಧನೆಗಾಗಿ ಪ್ರತಿಜ್ಞೆ ಕೈಗೊಳ್ಳಬೇಕೆಂದು ಗಾಂಧೀಜಿ ಕರೆನೀಡಿದಾಗ ದೇಶದಾದ್ಯಂತ ಸಭೆಗಳು ನೆಡೆದು ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮಗಳು ಜರುಗಿದವು, ಅದೇ ರೀತಿ ಬೊಂಬಾಯಿಯಲ್ಲಿ ನೆಡೆದ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮದಲ್ಲಿ ಕಮಾಲಾದೇವಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ವೇಳೆ ಕಮ್ಯುನಿಸ್ಟ್ ಗುಂಪು ಮತ್ತು ಕಾಂಗ್ರೆಸ್ ಗುಂಪಿಗೂ ಧ್ವಜರೋಹಣ ವಿಷಯಕ್ಕೆ ಮನಸ್ತಾಪ ಉಂಟಾಗಿ ಗಲಾಟೆ ಆರಂಭವಾಗಿ ಕೆಲವು ಕಮ್ಯುನಿಸ್ಟ್‌ರು ರಾಷ್ಟ್ರಧ್ವಜವನ್ನು ತೆಗೆಯಲು ಮುಂದಾದಾಗ ಕಮಾಲಾದೇವಿಯವರು ರಾಷ್ಟ್ರಧ್ವಜವನ್ನು ಗಂಟೆಗಟ್ಟಲೆ ಅಪ್ಪಿಕೊಂಡು ರಾಷ್ಟ್ರಧ್ವಜದ ಗೌರವವನ್ನು ಕಾಪಾಡಿ ಎಲ್ಲರಿಂದ ಪ್ರಶಂಸನೆಗೆ ಪಾತ್ರರಾದರು. ಗಾಂಧೀಜಿಯವರು ಕಾನೂನುಭಂಗ ಚಳುವಳಿಯನ್ನು ಆರಂಭಿಸಿ ದಂಡಿಯಾತ್ರೆಯನ್ನು ಕೈಗೊಂಡು ಉಪ್ಪಿನಕಾನೂನುಭಂಗ ಚಳುವಳಿಯನ್ನು ಆರಂಭಿಸುತ್ತಿ ದಂತೆಯೇ ದೇಶದಾದ್ಯಂತ ಉಪ್ಪಿನ ಸತ್ಯಾಗ್ರಹ ಜ್ವಾಲೆಯಂತೆ ವ್ಯಾಪಿಸಿತು. ದೇಶದಾದ್ಯಂತ ಉಪ್ಪಿನ ಕಾನೂನು ಮುರಿಯುವ ಕಾರ್ಯ ಸುನಾಮಿಯಂತೆ ಹರಡಿ ಸಹಸ್ರಾರುಮಂದಿ ರಾಜಕೀಯ ನಾಯಕರು, ಕಾರ್ಮಿಕರು, ರೈತರು, ಹೆಂಗಸರು, ವಿದ್ಯಾರ್ಥಿಗಳು ಸಮುದ್ರದ ದಂಡೆಗೆ ತೆರಳಿ ಉಪ್ಪನ್ನು ಉತ್ಪಾದಿಸುವ ಮೂಲಕ ಕಾನೂನನ್ನು ಉಲ್ಲಂಗಿಸಲಾಯಿತು. ಬೊಂಬಾಯಿಯಲ್ಲಿ ಕಮಾಲಾದೇವಿಯವರು ಈ ಉಪ್ಪಿನ ಕಾನೂನು ಉಲ್ಲಂಘನೆಯ ಚಳುವಳಿಯ ಮುಂಚೂಣಿಯಲ್ಲಿ ನಿಂತು ಕಾನೂನುಭಂಗ ಮಾಡಿ ತಯಾರುಮಾಡಿದ ಉಪ್ಪನ್ನು ಪಟ್ಟಣಗಳಿಗೆ ತಂದು ಮಾರಾಟಮಾಡುವ ಕಾರ್ಯವನ್ನು ಕೈಗೆತ್ತಿಕೊಂಡು, 'ಗಾಂಧಿ ಉಪ್ಪು ಬೆಲೆ ಆರು ತಿಂಗಳುಗಳ ಸೆರೆವಾಸ' ಎಂದು ಘೋಷಣೆ ಕೂಗುತ್ತ ಮುಂಬೈಪಟ್ಟಣದ ಷೇರುಬಜಾರ್‌ನಲ್ಲಿ ಉಪ್ಪಿನ ಪ್ಯಾಕೆಟ್‌ಗಳನ್ನು ಮಾರಾಟಮಾಡಿದರು. ಈ ಮಾರಾಟದಲ್ಲಿ ಹಲವರು 500ರೂ ಗಳಿಂದ 5000ರೂ ವರೆಗೂ ಹಣ ಕೊಟ್ಟು ಉಪ್ಪನ್ನು ಕೊಂಡುಕೊಂಡರು. ಈ ರೀತಿ ಸಂಗ್ರಹಿಸಿದ ಹಣವನ್ನು ಕಮಲದೇವಿಯವರು ಕಾಂಗ್ರೆಸ್ ನಿಧಿಗೆ ಜಮಾ ಮಾಡಿದರು.

ಉಪ್ಪಿನ ಸತ್ಯಾಗ್ರಹವು ಎರಡನೇ ಹಂತದಲ್ಲಿ ಬೊಂಬಾಯಿ ಸಮೀಪ ದಾಸ್ತಾನುಮಾಡಿದ್ದ ಉಪ್ಪಿನ ಮಳಿಗೆಗಳಿಗೆ ದಾಳಿಮಾಡಿ ಉಪ್ಪನ್ನು ವಶಪಡಿಸಿಕೊಳ್ಳುವ ಯೋಜನೆಯನ್ನು ಕಾಂಗ್ರೆಸ್ ಕೈಗೂಂಡಿತು. ಈ ಯೋಜನೆಗೆ ಕಮಲದೇವಿಯವರ ನಾಯಕತ್ವದಲ್ಲಿ ಮೊದಲ ತಂಡವನ್ನು ನಿಯೋಜಿಸಲಾಯಿತು. ಆದರೆ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಮೊದಲೇ ಕಮಲದೇವಿಯವರನ್ನು ಕಾಂಗ್ರೆಸ್ ಕಚೇರಿಯಲ್ಲಿ ಪೊಲೀಸರು ಬಂಧಿಸಿದರು. ಮರುದಿನ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಕರೆತಂದಾಗ ತಮ್ಮೊಂದಿಗೆ ಕೆಲವು ಉಪ್ಪಿನ ಪಟ್ಟಣಗಳನ್ನು ತೆಗೆದುಕೂಂಡು ಹೋಗಿ ಕೋರ್ಟಿನಲ್ಲಿದ್ದ ವಕೀಲರಿಗೆ ಉಪ್ಪನ್ನು ಮಾರುವ ಪ್ರಯತ್ನ ಮಾಡಿದ್ದಲ್ಲದೆ, ನ್ಯಾಯಾಧೀಶರ ಬಳಿ ಹೋಗಿ ಇದು ಗಾಂಧಿ ಉಪ್ಪು ಕೊಂಡುಕೊಳ್ಳಿ ನೀವು ಈ ಹುದ್ದೆಗೆ ರಾಜಿನಾಮೆ ನೀಡಿ ಎಂದು ದಿಟ್ಟತನದಿಂದ ಹೇಳಿದರು. ನ್ಯಾಯಧೀಶರು ಕಮಲದೇವಿಯವರು ಎಲ್ಲರಿಗಿಂತ ಹೆಚ್ಚಾಗಿ ಕಾನೂನು ಭಂಗ ಚಳುವಳಿಗೆ ಜನರನ್ನು ಹೆಚ್ಚು ಪ್ರಚೋದಿಸಿದರು ಎಂದು ತೀರ್ಮಾನಿಸಿ ಆರು ತಿಂಗಳು ಕಾಲ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸೆರೆಮನೆವಾಸ ಶಿಕ್ಷೆಯನ್ನು ವಿಧಿಸಿದರು. ಶಿಕ್ಷೆ ಮುಗಿದ ನಂತರ ಮುಂಬೈನಲ್ಲಿ ಮಹಿಳಾ ಸ್ವಯಂಸೇವಕಿಯರಿಗೆ ಸ್ವತಂತ್ರ್ಯ ಚಳುವಳಿಯ ಶಿಕ್ಷಣ ನೀಡುವ ಉದ್ದೇಶದಿಂದ ಅಖಿಲ ಭಾರತ ಮಟ್ಟದ ತರಬೇತಿ ಶಿಬಿರವನ್ನು ಆರಂಭಿಸಿ ದೇಶ ಸೇವೆಗೆ ಸ್ವಯಂ ಸೇವಕರಿಗೆ ಸ್ವತಂತ್ರ್ಯ ಚಳುವಳಿಯ ಹೋರಾಟದ ತರಭೇತಿ ನೀಡಿದರು. ಸರ್ಕಾರವು ಈ ಶಿಬಿರವನ್ನು ನಡೆಸಕೂಡದು ಎಂದು ಪ್ರತಿಬಂಧಕಾಜ್ಞೆ ಹೊರಡಿಸಿ ಮತ್ತೆ ಇವರನ್ನು ಸೆರೆಮನೆಗೆ ಕಳುಹಿಸಲಾಯಿತು, ಮರಳಿ ಸೆರೆಮನೆವಾಸ ಮುಗಿದ ಮೇಲೆ ಸ್ವತಂತ್ರ ಹೋರಾಟಗಾರರೊಬ್ಬರ ಆಹ್ವಾನದ ಮೇರೆಗೆ ಆಂಧ್ರಪ್ರದೇಶದ ಹಳ್ಳಿಯೊಂದಕ್ಕೆ ಭೇಟಿ ನೀಡಿದಾಗ ಅಲ್ಲಿ ಸ್ವತಂತ್ರ ಹೋರಾಟವನ್ನು ಆರಂಭಿಸಲು ಬಂದಿರಬಹುದು ಎಂಬ ಅನುಮಾನದ ಮೇರೆಗೆ ಮತ್ತೊಮ್ಮೆ ಬಂಧಿಸಿ ವೆಲ್ಲೂರು ಸೆರೆಮನೆಯಲ್ಲಿ ಇಡಲಾಯಿತು. ಕೊನೆಗೆ 1932ರ ಅಂತ್ಯದ ವೇಳೆಗೆ ಸರ್ಕಾರ ಇವರನ್ನು ಬಿಡುಗಡೆಗೊಳಿಸಿತು.

1934ರಲ್ಲಿ ನಡೆದ ಕಾಂಗ್ರೇಸ್ ಸಮಾಜವಾದಿ ಪಕ್ಷದ ವಾರ್ಷಿಕ ಅಧಿವೇಶನದಲ್ಲಿ ಭಾಗವಹಿಸಿ, 1935ರ ಕಾಂಗ್ರೇಸ್ ಸಮಾಜವಾದಿ ಪಕ್ಷದ ವಾರ್ಷಿಕ ಅಧಿವೇಶನದ ಅಧ್ಯಕ್ಷತೆವಹಿಸಿ ಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಗೆ ಆದ್ಯತೆ ನೀಡಿ, ಕಾರ್ಮಿಕರ ಸಾಮಾಜಿಕ ಭದ್ರತಾ ಕಾನೂನುಗಳ ಜಾರಿಗೆ ಒತ್ತಾಯಿಸಿದರು. ಈ ಬಗ್ಗೆ ಹಲವು ಲೇಖನಗಳನ್ನು ಬರೆದು ಪ್ರಕಟಿಸಿದರು. 1939ರಲ್ಲಿ ಡೆನ್‌ಮಾರ್ಕ್‌ನ ಕೋಪನ್‌ಹೇಗ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಆಯ್ಕೆಯಾಗಿ ಹೋದಾಗ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಭೇಟಿನೀಡಿ ಒಂದೂವರೆ ವರ್ಷಗಳ ಕಾಲ ಅಲ್ಲಿಯೇ ಇದ್ದು ಅಲ್ಲಿ ಅನೇಕ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಭಾರತದ ಸ್ವಾತಂತ್ರ್ಯ ಹೋರಾಟ, ಗಾಂಧೀಜಿಯವರ ವಿಚಾರಧಾರೆ, ಭಾರತದ ಸಂಸ್ಕೃತಿ, ಸ್ತ್ರೀ ವಿಮೋಚನಾ ಚಳುವಳಿ ಮುಂತಾದ ವಿಷಯಗಳ ಬಗ್ಗೆ ಅಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿ ಭಾರತದ ಸ್ವಾತಂತ್ರ್ಯಹೋರಾಟಕ್ಕೆ ಅಮೇರಿಕಾ ಸಂಯುಕ್ತ ಸಂಸ್ಥಾನದ ಜನರ ನೈತಿಕ ಬೆಂಬಲ ಕೋರಿದರು. 1942ರ ವೇಳೆಗೆ ಭಾರತಕ್ಕೆ ಹಿಂತಿರುಗಿ ಬರುವ ವೇಳೆಗೆ ಕ್ರಿಪ್ಸ್ ಆಯೋಗವು ಭಾರತಕ್ಕೆ ಭೇಟಿ ನೀಡಿ ಎರಡನೇ ಜಾಗತಿಕ ಯುದ್ಧಕ್ಕೆ ಭಾರತೀಯರ ಬೆಂಬಲ ಪಡೆಯುವ ಉದ್ದೇಶದೊಂದಿಗೆ ಸಂಧಾನಕ್ಕೆ ಪ್ರಯತ್ನಿಸಿತು, ಆದರೆ ಈ ಸಂಧಾನ ವಿಫಲವಾಗಿದ್ದರಿಂದ ಗಾಂಧೀಜಿಯವರು ಬ್ರಿಟೀಷರ ವಿರುದ್ಧ ನೇರ ಕಾರ್ಯಾಚರಣೆಗೆ ಕೈಗೊಳ್ಳಲು ಕ್ವಿಟ್ ಇಂಡಿಯಾ ಚಳುವಳಿಗೆ ಅಥವಾ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಕರೆ ನೀಡಿದರು. ಈ ಕರೆಗೆ ಇಡೀ ದೇಶವೇ ಒಗ್ಗೊಟ್ಟು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸಿದ್ಧರಾದರು. ತಕ್ಷಣವೇ ಸರ್ಕಾರ ಗಾಂಧೀಜಿಯವರು ಸೇರಿದಂತೆ ದೇಶದ ಬಹುತೇಕ ಭಾರತ ರಾಷ್ಟ್ರೀಯ ಕಾಂಗ್ರೆಸ್ ನಾಯಕರೆಲ್ಲರನ್ನು ಬಂಧಿಸಿತು, ಈ ವೇಳೆಯಲ್ಲಿ ಕಮಲಾದೇವಿಯವರು ಸಹಾ ಗಾಂಧೀಜಿಯವರ ಕರೆಯಂತೆ ಬ್ರಿಟಿಷರ ವಿರುದ್ಧ ಆಂದೋಲನಕ್ಕೆ ತಯಾರು ನಡೆಸುತ್ತಿದ್ದಾಗಲೇ ಇವರನ್ನು ಬಂಧಿಸಿ ವೆಲ್ಲೂರು ಸೆರೆಮನೆಯಲ್ಲಿಡಲಾಯಿತು, 1944ರ ವರೆಗೂ ಇವರು ಬಂಧನದಲ್ಲಿಯೇ ಉಳಿದು ನಂತರ ಬಿಡುಗಡೆಯಾದರು.

1946ರಲ್ಲಿ ಕಮಲಾದೇವಿಯವರು ಭಾರತ ರಾಷ್ಟ್ರೀಯ ಕಾಂಗ್ರೇಸ್‌ನ ಕಾರ್ಯಕಾರಿ ಸಮಿತಿಗೆ ಆಯ್ಕೆಯಾದರು. ಭಾರತಕ್ಕೆ ಸ್ವತಂತ್ರ್ಯ ಬಂದ ನಂತರ ಇವರು ಯಾವುದೇ ಅಧಿಕಾರ ಸ್ಥಾನವನ್ನು ಒಪ್ಪಿಕೊಳ್ಳದೇ, ಕೇಂದ್ರ ಸಂಪುಟಕ್ಕೆ ಮತ್ತು ವಿದೇಶ ರಾಯಭಾರಿಯ ಆಹ್ವಾನವನ್ನು ತಿರಸ್ಕರಿಸಿ ಗಾಂಧೀಜಿಯವರ ಆದರ್ಶದಂತೆ ಹಲವು ವರ್ಷಗಳ ಕಾಲ ನಿರಾಶ್ರಿತರ ಪುನರ್ ವ್ಯವಸ್ಥೆಗಾಗಿ ಶ್ರಮಿಸಿದರು. ಹಾಗೆಯೇ ಸಾಮಾಜಿಕ ಮತ್ತು ಆರ್ಥಿಕ ಕಲ್ಯಾಣಕ್ಕಾಗಿ ಹಲವು ಸಂಘ ಸಂಸ್ಥೆಗಳ ಸ್ಥಾಪನೆಗೆ ಕಾರಣರಾದರು. ನಾಟಕ ಕಲೆಯ ಹವ್ಯಾಸಹೊಂದಿದ್ದ ಇವರು ಭಾರತೀಯ ನಾಟಕಾಲಯವನ್ನು ಸ್ಥಾಪಿಸಿದರು. ಕೇಂದ್ರಸರ್ಕಾರದ ಆಹ್ವಾನದ ಮೇರೆಗೆ ರಾಷ್ಟ್ರೀಯ ಕರಕುಶಲ ವಸ್ತುಗಳ ಸಂಸ್ಥೆಯ ಅಧ್ಯಕ್ಷರಾಗಲು ಒಪ್ಪಿಕೊಂಡು ಅಮೂಲಕ ಹಲವು ಕರಕುಶಲ ಕುಟುಂಬಗಳಿಗೆ ಜೀವನೋಪಾಯದ ಭದ್ರತೆ ಒದಗಿಸಿದರು. ಕಮಲಾದೇವಿಯವರ ಬಹುಮುಖ ಸಾಧನೆಗಳನ್ನು ಗುರುತಿಸಿ ಇವರಿಗೆ ಹಲವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳು–ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ, ಮ್ಯಾಗಸೇಸ್ಸೆ ಪ್ರಶಸ್ತಿ, ವಿಶ್ವ ಮಹಿಳಾ ಗೌರವ ಪ್ರಶಸ್ತಿ ಇನ್ನು ಹಲವು ಪ್ರಶಸ್ತಿಗಳು ಇವರಿಗೆ ಬಂದವು. 85 ವರ್ಷಗಳ ತುಂಬು ಜೀವನ ನಡೆಸಿದ ಇವರು 1988ರ ಅಕ್ಟೋಬರ್ 29 ರಂದು ಮುಂಬೈನಲ್ಲಿ ನಿಧನರಾದರು.

ಈ ರೀತಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಮಹಿಳಾ ಹೋರಾಟದಲ್ಲಿ ಅವಿರತವಾಗಿ ಶ್ರಮಿಸಿ ನಿಸ್ವಾರ್ಥ ಸೇವೆಯಿಂದ ದೇಶಕ್ಕಾಗಿ, ದೇಶದ ಜನರ ಅಭ್ಯುದಯಕ್ಕಾಗಿ ತಮ್ಮ ಜೀವನವನ್ನೇ ಸವೆಸಿದ ಕಮಲಾದೇವಿ ಚಟ್ಟೋಪಾಧ್ಯಾಯರು ಭಾರತದ ಇತಿಹಾಸದಲ್ಲಿ ಇವರ ಹೆಸರು ಅಜರಾಮರವಾಗಿ ಉಳಿದಿದ್ದು ದೇಶದ ಇಂದಿನ ಸಮಸ್ಯೆಗಳ ವಿರುದ್ಧ ಹೋರಾಡುತ್ತಿರುವ ಹಲವರಿಗೆ ಮಾಧರಿಯಾಗಿದ್ದಾರೆ.

## ಪರಾಮರ್ಶನ ಗ್ರಂಥಗಳು


- **Jasleen Dhamija (2007) :** Kamaladevi Chattopadhyaya New Delhi National Book Trust India, Green Park.
- **Julie Laut Barbieri (2008)** : Kamaladevi Chattopadhyaya Anti-Imperialist and Women's Rights Activities-1939-41, Oxfor Ohio Miami University.
- **Kamaladevi Chattopadyaya (1947) :** "The Awakening of Asia", Bombay National Information and Publication,
- **Indian Women's Battle for Freedom (1983) :** Abhinav Publications, New Delhi-1983.
- **Reena Nanda (2002) :** Kamaladevi Chattopadyaya A Biography, U.S.A. Oxfor University Press.
- **M.V. Narayana Rao (2003) :** Kamaladevi Chattopadyayas A True Karmayogi, Bengalore The Craft Council of Karnataka.
- **S.R. Bakshi (2000) :** Kamaladevi Chattopadyaya Role for Women's Welfare,
- **Tumakuru Palaksha (2012) :** History of Karnataka vol-2, Shashi Prakashana,
- **S. Halappa (1962) :** History of Freedom Movement in Karnataka Vol-2, G , Govt of Mysore Publication.
- **ಡಾ. ಸೂರ್ಯನಾಥ ಕಾಮತ್ (1988) :** ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು, ಹುಬ್ಬಳ್ಳಿ ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ,
- **ಬಿ. ಆರ್. ಪ್ರಾಣೇಶ ರಾವ್ (1999) :** ಭಾರತದ ಸ್ವಾತಂತ್ರ್ಯ ಹೋರಾಟದ ಮೇರು ವ್ಯಕ್ತಿಗಳು, ಮೈಸೂರು ನವಭಾರತೀ ಪ್ರಕಾಶನ,
- **ಫಾಲಾಕ್ಷ (2009) :** ಆಧುನಿಕ ಕರ್ನಾಟಕ ಸಮೀಕ್ಷೆ, ತಿಪಟೂರು ಶಶಿ ಪ್ರಕಾಶನ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಜಯದೇವಿತಾಯಿ ಲಿಗಾಡೆ ಕಾವ್ಯ : ಅನುಭಾವಿಕ ಅನುಸಂಧಾನ

✍ ಡಾ. ಜ್ಯೋತಿ ಎಸ್. ಬಿ., ಕನ್ನಡ ಸಹ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ.

ಇಪ್ಪತ್ತನೇ ಶತಮಾನ ಅನೇಕ ಪ್ರತಿಭಾನ್ವಿತ ಕವಿಯೋಗಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ ಕಾಲಘಟ್ಟ. ಈ ಯುಗದಲ್ಲಿ ಅಸ್ತಿತ್ವಕ್ಕೆ ಬಂದ ನವೋದಯ ಕಾವ್ಯ ಸಂದರ್ಭದಲ್ಲಿ ಸಾಹಿತ್ಯ ರಚನೆಗೆ ತೊಡಗಿದ ಬರಹಗಾರ್ತಿಯರಲ್ಲಿ ಕಾವ್ಯ ಕ್ಷೇತ್ರವನ್ನು ಆರಿಸಿಕೊಂಡ ಕವಯಿತ್ರಿ ಜಯದೇವಿತಾಯಿ ಲಿಗಾಡೆಯವರು. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ 'ಹಾಡುಗಬ್ಬದ ಕವಯಿತ್ರಿ' ಎಂದು ಗುರುತಿಸಿಕೊಂಡ ಇವರು ಕಾವ್ಯದ ಜೊತೆಗೆ ಮೌಖಿಕ ಪರಂಪರೆಯ ಅಭಿವ್ಯಕ್ತಿಯ ನೆಲೆಯಾದ ತ್ರಿಪದಿ ಛಂದಸ್ಸಿನಲ್ಲಿ ತಮ್ಮ ಸಂವೇದನೆಗಳಿಗೆ ಬರವಣಿಗೆಯ ರೂಪ ನೀಡಿದವರು. ಈ ಮೂಲಕ ಜನಪದ ಕಾವ್ಯ ಮಾದರಿಯನ್ನು ಎತ್ತರಕ್ಕೊಯ್ದ ಕೀರ್ತಿ ತಾಯಿಯವರಿಗೆ ಸಲ್ಲುತ್ತದೆ.

ಜಯದೇವಿ ತಾಯಿಯವರು ಮೊದಲು ಅನುಭಾವಿ ಅನಂತರ ಕವಯಿತ್ರಿ. ಆದ್ದರಿಂದ ಅವರ ಕಾವ್ಯವು ಭಕ್ತಿಯ ಬಲದಿಂದ, ಅನುಭಾವದಿಂದ, ಶಿವಸಾಕ್ಷಾತ್ಕಾರದ ಹಂಬಲದಿಂದ, ಅಂತಃಸ್ಫುರಣದಿಂದ ಹೊರಹೊಮ್ಮಿದೆ. ಆಗರ್ಭ ಶ್ರೀಮಂತಿಕೆಯ ಮನೆತನದಲ್ಲಿ ಹುಟ್ಟಿ, ಸಿರಿವಂತರ ಮನೆಯ ಸೊಸೆಯಾದರೂ ಈ ಭೋಗ ಜೀವನಕ್ಕೆ ವಿಮುಕರಾಗಿ ಬಾಳಿದುದು ವಿಶೇಷ. ಶಿವಯೋಗಿ ಸಿದ್ಧರಾಮನ ಕೂಸಾಗಿ, ಎಲ್ಲರ ಲೇಸನ್ನು ಬಯಸುತ್ತಾ ಸಿದ್ಧನಲ್ಲಿ ಐಕ್ಯಳಾಗಬೇಕೆಂಬ ಹಂಬಲದೊಂದಿಗೆ ಬದುಕಿದರು. ಈ ಭಕ್ತಿಯೇ 'ಜಯಗೀತ', 'ತಾರಕ ತಂಬೂರಿ', 'ಬಂದೇವು ಕಲ್ಯಾಣಕ' ಎಂಬ ಅನುಭವ ಪದಗಳಿಂದ ಕೂಡಿದ ಕವನ ಸಂಕಲನಗಳನ್ನು 'ತಾಯಿಯ ಪದಗಳು', 'ಸಾವಿರದ ಪದಗಳು', 'ಅರಿವಿನಾಗರದಲ್ಲಿ' ಎಂಬ ತ್ರಿಪದಿ ರೂಪದ ಸಂಗ್ರಹಗಳನ್ನು ರಚಿಸಲು ಸ್ಫೂರ್ತಿಯಾಯಿತು.

ತಾಯಿಯವರ ಊರಾದ ಸೊನ್ನಲಿಗೆಯು ಶಿವಶರಣ, ಭಕ್ತಮಹೇಶ್ವರ ಸಿದ್ಧರಾಮನ ನೆಲೆ. ಸಿದ್ಧರಾಮನ ದೇವಾಲಯ, ಅಲ್ಲಿ ನಡೆಯುತ್ತಿದ್ದ ಪೂಜೆ, ಪುರಸ್ಕಾರ, ದಾಸೋಹದ ಕೈಂಕರ್ಯಗಳು ಎಳೆಯ ಬಾಲಕಿಯಲ್ಲಿ ಭಕ್ತಿಭಾವ ಮೈಗೂಡಿ ಮುಂದೊಂದು ದಿನ ಕನ್ನಡ ನೆಲಕ್ಕೆ ಪರಮ ಶಿವಭಕ್ತೆಯೊಬ್ಬಳ ಆಗಮನಕ್ಕೆ ಪ್ರೇರಣೆಯಾಯಿತು.

ಜಯದೇವಿತಾಯಿಯವರ ಕಾವ್ಯದ ಸ್ಥಾಯಿಗುಣ 'ಭಕ್ತಿ'. ಇದು ಅವರ ಸ್ವಾನುಭವದಿಂದ ಮೂಡಿದುದು. ತನು-ಮನ-ಭಾವಗಳಲ್ಲಿ ಭರಿತನಾಗಿದ್ದ ಸೊನ್ನಲಿಗೆ ಸಿದ್ಧರಾಮನ ದರ್ಶನ ಪಡೆಯಬೇಕೆಂಬುದೇ ಈ ಭಕ್ತಿಯ ಪರಮ ಉದ್ದೇಶ. ಆತನ 'ಕರುಣೆ ಕಾಸಾರದಲಿ ಸೋಸಿ ನೀರುಂಡು ಬೆಳೆದುಬಂದ ಭಕ್ತಿ'ಯು ಅವರನ್ನು ಅಧ್ಯಾತ್ಮಿಯನ್ನಾಗಿಸಿದೆ, ಅನುಭಾವಿಯನ್ನಾಗಿಸಿದೆ. ತಮ್ಮ ಅಂತರಂಗದ ಈ ಭಾವವನ್ನು ತಾಯಿಯವರು 'ಜಯಗೀತ', ತಾರಕ ತಂಬೂರಿ', 'ತಾಯಿಯ ಪದಗಳು' ಕೃತಿಗಳ ಮೂಲಕ ಪ್ರಕಟಿಸಿ ಸಿದ್ಧರಾಮನಿಗೆ ಅರ್ಪಿಸಿ ತೃಪ್ತರಾಗಿದ್ದಾರೆ. ಈ ಭಾವಗಳು "'ಜಯಗೀತೆ'ಯಲ್ಲಿ ಅನುಭಾವಿಯ ಆರಂಭದ ಆವೇಶ, ಕಾತರ ಕಳವಳಗಳು 'ಕುಡಿಕುಡಿದು' ಕುಟುಕು ಗುಟುಕು ಹೊಮ್ಮಿದರೆ 'ತಾಯಪದ'ಗಳಲ್ಲಿ ಗಂಭೀರ ಹೊಳೆಯಾಗಿ ಹರಿದು ಕುಡಿಯುವ ರಸಿಕರಿಗೆ ಕಿರಿ ಪಾತ್ರಗಳಲ್ಲಿ ತೃಪ್ತಿ ಮೂಡಿಸಿದೆ. ಸ್ಥಿರಚಿತ್ರದ ಶ್ರುತಿಯಲ್ಲಿ ಮೀಟುವ 'ತಾರಕ ತಂಬೂರಿ' ಏಕತಾನದಲ್ಲಿ ನಿಂತು, ಹದಗೊಂಡ ಅನುಭಾವದ ಅಚಲ ಶಾಂತಿ ತುಷ್ಟಿಯ ಸಾಮಗಾನವಾಗಿದೆ." (ಸೂರ್ಯನಾರಾಯಣ ಚಡಗ (ಸಂ.), ಶೈಲಜಾ ಉಡಚಣ (ಲೇ), ಜಯದೇವಿತಾಯಿ, ನಂದನ ಪ್ರಕಾಶನ, ಬೆಂಗಳೂರು, 1972, ಪು. ಸಂ. 90) ಈ ಮಾತುಗಳು ತಾಯಿಯವರ ಭಕ್ತಿಕಾವ್ಯದ ಸ್ವರೂಪವನ್ನು ಚಿತ್ರಿಸುತ್ತವೆ. ಶ್ರೀಮಂತಿಕೆಯ ಭೋಗಭಾಗ್ಯಗಳನ್ನು ತೊರೆದು, ಶರಣ ಸಮ್ಮುಖರಾಗಿ 20ನೇ ಶತಮಾನದಲ್ಲಿ ವಚನಕಾರರ ಅನುಭಾವ ಪರಂಪರೆಗೆ ಪುನರ್ಜೀವ ನೀಡಿದ ತಾಯಿಯ ಹೃದಯದ ಭಾವಗಳು ಕವಿತೆಯ ರೂಪದ ಅಣಿಮುತ್ತುಗಳಾಗಿ ಹೊರಹೊಮ್ಮಿವೆ. ತಮ್ಮ ಭಕ್ತಿಕಾವ್ಯವನ್ನು ಅನುಭವದಿಂದ ಮೂಡಿದುದು ಎಂಬುದನ್ನು ಈ ತ್ರಿಪದಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

**"ನನ್ನಯದು ಕಂಡದ್ದು । ತಾನಾಗಿ ಬಂದದ್ದು**
**ಧನಿಗೂಡಿ ಹಾಡಿ ಹರಸಿದ್ದು – ದೇವನ**
**ಧ್ಯಾನದಲಿ ಮೂಡಿ ಬಂದದ್ದು"**

ಸೊನ್ನಲಿಗೆ ಸಿದ್ಧರಾಮನ ಮಾನಸಪುತ್ರಿಯಾಗಿ, ಪರಮಭಕ್ತೆಯಾಗಿ, ಅವನ ಮಹಿಮೆಯನ್ನು ಕುರಿತು ಹಾಡುವುದೇ ತಮ್ಮ ಕಾವ್ಯದ ಉದ್ದೇಶ ಎಂದು ಭಾವಿಸಿದ್ದಾರೆ. "ಹಗಲಿರುಳೂ ಸಿದ್ಧನ ಚಿಂತೆ, ಚಿಂತನೆ; ಅದೇ ಹಾಸು, ಅದೇ ಹೊದಿಕೆ; ಅದೇ ಅನ್ನ, ಅದೇ ನೀರು. ನೋಟದಲಿ; ಮನದಲ್ಲಿ, ಭಾವದಲ್ಲಿ, ಬಗೆಯಲ್ಲಿ, ನಡೆಯಲ್ಲಿ, ನುಡಿಯಲ್ಲಿ ಅವನದೇ ಲೀಲೆ ತುಂಬಿತ್ತು" (ಸೂರ್ಯನಾರಾಯಣ ಚಡಗ (ಸಂ), ಜಯದೇವಿತಾಯಿ, ಮಾತು-ಕೃತಿ, ಪು. ಸಂ. 325) ಎಂದು ಅಂತರಂಗವನ್ನು ತೆರೆದಿಟ್ಟಿದ್ದಾರೆ. ವೈರಾಗ್ಯವನ್ನು ಮೈಗೂಡಿಸಿಕೊಂಡ ತಾಯಿಯವರು ಸಿದ್ಧನ ಒಲುಮೆ, ದರ್ಶನಕ್ಕಾಗಿ ಕಾಯುವ ಹಂಬಲ ಮೈಮನಗಳನ್ನು ತುಂಬಿಕೊಂಡಿರುವುದು ಕಾವ್ಯದಲ್ಲಿ ರಸಧಾರೆಯಾಗಿ ಹರಿದಿದೆ.

**ನಿನ್ನ ಮಂಗಳ ಮಹಿಮೆ**
**ನಿನ್ನ ಕರುಣೆಯ ಕಾಸಾರ**
**ಕವಲೊಡೆದು ಹರಿಯುತ್ತಿದೆ ಎನ್ನ ಮೇಲೆ** *(ಜಯಗೀತ)*

ಎಂದು ಹಾಡಲು ಪ್ರೇರೇಪಿಸಿದೆ. ಹೀಗೆ ಹಾಡುತ್ತಲೇ ಸಿದ್ಧರಾಮನನ್ನು ಕಾಣಲು ಮನ ಕಾತರಿಸುತ್ತಿದೆ. ಈ ಕಾತರದ ಭಾವಗಳು 'ಮೊದಲ ಸಂಕಲನ 'ಜಯಗೀತ'ದ ರೂಪದಲ್ಲಿ ವ್ಯಕ್ತಗೊಂಡಿವೆ.

**ಸಿರಿವಂತರ ಕುವರಿ ಸಿರಿವಂತರ ಸತಿಯಾಗಿ**
**ಸಿರಿತನದ ಶೃಂಗಾರವೆಲ್ಲವನು ಭೋಗಿಸಿದೆ**
**ಸಿರಿತನ ದೊರೆಯತನ ಹಿರಿಯತನ**
**ಎನ್ನನಾವರಿಸಿವೆ, ಶ್ರೀಲೋಲನ ದರ್ಶನವು ಒಮ್ಮೆ ಇಲ್ಲ !**
*(ಜಯಗೀತ)*

ತಮ್ಮ ಜೀವನದ ತಾತ್ವಿಕತೆಯನ್ನೆ ತಾಯಿಯವರು ಇಲ್ಲಿ ತೆರೆದಿಟ್ಟಿದ್ದಾರೆ ಎಳೆಯ ವಯಸ್ಸಿನಲ್ಲೆ ಪರಮಾರ್ಥದ ಕಡೆಗೆ ಹಂಬಲಿಸಿದ ಈ ಸಾಧಕ ಜೀವ ಸದಾ ಆರಾಧ್ಯದೈವದ ಧ್ಯಾನಸುಖಕ್ಕೆ ಹಂಬಲಿಸುತ್ತಿದೆ. ಸಿದ್ಧರಾಮನ ದರ್ಶನದ ನಿರೀಕ್ಷೆಯಲ್ಲಿ ಕಾಯುತ್ತಲೇ ಈ ತಳಮಳಗಳನ್ನು ಅನುಭಾವ ಪದಗಳ ರೂಪದಲ್ಲಿ ಹೊರಹಾಕಿ ಭಕ್ತಿಯ ಪರಾಕಾಷ್ಠತೆಯನ್ನು ಮೆರೆದಿದ್ದಾರೆ. ಈ ವಿರಹ ಭಾವ ಜಯದೇವಿತಾಯಿಯವರ ಭಕ್ತಿಕಾವ್ಯದ ಪ್ರಧಾನ ಗುಣ. ಆಧ್ಯಾತ್ಮಿಕ ಅಭಿಪ್ಸೆಗೆ ಕನ್ನಡಿ ಹಿಡಿದಿರುವ ಈ ಗುಣವೇ ಅವರ ಸಮಗ್ರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಾವ್ಯದ ಸ್ಥಾಯಿಯಾಗಿ ಹೊರಹೊಮ್ಮಿದೆ. ಸಿದ್ಧರಾಮನ ಧ್ಯಾನದಲ್ಲೇ ತೊಡಗಿರುವ ತಾಯಿಯವರ ಮನ ಅವನನ್ನು ಕಾಣಲು ದಿನದಿನವೂ ಹಂಬಲಿಸುತ್ತಾ ಆ ಹಂಬಲವೇ ಹಾಡಾಗಿ ರೂಪುಗೊಳ್ಳುವ ಮೂಲಕ ಮನಸ್ಸು ಕೊಂಚ ಹಗುರಗೊಳ್ಳುತ್ತದೆ.

**ನಿನ್ನ ಬರುವಿಕೆಯ ಬಯಕೆ**
**ಯನೆ ನೆನೆನೆನೆದು ಅಳ–**
**ಹೋಗಿ ಹಾಡಿ ಬಿಡುವೆ** *(ಜಯಗೀತ)*

ಎನ್ನುವ ಅವರ ಮಾತುಗಳಲ್ಲೆ ಇದನ್ನು ಕಾಣಬಹುದಾಗಿದೆ. ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನನಿಗಾಗಿ ಹಂಬಲಿಸುವಂತೆ ತಾಯಿಯವರು ಸಿದ್ಧರಾಮನ ದರ್ಶನಕ್ಕಾಗಿ ಕಾತರಿಸುತ್ತ ದಯೆಗೈಯದಿದ್ದಾಗ ಆತನ ಮನದ ಇಂಗಿತವನ್ನು ಅರಿಯಲು ಹಂಬಲಿಸುತ್ತಾರೆ. ಕೊನೆಗೆ ಇದಕ್ಕಾಗಿ ಯಾವುದೇ ಅಡ್ಡಿ ಆತಂಕಗಳು ಎದುರಾಗಲಿ ತಾವು ಇಟ್ಟ ಹೆಜ್ಜೆಯನ್ನು ಹಿಂದೆಗೆಯುವುದಿಲ್ಲ ಎಂಬ ದೃಢ ಸಂಕಲ್ಪ ತಾಳುತ್ತಾರೆ.

**ಬೀಸುಗಾಳಿಯೇ ಬೀಸು, ಬೀಸು**
**ಬಿರುಗಾಳಿ, ನಾನಿನಗೆದುರಾಳಿ**
**ಬಂದ ಎಡೆಯನು ಬಿಡೆನು ಸಾಕ್ಷಿ**
**ಬಂದದ್ದು ಪರಮಾನ್ನ ಎನಗೆ** *(ಜಯಗೀತ)*

ಯಾವುದೇ ಬಗೆಯ ತೊಡಕುಗಳು ಬಂದೆರಗಿದರೂ ಸಿದ್ಧರಾಮನ ದರುಶನಕ್ಕಾಗಿ ತನ್ನ ಜೀವವು ಕಾಯುವ ಬಯಕೆ, ಈ ಮೂಲಕ ಆತ್ಮಪ್ರಕಾಶನ ಹೊಂದಲು ಸಾಧನೆಗೈಯುವ ಹಂಬಲ ವ್ಯಕ್ತವಾಗಿದೆ. ಹೀಗೆ 'ಜಯಗೀತ' ಸಂಕಲನವು ತಾಯಿಯವರು ಸಿದ್ಧರಾಮನನ್ನು ಕುರಿತ ನಿಲುವನ್ನು, ಪರಮಾರ್ಥದ ಸುಖವನ್ನು ಕಾಣಲು ತವಕಿಸುವ ಅವರ ಮನದ ಹಂಬಲವನ್ನು ಪ್ರಕಟಿಸುತ್ತದೆ. ಮನುಷ್ಯ ಐಹಿಕ ಸುಖ–ಭೋಗಗಳ ನಡುವೆ ಇದ್ದು ಸೃಷ್ಟಿಕರ್ತನನ್ನು ಮರೆಯಬಾರದು, ಈ ಕ್ಷಣಿಕವಾದ ಭೋಗ ಸುಖಕ್ಕೆ ಹಂಬಲಿಸದೆ ಶಾಶ್ವತವಾದ ಯೋಗ ಸುಖದ ಕಡೆಗೆ ಸಾಗಬೇಕೆಂಬ ಮಹಾಪುರುಷರ ಚಿಂತನೆಗಳು ಇಲ್ಲಿ ಅನುರಣಿತವಾಗಿವೆ. ಒಟ್ಟಾರೆ "ತಾನು ಕಂಡುಂಡ ಅನುಭವಗಳನ್ನು ತಾಯಿ, ಹಾಡಿನ ರೂಪದಲ್ಲಿ ಅಭಿವ್ಯಕ್ತ ಮಾಡಿದ್ದಾರೆ. ಒಂದರ್ಥದಲ್ಲಿ ಈ ಸಂಕಲನವು ತಾಯಿಯವರ ಗೀತರೂಪದ ಆತ್ಮಕಥೆಯಾಗಿದೆ". (ರಾಮಕೃಷ್ಣ ಮರಾಠೆ, ಜಯದೇವಿತಾಯಿ ಲಿಗಾಡೆ, ಲೋಹಿಯಾ ಪ್ರಕಾಶನ, ಬಳ್ಳಾರಿ, 2012, ಪು. ಸಂ. 86) ಆದ್ದರಿಂದಲೇ 'ನನ್ನ ಆಲಾಪವೇ ಎಲ್ಲ ಜಯಗೀತಕದುವೆ ಸೊಲ್ಲ' ಎಂದು ಈ ಸಂಕಲನದ ಉದ್ದೇಶವನ್ನು ಅವರೇ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಪರಮಾತ್ಮನ ದರ್ಶನಕ್ಕೆ ಹಂಬಲಿಸುವ ಸಾಧಕಿಯ ಅನುಭವಗಳು ಭಾವಗೀತೆಗಳಾಗಿ ಮೈದಳೆದಿವೆ.

ಸಿದ್ಧರಾಮನಿಗೆ ಸಾವಿರದಳ ಕಮಲವನ್ನು ಏರಿಸಿ ಪೂಜಿಸುವ ಹಂಬಲದ ಅನುಭವಗಳು 'ತಾಯಿಯ ಪದಗಳು' ತ್ರಿಪದಿಯಲ್ಲಿ ಅನನ್ಯವಾಗಿ ರೂಪುಗೊಂಡಿವೆ. ಪಂಚಾಕ್ಷರಿ ಹಿರೇಮಠ ಅವರು ಈ ಕೃತಿಯ ಬಗೆಗೆ "ವಾಸ್ತವಿಕ ಬದುಕಿನ ನೂರಾರು ನೋವು ನಲಿವಿನ ಸುಕುಮಾರ ಭಾವನೆಗಳನ್ನು ಚಿತ್ರಿಸಿದ, ಕಲಾನೈಪುಣ್ಯವನ್ನು ಬಹು ಮನೋಹರವಾಗಿ ನಿರೂಪಿಸಿದ ಕಾವ್ಯ 'ತಾಯಿಯ ಪದಗಳು'" (ಸೂರ್ಯನಾರಾಯಣ ಚಡಗ (ಸಂ), ಸ್ವಾಮಿ ಬಿ. ಎಸ್. (ಲೇ), ಜಯದೇವಿತಾಯಿ, ಪು. ಸಂ. 100) ಎಂದು ಅಭಿಪ್ರಾಯಪಟ್ಟಿರುವುದು ಈ ಕೃತಿಯೂ ಅವರ ಭಕ್ತಿಭಾವವನ್ನು ಪ್ರದರ್ಶಿಸುವ ಆತ್ಮಚರಿತ್ರಾತ್ಮಕ ಕೃತಿ ಎಂಬುದನ್ನು ಸಮರ್ಥಿಸುತ್ತದೆ. ಸಿದ್ಧರಾಮನಲ್ಲಿ ತಾಯಿಯವರಿಗಿದ್ದ ಸರ್ವಾರ್ಪಣಭಾವ ಇಲ್ಲಿ ಓತಪ್ರೋತವಾಗಿ ಪ್ರವಹಿಸಿದೆ.

ಈ ಪದಗಳ ರಚನೆಗೆ ತ್ರಿಪದಿ ಛಂದಸ್ಸನ್ನು ಬಳಸಿಕೊಂಡು "ನನ್ನ ವಿಚಾರಗಳನ್ನು, ಭಾವನೆಗಳನ್ನು ಒಡಮೂಡಿಸಲು ಈ ಜಾನಪದ ಧಾಟಿಯೇ ಒಳ್ಳೇ ಸಹಾಯಕವೆಂದು ನನಗೆ ಅನಿಸಿದ್ದರಿಂದ ಈ ಧಾಟಿಯಲ್ಲೂ ಬರೆಯಲು ಪ್ರಾರಂಭಿಸಿದೆ" (ಉದ್ಧೃತ: ರಾಮಕೃಷ್ಣ ಮರಾಠೆ ಜಯದೇವಿತಾಯಿ ಲಿಗಾಡೆ, ಪು. ಸಂ. 91) ಎಂದು ಈ ಪದಗಳನ್ನು ಕನ್ನಡ ತಾಯಂದಿರ ಉಡಿಗೆ ಅರ್ಪಿಸಿದ್ದಾರೆ. ಕುಟುಂಬ, ಸಮಾಜ, ಆಸ್ತಿಕತೆ ಈ ಎಲ್ಲವನ್ನೂ ಸರಿದೂಗಿಸಿಕೊಂಡು, ಹೆಣ್ಣು ಮಗಳಾಗಿ ತನ್ನ ಮಿತಿಯಲ್ಲಿ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಎದುರಾದ ತೊಂದರೆಗಳಿಗೆ ಧೃತಿಗೆಡದೆ ಮುಂದೆ ಹೆಜ್ಜೆಯಿಡುತ್ತಾರೆ.

**ತಾಳುವೆನು ಯಾತನೆಯ ಬಾಳುವೆನು ನಿನಗಾಗಿ**
**ಕಾಳ ಬಂದರೂ ನಾನು ಹೆದರೇನು । ಸಿದ್ಧರಾಮ**
**ದಾಳಿ ತಂದಿರುವೆ ದೇಹಕ** *(ತಾಯಿಯ ಪದಗಳು)*

ದೈಹಿಕ ಸಮಸ್ಯೆಗಳನ್ನು ನಿಭಾಯಿಸುವ ಮಾನಸಿಕ ಸ್ಥೈರ್ಯವಿದ್ದರೆ ಎಂತಹ ಪರಿಸ್ಥಿತಿಯನ್ನು ಮೆಟ್ಟಿನಿಲ್ಲಬಹುದು ಎಂಬ ಚಿಂತನೆ ಇಲ್ಲಿದೆ. ವೈಯಕ್ತಿಕ ಬದುಕಿನ ಸುಖದುಃಖಗಳಿಗೆ ಹೆದರದೆ ತಮ್ಮ ಆರಾಧ್ಯ ದೈವವನ್ನು ಧ್ಯಾನಿಸುತ್ತಲೇ ನೋವನ್ನು ಮರೆಯುವ ಈ ಬಗೆಯ ಮಾನಸಿಕ ಸ್ಥಿರತೆ ಅನುಕರಣೀಯವಾದದ್ದು. ಸಿದ್ಧರಾಮನ ಕಾಣುವ ತವಕದಲ್ಲಿ ಯಾವ ತ್ಯಾಗಕ್ಕೂ ಸಿದ್ಧರಾಗುತ್ತಾರೆ.

**ನಿನ್ನ ಬರುವಿಗಾಗಿ ಅನ್ನ ನೀರನು ತೊರೆದೆ**
**ಪನ್ನಗಧರ ಬಾರೋ ಪರಮೇಶ**
**ಪನ್ನಗಧರ ಬಾರೋ ಪರಮೇಶ ಎನ್ನಯ್ಯ**
**ಚನ್ನಿಗ ಬಾರೋ ಚಿಲ್ಲಿಂಗ** *(ತಾಯಿಯ ಪದಗಳು)*

ಎಂತಹ ಕಠಿಣ ಪರೀಕ್ಷೆ ಒಡ್ಡಿದರೂ ತಾನು ಹೆದರುವಳಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಹೀಗೆ ತಾಯಿಯ ಪದಗಳಲ್ಲಿರುವ ಒಂದೊಂದು ತ್ರಿಪದಿಯೂ ಅವರ ವ್ಯಕ್ತಿತ್ವವನ್ನು, ಅಧ್ಯಾತ್ಮದ ಅನನ್ಯತೆಯನ್ನು, ಪರಿಚಯಿಸುವ ಆತ್ಮಚರಿತ್ರಾತ್ಮಕ ಸಂಗತಿಗಳನ್ನು ಒಳಗೊಂಡಿವೆ ಎನ್ನಬಹುದು.

ಕನ್ನಡ ನಾಡಿನ ಅನುಭವ ಪರಂಪರೆಯನ್ನು ಜೀವಂತಗೊಳಿಸಿದ ಕೃತಿ 'ತಾರಕ ತಂಬೂರಿ'. ಸಿದ್ಧರಾಮನೇ ತಮ್ಮ ಜೀವದ ಉಸಿರೆಂದುಕೊಂಡು ಶರೀರವನ್ನೇ ತಂಬೂರಿಯನ್ನಾಗಿ ಮಾಡಿಕೊಂಡು, ಭಾವದ ತಂತಿಯನ್ನು ಬಲವಾಗಿ ಬಿಗಿದು ಆತನ ನಾಮಸ್ಮರಣೆಯನ್ನೆ ತಮ್ಮ ಜೀವನದ ಪರಮ ಗುರಿಯಾಗಿಸಿಕೊಂಡು ಹಾಡಿದ ಅನುಭವ ಪದಗಳು ಭಕ್ತಿ ಗೀತೆಗಳಾಗಿ ಹೊರಹೊಮ್ಮಿವೆ. "ಈ ಅನುಭವ ಪದಗಳಲ್ಲಿ ಕರುಳಿನ ತಿರುಳನ್ನು ಅರಿತಾಗ ಹೃದಯ ಕರುಣೆಯ ವಾತ್ಸಲ್ಯದ ಮಡುವಾಗುತ್ತದೆ – ಭಕ್ತಿಯ ಬೀಡಾಗುತ್ತದೆ. ಆಗ ಬದುಕಿನ ವಿವಿಧ ಸ್ತರಗಳಲ್ಲಿ, ವಿವಿಧ ಮುಖಗಳಲ್ಲಿ ಸಿದ್ಧರಾಮನ ಲೀಲೆಯ ತೊಟ್ಟಿಲು ತೂಗುವುದನ್ನು ತಾಯಿ ಅನುಭವಿಸಿದ್ದಾರೆ." (ಸೂರ್ಯನಾರಾಯಣ ಚಡಗ (ಸಂ), ಹಿರೇಮಠ ಜಿ. ಆರ್. (ಲೇ), ಜಯದೇವಿತಾಯಿ, ಪು. ಸಂ. 58) ಹೀಗೆ ಭಾವಪೂರ್ಣವಾಗಿ ಅನುಭಾವದ ಹಾಡುಗಳನ್ನು ಹಾಡುತ್ತ,

**ತಾರಕ್ಕ ತಂಬೂರಿ ನಾನದಕೆ ನುಡಿಸುವೆ,**
**ತಾರ ತಂಬೂರಿಯ ಗುರುವಿನ ಅಗಣಿತ**
**ಮಹಿಮೆಯ ಸಾರುವೆ ತಾರಕ ತಂಬೂರಿಯ** *(ತಾರಕ ತಂಬೂರಿ)*

ಎಂದು ಭಕ್ತಿ, ಆರ್ದತೆ ಮತ್ತು ಅನುಭಾವ ಧ್ವನಿಯಿಂದ ಸಿದ್ಧರಾಮನನ್ನು ನೆನೆದಿದ್ದಾರೆ. ಮೂವತ್ತೊಂಬತ್ತು ಅನುಭವ ಪದಗಳಿರುವ ಈ ಕೃತಿಯಲ್ಲಿ ಸಿದ್ಧನ ದೀಕ್ಷೆಯನ್ನು ಪಡೆದು ತನ್ನ ಕಾಯವನ್ನು ತಿದ್ದಿ ತೀಡಿದಾಗ ಮೂಡಿದ ಭಾವಗಳೇ ಪದಗಳಾಗಿ ಹೊರಹೊಮ್ಮಿವೆ.

**ಶಿವ ಮಹಾ ಮಂತ್ರವ ಕಿವಿಯಲ್ಲಿ ಬೋಧಿಸಿ**
**ಭಾವಲಿಂಗದಿ ಬೆರಸಿ ಭವಮಾಲೆ ಗೆಲಿಸಿಹನು ।**
**ದೇಹ ಧಾವತಿಗಳೆದು ಮಹಿಮಂಗೆ ಶರಣಾದೆ ।**
**ಇಹಪರ ಜಯಿಸಿದ ಜಯಸಿದ್ಧರಾಮಗೆ॥** (ತಾರಕ ತಂಬೂರಿ)

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎನ್ನುವ ಮೂಲಕ ತಮ್ಮ ಮನದಾಳದ ಇಂಗಿತವನ್ನು ತೋಡಿಕೊಂಡಿದ್ದಾರೆ. ಅಂತರಂಗದ ಅರಿವಿನಿಂದ ಇರವಿನ ಅಂಬುಧಿಯನ್ನು ದಾಟಬಯಸುವ ಶಿವಭಕ್ತಿಯ ಆರ್ತಭಕ್ತಿ ಈ ಪದಗಳ ರಚನೆಗೆ ಪ್ರೇರಣೆಯಾಗಿದೆ. ಸಿದ್ಧರಾಮನ ಕಾಣಲಾರದ ರೂಪವನ್ನು ಭಕ್ತಿಯ ಓಜಸ್ಸಿನಿಂದ ಕಣ್ತುಂಬ ಕಂಡು, ಶಿವಸಿದ್ಧರಾಮನ ಪಾದಕ್ಕೆ ಮಣಿದಿರುವುದನ್ನು ಅವರ ಪದಗಳನ್ನು ಓದಿಯೇ ತಣಿಯಬೇಕು. ಇಂತಹ ಆಧ್ಯಾತ್ಮಿಕ ಅಭೀಪ್ಸೆಗೆ ಲೌಕಿಕ ಬಂಧನಗಳು ಅಡ್ಡಿಯಾದಾಗ ಅದರಿಂದ ಬಿಡುಗಡೆ ಬಯಸುತ್ತಾ,

**"ಯಾಕಾರ ಹುಟ್ಟಿಸೀದಿ ಸಾಕಾಯ್ತು ಈ ಜನುಮ**
**ನೂಕ ಬ್ಯಾಡೊ ದೇವ ಮತ್ತ ಮತ್ತ..."**
**ಘನ ಬಾಧೆ ಪರಿಹರಿಸಯ್ಯ ಸಿದ್ಧರಾಮ**
**ಜನನ ಮರಣ ದೂರ ಮಾಡಯ್ಯ** *(ತಾರಕ ತಂಬೂರಿ)*

ಎಂದು ಸಂಸಾರದ ಮಾಯೆಯಿಂದ ದೂರ ಮಾಡುವಂತೆ ನಯವಾಗಿ ಬೇಡಿಕೊಂಡಿದ್ದಾರೆ. ತಮ್ಮ ತನುವನ್ನೆ ಸಿದ್ಧರಾಮನಿಗೆ ಅರ್ಪಿಸಿ ಇಹಲೋಕ ಯಾತ್ರೆ ಮುಗಿಸಿಬಿಡುವ ಕಡೆಗೆ ಚಿತ್ತ ಹರಿದಿದೆ.

**ಸಿದ್ಧಬಾರೋ ಮನದ ಗದ್ದುಗಿ ಹಾಸೀದ**
**ಇದ್ದದ್ದು ನಿನಗ ಒಪ್ಪಿಸೀದ**
**ಇದ್ದುದ್ದು ನಿನಗ ಒಪ್ಪಿಸೀದ – ಎನ್ನೊಡೆಯ**
**ಇಲ್ಲದ್ದು ಎಲ್ಲಿಂಥ ತರಲ್ವೇಲೊ ॥** *(ತಾರಕ ತಂಬೂರಿ)*

ಹೀಗೆ ತಮ್ಮ ಜೀವನವನ್ನೆ ಆತನಿಗೆ ಮೀಸಲಿರಿಸಿದ್ದಾರೆ. ಕೊನೆಗೆ ಅವನೊಡನೆ ಮೈ ಮರೆಯಲು ಸತ್ತು ಸುಣ್ಣಾಗಬೇಕೆಂಬ ಭಾವದಿಂದ,

**ಎಣ್ಣ್ಯಾಗಿ ಉರಿದ್ಹೋದ, ಬತ್ಯಾಗಿ ಸುಟಗೊಂಡ**
**ಕಣ್ಣಾಗಿ ಬೆಳಕ ಕಂಡೇನ**
**ಕಣ್ಣಾಗಿ ಬೆಳಕ ಕಂಡೇನ–ಲಿಂಗಯ್ಯನ**
**ಹೆಣ್ಣಾಗಿ ಶಿವರತಿಯ ಉಂಡೇನ** *(ತಾರಕ ತಂಬೂರಿ)*

ಸಿದ್ಧರಾಮನ ಕರುಣೆಯ ಕೂಸಾಗಿ, ಆತನಲ್ಲಿ ಐಕ್ಯವಾಗಬೇಕೆಂಬ ಮಹಾಬಯಕೆಯೊಂದು ಮೂಡಿ ಈ ಬಗೆಯ ನಿಷ್ಠೆಯಿಂದ ತಾಯಿಯ ಬುದ್ಧಿ–ಭಾವಗಳು ಅಂತಃಪ್ರೇರಣೆಯಲ್ಲಿ ಲೀನವಾಗಿವೆ. ತನ್ನನ್ನು ಅನೇಕ ವಿಧವಾಗಿ ಪರೀಕ್ಷಿಸಿದ ಸಿದ್ಧರಾಮ ಕೊನೆಗೆ ತನ್ನ ಹೃದಯಗುಡಿಯಲ್ಲಿ ಬಂದು ನೆಲಸಿದನೆಂಬ ಭಾವ ತಾಯಿಯವರಲ್ಲಿ ರೋಮಾಂಚನವನ್ನು ಉಂಟುಮಾಡಿದೆ.

**ತನುಕೊರೆದು ನೋಡಿದಿ ಮನ ಮುರಿದು ನೋಡಿದಿ**
**ಧನ ಬಕಿದು ನೋಡಿ ನೋಡಿದಿ – ಸಿದ್ಧರಾಮ**
**ಕನಿಕರದಿ ಬಂದು ನೆಲಸದಿ** *(ತಾರಕ ತಂಬೂರಿ)*

ಎಂದು ತಾನು ನಂಬಿದ ಆರಾಧ್ಯ ದೈವವನ್ನು ನೆನೆ ನೆನೆದು ಕಾಡಿ ಬೇಡಿ ಕೊನೆಗೆ ಆತನ ಕಾರುಣ್ಯಕ್ಕೆ ಒಳಗಾದಾಗ ಉಂಟಾದ ಸಂಭ್ರಮವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

ಭಕ್ತಿಭಾವದಲ್ಲಿ ಸಿದ್ಧರಾಮನನ್ನು ಕಂಡಾಗ ಉಂಟಾದ ದಿವ್ಯಾನುಭವವನ್ನು ಈ ಅನುಭವ ಪದಗಳಲ್ಲಿ ಕಟೆದು ನಿಲ್ಲಿಸಿ ಆತ್ಮಾನಂದದಲ್ಲಿ ಮುಳುಗೇಳುತ್ತಾರೆ. ಆತನ ಮೇಲಿನ ಅನನ್ಯ ಭಕ್ತಿ ಮತ್ತು ಆತನ ಕರುಣೆಯ ಫಲವಾಗಿ ಹೃದಯಾಂತರಾಳದಿಂದ ಮೂಡಿ ಬಂದ ಈ ಅನುಭವ ಪದಗಳು ಅನುಭಾವವಾಗಿ ಹೊರಹೊಮ್ಮಿವೆ. ಹೀಗೆ ಭಕ್ತಿಯ ಆವೇಶದಲ್ಲಿ ಮಿಂದೆದ್ದ ತಾಯಿಯವರು ಮುಂದೆ ಕರ್ಮಯೋಗಿ ಸಿದ್ಧರಾಮನ ಚರಿತ್ರೆಯನ್ನೆ ಬರೆಯುವ ಘನ ಕಾರ್ಯಕ್ಕೆ ಮನಸ್ಸು ಮಾಡಿದರು. ಈ ಸಂದರ್ಭದಲ್ಲಿ ದೈಹಿಕವಾಗಿ, ಮಾನಸಿಕವಾಗಿ, ಕೌಟುಂಬಿಕವಾಗಿ ಅನೇಕ ಸವಾಲುಗಳನ್ನು ಎದುರಿಸಿದರೂ, ಅನಾರೋಗ್ಯ ಅವರನ್ನು ಅಪಾರವಾಗಿ ಹಿಂಸಿಸಿದರೂ ಏಕಚಿತ್ತದಿಂದ ಸಿದ್ಧರಾಮನ ಧ್ಯಾನ ಮಾಡುತ್ತಲೇ ಮಹಾಕಾವ್ಯವನ್ನು ಪೂರ್ಣಗೊಳಿಸುತ್ತಾರೆ.

'ಬಂದೇವು ಕಲ್ಯಾಣಕ' ಕೃತಿಯು ಕಲ್ಯಾಣಕ್ಕೆ ಬಂದಾಗ ಆದ ಅನುಭವಗಳನ್ನು ಹಿಡಿದಿಟ್ಟಿದೆ. ಸಿದ್ಧರಾಮನ ಆಜ್ಞೆಯಂತೆ ತಾನು ಬಸವ ಕಲ್ಯಾಣಕ್ಕೆ ಬಂದೆ ಎಂದು ಹೇಳಿಕೊಳ್ಳುತ್ತ ಸತ್ಯ ಶರಣರ ಸಹವಾಸದಲ್ಲಿ ತನಗೆ ಸಿಗುವ ಪರಮಾನಂದವನ್ನು ನೆನೆಯುತ್ತ,

**ಈಶ ಜಯಸಿದ್ಧರಾಮನ ಕೂಸೆಂದು ಕರೆದು**
**ನೊಸಲಿಗೆ ಧರಿಸಿರಿ ವಿಭೂತಿಯ** *(ಬಂದೇವು ಕಲ್ಯಾಣಕ)*

ಎಂದು ವಿಭೂತಿ ಹಚ್ಚಿ ಭಕ್ತಿಯಿಂದ ಧ್ಯಾನಿಸುತ್ತಾರೆ. ಹೀಗೆ ಭಕ್ತಿಕಾವ್ಯದಲ್ಲಿ ತಾಯಿಯವರ ಅನನ್ಯ ಅನುಭಾವ ಸುಂದರವಾಗಿ ಅರಳಿ ಅಂತರಂಗವೇ ಇಲ್ಲಿ ತರಂಗಿತಗೊಂಡಿದೆ. ಕೆಲವು ಕಡೆ ಭಕ್ತಿ ನಿರ್ಭರವಾಗಿ ಹರಿದರೆ, ಇನ್ನು ಕೆಲವೆಡೆ ಅನುಭವವೇ ಅನುಭಾವವಾಗಿ ಹೊರಬಂದು ಸಿದ್ಧರಾಮನ ಕರುಣೆಯ ಕಾಸಾರದಲ್ಲಿ ಮಿಂದೆದ್ದಿದೆ. ಭಕ್ತಿ ಎಂಬುದು ಸಾಧಕನ ಅಂತಃಶಕ್ತಿ. ಅದರ ಬಲದಿಂದ ನಂಬಿದ ದೈವವನ್ನು ಸಾಕಾರಗೊಳಿಸಿಕೊಂಡು ಅನುಭಾವದ ನೆಲೆಗೇರುವ ವಚನಕಾರರ ಪ್ರೇರಣೆ ಇಲ್ಲಿ ಕೆಲಸ ಮಾಡಿದೆ ಎನ್ನಬಹುದು.

ತಾಯಿಯವರ ಅನುಭಾವ ಸಾಹಿತ್ಯವನ್ನು ಕುರಿತು ಶಾಂತರಸರು ಹೇಳುವ "ಜಯದೇವಿತಾಯಿಯವರ ಸಾಹಿತ್ಯಕ್ಕೆ ತಳಹದಿ ಅನುಭಾವವಾಗಿದೆ. ಸಾವು ಗೆದ್ದ ಸಾಹಿತ್ಯವದು. ಸಾವಿಲ್ಲದ ಸಡಗರದಲ್ಲಿ ಬರೆದದ್ದು. ಜೀವನದ ಅನಂತಮುಖದ ಅನುಭವ ಮಾಗಿ ಅವರ ಕಾವ್ಯದಲ್ಲಿ ಹೊರಬಂದಿದೆ. ಆ ದರ್ಶನ ಜಾತಿ, ಮತ, ಪಂಥ, ವರ್ಗ, ವರ್ಣದಿಂದ ದೂರಾದುದು, ಸಾರ್ವಕಾಲಿಕವಾದುದು" (ಉದ್ಧೃತ: ಜಯಶ್ರೀ ದಂಡೆ (ಸಂ), ಜಯದೇವಿತಾಯಿ ಲಿಗಾಡೆ – ನಂಜನಗೂಡು ತಿರುಮಲಾಂಬ ಸಾಹಿತ್ಯ ಕೃಷಿ, ಕ. ಸಾ. ಅಕಾಡೆಮಿ, 2011, ಪು. ಸಂ. 28) ಎಂಬ ಅಭಿಪ್ರಾಯವು ಅವರ ಸಾಹಿತ್ಯ ನಿರ್ಮಾಣದ ಹಿಂದೆ ಆನುಭಾವಿಕ ಅನುಭವಗಳೇ ಸ್ಫೂರ್ತಿಯಾಗಿವೆ ಎಂಬುದನ್ನು ಧ್ವನಿಸುತ್ತದೆ.

## ಪರಾಮರ್ಶನ ಗ್ರಂಥಗಳು


- **ಸೂರ್ಯನಾರಾಯಣ ಚಡಗ (ಸಂ.) (1972)** : ಜಯದೇವಿತಾಯಿ (ಸಂಭಾವನಾ ಗ್ರಂಥ) ಬೆಂಗಳೂರು ನಂದನ ಪ್ರಕಾಶನ.
- **ರಾಮಕೃಷ್ಣ ಮರಾಠೆ, ಜಯದೇವಿತಾಯಿ ಲಿಗಾಡೆ (2012)** , ಬಳ್ಳಾರಿ ಲೋಹಿಯಾ ಪ್ರಕಾಶನ.
- **ಜಯಶ್ರೀ ದಂಡೆ (ಸಂ) (2011)** : ಜಯದೇವಿತಾಯಿ ಲಿಗಾಡೆ – ನಂಜನಗೂಡು ತಿರುಮಲಾಂಬ ಸಾಹಿತ್ಯ ಕೃಷಿ, ಕ. ಸಾ. ಅಕಾಡೆಮಿ.


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನ್ನಡ ಕಾವ್ಯ ಜಗತ್ತು : ಕೆಲವು ಮಹಿಳಾ ಚಿಂತನೆಗಳು

✍ **ಡಾ. ನಾಗಣ್ಣ ಕಿಲಾರಿ,** ಕನ್ನಡ ಸಹ ಪ್ರಾಧ್ಯಾಕರು, ಎಸ್.ಎಸ್.ಎ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ, ವಿಜಯನಗರ ಜಿಲ್ಲೆ-583201.

ಕನ್ನಡದ ಕೆಲವು ಪ್ರಾತಿನಿಧಿಕ ಸಂಕಲನಗಳಲ್ಲಿ ಮಹಿಳಾ ಬರಹಗಾರ್ತಿಯರು ಸ್ಥಳ ಪಡೆದಿದ್ದು ಕಡಿಮೆ. ಆದರೆ ಕಳೆದ ಶತಮಾನದ ಕೊನೆಯ ಎರಡನೇ ದಶಕದಿಂದ ಅವರ ಪ್ರವೇಶ ದಟ್ಟವಾಗಿ ಆರಂಭವಾಗಿದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಮಹಿಳೆಯರ ಧ್ವನಿ ಪ್ರಮುಖರವಾಗಿ ಇದೆ. ಈವರೆಗೆ ಗೈರು ಹಾಜರಾದ ಗಾಯನವೊಂದು ಈಗ ಆವರಿಸುವಂತೆ ಸರಿಪಡಿಸುತ್ತಲೇ ನಮ್ಮೆಲ್ಲರ ಪ್ರಜ್ಞೆಯನ್ನು ಒಂದು ಅಪೂರ್ವ ತಿಳಿವು ತುಂಬಿಕೊಳ್ಳುತ್ತಿದೆ ಎಂದು ಭಾವಿಸುವೆ.

1. ಚಂದ್ರಶೇಖರ ಪಾಟೀಲರು ಸಂಪಾದಿಸಿರುವ "ಸಂಕ್ರಮಣ ಕಾವ್ಯ"ದಲ್ಲಿ ಒಬ್ಬರೂ ಮಹಿಳಾ ಲೇಖಕಿಯರು ಇಲ್ಲ. ಆ ಮೂಲಕ ಲೇಖಕಿಯರು ನವ್ಯ ಸಾಹಿತ್ಯದ ಸಿದ್ಧಾಂತಕ್ಕೆ ಇವರ ಉತ್ತರವೋ ಅಥವಾ ನವ್ಯದ ಮನೋಧರ್ಮವನ್ನು, ಜೇಡರಬಲೆಗೆ ಸಿಕ್ಕಂತೆ ನರಳುವ ಬದುಕಿನ ಹಿಂಸೆಯನ್ನು ನಿರಾಕರಿಸುವ ಜೀವ ಪ್ರೀತಿಯಿಂದ ಬರೆಯಲಾಗಲಿಲ್ಲವೋ? ಅದೇನೆ ಇರಲಿ ಸಂಕ್ರಮಣದಲ್ಲಿ ಮಹಿಳಾ ಹೆಸರಿನಲ್ಲಿ ಬರೆದ ಕನ್ನಡದ ಹೆಸರಾಂತ ಬರಹಗಾರರು ಆದು ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ನಳಿನಿ ದೇಶಪಾಂಡೆ' ಹೆಸರಿನಲ್ಲಿ ಮಹಿಳಾ ಧ್ವನಿಯನ್ನು ಮಾರು ವೇಷದಿಂದ ಅವರು ಬರೆದ ಒಂದು ಕವಿತೆ ಮಾತ್ರ ಇದೆ. ಅನಂತರ ಲಂಕೇಶ್ ಅವರು ನೀಲು, ನಿಮ್ಮಿ ಹೆಸರಲ್ಲಿ ಬರೆದಿದ್ದಾರೆ. ರಾಯಚೂರಿನ ಎಸ್.ಜಿ.ಸ್ವಾಮಿ ಅವರು ಸಹ 'ಸ್ಮಿತಾ ಜಿ' ಹೆಸರಿನಲ್ಲಿ ಬರೆದಿದ್ದಾರೆ.
2. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ, ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಅವರ ಸಂಪಾದಕತ್ವದಲ್ಲಿ ಬಂದಿರುವ "ನಮ್ಮ ಕನ್ನಡ ಕಾವ್ಯ" ಸಂಕಲನದಲ್ಲಿ ಚ. ಸರ್ವಮಂಗಳ ಇವರ ಒಂದು ಪದ್ಯವಿದೆ. ಈ ಪುಸ್ತಕದ ಮಿತಿ ಅಥವಾ ಬೇರೇನೆ ಕಾರಣಗಳಿದ್ದರೂ ಕನ್ನಡದ ಜಾನಪದ ಸೇರಿದಂತೆ ಎಲ್ಲ ವೈವಿಧ್ಯತೆಯ ಸೊಬಗು ಇದಕ್ಕಿದೆ, ನಿಜಕ್ಕೂ ಇದೊಂದು ಪ್ರಯೋಗ ಮಾತ್ರವಲ್ಲ ಅತ್ಯುತ್ತಮ ಸಂಕಲನವೇ. ಇನ್ನೂ ಅತ್ಯುತ್ತಮವಾಗುವ ಸಾಧ್ಯತೆಯನ್ನು ಈ ಒಂದು ಪಾರ್ಶ್ವದಿಂದ ಕುಂದಾಗಿದೆಯೆಂದು ಕಾಣುತ್ತದೆ. ಈ ಸಂಕಲನ ಬರುವಷ್ಟೊತ್ತಿಗಾಗಲೇ ವೈದೇಹಿ ಪ್ರತಿಭಾ ನಂದಕುಮಾರ ಮುಂತಾದ ಬರಹಗಾರ್ತಿಯರು ಸಾಕಷ್ಟು ಬರೆಯುತ್ತಿದ್ದರು. ಮಹಿಳೆಯರ ವಿಶಿಷ್ಟವಾದ ಧ್ವನಿ ಅದಾಗಲೇ ಕನ್ನಡ ಕಾವ್ಯ ಜಗತ್ತಿನಲ್ಲಿ ಗುರುತಿಸಲು ಸಾಧ್ಯವಿತ್ತು.
3. ಕಳೆದ ಶತಮಾನದ ಪ್ರಾತಿನಿಧಿಕ ಕವಿತೆಗಳನ್ನು ಆಯ್ಕೆಮಾಡಿ 'ಶತಮಾನದ ಕನ್ನಡ ಕಾವ್ಯ'ವೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಲಾಯಿತು. ಈ ಪುಸ್ತಕದಲ್ಲಿ ಸುಮಾರು 280 ಪುಟಗಳ ವಿಸ್ತಾರದಲ್ಲಿ ಲೇಖಕಿಯರು ಸ್ವಲ್ಪ ಮಟ್ಟಿಗೆ ಜಾಗ ಪಡೆದಿದ್ದಾರೆ. ಶೈಲಜಾ ಉಡುಚಣ, ಮಾಲತಿ ಪಟ್ಟಣ ಶೆಟ್ಟಿ, ವೈದೇಹಿ, ಬಿ.ಟಿ.ಲಲಿತಾನಾಯಕ್, ಶಶಿಕಲಾ ವೀರಯ್ಯ ಸ್ವಾಮಿ, ಚ.ಸರ್ವಮಂಗಳಾ, ಕಮಲಾ ಹೆಮ್ಮಿಗೆ, ಎಚ್.ಎಸ್.ಮುಕ್ತಾಯಕ್ಕ, ಹೇಮಾ ಪಟ್ಟಣಶೆಟ್ಟಿ, ಸ. ಉಷಾ. ಪ್ರತಿಭಾ ನಂದಕುಮಾರ, ಎಂ.ಆರ್. ಕಮಲಾ, ಸವಿತಾ ನಾಗಭೂಷಣ, ಎಚ್.ಎಲ್. ಪುಷ್ಪ ಮುಂತಾದ ಬರಹಗಾರರು ಕಾಣಿಸಿಕೊಳ್ಳುತ್ತಾರೆ. ಇದು ಸ್ವಲ್ಪ ನಿಧಾನವಾಗಿ, ಅನಂತರ ಕಾಣಿಸಿಕೊಳ್ಳುತ್ತಾರೆ. ಇದು ಮಹಿಳೆಯರ ಪ್ರವೇಶವನ್ನು ಮತ್ತು ಅವಕಾಶ ತುಂಬಾ ನಿಧಾನವಾಗಿ ಅನಂತರ ಕೊಡಲಾಗುತ್ತಿದೆಯೇ ?
4. ಇನ್ನು ರಂ.ಶ್ರೀ. ಮುಗಳಿಯವರು ಬರೆದಿರುವ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ಕುರಿತು ವಿವೇಚಿಸಿದರೆ ಅದೊಂದು ಸಿದ್ಧನಡೆಯೊಂದರ ಪಥ. ಅದು ರೂಪಿಸಿಕೊಂಡು ಮಾರ್ಗಕ್ಕೆ ಬರದಿದ್ದರೆ ಪ್ರವೇಶವಿಲ್ಲ. ವಚನವಿರಲಿ, ಜಾನಪದವಿರಲಿ, ತತ್ವಪದವಿರಲಿ ತೀರ ಈಚಿನವರೆಗೆ ಹೊರಗೇ ಇದ್ದವು. ಇವಾವು ಕೂಡ ಶೈಕ್ಷಣಿಕ ವಾತಾವರಣ ಕಟ್ಟಿದ ಕೋಟೆಯ ಗರಡಿಯಾಳುಗಳಲ್ಲ. ಹಾಗಾಗಿಯೇ ಚರಿತ್ರೆಯ ಈವರೆಗಿನ ರೂಪಿತ ನೆಲೆಯೆಂಬುದು ಸಿದ್ಧೌಷದ. ಬಹುತ್ವದ ನಿರಾಕರಣೆಯ ನಯತೆಯ ಚಲನೆಯಿದೆ. ಆಧುನಿಕ ಕನ್ನಡ ಸಾಹಿತ್ಯ ಪಶ್ಚಿಮದ ಕಡೆ ಪಡೆದ ಪಾಕ. 'ಅವಳ ತೊಡುಗೆ, ಇವಳಿಗೆ, ಇವಳ ತೊಡುಗೆ ಅವಳಿಗೆ' (ಬಿ.ಎಂ.ಶ್ರೀ) ಎಂಬುದು ನಿಜಕ್ಕೂ ಆ ಹೆಣ್ಣು ಕನ್ನಡದ್ದೇ. ತಾನು ತಯಾರಿಸಿದ ಮೇನ್‌ಸ್ಟ್ರೀಮ್ ಮಾತ್ರವೇ. ಉಳಿದಂತೆ ಮಸುಕುಗೊಳಿಸಲಾಗಿದೆ. ಇಲ್ಲವೇ ಅಷ್ಟೇನು ಮುಖ್ಯವಲ್ಲ ಎಂಬಂತೆ ನಿರ್ಲಕ್ಷಿಸಲಾಗಿದೆ. ಈ ದಿವ್ಯತೆಯ ಕಾರಣ ಮತ್ತು ಸಾರ್ವತ್ರಿಕ ಕಾಲಘಟ್ಟದ ಫಲಿತವಾಗಿ ಕಾಲುದಾರಿಗಳು, ಒಳದಾರಿಗಳು ಹೊಸನೀರನ್ನು, ಹೊಸ ಜೀವಕಳೆಯೊಂದಿಗೆ ಬಂದಿದೆ. ಶೋಷಣೆಗೆ ಒಳಗಾದ, ಘೋಷಿತವೋ, ಅಘೋಷಿತವೋ ಆಗಿ ತುಳಿತಕ್ಕೆ ಈಡುಮಾಡಲಾದ ಸಾಮಾಜಿಕ ವ್ಯವಸ್ಥೆಯ ಹಿಂಸೆಗೆ ಸಿಕ್ಕವರು ಬರೆಯತೊಡಗಿದ್ದಾರೆ. ಈ ಮನುಷ್ಯ ಲೋಕದಲ್ಲಿ ಶೋಷಣೆಗೆ ಒಳಗಾದ ಕೊನೆಯ ವ್ಯಕ್ತಿಯೆ ಹೆಣ್ಣು. ಆಕೆ ಮಾತು ಈ ಮೇಲಿನ ಅಂಶಗಳನ್ನು ಅಥವಾ ಈವರೆಗಿನ ನೋಟವನ್ನೇ ಬದಲಾಯಿಸಿದ್ದಾಳೆ ಮತ್ತು ಬದಲಾಯಿಸುತ್ತಿದ್ದಾಳೆ. ಈವರೆಗಿನ ಮೌನ ಮತ್ತು ಈಗಿನ ಮಾತು ನಮ್ಮೆಲ್ಲರ ವಿವೇಚನೆಗೆ ಹಚ್ಚುತ್ತಿದ್ದಾರೆ.
5. ಅಕ್ಷರ ಹೊಸಕಾವ್ಯ, ಬೆನ್ನ ಹಿಂದಿನ ಬೆಳಕು ಇನ್ನೂ ಮುಂತಾದ ಕನ್ನಡದ ಕಾವ್ಯ ಸಂಕಲನಗಳು ಬಂದಿವೆ. ಇವು ಒಂದಕ್ಕೊಂದು ಸ್ಪರ್ಧೆ ಮಾದರಿಯಲ್ಲಿ ಇವೆ, ಆದರು ಈವರೆಗೂ ಕೂಡ 'ಅಕ್ಷರ ಹೊಸಕಾವ್ಯ' ತನ್ನ ಮಿತಿಗಳನ್ನು ತೆರೆದ ಮನಸಿನಿಂದ ಹೇಳಿಕೊಂಡು, ಆ ಮಿತಿಯ ಒಳಗೆ ಬಂದಿದೆ. ಇದು ನವ್ಯದ ಹೊಸ ಮಾರ್ಗ, ಮಾರ್ಗ ಮಾತ್ರವಲ್ಲದೆ ಆತ್ಮವಿಮರ್ಶೆ ಕೂಡ. ಇದರೊಳಗೆ ಉತ್ತರ ಕರ್ನಾಟಕ ಅಥವಾ ಹೈದರಬಾದ್ ಕರ್ನಾಟಕ ಭಾಗದ ಕವಿತೆಗಳು ಸೇರಿಲ್ಲ ಎಂದು 'ಬೆನ್ನ ಹಿಂದಿನ ಬೆಳಕು' ಸಂಕಲನ ಬಂದಿರುವದು.

ಸಂಸಾರಿಕ, ಗಂಡು – ಹೆಣ್ಣಿನ ಸಂಬಂಧದ ನೆಲೆಗಳನ್ನು ಮರು ವ್ಯಾಖ್ಯಾನಕ್ಕೆ ಮೊದಲು ದಾರಿ ತೋರಿದವಳು ಅಕ್ಕಮಹಾದೇವಿ. ಅವಳು ಹಾಕಿದ ಅರ್ಜಿ ಊರ್ಜಿತಗೊಂಡು ಮತ್ತು ಸೀಮಿತ ಗೋಡೆಯಾಚೆಗೆ ತಾನು ಕಂಡುಂಡ ಅನುಭವದ ಚರಮಗೀತೆಯ ಹಾಡುತ್ತಿರುವ ಇಂದಿನ

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೆಣ್ಣು, ಸಮಾನತೆಯ ಹಸಿವು ಎಂಬುದು ದೂರುವುದು ಅಲ್ಲ ಎಂಬ ತಿಳುವಳಿಕೆ ಮತ್ತು ನಾನು ಹೆತ್ತ ಗಂಡು ಎಂಬ ಕರುಣೆಯ ಸ್ಪರ್ಶದಿಂದಲೇ ಬರೆಯುತ್ತಿದ್ದಾಳೆ. ಸಾಂಸ್ಕೃತಿಕ ಪರಂಪರೆಯೇ ಹೆಣ್ಣನ್ನು ಮೌನಗೊಳಿಸಿದೆ. ಹೆಣ್ಣಿನ ಆ ಮೌನಕ್ಕೆ ಪುರುಷರೇ ಭಾಷೆಯನ್ನು ಬರೆಯಲು ಯತ್ನಿಸಿದರು. ಸಾಂಸ್ಕೃತಿಕ, ಭಾಷಿಕ, ಭೌಗೋಳಿಕವಾಗಿ ದೂರವಿರುವ ಪರಿಸರದ ಕಲಾತ್ಮಕ ಸಿನೇಮಾವೊಂದನ್ನು ಡಬ್‌ಮಾಡಿದಂತೆ ಅಸಮರ್ಪಕ ವಾತಾವರಣ ನಿರ್ಮಿಸಿಕೊಂಡು ಅನುಭವಿಸುತ್ತಿರುವ ಕಿರಿಕಿರಿಗೆ ಸಿಕ್ಕಾಕಿಕೊಳ್ಳಲಾಯಿತು. ಗ್ರಹಿಕೆಗೆ ಒಂದು ವೃತ್ತವಿರುತ್ತದೆ. ಅದರಾಚೆಯೇ ಅಸ್ಮಿತೆಯ ಹಲವು ವೈವಿಧ್ಯತೆ, ವೇದನೆ ಉಳಿಯಿತು. ಮಾತನಾಡುವುದು, ಬರೆಯುವುದು ಎಂಬುದು ಹೆಣ್ಣಿಗೆ ತನ್ನ ಒಳಗಣವನ್ನು 'ಶಬ್ದ'ಕ್ಕೆ ಅನುವಾದಿಸುವುದಾಗಿದೆ. ಹಾಗೆ ಅನುವಾದಗೊಳ್ಳುವಾಗ ಎದುರು ಹಲವು ಸಮಸ್ಯೆಗಳು ಹುದುಗಿರುತ್ತವೆ. ಹೀಗೆ ಎನ್ನುವುದು ಯಾರು ನಿರ್ಮಿಸಿದ್ದು. ನಾನೋ ಅಥವಾ ಅವನೋ ಎನ್ನುವುದು. ಪದ್ಯ ಅನುವಾದಕ್ಕೆ ಅಷ್ಟು ಸುಲಭಕ್ಕೆ ಸಿಕ್ಕುವುದಿಲ್ಲ. ಹಾಗೆಯೇ ಸ್ವಾತಂತ್ರ್ಯದ ಸಂಕಟ ಕೂಡ. ಸ್ವತಂತ್ರರಾಗದೇ ಏನನ್ನೂ ಸಾಧಿಸಲಾಗದು. ಈಗೆಂದರೆ ಚಾರಿತ್ರಿಕವಾಗಿ ಮತ್ತು ಪ್ರಸ್ತುತದಲ್ಲಿ ಹೆಣ್ಣು ಎಷ್ಟು ಸ್ವತಂತ್ರಳು? ಹಾಗೆಯೇ ಸ್ವಾತಂತ್ರ್ಯ ಯಾವ ಹದ್ದಿನಲ್ಲಿರಬೇಕು ಎಂಬ ಸ್ವ-ವಿವೇಚನೆ. ಅನುವಾದ ಎನ್ನುವುದು ಮನಸ್ಸಿನ ಒಳಗಿನ ಶ್ರದ್ಧೆಯ ತಿಳಿವಿನ ಪ್ರಶ್ನೆ. ಮುಖ್ಯವಾಗಿ ಖಾಸಗಿಯಾದ ದ್ರವ್ಯವನ್ನೇ ಹೆಣ್ಣು ಅನುವಾದಿಸುವಾಗ ಹೆರಿಗೆಯ ಸಾವು-ಬದುಕಿನ ತಳಪಾಯವನ್ನು ಸ್ಪರ್ಶಿಸಿ ಸೃಷ್ಟಿಸುತ್ತಾಳೆ. ಹೇಳದೇ ಉಳಿದ ಲೋಕಗಳ ಅನಾವರಣ ಕನ್ನಡ ಸಾಹಿತ್ಯ ಅನುಭವಿಸುತ್ತಿರುವುದು, ಅರಳುತ್ತಿರುವುದು ಕಳೆದ ಶತಮಾನದಿಂದೀಚೆ. ಅಭಿವ್ಯಕ್ತಿಸಲೇಬೇಕಾದ್ದನ್ನು ಮುಚ್ಚಿಟ್ಟುಕೊಂಡು, ತನ್ನದಾಗಿಸಿಕೊಳ್ಳಬಹುದಾದ ಕ್ಷೇತ್ರದ ವ್ಯಾಪ್ತಿಯ ಆಚೆಯೇ ಉಳಿದಳು. ಹಿಂಜರಿಯುತ್ತಲೇ ಬಂದವಳು, ಈವರೆಗಿನ ಗೈರು ಹಾಜರಿಯನ್ನು ನಿನ್ನೆಯಲ್ಲಿ ಬೇರು ಬಿಟ್ಟು ಇಂದು ಅರಳುತ್ತಿರುವ ಭವಿಷ್ಯದ ವೃಕ್ಷ. ನಾವು ಹುಡುಗಿಯರೇ ಹೀಗೆ, ಅಡುಗೆ ಮಾಡುತ್ತಿದ್ದೇನೆ, ನಡು ರಾತ್ರಿಯಲ್ಲಿ ಕೇಳಿಸಿದ ಹೆಣ್ಣೊಬ್ಬಳ ಅಳು, ಗೊಂಬೆ, ನೋಡಬಾರದು ಚೀಲದೊಳಗನು, ತಿಳಿದವರೇ .. .. ಹೇಳಿ, ಅಡುಗೆ ಮನೆಯ ಹುಡುಗಿ, ಆಕೆ ಆತ ಭಾಷೆ, ಗುಬ್ಬಿ ಮನಿ, ಅಮೃತಮತಿಯ ಸ್ವಗತ ಇನ್ನು ಮುಂತಾದ ಕವಿತೆಗಳನ್ನು ಗಮನಿಸಬಹುದಾಗಿದೆ. ಸಾಹಿತ್ಯವೂ ಸೇರಿದಂತೆ ವಿವಿಧ ಕ್ಷೇತ್ರಗಳು ಹೆಣ್ಣನ್ನು ತಕ್ಕಮಟ್ಟಿಗೆ ದೂರವಿಟ್ಟವೆ. ದೂರವಿರುವವಳ ಒಳಗೆ ಇರುವ 'ಅವಳ'ನ್ನು ಶೋಧಿಸುವ, ಹೊಂದಿಸುವ, ಪೋಷಿಸುವ, ಆಕಾರ ವ್ಯಕ್ತಿತ್ವ ಅಸ್ಮಿತೆಯ ರೂಪಕ ಕಟೆಯುವ ಕೆಲಸ ಅತ್ಯಂತ ಮಹತ್ವದ್ದು. ವೈದೇಹಿಯವರು ಇಂತಹ ತಮ್ಮದೇ ಆದ ದಾರಿಯಲ್ಲಿ, ಗಾಢವಾದ ನಂಬಿಕೆಯೊಂದಿಗೆ ಹೆಣ್ಣಿನ ಸಾಂತ್ವದ ವ್ಯಾಖ್ಯಾನವನ್ನು ಅಕ್ಕ ಹೇಳುವಂತೆ 'ತೆರಣಿಯ ಹುಳು ತನ್ನ ಸ್ನೇಹದಿಂದಲೇ ಮನೆಯ ಮಾಡುವಂತೆ' ಕಥೆ ಕವಿತೆಗಳ ಮೂಲಕ ನಿರ್ವಹಿಸುತ್ತಿದ್ದಾರೆ. ಇವರ ಒಟ್ಟು ನೋಟ ಪಿತೃ ಸಂಸ್ಕೃತಿ ಜೊತೆಗಿನ ಜಗಳ ಕಟ್ಟುವ ಅಂಕದ ಹುರಿಯಾಳು ಅಲ್ಲ. ಜಗಳ ಉತ್ಪನ್ನಗೊಳಿಸುವ ದ್ವೇಷವೇ ಆಗಿರುವುದರಿಂದ, ಬದಲಾಗಿ 'ಇವನಾರವ ಎನ್ನದೆ, ಇವ ನಮ್ಮವ' ಎನ್ನುತ್ತ ತಿಳಿವಿನ ಬೀಜಗಳನ್ನು ಬಿತ್ತುವಲ್ಲಿ ಆಸಕ್ತಿ. ಲೋಕದ ಬದುಕಿನ ವ್ಯವಹಾರದ ಸಹಜವಾದ ಚಿತ್ರಣಗಳನ್ನೇ ಕೌದಿಯಂತೆ ಹೆಣೆಯುತ್ತಾರೆ. ಅಷ್ಟೆ ಸಹಜವಾದ ನಿರೂಪಣೆ, ಯಾವ ಧ್ವನಿಯನ್ನು ಈವರೆಗೆ ಮೌನಗೊಳಿಸಲಾಗಿತ್ತೋ ಇಲ್ಲಿ ಸ್ಪಷ್ಟವಾಗಿ ಕೇಳಿಸುತ್ತದೆ. 'ನೋಡಬಾರದು ಚೀಲದೊಳಗನು' – ಪರಿಚಿತ ಸಾಮಾನ್ಯ ವಸ್ತು, ಸಾಮಾನ್ಯ ಪರಿಕರಗಳ ಮೂಲಕವೇ ಕವಿತೆ ಹೆಣ್ಣು – ಗಂಡು ಇಬ್ಬರಿಗೂ ನಿಲ್ಲಿಸಿ ತಮ್ಮ ತಮ್ಮ ನಡೆಯನ್ನು ಮರು ವಿವೇಚನೆಗೆ ತೊಡಗಿಸಿ ಮುಚ್ಚಿಡುವ ವಿವೇಚನೆ, ಬಿಚ್ಚಿಡುವ ಬಯಲು ಇವೆರಡರ ಒಳಗಿದ್ದು ಸಿಗದ ಸಿಕ್ಕುಗಳನ್ನು ಆವರಿಸಿಕೊಳ್ಳುತ್ತದೆ. ಹೆಣ್ಣಿನ ಅಂತರಂಗದ ಜಗತ್ತಿನ ಸಂಗತಿಗಳೇ ಪ್ರತಿಮೆಗಳಾಗುತ್ತ ಆಗುತ್ತ ಕವಿತೆಯೇ ಶೋಧನೆಯ ಚಲನೆಯ ರೂಪಕವಾಗಿಬಿಡುತ್ತದೆ. ಈ ಕವಿತೆ ನಿರ್ಮಿಸುವ ಆವರಣದ ಜೀವನ್ಮುಖಿಯ ಹಿನ್ನೆಲೆಯಲ್ಲಿ ಸ್ತ್ರೀವಾದದ ಕೆಲವು ಅಂಶಗಳನ್ನು ಗಮನಿಸಬಹುದು.

1. ಸ್ತ್ರೀವಾದ ಕುರಿತು ವೈದೇಹಿಯುವರ ಚಿಂತನೆಯುನ್ನು ಸಂದರ್ಶನವೊಂದರಲ್ಲಿ ಅವರು ಹೀಗೆ ಹೇಳುತ್ತಾರೆ. "ನನ್ನ ಪ್ರಕಾರ ಸ್ತ್ರೀವಾದ ಎಂದರೆ ಸ್ತ್ರೀಯಲ್ಲಿನ 'ಅಹಮಸ್ಮಿ' ಎಂಬ ಪ್ರಜ್ಞೆ ಅಸ್ಮಿತೆ. ಅದೊಂದು ಜೀವ-ವಾದ, ವ್ಯಕ್ತಿತ್ವವಾದ. ಪುರುಷರು 'ನಿಮಗಿಂತ ನಾವು ಉತ್ತಮರು, ನೀವು ಎರಡನೆಯವರು ಅಥವಾ ನೀವು ನಮ್ಮ ಅಧೀನ ಜೀವಿಗಳು' ಎಂದು ವರ್ತಿಸಿದಾಗ ಏಳುವ ಸಮಾನತೆಯ ವಾದ. 'ಸಮಾನತೆ' ಎಂಬುದನ್ನು ಬಹಳ ಜಾಗರೂಕತೆಯಿಂದ ಪ್ರಯೋಗಿಸುತ್ತಿದ್ದೇನೆ. ಯಾಕೆಂದರೆ ಸಮಾನತೆ ಸಾಮಾಜಿಕವಾಗಿ ರಾಜಕೀಯವಾಗಿ ಅಥವಾ ಅವಕಾಶಗಳು ಕುರಿತಾಗಿ ಹೊರತು ಜೈವಿಕವಾಗಿ ಅಲ್ಲ. ಜೈವಿಕವಾಗಿ ಹೇಳಬೇಕೆಂದರೆ ನಾವು ಅವರಿಗೆ ಸಮಾನರಲ್ಲ. ಅದಕ್ಕಿಂತ ಹೆಚ್ಚಿಗೆ, ಅವರು ನಮಗೆ ಎಂದಿಗೂ ಸಮಾನರಾಗಲಾರರು. ಹೆಣ್ಣು ಸತ್ಯ ಯಾವತ್ತೂ ವಿಶಿಷ್ಟವೇ. ಅದರ ಚೈತನ್ಯಶೀಲತೆ, ಅಂತಹಶಕ್ತಿ, ಧಾರಣಾ ಗುಣ ಗಂಡುಸತ್ವಕ್ಕೆ ಜನ್ಮ ಜನ್ಮಾಂತರಕ್ಕೂ ಬಾರದು.
2. ಸ್ತ್ರೀವಾದ ಎಂದರೆ ಹೀಗೆ ಹೆಬ್ಬೆಟ್ಟು ಒತ್ತದೆ ಸ್ವ ಪ್ರಜ್ಞೆಯಲ್ಲಿ ದೃಢ ನಿಲ್ಲುವ "ಕಣ್ತೆರೆದ ಕಣ್ಣು". ಅನಾಗರಿಕ ಚಕಮಕಿಗಳಿಲ್ಲದ, ಸೌಹಾರ್ದಯುತವಾಗಿ ಕೈಕೈಹಿಡಿದು ಜೊತೆ ಜೊತೆಗೆ ನಡೆವ ಕನಸಿನೆಚ್ಚರದ ಒಂದು ಮಧುರ ವಾಸ್ತವ ಪ್ರಜ್ಞೆ, ಜೀವಜೀವದ ಜ್ಞಾನ".
3. ತಮ್ಮ ಚಿಂತನೆಗಳ ಮೂಲಕ ಮಹಿಳಾಪರ ಚಿಂತನೆಗಳಿಗೆ ಹೊಸವಿವೇಚನೆಯ ಕಸುವು ನೀಡುತ್ತಿರುವ ಕ್ಷೇವಿಯರ ಗಾಥಿಯರ್ ಅವರು ಹೇಳುವುದು : ಎಲ್ಲಿಯುವರೆಗೆ ಮಹಿಳೆಯರು ಮೌನವಾಗಿರುತ್ತಾರೋ, ಅಲ್ಲಿಯವರೆಗೆ ಅವರು ಚಾರಿತ್ರಿಕವಾಗಿ ಪ್ರಕ್ರಿಯೆಗಳಿಂದ ಹೊರಗೆ ಉಳಿಯುತ್ತಾರೆ. ಆದರೆ ಗಂಡಸರ ಹಾಗೆ ಬರೆಯಲು ತೊಡಗಿದರೆ, ಆಗ ಅವರ ಚರಿತ್ರೆಯನ್ನು ಅನಾಥರ ಹಾಗೆ, ಅಂಜುಮೋರೆ ಹಾಕಿಕೊಂಡು ಪ್ರವೇಶಿಸಬೇಕಾಗುತ್ತದೆ. ತರ್ಕಬದ್ಧವಾಗಿ ನೋಡಿದರೆ ಅದು ಅವರು ತಮ್ಮ ಮಾತಿನ ಮೂಲಕವೇ ಕಲ್ಲೋಲಗೊಳಿಸಬೇಕಾದ ಚರಿತ್ರೆ.

ಇಂತೆಲ್ಲ ಸಮಾನತೆಯ ಹಸಿವಿನ ಅಡಿಪಾಯದ ಮೇಲೆ ಬಂದ ಕಾವ್ಯ ವೈದೇಹಿಯವರದ್ದಾಗಿದೆ. ಮತ್ತೆ ಮತ್ತೆ ಓದಿಸಿಕೊಳ್ಳುವ ಕವಿತೆಗಳು ಅಂತಹದ್ದೊಂದು ಪ್ರಮುಖವಾದ ಕವಿತೆ ನೋಡಬಾರದು ಚೀಲದೊಳಗನು. ಪ್ರತಿ ಓದಿಗೂ ಹೊಸತನ್ನು ದರ್ಶಿಸಿ ಇನ್ನೂ ಆಚೆ ಸುಕ್ಕುಗಳನ್ನು ಸಿಕ್ಕಿಸಿ ಮತ್ತೊಮ್ಮೆ ಓದು ಎಂದು ಹೇಳುವ ಗುಣ ನೋಡಬಾರದು ಚೀಲದೊಳಗನು ಕವಿತೆಗಿದೆ. ಮೂರ್ತ ಮತ್ತು ಅಮೂರ್ತ ಭಾವಕೋಶಗಳನ್ನು ನೇವರಿಸಿ ಅರಳುತ್ತದೆ. ಜಗತ್ತಿನ ಅಸಂಖ್ಯ ಸಾಹಿತಿಗಳು ಹೆಣ್ಣನ್ನು ಕುರಿತು ಬರೆದಾಗಲೂ ಅವರು ನೋಡಿದ್ದು ಮೂರ್ತತೆಯನ್ನಷ್ಟೇ. ಕಂಡದ್ದು ವಸ್ತು ಜಗತ್ತು. ಆದರೆ ಹೆಣ್ಣಿಗೆ ಅವೇ ರೂಪಕಗಳು. ಅಂತರಂಗ ಲೋಕದ ಸಂಗತಿಗಳಿಗೆ, ಭಾವಗಳಿಗೆ ಪ್ರತೀಕಗಳು. ಹೆಣ್ಣನ್ನು ಅರ್ಥೈಸಿಕೊಂಡ ಬಗೆ ಬದಲಾಗಬೇಕಿದೆ ಎಂಬುದನ್ನು ಅಬ್ಬರವಿಲ್ಲದೆ, ಕ್ರಾಂತಿಯ ಉದ್ಘೋಷವಿಲ್ಲದೆ ನುಡಿಯುತ್ತದೆ. ಹೆಣ್ಣಿನ ಭಾವಕೋಶದ ವಸ್ತುಗಳೇ, ಕವಿತೆಯ ಭಾವಕೋಶಗಳಾಗಿ ಭಾವನಾತ್ಮಕವಾಗಿಯೇ, ಹೆಣ್ಣು-ಗಂಡು ಇಬ್ಬರ ಮಿತಿಗಳನ್ನು ಮೀರಿ ವಿವೇಚಿಸಬೇಕಾದ ತಿಳಿವನ್ನು ಹೇಳುತ್ತದೆ.

ಹೆಣ್ಣು ಗಂಡಿನ ಮಧ್ಯದ ಗೆರೆಯನ್ನು ಮೀರಿ ಹರಿಯುವ ಗಂಡು ನಿನ್ನ ಹುಡುಕಾಟ ವ್ಯರ್ಥ. 'ನೋಡಬಾರದು ಚೀಲದೊಳಗನು' ಎಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎದುರಾಗಿಯೇ ನಿನಗೆ ಕಾಣಬಹುದಾದದ್ದನ್ನು ಹೇಳುತ್ತ ಅಥವಾ ಅನಾವರಣಗೊಳಿಸುತ್ತದೆ. ಅದೇ ಹೊತ್ತಿನಲ್ಲಿ ನಿನ್ನಿಂದ 'ನೋಡಲಾಗದು' ಧ್ವನಿಸುತ್ತೆ. ನಿಷೇಧ ಧ್ವನಿಯ ಮೂಲಕವೇ, ನಿನ್ನನ್ನು ನಿಷೇಧಿಸಿದ ಜಗತ್ತು ನನ್ನೊಳಗೆ ಒಂದು ಇದೆ. ಅದು ನನ್ನ ಅಸ್ಮಿತೆ, ಇದನ್ನೇ ಹೆಣ್ಣಿನ ನಿಗೂಢತೆ, ಜಂಭ, ಚಂಚಲೆ, ಮುಂತಾದ ನಿಷೇದಾರ್ಥದ ಅತಿರೇಕದಲ್ಲಿ ಗಂಡು ನೋಡಿದ್ದು. ಗಂಡಿಗೆ ದಕ್ಕಿದ್ದರಾಚೆ ಹೆಣ್ಣು ಚಾಚಿ ಬೆಳೆದರೆ ಅವಳನ್ನು ಅರ್ಥೈಸಿಕೊಂಡದ್ದೇ ಅಥವಾ ಅರ್ಥ ಹಚ್ಚಿದ್ದೇ ಅಂತಿಮವೆನ್ನುವಂತೆ ಗಂಡು ಈವರೆಗೆ ಬಂದಿದ್ದಾನೆ. ಅದು ಗಂಡು ಭಾಷೆ. ಕೆ.ಎಸ್.ನರಸಿಂಹ ಸ್ವಾಮಿ, ದ.ರಾ.ಬೇಂದ್ರೆ ಅವರ ಕಾವ್ಯದಲ್ಲಿ ಬರುವ ಹೆಣ್ಣನ್ನು ಗಮನಿಸಬಹುದು. ಇವು ಕೆಲವು ನಿದರ್ಶನ ಮಾತ್ರ. ಇಂತಹ ಬಹುದೊಡ್ಡ ಚರಿತ್ರೆಯೇ ಇದೆ. ನೋಡಬಾರದು ಎಂದು ಹೇಳಲಾದದ್ದನ್ನೇ ಮತ್ತೆ ಮತ್ತೆ ನೋಡಲಾದ/ಗುವ ಪಡೆ.

ವ್ಯಾನಿಟಿ ಬ್ಯಾಗ್ – ಜಂಭದ ಚೀಲ, ಧಿಮಾಕಿನ ಚೀಲ ಎಂದು ಕರೆಯುವುದುಂಟು. ಜಂಭ ಮತ್ತು ಧಿಮಾಕು ಈ ಎರಡು ಪದಗಳನ್ನು ಪುರುಷ ಕರುಣಿಸಿದ ನಾಮಗಳೇ. ಅವಳ ಅನುಕೂಲತೆಗಾಗಿ ಅವಳೊಂದಿಗೆ ಇರುವ ಚೀಲವೊಂದು ನಿಷೇದಾರ್ಥದ ಪ್ರತೀಕವಾಗಿರುವುದನ್ನು ಗಮನಿಸಬಹುದು.

**ಒಂದು ಕನ್ನಡಿ ಹಣಿಗೆ ಕಾಡಿಗೆ ಕರಡಿಗೆ**
**ಪೆನ್ನು ಪೌಡರು ಕ್ಲಿಪು ಸೆಂಟು**
**ಬಿಳಿ ಹಾಳೆ ಮತ್ತು ನೂಲುಂಡೆ ಇರಬಹುದು**
**ಗುಂಡಿ, ಸೂಜಿ ಮತ್ತು ಅಡಿಕೆ ಓಳು**
**ಇರಬಹುದು ಹುಣುಸೆ ಬೀಜಗಳು!**
**ವ್ಯಾನಿಟಿ ಬ್ಯಾಗಿನಲ್ಲಿ ಬಟಾಣಿಯೇ ಇರಬೇಕೆಂದು**
**ಉಂಟೇ ಯಾರ ರೂಲು**
**ಇದ್ದೀತು ಶುಂಠಿ ಪೆಪರಮೆಂಟು, ಕಂಫಿಟ್ಟು**

**ಒಣಗಿ ರೂಹುಗಳಾದ ಎಳೆ–ಹೂಗಳಿರಬಹುದು**
**ಇರಬಹುದು ಯಾರದೋ ಮನೆ ದಾರಿ ನಕ್ಷೆ**
**ಮರದ ಮುಚ್ಚಿಗೆಯಡಿಯ ಕೆಂಪು ನೆಲದ ತಂಪು**
**ತೇದಷ್ಟು ಸವಿಯದಾ ನೆನಪು**

ಬಯಲುಮಾಡುವರೇ ? ಎಂದು ಕೇಳುತ್ತಲೇ ಕವಿತೆ ವ್ಯಾನಿಟಿ ಬ್ಯಾಗಿನ ಒಳಗಣ ಜಗತ್ತನ್ನು, ಅವುಗಳಿಗೆ ಇರಬಹುದಾದ ಸಾರ್ಥತೆಯ ರೂಹುಗಳನ್ನು ಅಸಂಗತಾ ಕಾರ್ಯ ಕಾರಣ ಸಂಬಂಧಗಳನ್ನು ಸಾವಯವ ಶಿಲ್ಪಾಕೃತಿಯಂತೆ ಕವಿತೆ ಮಂಡಿಸುತ್ತದೆ ಅಥವಾ ಬಯಲುಮಾಡುತ್ತದೆ.

ಚೀಲದಲ್ಲಿರುವ ವಸ್ತುಗಳು ದೇಹ ಮತ್ತು ಮನಸ್ಸಿನ ಸೌಂದರ್ಯ ಪ್ರಜ್ಞೆಯ ಪ್ರತೀಕಗಳು. ಇವುಗಳನ್ನೇ ಅಲ್ಲವೇ ನೀವು ಆಡಿಕೊಂಡು – ಹಂಗಿಸುವ, ಹೆಣ್ಣನ್ನು ಮುದುಡಿಸುವ ಪ್ರಕ್ರಿಯೆಯೇ ನಿರಂತರಗೊಳಿಸಿ ಕೊಂಡು ಬಂದದ್ದು. ನಿರ್ಭೀಡೆಯಿಂದ ಅವುಗಳನ್ನೇ ಈ ಕವಿತೆ ಬಯಲಾಗಿಸಿದೆ. ಆದರೂ ಏನೂ ಧಕ್ಕದು ನಿಮಗೆ. ಅರ್ಥವಾಗದ ಗಣಿತದ ಸಮೀಕರಣದ ಲೆಕ್ಕ. ಮುಖ್ಯವಾದ ಸಂಗತಿಯೆಂದರೆ ಅವಳು ತನ್ನ ಒಳ ಜಗತ್ತನ್ನು ಕಾಪಾಡಿಕೊಂಡು ಬಂದಿರುವುದು ಇಂತಹ ಜುಜುಬಿ ವಸ್ತುಗಳನ್ನೇ ರೂಪಕವಾಗಿಸಿಕೊಂಡು ಎನ್ನುವುದು ಬಹು ಮುಖ್ಯವಿಚಾರ. ಪ್ರತಿಭಾ ನಂದಕುಮಾರ ಅವರ ನಾವು ಹುಡುಗೀಯರೇ ಹೀಗೆ, ಶಶಿಕಲಾ ವೀರಯ್ಯಸ್ವಾಮಿ ಅವರ ಗುಬ್ಬಿ ಮನಿ, ಚ.ಸರ್ವಮಂಗಳ ಅವರ ಗೊಂಬೆ, ಎಚ್.ಎಲ್.ಪುಷ್ಪ ಅವರ ಅಮೃತಮತಿಯ ಸ್ವಗತ – ಕವಿತೆಗಳನ್ನು ನೆನಪುಮಾಡಿಕೊಳ್ಳಬಹುದು. ಲೋಕದ ವ್ಯವಹಾರದಲ್ಲಿ ಭಂಡತನದಲ್ಲಿ ಹೆಣ್ಣು ತನ್ನ ಬಯಕೆಗಳನ್ನು ಆಲೋಚನೆಗಳನ್ನು ಕನಸುಗಳನ್ನು ಈಡೇರಿಸಿಕೊಳ್ಳಲಾಗದ, ಪ್ರದರ್ಶನಗೊಳಿಸಿಕೊಳ್ಳಲು ಇಚ್ಛಿಸದವಳು ಅಂತಹ ಸಂಗತಿಗಳೇ ಅವಳ ಒಳಗೆ ಅಥವಾ ವ್ಯಾನಿಟಿ ಬ್ಯಾಗಿನಲ್ಲಿ "ಅರೆಬರೆದ ಕವನ ತೆವಳುತ್ತಿರಬಹುದು'. ಅವಳ ಅಂತರಂಗದ ಅಲೆ. ಆ ಮೂಲಕ ಅವಳು ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುತ್ತಾಳೆ ಮತ್ತು ಉಳಿಸಿಕೊಳ್ಳುತ್ತಾಳೆ.

ಸಫಲ ಮತ್ತು ವಿಫಲ ಸಂಬಂಧಗಳೋ, ಪ್ರೀತಿ–ಪ್ರೇಮದ ಆವರಣಗಳೋ ಎದುರಾದ ಬದುಕಿನ ಸಂಕೀರ್ಣ ಸ್ಥಿತಿಗಳ ಪಯಣ. ಅರ್ಥಕ್ಕೆ ನಿಂತ ಕನಸು, ಬಯಕೆಗಳು, ಯಾವುದೋ ಹರ್ಷ, ಮತ್ತಾವುದೋ ವೇದನೆ ಸ್ವಂತತೆಯ ಆಳದಲಿ ಆವರಿಸಬಹುದು. ಆದರೆ ಗಂಡಿನ ಆವರಣದಲ್ಲಿ ಉಸಿರುಗಟ್ಟುವ ಅವಳನ್ನು, ಅವನಿಗೆ ನಿಲುಕಲಾರದ ಆವರಣದಲ್ಲಿ ಬೆಳೆಸುತ್ತಲೂ ಇರಬಹುದು. ಅದೆಲ್ಲವನ್ನು ವಿವರಿಸದೆ, ಸಾಕ್ಷೀಕರಿಸದೆ ಅಥವಾ ಯಾವುದರ ಪ್ರಮಾಣ ನಿರೀಕ್ಷಿಸದೆ ನಿಸ್ಸಂಧಿಗ್ಧವಾಗಿ ಕವಿತೆ ಮಾತನಾಡುತ್ತದೆ. ಇದು ನಮ್ಮೆಲ್ಲರ ಒಳ–ಹೊರಗಣ ಸಂಕೀರ್ಣ ಸಂಗತಿಗಳನ್ನು ಎದುರಾಗುತ್ತದೆ. ಚೀಲ ಮತ್ತು ಮನಸ್ಸು ಎರಡು ಕೂಡ ಒಂದೇ ಎಂದು ಖಂಡಿತ ಭಾವಿಸಲಾಗದು. ಹಾಗೆ ಭಾವಿಸುವಿಕೆಯೇ ಅಪ್ರಭುದ್ಧವಾದ ತಿಳಿವು. ಹಾಗೆಂದು ಭಾವಿಸದಿದ್ದಲ್ಲಿ ಖಾಲಿ ಲಕೋಟೆ, ಹೆಸರಿಲ್ಲದ ಫೋಟೋ ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ? ಅದರ ಬೆನ್ನಹತ್ತಿ ಹೋಗಲಾದೀತೆ? ಅಲ್ಲದೆ ಸಿದ್ಧ ಅರ್ಥವೂ ಸರಿಯಾದ ಕ್ರಮವೂ ಅಲ್ಲ. ವಿಭಿನ್ನ ಅರ್ಥ ಸಾಧ್ಯತೆಯನ್ನು ಉಳಿಸುತ್ತದೆ.

ಇಂತೆಲ್ಲದ್ದರ ಕಾರಣವಾಗಿಯೇ 'ನೋಡಬಾರದು ಚೀಲದೊಳಗನು' ಎನ್ನುತ್ತಲೇ 'ಹುಡುಕಿ ತೆಗೆಯಲಾರಿರಿ ಏನನ್ನು' ಎಂದು ಸ್ಪಷ್ಟವಾದ ಆತ್ಮವಿಶ್ವಾಸ ಧ್ವನಿಯೊಂದು ಎದುರು ಎಸೆಯಲಾಗುತ್ತದೆ. ಹುಡುಕಿ ತೆಗೆಯಲಾರಿರಿ ಏನನ್ನು ಎನ್ನುವುದು ಲಿಂಗತ್ವವನ್ನು ಮೀರಿ ಗಂಡು–ಹೆಣ್ಣಿಗೂ ಅನ್ವಯಿಸಬಹುದಲ್ಲವೇ? 'ನನ್ನನಸನ್ ನೀ ಕಾಣೆ' ಎನ್ನುವ ಧೋರಣೆ ಎಲ್ಲ ವ್ಯಕ್ತಿತ್ವದ ಆಳದ ವಿವೇಚನೆ ಆಗಿರಬಹುದು. ಅದನ್ನೆ ಇಲ್ಲಿ ಸ್ತ್ರೀತ್ವದ ಆತ್ಮಗೌರವದ ವಿವೇಚನೆಯನ್ನು ಚಿತ್ರಿಸಲಾಗಿದೆ. ಅದು ಒಬ್ಬೊಬ್ಬರ ವಿಶಿಷ್ಟ ಗುರುತು.ಯಾರೊಬ್ಬರ ಬದುಕನ್ನು, ಮತ್ತಾರೂ ಪ್ರವೇಶಿಸಲಾರರು ಎನ್ನುವ ಅನನ್ಯತೆಯನ್ನು ಕವಿತೆ ಮಂಡಿಸುತ್ತದೆ. ಆ ಮೂಲಕ ಎಲ್ಲರ ವೈವಿಧ್ಯತೆಯ ಸಾಧ್ಯತೆಯನ್ನು, ಬಹುತ್ವವನ್ನು ಕವಿತೆ ಗೌರವಿಸುತ್ತದೆ.

## ಪರಾಮರ್ಶನ ಗ್ರಂಥಗಳು


- **ಚಂದ್ರಶೇಖರ ಪಾಟೀಲ (ಸಂ.) 2017 :** ಸಂಕ್ರಮಣ ಕಾವ್ಯ – ಗಿರಡ್ಡಿ ಗೋವಿಂದರಾಜ್, ಸಿದ್ಧಲಿಂಗ ಪಟ್ಟಣ ಶೆಟ್ಟಿ, ಬೆಂಗಳೂರು ಸ್ವಪ್ನ ಬುಕ್ ಹೌಸ್.
- **ಓ. ಎಲ್. ನಾಗಭೂಷಣ ಸ್ವಾಮಿ (ಸಂ.) (1997) :** ನಮ್ಮ ಕನ್ನಡ ಕಾವ್ಯ – ಹಂಪಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- **ಎಚ್.ಎಸ್. ವೆಂಕಟೇಶಮೂರ್ತಿ (ಸಂ. ) (2001) :** ಶತಮಾನದ ಕಾವ್ಯ ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ ಜೆ.ಸಿ. ರಸ್ತೆ
- **ಬಿ. ಎಂ. ಶ್ರೀ (2001) :** ಇಂಗ್ಲಿಷ್ ಗೀತೆಗಳು, ಮೈಸೂರು ಕಾವ್ಯಾಲಯ ಪ್ರಕಾಶಕರು, ಜಯನಗರ.
- **ಶಾಂತರಸ (ಸಂ.) 2016 :** ಬೆನ್ನ ಹಿಂದಿನ ಬೆಳಕು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.
- **ಪಿ. ಲಂಕೇಶ್ (ಸಂ.) (1993) :** ಅಕ್ಷರ ಹೊಸ ಕಾವ್ಯ : ಬೆಂಗಳೂರು ಪತ್ರಿಕೆ ಪ್ರಕಾಶನ.
- **ನಾಗಣ್ಣ ಕಿಲಾರಿ (2011) :** ಪ್ರೇಮ ಮೀಮಾಂಸೆ ಬೆಂಗಳೂರು ಅಂಕ ಪ್ರಕಾಶನ.


*– 87ನೇ ಪುಟಕ್ಕೆ ಮುಂದುವರೆದುದು*

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಮಕಾಲೀನ ಕನ್ನಡ ಸಾಹಿತ್ಯ

✍ **ಡಾ. ಗಾದೆಪ್ಪ,** ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ವಿಜಯನಗರ ಕಾಲೇಜು–ಹೊಸಪೇಟೆ, ವಿಜಯನಗರ–ಜಿಲ್ಲೆ.

ಸಮಕಾಲೀನ ಪದವು ವರ್ತಮಾನದಲ್ಲಿ ಸಂಭವಿಸುವ ಎನ್ನುವ ಅರ್ಥವನ್ನುಳ್ಳದ್ದು. ಹಾಗಾಗಿ ಸಮಕಾಲೀನ ಸಾಹಿತ್ಯದ ಕುರಿತು ಮಾತನಾಡುವುದೆಂದರೆ ವರ್ತಮಾನದಲ್ಲಿ ಬರೆಯುತ್ತಿರುವ ಸಾಹಿತ್ಯದ ಕುರಿತು ಮಾತನಾಡುವುದು. ಸಾಹಿತ್ಯವನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ನೋಡಲಾಗುತ್ತದೆ. ಒಂದು ಬಾಹ್ಯ, ಮತ್ತೊಂದು ಆಂತರ್ಯ. ವಿಶೇಷವಾಗಿ ಸಮಕಾಲೀನ ಎನ್ನುವ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಅವಲೋಕಿಸುವಾಗ ಸಾಹಿತ್ಯದ ಬಾಹ್ಯ ಸ್ವರೂಪಕ್ಕಿಂತ ಅದರ ಆಂತರಿಕ ಸ್ವರೂಪವನ್ನು ಗ್ರಹಿಸುವುದು ತುಂಬಾ ಮುಖ್ಯ. ಕಾಲದ ಕನ್ನಡಿಯ ಮೂಲಕ ಸೃಜಿಸಲ್ಪಟ್ಟ ಸಾಹಿತ್ಯವು ಸದಾ ಸಮಕಾಲೀನತೆಯಿಂದ ಕೂಡಿರುತ್ತದೆ ಮತ್ತು ಹೊಸ ಹೊಸ ತಿಳುವಳಿಕೆಗಳ ಹುಟ್ಟಿಗೆ, ಹೊಸ ಅರಿವಿನ ನೆಲೆಯ ಶೋಧಕ್ಕೆ ಕಾರಣವಾಗುತ್ತದೆ. ಸಮಕಾಲೀನ ಸಾಹಿತ್ಯವು ಇತಿಹಾಸದಲ್ಲಿ ಒಂದು ನಿರ್ದಿಷ್ಟ ಸಮಯದಿಂದ ಪ್ರಸ್ತುತ ಯುಗದ ಮೂಲಕ ನಿರ್ಮಿಸಲಾದ ಲಿಖಿತ ಕೃತಿಗಳ ಒಂದು ದೊಡ್ಡ ಗುಂಪು. ಈ ಸಾಹಿತ್ಯವು ಕಾಲಘಟ್ಟವನ್ನು ವ್ಯಾಖ್ಯಾನಿಸುತ್ತದೆ, ಜೊತೆಗೆ ಇದು ಒಂದು ನಿರ್ದಿಷ್ಟ ಶೈಲಿ ಮತ್ತು ಬರವಣಿಗೆಯ ಗುಣಮಟ್ಟವನ್ನು ವಿವರಿಸುತ್ತದೆ. ಕೆಲವರು ಈ ಬಗೆಯ ಸಾಹಿತ್ಯವನ್ನು ಹೊಸ ಸಾಹಿತ್ಯದ ವಿಸ್ತರಣೆ ಎಂದು ನೋಡುತ್ತಾರೆ. ಆದರೆ ಇದನ್ನು ತನ್ನದೇ ಆದ ಸಾಹಿತ್ಯ ಯುಗ ಎಂದು ಗುರುತಿಸುವುದು ಒಳಿತು. ಏಕೆಂದರೆ ಸಮಕಾಲೀನ ಎಂದು ಗುರುತಿಸುವ ಸಾಹಿತ್ಯವು ಆಯಾ ಸಂದರ್ಭಕ್ಕೆ ನವೀನತೆಯಿಂದ ಕೂಡಿರುತ್ತದೆ. ಅದು ತನ್ನ ಕಾಲದ ಕಟುವಾಸ್ತವವನ್ನು ವಿಶ್ಲೇಷಿಸುತ್ತಿರುತ್ತದೆ. ಸಮೃದ್ಧ ಜೀವನ ಶೈಲಿಯಿಂದ ಪ್ರಭಾವಿತಗೊಂಡಿರುತ್ತದೆ. ಗತ ಕಾಲದ ಮನಸ್ಸಿನಲ್ಲಿ ಹೊಸ ವಾಸ್ತವವನ್ನು ಅರಳಿಸುತ್ತಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಕನ್ನಡ ಸಾಹಿತ್ಯವನ್ನೂ ಸಹ ನಾವು ಪರಿಶೀಲಿಸಬೇಕಾಗಿದೆ.

ಅಖಂಡವಾದ ಕನ್ನಡ ಸಾಹಿತ್ಯ ಪರಂಪರೆಯ ಹಿನ್ನೆಲೆಯನ್ನು ಗಮನಿಸಿದರೆ, ಲಭ್ಯವಿರುವ ಲಿಖಿತ ದಾಖಲೆಯ ಪ್ರಕಾರ ಕನ್ನಡ ಸಾಹಿತ್ಯಕ್ಕೆ ಸುಮಾರು ಒಂದು ಸಾವಿರ ಒಂದು ನೂರು ವರ್ಷಗಳ ಇತಿಹಾಸ ಇದೆ. ಈಗಾಗಲೇ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದುಕೊಂಡ ಹಿರಿಮೆಯೂ ಕನ್ನಡಕ್ಕಿದೆ. ಇಂತಹ ಹಿರಿಮೆ–ಗರಿಮೆಗೆ ಕಾರಣ ಕನ್ನಡ ಸಾಹಿತ್ಯಕ್ಕಿರುವ ಅಂತಃಸತ್ವವೇ ಎಂದು ಬೇರೆ ಹೇಳಬೇಕಾದ ಅಗತ್ಯವಿಲ್ಲ. ಅದನ್ನು ಮತ್ತಷ್ಟು ಗಟ್ಟಿಗೊಳಿಸಿ, ಮುನ್ನೆಡಸಬೇಕಾದ ಜವಾಬ್ದಾರಿಯು ಕನ್ನಡ ಮನಸ್ಸುಗಳ ಮೇಲಿದೆ. ಏಕೆಂದರೆ ಭೂತವನ್ನು ಆಧರಿಸಿ ಸೃಷ್ಟಿಯಾದ ಸಾಹಿತ್ಯ ವರ್ತಮಾನದೊಂದಿಗೆ ಭವಿಷ್ಯದಲ್ಲಿ ಸಲ್ಲುವಂತಾಗುವ ಗುಣವನ್ನು ಪಡೆದುಕೊಂಡಿದೆ ಎಂಬುದನ್ನು ಮರೆಯುವಂತಿಲ್ಲ. ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಸಾಹಿತ್ಯ ಪರಂಪರೆಯನ್ನು ಅರಿವಿಲ್ಲದವರ ಸಾಹಿತ್ಯ ಸೃಷ್ಟಿ ಅಸಮರ್ಪಕವಾದೀತು ಎಂಬ ಎಚ್ಚರಿಕೆಯ ನಡೆಯನ್ನು ಮರೆಯದೇ ಅರಿಯಬೇಕಿದೆ. ಮನುಷ್ಯನ ಸಮಗ್ರ ಬದುಕಿನ ಬವಣೆಯನ್ನು ಅರ್ಥೈಸಿಕೊಳ್ಳುವ ಸವಾಲು ಸಾಹಿತ್ಯಕ್ಕೆ ಹಿಂದೆ ಇರುವ ಹಾಗೆ ಮುಂದೆಯೂ ಇರಬೇಕಾಗಿದೆ.

ಇಲ್ಲಿ ಮುಖ್ಯವಾಗಿ ಸಮಕಾಲೀನ ಪ್ರಜ್ಞೆಯ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ಪ್ರಾಚೀನ ಸಂದರ್ಭದಿಂದ ಇಂದಿನವರೆಗೂ ಅವಲೋಕಿಸಲಾಗಿದೆ. ಕಾಲಕಾಲಕ್ಕೆ ಪರಿವರ್ತನೆಗೊಂಡ ಸಾಂಸ್ಕೃತಿಕ ಬದುಕು ಸಾಹಿತ್ಯದಲ್ಲಿ ಉಂಟು ಮಾಡಿದ ಬದಲಾವಣೆಗಳ ಹಿನ್ನೆಲೆಯಲ್ಲಿ ಸಮಕಾಲೀನ ಎನ್ನುವ ಪರಿಕಲ್ಪನೆಯನ್ನು ಇಲ್ಲಿ ವಿವೇಚಿಸಲಾಗಿದೆ. ಇಲ್ಲಿ ನಿರ್ದಿಷ್ಟ ನಿದರ್ಶನಗಳಿಗಿಂತ ಒಟ್ಟು ಸಾಹಿತ್ಯಿಕ ಸಂದರ್ಭವನ್ನಿಟ್ಟುಕೊಂಡು ಚರ್ಚೆಯನ್ನು ಬೆಳೆಸಲಾಗಿದೆ. ಕಾಲಘಟ್ಟದ ಸಮಕಾಲೀನತೆಯ ಗ್ರಹಿಕೆಯನ್ನು ಸರಳವಾಗಿಸಲು ಅವುಗಳನ್ನು ಪ್ರತ್ಯೇಕವಾಗಿ ವಿಭಾಗಿಸಿಕೊಳ್ಳಲಾಗಿದೆ.

## ಇಟ್ಟ ಹೆಜ್ಜೆ

ಕನ್ನಡ ಸಮೃದ್ಧವಾದ ಸಾಹಿತ್ಯ ಕೃಷಿಗೆ ಮಾರ್ಗತೋರಿಸಿದ ಲಾಕ್ಷಣಿಕ/ಮೀಮಾಂಸಕನೆಂದರೆ ಶ್ರೀವಿಜಯ. ಕವಿರಾಜ ಮಾರ್ಗಕಾರನ ದಾರಿಯಲ್ಲಿ ನಡೆದ ಪಂಪ, ರನ್ನ, ಪೊನ್ನ ಮುಂತಾದ ಜೈನ ಕವಿಗಳು 10ನೇ ಶತಮಾನದ ವೇಳೆಗೆ ಸಂಸ್ಕೃತ, ಪ್ರಾಕೃತ ಭಾಷೆಯ ಮಹಾಕಾವ್ಯಗಳ ಪ್ರೇರಣೆ–ಪ್ರಭಾವದಿಂದ ಚಂಪೂ ಕಾವ್ಯಗಳನ್ನು ರಚಿಸಿದರು. ಈ ಸಾಹಿತ್ಯವು ರಾಜಾಶ್ರಯ ಹಾಗೂ ಧರ್ಮಾಶ್ರಯಗಳಲ್ಲಿ ಬೆಳೆದು ಬಂದಿದೆ. ಪಂಪ ಒಬ್ಬ ದಾರ್ಶನಿಕ ಕವಿ ಆತನ ಎರಡು ಕೃತಿಗಳು ಬಹಳಮುಖ್ಯವಾದವು. ಕೃತಿಗಳು ಹಳೆಗನ್ನಡದವೇ ಇರಬಹುದು ಆದರೆ ಅವು ಪ್ರತಿಪಾದಿಸುವ ವಿವೇಕ, ಮೌಲ್ಯಗಳು ಸರ್ವಕಾಲೀನವಾಗಿವೆ, ಸಮಕಾಲೀನವಾಗಿವೆ. ಪಂಪನು ತನ್ನ ಆದಿಪುರಾಣದಲ್ಲಿ ಪಂಚಕಲ್ಯಾಣಗಳಲ್ಲಿ ಬದುಕಿನ ಮಗ್ಗಲುಗಳನ್ನು ವಿವರಿಸಿದ್ದಾನೆ(ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲ ಜ್ಞಾನ ಮತ್ತು ಪರಿನಿರ್ವಾಣ ಕಲ್ಯಾಣಗಳು). ಅಂದರೆ "ಆದಿ ಪುರಾಣದಲ್ಲಿ ಅನೇಕ ಭವ ಇಲ್ಲವೇ ಜನ್ಮಗಳ ಮೂಸೆಯಲ್ಲಿ ಅನುಭವ ಕುದಿಗೊಂಡು ಭೋಗದಿಂದ ತ್ಯಾಗಕ್ಕೆ ತೆರಳಿ, ಕೊನೆಯ ಜನ್ಮದಲ್ಲಿ ವೈರಾಗ್ಯ ಪರಿಣತಿಯಿಂದ ತಪೋನಿರತನಾಗಿ ಮುಕ್ತಿಯನ್ನೂ ಕೇವಲ ಜ್ಞಾನವನ್ನೂ ಪಡೆದ ಮೊದಲನೆಯ ತೀರ್ಥಂಕರ ಆದಿದೇವನಾದ ಮನುಜನ ಜನ್ಮಯಾತ್ರೆಯ, ಪರಮಸಿದ್ಧಿಯ ಕಥೆಯಿದೆ" (ರಂ. ಶ್ರೀ. ಮುಗಳಿ ಸಮಗ್ರ ಸಾಹಿತ್ಯ, ಸಂ.2., 2013.105) ಎಂದಿದ್ದಾರೆ. ಹಾಗೆಯೇ ವಿಕ್ರಮಾರ್ಜುನ ವಿಜಯದಲ್ಲಿ ಎರಡು ಸಾಮಾಜಿಕ ತಲ್ಲಣಗಳನ್ನು ಗಮನಿಸಬಹುದು ವರ್ಣ, ಜಾತಿಯಿಂದ ಉಂಟಾದ ವೈಯಕ್ತಿಕನೆಲೆ ದುರಂತ, ಎರಡನೆಯದು ಪ್ರಭುತ್ವ ನೆಲೆಯ ಯುದ್ಧದಿಂದ ಉಂಟಾಗುವ ದುರಂತವನ್ನು ಹೇಳಿದ್ದಾನೆ. ಉದಾ: ಮಹಾಭಾರತ ಯುದ್ಧನಡೆದ ಮೇಲೆ ಉಳಿದವರ ಸಂಖ್ಯೆ ಎಷ್ಟು ? ಬೆರಳೆಣಿಕೆಗೆ ಸಿಗುವಷ್ಟು. ಆದರೆ ಸತ್ತವರ ಸಂಖ್ಯೆ ಎಷ್ಟು ? ಎಂದು ಯೋಚಿಸಿದರೆ ಭಯವೆನಿಸುತ್ತದೆ. ಯುದ್ಧ ನಡೆದಾಗ ಹೆಚ್ಚಿನ ಪ್ರಮಾಣದಲ್ಲಿ ಯುವಕರು ಸಾವಿಗಿಡಾಗುತ್ತಾರೆ. ಇವರು ಕೆಳಸಮುದಾಯದವರು, ಬಡವರು, ದುಡಿಯುವ ವರ್ಗದವರು. ಈ ಸಾವುಗಳಿಂದ ಅವಲಂಬಿತ ಕುಟುಂಬಗಳು ಎದುರಿಸುವ ಪರಿಣಾಮಗಳು ಅಸಂಖ್ಯಾತವಾದವು. ಇವು ಪಂಪನ ಕಾಲದಲ್ಲಿ ಮಾತ್ರ ನಡೆದ ದುರಂತವಲ್ಲ. ಸಮಕಾಲೀನ ದುರಂತವು ಹೌದು. (ಇದನ್ನು ವಿವರಿಸಿದರೆ ಸಮಕಾಲೀನ ಸಂದರ್ಭದಲ್ಲಿ ನಾವು ದೇಶದ್ರೋಹಿಗಳು ಆಗಬಹುದು.) ಆದರೂ ಮುಂದಿನ ಪೀಳಿಗೆಗೆ ತಿಳಿಸಬೇಕಾದ ಕರ್ತವ್ಯವನ್ನು ಸೃಜನಶೀಲ ಕವಿಗಳು, ಸಂಶೋಧಕರು ಮುಂತಾದವರು ಮಾಡಿದ್ದಾರೆ, ಮಾಡುತ್ತಿದ್ದಾರೆ. ಅಂದರೆ ಚರಿತ್ರೆಯ ಅಭ್ಯಾಸದ ಮುಖೇನ ಮತ್ತು ವರ್ತಮಾನದ ಅನುಭವದೊಂದಿಗೆ

ISSN : 2249-2429 RNI REG.NO.KARKAN/2011/38712

ಸೃಷ್ಟಿಯಾಗುವ ಸಾಹಿತ್ಯವು ಎಷ್ಟೇ ಪ್ರಾಚೀನವಾದರೂ ಅದು ಸಮಕಾಲೀನವಾಗುತ್ತದೆ. 11ನೇ ಶತಮಾನಕ್ಕಾಗಲೇ ಕನ್ನಡದಲ್ಲಿ ಶತಕ ಸಾಹಿತ್ಯವು ಉಗಮವಾಯಿತು. ಈ ಶತಕ ಸಾಹಿತ್ಯವು 'ಸಾಹಿತ್ಯವನ್ನು ಕಠಿಣತೆಯಿಂದ ಸರಳತೆಗೆ ಒಯ್ಯುವ ಮತ್ತು ಅರಮನೆ ಮತ್ತು ಪಂಡಿತರಿಗೆ ಮಾತ್ರ ಸೀಮಿತವಾಗದೆ, ಜನಸಾಮಾನ್ಯರ ಮನೆ ಮತ್ತು ಮನಗಳಿಗೂ ಮುಟ್ಟಿಸುವ ಸದುದ್ದೇಶದಿಂದಲೇ ಶತಕ ಸಾಹಿತ್ಯ ಕೃತಿಗಳ ರಚನೆಯಾದವು'. ಹಾಗೆಯೇ ಕವಿಗಳು ಆಧ್ಯಾತ್ಮಿಕ ಮೌಲ್ಯಗಳತ್ತ ಜನರ ಮನಸ್ಸನ್ನು ಸೆಳೆದು ಅದರಲ್ಲಿ ನೆಲೆಗೊಳಿಸುವ ಮೂಲಕ ಸಾಹಿತ್ಯದ ಸಾರ್ಥಕತೆಯನ್ನು ಸ್ಥಾಪಿಸುವ ಬಯಕೆಯಿದೆ ಎಂಬುದನ್ನು ಗಮನಿಸಬಹುದು.

12ನೇ ಶತಮಾನದ ಮೊದಲ ದಶಕದಲ್ಲಿ ವಚನ ಸಾಹಿತ್ಯ ಆರಂಭವಾಯಿತು. ಈ ಸಾಹಿತ್ಯವು ಭಾಷೆ, ವಸ್ತು, ಛಂದಸ್ಸು ಮುಂತಾದ ಹಳೆಗನ್ನಡದ ಕವಚಗಳನ್ನು ಕಳಚಿ ಜಗತ್ತಿಗೆ ಮಾದರಿಯಾಗಬಹುದಾದ ಮಾನವೀಯ ಮೌಲ್ಯಗಳನ್ನು ಸಾರುವ ಸಾಹಿತ್ಯವನ್ನು ನೀಡಿತು. ಪಂಪನು "ಮಾನವ ಕುಲಂ ತಾನೊಂದೆವಲಂ" ಎಂಬ ಸಂದೇಶವಿತ್ತರೆ. ಬಸವಾದಿಶರಣರು ಜಾತಿ–ಮತ ಮಾತ್ರವಲ್ಲದೆ ಶತಶತಮಾನಗಳಿಂದ ಸಮಾಜದಲ್ಲಿ ನೆಲೆನಿಂತ ಆರ್ಥಿಕ, ಲಿಂಗ, ರಾಜಕೀಯ ಮುಂತಾದ ಅಸಮಾನತೆಯ ವಿರುದ್ಧ ಸಮರ ಸಾರಿದರು. ಬಸವಣ್ಣನವರ ಒಂದು ವಚನವನ್ನು ಗಮನಿಸಬಹುದು.

**ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ**
**ಇವ ನಮ್ಮವ, ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ**
**ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ**

ಎನ್ನುವ ಮಾತುಗಳು ಸರ್ವಕಾಲೀಕವಾದವು, ಸಮಕಾಲೀನ ವಾದವುಗಳು. ಆದರೆ ವಚನಕಾರರು ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರಕ್ಕೆ ಬಲಿಯಾದರು. ಹೀಗಾಗಿ ವಚನ ಸಾಹಿತ್ಯ ಸುಮಾರು ಮೂವತ್ತೈದು ವರ್ಷಗಳಿಗೆ ತನ್ನ ವೈಭವವನ್ನು ಕಳೆದುಕೊಳ್ಳುವಂತಾಯಿತು. ಸರಿ ಸುಮಾರು ಅದೇ ಕಾಲಕ್ಕೆ ಸೃಷ್ಟಿಯಾದ ಕಾಲಜ್ಞಾನ ಸಾಹಿತ್ಯವು ವರ್ತಮಾನದ ತಲ್ಲಣಗಳೊಂದಿಗೆ ಭವಿಷ್ಯದ ಪರಿಣಾಮವನ್ನು ಅಭಿವ್ಯಕ್ತಿಸಿದೆ. ಮುಂದೆ 14ನೇ ಶತಮಾನದಲ್ಲಿ ಆರಂಭವಾದ ವಿಜಯನಗರ ಸಾಮ್ರಾಜ್ಯದ ಅರಸರ ಉದಾರವಾದ ಪ್ರೋತ್ಸಾಹದಿಂದ ರಗಳೆ, ಕೀರ್ತನೆ, ಷಟ್ಪದಿ, ಸಾಂಗತ್ಯ ಮುಂತಾದ ಛಂದಸ್ಸಿನಲ್ಲಿ ಸಮೃದ್ಧವಾದ ಕನ್ನಡ ಸಾಹಿತ್ಯ ಸೃಷ್ಟಿಯಾಯಿತು. 'ಕುಲ ಕುಲವೆಂದು ಹೊಡೆದಾಡದಿರಿ...' ಎಂದು ಕನಕದಾಸರು ಸಾರಿದ್ದಾರೆ, ಪುರಂದರದಾಸರು 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ..' ಎಂದು ಬದುಕಿನ ಮೌಲ್ಯವನ್ನು ಸಾರಿದವರು. ಇವು ಸರ್ವಕಾಲಕ್ಕೂ ಸಲ್ಲುವ ಸಂದೇಶಗಳಾಗಿವೆ. ಈ ಹಿನ್ನೆಲೆಯಲ್ಲಿ ಕರ್ಣಾಟಕ ಭಾರತ ಕಥಾಮಂಜರಿ, ಸರ್ವಜ್ಞನ ವಚನಗಳು ಹಾಗೂ ಇತರೆ ಕೃತಿಗಳನ್ನು ಪರಿಶೀಲಿಸಬಹುದಾಗಿದೆ. ಆಧುನಿಕ ಸಾಹಿತ್ಯಕ್ಕೆ ಹೋಲಿಸಿದರೆ ಈ ಸಾಹಿತ್ಯದ ಸ್ವರೂಪದಲ್ಲಿ ಆದ ಬದಲಾವಣೆ ವೇಗವು ಮಂದಗತಿಯದು. ಆದರೆ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ಪ್ರೇರಣೆಯಿಂದ ಆರಂಭವಾದ ಆಧುನಿಕ ಸಾಹಿತ್ಯವು ಹಲವಾರು ಬಗೆಯ ಕ್ರಾಂತಿಕಾರ ಬದಲಾವಣೆಗೆ ಒಳಗಾಯಿತು. ಹೊಸಗನ್ನಡ ಸಾಹಿತ್ಯವು ಕಳೆದ ಒಂದು ಶತಮಾನದಲ್ಲಿಯೇ ವಿಭಿನ್ನವಾದ ರೂಪದ ತಿರುವುಗಳನ್ನು ಅನುಸರಿಸಿ ಮುನ್ನಡೆಯುತ್ತಿದೆ.

## ನಿಂತ ಹೆಜ್ಜೆ

19ನೇ ಶಮಾನದಿಂದ ಪ್ರಸ್ತುತ ಸಂದರ್ಭದವರೆಗಿನ ಸಾಹಿತ್ಯವನ್ನು ಸಾಹಿತ್ಯ ಚರಿತ್ರೆಕಾರರು ನವೋದಯ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ನವ್ಯ ಸಾಹಿತ್ಯ, ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ, ಮಹಿಳಾ ಸಾಹಿತ್ಯ, ಮುಸ್ಲಿಂ ಸಂವೇದನೆಯ ಕನ್ನಡ ಸಾಹಿತ್ಯ ಮುಂತಾದ ಸಾಹಿತ್ಯ ಚಳುವಳಿಗಳು ಎಂದು ವರ್ಗೀಕರಿಸಿಕೊಂಡಿದ್ದಾರೆ. ವಸಾಹತುಶಾಹಿ ಜಾರಿಗೆ ತಂದ ಶಿಕ್ಷಣದ ಪರಿಣಾಮದಿಂದಾಗಿ ಸುಶಿಕ್ಷಿತ ವರ್ಗವೊಂದರ ಉಗಮವಾಗಿತ್ತು. ಈ ಮಧ್ಯಮ ವರ್ಗವು ತನ್ನ ಮೌಲ್ಯಗಳನ್ನು, ಆದರ್ಶಗಳನ್ನು ಪ್ರಸಾರ ಮಾಡಲು ಸಾಹಿತ್ಯವನ್ನೂ ಒಂದು ಮಾಧ್ಯಮವಾಗಿ ಮಾಡಿಕೊಂಡು ಸಾಗಿತು. ಕುವೆಂಪು ಅವರು 'ವಿಶ್ವಮಾನವ ಸಂದೇಶ'ವನ್ನು ಸಾರಿದರೆ. ಸಿದ್ಧಯ್ಯ ಪುರಾಣಿಕರು 'ಮೊದಲು ಮಾನವನಾಗು' ಎನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ. ಬಂಡಾಯ ಸಾಹಿತ್ಯದ ಕಾಲಕ್ಕಾಗಲೇ ಎಲ್ಲಾ ಶೋಷಿತ ಸಮುದಾಯಗಳು ಶಿಕ್ಷಣ ಪಡೆಯುವುದರೊಂದಿಗೆ ತಮ್ಮ ತಮ್ಮ ಸಮುದಾಯದ ನೋವು–ನಲಿವಿನ ಸಂಗತಿಗಳನ್ನು ದಾಖಲಿಸುವ ಪ್ರಯತ್ನದ ಭಾಗವಾಗಿ ಸಮೃದ್ಧವಾದ ಸಾಹಿತ್ಯವು ಹೊರಬಂದಿದೆ. **ಉದಾ :** ದಲಿತ ಸಂವೇದನೆ, ಮಹಿಳಾ ಸಂವೇದನೆ, ಮುಸ್ಲಿಂ ಸಂವೇದನೆ ಮುಂತಾದ ಸಂವೇದನಾಶೀಲ ಬರಹಗಳನ್ನು ಗಮನಿಸಬಹುದು. ಸಮಕಾಲೀನ ಸಂದರ್ಭದಲ್ಲಿ ಅನೇಕ ಬರಹಗಾರರು ನೇರವಾಗಿ ಜನತೆಯೊಂದಿಗೆ ಬೆಸೆದುಕೊಳ್ಳುವ ಮೂಲಕ ಸಾಹಿತ್ಯದ ಪ್ರಮುಖ್ಯತೆಯನ್ನು ಎತ್ತಿಹಿಡಿಯುತ್ತಿದ್ದಾರೆ. ಬರಹಗಾರರು ತಮ್ಮ ಆತ್ಮತೃಪ್ತಿಗಾಗಿ ಬರೆಯುತ್ತಿಲ್ಲ. ಜನ ಸಮುದಾಯಕ್ಕೆ ತಾವು ಬರೆದದ್ದು ತಲುಪಬೇಕು, ಜನ ಮನ್ನಣೆ ಗಳಿಸಬೇಕು, ಜನಸಮುದಾಯಗಳ ಬದುಕು ಹಸನಗೊಳ್ಳಬೇಕೆಂಬ ಕಳಕಳಿಯ ಪ್ರಧಾನವಾಗಿದೆ. ಈ ನಿಟ್ಟಿನಲ್ಲಿ ಸಾಹಿತ್ಯ ಹೆಜ್ಜೆ ಇಡುತ್ತಿರುವುದನ್ನು ಸಾಹಿತ್ಯದ ಅನನ್ಯತೆಗೆ ಕಾರಣವಾಗಿದೆ. ಸಮಕಾಲೀನ ಮತ್ತು ಮುಂದಿನ ಭವಿಷ್ಯದಲ್ಲಿ ಸಾಹಿತ್ಯ ಸಮುದಾಯಗಳ ಬಯಕೆಗಳನ್ನು ತಣಿಸಿ, ಓದುಗರಲ್ಲಿ ಹೊಸ ಹೊಸ ಆಲೋಚನೆಗಳನ್ನು, ಒಳನೋಟಗಳನ್ನು, ಕೌಶಲ್ಯಗಳನ್ನು ಗಟ್ಟಿಗೊಳ್ಳುವಂತೆ ಮಾಡಿ ಸಹೃದಯರನ್ನು ಬೆಳೆಸಬೇಕಾಗಿದೆ.

## ಇಡುತ್ತಿರುವ ಹೆಜ್ಜೆ

ಸಮಾಜದಲ್ಲಿ ಮಡುಗಟ್ಟಿನಿಂತಿರುವ, ನಾವು ಎದುರಿಸುತ್ತಿರುವ ಸಮಕಾಲೀನ ಸಮಸ್ಯೆ ಮತ್ತು ಸವಾಲುಗಳು ಹಲವು. ಕೋಮು ಸಂಘರ್ಷ, ಜಾತಿಭೇಧ–ಅಸ್ಪೃಶ್ಯತೆ, ಲಿಂಗ ತಾರತಮ್ಯ, ಮೂಢನಂಬಿಕೆ, ಬಡತನ, ನಿರುದ್ಯೋಗ ವೃದ್ಧರ ಸಮಸ್ಯೆಗಳು, ಭ್ರಷ್ಟಾಚಾರ, ಸಂಕ್ರಾಮಿಕ ರೋಗಗಳು, ಖಾಸಗಿ ವಲಯದಲ್ಲಿ ಮೀಸಲಾತಿ ಮುಂತಾದವು. ಇವೆಲ್ಲವನ್ನು ಒಳಗೊಂಡಂತೆ ಸಾಹಿತ್ಯದ ಸೃಷ್ಟಿಯಾಗಿದೆ. ಇಂತಹ ಸಮಸ್ಯೆಗಳನ್ನು ಹೋಗಲಾಡಿಸುವ ಮೂಲಕ ಜನತೆಯ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿ ಘನತೆಯಿಂದ ಬದುಕು ಸಾಗಿಸುವುದಕ್ಕೆ ಬೇಕಾದ ಒಳಹುಗಳನ್ನು, ಮಾರ್ಗೋಪಾಯಗಳನ್ನು ತೋರುಸುವುದರ ಕಡೆಗೆ ನಡೆದಿದೆ. ಆದರೆ ಸಮಕಾಲೀನ ಸಂದರ್ಭದಲ್ಲಿ ಈ ಎಲ್ಲಾ ಸಮಸ್ಯೆಗಳನ್ನು ಮತ್ತಷ್ಟು ಸಂಕೀರ್ಣಗೊಳಿಸುವ ಹಾಗೂ ಅವುಗಳನ್ನು ಎದುರಿಸಲು, ನಮಗೆ ಇರುವ ಸ್ವಾಯತ್ತತೆಯನ್ನು ಕಸಿದುಕೊಳ್ಳುವಂತೆ ಗೋಚರಿಸುವ ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಕೈಗಾರೀಕರಣದಂತಹ ವಿದ್ಯಮಾನಗಳು ಸವಾಲಿನಂತಿವೆ. ಮನುಕುಲದ ನಾಶಕ್ಕೆ ಕಾರಣವಾಗಬಲ್ಲ ಪರಿಸರ ಸಮಸ್ಯೆಗಳೂ ನಮ್ಮ ಮುಂದಿವೆ. ಈ ಎಲ್ಲಾ ಸಮಸ್ಯೆಗಳು ಹಲವು ಶತಮಾನಗಳಿಂದ ಬೆಳೆದು ಬಂದಿದ್ದು, ಸಮಕಾಲೀನ ಸಂದರ್ಭದಲ್ಲಿ ಅವುಗಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಆಯಾಮಗಳಿವೆ. ಈ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಅದರ ಮೂಲ ಬೇರುಗಳನ್ನು ಗುರುತಿಸಿ ಅವುಗಳಿಗೆ ಪರಿಹಾರಗಳನ್ನು ಹುಡುಕಲು ಆಯಾ ವೃತ್ತಿಯಲ್ಲಿರುವವರು ಸೃಷ್ಟಿಸಿದ ಸಾಹಿತ್ಯದ ಗಮಿಸಬೇಕಾದ ಅನಿವಾರ್ಯತೆ ಇದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧನಗಳು ಸಾಹಿತ್ಯ ಕೃತಿಗಳ ಹಿರಿಮೆ ಗರಿಮೆಗಳನ್ನು ಎತ್ತಿ ಹಿಡಿಯಲು ಕಾರಣವಾಗಿರುವಂತೆ ಅವನತಿಗೂ

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪೂರಕವಾಗಿವೆ. ಸಮಕಾಲೀನ ಸಂದರ್ಭದಲ್ಲಿ ಮಾನವನಿಗೆ ಪುಸ್ತಕಗಳನ್ನು ಓದಲು–ಬರೆಯಲು ಅಭ್ಯಾಸ ಮಾಡಲು ಬೇಕಾಗಿರುವ ಸಮಯ, ಬಿಡುವು, ಏಕಾಗ್ರತೆ ಇಲ್ಲದಂತಾಗಿದೆ. ಬದುಕಿನ ನಿಷ್ಠುರ ವಾಸ್ತವತೆಯ ಎದುರಿಗೆ ವಿಶ್ರಾಂತಿಗೆ ಅವಕಾಶವೇ ಇಲ್ಲ. ಎಲ್ಲದರಲ್ಲೂ ಆತುರ, ಅತಿ ಸುಲಭವಾಗಿ ದೊರೆಯಬೇಕು ಎನ್ನುವ ಅಭಿಲಾಷೆ. ಹೀಗಾಗಿ ಸೃಷ್ಟಿಯಾದ ಸಾಹಿತ್ಯದ ಸತ್ವವು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಮಾತ್ರವಲ್ಲದೆ ಒಂದು ಕೃತಿಯನ್ನು ಓದುವ ಅದನ್ನು ಮೌಲ್ಯಮಾಪನಕ್ಕೆ ಒಳಪಡಿಸುವಲ್ಲಿ ನಿಷ್ಪಕ್ಷಪಾತವಾದ ವಿಮರ್ಶೆ, ಸಂಶೋಧನಾ ದೃಷ್ಟಿಕೋನವಿಲ್ಲದಂತಾಗಿದೆ.

ಕನ್ನಡ ಭಾಷೆಯಲ್ಲಿಗ ಸುಮಾರು ಜನರು ಬರೆಯುತ್ತಿದ್ದಾರೆ. ಕನ್ನಡಿಗರ ಹೊಸ ಒಲವು ಕನ್ನಡ ಚಿಂತನೆಯ ಮಾತಾಗಿದೆ. ಸಮಕಾಲೀನ ಸಂದರ್ಭದಲ್ಲಿ ಮಹಿಳೆ ಮತ್ತು ತೃತೀಯ ಲಿಂಗಿಗಳನ್ನು ಒಳಗೊಂಡಂತೆ, ಬಂಡವಾಳಶಾಹಿ ಧೋರಣೆ, ಭಯೋತ್ಪಾದನೆ, ಪರಿಸರ ನಾಶ, ವಿಘಟಿತ ಕುಟುಂಬ ಮತ್ತು ದಾಂಪತ್ಯ, ಮಧ್ಯಮ ವರ್ಗದ ಜನರ ಮತ್ತು ಸಮಸ್ತ ರಾಜಕಾರಣಿಗಳ ಅವಕಾಶವಾದಿತನ, ಕೊರೋನಾ ಕಾಲದ ಸಂಚಲನ, ರೈತರ ಆತ್ಮಹತ್ಯೆ ಮತ್ತು ಇನ್ನೂ ಅನೇಕ ವಿಷಯ ವಸ್ತುಗಳನ್ನು ಆಧರಿಸಿ ವಿಭಿನ್ನ ಮಾದರಿಯಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತಿದೆ. ಆದರೆ ಹೆಚ್ಚಿನ ಸಂಖ್ಯೆಯ ಬರಹಗಾರರು ಯಾವುದೇ ಹಳೆ ಶೈಲಿಯನ್ನು ಅನುಸರಿಸದೇ, ತಮ್ಮದೇ ಶೈಲಿಯನ್ನು ಕಂಡುಕೊಳ್ಳುತ್ತಿದ್ದಾರೆ. ಈಗ ಯಾವುದೇ ರೀತಿಯ ಸಿದ್ಧ ಮಾದರಿಗಳು ಅಷ್ಟಾಗಿ ಕಂಡುಬರುವುದಿಲ್ಲ. ಹೊಸ ಹೊಸ ಪ್ರಯೋಗಗಳಿಗೆ ಕನ್ನಡದಲ್ಲಿ ಈಗ ಹುಲುಸಾದ ಸಾಹಿತ್ಯವಿದೆ. ಕನ್ನಡ ಸಾಹಿತ್ಯವು ಈಗ ಬರೀತತ್ವಗಳ ಘೋಷಣೆಗಳಾಗಿ ಉಳಿದಿಲ್ಲ; ಬದುಕಿನ ದಿಕ್ಕನ್ನು ಬದಲಿಸುವ ಸಾಧನವಾಗಿದೆ.

ಸಾಹಿತ್ಯ ಕೃತಿಗಳನ್ನು ಓದುವವರ ಕೊರತೆ ಇದೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಇದಕ್ಕೆ ಹಲವಾರು ಕಾರಣಗಳಿವೆ. ನಮ್ಮತನವನ್ನು ನಾವು ನಮ್ಮ ಭಾಷೆಯಲ್ಲಿ ತೋರಿಸಬೇಕಾದ ಅಗತ್ಯವಿದೆ. ಹಾಗೆಯೇ ಸಾಹಿತ್ಯದಲ್ಲಿ ಬೆರೆತು ಹೋಗಿರುವ ರಾಜಕೀಯವನ್ನು ಪರಿಷ್ಕರಿಸಬೇಕಿದೆ. ಇದು ಸಾಹಿತ್ಯ ಸೃಜಿಸುವ ಮತ್ತು ಓದುಗರಿಗೂ ಸಂಬಂಧಿಸಿದ್ದು. ಕೆಲವು ಬರಹಗಾರು ಮತ್ತು ಪ್ರತಿಕ್ರಿಯೆ ಮಾಡುವವರು ಮತಧರ್ಮ ಮತ್ತು ರಾಜಕೀಯ ಪಕ್ಷಗಳಿಂದ ಗುರುತಿಸಿಕೊಂಡಿದ್ದಾರೆ. ಮತೀಯ ದೃಷ್ಟಿಕೋನದಿಂದ ಸಾಹಿತ್ಯವನ್ನು ನೋಡುವ, ಗ್ರಹಿಸುವ, ಅಭಿವ್ಯಕ್ತಿಸುವ ಮನಸ್ಥಿತಿ ಹೊರಬರಬೇಕಿದೆ. ಸರ್ವಜನಾಂಗದ ಒಳಿತಿಗಾಗಿ ಬರಹಗಾರನ ಮನ ಮಿಡಿಬೇಕಿದೆ.

ಸಮಕಾಲೀನ ಸಾಹಿತ್ಯವು ಮಾನವೀತೆಯ ಸಾಂಪ್ರದಾಯಿಕ ತಿಳುವಳಿಕೆಗಳನ್ನು ಮೀರಿ ನಿಲ್ಲಬೇಕಾಗಿದೆ. ಈ ನಿಟ್ಟಿನಲ್ಲಿ ಒಂದಷ್ಟು ಪ್ರಯತ್ನಗಳು ನಡೆಯುತ್ತಿವೆಯಾದರೂ ಅದರ ವಿಸ್ತಾರತೆಯು ಇನ್ನಷ್ಟು ಬದಲಾಗಬೇಕಾದ ಅಗತ್ಯವಿದೆ. ಏಕೆಂದರೆ ಮಾನವೀಯತೆ ಎನ್ನುವುದು ಎಲ್ಲಾ ಕಾಲಕ್ಕೂ, ಎಲ್ಲಾ ಸಂದರ್ಭಕ್ಕೂ, ಎಲ್ಲಾ ಪ್ರದೇಶಕ್ಕೂ ಒಂದೇ ಆಗಿದ್ದಾಗಲೂ ಅದರ ಸಾಂಸ್ಕೃತಿಕ ನೆಲೆಗಳು ಪರಿವರ್ತನೆಗೊಳ್ಳುತ್ತಿರುತ್ತವೆ. ಇದನ್ನು ಇನ್ನಷ್ಟು ವಿಸ್ತರಿಸಿ ಹೇಳುವುದಾದರೆ ನೇರವಾದ ಯುದ್ಧಪೀಡಿತ ಪ್ರದೇಶದಲ್ಲಿನ ಮಾನವೀಯತೆಗೂ ಯಾವುದೇ ಬಾಹ್ಯ ಶತ್ರುಗಳಿಲ್ಲದೆ, ನೇರ ಯುದ್ಧದ ಪ್ರದೇಶವಲ್ಲದ ಆಂತರಿಕ ಸಂಘರ್ಷಗಳಿಂದ ಕೂಡಿರುವ ಪ್ರದೇಶದ ಮಾನವೀಯತೆಗೂ ತುಂಬಾ ವ್ಯತ್ಯಾಸವಿದೆ. ಈ ವ್ಯತ್ಯಾಸದ ಸಣ್ಣ ಸಣ್ಣ ಗೆರೆಗಳನ್ನು ಗುರುತಿಸುವ ಕೆಲಸ ಸಾಹಿತಿಗಳಿಂದ ಆಗಬೇಕು. ಅದು ಕೇವಲ ಯುದ್ಧ ಮಾತ್ರವಾಗಿರದೆ ಯಾವುದೇ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸಂದರ್ಭವಾದರೂ ಸರಿಯೇ. ಅಲ್ಲಿನ ಸೂಕ್ಷ್ಮತೆಗಳನ್ನು ಸಾಹಿತಿಯಾದವನು ಗುರುತಿಸಬೇಕು. ಈ ಸೂಕ್ಷ್ಮತೆ ವರ್ತಮಾನದ ಬದುಕಿಗೆ ತೀರಾ ಅಗತ್ಯವಾಗಿದೆ. ಮಾನವೀಯತೆಯೆಂಬ ಸೆರಗಿನಲ್ಲಿಯೇ ನಾವಿಂದು ಅಮಾನವೀಯತೆಯನ್ನು ಕಟ್ಟಿಕೊಂಡು ನಡೆದಾಡುತ್ತಿದ್ದೇವೆ. ಅದಾಕೋ ನಮ್ಮಗಳ ಪ್ರಜ್ಞೆಗೆ ತಾಕುತ್ತಿಲ್ಲ. ಆ ತಾಕಿಸುವ ಕೆಲಸವನ್ನು ಸಾಹಿತ್ಯ ಮಾಡಬೇಕಿದೆ.

ಸಾಹಿತ್ಯವು ಯಾವಾಗಲೂ ಅಸ್ವಸ್ಥತೆಯಿಂದ ಬಳಲಬಾರದು. ವಾಸ್ತವವನ್ನು ಹೊಸ ಹೊಸ ನೆಲೆಗಟ್ಟುಗಳಲ್ಲಿ ಅರ್ಥೈಸಬೇಕು. ಸಾಂಪ್ರದಾಯಿಕತೆಗೆ ಮುಖಾಮುಖಿಯಾಗಿಸಬೇಕು. ಅನುಸಂಧಾನ ಅಸಾಧ್ಯವಾದಾಗ ಸಂಘರ್ಷಗಳು ಏರ್ಪಟ್ಟರೂ ಸಂಘರ್ಷದಿಂದ ಹೊರಹೊಮ್ಮುವ ಹೊಸತನವನ್ನು ದಿಟ್ಟತೆಯಿಂದ ಅಭಿವ್ಯಕ್ತಿಸಬೇಕು. ಅಂತಹ ಅಭಿವ್ಯಕ್ತಿಗೆ ಬಾಹ್ಯ ವಾತಾವರಣವೂ ಸಹಕರಿಸುತ್ತಿರಬೇಕು. ಇದರ ಒಂದಷ್ಟು ಕೊರತೆ ಇಂದು ನಮ್ಮ ಮುಂದಿದೆ ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ಆದಾಗ್ಯೂ ಸೈದ್ಧಾಂತಿಕ ಬದ್ಧತೆ, ಸೈದ್ಧಾಂತಿಕ ಒಳನೋಟ, ಸಾಮಾಜಿಕ ಬದ್ಧತೆಯನ್ನು ವಿಸ್ತರಿಸುವ ಕಾರ್ಯವನ್ನು ಸಾಹಿತ್ಯ ಮಾಡಬೇಕು. ಆ ನಿಟ್ಟಿನಲ್ಲಿ ವರ್ತಮಾನದ ಸಾಹಿತ್ಯ ಸಾಗುತ್ತಿದೆಯಾದರೂ ಅದರ ಪ್ರಮಾಣವು ಕೊಂಚ ಕಡಿಮೆಯಾಗುತ್ತಿದೆ. ಸೈದ್ಧಾಂತಿಕ ಒಳನೋಟವು ಒಂದು ವಿಷಯವನ್ನು ಅನೇಕ ಮಗ್ಗಲುಗಳಿಂದ ಪರಿಶೀಲಿಸುವಂತೆ ಸೈದ್ಧಾಂತಿಕ ಸಾಹಿತ್ಯತೆಯು ಪರಿಶೀಲಿಸಲಾರದು, ಮೌಲ್ಯಮಾಪನಕ್ಕೆ ಒಳಪಡಿಸಲಾರದು.

ಸಮಕಾಲೀನ ಸಾಹಿತ್ಯದಲ್ಲಿ ವಸ್ತುನಿಷ್ಠ ವಾಸ್ತವತೆ, ಚಾರಿತ್ರಿಕ ಸತ್ಯ, ಭರವಸೆಗಳ ಬಗೆಗಿನ ಹತಾಶ ಹುಡುಕಾಟ, ತಂತ್ರಜ್ಞಾನದ ಬಗೆಗಿನ ಅಪನಂಬಿಕೆ, ಅಪಹಾಸ್ಯ, ಆಧುನಿಕೋತ್ತರದ ಉತ್ಸಾಹ, ಏಕಾಕಿತನ, ಪೊಳ್ಳುತನ, ಅಭದ್ರತೆ... ಮುಂತಾದವುಗಳು ಹೇರಳವಾಗಿ ಕಾಣಿಸುತ್ತಿವೆ. ಅಂದರೆ ಆಧುನಿಕೋತ್ತರ ಕಾಲದ ತಲ್ಲಣಗಳನ್ನು ಈ ಕಾಲದ ಸಾಹಿತ್ಯವು ಬಳಸಿಕೊಳ್ಳುತ್ತಿದೆ. ಹಾಗಂತ ಈಗ ಬರುತ್ತಿರುವ ಎಲ್ಲಾ ಸಾಹಿತ್ಯ ಈ ರೀತಿಯಾಗಿಲ್ಲ. ಅರ್ಧ ಶತಮಾನಕ್ಕೂ ಮುಂದಿನ ಗ್ರಹಿಕೆಗಳನ್ನೇ, ತಿಳುವಳಿಕೆಗಳನ್ನೇ ಮತ್ತೆ ಮತ್ತೆ ಉಣಬಡಿಸುವ ಕೆಲಸವೂ ನಡೆಯುತ್ತಿದೆ. ಅಂದರೆ ಕೆಲವು ರೂಪಿತ ಚೌಕಟ್ಟನ್ನು, ರೂಪಿತ ಪರಿಭಾಷೆಗಳನ್ನು, ರೂಪಿತ ಸೈದ್ಧಾಂತಿಕತೆಯನ್ನು ಮೀರಿ ನಿಲ್ಲುವ ಪ್ರಯತ್ನ ಮಾಡುತ್ತಿಲ್ಲ. ಹೊಸ ಕಾಲದ ಬದುಕು ಎದುರುಗೊಳ್ಳುತ್ತಿರುವ ಸಂವೇದನೆಗಳನ್ನು ಅವರು ಹಿಡಿಯದಾಗಿದ್ದಾರೆ. ಕೆಲವರಂತೂ ಹೊಸ ಚೀಲದಲ್ಲಿ ಮುಗ್ಗು ಹಿಡಿದ ಅಕ್ಕಿಯನ್ನು ತುಂಬುವ ಕೆಲಸ ಮಾಡುತ್ತಿದ್ದಾರೆ. ಅದರಿಂದ ಆಚೆ ಬರಬೇಕಾದ ಅನಿವಾರ್ಯತೆ ಅವರಿಗಿನ್ನೂ ಯಾಕೆ ಅರ್ಥವಾಗುತ್ತಿಲ್ಲ ಎನ್ನುವುದು ಸೋಜಿಗದ ಸಂಗತಿ.

### ಇಡಬೇಕಾಗಿರುವ ಹೆಜ್ಜೆ

ಸಾಹಿತ್ಯದ ನಡಿಗೆ ಕಾಲ್ನಡಿಗೆ ಆಗಬಾರದು, ಅದು ಕಣ್ಣಿನ ನಡಿಗೆಯಾಗಬೇಕು. ಕಾಲ್ನಡಿಗೆಯು ಯಾವಾಗಲೂ ಹಳೆಯ ಜಾಡನ್ನೇ ಹುಡುಕುತ್ತಿರುತ್ತದೆ ಮತ್ತು ಅದನ್ನು ಅನುಸರಿಸುತ್ತಿರುತ್ತದೆ. ಆದರೆ ಕಣ್ಣಿನ ನಡಿಗೆಯು ಹೊಸ ದಾರಿಯ ಬಗ್ಗೆ ತವಕಿಸುತ್ತಿರುತ್ತದೆ. ಅದಕ್ಕೆ ಹಳೆಯ ಜಾಡು ನೀಡುವ ಸಂತೋಷಕ್ಕಿಂತ ಹೊಸ ಜಾಡನ್ನು ಕಂಡುಕೊಳ್ಳುವಲ್ಲಿಯೇ ಹೆಚ್ಚಿನ ಸಂತೋಷವಿರುತ್ತದೆ. ಕಣ್ಣ ನಡಿಗೆಯು ಒಳಗನ್ನು ನೋಡಿಕೊಳ್ಳುತ್ತಲೇ ಸುತ್ತಣವನ್ನೂ ಗ್ರಹಿಸುತ್ತಿರುತ್ತದೆ. ಎರಡೂ ನೋಟ ಎನ್ನುವ ಒಂದೇ ಪ್ರಕ್ರಿಯೆಯ ಎರಡು ಭಾಗಗಳು. ಆದರೆ ಅವು ಭಿನ್ನಾನುಭವಗಳ ಮುಖಾಮುಖಿಗೆ, ಅನುಸಂಧಾನಕ್ಕೆ ಕಾರಕಗಳು. ಹಾಗಾಗಿ ಸಾಹಿತಿಗಳು ಕಣ್ಣ ನಡಿಗೆಯನ್ನು ಅಳವಡಿಸಿಕೊಳ್ಳಬೇಕು. ಹೊಸ ಹೊಸ ಭಿನ್ನ ಹಾದಿಗಳನ್ನು ಕಂಡುಕೊಳ್ಳಬೇಕು. ಅದು ಹೊಸ ಬಗೆಯ ಅಭಿವ್ಯಕ್ತಿಗೂ ದಾರಿಯಾಗಬೇಕು. ಏಕಕಾಲಕ್ಕೆ ವೈಯಕ್ತಿಕವೂ, ಸಾಮುದಾಯಿಕವೂ ಆದ ಗುಣವನ್ನು ಮೈಗೂಡಿಸಿಕೊಳ್ಳಬೇಕು. ಇದನ್ನು ವಿಸ್ತರಿಸುವುದಾದರೆ ಏಕವಾದದ್ದು

*– 00ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಂಗೀತ ಕ್ಷೇತ್ರಕ್ಕೆ ಶಾರಂಗದೇವನ ಕೊಡುಗೆ

✍ **ನಾಗರಾಜ ಎಮ್ ಪುರಮಕರ,** ಪಿಎಚ್.ಡಿ., ಸಂಗೀತ ವಿಭಾಗ, ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

'ಸಂಗೀತ ರತ್ನಾಕರ' ಭಾರತೀಯ ಸಂಗೀತ ಲೋಕದ ಒಂದು ಅನರ್ಘ್ಯ ಗ್ರಂಥರತ್ನ ಅದನ್ನು ರಚಿಸಿದವರು ಭಾರತೀಯ ಸಂಗೀತದ ಪೂರ್ವಾಚಾರ್ಯರಲ್ಲೊಬ್ಬರಾದ ಸಾರಂಗದೇವ ಅವನನ್ನು 'ಶಾರ್ಙ್ಗದೇವ' ನೆಂದೂ ಕರೆಯಲಾಗಿದೆ. ಗ್ರಂಥದ ಭಾಷೆ ಸಂಸ್ಕೃತ ಅದರ ರಚನಾ ಕಾಲ 13ನೇ ಶತಮಾನದ ಪ್ರಾರಂಭ.

ಭಾರತೀಯ ಸಂಗೀತದ ಆಧಾರ ಗ್ರಂಥವೆನಿಸಿರುವ 'ಸಂಗೀತರತ್ನಾಕರ' ಹಿಂದುಸ್ತಾನಿ ಹಾಗೂ ಕರ್ನಾಟಕೀ ಸಂಗೀತ ಪದ್ಧತಿಗಳೆರಡರ ವಿದ್ವಾಂಸರ ಗೌರವಕ್ಕೆ ಪಾತ್ರವಾಗಿದೆ. ಅದೊಂದು ಸಂಗೀತ ಶಾಸ್ತ್ರದ ಪ್ರಮಾಣ ಗ್ರಂಥವೆನಿಸಿದೆ. ಸಂಗೀತಕ್ಕೆ "ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತ ಮುಚ್ಯತೇ" ಎಂಬ ವ್ಯಾಖ್ಯೆಯನ್ನು ಮೊಟ್ಟಮೊದಲ ಬಾರಿಗೆ ಉಲ್ಲೇಖಿಸಿದವನು ಸಾರಂಗದೇವನೇ. ಸಂಗೀತ ವೆಂಬ ಶಬ್ದಕ್ಕೆ ಮೊದಲ ಬಾರಿಗೆ ವ್ಯಾಖ್ಯೆ ನಾವು ಕಾಣುವುದು ಅವನ 'ಸಂಗೀತ ರತ್ನಾಕತರ' ಗ್ರಂಥದಲ್ಲಿ ಗಾಯನವಾದನ ಮತ್ತು ನರ್ತನಗಳೆಲ್ಲವನ್ನೂ ಸಂಗೀತವೆಂಬ ಒಂದೇ ಶಬ್ದದ ಅರ್ಥದ ಪರಿಮಿತಿಯಲ್ಲಿ ವ್ಯವಸ್ಥಿತವೂ ವೈಜ್ಞಾನಿಕವೂ ಆದ ರೂಪದಲ್ಲಿ ಸಂಗೀತ ರತ್ನಾಕರವು ಮೊಟ್ಟಮೊದಲ ಬಾರಿಗೆ ತಂದು ಅವುಗಳಿಗೂ ಅವುಗಳಲ್ಲಿ ಅಡಗಿದ ಮೌಲ್ಯಗಳಿಗೂ ವೇದೋಪವಸತಿಯನ್ನು ಪ್ರಪ್ರಥಮವಾಗಿ ಅದು ನಿರ್ಮಿಸುತ್ತದೆ. ಭಾರತೀಯ ಸಂಸ್ಕೃತಿಯನ್ನು ಸಂಗೀತ ಶಾಸ್ತ್ರದ ಮೂಲಕ ಅಭ್ಯಾಸ ಮಾಡಲು ಇದೇ ಅತ್ಯಂತ ಸರಿಯಾದ ಗ್ರಂಥವೆಂಬುದು ವಿದ್ವಾಂಸರ ಅಭಿಪ್ರಾಯ. ಗೀತ, ವಾದ್ಯ, ನೃತ್ಯ ಈ ಮೂರು ಅಂಗಗಳಲ್ಲಿ ಅದುವರೆಗೆ ಆದ ಬೆಳವಣಿಗೆಯನ್ನು ಸಮಾಲೋಕನಗೈದು ಮುಂದಿನ ವಿಕಾಸಕ್ಕೆ ಭದ್ರವಾದ ತಳಹದಿಯನ್ನು ಹಾಕಿದ ಮಹಾನ್ ಗ್ರಂಥ 'ಸಂಗೀತ ರತ್ನಾಕರ' ವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅದು ಪ್ರಾಚೀನ ಸಂಗೀತ ಪದ್ಧತಿಗಳ ಪರಿಚಯವನ್ನು ಕೊಡುವ ಮುಖ್ಯಗ್ರಂಥ.[1]

ಭರತ, ಮತಂಗ, ಕೋಹಲ ಕೀರ್ತಿಧರ, ಕಂಬಳ ಅಶ್ವತರ ಮತ ವಿಚಾರಗಳನ್ನು ಕೂಲಂಕುಷವಾಗಿ ಪರಾಮರ್ಶಿಸಿ, ತನ್ನ ಕಾಲದಲ್ಲಿ ರೂಢಿಯಲ್ಲಿದ್ದ ಲಕ್ಷ್ಯ ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಸಾರಂಗದೇವನು "ಸಂಗೀತ ರತ್ನಾಕರ" ಪ್ರೌಢ ಗ್ರಂಥ ರಚಿಸಿದ್ದಾನೆ. ಇದು ಭಾರತೀಯ ಸಂಗೀತದ ಒಂದು ವಿಶ್ವಕೋಶವಾಗಿದೆ. ಸಂಗೀತ ಪದ್ಧತಿಗಳ ಮೂಲಾಂಶಗಳೂ ಎಲ್ಲ ಆಚಾರ್ಯರ ಮತ–ವಿಚಾರಗಳು ಇಲ್ಲಿ ಕ್ರೋಢಿಕೃತವಾಗಿವೆ. ಸೂಕ್ಷ್ಮ ವಿವರಗಳಿಂದಲೂ ನಿಷ್ಪಕ್ಷಪಾತವಾದ ವಿಮರ್ಶೆಗಳಿಂದೂ ಪ್ರತಿಭಾ ಸಂಪನ್ನಾವಾದ ಸಂಶೋಧನೆಗಳಿಂದಲೂ ಇವನ ಕಾಲದಲ್ಲಿ ಭಾರತದಲ್ಲಿ ಏಕರೂಪದ ಗಾನಪದ್ಧತಿ ಇತ್ತು. ಭಾರತೀಯ ಸಂಗೀತವೆಂಬ ಒಂದೇ ಹೆಸರಿನ ಸಂಗೀತ ಪದ್ಧತಿ ಇತ್ತೆಂದು ಅವನ ಕಾಲದ ನಂತರ ಹಿಂದುಸ್ತಾನಿ ಮತ್ತು ಕರ್ನಾಟಕೀ ಎಂಬ ಎರಡು ಪದ್ಧತಿಗಳಾದವು ಸಂಗೀತ ರತ್ನಾಕರ ಗ್ರಂಥದ ಮೇಲೆ ಅವನ ನಂತರ ಬಂದ ಅನೇಕ ಸಂಗೀತ ವಿದ್ವಾಂಸರು ವ್ಯಾಖ್ಯೆಬರೆದಿದ್ದಾರೆ. ಅವುಗಳಲ್ಲಿ ಸಿಂಹಭೂಪಾಲನ 'ಸಂಗೀತ ಸುಧಾಕರ' (14ನೇ ಶತಮಾನ) ಹಾಗೂ ಕಲ್ಲಿನಾಥನ 'ಸಂಗೀತ ಕಲಾನಿಧಿ' (15ನೇ ಶತಮಾನ) ಉಲ್ಲೇಖಾರ್ಹವಾಗಿವೆ. ಈ ಗ್ರಂಥದಲ್ಲಿ ಹಲವು ಬಗೆಯ ವೃಂದಗಾಯನ, ವೃಂದವಾದನದ ಉಲ್ಲೇಖವಿದೆ. ಕಲಾವಿದರ ಸಂಖ್ಯೆಗನುಸಾರವಾಗಿ 'ವೃಂದ'ದಲ್ಲಿ ಉತ್ತಮ, ಮಧ್ಯಮ ಮತ್ತು ಕನಿಷ್ಠ ವೃಂದ ನಡೆಸಲಾಗುತ್ತಿತ್ತು ತಂತಿ ವಾದ್ಯಗಳ ಸಹಾಯದಿಂದ 'ತತ್ ವಾದ್ಯವೃಂದ' ನಡೆಯುತ್ತಿತ್ತು. ಅವನದ್ಧ ವಾದ್ಯಗಳ ಸಹಾಯದಿಂದ 'ತಾಳವಾದ್ಯವೃಂದ' ನಡೆಯುತ್ತಿತ್ತು. ಮೃದಂಗ ವಿದ್ವಾಂಸರ ನೇತೃತ್ವದಲ್ಲಿ ನಡೆಯುವ ಈ ತಾಳವಾದ್ಯ ವೃಂದದಲ್ಲಿ ಪಣವ, ಡಕ್ಕೆ ದುರ್ಧರ ಮುಂತಾದ ಚರ್ಮ ವಾದ್ಯಗಳನ್ನು ಉಪಯೋಗ ಮಾಡುತ್ತಿದ್ದರು. ಲಾಸ್ಯ ಮತ್ತು ತಾಂಡವ ನೃತ್ಯ ಕಲಾವಿದರ ಸಹಾಯದಿಂದ 'ನೃತ್ಯವೃಂದ' ಕಾರ್ಯಕ್ರಮ ಏರ್ಪಡಿಸುತ್ತಿದ್ದ ಉಲ್ಲೇಖ ಈ ಗ್ರಂಥದಲ್ಲಿ ಉಲ್ಲೇಖಿತವಾಗಿದೆ.[2]

'ಸಂಗೀತ ರತ್ನಾಕರ' ಗ್ರಂಥದಲ್ಲಿ ಸ್ವರಗತಾಧ್ಯಾಯ, ರಾಗ ವಿವೇಕಾಧ್ಯಾಯ, ಪ್ರಕೀರ್ಣಾಧ್ಯಾಯ, ಪ್ರಬಂದಾಧ್ಯಾಯ, ತಾಳಾಧ್ಯಾಯ, ವಾದ್ಯಾಧ್ಯಾಯ ಮತ್ತು ನರ್ತನಾಧ್ಯಾಯಗಳೆಂಬ ಏಳು ಅಧ್ಯಾಯಗಳಿವೆ. ಸ್ವರಗತಾಧ್ಯಾಯದಲ್ಲಿ ಪದಾರ್ಥ ಸಂಗ್ರಹ, ಪಿಂಡೋತ್ಪತ್ತಿ–ನಾದಸ್ಥಾನ–ಶೃತಿ, ಸ್ವರ ಜಾತಿ ಕುಲ, ರಸ, ಗ್ರಾಮ–ಮೂರ್ಛನಾ ತಾನ, ವರ್ಣಾಲಂಕಾರ, ಜಾತಿ ಎಂಬ ಎಂಟು ಪ್ರಕರಣಗಳಿವೆ. ರಾಗ, ಭಾವ, ವಿಭಾಸ, ಉತ್ತರ ಭಾಸ, ವಿವೇಕ, ರಾಗಾಂಗಾದಿ ನಿರ್ಣಯಗಳೆಂಬ ಎಂಟು ಪ್ರಕರಣಗಳಿವೆ. ಈ ಅಧ್ಯಾಯದಲ್ಲಿ ವರ್ಣಿತವಾಗಿರುವ 20 ರಾಗಗಳು ಆ ಕಾಲದ ಗಾನ ಪದ್ಧತಿಗೆ ಅನುಗುಣವಾಗಿವೆ. 15 ರಾಗಗಳನ್ನು ಅವುಗಳ 34 ರಾಗಿಣಿಗಳನ್ನೂ ತನ್ನ ಕಾಲದಲ್ಲಿ ಪ್ರಚಲಿತವಿದ್ದ 294 ರಾಗಗಳನ್ನು ಹೇಳಿರುವುದಲ್ಲದೆ ಕೆಲವು ರಾಗಗಳ ಚರಿತ್ರೆಯನ್ನು ತಿಳಿಸಿದ್ದಾನೆ. ಪ್ರಕೀರ್ಣಾಧ್ಯಾಯದಲ್ಲಿ ವಾಗ್ಗೇಯಕಾರ, ಗಾಯನಭೇದ, ಶಬ್ಧಭೇದ, ಶರೀರ ಲಕ್ಷಣ, ಗಮಕ, ಸ್ಥಾಯಿಭೇದ, ಆಲಿಪ್ತಿ ಮತ್ತು ವೃಂದ ಎಂಬ ಎಂಟು ಪ್ರಕರಣಗಳಿವೆ. ಪ್ರಬಂದಾಧ್ಯಾಯದಲ್ಲಿ ಗೀತ ಪರಿಭಾಷಾ, ಗಾಂಧರ್ವ–ಗಾನ, ವಿಭಾಜನ, ಪ್ರಬಂಧದ ಅವಯವ, ಗೀತದ ಗುಣದೋಷಗಳೆಂಬ ಐದು ಪ್ರಕರಣಗಳಿವೆ. ತಾಲಾಧ್ಯಾಯದಲ್ಲಿ ಮಾರ್ಗತಾಲ, ಗೀತ, ದೇಶಿತಾಲ ಮತ್ತು ದೇಶಿತಾಲದ ಪ್ರತ್ಯೇಕ ವರ್ಣನೆಗಳೆಂಬ ನಾಲ್ಕು ಪ್ರಕರಣಗಳಿವೆ. ಇದರಲ್ಲಿ ವಾದ್ಯಗೋಷ್ಠಿ ತಾಳ ಹಾಗೂ 120 ದೇಶಿತಾಳಗಳ ವಿವರಣೆ ಇದೆ. ವಾದ್ಯಾಧ್ಯಾಯದಲ್ಲಿ ತತ್, ಸುಶಿರ್, ಅವನದ್ಧ ಮತ್ತು ಘನ, ವಾದನಕ್ರಮ ಮತ್ತು ತಾಲಲಿಪಿ ಎಂಬ ಆರು ಪ್ರಕರಣಗಳಿವೆ. ನರ್ತನಾಧ್ಯಾಯದಲ್ಲಿ ನೃತ್ತ–ನೃತ್ಯ, ನೃತ್ಯ ತತ್ವ, ನಾಟ್ಯ–ಅಭಿನಯ, ಒಂಭತ್ತು ಸ್ವರಗಳ ನಿಷ್ಪತ್ತಿ ಎಂಬ ಐದು ಪ್ರಕರಣಗಳಿವೆ. ಕೊನೆಯ ಈ ಅಧ್ಯಾಯ ನಾಟ್ಯಕ್ಕೆ ಮೀಸಲಿದೆ.[3]

ಸಾರಂಗದೇವನ ಈ ಬೃಹದ್ಗ್ರಂಥ 'ಸಂಗೀತ ರತ್ನಾಕರ' ಸಂಗೀತದ ಇತಿಹಾಸದಲ್ಲಿ ಒಂದು ಮೈಲುಗಲ್ಲು ಭರತನ ನಾಟ್ಯ ಶಾಸ್ತ್ರ ಗ್ರಂಥದ ನಂತರ ಬಂದ ಅದರಷ್ಟೇ ಮಹತ್ತರವಾದ ಮತ್ತು ಎತ್ತರವಾದ ಗ್ರಂಥ 13ನೇ ಶತಮಾನದಲ್ಲಿ ಸಂಸ್ಕೃತ ಭಾಷೆಯಲ್ಲಿ ರಚಿತವಾದ ಈ ಗ್ರಂಥ ಆ ನಂತರ ಬಂದ ಸಂಗೀತ ಲಾಕ್ಷಣಿಕರಿಗೆಲ್ಲ ಒಂದು ಪ್ರಮುಖ ಆಕರ ಗ್ರಂಥವಾಗಿದೆ.

*– 115ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಉನ್ನತ ಶಿಕ್ಷಣದಲ್ಲಿ ಶ್ರೇಯಾಂಕ ವ್ಯವಸ್ಥೆಗಳು : ವಿಶ್ವವಿದ್ಯಾಲಯಗಳ ಕಾರ್ಯಕ್ಷಮತೆ ಮೌಲ್ಯಮಾಪನ

✍ **ರಂಗಸ್ವಾಮಿ ಐ.ಜೆ.** ಸಂಶೋಧನಾರ್ಥಿ, ಶಿಕ್ಷಣ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

✍ **ಪ್ರೊ. ಜಗನ್ನಾಥ ಕೆ. ಡಾಂಗೆ,** ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

*ಪ್ರಸ್ತಾವನೆ*

*ಉನ್ನತ ಶಿಕ್ಷಣದ ಕ್ರಿಯಾತ್ಮಕತೆಯಲ್ಲಿ ಕಾಣಬಹುದಾದ ಪ್ರಪಂಚದಾದ್ಯಂತದ ವಿಶ್ವವಿದ್ಯಾಲಯಗಳು ತಮ್ಮದೇ ಆದ ಶ್ರೇಷ್ಠತೆಗಾಗಿ ಶ್ರಮಿಸುತ್ತಿವೆ, ಇದಕ್ಕಾಗಿ ಶ್ರೇಯಾಂಕ ವ್ಯವಸ್ಥೆಗಳ ಪಾತ್ರವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ವಿಶ್ವವಿದ್ಯಾನಿಲಯದ ಶ್ರೇಯಾಂಕ ವ್ಯವಸ್ಥೆಗಳು ವಿಶ್ವದಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮೌಲ್ಯಮಾಪನ ಮಾಡಲು ಮತ್ತು ವ್ಯತಿರಿಕ್ತಗೊಳಿಸಲು ಉಪಯುಕ್ತ ಸಾಧನಗಳಾಗಿವೆ. ಈ ಅಮೂರ್ತವು ವಿಶ್ವವಿದ್ಯಾನಿಲಯಗಳನ್ನು ನಿರ್ಣಯಿಸುವಲ್ಲಿ ಶ್ರೇಯಾಂಕ ವ್ಯವಸ್ಥೆಗಳ ಶ್ರೀಮಂತ ಇತಿಹಾಸ, ವೈವಿಧ್ಯತೆ ಮತ್ತು ಮಹತ್ವವನ್ನು ಎತ್ತಿ ತೋರಿಸುತ್ತದೆ. ಈ ವ್ಯವಸ್ಥೆಗಳು ವಿಶ್ವವಿದ್ಯಾಲಯಗಳ ಕಾರ್ಯಕ್ಷಮತೆಯ ಸಮಗ್ರ ಮೌಲ್ಯಮಾಪನವನ್ನು ನೀಡುತ್ತವೆ. ವಿದ್ಯಾರ್ಥಿಗಳು, ಸಂಶೋಧಕರು, ನೀತಿ ನಿರೂಪಕರು ಮತ್ತು ಸಂಸ್ಥೆಗಳು ಸ್ವತಃ ತಾವು ಮಾಡಿದ ನಿರ್ಧಾರಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅಧ್ಯಯನದ ಪ್ರಕಾರ, ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ಶ್ರೇಯಾಂಕ ವ್ಯವಸ್ಥೆಗಳ ಪ್ರಭಾವವು ಅವರ ಸ್ಥಾನಮಾನಗಳನ್ನು ಸುಧಾರಿಸಲು, ಅವರ ಕಾರ್ಯಕ್ರಮಗಳನ್ನು ಹೆಚ್ಚಿಸಲು ಮತ್ತು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸದಸ್ಯರನ್ನು ಆಕರ್ಷಿಸಲು ಅವರ ಪ್ರಯತ್ನಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಲೇಖನದಲ್ಲಿ, ಉನ್ನತ ಶಿಕ್ಷಣದಲ್ಲಿ ಶ್ರೇಯಾಂಕ ವ್ಯವಸ್ಥೆಗಳ ಪ್ರಾಮುಖ್ಯತೆ ಮತ್ತು ಶೈಕ್ಷಣಿಕ ಗುಣಮಟ್ಟ ಮತ್ತು ನಾವೀನ್ಯತೆಗಳ ಜಾಗತಿಕ ಅನ್ವೇಷಣೆಗೆ ಅವು ಹೇಗೆ ಕೊಡುಗೆ ನೀಡುತ್ತವೆ ಎಂಬುದನ್ನು ನಾವು ಕಾಣಬಹುದಾಗಿದೆ.*

*ಕೀವರ್ಡ್‌ಗಳು : ವಿಶ್ವವಿದ್ಯಾಲಯದ ಶ್ರೇಯಾಂಕ ವ್ಯವಸ್ಥೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ಶೈಕ್ಷಣಿಕ ಸ್ವಾತಂತ್ರ್ಯ, ಸಂಶೋಧನೆ–ಕೇಂದ್ರಿತ ಸಂಸ್ಥೆಗಳು*

## ವಿಶ್ವವಿದ್ಯಾಲಯಗಳ ಹಿನ್ನೆಲೆ

ಶತಮಾನಗಳು ಮತ್ತು ಖಂಡಗಳ ಉದ್ದಕ್ಕೂ, ನಳಂದಾ, ತಕ್ಷಶಿಲಾ ವಿಶ್ವವಿದ್ಯಾನಿಲಯಗಳು ಶ್ರೀಮಂತ ಮತ್ತು ವೈವಿಧ್ಯಮಯ ಇತಿಹಾಸವನ್ನು ಹೊಂದಿವೆ. 1088 ರಲ್ಲಿ ಸ್ಥಾಪನೆಯಾದ ಇಟಲಿಯ ಬೊಲೊಗ್ನಾ ವಿಶ್ವವಿದ್ಯಾನಿಲಯವನ್ನು ಮೊದಲ ನೈಜ ವಿಶ್ವವಿದ್ಯಾಲಯವೆಂದು ಆಗಾಗ್ಗೆ ಉಲ್ಲೇಖಿಸಲಾಗುತ್ತದೆ. ವಿಶ್ವವಿದ್ಯಾನಿಲಯಗಳು ಮಧ್ಯಯುಗದಲ್ಲಿ ತಮ್ಮ ಬೇರುಗಳನ್ನು ಹೊಂದಿದ್ದವು. ಈ ಸಮಯದಲ್ಲಿ ವಿಶ್ವವಿದ್ಯಾಲಯಗಳು ಕಲಿಕೆ ಮತ್ತು ಪಾಂಡಿತ್ಯದ ಕೇಂದ್ರಗಳಾಗಿದ್ದು ದೇವತಾಶಾಸ್ತ್ರ, ಕಾನೂನು ಮತ್ತು ತತ್ವಶಾಸ್ತ್ರದ ಮೇಲೆ ಬಲವಾದ ಒತ್ತು ನೀಡಲಾಗಿತ್ತು, ಸಮಯ ಕಳೆದಂತೆ ವಿಶ್ವವಿದ್ಯಾಲಯಗಳು ಬದಲಾದವು ಮತ್ತು ಅದರ ಪಠ್ಯಕ್ರಮವು ಮಾನವಿಕತೆಗಳು, ಸಮಾಜ ವಿಜ್ಞಾನಗಳು ಮತ್ತು ನೈಸರ್ಗಿಕ ವಿಜ್ಞಾನಗಳನ್ನು ಒಳಗೊಂಡಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಳ್ಳಲು ಬೆಳೆಯಿತು. ಇಂದು ನಮಗೆ ತಿಳಿದಿರುವಂತೆ ಉನ್ನತ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಯು ಈ ವಿಕಾಸದ ಪರಿಣಾಮವಾಗಿ ಗಮನಾರ್ಹ ಬದಲಾವಣೆಗೆ ಒಳಗಾಯಿತು.12 ನೇ ಶತಮಾನದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಸ್ಥಾಪನೆಯು ಯುರೋಪಿನ ಉನ್ನತ ಶಿಕ್ಷಣ ಮಾದರಿಯ ಅಭಿವೃದ್ಧಿಯ ಮೇಲೆ ಗಮನಾರ್ಹವಾಗಿ ಪ್ರಭಾವ ಬೀರಿತು, ಇದು ವಿಶ್ವವಿದ್ಯಾಲಯಗಳ ಇತಿಹಾಸದಲ್ಲಿ ಮಹತ್ವದ ತಿರುವು ಎಂದು ಹೇಳಬಹುದಾಗಿದೆ. ವಿಶ್ವವಿದ್ಯಾಲಯಗಳು ನವೋದಯ ಮತ್ತು ಜ್ಞಾನೋದಯದ ಅವಧಿಯಲ್ಲಿ ಮತ್ತಷ್ಟು ರೂಪಾಂತರಗಳಿಗೆ ಒಳಗಾಯಿತು, ಇದು ಬೌದ್ಧಿಕ ಮತ್ತು ವೈಜ್ಞಾನಿಕ ವಿಚಾರಣೆಗೆ ಬಲವಾದ ಒತ್ತು ನೀಡಿದ್ದು ಇಂಜಿನಿಯರಿಂಗ್ ಪಠ್ಯಕ್ರಮ ಮತ್ತು ಸಂಶೋಧನಾ ಆದ್ಯತೆಗಳನ್ನು ಬದಲಾಯಿಸಿತು.ವ್ಯಾಪಾರ ಶಾಲೆಗಳು, ಮತ್ತು ನೈಸರ್ಗಿಕ ವಿಜ್ಞಾನಗಳೆಲ್ಲವೂ 18ನೇ ಮತ್ತು 19ನೇ ಶತಮಾನಗಳಲ್ಲಿ ಕೈಗಾರಿಕಾ ಕ್ರಾಂತಿಯಿಂದ ಉಂಟಾದ ಪ್ರಾಯೋಗಿಕ ಮತ್ತು ತಾಂತ್ರಿಕ ಶಿಕ್ಷಣದ ಪರಿಣಾಮವಾಗಿ ಹೊರಹೊಮ್ಮಿದವು. ಎರಡನೇ ವಿಶ್ವಯುದ್ಧದ ನಂತರ ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣ ಮತ್ತು ಸರ್ಕಾರದ ಧನಸಹಾಯಕ್ಕಾಗಿ ಹೆಚ್ಚುತ್ತಿರುವ ಬೇಡಿಕೆಯ ಪರಿಣಾಮವಾಗಿ ಜಾಗತಿಕವಾಗಿ ವಿಸ್ತರಿಸಲ್ಪಟ್ಟು ಸಂಶೋಧನೆ, ನಾವೀನ್ಯತೆ ಮತ್ತು ಜ್ಞಾನದ ಪ್ರಸರಣ ಕೇಂದ್ರಗಳಾಗಿ ತಮ್ಮ ಸ್ಥಾನವನ್ನು ಬಲಪಡಿಸಿತು.ಪ್ರಪಂಚದಾದ್ಯಂತದ ವಿಶ್ವವಿದ್ಯಾನಿಲಯಗಳ ವೈವಿಧ್ಯಮಯ ಮತ್ತು ಕ್ರಿಯಾತ್ಮಕ ಸ್ವರೂಪವು ಈ ಐತಿಹಾಸಿಕ ಬೆಳವಣಿಗೆಯಿಂದ ಎದ್ದುಕಾಣುತ್ತದೆ. ಈ ಸಂಸ್ಥೆಗಳು ನಿರಂತರವಾಗಿ ಬದಲಾಗುತ್ತಿರುವ ಶೈಕ್ಷಣಿಕ ಭೂದೃಶ್ಯಕ್ಕೆ ಹೊಂದಿ ಕೊಳ್ಳುವುದನ್ನು ಮುಂದುವರೆಸುತ್ತವೆ ಹಾಗೂ ಕಲಿಕೆ ಮತ್ತು ವಿದ್ಯಾರ್ಥಿವೇತನದ ಕೇಂದ್ರಗಳಾಗಿ ತಮ್ಮ ಶ್ರೀಮಂತ ಇತಿಹಾಸವನ್ನು ಸಂರಕ್ಷಿಸುತ್ತವೆ

## ವಿಶ್ವವಿದ್ಯಾಲಯದ ಅರ್ಥ

ವಿಶ್ವವಿದ್ಯಾಲಯ ಎಂಬ ಪದವು (ಯೂನಿವರ್ಸಿಟಾಸ್ ಮ್ಯಾಜಿಸ್ಟ್ರಮ್ ಎಟ್ ಸ್ಕಾಲರಿಯಮ್) ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಅಂದರೆ ಶಿಕ್ಷಕರ ಮತ್ತು ವಿದ್ವಾಂಶರ ಸಮುದಾಯ ಎಂದರ್ಥ. (ವಿಶ್ವವಿದ್ಯಾಲಯದ ವಿಕಿಪಿಡಿಯಾ) ಇದು ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಸಂಸ್ಥೆಯಾಗಿದ್ದು ಹಲವಾರು ಶೈಕ್ಷಣಿಕ ವಿಭಾಗಗಳಲ್ಲಿ ಪದವಿ ನೀಡುತ್ತದೆ. ಸೇವೆಗಳು ಮತ್ತು ಕಾರ್ಯಗಳ ವೈವಿಧ್ಯತೆಯ ಹೊರತಾಗಿಯೂ ಇಲ್ಲಿ ಉನ್ನತ ಶಿಕ್ಷಣ, ಪದವಿ ನೀಡುವಿಕೆ ಮತ್ತು ಸಂಶೋಧನೆಯು ಇದರ ಮೂರು ಪ್ರಮುಖ ಗುಣಲಕ್ಷಣಗಳಾಗಿವೆ. ಶೈಕ್ಷಣಿಕ ಸ್ವಾತಂತ್ರ್ಯ, ಸ್ವಾಯತ್ತತೆ ಮತ್ತು ಅಧ್ಯಾಪಕರಿಗೆ ವಿವಿಧ ಕಾರ್ಯಕ್ರಮಗಳು.ಕಲೆ ಮತ್ತು ಪಠ್ಯೇತರ ಚಟುವಟಿಕೆಗಳು, ಜಾಗತಿಕ ಪ್ರಭಾವ, ಇತ್ಯಾದಿ. ವಿಶ್ವವಿದ್ಯಾಲಯವು ಮುಂದುವರಿದ ಕಲಿಕೆ, ಕಲಿಕೆಯ ಪ್ರಗತಿ ಮತ್ತು ಸಂಶೋಧನೆಗೆ ಬದ್ಧವಾಗಿರುವ ಒಂದು ವ್ಯವಸ್ಥೆ ಆಗಿದೆ. ವಿದ್ಯಾರ್ಥಿಗಳು ತಮ್ಮ ಆಯ್ಕೆಮಾಡಿದ ವೃತ್ತಿಯಲ್ಲಿ ಉತ್ತಮ ಸಾಧನೆ ಮಾಡಲು ಮತ್ತು ವಿದ್ಯಾರ್ಥಿವೇತನ ಮತ್ತು ಸಂಶೋಧನೆಯ ಮೂಲಕ ಸಮಾಜವನ್ನು ಮುನ್ನಡೆಸಲು ಅಗತ್ಯವಾದ ಜ್ಞಾನ, ಸಾಮರ್ಥ್ಯಗಳು ಮತ್ತು ಸಂಪನ್ಮೂಲಗಳೊಂದಿಗೆ ಸಜ್ಜುಗೊಳಿಸುವುದು ಇದರ ಮುಖ್ಯ ಗುರಿಗಳಾಗಿವೆ.

## ವಿಶವ್ವಿದ್ಯಾಲಯಗಳ ವಿಧಗಳು

ಪ್ರಪಂಚದಲ್ಲಿ ವಿವಿಧ ರೀತಿಯ ವಿಶ್ವವಿದ್ಯಾಲಯಗಳಿವೆ, ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ಮತ್ತು ಶೈಕ್ಷಣಿಕ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಗಮನವನ್ನು ಹೊಂದಿದೆ. ಅವುಗಳೆಂದರೆ:– ಸಂಶೋಧನೆ–ಕೇಂದ್ರಿತ ಸಂಸ್ಥೆಗಳು, ಶೈಕ್ಷಣಿಕ–ಕೇಂದ್ರಿತ ಸಂಸ್ಥೆಗಳು, ಕಲಾ ವಿಶ್ವವಿದ್ಯಾಲಯಗಳು, ತಾಂತ್ರಿಕ ಮತ್ತು ವೃತ್ತಿಪರ ವಿಶ್ವವಿದ್ಯಾಲಯಗಳು, ವೈದ್ಯಕೀಯ ಮತ್ತು ಆರೋಗ್ಯ ವಿಜ್ಞಾನ ಸಂಸ್ಥೆಗಳು, ವ್ಯಾಪಾರ ಮತ್ತು ನಿರ್ವಹಣಾ ಸಂಸ್ಥೆಗಳು, ಲಲಿತಕಲೆಗಳು ಮತ್ತು ಪ್ರದರ್ಶನ ಕಲಾ ಅಕಾಡೆಮಿಗಳು, ಆನ್‌ಲೈನ್ ಮತ್ತು ದೂರಶಿಕ್ಷಣ ಸೇರಿದಂತೆ ವಿವಿಧ ರೀತಿಯ ವಿಶ್ವವಿದ್ಯಾಲಯಗಳಿವೆ. ಮುಕ್ತ–ಪ್ರವೇಶ ಸಂಸ್ಥೆಗಳು, ಧಾರ್ಮಿಕವಾಗಿ ಸಂಯೋಜಿತ ಸಂಸ್ಥೆಗಳು, ಸಾರ್ವಜನಿಕವಾಗಿ ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳು, ಪ್ರತಿಷ್ಠಿತ ಐವಿ ಲೀಗ್ ಮತ್ತು ಗಣ್ಯ ವಿಶ್ವವಿದ್ಯಾಲಯಗಳು, ಇತ್ಯಾದಿ. ವಿಶ್ವವಿದ್ಯಾಲಯದ ಆಯ್ಕೆಯು ಶೈಕ್ಷಣಿಕ ಮತ್ತು ವೃತ್ತಿಪರ ಉದ್ದೇಶಗಳನ್ನು ಆಧರಿಸಿರಬೇಕು ಏಕೆಂದರೆ ಪ್ರತಿಯೊಂದೂ ವಿಭಿನ್ನ ಶೈಕ್ಷಣಿಕ ಅನುಭವ ಮತ್ತು ಅವಕಾಶಗಳನ್ನು ಒದಗಿಸುತ್ತದೆ.

## ಶ್ರೇಯಾಂಕ ವ್ಯವಸ್ಥೆ

ವಿಶ್ವವಿದ್ಯಾಲಯಗಳಿಗೆ ಅವುಗಳ ಶೈಕ್ಷಣಿಕ ಸ್ಥಿತಿ, ಸಂಶೋಧನಾ ಫಲಿತಾಂಶ, ಅಧ್ಯಾಪಕರ ಸಾಮರ್ಥ್ಯ, ವಿದ್ಯಾರ್ಥಿ–ಅಧ್ಯಾಪಕರ ಅನುಪಾತಗಳು, ಅಂತರರಾಷ್ಟ್ರೀಯ ವೈವಿಧ್ಯತೆ, ವಿದ್ಯಾರ್ಥಿ ತೃಪ್ತಿ, ಆರ್ಥಿಕ ಸಂಪನ್ಮೂಲಗಳು, ಉದ್ಯೋಗಾವಕಾಶ, ವಿಷಯ–ನಿರ್ದಿಷ್ಟ ಸಾಮರ್ಥ್ಯಗಳು ಮತ್ತು ಪ್ರಪಂಚದೊಂದಿಗೆ ತೊಡಗಿಸಿಕೊಳ್ಳುವಿಕೆ ಸೇರಿದಂತೆ ವಿವಿಧ ಅಂಶಗಳ ಪ್ರಕಾರ ಮೌಲ್ಯಮಾಪನ ಮಾಡಿ ಶ್ರೇಯಾಂಕವನ್ನು ನೀಡಲಾಗುತ್ತದೆ. ಭವಿಷ್ಯದ ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು ಮತ್ತು ನಿರ್ಧಾರ–ನಿರ್ಮಾಪಕರು ಈ ಶ್ರೇಯಾಂಕಗಳನ್ನು ಪ್ರಪಂಚದಾದ್ಯಂತದ ವಿಶ್ವವಿದ್ಯಾಲಯಗಳ ಸಾಮರ್ಥ್ಯ ಮತ್ತು ಸ್ಥಿತಿಯನ್ನು ನಿರ್ಣಯಿಸಲು ವಿವಿಧ ಶ್ರೇಯಾಂಕ ವ್ಯವಸ್ಥೆಗಳಿವೆ ಎಂದು ಅರ್ಥಮಾಡಿಕೊಳ್ಳುವುದು ನಿರ್ಣಾಯಕವಾಗಿದೆ ಮತ್ತು ವಿಶ್ವವಿದ್ಯಾನಿಲಯದ ಸಾಮರ್ಥ್ಯವನ್ನು ಸ್ಥಿರವಾಗಿ ವ್ಯಾಖ್ಯಾನಿಸಲು ಯಾವುದೇ ವ್ಯವಸ್ಥೆಯನ್ನು ಬಳಸಲಾಗುವುದಿಲ್ಲ. ವಿಶ್ವವಿದ್ಯಾಲಯವನ್ನು ಆಯ್ಕೆಮಾಡುವಾಗ, ಜನರು ಬಹು ಶ್ರೇಯಾಂಕಗಳನ್ನು ಮತ್ತು ಇತರ ಅಂಶಗಳನ್ನು ನೋಡಬೇಕು.

ವಿಶ್ವವಿದ್ಯಾಲಯಗಳ ಶ್ರೇಯಾಂಕಗಳು ಈಗ ಜಾಗತಿಕವಾಗಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹೋಲಿಸಲು ಮತ್ತು ವ್ಯತಿರಿಕ್ತಗೊಳಿಸಲು ಪ್ರಮುಖ ಸಾಧನಗಳಾಗಿವೆ (ಡಿಲ್ ಮತ್ತು ಸೂ, 2005). ಈ ಶ್ರೇಯಾಂಕ ವ್ಯವಸ್ಥೆಗಳು ವಿಶ್ವವಿದ್ಯಾಲಯಗಳನ್ನು ಮೌಲ್ಯಮಾಪನ ಮಾಡುತ್ತವೆ ಹಾಗೂ ವಿವಿಧ ಮಾನದಂಡಗಳು ಮತ್ತು ವಿಧಾನಗಳನ್ನು ಬಳಸಿಕೊಂಡು ಸಂಖ್ಯಾತ್ಮಕ ಶ್ರೇಯಾಂಕಗಳನ್ನು ರಚಿಸುತ್ತವೆ, ಇದು ಸಂಸ್ಥೆಯ ಖ್ಯಾತಿ ಮತ್ತು ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸಂಶೋಧನಾ ನಿಧಿಯನ್ನು ಆಕರ್ಷಿಸುವ ಸಾಮರ್ಥ್ಯದ ಮೇಲೆ ದೊಡ್ಡ ಪರಿಣಾಮ ಬೀರಬಹುದು.

ಉನ್ನತ–ಗುಣಮಟ್ಟದ ಸೂಚನೆ ಮತ್ತು ಸಮುದಾಯದಲ್ಲಿ ಒಳಗೊಳ್ಳುವಿಕೆಯಂತಹ ಉನ್ನತ ಶಿಕ್ಷಣದ ಇತರ ಪ್ರಮುಖ ಅಂಶಗಳಿಗಿಂತ ಈ ಶ್ರೇಯಾಂಕಗಳು ಸಂಶೋಧನಾ ಉತ್ಪಾದನೆಗೆ ಹೆಚ್ಚಿನ ತೂಕವನ್ನು ನೀಡಬಹುದು ಎಂದು ವಿಮರ್ಶಕರು ಹೇಳುತ್ತಾರೆ. ಹೆಚ್ಚುವರಿಯಾಗಿ, ಶ್ರೇಯಾಂಕದಲ್ಲಿ ಮುನ್ನಡೆಯಲು ವಿಶ್ವವಿದ್ಯಾಲಯಗಳು ತಮ್ಮ ಕಾರ್ಯವಿಧಾನಗಳನ್ನು ಬದಲಾಯಿಸಬಹುದು ಎಂಬ ಆತಂಕವನ್ನು ಕೆಲವರು ವ್ಯಕ್ತಪಡಿಸಿದ್ದಾರೆ, ಇದು ಶ್ರೇಯಾಂಕಗಳ ಸಮಗ್ರತೆಗೆ ಧಕ್ಕೆ ತರಬಹುದು (ಮಾರ್ಜಿನ್ಸನ್, 2014).

ಶ್ರೇಯಾಂಕ ವ್ಯವಸ್ಥೆಗಳು ವಿಶ್ವವಿದ್ಯಾಲಯಗಳಿಗೆ ಮಾನದಂಡದ ಸಾಧನವಾಗಿಯೂ ಕಾರ್ಯನಿರ್ವಹಿಸುತ್ತವೆ. ಸಂಸ್ಥೆಗಳು ತಮ್ಮ ಜಾಗತಿಕ ಪ್ರತಿರೂಪಗಳಿಗೆ ಹೋಲಿಸಿದರೆ ತಮ್ಮ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಶ್ರೇಯಾಂಕಗಳಿಂದ ಪಡೆದ ಒಳನೋಟಗಳನ್ನು ಬಳಸುತ್ತವೆ. ಸ್ವಯಂ–ಮೌಲ್ಯಮಾಪನದ ಈ ಪ್ರಕ್ರಿಯೆಯು ವಿಶ್ವವಿದ್ಯಾಲಯಗಳಿಗೆ ಸುಧಾರಣೆಗಾಗಿ ಪ್ರದೇಶಗಳನ್ನು ಗುರುತಿಸಲು, ಅವರ ಶೈಕ್ಷಣಿಕ ಕೊಡುಗೆಗಳನ್ನು ಹೆಚ್ಚಿಸಲು ಮತ್ತು ಪ್ರತಿಭಾವಂತ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಆಕರ್ಷಿಸಲು ಅನುಮತಿಸುತ್ತದೆ. ಶ್ರೇಯಾಂಕ ವ್ಯವಸ್ಥೆಗಳಿಂದ ಬೆಳೆಸಲ್ಪಟ್ಟ ಆರೋಗ್ಯಕರ ಸ್ಪರ್ಧೆಯು ಉನ್ನತ ಶಿಕ್ಷಣದ ಗುಣಮಟ್ಟಗಳ ಒಟ್ಟಾರೆ ಸುಧಾರಣೆಗೆ ಕೊಡುಗೆ ನೀಡುತ್ತದೆ (ಮಾರ್ಜಿನ್ಸನ್, 2016).

ವಿಶ್ವವಿದ್ಯಾಲಯಗಳನ್ನು ಮೌಲ್ಯಮಾಪನ ಮಾಡಲು ಮತ್ತು ಶ್ರೇಯಾಂಕ ನೀಡಲು ಹಲವಾರು ಪ್ರಸಿದ್ಧ ವ್ಯವಸ್ಥೆಗಳಿವೆ, ಪ್ರತಿಯೊಂದೂ ತನ್ನದೇ ಆದ ವಿಧಾನ ಮತ್ತು ಮಾನದಂಡಗಳನ್ನು ಹೊಂದಿದೆ.ಕೆಲವು ಪ್ರಸಿದ್ಧ ವಿಶ್ವವಿದ್ಯಾಲಯ ಶ್ರೇಯಾಂಕ ವ್ಯವಸ್ಥೆಗಳು ಮತ್ತು ಅವುಗಳ ಮಾನದಂಡಗಳನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

**1. QS ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು** QS ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು, ಸಾಮಾನ್ಯವಾಗಿ QS ಶ್ರೇಯಾಂಕಗಳು ಎಂದು ಕರೆಯಲ್ಪಡುತ್ತವೆ, ಇದು ಒಂದು ಗೌರವಾನ್ವಿತ ವಿಶ್ವವಿದ್ಯಾನಿಲಯ ಶ್ರೇಯಾಂಕ ವ್ಯವಸ್ಥೆಯಾಗಿದೆ. "QS" ಎಂದರೆ "Quacquarelli Symonds," ಬ್ರಿಟಿಷ್ ಕಂಪನಿಯು ಈ ಶ್ರೇಯಾಂಕಗಳನ್ನು ರಚಿಸುವ ಮತ್ತು ಪ್ರಕಟಿಸುವ ಜವಾಬ್ದಾರಿಯನ್ನು ಹೊಂದಿದೆ.1990 ರಲ್ಲಿ Nunzio Quacquarelli ಮತ್ತು ಮ್ಯಾಟ್ ಸೈಮಂಡ್ಸ್ ಸ್ಥಾಪಿಸಿದರು, Quacquarelli ಸೈಮಂಡ್ಸ್ ಶಿಕ್ಷಣ ಸೇವೆಗಳು ಮತ್ತು ಡೇಟಾದ ಜಾಗತಿಕ ಪೂರೈಕೆದಾರ. ಉನ್ನತ ಶಿಕ್ಷಣ, ಅಂತರಾಷ್ಟ್ರೀಯ ವಿದ್ಯಾರ್ಥಿಗಳ ನೇಮಕಾತಿ, ಮತ್ತು ವೃತ್ತಿ ಅಭಿವೃದ್ಧಿಗೆ ಸಂಬಂಧಿಸಿದ ಮೌಲ್ಯಯುತವಾದ ಮಾಹಿತಿ ಮತ್ತು ಒಳನೋಟಗಳನ್ನು ನೀಡುವುದು ಅವರ ಉದ್ದೇಶವಾಗಿದೆ. "QS" ವಿಶ್ವ ವಿಶ್ವವಿದ್ಯಾನಿಲಯ ಶ್ರೇಯಾಂಕಗಳು 2004 ರಲ್ಲಿ ಪಾದಾರ್ಪಣೆ ಮಾಡಿತು ಮತ್ತು ಜಾಗತಿಕ ಮಟ್ಟದಲ್ಲಿ ವಿಶ್ವವಿದ್ಯಾಲಯಗಳನ್ನು ಮೌಲ್ಯಮಾಪನ ಮಾಡಲು ಮತ್ತು ಹೋಲಿಸಲು ತ್ವರಿತವಾಗಿ ಪ್ರಮುಖ ಪ್ರಭಾವಶಾಲಿ ಸಾಧನವಾಯಿತು. ಈ ಶ್ರೇಯಾಂಕಗಳನ್ನು ವಿಶ್ವಾದ್ಯಂತ ವಿದ್ಯಾರ್ಥಿಗಳು, ಶಿಕ್ಷಕರು, ವಿಶ್ವವಿದ್ಯಾಲಯ ನಿರ್ವಾಹಕರು ಮತ್ತು ನೀತಿ ನಿರೂಪಕರು ಹೆಚ್ಚು ಪರಿಗಣಿಸಿದ್ದಾರೆ. ಅವರು ವಿಶ್ವವಿದ್ಯಾಲಯಗಳನ್ನು ವಿವಿಧ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡುವ ಸಮಗ್ರ ವಿಧಾನವನ್ನು ಬಳಸುತ್ತಾರೆ, ಜಾಗತಿಕ ಉನ್ನತ ಶಿಕ್ಷಣದ ಭೂದೃಶ್ಯದಲ್ಲಿ ಅವರ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆಯ ಸಮಗ್ರ ನೋಟವನ್ನು ಒದಗಿಸುತ್ತದೆ. ("QS" ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು,)

"QS" ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು ವಿಶ್ವವಿದ್ಯಾಲಯಗಳನ್ನು ಹಲವಾರು ಪ್ರಮುಖ ಮಾನದಂಡಗಳ ಆಧಾರದ ಮೇಲೆ ಜಾಗತಿಕವಾಗಿ ಮೌಲ್ಯಮಾಪನ ಮಾಡುತ್ತದೆ. ಇವುಗಳ ಸಹಿತ: ಶೈಕ್ಷಣಿಕ ಖ್ಯಾತಿ (40%): ಜಾಗತಿಕ ಶೈಕ್ಷಣಿಕ ಸಮುದಾಯದಲ್ಲಿ ಸಂಸ್ಥೆಯ ಶೈಕ್ಷಣಿಕ ಸ್ಥಿತಿಯನ್ನು ಮೌಲ್ಯಮಾಪನ ಮಾಡುತ್ತದೆ. ಉದ್ಯೋಗದಾತರ ಖ್ಯಾತಿ (10%): ವಿಶ್ವಾದ್ಯಂತ ಉದ್ಯೋಗದಾತರು ವಿಶ್ವವಿದ್ಯಾಲಯಗಳನ್ನು ಎಷ್ಟು ಚೆನ್ನಾಗಿ ಪರಿಗಣಿಸುತ್ತಾರೆ ಎಂಬುದನ್ನು ಅಳೆಯುತ್ತದೆ. ಅಧ್ಯಾಪಕರು/ ವಿದ್ಯಾರ್ಥಿ ಅನುಪಾತ (20%): ವಿದ್ಯಾರ್ಥಿ–ಅಧ್ಯಾಪಕರ ಅನುಪಾತ ಮತ್ತು ಸಂಭಾವ್ಯ ವೈಯಕ್ತಿಕ ಗಮನವನ್ನು ಪ್ರತಿಬಿಂಬಿಸುತ್ತದೆ. ಅಂತರರಾಷ್ಟ್ರೀಯ ಅಧ್ಯಾಪಕರ ಅನುಪಾತ (5%): ವಿವಿಧ ದೇಶಗಳ ಬೋಧನಾ ವಿಭಾಗದ ಸದಸ್ಯರ ವೈವಿಧ್ಯತೆಯನ್ನು ಪರಿಗಣಿಸುತ್ತದೆ. ಅಂತರರಾಷ್ಟ್ರೀಯ ವಿದ್ಯಾರ್ಥಿ ಅನುಪಾತ (5%): ವೈವಿಧ್ಯತೆಗೆ ಕೊಡುಗೆ ನೀಡುವ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಅನುಪಾತವನ್ನು ನಿರ್ಣಯಿಸುತ್ತದೆ. ಪ್ರತಿ ಅಧ್ಯಾಪಕರಿಗೆ ಉಲ್ಲೇಖಗಳು (20%): ಶೈಕ್ಷಣಿಕ ಕಾಗದದ ಉಲ್ಲೇಖಗಳ ಮೂಲಕ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂಶೋಧನಾ ಪರಿಣಾಮವನ್ನು ಪ್ರತಿಬಿಂಬಿಸುತ್ತದೆ. ಪಿಎಚ್‌ಡಿ ಹೊಂದಿರುವ ಸಿಬ್ಬಂದಿ (3%): ಬೋಧನಾ ಸಿಬ್ಬಂದಿಯ ಶೈಕ್ಷಣಿಕ ಅರ್ಹತೆಗಳನ್ನು ಪರಿಗಣಿಸುತ್ತದೆ. ಶೈಕ್ಷಣಿಕ/ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು (2%): ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯನ್ನು ಮೌಲ್ಯಮಾಪನ ಮಾಡುತ್ತದೆ. ಒಳಬರುವ ಮತ್ತು ಹೊರಹೋಗುವ ವಿನಿಮಯ ವಿದ್ಯಾರ್ಥಿ ಅನುಪಾತ (5%): ವಿನಿಮಯ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ನಿಶ್ಚಿತಾರ್ಥವನ್ನು ಪ್ರತಿಬಿಂಬಿಸುತ್ತದೆ. ಅಂತರರಾಷ್ಟ್ರೀಯ ಸಂಶೋಧನಾ ಜಾಲ (5%): ಜಾಗತಿಕ ಸಂಶೋಧನಾ ಸಹಯೋಗಗಳನ್ನು ಅಳೆಯುತ್ತದೆ.

**2. ಟೈಮ್ಸ್ ಹೈಯರ್ ಎಜುಕೇಶನ್ ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು:** : ಟೈಮ್ಸ್ ಹೈಯರ್ ಎಜುಕೇಶನ್ (THE) 1971 ರಲ್ಲಿ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಸ್ಥಾಪನೆಯಾದಾಗಿನಿಂದ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿ, ವಿಶ್ಲೇಷಣೆ ಮತ್ತು ಸುದ್ದಿಗಳನ್ನು ಒದಗಿಸುವಲ್ಲಿ ಮುಂಚೂಣಿಯಲ್ಲಿರುವ ಪ್ರಮುಖ ಬ್ರಿಟಿಷ್ ಪ್ರಕಟಣೆಯಾಗಿದೆ. ಇದು ವಿಶ್ವವಿದ್ಯಾಲಯದ ಶ್ರೇಯಾಂಕಗಳು ಮತ್ತು ಸಂಶೋಧನೆಯಿಂದ ಬೋಧನೆ, ಧನಸಹಾಯ ಮತ್ತು ನೀತಿಯವರೆಗೆ ವ್ಯಾಪಕವಾದ ವಿಷಯಗಳ ವ್ಯಾಪ್ತಿಯನ್ನು ಒಳಗೊಂಡಿದೆ, ಇದು ವಿಶ್ವವಿದ್ಯಾಲಯಗಳು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಮತ್ತು ನೀತಿ ನಿರೂಪಕರಿಗೆ ಸಮಾನವಾಗಿ ಅಮೂಲ್ಯವಾದ ಸಂಪನ್ಮೂಲವಾಗಿದೆ.ಆರಂಭದಲ್ಲಿ QS (ಕ್ವಾಕ್ವೆರೆಲ್ಲಿ ಸೈಮಂಡ್ಸ್) ಸಹಯೋಗದೊಂದಿಗೆ 2004 ರಲ್ಲಿ THE ತನ್ನ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕಗಳನ್ನು ಪರಿಚಯಿಸಿತು, ಆದಾಗ್ಯೂ, 2010 ರಲ್ಲಿ ಮಹತ್ವದ ಬೆಳವಣಿಗೆಯು ಈ ಪಾಲುದಾರಿಕೆಯಿಂದ ದೂರವಿರಲು ನಿರ್ಧರಿಸಿದಾಗ ಅದರ ಸ್ವತಂತ್ರ ಶ್ರೇಯಾಂಕಗಳನ್ನು ಪ್ರಕಟಿಸಲು ಪ್ರಾರಂಭಿಸಿತು. ಈ ಕ್ರಮವು ಶ್ರೇಯಾಂಕಗಳಿಗೆ ಒಂದು ಮಹತ್ವದ ತಿರುವು ನೀಡಿತು, QS ಮತ್ತು ARWU (ವಿಶ್ವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶ್ರೇಯಾಂಕ) ಜೊತೆಗೆ **"ದೊಡ್ಡ ಮೂರು"** ಜಾಗತಿಕ ವಿಶ್ವವಿದ್ಯಾಲಯ ಶ್ರೇಯಾಂಕಗಳಲ್ಲಿ ಒಂದಾಗಿ ಪ್ರಾಮುಖ್ಯತೆ ಮತ್ತು ಗುರುತಿಸುವಿಕೆಗೆ ಅವರನ್ನು ಪ್ರೇರೇಪಿಸಿತು.. (ಟೈಮ್ಸ್ ಉನ್ನತ ಶಿಕ್ಷಣ,).

ಟೈಮ್ಸ್ ಹೈಯರ್ ಎಜುಕೇಶನ್ ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು ಹಲವಾರು ಪ್ರಮುಖ ಅಂಶಗಳನ್ನು ಬಳಸಿಕೊಂಡು ವಿಶ್ವವಿದ್ಯಾಲಯಗಳನ್ನು ಮೌಲ್ಯಮಾಪನ ಮಾಡುತ್ತದೆ, ಅವುಗಳೆಂದರೆ:- ಬೋಧನೆ (30%): ಕಲಿಕೆಯ ವಾತಾವರಣ ಮತ್ತು ವಿದ್ಯಾರ್ಥಿ-ಅಧ್ಯಾಪಕರ ಅನುಪಾತಗಳನ್ನು ಒಳಗೊಂಡಂತೆ ಬೋಧನೆಯ ಗುಣಮಟ್ಟವನ್ನು ಮೌಲ್ಯಮಾಪನ ಮಾಡುತ್ತದೆ. ಸಂಶೋಧನೆ (30%): ಸಂಶೋಧನಾ ನಿಧಿ ಮತ್ತು ಪ್ರಕಟಣೆಗಳು ಸೇರಿದಂತೆ ಸಂಶೋಧನಾ ಉತ್ಪಾದನೆ, ಪರಿಮಾಣ ಮತ್ತು ಪ್ರಭಾವವನ್ನು ಅಳೆಯುತ್ತದೆ. ಉಲ್ಲೇಖಗಳು (30%): ಶೈಕ್ಷಣಿಕ ಪ್ರಕಟಣೆಗಳಲ್ಲಿ ಉಲ್ಲೇಖಗಳ ಮೂಲಕ ಸಂಶೋಧನೆಯ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ. ಅಂತರರಾಷ್ಟ್ರೀಯ ವೈವಿಧ್ಯತೆ (7.5%): ಅಂತರರಾಷ್ಟ್ರೀಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ವೈವಿಧ್ಯತೆಯನ್ನು ಪರಿಗಣಿಸುತ್ತದೆ. ಉದ್ಯಮದ ಆದಾಯ (2.5%): ಉದ್ಯಮದೊಂದಿಗೆ ವಿಶ್ವವಿದ್ಯಾಲಯಗಳ ನಿಶ್ಚಿತಾರ್ಥ ಮತ್ತು ಅದರಿಂದ ಉತ್ಪತ್ತಿಯಾಗುವ ಆದಾಯವನ್ನು ನಿರ್ಣಯಿಸುತ್ತದೆ.ಈ ಮಾನದಂಡಗಳು ಒಟ್ಟಾರೆಯಾಗಿ ಬೋಧನೆ, ಸಂಶೋಧನೆ, ಅಂತರರಾಷ್ಟ್ರೀಕರಣ ಮತ್ತು ಉದ್ಯಮದ ಸಹಯೋಗದಲ್ಲಿ ವಿಶ್ವವಿದ್ಯಾಲಯಗಳ ಕಾರ್ಯಕ್ಷಮತೆಯ ಒಳನೋಟಗಳನ್ನು ಒದಗಿಸುತ್ತದೆ.

**3. ವಿಶ್ವ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಶ್ರೇಯಾಂಕ (ARWU) –** ವಿಶ್ವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶ್ರೇಯಾಂಕ (ARWU), ಇದನ್ನು ಸಾಮಾನ್ಯವಾಗಿ ಶಾಂಘೈ ಶ್ರೇಯಾಂಕಗಳು ಎಂದು ಕರೆಯಲಾಗುತ್ತದೆ, ಇದು ಚೀನಾದಲ್ಲಿ ಹುಟ್ಟಿಕೊಂಡ ಪ್ರತಿಷ್ಠಿತ ವಿಶ್ವವಿದ್ಯಾಲಯ ಶ್ರೇಯಾಂಕ ವ್ಯವಸ್ಥೆಯಾಗಿದೆ. ಇದನ್ನು ಮೊದಲು 2003 ರಲ್ಲಿ ಶಾಂಘೈ ಜಿಯಾವೊ ಟಾಂಗ್ ವಿಶ್ವವಿದ್ಯಾಲಯದಲ್ಲಿ ವಿಶ್ವ ದರ್ಜೆಯ ವಿಶ್ವವಿದ್ಯಾಲಯಗಳಿಗಾಗಿ ಕ್ಯಾಂಟರ್ ಪ್ರಕಟಿಸಿತು.ಚೀನೀ ವಿಶ್ವವಿದ್ಯಾಲಯಗಳ ಕಾರ್ಯಕ್ಷಮತೆಯನ್ನು ಅವುಗಳ ಜಾಗತಿಕ ಪ್ರತಿರೂಪಗಳಿಗೆ ಹೋಲಿಸಿದರೆ ಮೌಲ್ಯಮಾಪನ ಮಾಡುವ ಆರಂಭಿಕ ಗುರಿಯೊಂದಿಗೆ ARWU ಅನ್ನು ಉನ್ನತ ಶಿಕ್ಷಣದಲ್ಲಿ ಹೆಸರಾಂತ ವಿದ್ವಾಂಸರಾದ ಪ್ರೊಫೆಸರ್ ನಿಯಾನ್ ಕೈ ಲಿಯು ಅಭಿವೃದ್ಧಿಪಡಿಸಿದ್ದಾರೆ, (ಶಾಂಘೈ ಶ್ರೇಯಾಂಕಗಳು,)

ವಿಶ್ವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶ್ರೇಯಾಂಕ (ARWU), ಶಾಂಘೈ ಶ್ರೇಯಾಂಕಗಳು ಎಂದು ಸಹ ಉಲ್ಲೇಖಿಸಲಾಗುತ್ತದೆ, ಇದರಲ್ಲಿ ಈ ಕೆಳಗಿನ ಪ್ರಮುಖ ಮಾನದಂಡಗಳನ್ನು ಬಳಸಿಕೊಂಡು ಕಾಲೇಜುಗಳನ್ನು ಮೌಲ್ಯಮಾಪನ ಮಾಡುತ್ತದೆ. ಅವುಗಳೆಂದರೆ:- ಶಿಕ್ಷಣದ ಗುಣಮಟ್ಟ (10%): ಈ ಮಾನದಂಡವು ಸಂಸ್ಥೆಯು ಒದಗಿಸುವ ಪದವಿಪೂರ್ವ ಮತ್ತು ಪದವಿ ಶಿಕ್ಷಣದ ಗುಣಮಟ್ಟವನ್ನು ಮೌಲ್ಯಮಾಪನ ಮಾಡುತ್ತದೆ. ಅಧ್ಯಾಪಕರ ಗುಣಮಟ್ಟ (40%): ಹಳೆಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಲ್ಲಿ ನೊಬೆಲ್ ಪ್ರಶಸ್ತಿ ವಿಜೇತರು ಮತ್ತು ಫೀಲ್ಡ್ ಮೆಡಲಿಸ್ಟ್‌ಗಳ ಸಂಖ್ಯೆ ಸೇರಿದಂತೆ ವಿವಿಧ ಸೂಚಕಗಳ ಆಧಾರದ ಮೇಲೆ ಅಧ್ಯಾಪಕರ ಗುಣಮಟ್ಟವನ್ನು ಅಳೆಯುತ್ತದೆ. ಸಂಶೋಧನಾ ಫಲಿತಾಂಶ (40%): ಪ್ರತಿಷ್ಠಿತ ವೈಜ್ಞಾನಿಕ ನಿಯತಕಾಲಿಕಗಳಲ್ಲಿನ ಪ್ರಕಟಣೆಗಳು ಮತ್ತು ಪ್ರತಿ ಅಧ್ಯಾಪಕ ಸದಸ್ಯರಿಗೆ ಸಂಶೋಧನಾ ಕಾರ್ಯಕ್ಷಮತೆ ಸೇರಿದಂತೆ ಸಂಶೋಧನಾ ಪ್ರಕಟಣೆಗಳ ಪ್ರಮಾಣ ಮತ್ತು ಪ್ರಭಾವದ ಮೇಲೆ ಕೇಂದ್ರೀಕರಿಸುತ್ತದೆ. ತಲಾ ಶೈಕ್ಷಣಿಕ ಕಾರ್ಯಕ್ಷಮತೆ (10%): ಪ್ರತಿ ಅಧ್ಯಾಪಕ ಸದಸ್ಯರ ಉತ್ಪಾದಕತೆಯನ್ನು ಅಳೆಯುವ ಗುರಿಯನ್ನು ಹೊಂದಿರುವ ಅಧ್ಯಾಪಕರ ಗಾತ್ರಕ್ಕೆ ಸಾಮಾನ್ಯೀಕರಿಸಿದ ಸಂಸ್ಥೆಯ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುತ್ತದೆ. ಶಾಂಘೈ ಶ್ರೇಯಾಂಕಗಳು ವಿಶ್ವಾದ್ಯಂತ ವಿಶ್ವವಿದ್ಯಾನಿಲಯಗಳ ಮೌಲ್ಯಮಾಪನದಲ್ಲಿ ಸಂಶೋಧನಾ ಗುಣಮಟ್ಟ ಮತ್ತು ಅಧ್ಯಾಪಕರ ಸಾಧನೆಗಳನ್ನು ಪ್ರಮುಖ ಅಂಶಗಳಾಗಿ ಆದ್ಯತೆ ನೀಡುತ್ತವೆ.

**4.ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು (NIRF)** ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು (NIRF) ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವಿನ್ಯಾಸಗೊಳಿಸಲಾದ ವಿಶೇಷ ಶೈಕ್ಷಣಿಕ ಶ್ರೇಯಾಂಕ ವ್ಯವಸ್ಥೆಯಾಗಿದೆ. ಸೆಪ್ಟೆಂಬರ್ 2015 ರಲ್ಲಿ ಶಿಕ್ಷಣ ಸಚಿವಾಲಯದಿಂದ (ಹಿಂದೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ) ಸ್ಥಾಪಿಸಲಾಯಿತು, NIR ಈ ವಿವಿಧ ಮಾನದಂಡಗಳನ್ನು ಬಳಸಿಕೊಂಡು ಭಾರತೀಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಮೌಲ್ಯಮಾಪನ ಮಾಡುವ ಮತ್ತು ಶ್ರೇಯಾಂಕ ನೀಡುವ ಗುರಿಯನ್ನು ಹೊಂದಿದೆ.ಈ ಚೌಕಟ್ಟು ವಿದ್ಯಾರ್ಥಿಗಳು, ಪೋಷಕರು ಮತ್ತು ನೀತಿ ನಿರೂಪಕರಿಗೆ ಭಾರತದಲ್ಲಿನ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಮತ್ತು ಕಾರ್ಯಕ್ಷಮತೆಯನ್ನು ಅಳೆಯಲು ಅಗತ್ಯವಾದ ಡೇಟಾವನ್ನು ಒದಗಿಸುತ್ತದೆ. NIR ಈ ನ ಪರಿಚಯವು ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಅಗತ್ಯವನ್ನು ತಿಳಿಸುತ್ತದೆ, ಬೋಧನೆ, ಸಂಶೋಧನೆ ಮತ್ತು ಇತರ ನಿರ್ಣಾಯಕ ಅಂಶಗಳಲ್ಲಿ ಉತ್ತಮ ಸಾಧನೆ ಮಾಡಲು ಸಂಸ್ಥೆಗಳನ್ನು ಪ್ರೇರೇಪಿಸುವಾಗ ತಿಳುವಳಿಕೆಯುಳ್ಳ ಶೈಕ್ಷಣಿಕ ಆಯ್ಕೆಗಳನ್ನು ಮಾಡುವಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಪ್ರಮಾಣಿತ ಮತ್ತು ನಿಷ್ಪಕ್ಷಪಾತ ಮೌಲ್ಯಮಾಪನವನ್ನು ನೀಡುತ್ತದೆ. NIR ಈ ಬೋಧನೆ, ಕಲಿಕೆ ಮತ್ತು ಸಂಪನ್ಮೂಲಗಳು (TLR), ಸಂಶೋಧನೆ ಮತ್ತು ವೃತ್ತಿಪರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅಭ್ಯಾಸ (RP), ಪದವಿ ಫಲಿತಾಂಶಗಳು (GO), ಔಟ್ರೀಚ್ ಮತ್ತು ಒಳಗೊಳ್ಳುವಿಕೆ (OI), ಮತ್ತು ಗ್ರಹಿಕೆ (PR) ನಂತಹ ಪ್ರಮುಖ ಶ್ರೇಯಾಂಕದ ಮಾನದಂಡಗಳನ್ನು ಪರಿಗಣಿಸುತ್ತದೆ, ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿರ್ಣಯಿಸಲು ಮತ್ತು ವರ್ಧಿಸಲು ಮಾಹಿತಿಯ ಮೂಲ ಇದು ವಿಶ್ವಾಸಾರ್ಹವೆಂದು ಗುರುತಿಸುವಿಕೆಗೆ ಕೊಡುಗೆ ನೀಡುತ್ತದೆ.

ಇದು ಕೆಳಗಿನ ಪ್ರಮುಖ ಮಾನದಂಡಗಳ ಆಧಾರದ ಮೇಲೆ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಮೌಲ್ಯಮಾಪನ ಮಾಡುತ್ತದೆ.ಅವುಗಳೆಂದರೆ : – ಬೋಧನೆ, ಕಲಿಕೆ ಮತ್ತು ಸಂಪನ್ಮೂಲಗಳು (TLR): ಈ ಮಾನದಂಡವು ವಿದ್ಯಾರ್ಥಿ–ಅಧ್ಯಾಪಕರ ಅನುಪಾತ, ಅಧ್ಯಾಪಕರ ಅರ್ಹತೆಗಳು ಮತ್ತು ಗ್ರಂಥಾಲಯಗಳು ಮತ್ತು ಪ್ರಯೋಗಾಲಯಗಳಂತಹ ಸಂಪನ್ಮೂಲಗಳ ಲಭ್ಯತೆ ಸೇರಿದಂತೆ ಬೋಧನೆ ಮತ್ತು ಕಲಿಕೆಯ ಸಂಪನ್ಮೂಲಗಳ ಗುಣಮಟ್ಟವನ್ನು ನಿರ್ಣಯಿಸುತ್ತದೆ. ಸಂಶೋಧನೆ ಮತ್ತು ವೃತ್ತಿಪರ ಅಭ್ಯಾಸ (RP): ಸಂಶೋಧನಾ ಪ್ರಕಟಣೆಗಳು ಮತ್ತು ಪೇಟೆಂಟ್‌ಗಳ ಸಂಖ್ಯೆ ಮತ್ತು ಅವರ ವೃತ್ತಿಪರ ಅಭ್ಯಾಸಗಳನ್ನು ಒಳಗೊಂಡಂತೆ ಸಂಸ್ಥೆಗಳ ಸಂಶೋಧನಾ ಉತ್ಪಾದನೆಯನ್ನು NIRF ಮೌಲ್ಯಮಾಪನ ಮಾಡುತ್ತದೆ. ಪದವಿ ಫಲಿತಾಂಶಗಳು (GO): ಈ ಮಾನದಂಡವು ಉದ್ಯೋಗದ ವಿಷಯದಲ್ಲಿ ಪದವೀಧರರ ಯಶಸ್ಸನ್ನು ಮತ್ತು ಹೆಚ್ಚಿನ ಶಿಕ್ಷಣದ ಅವಕಾಶಗಳನ್ನು ಪಡೆದುಕೊಳ್ಳುವ ಅವರ ಸಾಮರ್ಥ್ಯವನ್ನು ಅಳೆಯುತ್ತದೆ. ಔಟ್‌ರೀಚ್ ಮತ್ತು ಇನ್‌ಕ್ಲೂಸಿವಿಟಿ (OI): ಸಾಮಾಜಿಕವಾಗಿ ಹಿಂದುಳಿದ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳು ಮತ್ತು ಲಿಂಗ ಸಮಾನತೆ ಸೇರಿದಂತೆ ವೈವಿಧ್ಯಮಯ ವಿದ್ಯಾರ್ಥಿ ಜನಸಂಖ್ಯೆಯನ್ನು ತಲುಪಲು ಸಂಸ್ಥೆಯ ಪ್ರಯತ್ನಗಳನ್ನು NIR ಈ ನಿರ್ಣಯಿಸುತ್ತದೆ. ಗ್ರಹಿಕೆ (PR): ಈ ಘಟಕವು ಶೈಕ್ಷಣಿಕ ಗೆಳೆಯರು, ಉದ್ಯೋಗದಾತರು ಮತ್ತು ಸಾರ್ವಜನಿಕರಲ್ಲಿ ಸಂಸ್ಥೆಯ ಗ್ರಹಿಕೆಯನ್ನು ಅಳೆಯುತ್ತದೆ.ಈ ಮಾನದಂಡಗಳು ಮಧ್ಯಸ್ಥಗಾರರಿಗೆ ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳ ಪರಿಣಾಮಕಾರಿತ್ವ ಮತ್ತು ಗುಣಮಟ್ಟದ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ನೀಡುತ್ತದೆ ಮತ್ತು ಯಾವ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಿಗೆ ಹಾಜರಾಗಬೇಕೆಂಬುದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ ಸಹಾಯ ಮಾಡುತ್ತದೆ.

## ಈ ವಿವಿಧ ಮಾನದಂಡಗಳ ಹೋಲಿಕೆ

ವಿಶ್ವವಿದ್ಯಾಲಯಗಳು QS ವಿಶ್ವವಿದ್ಯಾಲಯ ಶ್ರೇಯಾಂಕಗಳು, ಟೈಮ್ಸ್ ಉನ್ನತ ಶಿಕ್ಷಣ (THE) ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕಗಳು, ವಿಶ್ವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶ್ರೇಯಾಂಕಗಳು (ARWU ಅಥವಾ ಶಾಂಘೈ ಶ್ರೇಯಾಂಕಗಳು) ಮತ್ತು ಭಾರತದ (NIRF) ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕಗಳಂತಹ ವಿಶ್ವವಿದ್ಯಾಲಯದ ಶ್ರೇಯಾಂಕ ವ್ಯವಸ್ಥೆಗಳಿಂದ ವಿವಿಧ ಮಾನದಂಡಗಳು ಮತ್ತು ವಿಧಾನಗಳನ್ನು ಬಳಸಿಕೊಂಡು ಮೌಲ್ಯಮಾಪನ ಮತ್ತು ಶ್ರೇಯಾಂಕವನ್ನು ನೀಡಲಾಗುತ್ತದೆ. QS ಶ್ರೇಯಾಂಕದಲ್ಲಿನ ಪ್ರಮುಖ ಅಂಶಗಳು ಶೈಕ್ಷಣಿಕ ಮತ್ತು ಉದ್ಯೋಗದಾತರ ಖ್ಯಾತಿ, ವಿದ್ಯಾರ್ಥಿ ಅನುಪಾತಗಳಿಗೆ ಅಧ್ಯಾಪಕರು, ವಿದ್ಯಾರ್ಥಿ ಅನುಪಾತಗಳಿಗೆ ಅಂತರರಾಷ್ಟ್ರೀಯ ಅಧ್ಯಾಪಕರು, ಸಂಶೋಧನಾ ಉಲ್ಲೇಖಗಳು, ಸಿಬ್ಬಂದಿ ಅರ್ಹತೆಗಳು, ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳು, ವಿದ್ಯಾರ್ಥಿ ಚಲನಶೀಲತೆ ಮತ್ತು ಜಾಗತಿಕ ಸಂಶೋಧನಾ ಜಾಲಗಳು. ಶ್ರೇಯಾಂಕಗಳು ಸಂಶೋಧನೆಯ ಔಟ್‌ಪುಟ್, ಉಲ್ಲೇಖಗಳು, ಅಂತರರಾಷ್ಟ್ರೀಯ ಮಟ್ಟದಲ್ಲಿ ವೈವಿಧ್ಯತೆ ಮತ್ತು ಉದ್ಯಮದ ಆದಾಯದಂತಹ ಅಂಶಗಳ ಮೇಲೆ ಬಲವಾದ ಒತ್ತು ನೀಡುತ್ತವೆ. ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿನ ಸಂಶೋಧನಾ ಫಲಿತಾಂಶಗಳು, ತಲಾವಾರು ಆಧಾರದ ಮೇಲೆ ಶೈಕ್ಷಣಿಕ ಸಾಧನೆ, ನೊಬೆಲ್ ಪ್ರಶಸ್ತಿ ವಿಜೇತರು ಮತ್ತು ಫೀಲ್ಡ್ ಪದಕ ವಿಜೇತರು ಅಳೆಯುವ ಅಧ್ಯಾಪಕರ ಶ್ರೇಷ್ಠತೆ ಮತ್ತು ಶಿಕ್ಷಣದ ಗುಣಮಟ್ಟವನ್ನು ARWU ಅಥವಾ ಶಾಂಘೈ ಶ್ರೇಯಾಂಕಗಳು ಆದ್ಯತೆ ನೀಡುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ನಿರ್ದಿಷ್ಟವಾಗಿ ಭಾರತೀಯ ಶಿಕ್ಷಣ ಸಂಸ್ಥೆಗಳಿಗಾಗಿ ವಿನ್ಯಾಸಗೊಳಿಸಲಾದ NIRF, ಗ್ರಹಿಕೆ, ಪ್ರಭಾವ ಮತ್ತು ಒಳಗೊಳ್ಳುವಿಕೆ, ಸಂಶೋಧನೆ ಮತ್ತು ವೃತ್ತಿಪರ ಅಭ್ಯಾಸ, ಪದವಿ ಫಲಿತಾಂಶಗಳು ಮತ್ತು ಬೋಧನೆ ಮತ್ತು ಕಲಿಕೆಯ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ವಿಶ್ವವಿದ್ಯಾನಿಲಯದ ಶ್ರೇಯಾಂಕಗಳನ್ನು ಅರ್ಥೈಸುವಾಗ ಮತ್ತು ಬಳಸುವಾಗ, ಬಳಕೆದಾರರು ವಿವಿಧ ವಿಧಾನಗಳ ಬಗ್ಗೆ ತಿಳಿದಿರಬೇಕು ಏಕೆಂದರೆ ಈ ವೈವಿಧ್ಯಮಯ ಮಾನದಂಡಗಳು ಪ್ರತಿ ಶ್ರೇಯಾಂಕ ವ್ಯವಸ್ಥೆಯ ವಿಶಿಷ್ಟ ಆದ್ಯತೆಗಳು ಮತ್ತು ಗುರಿಗಳನ್ನು ಪ್ರತಿಬಿಂಬಿಸುತ್ತವೆ.

## ಕಾರ್ಯಕ್ಷಮತೆಯ ಸಮಗ್ರ ನೋಟ

ಶ್ರೇಯಾಂಕ ವ್ಯವಸ್ಥೆಗಳು ಈ ಸೂಚಕಗಳ ಸಂಯೋಜನೆಯನ್ನು ಬಳಸಿಕೊಳ್ಳುತ್ತವೆ, ಅವುಗಳು ಗ್ರಹಿಸಿದ ಪ್ರಾಮುಖ್ಯತೆಯ ಆಧಾರದ ಮೇಲೆ ಪ್ರತಿಯೊಂದಕ್ಕೂ ವಿಭಿನ್ನ ತೂಕವನ್ನು ನಿಯೋಜಿಸುತ್ತವೆ. ಈ ಬಹು ಆಯಾಮದ ವಿಧಾನವು ವಿಶ್ವವಿದ್ಯಾಯುಗಳ ಹೆಚ್ಚು ಸಮಗ್ರ ಮೌಲ್ಯಮಾಪನವನ್ನು ಅನುಮತಿಸುತ್ತದೆ, ಶೈಕ್ಷಣಿಕ, ಸಂಶೋಧನೆ, ನಾವೀನ್ಯತೆ ಮತ್ತು ಜಾಗತಿಕ ಸಹಯೋಗಕ್ಕೆ ಅವರ ಕೊಡುಗೆಗಳನ್ನು ಸೆರೆಹಿಡಿಯುತ್ತದೆ. ಉನ್ನತ ಶಿಕ್ಷಣದಲ್ಲಿ ಮಧ್ಯಸ್ಥಗಾರರು ಈ ಸೂಚಕಗಳನ್ನು ಬಳಸಿಕೊಂಡು ವಿಶ್ವವಿದ್ಯಾಲಯಗಳ ಸಾಮರ್ಥ್ಯ ಮತ್ತು ಸುಧಾರಣೆಯ ಕ್ಷೇತ್ರಗಳ ಒಳನೋಟಗಳನ್ನು ಪಡೆಯಲು, ಶೈಕ್ಷಣಿಕ ಗುಣಮಟ್ಟ ಮತ್ತು ಪ್ರಭಾವದ ನಿರಂತರ ವರ್ಧನೆಗೆ ಕೊಡುಗೆ ನೀಡಬಹುದು.

## ಉನ್ನತ ಶಿಕ್ಷಣದ ಮೇಲೆ ವಿಶ್ವವಿದ್ಯಾಲಯದ ಶ್ರೇಯಾಂಕಗಳ ಪ್ರಭಾವ

ವಿಶ್ವವಿದ್ಯಾಲಯದ ಶ್ರೇಯಾಂಕಗಳು, ಅವುಗಳ ಜಾಗತಿಕ ಗೋಚರತೆ ಮತ್ತು ಪ್ರಭಾವದೊಂದಿಗೆ, ಸಂಸ್ಥೆಗಳ ತಂತ್ರಗಳು, ವಿದ್ಯಾರ್ಥಿಗಳ ಆಯ್ಕೆಗಳು ಮತ್ತು ಶೈಕ್ಷಣಿಕ ಉತ್ಕೃಷ್ಟತೆಯ ಒಟ್ಟಾರೆ ಗ್ರಹಿಕೆಯನ್ನು ರೂಪಿಸುವ ಮೂಲಕ ಉನ್ನತ ಶಿಕ್ಷಣದ ಭೂದೃಶ್ಯವನ್ನು ಪರಿವರ್ತಿಸಿವೆ. ಈ ಶ್ರೇಯಾಂಕಗಳು ಗಣನೀಯ ತೂಕವನ್ನು ಹೊಂದಿರುತ್ತವೆ, ಜಾಗತಿಕ ಖ್ಯಾತಿಯನ್ನು ಹೆಚ್ಚಿಸುವುದು, ಉನ್ನತ ಪ್ರತಿಭೆಯನ್ನು ಆಕರ್ಷಿಸುವುದು, ಸಂಶೋಧನಾ ಅವಕಾಶಗಳು ಮತ್ತು ಸಹಯೋಗಗಳು, ನಿಧಿ ಮತ್ತು ದೇಣಿಗೆ, ವಿದ್ಯಾರ್ಥಿಗಳ ದಾಖಲಾತಿ ಮತ್ತು ವೈವಿಧ್ಯತೆ, ಗುಣಮಟ್ಟ ಸುಧಾರಣೆ, ಮಾನದಂಡಗಳಾಗಿ ಜಾಗತಿಕ ಶ್ರೇಯಾಂಕಗಳು, ಸ್ಪರ್ಧೆ ಮತ್ತು ನಾವೀನ್ಯತೆ, ಶೈಕ್ಷಣಿಕ ಚಲನಶೀಲತೆ ಇತ್ಯಾದಿ ವಿಶ್ವವಿದ್ಯಾಲಯಗಳ ಖ್ಯಾತಿ, ಹಣಕಾಸಿನ ಅವಕಾಶಗಳು ಮತ್ತು ನಿರೀಕ್ಷಿತ ವಿದ್ಯಾರ್ಥಿಗಳು ಮತ್ತು ಸಂಶೋಧಕರ ನಿರ್ಧಾರಗಳ ಮೇಲೆ ಪ್ರಭಾವ ಬೀರುತ್ತವೆ. (Hazelkorn, 2011)

## ಉಪಸಂಹಾರ

ಪ್ರಪಂಚದಾದ್ಯಂತ ಕಂಡುಬರುವ ವಿವಿಧ ರೀತಿಯ ಸಂಸ್ಥೆಗಳು, ಪ್ರತಿಯೊಂದೂ ತನ್ನದೇ ಆದ ವಿಶೇಷ ಗುಣಗಳನ್ನು ಮತ್ತು ಶೈಕ್ಷಣಿಕ ಗಮನವನ್ನು ಹೊಂದಿದ್ದು, ವಿಶ್ವವಿದ್ಯಾಲಯಗಳ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ. ವಿಶ್ವವಿದ್ಯಾಲಯಗಳು ವ್ಯಾಪಕ ಶ್ರೇಣಿಯ ಶೈಕ್ಷಣಿಕ ಮತ್ತು ವೃತ್ತಿ ಉದ್ದೇಶಗಳನ್ನು ಪೂರೈಸುತ್ತವೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅನುಭವಗಳು ಮತ್ತು ಅವಕಾಶಗಳ ಸಮೃದ್ಧ ಶ್ರೇಣಿಯನ್ನು ನೀಡುತ್ತವೆ, ಅವುಗಳು ಸಂಶೋಧನೆ–ಕೇಂದ್ರಿತ, ಬೋಧನೆ–ಕೇಂದ್ರಿತ, ಉದಾರವಾದ ಕಲೆ–ಆಧಾರಿತ, ತಾಂತ್ರಿಕ ಮತ್ತು ವೃತ್ತಿಪರ ಅಥವಾ ನಿರ್ದಿಷ್ಟ ವಿಭಾಗಗಳಲ್ಲಿ ಪರಿಣತಿ ಹೊಂದಿರಬಹುದು. ಹೆಚ್ಚುವರಿಯಾಗಿ, ವಿಶ್ವವಿದ್ಯಾಲಯದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶ್ರೇಯಾಂಕ ವ್ಯವಸ್ಥೆಗಳು ಜಗತ್ತಿನಾದ್ಯಂತ ಸಂಸ್ಥೆಗಳನ್ನು ನಿರ್ಣಯಿಸಲು ಮತ್ತು ವ್ಯತಿರಿಕ್ತಗೊಳಿಸಲು ನಿರ್ಣಾಯಕ ಸಂಪನ್ಮೂಲಗಳಾಗಿ ವಿಕಸನಗೊಂಡಿವೆ. ವಿಶ್ವವಿದ್ಯಾಲಯಗಳನ್ನು ಈ ವ್ಯವಸ್ಥೆಗಳಿಂದ ವಿವಿಧ ಮಾನದಂಡಗಳು ಮತ್ತು ವಿಧಾನಗಳನ್ನು ಬಳಸಿಕೊಂಡು ಶ್ರೇಣೀಕರಣ ಮಾಡಲಾಗುತ್ತದೆ, ಇದರಲ್ಲಿ QS ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕಗಳು, ಟೈಮ್ಸ್ ಉನ್ನತ ಶಿಕ್ಷಣ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕಗಳು, ವಿಶ್ವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶ್ರೇಯಾಂಕಗಳು (ARWU ಅಥವಾ ಶಾಂಘೈ ಶ್ರೇಯಾಂಕಗಳು), ಮತ್ತು ಭಾರತದ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು (NIRF). ಸಂಸ್ಥೆಗಳ ಕ್ಯಾಲಿಬರ್ ಮತ್ತು ಖ್ಯಾತಿಯನ್ನು ಅರ್ಥಮಾಡಿಕೊಳ್ಳಲು ಶ್ರೇಯಾಂಕಗಳು ಉಪಯುಕ್ತವಾಗಿವೆ, ಆದರೆ ಉನ್ನತ ಶಿಕ್ಷಣ ಕಾರ್ಯಕ್ರಮವನ್ನು ಆಯ್ಕೆಮಾಡುವಾಗ, ಅವುಗಳನ್ನು ಇತರ ಪರಿಗಣನೆಗಳೊಂದಿಗೆ ಸಂಯೋಜಿಸುವುದು ಮುಖ್ಯವಾಗಿದೆ.ಅಂತಿಮವಾಗಿ ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣದ ವೈವಿಧ್ಯಮಯ ಜಗತ್ತಿನಲ್ಲಿ ತಮ್ಮ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗಗಳ ಬಗ್ಗೆ ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಬಯಸುವ ಜನರಿಗೆ, ಅವರು ಶ್ರೇಯಾಂಕಗಳನ್ನು ಒಳಗೊಂಡಂತೆ ವಿವಿಧ ಅಸ್ಥಿರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಮತ್ತು ಪ್ರತಿ ವಿಶ್ವವಿದ್ಯಾಲಯದ ವಿಶಿಷ್ಟತೆಯನ್ನು ಅಂಗೀಕರಿಸುವುದು ಕಡ್ಡಾಯವಾಗಿದೆ.

## ಪರಾಮರ್ಶನ ಗ್ರಂಥಗಳು


- **Academic Ranking of World Universities. (n.d.):** About ARWU. Retrieved from , on, 27/08/2023
- **Altbach, P. G., & Salmi, J. (2011) :** The Road to Academic Excellence: The Making of World-Class Research Universities. World Bank Publications.Retrived from.https://aca-secretariat.be/newsletter/the-road-to-academic-excellence-the-making-of-world-class-research-universities/ on 30/08/2023
- **Dill D. D., & Soo M. (2005) :** Academic quality, league tables, and public policy: A cross-national analysis of university ranking systems. Higher Education, 49(4), 495-533, Retrieved from,https://link.springer.com/article/10.1007/s10734-004-1746-8, on 30/08/2023
- **Hazelkorn E. (2011) :** Rankings and the Reshaping of Higher Education: The Battle for World-Class Excellence. Palgrave Macmillan, Retrieved from,, on 30/08/2023
- **Hazelkorn E. (2015) :** Rankings and the Reshaping of Higher Education: The Battle for World-Class Excellence. Palgrave Macmillan. Retrieved from, on 30/08/2023
- **Marginson S. (2011) :** University rankings and social science: The case of economics. Journal of Economic Surveys, 25(2), 290-315. Retrieved from,, on 30/08/2023
- **Marginson S. (2013) :** University rankings and social science: Performance, prestige, and inequality. Higher Education, 65(4), 479-493. Retrieved from,, on 30/08/2023
- **QS World University Rankings. (n.d.):** Methodology. Retrieved from , on, 27/08/2023
- **Times Higher Education. (n.d.) :** World University Rankings - Methodology. Retrieved from , on, 27/08/2023
- **U.S. News & World Report. (n.d.):** Methodology: Best Global Universities Rankings. Retrieved from , on, 27/08/2023
- **Web metrics Ranking of World Universities. (n.d.):** Methodology. Retrieved from , on, 27/08/2023


APPROVED BY UGC CARE

■■

*– 24ನೇ ಪುಟದಿಂದ ಮುಂದುವರೆದುದು*

ಈ ಗ್ರಂಥ ರಚನೆಯಾಗಿ 21ನೇ ಶತಮಾನಕ್ಕೆ ಏಂಟು ಶತಮಾನ ಕಳೆದರೂ ಸಹ ಅದು ಇಂದಿಗೂ ಸಂಗೀತ ಲೋಕದ ಆಧಾರ ಹಾಗೂ ಪ್ರಮುಖ ಆಕರ ಗ್ರಂಥವಾಗಿದೆ. ಸಂಗೀತ ಕ್ಷೇತ್ರದ ಒಂದು ಪ್ರಮಾಣ ಗ್ರಂಥವಾಗಿದೆ. ಸಂಸ್ಕೃತ, ಹಿಂದಿ, ತಮಿಳ ಮುಂತಾದ ಭಾಷೆಯಲ್ಲಿ ಇದು ಪ್ರಕಟಗೊಂಡ ನಂತರ 1998ರಲ್ಲಿ ಮೊಟ್ಟಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾಲಯ ಕನ್ನಡದಲ್ಲಿ ಪ್ರಕಟಿಸಿದೆ. 20 ಹಾಗೂ 21ನೇ ಶತಮಾನದ ಶ್ರೇಷ್ಠ ಸಂಗೀತ ವಿದ್ವಾಂಸರಾಗಿರುವ, ಪುರುಷ ಸರಸ್ವತಿ ಎಂದೇ ಖ್ಯಾತಿ ಪಡೆದಿರುವ ಮೈಸೂರಿನ ಡಾ.ರಾ.ಸತ್ಯನಾರಾಯಣ ಅವರು ಕನ್ನಡದಲ್ಲಿ 'ಸಂಗೀತ ರತ್ನಾಕರ' ವೆಂಬ ಹೆಸರಿನಲ್ಲಿ ಅನುವಾದ ಮತ್ತು ವ್ಯಾಖ್ಯಾನ ಸಮಲಿತ ಬರೆದಿರುವುದು ಮತ್ತು ಅದನ್ನು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿರುವುದು ಕನ್ನಡಿಗರ ಪುಣ್ಯವೆನ್ನಬೇಕು.

## ಕೊನೆಟಿಪ್ಪಣಿ

1. ಸಂಗೀತ ರತ್ನಾಕರ, ಲೇ. : ಡಾ. ರಾ. ಸತ್ಯನಾರಾಯಣ, ಪುಟ–05.
2. ಕರ್ನಾಟಕ ಸಂಗೀತ ದೀಪಿಕೆ, ಲೇ.: ಡಾ. ವಿ ಎಸ್ ಸಂಪತ್ಕುಮಾರಾಚಾರ. ಪುಟ–231.
3. ಸಂಗೀತ ರತ್ನಾಕರಕೆ ವಿಭಿನ್ನ ಸಂಸ್ಕರಣೋಕಾ ಕಾಲ ಕ್ರಮಾನುಸಾರ ವಿವೇಚನ (ಹಿಂದಿ) ಲೇ.: ರಮೇಶ ಪಟೇಲ್, ಸಂಗೀತ (ಮಾಸಿಕ) ಪುಟ 16.

■■

ವಿದ್ಯಾನಿಧಿ VPG ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನ್ನಡ ಚಿತ್ರರಂಗದಲ್ಲಿ ಗಾಂಧಿ ಅಭಿವೃದ್ಧಿ ಮಾದರಿಯ ಪ್ರಸ್ತುತತೆ : ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾದ ವಿಶ್ಲೇಷಣಾತ್ಮಕ ಅಧ್ಯಯನ

✍ **ಸಚಿನ್ ಎನ್.ಜೆ.** ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

✍ **ಪ್ರೊ. ಸತೀಶ್ ಕುಮಾರ್,** ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

*ಪ್ರಸ್ತಾವನೆ*

*ಭಾರತೀಯ ಚಿತ್ರರಂಗದಲ್ಲಿಯೇ ಕನ್ನಡ ಚಿತ್ರರಂಗವು ತನ್ನ ವಿಭಿನ್ನ ಸಿನಿಮಾಗಳ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಪ್ರಸ್ತುತ ಕಾಲಕ್ಕೆ ತಕ್ಕಂತೆ ತೆರೆಗೆ ತರುತ್ತಿದೆ. ಇದಕ್ಕೆ ಪೂರಕವಾಗಿ ಇಡೀ ಭಾರತೀಯ ಚಲನಚಿತ್ರರಂಗವು ಮಹಾತ್ಮ ಗಾಂಧಿಯವರ ಪರಂಪರೆ ಮತ್ತು ಅವರ ಆದರ್ಶಗಳೊಂದಿಗೆ ಸೆಟೆದುಕೊಂಡಿದೆ. ಸಂಶೋಧನಾ ಲೇಖನವು ಕನ್ನಡ ಚಿತ್ರರಂಗದ ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾದ ಮೇಲೆ ಕೇಂದ್ರೀಕರಿಸಲಾಗಿದ್ದು, ಗಾಂಧಿ ಮಾದರಿಯ ನಿರಂತರ ಪ್ರಸ್ತುತತೆಯನ್ನು ಪರಿಶೋಧಿಸುತ್ತದೆ. ಅಲ್ಲದೇ ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಸಂದರ್ಭದಲ್ಲಿ ಅದರ ಸಾಮರ್ಥ್ಯ ಮತ್ತು ಮಿತಿಗಳನ್ನು ಎತ್ತಿ ತೋರಿಸುವ ಗಾಂಧಿ ಮಾದರಿಯನ್ನು ಹೇಗೆ ಬಳಸಿಕೊಳ್ಳಲಾಗಿದೆ ಎಂಬುದನ್ನು ಪರಿಶೀಲಿಸುತ್ತದೆ. ಅಹಿಂಸೆ, ಸಾಮಾಜಿಕ ನ್ಯಾಯ ಮತ್ತು ಸ್ವಾವಲಂಬನೆಯ ಗಾಂಧಿ ತತ್ವಗಳ ಮೇಲೆ ತೆರೆಕಂಡ ಈ ಸಿನಿಮಾದ ನಿರೂಪಣೆ, ಪಾತ್ರಗಳು ಮತ್ತು ವಿಷಯಾಧಾರಿತ ಅಂಶಗಳನ್ನು ವಿಷಯ ವಿಶ್ಲೇಷಣೆ ಮಾದರಿಯನ್ನು ಬಳಸಿ ಅಧ್ಯಯನ ನಡೆಸಲಾಗಿದೆ.*

*ಪ್ರಮುಖ ಪರಿಕಲ್ಪನೆಗಳು : ವಿಷಯ ವಿಶ್ಲೇಷಣೆ, ಗಾಂಧಿ ಮಾದರಿ, ಕನ್ನಡ ಸಿನಿಮಾ, ಸಾಮಾಜಿಕ ನ್ಯಾಯ, ಅಹಿಂಸೆ, ಸ್ವಾವಲಂಬನೆ*

## ಪೀಠಿಕೆ

ಕನ್ನಡ ಚಿತ್ರರಂಗವು ತನ್ನ ವೈವಿಧ್ಯಮಯ ನಿರೂಪಣೆಗಳು ಮತ್ತು ಸಾಮಾಜಿಕ ಸಮಸ್ಯೆಗಳ ಸೂಕ್ಷ್ಮ ಪ್ರತಿಬಿಂಬಗಳಿಗಾಗಿ ಬಹಳ ಹಿಂದಿನಿಂದಲೂ ಗುರುತಿಸಲ್ಪಟ್ಟಿದೆ. ಕನ್ನಡ ಚಲನಚಿತ್ರಗಳಲ್ಲಿ ಅನ್ವೇಷಿಸಲಾದ ಅಸಂಖ್ಯಾತ ವಿಷಯಗಳಲ್ಲಿ ಗಾಂಧಿ ಮಾದರಿ ಕೂಡ ಒಂದು. ಮಹಾತ್ಮ ಗಾಂಧಿಯವರ ತತ್ವಶಾಸ್ತ್ರದ ಪ್ರಭಾವವನ್ನು ಸಾಮಾನ್ಯವಾಗಿ ಗಾಂಧಿ ಮಾದರಿ ಎಂದು ಕರೆಯಲಾಗುತ್ತದೆ. ಗಾಂಧಿಯವರು ಪ್ರತಿಪಾದಿಸಿದ ಅಹಿಂಸೆ, ಸಾಮಾಜಿಕ ನ್ಯಾಯ ಮತ್ತು ಸ್ವಾವಲಂಬನೆಯ ತತ್ವಗಳು ಸಾಮಾನ್ಯವಾಗಿ ಕನ್ನಡ ಸಿನಿಮಾದ ನಿರೂಪಣೆಗಳಲ್ಲಿ ಮಾತ್ರವಲ್ಲದೇ ಕಥಾಹಂದರ ಮತ್ತು ಪಾತ್ರ ಚಿತ್ರಣಗಳನ್ನು ರೂಪಿಸುವಲ್ಲಿಯೂ ಬಳಸಿಕೊಳ್ಳಲಾಗಿದೆ.

ಅಹಿಂಸಾತ್ಮಕ ಪ್ರತಿರೋಧವನ್ನು ಆಧರಿಸಿದ ಸತ್ಯಾಗ್ರಹದ ಅವರ ತತ್ವಶಾಸ್ತ್ರವು ಜಗತ್ತಿನಾದ್ಯಂತ ಸಾಮಾಜಿಕ ಬದಲಾವಣೆಗಾಗಿ ಚಳುವಳಿಗಳನ್ನು ಪ್ರೇರೇಪಿಸಿದೆ. ಕನ್ನಡ ಚಿತ್ರರಂಗ ಸೇರಿದಂತೆ ಇಡೀ ಭಾರತೀಯ ಚಿತ್ರರಂಗವೂ ಕೂಡ ಗಾಂಧಿಯವರ ಪ್ರಭಾವದಿಂದ ಹೊರತಾಗಿಲ್ಲ. ಅವರ ಜೀವನವನ್ನು ಆಚರಿಸುವ ಚಲನಚಿತ್ರಗಳಿಂದ ಹಿಡಿದು ಅವರ ಪರಂಪರೆಯ ಸಂಕೀರ್ಣತೆಗಳೊಂದಿಗೆ ಹೋರಾಡುವವರೆಗೆ ಗಾಂಧೀಜಿ ಅವರು ಪುನರಾವರ್ತಿತ ವಿಷಯವಾಗಿ ಉಳಿದಿದ್ದಾರೆ.

## ಸಾಹಿತ್ಯ ವಿಮರ್ಶೆ

**ಜಾನ್ (2017)** ಅವರ ಸಂಶೋಧನಾ ಲೇಖನದಲ್ಲಿ ಸಿನಿಮಾ ಗಾಂಧಿಯವರ ಆದರ್ಶವಾದಿ ದೃಷ್ಟಿಕೋನಗಳನ್ನು ಹೇಗೆ ಪ್ರತಿಬಿಂಬಿಸುತ್ತದೆ ಎಂಬುದನ್ನು ತಿಳಿಸಿದ್ದಾರೆ. ಜೊತೆಗೆ ಸಾಮಾಜಿಕ ಸಮಸ್ಯೆಗಳು, ಏಕತೆ ಮತ್ತು ರಾಷ್ಟ್ರೀಯತೆಯನ್ನು ಚಿತ್ರಿಸಲಾದ ಪರಿಯನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ಅಲ್ಲದೇ ಈ ಸಂಶೋಧನಾ ಲೇಖನದಲ್ಲಿ ಗಾಂಧಿಯವರ ದೃಷ್ಟಿಕೋನಗಳನ್ನು ಲೆನಿನ್ ಅವರ ದೃಷ್ಟಿಕೋನಗಳೊಂದಿಗೆ ಹೋಲಿಸಲಾಗಿದೆ. ಸಾಮಾಜಿಕ ಬದಲಾವಣೆಗೆ ಸಿನಿಮಾದ ಸಾಮರ್ಥ್ಯವನ್ನು ಮತ್ತು ರಾಷ್ಟ್ರೀಯ ಪ್ರಜ್ಞೆಯ ಮೇಲೆ ಅದರ ಪ್ರಭಾವವನ್ನು ತಿಳಿಸಿದ್ದಾರೆ.

**ತಿವಾರಿ (2022)** ಅವರ ಲೇಖನದಲ್ಲಿ ಸಮಕಾಲೀನ ಜನಪ್ರಿಯ ಸಂಸ್ಕೃತಿಯಲ್ಲಿ ಮಹಾತ್ಮ ಗಾಂಧಿಯವರ ಕಾಲಾತೀತ ಪ್ರಸ್ತುತತೆಯನ್ನು ವಿಶೇಷವಾಗಿ ಬಾಲಿವುಡ್ ಚಲನಚಿತ್ರ "ಲಗೇ ರಹೋ ಮುನ್ನಾ ಭಾಯ್" ಮೂಲಕ ತೋರಿಸುತ್ತದೆ. ಗಾಂಧಿಯವರ ಬೋಧನೆಗಳ ಸಾಮಾಜಿಕ ಪ್ರಸ್ತುತತೆ ಮತ್ತು ಜಾಗತಿಕ ಸಂಸ್ಕೃತಿಯ ಮೇಲೆ ಅವರ ಪ್ರಭಾವವನ್ನು ಪ್ರತಿಬಿಂಬಿಸುವ, ಸತ್ಯ ಮತ್ತು ಅಹಿಂಸೆಯನ್ನು ಪ್ರಚಾರ ಮಾಡುವ ನಾಯಕನ ಗಾಂಧಿವಾದಿ ಆದರ್ಶಗಳನ್ನು ಚಿತ್ರಿಸುತ್ತದೆ.

**ಶ್ರೀನಿವಾಸ್ (1999)** ಅವರ ಸಂಶೋಧನಾ ಲೇಖನದಲ್ಲಿ 1930ರ ತೆಲುಗು ಚಿತ್ರರಂಗವನ್ನು ಪರಿಶೋಧಿಸುತ್ತದೆ. ಗುಡವಳ್ಳಿ ರಾಮಬ್ರಹ್ಮಮ್ ಅವರ ಎರಡು ಚಲನಚಿತ್ರಗಳಾದ 'ಮಲಪಿಳ್ಳ' ಮತ್ತು 'ರೈತು ಬಿಡ್ಡ' ಮೇಲೆ ಕೇಂದ್ರೀಕರಿಸಲಾಗಿದೆ. ರಾಜಕೀಯ, ಸಾಮಾಜಿಕ ವ್ಯವಸ್ಥೆ, ಸಾರ್ವಜನಿಕ ಸಂಸ್ಥೆಗಳು ಮತ್ತು ರಾಷ್ಟ್ರೀಯತಾವಾದಿ ಸಿದ್ಧಾಂತಗಳ ನಡುವಿನ ಪರಸ್ಪರ ಕ್ರಿಯೆಯನ್ನು ಈ ಅಧ್ಯಯನವು ಪರಿಶೀಲಿಸುತ್ತದೆ. ಸಿನಿಮಾವು ಜಾತಿ ಸಂಘರ್ಷಗಳು, ಸುಧಾರಣಾವಾದಿ ಪಾತ್ರಗಳು ಮತ್ತು ರಾಷ್ಟ್ರೀಯತಾವಾದಿ ವಿಷಯದ ಆದರ್ಶೀಕರಣವನ್ನು ವಿಶ್ಲೇಷಿಸುತ್ತದೆ. ಅಲ್ಲದೇ ಸಾಮಾಜಿಕ ಸಮಸ್ಯೆಗಳನ್ನು ಪ್ರತಿನಿಧಿಸುವಲ್ಲಿ ಚಲನಚಿತ್ರ ನಿರ್ಮಾಪಕರ ಪಾತ್ರವನ್ನು ಕೂಡ ಈ ಅಧ್ಯಯನದಲ್ಲಿ ತಿಳಿಸಲಾಗಿದೆ.

**ರಾಜೀವ್ ಶಹಾನಿ** ಅವರು ತಮ್ಮ ಲೇಖನದಲ್ಲಿ ಶ್ಯಾಮ್ ಬೆನಗಲ್ ಅವರ "ದಿ ಮೇಕಿಂಗ್ ಆಫ್ ಎ ಮಹಾತ್ಮ" ಮತ್ತು ಮಿಶಾಲ್ ಹುಸೇನ್ ಅವರ "ದಿ ಮೇಕಿಂಗ್ ಆಫ್ ದಿ ಮಹಾತ್ಮ" ಸಿನಿಮಾಗಳನ್ನು ಅಧ್ಯಯನ ನಡೆಸಿದ್ದಾರೆ. ಈ ಚಲನಚಿತ್ರಗಳನ್ನು ಸಾಂಪ್ರದಾಯಿಕ ಐತಿಹಾಸಿಕತೆಯೊಂದಿಗೆ ಹೋಲಿಕೆ ಮಾಡಲಾಗಿದೆ. ಅವುಗಳು ಮಿತಿಗಳನ್ನು ಹೊಂದಿದ್ದರೂ, ಸಿನಿಮಾಗಳು ಮೌಲ್ಯಯುತವಾದ ಮೂಲಗಳಾಗಿವೆ ಎಂದು ತಿಳಿಸಿದ್ದಾರೆ.

**ಮೂರ್ತಿ (2013)** ಅವರು ತಮ್ಮ ಅಧ್ಯಯನದಲ್ಲಿ ಮಹಾತ್ಮ ಗಾಂಧಿಯ ಕುರಿತಾದ ಮೂರು ಪ್ರಮುಖ ಚಲನಚಿತ್ರಗಳನ್ನು ವಿಶ್ಲೇಷಿಸಿದ್ದಾರೆ. ಐತಿಹಾಸಿಕ ಪ್ರಾತಿನಿಧ್ಯಗಳು, ಗಾಂಧಿಯವರ ವ್ಯಕ್ತಿತ್ವ, ನಾಯಕರೊಂದಿಗಿನ ಸಂವಹನಗಳು ಮತ್ತು ವಸಾಹತುಶಾಹಿ ನಂತರದ ಅರ್ಥಗಳನ್ನು ಕೇಂದ್ರೀಕರಿಸಿ ಅಧ್ಯಯನ ನಡೆಸಿದ್ದಾರೆ.

**ಪ್ರಭು ಗುಪ್ತಾರ (1983)** ಅವರ ಲೇಖನದಲ್ಲಿ ಸರ್ ರಿಚರ್ಡ್ ಅಟೆನ್‌ಬರೋ ಅವರ 'ಗಾಂಧಿ' ಸಿನಿಮಾದ ಮೇಲೆ ಅಧ್ಯಯನ ನಡೆಸಲಾಗಿದೆ. ಈ ಲೇಖನವು ಗಾಂಧಿಯವರ ಜೀವನ, ಟೀಕೆಗಳು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮತ್ತು ಭಾರತದ ಮೇಲೆ ಪ್ರಭಾವದ ಚಿತ್ರಣವನ್ನು ಸಿನಿಮಾ ಯಾವ ರೀತಯಲ್ಲಿ ಪರಿಶೀಲಿಸುತ್ತದೆ ಎಂಬುದನ್ನು ತಿಳಿಸಿದ್ದಾರೆ. ಅಲ್ಲದೇ ಗಾಂಧಿಯವರ ಪರಂಪರೆ, ಆಧುನಿಕ ಸಮಾಜದಲ್ಲಿ ಪ್ರಸ್ತುತತೆ ಮತ್ತು ಅವರ ಪಾತ್ರದ ಸಂಕೀರ್ಣತೆಗಳನ್ನು ಮೌಲ್ಯಮಾಪನ ಮಾಡುತ್ತದೆ. ಜೊತೆಗೆ ಭಾರತದ ಸಾಂಸ್ಕೃತಿಕ ಕ್ರಾಂತಿಯನ್ನು ರೂಪಿಸುವಲ್ಲಿ ಗಾಂಧಿಯವರ ಆಧ್ಯಾತ್ಮಿಕ ಮತ್ತು ನೈತಿಕ ತತ್ವಗಳ ಮಹತ್ವವನ್ನು ಈ ಲೇಖನದಲ್ಲಿ ಎತ್ತಿ ಹಿಡಿದು ತೋರಿಸುತ್ತದೆ.

ಗಾಂಧಿ ತತ್ವಶಾಸ್ತ್ರವು ಸಿನಿಮಾ ಅಧ್ಯಯನಗಳು ಸೇರಿದಂತೆ ವಿವಿಧ ವಿಭಾಗಗಳಲ್ಲಿ ಪಾಂಡಿತ್ಯಪೂರ್ಣ ವಿಚಾರಣೆಯ ವಿಷಯವಾಗಿದೆ. ವಿಶ್ವದಾದ್ಯಂತ ಹಲವಾರು ವಿದ್ವಾಂಸರು ಮತ್ತು ಅಧ್ಯಯನಕಾರರು ಭಾರತೀಯ ಚಿತ್ರರಂಗದ ಮೇಲೆ ಗಾಂಧಿಯವರ ಆಲೋಚನೆಗಳ ಪ್ರಭಾವವನ್ನು ಎತ್ತಿ ತೋರಿಸಿದ್ದಾರೆ. ಅಲ್ಲದೇ ಪ್ರಾದೇಶಿಕ ಸಿನಿಮಾಗಳಲ್ಲಿ ಗಾಂಧಿ ತತ್ವಗಳ ಚಿತ್ರಣವನ್ನು ಪರಿಶೀಲಿಸಿದ್ದಾರೆ. ಆದರೆ ಕನ್ನಡ ಚಿತ್ರರಂಗದಲ್ಲಿ ಗಾಂಧಿ ಮಾದರಿಯ ನಿರ್ದಿಷ್ಟ ಪರಿಶೋಧನೆ, ಅದರಲ್ಲೂ ವಿಶೇಷವಾಗಿ ಮಾತಾಡ್ ಮಾತಾಡ್ ಮಲ್ಲಿಗೆಯಂತಹ ಸಿನಿಮಾಗಳ ವಿಶ್ಲೇಷಣೆಯ ಮೂಲಕ, ತುಲನಾತ್ಮಕವಾಗಿ ಕಡಿಮೆ ಸಂಶೋಧನೆಗಳಾಗಿವೆ.

## ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ

ಇಡೀ ಭಾರತೀಯ ಚಿತ್ರರಂಗದ ಮೇಲೆ ಗಾಂಧಿಯವರ ಪ್ರಭಾವ ಮಹತ್ತರದ್ದಾಗಿದೆ. ಅವರ ಆದರ್ಶ ನಡೆಗಳು, ಹೋರಾಟದ ಪರಿ ಸೇರಿದಂತೆ ಅವರ ಜೀವನಾದಾರಿತ ಸಿನಿಮಾಗಳು ತೆರೆಕಂಡಿವೆ. ಕನ್ನಡ ಚಲನಚಿತ್ರರಂಗ ಕೂಡ ಇದಕ್ಕೆ ಹೊರತಾಗಿಲ್ಲ. ಗಾಂಧಿ ಮಾದರಿಯನ್ನು ಬಳಸಿಕೊಂಡು ಅಭಿವೃದ್ಧಿಯನ್ನು ಅಥವಾ ಗೆಲುವನ್ನು ಪಡೆಯಬಹುದಾದ ಪರಿಯನ್ನು ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾದಲ್ಲಿ ಗಮನಾರ್ಹವಾಗಿ ಚಿತ್ರಿಸಿದ್ದಾರೆ. ಈ ಸಿನಿಮಾಗಳು ಸಮಾಜಿಕ ಬದಲಾವಣೆಗಳಲ್ಲಿ ಮಹತ್ತರದ ಪಾತ್ರವನ್ನು ವಹಿಸುತ್ತವೆ. ಅಂತೆಯೇ ಈ ಸಿನಿಮಾಗಳ ಮೇಲೆ ಅಧ್ಯಯನಗಳು ಕೂಡ ನಡೆಯಬೇಕಿದೆ. ಈ ದೃಷ್ಟಿಯಿಂದ ಸಂಶೋಧನಾ ಲೇಖನವು ಸಮಕಾಲೀನ ಕಾಲದಲ್ಲಿ ಗಾಂಧಿ ಮಾದರಿಯೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಸಿಕೊಂಡಿರುವ ಸಿನಿಮಾವಾದ ಮಾತಾಡ್ ಮಾತಾಡ್ ಮಲ್ಲಿಗೆ ಮೇಲೆ ಕೇಂದ್ರೀಕರಿಸಿ ಅಧ್ಯಯನ ನಡೆಸಲಾಗಿದೆ.

## ಅಧ್ಯಯನ ವಿಧಾನ

ಈ ಸಂಶೋಧನೆಯಲ್ಲಿ ಗುಣಾತ್ಮಕ ವಿಷಯ ವಿಶ್ಲೇಷಣಾ ವಿಧಾನವನ್ನು ಬಳಸಿಕೊಳ್ಳಲಾಗಿದೆ. ವಿಮರ್ಶಾತ್ಮಕವಾಗಿ ಪರಿಶೋಧಿಸಲು ಗಾಂಧಿ ಮಾದರಿಯನ್ನು ನೇರವಾಗಿ ಪ್ರತಿಪಾದಿಸುವ ಕನ್ನಡದ ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಸಿನಿಮಾವನ್ನು ಪ್ರಾಥಮಿಕ ಮೂಲವಾಗಿ ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ. 2007ರಲ್ಲಿ ತೆರೆಕಂಡ ಈ ಸಿನಿಮಾವನ್ನು ನಾಗತಿಹಳ್ಳಿ ಚಂದ್ರಶೇಖರ್ ಅವರು ನಿರ್ದೇಶಿಸಿದ್ದಾರೆ. ಆಯ್ದ ಈ ಸಿನಿಮಾದಲ್ಲಿ ಗಾಂಧಿ ಮಾದರಿಯ ಪ್ರಸ್ತುತತೆ, ಗಾಂಧಿಯವರ ತತ್ವವನ್ನು ಪ್ರತಿನಿಧಿಸಲಾದ ಅಥವಾ ಅರ್ಥೈಸಲಾದ ಪರಿಯನ್ನು ವಿಶ್ಲೇಷಣೆ ನಡೆಸಲಾಗಿದೆ.

## ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾದಲ್ಲಿ ಗಾಂಧಿ ಮಾದರಿ

ಕಾರ್ಪೊರೇಟ್ ಗಣಿಗಾರಿಕಾ ಕಂಪನಿಯಿಂದ ಬೆದರಿಕೆಗೆ ಒಳಗಾದ ಹಳ್ಳಿಯಲ್ಲಿ ನಡೆಯುವ ಈ ಸಿನಿಮಾವು ತಮ್ಮ ಭೂಮಿ ಮತ್ತು ಪರಿಸರವನ್ನು ರಕ್ಷಿಸಲು ಸಮುದಾಯದ ಹೋರಾಟವನ್ನು ವಿವರಿಸುತ್ತದೆ. ಸಿನಿಮಾದ ನಾಯಕ ಗಾಂಧಿವಾದಿ ಹೂವಯ್ಯ, ಅಹಿಂಸಾತ್ಮಕ ವಿಧಾನಗಳನ್ನು ಬಳಸಿಕೊಂಡು ಸರ್ಕಾರಕ್ಕೆ ಸವಾಲು ಒಡ್ಡಿ ಯಶಸ್ವಿಯಾಗುವ ಕಥಾಹಂದರವನ್ನು ಹೊಂದಿದೆ.

ಈ ಸಿನಿಮಾವು ಗಾಂಧಿ ಮಾದರಿಯ ಸೂಕ್ಷ್ಮ ಚಿತ್ರಣವನ್ನು ಪ್ರಸ್ತುತಪಡಿಸುತ್ತದೆ. ಹೂವಯ್ಯ ಅವರ ಅಹಿಂಸೆಯ ಅಚಲ ಬದ್ಧತೆ ಸಿನಿಮಾದುದ್ದಕ್ಕೂ ಎದ್ದುಕಾಣುತ್ತದೆ. ಸಿನಿಮಾದಲ್ಲಿ ಗುಡಿ ಕೈಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾದ ಪರಿಯನ್ನು ಸಿನಿಮಾದ ಆರಂಭದಲ್ಲಿ ನೋಡಬಹುದಾಗಿದೆ. ಹೂವಯ್ಯ ಶಾಂತಿಯುತ ಪ್ರತಿಭಟನೆಗಳನ್ನು ನಡೆಸುತ್ತಾ, ಗ್ರಾಮಸ್ಥರಿಗೆ ಅವರ ಹಕ್ಕುಗಳ ಬಗ್ಗೆ ಶಿಕ್ಷಣ ನೀಡುವ ಪರಿಯನ್ನು ಹೇಳಲಾಗಿದೆ. ಸತ್ಯಾಗ್ರಹದ ಈ ಅನುಸರಣೆಯು ಸಾಮಾಜಿಕ ನ್ಯಾಯವನ್ನು ಸಾಧಿಸಲು ಸತ್ಯದ ಶಕ್ತಿ ಮತ್ತು ಅಹಿಂಸಾತ್ಮಕ ಪ್ರತಿರೋಧದ ಪ್ರಮುಖ ಗಾಂಧಿ ಮಾದರಿಯನ್ನು ಪ್ರತಿಬಿಂಬಿಸುತ್ತದೆ.

ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾ ಗಾಂಧಿ ಮಾದರಿಯ ಶಕ್ತಿಗಳನ್ನು ಎತ್ತಿ ತೋರಿಸುತ್ತದೆ. ಹೂವಯ್ಯ ಅವರ ನಾಯಕತ್ವವು ಸಮುದಾಯವನ್ನು ಪ್ರೇರೇಪಿಸುತ್ತದೆ. ಈ ಸಿನಿಮಾವು ವಿಶೇಷವಾಗಿ ಪ್ರಬಲ ವಿರೋಧಿಗಳನ್ನು ಎದುರಿಸುವಾಗ ಸಾಮಾಜಿಕ ಬದಲಾವಣೆಗೆ ಪ್ರಬಲವಾದ ಸಾಧನವಾಗಿ ಗಾಂಧಿ ಸತ್ಯಾಗ್ರಹದ ತತ್ವವನ್ನು ಒತ್ತಿಹೇಳುತ್ತದೆ.

ಸಿನಿಮಾದಲ್ಲಿ ಭ್ರಷ್ಟಾಚಾರ, ಲಂಚಗೂಳಿತನ, ಅಧಿಕಾರ ದುರುಪಯೋಗದ ಜೊತೆ ಜೊತೆಗೆ ಸಾರ್ವಜನಿಕರಿಗೆ ಮಾಧ್ಯಮಗಳ ಸಹಕಾರದ ಚಿತ್ರಣವನ್ನು ಬಿಂಬಿಸಿದ್ದಾರೆ. ಸರ್ಕಾರ ಆರ್ಥಿಕ ಅಭಿವೃದ್ಧಿಯ ದೃಷ್ಟಿಯನ್ನಿಟ್ಟುಕೊಂಡು ಕೃಷಿ ಜಮೀನನ್ನು ಗಣಿಗಾರಿಕೆಯಾಗಿ ಪರಿವರ್ತನೆ ಮಾಡುವ ಪ್ರಯತ್ನಕ್ಕೆ ಅಡ್ಡಲಾಗಿ ಗಾಂಧಿ ತತ್ವಾದರ್ಶವನ್ನ ಹೊಂದಿದ ನಾಯಕ ನಟ ಅದರ ವಿರುದ್ಧ ನಿಂತು ಶಾಂತಿಯುತ ಹೋರಾಟದ ಮೂಲಕ, ಸತ್ಯಾಗ್ರಹದ ಮೂಲಕ ಯಶಸ್ಸನ್ನು ಕಾಣುವ ಪರಿ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ. ಗಾಂಧಿ ತತ್ವವನ್ನ ಆದರ್ಶವಾಗಿಟ್ಟುಕೊಂಡಿರುವ ನಾಯಕ ನಟನ ವಸ್ತ್ರ ವಿನ್ಯಾಸವಾಗಿರಬಹುದು ಅವರ ಶಾಂತಿಯತ ನಡೆವಳಿಕೆಯೂ ಕೂಡ ಶಾಂತಿ ಸಂದೇಶವನ್ನು ನೀಡುವ ಪರಿಯನ್ನು ತಿಳಿಸಲಾಗಿದೆ.

ಒಂದು ಕಡೆ ಗಾಂಧಿ ಮಾದರಿಯನ್ನು ಹೇಳುವ ಅಹಿಂಸಾ ಮಾರ್ಗ, ಇನ್ನೊಂದು ಕಡೆ ಕಮ್ಯುನಿಸ್ಟ್ ಮಾದರಿ ಹಿಂಸೆಯನ್ನು ಪ್ರೇರೇಪಿಸುವ ಅಂಶವನ್ನು ತಿಳಿಸಲಾಗಿದೆ. ಸಿನಿಮಾದಲ್ಲಿ ಕ್ಷಣಿಕ ಗೆಲುವನ್ನು ಕಮ್ಯುನಿಸ್ಟ್ ಮಾದರಿ ತಿಳಿಸಿದರೆ ಇನ್ನೊಂದು ಕಡೆ ದೀರ್ಘಾವಧಿಯ ಗೆಲುವನ್ನ ಅಥವಾ ಶಾಶ್ವತ ಗೆಲವನ್ನು ಗಾಂಧಿ ಮಾದರಿಯು ಪ್ರಸ್ತುತ ಪಡಿಸಿದ ಅಂಶವನ್ನು ತಿಳಿಸಲಾಗಿದೆ.

ಆದಾಗ್ಯೂ, ಸಮಕಾಲೀನ ಸವಾಲುಗಳನ್ನು ಎದುರಿಸುವಲ್ಲಿ ಗಾಂಧಿ ಮಾದರಿಯ ಮಿತಿಗಳನ್ನು ಚಲನಚಿತ್ರವು ಒಪ್ಪಿಕೊಳ್ಳುತ್ತದೆ. ಕಮ್ಯುನಿಸ್ಟ್ ಮಾರ್ಗವನ್ನು ಕೂಡ ಸಿನಿಮಾದಲ್ಲಿ ಪ್ರಸ್ತುತ ಪಡಿಸಿ, ಪ್ರಬಲ ಸಂಸ್ಥೆಗಳ ನಿರ್ದಯ ತಂತ್ರಗಳನ್ನು ಎದುರಿಸಲು ಅಹಿಂಸೆ ಮಾತ್ರ ಸಾಕಾಗುವುದಿಲ್ಲ ಎಂದು ಚಲನಚಿತ್ರವು ಸೂಚಿಸುತ್ತದೆ.

## ಗಾಂಧಿ ಮಾದರಿ ಮತ್ತು ಸುಸ್ಥಿರ ಅಭಿವೃದ್ಧಿ

ಅಹಿಂಸೆ, ಸತ್ಯ ಮತ್ತು ಸ್ವಾವಲಂಬನೆಯ ಗಾಂಧಿ ಮಾದರಿಯು ಸುಸ್ಥಿರ ಅಭಿವೃದ್ಧಿಗೆ ಸ್ಫೂರ್ತಿಯ ಮೂಲವಾಗಿ ಗುರುತಿಸಲ್ಪಟ್ಟಿದೆ. ಪ್ರಗತಿ ಮತ್ತು ವಾಸ್ತವಿಕವಾದದ ಹೆಸರಿನಲ್ಲಿ ನೈತಿಕ ದಿಕ್ಸೂಚಿ ರಾಜಿ ಮಾಡಿಕೊಳ್ಳುತ್ತಿರುವ ಯುಗದಲ್ಲಿ, ಮಹಾತ್ಮ ಗಾಂಧಿಯವರ ನೈತಿಕ ಮೌಲ್ಯಗಳು ಪರಿವರ್ತನಾ ನಾಯಕತ್ವ ಮತ್ತು ಸುಸ್ಥಿರ ಅಭಿವೃದ್ಧಿಗೆ ಮಾದರಿಯಾಗಬಲ್ಲವು. ಅಂತೆಯೇ ಈ ಸಿನಿಮಾದಲ್ಲಿ ಗುಡಿ ಕೈಗಾರಿಕೆಗೆ ಪ್ರಾಶಸ್ತ್ಯವನ್ನು ನೀಡಿರುವುದು ಗಮನಿಸಬೇಕಾದ ಅಂಶವಾಗಿದೆ.

## ಗಾಂಧಿ ಮಾದರಿ ಮತ್ತು ಪರಿವರ್ತನೆಯ ನಾಯಕತ್ವ

ಮಹಾತ್ಮಾ ಗಾಂಧಿಯವರ ಜೀವನವು ಸಮರ್ಪಣಾ ಮನೋಭಾವ ಮತ್ತು ಸರಳತೆಯಿಂದ ಕೂಡಿತ್ತು. ಅಲ್ಲದೇ ಅಹಿಂಸೆ ಮತ್ತು ಸತ್ಯವನ್ನು ತಮ್ಮ ಜೀವನದ ಮಾರ್ಗದರ್ಶಿ ತತ್ವಗಳಾಗಿ ಗೌರವಿಸಿದರು. ಅಂತೆಯೇ ಈ ಸಿನಿಮಾದಲ್ಲಿಯೂ ಕೂಡ ನಾಯಕ ನಟನ ಜೀವನ ಮಾದರಿಯು ಹೆಚ್ಚು ಸರಳತೆಯಿಂದ ಕೂಡಿದ್ದು, ಆತ ಅಹಿಂಸೆ ಮತ್ತು ಸತ್ಯವನ್ನು ತನ್ನ ಜೀವನದ ತತ್ವಗಳಾಗಿ ನಡೆಸಿಕೊಂಡು ಜಯವನ್ನ ಸಾಧಿಸುವ ಅಂಶವನ್ನು ತಿಳಿಸಲಾಗಿದೆ.

## ಗಾಂಧಿ ಮಾದರಿ ಮತ್ತು ಜಾಗತಿಕ ಬದಲಾವಣೆಗಳು

ಮಹಾತ್ಮಾ ಗಾಂಧಿಯವರ ದೃಷ್ಟಿಕೋನವು ಸಾರ್ವತ್ರಿಕ ಮತ್ತು ಕಾಲಾತೀತವಾಗಿದ್ದು, ಭೌಗೋಳಿಕ ಗಡಿಗಳನ್ನು ದಾಟಿದೆ. ಅಹಿಂಸಾತ್ಮಕ ಮತ್ತು ನ್ಯಾಯಯುತ ಸಮಾಜದ ಪರಿಕಲ್ಪನೆ ಗಾಂಧಿಯವರ ದೃಷ್ಟಿಕೋನವು ಅನೇಕ ಜಾಗತಿಕ ನಾಯಕರು ಮತ್ತು ಹಲವಾರು ಚಳುವಳಿಗಳಿಗೆ ಸ್ಫೂರ್ತಿ ನೀಡಿದೆ. ಅಲ್ಲದೇ ಸಮಕಾಲೀನ ಜಾಗತಿಕ ಸವಾಲುಗಳನ್ನು ಎದುರಿಸುವಲ್ಲಿ ಅವರ ತತ್ವಗಳು ಪ್ರಸ್ತುತವಾಗಿವೆ. ಇದಕ್ಕೆ ಪ್ರಮುಖ ಉದಾಹರಣೆ ಈ ಸಿನಿಮಾದಲ್ಲಿ ಗಾಂಧಿ ಮತ್ತು ಕಮ್ಯುನಿಸ್ಟ್ ಮಾದರಿಯು ಮುಖಾ ಮುಖಿಯಾಗಿ ಒಂದು ಕಡೆ ಗಾಂಧಿ ತತ್ವಾದರ್ಶಗಳನ್ನಿಟ್ಟುಕೊಂಡ ನಾಯಕ ನಟನ ಹೋರಾಟ. ಇನ್ನೊಂದ ಕಡೆ ಕಮ್ಯುನಿಸ್ಟ್ ತತ್ವಾದರ್ಶಗಳನ್ನಿಟ್ಟುಕೊಂಡು ಹಿಂಸಾತ್ಮಕ ಹೋರಾಟವನ್ನು ನಡೆಸುವ ಇನ್ನೊಂದು ಪಾತ್ರವನ್ನ ಇಲ್ಲಿ ಪ್ರಸ್ತುತಪಡಿಸಿದ್ದಾರೆ. ಆದರೆ ಈ ಸಿನಿಮಾದಲ್ಲಿ ಗಾಂಧಿ ಆದರ್ಶಗಳನ್ನಿಟ್ಟು ಕೊಂಡ ನಾಯಕ ನಟನಿಗೆ ಗೆಲುವು ತಡವಾಗಿ ಸಿಕ್ಕರೂ ಕೂಡ ಶಾಶ್ವತವಾದ ಪರಿಹಾರ ರೂಪದಲ್ಲಿ ದೊರೆಯವುದನ್ನು ಕಾಣಬಹುದು.

## ಗಾಂಧಿ ಮಾದರಿಯ ಪ್ರಸ್ತುತತೆ

ಹಿಂಸಾಚಾರ ಮತ್ತು ಭೌತಿಕವಾದವು ಅತಿರೇಕವಾಗಿರುವ ಇಂದಿನ ಜಗತ್ತಿನಲ್ಲಿ ಗಾಂಧಿ ತತ್ವಗಳ ಚಿತ್ರಣವು ಇನ್ನೂ ಪ್ರಸ್ತುತವಾಗಿದೆ. ಸಂಘರ್ಷಗಳು ಮತ್ತು ತಪ್ಪು ಮಾಹಿತಿಯು ವ್ಯಾಪಕವಾಗಿರುವ ಜಗತ್ತಿನಲ್ಲಿ ಅಹಿಂಸೆ ಮತ್ತು ಸತ್ಯದ ಚಿತ್ರದ ಸಂದೇಶವು ವಿಶೇಷವಾಗಿ ಪ್ರಸ್ತುತವಾಗಿದೆ. ಸ್ವಯಂ ಶಿಸ್ತು ಮತ್ತು ಸಮಾಜ ಸೇವೆಯ ಚಿತ್ರಣವು ಉತ್ತಮ ಸಮಾಜವನ್ನು ನಿರ್ಮಿಸುವಲ್ಲಿ ಈ ಮೌಲ್ಯಗಳ ಮಹತ್ವವನ್ನು ನೆನಪಿಸುತ್ತದೆ.

## ಉಪಸಂಹಾರ

ಗಾಂಧಿ ತತ್ವಗಳು ಭಾರತೀಯ ಸಮಾಜ ಮತ್ತು ರಾಜಕೀಯದ ಮೇಲೆ ಮಹತ್ವದ ಪ್ರಭಾವ ಬೀರಿವೆ ಮತ್ತು ಸಮಕಾಲೀನ ಕಾಲದಲ್ಲಿ ಅವುಗಳ ಪ್ರಸ್ತುತತೆ ಇನ್ನೂ ಚರ್ಚೆಯ ವಿಷಯವಾಗಿದೆ. ಕನ್ನಡ ಚಿತ್ರೋದ್ಯಮವು ಗಾಂಧಿ ಮಾದರಿಯನ್ನು ವಿವಿಧ ರೀತಿಯಲ್ಲಿ ಅನ್ವೇಷಿಸುತ್ತಾ ಬರುತ್ತಿದೆ. ಈ ನಿಟ್ಟಿನಲ್ಲಿ ಮಾತಾಡ್ ಮಾತಾಡ್ ಮಲ್ಲಿಗೆ ಸಿನಿಮಾವು ಗಮನಾರ್ಹ ಉದಾಹರಣೆಯಾಗಿದೆ.

ಈ ಸಿನಿಮಾದಲ್ಲಿ ನಿರೂಪಣೆಯೊಳಗೆ ಗಾಂಧಿ ತತ್ವಗಳನ್ನು ಪ್ರತಿನಿಧಿಸುವ ಮತ್ತು ಸಂಧಾನ ಮಾಡುವ ಸೂಕ್ಷ್ಮ ವಿಧಾನಗಳನ್ನು ಎತ್ತಿ ತೋರಿಸುತ್ತದೆ. ಕರ್ನಾಟಕದ ಸಾಮಾಜಿಕ–ರಾಜಕೀಯ ಭೂದೃಶ್ಯದೊಳಗೆ ಚಲನಚಿತ್ರವನ್ನು ಸಂದರ್ಭೋಚಿತಗೊಳಿಸುವ ಮೂಲಕ ಕನ್ನಡ ಸಿನಿಮಾದಲ್ಲಿ ಗಾಂಧಿಯವರ ಆದರ್ಶಗಳ ನಿರಂತರ ಮಹತ್ವದ ಬಗ್ಗೆ ಅಮೂಲ್ಯವಾದ ಒಳನೋಟಗಳನ್ನು ನೀಡಿದ್ದಾರೆ.

ಆದಾಗ್ಯೂ, ಚಿತ್ರದ ಪಾತ್ರಗಳು ಮತ್ತು ಸಮಾಜದ ಚಿತ್ರಣವು ಸರಳವಾಗಿದೆ. ಅಲ್ಲದೇ ನೈಜ ಪ್ರಪಂಚದ ಸಂಕೀರ್ಣತೆಗಳನ್ನು ನಿಖರವಾಗಿ ಪ್ರತಿಬಿಂಬಿಸಿ ಎಲ್ಲಾ ಮಿತಿಗಳ ನಡುವೆಯೂ ಕನ್ನಡ ಚಿತ್ರರಂಗದಲ್ಲಿ ಗಾಂಧಿ ಮಾದರಿಯ ಅನ್ವೇಷಣೆಗೆ ಈ ಚಿತ್ರ ಅಮೂಲ್ಯ ಕೊಡುಗೆಯಾಗಿ ಉಳಿದಿದೆ.

## ಪರಾಮರ್ಶನ ಗ್ರಂಥಗಳು


- **John E. (2017)** . GANDHI AND CINEMA: AN ASSOCIATION RE-EXAMINED. Kalindi College Yearly Academic Journal 2017 (ISSN: 2348-9014), XVI(I), 49–57.
- **Tiwari S. (2022) :** Gandhi in Popular Culture: A Critical Study of Gandhigiri in Lage Raho Munna Bhai. Mittal Publication .
- **S.V. S. (1999) :** Gandhian Nationalism and Melodrama in the 30's Telugu Cinema. Journal of the Moving Image.
- **Gandhi :** the film and the man by Prabhu Guptara (Originally published in Media Development magazine, London, U.K: February 1983). https://www.academia.edu/8086289/Gandhi_the_Man_and_the_Attenborough_film?rhid= 27591686876&swp=rr-rw-wc-96476031
- **MURTHY C.S.H.N. (2013) :** The Tale Of Gandhi Through The Lens: An Inter-Textual Analytical Study Of Three Major Films- Gandhi, The Making Of The Mahatma, And Gandhi, My Father. CINEJ Cinema Journal.
- **Rajiv Shahani :** Represenation of M K Ghandhi in Film. https://www.academia.edu/29997307/The_Representations_of_MK_Gandhi_in_Film_docx?rhid = 27591686876&swp=rr-rw-wc-96476031
- **Srinivas Lakshmi (2010) :** Cinema halls, locality and urban life. Ethnography. 11. 189-205. 10.1177/1466138109355213.


■■

– *75ನೇ ಪುಟದಿಂದ ಮುಂದುವರೆದುದು*


- **ಟಿ. ಪಿ. ಅಶೋಕ 2013 :** ಕಾವ್ಯ ಪ್ರೀತಿ, ಹೆಗ್ಗೋಡು ಅಕ್ಷರ ಪ್ರಕಾಶನ
- **ವೈದೇಹಿ (2007) :** ವೈದೇಹಿ ಅವರ ಆಯ್ದ ಕವಿತೆಗಳು, ಹೆಗ್ಗೋಡು ಅಕ್ಷರ ಪ್ರಕಾಶನ.
- **ಪ್ರತಿಭಾ ನಂದಕುಮಾರ (2007) :** ಪ್ರತಿಭಾನಂದ ಕುಮಾರ ಅವರ ಆಯ್ದ ಕವಿತೆಗಳು, ಹೆಗ್ಗೋಡು ಅಕ್ಷರ ಪ್ರಕಾಶನ.
- **ಟಿ.ಪಿ. ಅಶೋಕ (2010) :** ಪುಸ್ತಕ ಪ್ರೀತಿ, ಹೆಗ್ಗೋಡು ಅಕ್ಷರ ಪ್ರಕಾಶನ
- **ಎಂ.ಎಸ್. ಆಶಾದೇವಿ (2006) :** ಸ್ತ್ರೀಮತವನುತ್ತರಿಸಲಾಗದೇ ? ಹೆಗ್ಗೋಡು ಅಕ್ಷರ ಪ್ರಕಾಶನ.
- **ಎಂ.ಎಸ್. ಆಶಾದೇವಿ (2011) :** ನಡುವೆ ಸುಳಿವ ಆತ್ಮ, ಶಿವಮೊಗ್ಗ ಅಹರ್ನಿಶಿ ಪ್ರಕಾಶನ ಜ್ಯೋತಿರಾವ್ ಬೀದಿ 4ನೇ ತಿರುವು ವಿದ್ಯಾನಗರ
- **ಮಲ್ಲಿಕಾ ಘಂಟಿ (2020) :** ಸ್ತ್ರೀವಾದಿ ಚಿಂತನೆ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಪಿ. ಲಂಕೇಶರ ಕಥೆಗಳಲ್ಲಿ ಜೀವನ ದರ್ಶನ

✍ **ಶ್ರೀನಿವಾಸ ಎನ್.**, ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಪಿ. ಲಂಕೇಶ್‌ರವರು ಕನ್ನಡ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರು. ಇವರು ಸಾಹಿತಿ, ಪತ್ರಕರ್ತ, ಕಥೆಗಾರ, ಕವಿ, ಕಾದಂಬರಿಕಾರ, ಅನುವಾದಕ, ನಾಟಕಕಾರ, ಸಂಪಾದಕ, ನಟ, ಚಲನಚಿತ್ರ ನಿರ್ದೇಶಕ, ಕೃಷಿಕ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯ ಮೂಲಕ ತನ್ನದೇ ಆದಂತಹ ಛಾಪು ಮೂಡಿಸಿದಂತವರು.ಲಂಕೇಶರು ಇಷ್ಟೆಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದರೂ ಅವರು ಪ್ರಧಾನವಾಗಿ ಕಥೆಗಾರರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಂ.ಎ., ವಿದ್ಯಾರ್ಥಿಯಾಗಿದ್ದಾಗಲೇ 1958ರಲ್ಲಿ 'ವಾಮನ' ಕಥೆ ಪ್ರಕಟಿಸಿದ್ದರು. ನಂತರ ಸುಮಾರು ನಲವತ್ತಕ್ಕು ಹೆಚ್ಚು ಕಥೆಗಳನ್ನು ಪ್ರಕಟಿಸಿದ್ದಾರೆ. ಈ ಕಥೆಗಳಲ್ಲೆಲ್ಲ ಬಹುಮುಖ್ಯವಾಗಿ ಮನುಷ್ಯ ಜೀವನದ ದರ್ಶನಗಳನ್ನು ಸೆರೆಹಿಡಿದಿದ್ದಾರೆ. ಇದಕ್ಕೆಲ್ಲ ಲಂಕೇಶ್ ಅವರಿಗೆ 'ಸಮಾಜವಾದದತ್ತ' ಇದ್ದ ವಿಶೇಷ ಆಸಕ್ತಿ ಹಾಗೂ ಲೋಹಿಯಾರ 'ಸಮಾಜವಾದ'ದಿಂದ ಪ್ರಭಾವಿತರಾಗಿದ್ದರಿಂದಲೇ ಅವರ ಬಹುತೇಕ ಸಾಹಿತ್ಯದಲ್ಲಿ ಈ ರೀತಿಯ ಆಲೋಚನಾ ಕ್ರಮಗಳು ನಿರೂಪಣೆ ಯಾಗಿರುವುದನ್ನು ಕಾಣಬಹುದು. ಅದರಲ್ಲೂ ಮುಖ್ಯವಾಗಿ ಇವರು ಸಾಮಾನ್ಯ ಜನರ ಸ್ಥಿತಿ ಮತ್ತು ಮನಸ್ಸಿನ ವೇದನೆಯನ್ನು ಯಾವುದೇ ಆಡಂಬರವಿಲ್ಲದ ತೀರ ಸರಳವಾಗಿ ಮನಸ್ಸಿಗೆ ತಟ್ಟುವಂತೆ ಬರೆದಿದ್ದಾರೆ. ಇಲ್ಲಿ ಬರುವ ಪಾತ್ರಗಳು ನಾವೆಲ್ಲ ನಿತ್ಯ ಜೀವನದಲ್ಲಿ ನೋಡುವ ಜನರ ಪಾತ್ರಗಳೇ ಆಗಿದ್ದಾರೆ.

ಸ್ವಾತಂತ್ರೋತ್ತರ ಮನುಷ್ಯನ ಏಕಾಂತತನ, ಭ್ರಮ ನಿರಸನ, ಸೋಲು, ಸಣ್ಣತನ, ಆಕಾಂಕ್ಷೆಗಳನ್ನು ಲಂಕೇಶರ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಮನುಷ್ಯನಲ್ಲೂ ಹುಳುಕುಗಳಿವೆ, ಸಣ್ಣತನಗಳಿವೆ, ತಮ್ಮ ಹುಳುಕನ್ನು ನಾವೇನೋಡಲಿಚ್ಚಿಸುವುದಿಲ್ಲ ಈ ಬಗೆಯ ಸೂಕ್ಷ್ಮವನ್ನು ನಿಷ್ಠುರವಾಗಿ ಬಹಿರಂಗಗೊಳಿಸಬೇಕೆಂದು ಲಂಕೇಶರ ಸಾಹಿತ್ಯ ಹೇಳುತ್ತದೆ. ಸ್ವತಃ ಲಂಕೇಶರೇ ತಮ್ಮ ಕಥೆಗಳಲ್ಲಿ ತಮ್ಮ ಆತ್ಮಪರಿಶೋಧನೆ ಮಾಡಿಕೊಳ್ಳುತ್ತಾರೆ. ಮನುಷ್ಯನ ಸಣ್ಣತನಗಳ ವಿವಿಧ ಸ್ತರಗಳನ್ನು ಲಂಕೇಶರ ಕಥೆಗಳಲ್ಲಿ ಕಾಣಬಹುದು. ಅವರ ಕಥೆಗಳಲ್ಲಿ ಬಹು ಮುಖ್ಯವಾಗಿ ಕಾಮ ಪ್ರಜ್ಞೆ, ಜಾತಿ ಪದ್ಧತಿ, ನಮ್ಮೊಳಗಿನ ಲೋಪ ದೋಷಗಳು ಮತ್ತು ಗೋಸುಂಬೆತನಗಳನ್ನು ಕಾಣಬಹುದಾಗಿದೆ. ನವೋದಯ ಸಾಹಿತ್ಯವು ಸ್ತ್ರೀಯರಿಗೆ ಪಾತಿವ್ರತ್ಯ ಮತ್ತು ಶೀಲದ ಹೆಸರಿನಲ್ಲಿ ನಿರ್ಬಂಧವನ್ನು ಹೇರಿ ಸ್ವಾತಂತ್ರ್ಯವನ್ನು ಕಸಿದುಕೊಂಡಿತ್ತು. ಆದರೆ ನವ್ಯದ ಸಂದರ್ಭ ಲಂಕೇಶರ ಕಥೆಗಳಲ್ಲಿ ಸ್ತ್ರೀಯರಿಗೆ ಯಾವುದೇ ರೀತಿಯ ಕಟ್ಟು ಪಾಡುಗಳಿಲ್ಲ, ಶೀಲ, ಪಾತಿವ್ರತ್ಯದ ಹೆಸರಿನಲ್ಲಿ ಆಕೆಯು ಸ್ವಾತಂತ್ರ್ಯವನ್ನು ಕಸಿದು ಕೊಂಡಿಲ್ಲದಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಇವರ ಕಥೆಗಳಲ್ಲಿನ ಪಾತ್ರಗಳು ಇದು ಸರಿ, ಇದು ತಪ್ಪು ಎಂದು ಹೇಳುವುದಿಲ್ಲ. ಬದಲಿಗೆ ಜೀವನದ ವಿವಿಧ ಮುಖಗಳ ದರ್ಶನವನ್ನು ಮಾಡಿಸುತ್ತದೆ.ಇವರ ಈ ಕೆಳಕಂಡ ಕಥೆಗಳನ್ನು ಗಮನಿಸಿದರೆ ಈ ಮಾತುಗಳಿಗೆ ಇನ್ನಷ್ಟು ಪುಷ್ಟಿ ದೊರೆಯುತ್ತದೆ.

'ಕುರುಡು ಕಾಂಚನ' ಕಥೆಯು ಹಣದ ಮುಂದೆ ವ್ಯಕ್ತಿಯು ಹೇಗೆ ಸಣ್ಣವನಾಗಿ ತನ್ನಲ್ಲಿರುವ ಮಾನವೀಯತೆಯನ್ನು ಕಳೆದುಕೊಂಡು ಅಧಃಪತನಕ್ಕೆ ಇಳಿಯುತ್ತಾನೆ ಎಂಬುದನ್ನು ಕಾಣಬಹುದು. ಅದಲ್ಲದೆ ಅವನಲ್ಲಿನ ಸ್ವಕೇಂದ್ರಿತ ಪ್ರಜ್ಞೆ, ತಾನು ತನ್ನ ಮನೆಯನ್ನು ಹಾರಿ ಹೋಗಲಾರದ ಚೌಕಟ್ಟು, ತನ್ನನ್ನೇ ತಾನು ಮೀರಲಾಗದ ನಿರ್ಬಂಧಗಳನ್ನು ಅನಾವರಣಗೊಳಿಸುತ್ತದೆ. 'ಮುಟ್ಟಿಸಿಕೊಂಡವನು' ಕಥೆಯು ಸಣ್ಣದಿದ್ದರೂ ಹರಡಿಕೊಳ್ಳುವ ವ್ಯಾಪ್ತಿ, ಅರಹೂ ಮತ್ತು ಒಟ್ಟಾರೆಯಾಗಿ ಬೀರಬಲ್ಲ ಪ್ರಭಾವ ದೊಡ್ಡದು. ಹತ್ತಾರು ಪುಟಗಳಲ್ಲಿ ಹೇಳಲಾಗದ ಮನುಷ್ಯನ ಸಣ್ಣತನ, ವಕ್ರಬುದ್ಧಿ, ಕುರುಡು ಜಾತಿ ಪ್ರೇಮವನ್ನು ಕೇವಲ ಐದೇ ಐದು ಪುಟಗಳಲ್ಲಿ ಕಟ್ಟಿಕೊಟ್ಟಿರುವ ಲಂಕೇಶರ ಸಶಕ್ತ ಕಥೆಗಳಲ್ಲೊಂದು. ಇದು ದೇಹವನ್ನು ಮುಟ್ಟಿಸಿಕೊಂಡು ಮೈಲಿಗೆಗೆ ಗುರಿಯಾದವನ ಕಥೆ ಆಗಿರುವಂತೆಯೇ ಭಾರತೀಯ ಸಮಾಜದಲ್ಲಿ ತಾಂಡವಾಡುತ್ತಿರುವ ದುಷ್ಟತನ, ಅಸ್ಪೃಶ್ಯತೆ, ಜಾತೀಯತೆಯನ್ನು ಕುರಿತು ಹೇಳುತ್ತದೆ.'ವೃಕ್ಷದ ವೃತ್ತಿ' ಕಥೆಯು ಪಾರ್ವತಜ್ಜಿಯ ಭೂಮಿ ಮತ್ತು ತೆಂಗಿನ ಮರದೊಂದಿಗಿನ ಪ್ರೇಮವನ್ನು ಮತ್ತು ಆಕೆಯ ಅಪರಾ ಜೀವನಾನುಭವವನ್ನು ಹೇಳುತ್ತದೆ. 'ಚಂದ್ರೇಗೌಡರಿಗೆ ಬಿದ್ದ ಕನಸು' ಕಥೆಯಲ್ಲಿ ಪ್ರೀತಿಸಿ ಮದುವೆಯಾದ ರತ್ನ ಮತ್ತು ಚಂದ್ರೇಗೌಡರ ನಡುವೆ ಯಾವುದೋ ಒಂದು ರೀತಿಯ ಅಸ್ವಸ್ಥತೆ ಕಂಡುಬರುತ್ತದೆ. ರತ್ನ ತನ್ನ ಅನಾರೋಗ್ಯವನ್ನು ಮರೆಯಲು ರಾಜಕೀಯ ಸೇರಿ ನೈತಿಕವಾಗಿ ಅಧಃಪತನಕ್ಕಿಳಿಯುವುದು. ರಾಜಾರಾಮ್ ನೊಂದಿಗಿನ ಆಕೆಯ ಅನೈತಿಕ ಸಂಬಂಧ ಹಾಗೂ ಮತ್ತೊಂದು ಕಡೆ ಮಗಳೆಂದು ಭಾವಿಸಿದ್ದ ತೋಟದಾಳುಗಳಾದ ಸಿದ್ದಿಯೊಂದಿಗೆ ಚಂದ್ರೇಗೌಡನ ಸಂಬಂಧಗಳು ಇವರ ಮಾನಸಿಕ ದೌರ್ಬಲ್ಯಗಳು ಮತ್ತು ಅಸ್ವಸ್ಥತೆಯನ್ನು ತೋರಿಸುತ್ತದೆ. 'ಒಬ್ಬ ದಿಣ್ಣ ಮನುಷ್ಯ' ಕತೆಯಲ್ಲಿ ಯಾವುದೇ ಏಳು ಬೀಳುಗಳನ್ನು ಕಂಡರೂ ಎದೆಗುಂದದೆ ಅವುಗಳನ್ನು ಎದುರಿಸಬೇಕು ಎಂಬುದನ್ನು ರಂಗಣ್ಣನ ಪಾತ್ರದಲ್ಲಿ ಕಾಣಬಹುದು. 'ಒಂದು ಬಾಗಿಲು' ಕಥೆಯಲ್ಲಿ ಅನಾಥಳಾದ ಚಿನ್ನಮ್ಮನು ಯಜಮಾನನಿಂದ ಬೇಡಿ ಪಡೆದುಕೊಂಡ ಬಾಗಿಲನ್ನು ಮೇಸ್ತ್ರಿ ದಾಸ್ ಮತ್ತು ಮುನಿರಾಜು ಕದಿಯುತ್ತಾರೆ. ಹೆಣ್ಣೊಬ್ಬಳ ಅಸಹಾಯಕತೆಯನ್ನು ಸಮಾಜದಲ್ಲಿನ ವ್ಯಕ್ತಿಗಳು ಹೇಗೆ ದುರುಪಯೋಗ ಪಡಿಸಿಕೊಳ್ಳುತ್ತಾರೆ ಎನ್ನುವುದನ್ನು ಈ ಕಥೆ ತಿಳಿಸುತ್ತದೆ. 'ಕೃತಜ್ಞತೆ' ಕಥೆಯಲ್ಲಿ ಗಂಡನಿಂದ ತಿರಸ್ಕೃತಳಾಗಿ ಯಾರ ಸಹಾಯವಿಲ್ಲದೆ ಒಂದು ಅಂಗಡಿಯನ್ನು ಇಟ್ಟುಕೊಂಡು ಬದುಕುವ ನಿರ್ಮಲಾಳನ್ನು ಅದೇ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಪ್ರಕಾಶ ಕಾಮದ ದೃಷ್ಟಿಯಿಂದ ನೋಡುವುದು. ಅಕ್ಕ ಎಂದು ಕರೆಯುತ್ತಲೇ ಆಕೆಯನ್ನು ಬೇರೊಂದು ದೃಷ್ಟಿಯಿಂದ ನೋಡುವುದು ಮನುಷ್ಯನ ಹೊರಮುಖ ಮತ್ತು ಒಳಮುಖಗಳನ್ನು ಅನಾವರಣಗೊಳಿಸುವಂತೆ ಕಥೆ ನಿರೂಪಣೆಯಾಗಿದೆ. ಇದು ನಮ್ಮ ನಡುವಿರುವ ಜನರ ನೈಜ ಮನಸ್ಥಿತಿಯನ್ನು ಲಂಕೇಶರ ಸೂಕ್ಷ್ಮವಾಗಿ ಗಮನಿಸಿದ್ದರು ಎಂಬುದಕ್ಕೆ ಇದಕ್ಕಿಂತ ಉತ್ತಮವಾದ ಉದಾಹರಣೆ ಬೇರೊಂದಿಲ್ಲ. 'ರುದ್ರಾಣಿಯ ಸುಪ್ತಕತೆ' ರುದ್ರಣಿಯು ಕಾಲೇಜಿನ ಉಪನ್ಯಾಸಕಿ. ತನ್ನ ಕಣ್ಣ ಮುಂದೆಯೇ ತನ್ನವರೆಲ್ಲರನ್ನು ಕಳೆದುಕೊಂಡು ಅನಾಥಳಾದ ಈಕೆ ಮೋಸ ಮಾಡುವ ಪುರುಷರಿಗೆ ಬುದ್ಧಿ ಕಲಿಸುತ್ತಾ ಕಾಲೇಜನ್ನು ನಿರ್ವಹಿಸಿಕೊಂಡು ಹೋಗುತ್ತಿರುತ್ತಾಳೆ. ಶೋಷಣೆ ವಿರುದ್ಧ ಕಿಡಿಕಾರುತ್ತಾಳೆ, ಕೊನೆಗೆ ಒಂದು ರಾತ್ರಿ ಬಂದ ಯಾರೋ ಪುರುಷನೊಂದಿಗೆ ಸಮಾಗಮ ಹೊಂದುವುದು ಅಂತಹ ದಿಟ್ಟ ಹೆಣ್ಣಿನ ದೌರ್ಬಲ್ಯವನ್ನು ಹೇಳುತ್ತದೆ. 'ಒಬ್ಬಂಟಿ' ಕಥೆಯಲ್ಲಿ ಎರಡು ತಲೆಮಾರುಗಳ ವಿಭಿನ್ನ ಮೌಲ್ಯ ಪ್ರಜ್ಞೆಗಳ ಘರ್ಷಣೆ, ತನ್ನ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಂದೆಗೆ ಅವಮಾನ ಮಾಡಿದವರ ಪಕ್ಷವನ್ನೇ ಸೇರುವ ಮಗ ಇದರಿಂದ ನೊಂದ ಮಂಜಣ್ಣ ಒಬ್ಬಂಟಿಯಾಗುವುದು. ಅದಲ್ಲದೆ ಇದರಲ್ಲಿ ಬಹು ಮುಖ್ಯವಾಗಿ ಅಜ್ಞಾನ ಮತ್ತು ಅನಕ್ಷರತೆಯ ಮನಸ್ಸಿನ ಅಸ್ಥಿರತೆಗಳನ್ನು ಕಾಣಬಹುದು. 'ಅಕ್ಟೋಪಸ್' ಕಥೆಯ ಆನಂದು ತನ್ನ ಪ್ರಾಧ್ಯಾಪಕ ನರಸಯ್ಯನನ್ನ ಎದುರಿಸಲಾರದೆ ಅಸಹಾಯಕನಾಗಿ ತೊಳಲಾಡುತ್ತಾನೆ. ಪ್ರತಿಭಾವಂತನಾದ ಅವನು ಅಧಿಕಾರಿಗಳ ಸ್ವಾರ್ಥದಿಂದ ವಿಶ್ವವಿದ್ಯಾಲಯದಲ್ಲಿ ಗುಮಾಸ್ತನಾಗುವ ಪರಿಸ್ಥಿತಿ ಒದಗುತ್ತದೆ. ಇದು ವಿಶ್ವವಿದ್ಯಾಲಯಗಳ ಬೌದ್ಧಿಕ ದಾರಿದ್ರ್ಯತೆ ಮತ್ತು ಲಾಭಿತನವನ್ನು ತೋರಿಸುತ್ತದೆ. 'ವಾಸನೆ' ಕಥೆಯಲ್ಲಿ ಎಲ್ಲಾ ಸರಿ ಇದ್ದು ವಾಸನೆಯ ರೋಗವಿದೆ ಎಂದು ಕೊರಗುವ ಮನೋರೋಗಕ್ಕೆ ತುತ್ತಾದವನ ಕಥೆ ಹೇಳುತ್ತದೆ. 'ಸೆಪ್ಟೆಂಬರ್ ನಲ್ಲಿ ಪ್ರಥಮ ರಾತ್ರಿ' ಕಥೆಯಲ್ಲಿ ಉದ್ಯೋಗವನ್ನರಸಿ ಹಳ್ಳಿಯನ್ನು ಬಿಟ್ಟು ನಗರಕ್ಕೆ ಬಂದ ಯುವಕ ನೊಂದ ಹೆಣ್ಣಿನ ಜೊತೆ ಮಲಗಿ ಪೊಲೀಸರಿಂದ ಒದೆ ತಿಂದು ಊರಿಗೆ ಹಿಂತಿರುಗುವಂತ ವಿಷಯವಿದೆ. 'ಕಲ್ಲು ಕರಗುವ ಸಮಯದ' ಮಲ್ಲಯ್ಯನು ಜಾತಿಯನ್ನು ಮೀರಿದರೆ ಜೀವ ತೆಗೆಯುವುದೇ ಉತ್ತರವೆಂಬಂತಿದ್ದ ಹಿನ್ನೆಲೆಯಿಂದ ಬಂದವನು. ತನ್ನ ಒಬ್ಬಳೇ ಮಗಳಾದ ಶಾಮಲೆ ಯಾವುದೋ ಬೇಡರ ಹುಡುಗನನ್ನು ಪ್ರೀತಿಸಿದಾಗ ಅವಳನ್ನು ಎದುರಿಸಲಾಗದೆ ಸೋಲುತ್ತಾನೆ, ಸಿಡಿದೇಳುತ್ತಿದ್ದ ಮಲ್ಲಯ್ಯ ಕುಸಿದು ಬೀಳುತ್ತಾನೆ. ಇಲ್ಲಿ ಅಂತರ್ಜಾತಿ ವಿವಾಹಗಳ ಪ್ರಾಮುಖ್ಯತೆಯನ್ನು ಲೇಖಕರು ಒಪ್ಪಿಕೊಂಡಂತೆ ಸಮಾಜದಲ್ಲಿರುವ ಮರ್ಯಾದೆ ಹತ್ಯೆಗಳನ್ನು ಗಮನದಲ್ಲಿಟ್ಟುಕೊಂಡೇ ಬಹಳ ಸೂಕ್ಷ್ಮವಾಗಿ ಕತೆಯನ್ನು ಎಣೆದಿದ್ದಾರೆ. 'ಸಹಪಾಠಿ' ಕಥೆಯೂ ಕೂಡ ಮುಟ್ಟಿಸಿಕೊಂಡವರು ಕತೆಯ ಮುಂದುವರಿದ ಭಾಗವೇನೋ ಅನ್ನಿಸಿದರು ಕಥೆಯ ಅಂತರಾಳ ಭಿನ್ನ ನೆಲೆಯಲ್ಲಿ ನೆಲೆಯೂರುತ್ತದೆ. ಅಂತಃಕ್ಲೇಶದಿಂದ ನರಳುತ್ತಿರುವ ದಟ್ಟ ಕಾಡಿನ ನಡುವೆಯ ಗೌಡನ ನೋವು ಬಹಿರಂಗಕ್ಕೆ ಗೋಚರವಾಗುವಂಥದ್ದಲ್ಲ. ಅಲ್ಲಿ ಕೆಳಜಾತಿಯ ಶಿಕ್ಷಕನೊಬ್ಬನಿಗೆ ಮಾಡಿದ ಅವಮಾನ ಅವನನ್ನು ನಿರಂತರ ಕಾಡುತ್ತಿದೆ. ಸಮಸ್ಯೆ ಮೂಲ ಶಿಕ್ಷಕನಲ್ಲ, ಅವನ ಮನಸ್ಸೇ,ಅದಕ್ಕೆ ಮದ್ದು ಅರೆಯುವುದು ನಾಲ್ಕು ದಶಕಗಳ ಹಿಂದಿನ ಸಹಪಾಠಿ. ಪ್ರಸ್ತುತ ಸಾಹಿತಿಯಾಗಿರುವ ಬಾಲ್ಯದ ಗೆಳೆಯ. ಯಾವ ಅತಾತ್ವಿಕ ನೆಲೆಗಟ್ಟಿನಲ್ಲಿ ಶಿಕ್ಷಕನ ಮೇಲೆ ಶೋಷಣೆ ನಡೆದಿತ್ತೋ ಅದೇ ಅತಾತ್ವಿಕ ರೀತಿಯಲ್ಲಿ ಪ್ರಯೋಗ ನಡೆಸುವ ಸಹಪಾಠಿ, ಗೌಡನ ಕ್ಲೇಶಕ್ಕೆ ಕೊಡಲಿ ಏಟು ಹಾಕುವ ಹೊತ್ತಿಗೆ ಅವನು ಕಾಲವಾಗಿರುತ್ತಾನೆ.'ಸ್ಟೆಲ್ಲಾ ಎಂಬ ಹುಡುಗಿ' ಕಥೆಯು ಮಾನವನ ಬದುಕಿನ ಕರಾಳ ದರ್ಶನವನ್ನು ಮಾಡಿಸುತ್ತದೆ ಎಲ್ಲಾ ಮನುಷ್ಯರನ್ನು ಪ್ರೀತಿಸುವ ಅವರ ಬಗೆಗಿನ ಅನುಕಂಪವನ್ನು ಕಾಣಬಹುದು. 'ಜೀರ್ಣೋಭವ' ಕಥೆಯು ಮನುಷ್ಯನ ಜೀವನದ ನಶ್ವರತೆಯನ್ನು ಗೋವಿಂದರಾಜುವಿನ ಮೂಲಕ ಕಟ್ಟಿಕೊಳ್ಳುತ್ತದೆ. 'ಬೆಳದಿಂಗಳ ದಾಹ'ದಲ್ಲಿ ಪಾರುಚಿಕ್ಕಮ್ಮನ ಹಠಾತ್‌ಬದಲಾವಣೆ, ಪ್ರಿನ್ಸಿಪಾಲರೊಂದಿಗಿನ ಆಕೆಯ ಸಂಬಂಧವನ್ನು ಹಾಗೂ ಸಂಪ್ರದಾಯ ನಿಷ್ಠೆಯಾಗಿದ್ದ ಪಾರುಚಿಕ್ಕಮ್ಮ ನಂತರ ಸ್ವೇಚ್ಛಾಜೀವಿಯಾಗಿ ಇಲ್ಲಿ ಬದಲಾವಣೆಯಾಗುವುದನ್ನು ಕಾಣುತ್ತೇವೆ. 'ಮೃಗ ಮತ್ತು ಸುಂದರಿ' ಕಥೆಯು ಪ್ರೀತಿ, ಪ್ರೇಮ, ವಿನಯಗಳ ಗೆಲುವನ್ನು ಸೂಚಿಸುತ್ತದೆ. ಸಮಾಜದಲ್ಲಿನ ಜನರು ತಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳುವಂತೆ, ರೂಪಕ್ಕಿಂತ ಗುಣ ಮುಖ್ಯವೆಂಬುದನ್ನು ಅಭಿವ್ಯಕ್ತಪಡಿಸುತ್ತದೆ. ಸಾಮಾನ್ಯವಾಗಿ ಕೆಲವು ಜನರು ತಮಗೆ ಬೇಕಾದದ್ದು ಸಿಗದಿದ್ದಾಗ ಅದರ ಹತಾಶೆಯನ್ನು ತೋರ್ಪಡಿಸಿಕೊಳ್ಳದಿರಲು ಬೇರೆಯವರ ಮೇಲೆ ಆರೋಪವನ್ನು ಹೊರಿಸುತ್ತಾರೆ, ಅದನ್ನು 'ಜಯಂತನ ಸ್ವಗತ' ಕಥೆಯಲ್ಲಿ ಕಾಣಬಹುದು. ಪೊಲೀಸರ ಸ್ವಾರ್ಥದಿಂದ ಕಣ್ಣಪ್ಪನ ಜೀವನ ಹಾಳಾಗುವುದನ್ನು 'ಕಣ್ಣಪ್ಪನ ಅಂತಿಮ ದಿನಗಳು' ಕಥೆಯಲ್ಲಿ ಕಾಣಬಹುದು. 'ಎ ಸೂಸೈಡ್ ನೋಟ್' ಕಥೆಯಲ್ಲಿ ದ್ವಂದ್ವ ಮತ್ತು ವಂಚನೆಗಳಿಂದ ಮುಕ್ತಳಾಗದ ನಾಯಕಿ ಸೂಕ್ಷ್ಮತೆಯು ದುರಂತದಲ್ಲಿ ಮುಳುಗಿ ಅಂತರ್ಮುಖಿಯಾಗುವುದನ್ನು ಚಿತ್ರಿಸಿದ್ದಾರೆ. ಸಮಕಾಲಿನ ಜಾತಿ ಸಮಸ್ಯೆಗೆ ಸಂಬಂಧಿಸಿದ ಸಮಸ್ಯೆಗೆ ಉತ್ಕಟವಾಗಿ ಸ್ಪಂದಿಸಿ ಬರೆದ ಕಥೆ 'ಉಲ್ಲಂಘನೆ'ಯಾಗಿದೆ. 'ರೊಟ್ಟಿ' ಕಥೆಯು ಲಂಕೇಶರ ಬರವಣಿಗೆಯಲ್ಲಿ ಮಹತ್ವದ ಕಥೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಹಸಿವು ಬಡತನಗಳ ತೀವ್ರತೆಯನ್ನು ಭಿಕ್ಷುಕನ ಪಾತ್ರದ ಮೂಲಕ ಇಲ್ಲಿ ವ್ಯಕ್ತಪಡಿಸಿದ್ದಾರೆ. ಇದು ಒಂದು ರೀತಿ ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷವೇ ಆಗಿದೆ. ತಂದೆಯ ಅನಾರೋಗ್ಯ ಮತ್ತು ಬದುಕಿನ ಕೊನೆಯ ಹಂತವಾದ ಸಾವನ್ನು ಕೂಡ ಲೌಕಿಕ ದೃಷ್ಟಿಯಲ್ಲಿ ಕಾಣುವ ಮಗನ ಕಥೆಯನ್ನು 'ತಂದೆ' ಕಥೆಯಲ್ಲಿ ಕಾಣುತ್ತೇವೆ.

ಹೀಗೆ ಲಂಕೇಶ್ ರವರು ಬರೆದ ಈ ಎಲ್ಲಾ ಕಥೆಗಳಲ್ಲಿ ಮುಖ್ಯವಾಗಿ ಕಂಡುಬರುವುದು ಜನರ ಜೀವನದ ವಿವಿಧ ಮುಖಗಳು, ಜೀವನದ ಪ್ರೀತಿ,ಬದುಕಿನ ಕ್ರಮಗಳು ಹಾಗೂ ನಾಗರೀಕತೆ ಯಶಸ್ಸಿನಲ್ಲಿ ಅಥವಾ ಕವಚದಲ್ಲಿ ಮುಚ್ಚಿ ಹೋದ ಮನುಷ್ಯನ ನಿಜವಾದ ಸ್ವರೂಪ ಮತ್ತು ನಿರಂತರತೆಯ ಶೋಧ. ಇತರ ಕಥೆಗಳಲ್ಲಿ ಮನುಷ್ಯನ ದ್ವಂದ್ವ, ಕಾಮಪ್ರಜ್ಞೆ, ಸಿನಿಕತನ, ಆಕ್ರಮಣಶೀಲತೆ, ರಾಜಕೀಯ ಭ್ರಷ್ಟತೆ,, ಸೋಗಲಾಡಿತನ, ಮಾನವೀಯ ಸಾಧ್ಯತೆಗಳು, ಅವಮಾನಗಳನ್ನು ಎದುರಿಸುವ ಅವರ ಪರಿ. ವ್ಯವಸ್ಥೆಯ ಕ್ರೌರ್ಯ, ಪ್ರತಿಯೊಂದನ್ನು ಅನುಮಾನದಿಂದಲೇ ನೋಡುವ ಅವರ ರೀತಿ, ಸ್ತ್ರೀಯರಿಗೆ ದೊರಕುವ ಸ್ವಾತಂತ್ರ್ಯ, ಲೈಂಗಿಕ ಸ್ವೇಚ್ಛಾಚಾರ ಹೀಗೆ ಮನುಷ್ಯನ ವಿಭಿನ್ನ ಮುಖಗಳನ್ನು. ಲಂಕೇಶರು ಪರಿಚಯಿಸುತ್ತಾರೆ. ಇದರ ಮೂಲಕ ಮನುಷ್ಯನ ಜೀವನ ದರ್ಶನಗಳನ್ನು ತಮ್ಮ ಕಥೆಯ ಹಂದರದಲ್ಲಿ ಸೆರೆಹಿಡಿದಿದ್ದಾರೆ ಹಾಗೂ ಮನುಷ್ಯನ ಅಂತರಂಗವನ್ನು ಒಳಹೊಕ್ಕು ಎಳೆ ಎಳೆಯಾಗಿ ಬಿಡಿಸಿರುತ್ತಾರೆ. ಹಾಗಾಗಿ ಅವರ ಕಥೆಗಳಲ್ಲಿ ಬದುಕಿನ ನೈಜತೆಯು ಎದ್ದು ಕಾಣುತ್ತದೆ. ಲಂಕೇಶರ ಕಥೆಗಳಲ್ಲಿನ ಪಾತ್ರಗಳು ಕಷ್ಟಗಳಿಗೆ ಬೆನ್ನು ಕೊಟ್ಟು ಓಡಿ ಹೋಗುವುದಿಲ್ಲ ಬದಲಾಗಿ ಅವುಗಳನ್ನು ಎದುರಿಸುತ್ತವೆ. ಆ ಮೂಲಕ ಓದುಗರು ತಮ್ಮನ್ನು ಆತ್ಮಪರಿಶೋಧನೆ ಮಾಡಿಕೊಳ್ಳುವಂತೆ ಮಾಡುತ್ತವೆ.ಲಂಕೇಶರು ಜಗತ್ತನ್ನು ಅತ್ಯಂತ ಮಾನವೀಯವಾಗಿ, ವಿಶಾಲವಾಗಿ ಯಾವುದೇ ದೇಶ, ಭಾಷೆ, ಜಾತಿ, ಧರ್ಮದ ಸಂಕೋಲೆಗಳನ್ನು ಧರಿಸದೆ, ಎಲ್ಲರನ್ನೂ ಒಳಗೊಳ್ಳುವಂತೆ ಗ್ರಹಿಸಿದ್ದಾರೆ. ಆಧುನಿಕತೆ, ಅಂತಾರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವಕ್ಕೆ ಅವರ ಚಿಂತನಾ ಲಹರಿಯಲ್ಲಿ ವಿಶೇಷ ಒತ್ತಿತ್ತು. ಗಾಂಧಿ, ಬುದ್ಧನ ವ್ಯಕ್ತಿತ್ವವನ್ನು ಅವರು ಬೆರಗುಗಣ್ಣುಗಳಿಂದ ನೋಡುತ್ತಲೇ, ಆಂತರ್ಯದಲ್ಲಿ ಒಂದು ತರಹದ ಸೃಜನಶೀಲ ಅನುಮಾನ ಮತ್ತು ಅರಾಜಕತೆಯನ್ನು ಪೋಷಿಸಿಕೊಂಡಿದ್ದರು. ರಾಜಕೀಯವಾಗಿ ಅವರಲ್ಲಿ ಎಡಪಂಥೀಯ ತುಡಿತ ನಿಚ್ಚಳವಾಗಿಯೇ ಕಾಣುತ್ತದೆ. ಗಾಂಧಿ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಅವರು ಹತ್ತಿರದಿಂದ ಕಂಡ ಮಂಡೇಲಾ ತರಹದವರನ್ನೂ, ಅವರ ಮಾನವೀಯತೆಯನ್ನೂ, ಇವರು ಅತ್ಯಂತ ವಿಮರ್ಶಾತ್ಮಕವಾಗಿ, ಕಟುವಾಗಿ ನೋಡಬಲ್ಲವರು. ಎಲ್ಲ ಬೌದ್ಧಿಕತೆಯ ನಡುವೆ ಹುಚ್ಚು, ಅಪ್ರಬುದ್ಧ ಭಾವನಾತ್ಮಕತೆಯನ್ನು ಪ್ರದರ್ಶಿಸಬಲ್ಲ ಅಗೋಚರ ಅಂಶವನ್ನು ತಮ್ಮೊಳಗೆ ಇರಿಸಿಕೊಂಡವರು. ಜಗತ್ತಿನ ದೈನಂದಿನ ಆಚರಣೆಗಳ ಬಗ್ಗೆ ಒಂದು ಅನೂಹ್ಯ ಒಳನೋಟವನ್ನು ಬಿತ್ತರಿಸುವ ಶಕ್ತಿ ಇರುವಂತನೇರ, ನಿಷ್ಠುರವಾದಿಗಳು.

## ಪರಾಮರ್ಶನ ಗ್ರಂಥಗಳು


- **ಪಿ. ಲಂಕೇಶ್ (2018)** : ಕೆರೆಯ ನೀರನು ಕೆರೆಗೆ ಚೆಲ್ಲಿ, ಬೆಂಗಳೂರು ಲಂಕೇಶ್ ಪ್ರಕಾಶನ, ಈಗಲ್ ಸಿಟಿ.


– *99ನೇ ಪುಟಕ್ಕೆ ಮುಂದುವರೆದುದು*

APPROVED UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನಕದಾಸರ ಕೀರ್ತನೆಗಳಲ್ಲಿ ವೈಚಾರಿಕ ಪ್ರಜ್ಞೆಯ ಆಯಾಮಗಳು

✍ ಡಾ. ಧರ್ಮವೀರ ಕೆ.ಎಚ್. ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.

ಕನ್ನಡ ಸಾಹಿತ್ಯ ಸಂಶೋಧನೆ ಮತ್ತು ವಿಮರ್ಶೆಯು ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಅಧ್ಯಯನದ ಬೇರೆಬೇರೆ ನೆಲೆಗಳಲ್ಲಿ ವಿಸ್ತರಿಸಿಕೊಳ್ಳುತ್ತಿದೆ. ಮೊದಲಿನಂತೆ ಸಾಹಿತ್ಯವನ್ನು ಕೇವಲ ಸಾಹಿತ್ಯಕ ಮಾನದಂಡದಲ್ಲಿ ಅಧ್ಯಯನ ಮಾಡುವುದು ಕಡಿಮೆಯಾಗುತ್ತಿದೆ. ಒಂದು ಸಾಹಿತ್ಯ ಕೃತಿಯನ್ನು ಸಾಹಿತ್ಯೇತರವಾದ ಹೊಸ ಜ್ಞಾನಶಾಖೆಗಳ ಮೂಲಕ ಅಧ್ಯಯನ ಮಾಡುವ, ಓರೆಗಚ್ಚುವ ಅಧ್ಯಯನ ಪ್ರವೃತ್ತಿ ಬೆಳೆಯುತ್ತಿದೆ. ಸಾಹಿತ್ಯೇತರ ಮಾನದಂಡವೆಂದರೆ, ಸಮಾಜದಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ ಚಿಂತನೆಗಳ ಮೂಲಕ, ರಾಜಕೀಯ ಚಂತನೆಗಳ ಮೂಲಕ, ಆರ್ಥಿಕ ಸಿದ್ಧಾಂತಗಳ ಮೂಲಕ, ಮುಂದುವರೆದು ಆಧ್ಯಾತ್ಮ ಮತ್ತು ಧಾರ್ಮಿಕ ಚಿಂತನೆಗಳ ಮೂಲಕ, ವೈಜ್ಞಾನಿಕ ಮತ್ತು ವೈಚಾರಿಕ ನೆಲೆಗಳ ಮೂಲಕ ನಡೆಯುವ ಅಧ್ಯಯನಗಳು ಮುನ್ನೆಲೆಗೆ ಬರುತ್ತಿವೆ. ಅಷ್ಟುಮಾತ್ರವಲ್ಲದೆ, ಪರಿಸರ, ಭೌಗೋಳಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿ ಸಂಗತಿಗಳ ಮೂಲಕ ವಿಮರ್ಶೆ ಮತ್ತು ಸಂಶೋಧನೆಗಳು ನಡೆಯುತ್ತಿವೆ. ಇದನ್ನು ಬಹುಶಿಸ್ತೀಯ ಅಧ್ಯಯನ ಎಂದು ಕರೆದಿದ್ದಾರೆ. ಇಂಥಹ ಬಹುಶಿಸ್ತೀಯ ಆಯಾಮದಲ್ಲಿ ಒಂದು ಸಾಹಿತ್ಯ ಕೃತಿಯನ್ನು ಅಧ್ಯಯನ ಮಾಡಿದಾಗ ಅಲ್ಲಿ ಕೇವಲ ಸಾಹಿತ್ಯಕ ಅಂಶಗಳು ಮಾತ್ರ ಚರ್ಚೆಗೊಳಗಾಗದೆ ಸಾಹಿತ್ಯೇತರವಾದ ಸಂಗತಿಗಳಿಗೂ ಗಮನ ಕೊಟ ಕಾರಣಕ್ಕೆ ಕೃತಿಯ ಮಹತ್ವವನ್ನು ಹೆಚ್ಚಿಸುತ್ತದೆ. ಅಧ್ಯಯನಗಳು ಪ್ರಾಚೀನ ಸಾಹಿತ್ಯವನ್ನು ಒಳಗೊಂಡಂತೆ ಆಧುನಿಕ ಸಾಹಿತ್ಯವನ್ನು ಒಳಗೊಂಡಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ನೋಡುವುದಾದರೆ, ಪಂಪನ ಕೃತಿಗಳಲ್ಲಿ ಯುದ್ಧದ ವರ್ಣನೆ, ಕುಮಾರವ್ಯಾಸ ಭಾರತದಲ್ಲಿನ ರಾಜಕೀಯ ತಂತ್ರಗಾರಿಕೆ, ವಚನಸಾಹಿತ್ಯದಲ್ಲಿ ಮೂಡಿಬಂದ ಸಾಮಾಜಿಕ ಕ್ರಾಂತಿ, ದಾಸಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಸಾಮಾಜಿಕ ಮತ್ತು ಧಾರ್ಮಿಕ ಸಂಘರ್ಷ, ಕುವೆಂಪು ಕಾದಂಬರಿಗಳಲ್ಲಿ ಮೂಡಿಬಂದ ಪ್ರಾಣಿಪ್ರಪಂಚ, ಪ್ರಕೃತಿ ವೈಶಿಷ್ಟ್ಯತೆ, ಬಸವರಾಜ ಕಟ್ಟೀಮನಿ ಅವರ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳು ಹೀಗೆ ಹಲವು ಬೇರೆಬೇರೆ ರೀತಿಯ ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಿವೆ. ಇಲ್ಲೆಲ್ಲಾ ಸಾಹಿತ್ಯ ಕೃತಿಯುನ್ನು ಸಾಹಿತ್ಯೇತರ ಜ್ಞಾನಶಾಖೆಯೊಂದರ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲಾಗಿದೆ.

ಕನ್ನಡ ಸಾಹಿತ್ಯದ ಪ್ರಾರಂಭದ ಕಾಲದಿಂದ ನೋಡಿದರೆ ಮೊದಮೊದಲ ಸಾಹಿತ್ಯ ರಚನೆ ಶುದ್ಧ ಸಾಹಿತ್ಯದ ನೆಲೆಯಲ್ಲಿ ರಚನೆಯಾಗುತ್ತಿದ್ದವು. ಆನಂತರ ಅವು ಭಕ್ತಿ ಮತ್ತು ಧಾರ್ಮಿಕ ನೆಲೆಯಲ್ಲಿ ರಚನೆಯಾದವು. ಧರ್ಮ ಪ್ರಸಾರವು ಸಾಹಿತ್ಯದ ಮತ್ತೊಂದು ಉದ್ದೇಶವೂ ಆಗಿತ್ತು. ಸಂಸ್ಕೃತಕ್ಕೆ ಬದಲಾಗಿ ಜನಸಾಮಾನ್ಯರ ಕನ್ನಡದಲ್ಲಿ ಸಾಹಿತ್ಯ ರಚನೆಗೊಂಡು ಭಾಷಾ ಚಳುವಳಿಯೊಂದು ಕನ್ನಡ ಸಾಹಿತ್ಯ ಪ್ರಾಚೀನ ಸಂದರ್ಭದಲ್ಲಿಯೇ ಆಗಿಹೋಗಿದೆ. ಹೀಗೆ ಹಲವು ರೀತಿಯಲ್ಲಿ ಸಾಹಿತ್ಯ ರಚನೆಯ ಉದ್ದೇಶಗಳು ನಡೆದಿದ್ದರೂ ಭಕ್ತಿ ಮತ್ತು ಧರ್ಮ ಪ್ರಸಾರವೇ ಅವುಗಳ ಮುಖ್ಯ ಆಶಯವಾಗಿತ್ತು. ಕೆಲವು ಕಾಲಘಟ್ಟದಲ್ಲಿ ಸಾಮಾಜಿಕ ಬದಲಾವಣೆಗಾಗಿ ಸಮಾಜದ ಅಂಕು ಡೊಂಕುಗಳನ್ನು ಸರಿಪಡಿಸುವ ಕಾರಣಕ್ಕೆ ಸಮಾಜಮುಖಿ ಸಾಹಿತ್ಯವೂ ರಚನೆಯಾಗಿದೆ. ಇಂಥಹ ಸಾಮಾಜಿಕ ಆಶಯದಿಂದಲೇ 'ವಚನ ಸಾಹಿತ್ಯ' ಪ್ರಾರಂಭವಾಯಿತು. ಅಂಥಹ ಸಾಮಾಜಿಕ ಆಶಯುದೊಂದಿಗೆ 'ದಾಸಸಾಹಿತ್ಯ' ರಚನೆಯಾಯಿತು."ಕೀರ್ತನೆಗಳ ಮುಖ್ಯ ಭಾವ ಭಕ್ತಿ. ಈ ಭಕ್ತಿ ಏಕದೈವ ನಿಷ್ಠೆಯಿಂದಾಗಿ ಹಂಚಿಹೋಗದೆ ಗಾಢವಾಗುವಂಥದ್ದು. ವಿಶ್ವದ ಮೂಲಭೂತ ಸತ್ಯದ ಅರಿವಿಗೆ ಈ ಭಕ್ತಿಮಾರ್ಗ ಸುಲಭವೆಂಬುದು ಕೀರ್ತನಕಾರರ ಒಟ್ಟು ಧಾಟಿ"[1] ಎಂಬುದನ್ನು ಕಾಣುತ್ತೇವೆ. ಇಲ್ಲಿ ಕೀರ್ತನಕಾರರು ತಮ್ಮ ಕೀರ್ತನೆಗಳಲ್ಲಿ ಭಕ್ತಿಯು ಭಾವವನ್ನು ಉಳಿಸಿಕೊಂಡಿದ್ದರೂ 'ವಿಶ್ವದ ಮೂಲಭೂತ ಸತ್ಯವನ್ನು, ಅರಿಯುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಎಂಬುದು ಕೂಡ ಮುಖ್ಯವಾಗಬೇಕು. "ಶಿವಶರಣರ ವಚನ ಪ್ರಕಾರಗಳಿಗೆ ಬದಲಾಗಿ ದಾಸರು ಕೀರ್ತನೆಗಳನ್ನು ರಚಿಸಿ ದೇವರನ್ನು ಭಕ್ತಿಯಿಂದ ಭಜಿಸಿದರು. ದಾಸರದು ಮುಖ್ಯವಾಗಿ ಭಕ್ತಿಪಂಥ, ಭಕ್ತಿಯ ಪ್ರಸಾರಕ್ಕಾಗಿ ಕೀರ್ತನೆಗಳು ಪ್ರಸಾರಮಾಧ್ಯಮಗಳಾಗಿ ಬಳಸಿಕೊಂಡವಷ್ಟೇ ಅಲ್ಲಾ ಅವು ಜನಮನದ ಕೊಳೆಯನ್ನು ತೊಳೆದು ಪರಿಶುದ್ಧವಾಗಿಸಿದವು".[2] ಎಂಬದನ್ನು ಗಮನಿಸಬಹುದಾಗಿದೆ.ಇಲ್ಲಿ 'ಜನರಮನದ ಕೊಳೆಯನ್ನು ತೊಳೆಯುವುದು'ಎನ್ನುವ ಅಂಶದಲ್ಲಿ ಕೇವಲ ಮನೋ ಆನಂದಕ್ಕಾಗಿ ಕೀರ್ತನೆಗಳಲ್ಲ ಬದಲಿಗೆ ಮನೋವೈಜ್ಞಾನಿಕ ನೆಲೆಯಲ್ಲಿ ಮನಸ್ಸಿನ ಅಧ್ಯಯನವೂ ಆಗುತ್ತದೆ. ಅದು ಸಮಾಜಿಕರ ಮನಸ್ಸಿನಲ್ಲಿರುವ ಹಲವು ತೊಡಕುಗಳನ್ನು, ಸಮಸ್ಯೆಗಳನ್ನು, ಮನೋವಿಕಾರಳನ್ನು ತಿದ್ದುವ ಉದ್ದೇಶವನ್ನೂ ಒಳಗೊಂಡಿದೆ ಎಂಬುದಾಗಿದೆ. ಅಂದರೆ, ಕೀರ್ತನೆಗಳು ಕೇವಲ ಸಾಹಿತ್ಯಕ ಅಂಶಗಳಾಗಿ ಉಳಿಯದೆ ಮನೋವೈಜ್ಞಾನಿಕ ನೆಲೆಯಲ್ಲಿಮನೋಪರಿವರ್ತನೆಯನ್ನು ಅಪೇಕ್ಷಿಸುತ್ತವೆ ಎಂಬುದಾಗಿದೆ. ಈ ಕಾರಣಕ್ಕಾಗಿ ಇದೊಂದು ವಿಜ್ಞಾನವೂ ಆಗಿದೆ. ದಾಸ ಸಾಹಿತ್ಯ ಮತ್ತು ವಚನ ವಾಙ್ಮಯ ಎರಡರ ಗುರಿಯೂ ಮತತತ್ವ ಪ್ರತಿಪಾದನೆ ಮತ್ತು ಪ್ರಚಾರ. ಇತರ ಮತಗಳಿಗಿಂತ ತಮ್ಮ ಮತ ಶ್ರೇಷ್ಟವೆಂಬ ಸಮರ್ಥನೆ, ತಮ್ಮದಲ್ಲದ ದೈವದ ಅವಹೇಳನ, ನೀತಿ ಬೋಧೆ, ಸಮಾಜದ ದುರಾಚಾರ ಮತ್ತು ಲೋಪದೋಷಗಳ ಖಂಡನೆ ಇವು ಎರಡಕ್ಕೂ ಸಮಾನ".[3] ಎಂಬುದು ಮುಖ್ಯವಾಗಬೇಕಾಗಿದೆ. ಮೇಲಿನ ಎಲ್ಲಾ ಅಭಿಪ್ರಾಯಗಳನ್ನು ಗಮನಿಸಿದಾಗ ಭಕ್ತಿ ಪ್ರಸಾರ ಕೀರ್ತನಕಾರರ ಮುಖ್ಯ ಉದ್ದೇಶವಾಗಿದ್ದಾಗಲೂ ಅದರ ಜೊತೆಯಲ್ಲಿ ಸಾಮಾಜಿಕ ಸಮಸ್ಯೆಗಳ ಕಡೆಗೂ ಗಮನಹರಿಸಿರುವುದನ್ನು ನೋಡುತ್ತೇವೆ. ಇಂಥಹ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸುವ ಉದ್ದೇಶದಿಂದಲೇ ಹರಿದಾಸ ಸಾಹಿತ್ಯ ಪಂಥದಲ್ಲಿ ಸಾಹಿತ್ಯ ರಚನೆಯಾಗಿದೆ.

ಕನ್ನಡ ದಾಸ ಸಾಹಿತ್ಯ ಪರಂಪರೆಯಲ್ಲಿ ಕನಕದಾಸರದ್ದು ದೊಡ್ಡ ವ್ಯಕ್ತಿತ್ವ. 16ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಶೂದ್ರಜಾತಿಯವನೊಬ್ಬ ಸಂಪ್ರದಾಯನಿಷ್ಟ ಭಕ್ತಿಯ ಆಚರಣೆಯಲ್ಲಿ ಶಾಶ್ವತವಾಗಿ ಉಳಿಯಲು ಕಾರಣ ಅವರ ಸಾಹಿತ್ಯದ ಸತ್ವದ ಕಾರಣಕ್ಕಾಗಿ. "ಕನಕದಾಸರು ತಮ್ಮ ಕೃತಿಗಳಲ್ಲಿ ಹೆಚ್ಚಾಗಿ ಶಾಸ್ತ್ರಭಂಜನೆಗಳಿಗೆ, ಮತತತ್ವ ಪ್ರತಿಪಾದನೆಗೆ ಮನಗೊಡದೆ ಏಕಾಂತ ಭಕ್ತಿಯನ್ನು, ಸಮರ್ಪಣ ಮನೋಭಾವನ್ನು, ಜಗತ್ತಿನ ಚಟುವಟಿಕೆಗಳು ಹರಿಚಾಲಿತ ಎಂಬ ತತ್ವವನ್ನು ಪ್ರತಿಪಾದಿಸುತ್ತಾರೆ. 'ಸಾಮಾಜಿಕ ಗೀತೆಗಳಲ್ಲಿ' ಜನತೆಯ ಮೌಢ್ಯ, ಕಂದಾಚಾರ, ಪೊಳ್ಳುನಂಬಿಕೆ, ವರ್ಣ ವ್ಯವಸ್ಥೆಯ ಠಕ್ಕುತನವನ್ನು ಕಟುವಾಗಿ, ತೀವ್ರವಾಗಿ ಖಂಡಿಸುತ್ತಾರೆ"[4]

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೀರ್ತನೆಗಳನ್ನು ರಚಿಸಿದ್ದರ ಕಾವ್ಯಗುಣದಲ್ಲಿ, ವಿಚಾರ ಸ್ವಾತಂತ್ರ್ಯದಲ್ಲಿ ಕನಕದಾಸರನ್ನು ಮೀರಿಸುವ ಮತ್ತೊಬ್ಬ ಕೀರ್ತನಕಾರರಿಲ್ಲ. ಇವರು ತಮ್ಮ ನುಡಿಹಾಡಿನಲ್ಲೇ ಜನರ ಲೋಪದೋಷಗಳನ್ನು ಟೀಕಿಸುತ್ತಾರೆ. ಜಾತಿಯತೆಯ ವಿಷಯದಲ್ಲಿ ಸಮಾಜ ಬದಲಾಗದೆ ಇರುವುದನ್ನು ಕಂಡು ಉಗ್ರವಾಗಿ ಸಿಡಿಯುತ್ತಾರೆ. ಜಾತಿಯನ್ನು ತೀವ್ರವಾಗಿ ಖಂಡಿಸುತ್ತಾರೆ.

**ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ**
**ಕುಲದ ನೆಲೆಯ ನೇನಾದರು ಬಲ್ಲಿರ**
**ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ**

**ಅಟ್ಟು ಉಣ್ಣದ ವಸ್ತುಗಳಿಲ್ಲ**
**ಗುಟ್ಟು ಕಾಣೆಸ ಬಂತು ಹಿರಿದೇನು ಕಿರಿದೇನು**
**ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯಾ ಮನುಜ**[5]

ಎಂಬ ಈ ಸಾಲುಗಳು ಕನಕದಾಸರ ಮಹತ್ವದ ವಿಷಯಗಳು. ಸಮಾಜದಲ್ಲಿ ವಚನಕಾರರಿಂದ ಪ್ರಾರಂಭವಾಗಿ ದಾಸರ ಕಾಲಕ್ಕೂ ಜಾತಿಯ ಮನೋಸೂತಕಗಳು ಪರಿಹಾರವಾಗಿರದ ಕಾರಣಕ್ಕಾಗಿ ಕವಿ ಅಂತಹ ಜಾತಿ ಆರಾಧಕರವನ್ನು ಪ್ರಶ್ನಿಸುತ್ತಿದ್ದಾರೆ. ಜನರ ಸ್ವಭಾವವೇನೆಂದರೆ, ವಚನಗಳಾಗಲಿ ಅಥವಾ ಕೀರ್ತನೆಗಳಾಗಲಿ ಅವುಗಳು ಕೊಡುವ ಸಾಹಿತ್ಯಕ ಆನಂದಕ್ಕಿಂತ ಸಂಗೀತದ ಆನಂದಕ್ಕೆ ಮನಸೋಲುವ ಸ್ವಭಾವ. ಸಂಗೀತದ ತಾಳ ಮತ್ತು ಲಯಬದ್ಧ ಗಾಯನಕ್ಕೆ ತಲೆದೂಗುವ ನಾವು ಅವುಗಳು ಅಭಿವ್ಯಕ್ತಿಸುತ್ತಿರುವ ತತ್ವ ಚಿಂತನೆಗೆ ನಮ್ಮ ಮನಸ್ಸನ್ನು ಒಗ್ಗಿಸುವುದಿಲ್ಲ. ಮೊದಲಿನಿಂದಲೂ ಭಕ್ತಿ ಸಾಹಿತ್ಯವನ್ನು ಭಾವಿಸಿದ ಮುಖ್ಯ ರೀತಿಯೇ ಇದಾಗಿದೆ ಎನ್ನಿಸುತ್ತದೆ. ಅವುಗಳು ವಿವರಿಸಲು ಪ್ರಯತ್ನಿಸುತ್ತಿರುವ ಆಶಯಗಳ ಕಡೆ ಹೊರಳಿದಾಗ ಮಾತ್ರ ಸಾಮಾಜಿಕ ಅನಿಷ್ಟಗಳ ಬದಲಾವಣೆ ಸಾಧ್ಯ. ಸಂಗೀತಕ್ಕೆ ಮಾರುಹೋದಷ್ಟೇ ತೀವ್ರವಾಗಿ ಸಾಹಿತ್ಯಕ್ಕೆ ಮಾರುಹೋಗಿದ್ದರೆ ಸಮಾಜದ ಎಂದಿಗೋ ಆರೋಗ್ಯಪೂರ್ಣವಾಗಿ ರೂಪುಗೊಂಡಿರುತ್ತಿತ್ತು. ಕನಕದಾಸರ ಈ ಕೀರ್ತನೆಯಲ್ಲಿ ವೈಜ್ಞಾನಿಕ ಅಂಶಗಳು ಅಡಕವಾಗಿವೆ. ಮನುಷ್ಯನನ್ನು ಕೇವಲ ಮಾನವಿಕ ನೆಲೆಯಲ್ಲಿ ನೋಡುವುದಕ್ಕಿಂತ ವೈಜ್ಞಾನಿಕ ನೆಲೆಯಲ್ಲಿ ನೋಡಿದಾಗ ಎಲ್ಲಾ ಜಾತಿಗಳೂ ಸಮಾನವಾದವುಗಳು ಮತ್ತು ಎಲ್ಲಾ ಮನುಷ್ಯರೂ ಸಮಾನರು ಎಂಬುದು ಅರಿವಿಗೆ ಬರುತ್ತದೆ. ವಿಜ್ಞಾನ ರಂಗದಲ್ಲಿ ಮನುಷ್ಯರನ್ನು ಹೊಮೋಸೇಫಿಯನ್ ಕಮ್ಯೂನಿಟಿಗೆ ಸೇರಿದವರು ಎಂಬ ವಿಷಯ ಸಾಬೀತಾಗಿದೆ. Homo sapiens ('wise man'), or modern humans, are the only species of human still around today. Despite having invented countless ways of labelling the world around us, we have so far done a surprisingly poor job at defining ourselves. Originating in Africa somewhere around 200,000 years ago, and a big wave of us adventuring beyond that initial continent around 55,000 years ago, with our characteristically slender skeletons and big heads, one would think the story is quite clear-cut.[6] ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಮನುಷ್ಯನನ್ನು ಮಾನವೀಕ ನೆಲೆಯ ಚಿಂತನೆಗಳಿಂದ ಒಂದು ಎಂದು ಸಾಬೀತು ಮಾಡಲು ಸೋತಾಗ ವೈಜ್ಞಾನಿಕ ನೆಲೆಯಲ್ಲಿ ಅದನ್ನು ಅರ್ಥೈಸುವುದು ಸೂಕ್ತವಾಗುತ್ತದೆ. ಕನಕದಾಸರದು ವೈಜ್ಞಾನಿಕ ನೆಲೆಯಲ್ಲಿ ಸಮಾನತೆಯನ್ನು ತರುವ ಉದ್ದೇಶವಿದ್ದಂತಿದೆ. 'ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರ' ಎಂಬ ವಾಕ್ಯವನ್ನು ವೈಜ್ಞಾನಿಕವಾಗಿ ನೋಡಿದಾಗ ಕನಕದಾಸರ ಕೀರ್ತನೆಗಳಿಗಿರುವ ಹೊಸ ಆಯಾಮವನ್ನು ಅರಿಯಲು ಸಾಧ್ಯವಾಗುತ್ತದೆ. ಈ ನೆಲೆಯಲ್ಲಿ ಮಾನವರೆಲ್ಲರೂ ಎಲ್ಲಾ ರೀತಿಯಲ್ಲಿಯೂ ಸಮಾನರು ಎಂಬುದು ಸಾಬೀತಾಗುತ್ತದೆ.

**ಕುಲ ಕುಲ ಕುಲವೆನ್ನುತಿಹರೊ**
**ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ**
**ಕೆಸರೊಳು ತಾವರೆ ಪುಟ್ಟಲು ಅದ ತಂದು**
**ಕುಸುಮನಾಭನಿಗೆ ಅರ್ಪಿಸಲಿಲ್ಲವೆ**
**ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ**
**ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ**
**ಮೃಗಗಳ ಮೈಯಲಿ ಪುಟ್ಟದ ಕಸ್ತೂರಿ**
**ತೆಗೆದು ಪೂಸುವರು ಭೂಸುರರೆಲ್ಲರು**
**ಬಗೆಯಿಂದ ನಾರಾಯಣ ಯಾವ ಕುಲದವ**
**ಅಗಜವಲ್ಲಭನುಯಾತರ ಕುಲದವನು.**[7]

ಇಲ್ಲಿಯೂ ಕನಕದಾಸರು ಕುಲದ ಪ್ರಶ್ನೆಯನ್ನೇ ಎತ್ತುತ್ತಾರೆ. ಸಾಮಾನ್ಯ ಪಶುಪಾಲಕನೊಬ್ಬನ ಶ್ರಮದಿಂದ ಪಡೆದ ಹಸುವಿನ ಹಾಲು, ತುಪ್ಪ, ಕಸ್ತೂರಿ ಸುಗಂಧವನ್ನು ದೇವರಿಗೆ ಅರ್ಪಿಸುತ್ತೇವೆ. ಅದು ಶ್ರಮಜೀವಿಗಳ ಶ್ರಮದ ಪ್ರತಿಫಲ. ಅದನ್ನು ಭೂಸುರರೆಂದು ಕರೆಸಿಕೊಂಡ ಬ್ರಾಹ್ಮಣರು ಬಳಸುತ್ತಾರೆ ಎನ್ನುತ್ತಲೇ ಭೂಸುರರು ಇತರ ಜಾತಿಯವರಿಂದ ಶ್ರೇಷ್ಠ ಹೇಗೆ ಎಂದು ಪ್ರಶ್ನಿಸುತ್ತಾರೆ. ಕನಕದಾಸರು ಇಲ್ಲಿ ಬಹಳ ಮುಖ್ಯವಾಗಿ ಹಸುವನ್ನು ಸಾಕಿದವನ ಶ್ರೇಷ್ಟತೆಯನ್ನು ಹೇಳಹೊರಟಿದ್ದಾರೆ. ಹಸುವಿನಿಂದ ಹಾಲು ಕರೆದವನು ಕನಿಷ್ಠ ಜಾತಿಯವನಾದರೂ ಅವನೂ ಭೂಸುರನಂತೆ ಸಮಾನ. ಯಾರೂ ಮೇಲಲ್ಲಾ ಯಾರೂ ಕೀಳಲ್ಲ ಎಂದು ಹೇಳುವುದಾಗಿದೆ. ಮುಂದುವರೆದು ಕೆಸರಲ್ಲಿ ಹುಟ್ಟಿದ ಕಮಲ ಕುಸುಮನಾಭನಾದ ವಿಷ್ಣುವಿಗೆ ಅರ್ಪಿಸಲಿಲ್ಲವೆ ಎಂಬ ಪ್ರಶ್ನೆಗಳನ್ನು ಎತ್ತುತ್ತಾರೆ. ಹೀಗೆ ಪ್ರಶ್ನೆಗಳನ್ನು ಎತ್ತಬೇಕಾದರೆ ಕೆಸರು ಎಂಬುದನ್ನು ಶೂದ್ರ ಸಂಕೇತವಾಗಿಯೇ ಬಳಸಿದ್ದಾರೆ. ಶೂದ್ರ ಅಸ್ಪೃಶ್ಯ ಜಾತಿಗಳಿಂದ ಎಲ್ಲಾ ತರಹದ ಸಹಾಯ ಪಡೆದು ನಂತರ ಅವರನ್ನು ಜಾತಿಯ ಕಾರಣಕ್ಕಾಗಿ ಸಮಾಜದ ಎಲ್ಲೆಗೆ ನೂಕಿರುವ ಕ್ರಮವನ್ನು ಈ ವಚನ ಖಂಡಿಸುತ್ತದೆ.ಹಾಗೆಯೇ ಆತ್ಮ ಮತ್ತು ಜೀವದ ಕುಲವ್ಯಾವುದು ಎಂದು ಆಧ್ಯಾತಿಕ ನೆಲೆಯನ್ನೂ ಹೊಕ್ಕು ಅರ್ಥಮಾಡಿಸಲು ಪ್ರಯತ್ನಿಸುತ್ತಾರೆ.

ಕನಕದಾಸರದ್ದು ಸದಾ ಡಂಬಾಚಾರವನ್ನು ಪ್ರಶ್ನಿಸುವ ಸ್ವಭಾವ. ಅದಕ್ಕಾಗಿಯೇ ಜನರಲ್ಲಿ ಶಾಶ್ವತವಾಗಿ ಬೇರೂರಿರುವ ಅಂಥ ಅವೈಜ್ಞಾನಿಕ ಮೂಢನಂಬಿಕೆಗಳನ್ನು ಪ್ರಶ್ನಿಸುತ್ತಾರೆ. ಹಿಂದೂ ಸಂಪ್ರದಾಯದಲ್ಲಿ ಮಕ್ಕಳಾದರೆ ಸದ್ಗತಿ ಇಲ್ಲದಿದ್ದರೆ ನರಕಪ್ರಾಪ್ತಿ ಎಂಬ ನಂಬಿಕೆಯಿದೆ. ಇದು ಆಧುನಿಕ ಕಾಲದಲ್ಲಿಯೂ ಮುಂದುವರೆದಿದೆ. ಇದನ್ನು ಕನಕದಾಸರು ವಿರೋಧಿಸುತ್ತಾರೆ.

**"ಲಲನೆಯರು ಪುರುಷರು ತಮತಮ್ಮ ಕಾಮದ**
**ಸಲುವಾಗಿ ಕೂಡೆ ಶೋಣಿತ ಶುಕದಿ**
**ಮಿಳಿತವಾದ ಪಿಂಡ ತನ್ನ ಪೂರ್ವಕ್ರಮದಿಂದ**
**ನೆಲಕೆ ಬೀಳಲು ಅದು ಸಲಹಿ ರಕ್ಷಿಪುದೆ?"**[8]

ಕನಕದಾಸರ ಈ ವಚನದಲ್ಲಿ ಮನುಷ್ಯ ನಂಬಿರುವ ಮಕ್ಕಳು ಪಡೆಯುವ ದೈವನಿಯಮಕ್ಕೆ ಬದಲಾಗಿ ವೈಜ್ಞಾನಿಕ ಸತ್ಯವನ್ನು ವಿವರಿಸುತ್ತಿದ್ದಾರೆ. 21ನೇ ಶತಮಾನದಲ್ಲೂ ಈ ಮೂಢನಂಬಿಕೆಗೆ ಅಂತ್ಯವಾಡಲು ಸಾಧ್ಯವಾಗದೇ ಇರುವುದು ನಾಗರೀಕ ಸಮಾಜದ ದುರಂತ. ಮುಂದುವರೆದು ಕನಕದಾಸರ ಇನ್ನೊಂದು ಪದ್ಯ ಹೀಗಿದೆ.

**"ಸುತರಿಲ್ಲದವಗೆ ಸದ್ಗತಿ ಇಲ್ಲವೆಂಬ**
**ಕೃತಕ ಶಾಸ್ತ್ರವು ಲೌಕಿಕಭಾವಕೆ**
**ಕ್ಷಿತಿಯೊಳು ಕಾಗಿನೆಲೆಯಾದಿಕೇಶವ ಜಗ**
**ತ್ಪತಿಯ ಭಜಿಪಗೆ ಸದ್ಗತಿಯಿರದೆ ಹೋಹುದೆ?**[9]

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂದು ಪ್ರಶ್ನಿಸುತ್ತಾರೆ. ಮುಗ್ಧ ಜನರು ನಂಬಿರುವ ಶಾಸ್ತ್ರ ನಂಬಿಕೆಗಳನ್ನು ವಿರೋಧಿಸುತ್ತಾರೆ. ಈ ವಿರೋಧದ ಜೊತೆ ಅವರು ನಂಬಿರುವುದು 'ಕೃತಕಶಾಸ್ತ್ರ' ಎಂದು ಲೋಕ ಒಪ್ಪಿತ ನಂಬಿಕೆಗಳಿಗೆ ಪೆಟ್ಟುಕೊಡುತ್ತಾರೆ. ತಮ್ಮದೇ ಹೊಸ ವಿವರಗಳನ್ನು ಮಂಡಿಸುತ್ತಾರೆ. ಮಕ್ಕಳಾಗದೇ ಇದ್ದರೂ ನಾವು ಬದುಕುವ ಶ್ರೇಷ್ಠ ಆಧ್ಯಾತ್ಮದ ಬದುಕಿನಿಂದ ಸದ್ಗತಿ ಸಾಧ್ಯವಿದೆ ಎನ್ನುತ್ತಾರೆ.

**"ಪಟ್ಟಿನಾಮವ ಬಳಿದು ಪಾತ್ರೆಕೈಯಲಿ ಹಿಡಿದು**
**ಗುಟ್ಟಿನಲಿ ಜಪಿಸುವ ಗುರುತರಿಯದೆ**
**ಕೆಟ್ಟಕೂಗನು ಕೂಗಿ ಹೊಟ್ಟೆಯನು ಹೊರೆವಂಥ**
**ಪೊಟ್ಟೆಗುಡುಮಗಳೆಲ್ಲ ಪರಮ ವೈಷ್ಣವರೆ?"[10]**

ಎಂದು ತನ್ನ ಸಮಕಾಲೀನ ಸಂದರ್ಭದಲ್ಲಿ ಬಲಿಷ್ಠವಾಗಿದ್ದ ವೈಷ್ಣವ ಧರ್ಮದ ಪೊಳ್ಳುತನವನ್ನು ಕುಟುಕುತ್ತಾರೆ. ಇಲ್ಲಿ ತೋರಿಕೆಯ ಭಕ್ತಿಯ ಜೊತೆಗೆ ಜನಸಾಮಾನ್ಯರು ಅರಿಯದ ಭಾಷೆಯಲ್ಲಿ ಮಂತ್ರಗಳನ್ನು ಪಿಸುಗುಡುವ ಸಾಂಪ್ರದಾಯಿಕ ಮೋಸಗಾರಿಕೆಯನ್ನು ಗುರುತಿಸುತ್ತಾರೆ. ಶ್ರಮಸಂಸ್ಕೃತಿಯ ವಿರೋಧಿಗಳಾದ ಇವರು ಸಂಸ್ಕೃತ ಶ್ಲೋಕಗಳನ್ನು ಜನರೆದುರು ಜಪಿಸಿ ಅವರಿಗೆ ಭಯವನ್ನುಂಟುಮಾಡುತ್ತಾರೆ. ಇಂಥಹ ಅರ್ಥವಿಲ್ಲದ ಆಚರಣೆಗಳನ್ನು ಕನಕದಾಸರು ಸದಾ ಪ್ರಶ್ನಿಸುತ್ತಾರೆ. ಮೌಢ್ಯ ಮತ್ತು ಕಂದಾಚಾರ ವಿರುದ್ಧದ ಚಳವಳಿಯನ್ನು ಕನಕದಾಸರು ಎಂದೇ ಪ್ರಾರಂಭಿಸಿದಂತೆ ಕಾಣುತ್ತದೆ. ಇದರರ್ಥ ಕನಕದಾಸರು ಎಂದೂ ಸಾಂಪ್ರದಾಯಿಕ ನಂಬಿಕೆಗಳನ್ನು ಒಪ್ಪಿಕೊಳ್ಳದೆ ವೈಜ್ಞಾನಿಕ ನೆಲೆಯ ಶೋಧಕನಾಗಿ ಕಂಡುಬರುತ್ತಾರೆ.

ಹೀಗೆ ಕನಕದಾಸರು 16ನೇ ಶತಮಾನದಲ್ಲಿಯೇ ಸಮಾಜದಲ್ಲಿನ ಹಲವು ಸಂಗತಿಗಳಿಗೆ ವೈಜ್ಞಾನಿಕ ದೃಷ್ಟಿಕೋನದ ಕನ್ನಡಿಯನ್ನು ಹಿಡಿದವರಾಗಿದ್ದಾರೆ. ವಿಜ್ಞಾನವು ಬಹು ವೇಗವಾಗಿ ಬೆಳೆಯುತ್ತಿರುವ ಇಂದಿಗೂ ಹಲವು ಪ್ರಜ್ಞಾವಂತ ಶಿಕ್ಷಿತವರ್ಗ ಹಲವು ಮೂಢನಂಬಿಕೆ ಮತ್ತು ಕಂದಾಚಾರದಲ್ಲಿ ಮುಳುಗಿರುವುದನ್ನು ಕಂಡಾಗ, ಕನಕದಾಸರು ಪ್ರತಿಪಾದಿಸಿದ ತತ್ವ ಚಿಂತನೆಯನ್ನು ಸಮಾಜ ಸರಿಯಾಗಿ ಗ್ರಹಿಸುವಲ್ಲಿ ಸೋತಿದೆ ಎನ್ನಿಸುತ್ತದೆ. ಕನಕದಾಸರ ನುಡಿಗಳಿಗೆ ಸಂಗೀತ ಅಳವಡಿಸಿ ಅದರ ಲಯ ಲಾವಣ್ಯಕ್ಕೆ ಮಾರುಹೋಗಿದ್ದೇವೆಯೇ ಹೊರತು ಅವು ಅರ್ಥೈಸಲು ಪ್ರಯತ್ನಿಸುತ್ತಿರುವ ಆದರ್ಶ ಚಿಂತನೆಗಳಿಗೆ ಗಮನಕೊಡದೆ ಇರುವುದು ದುರಂತವೇ ಸರಿ.

## ಅಡಿಟಿಪ್ಪಣಿಗಳು

1. ಪುಟ–2, ಕೀರ್ತನಕಾರರು, ಎಚ್.ಎಸ್.ವೆಂಕಟೇಶಮೂರ್ತಿ (2010), ಬೆಂಗಳೂರು ಸ್ವಪ್ನ ಬುಕ್‌ಹೌಸ್.
2. ಪುಟ–345, ಕನ್ನಡ ಸಾಹಿತ್ಯ ಚರಿತ್ರೆಯ ಕಾಲಘಟ್ಟಗಳು, ಡಾ.ಎಸ್.ಎಂ.ಹಿರೇಮಠ (1993) ಗದಗ ವಿದ್ಯಾನಿಧಿ ಪ್ರಕಾಶನ.
3. ಪುಟ–119, ಕನ್ನಡ ಸಾಹಿತ್ಯ ಚರಿತ್ರೆ, ತ.ಸು.ಶ್ಯಾಮರಾಯ (2010), ಮೈಸೂರು ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ,
4. ಪುಟ–33, ಕೀರ್ತನಕಾರರು, ಎಚ್.ಎಸ್.ವೆಂಕಟೇಶಮೂರ್ತಿ, (2010) ಬೆಂಗಳೂರು ಸ್ವಪ್ನ ಬುಕ್‌ಹೌಸ್.
5. ಪುಟ–50, ಕನಕ ತರಂಗಿಣಿ, ಕಾ.ತ.ಚಿಕ್ಕಣ್ಣ (ಸಂ) (2010) : ಬೆಂಗಳೂರು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ.
6. Ancient history encyclopaedia web.
7. ಪುಟ–51, ಕನಕ ತರಂಗಿಣಿ, ಕಾ.ತ.ಚಿಕ್ಕಣ್ಣ (ಸಂ)(2015) ಬೆಂಗಳೂರು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ.
8. ಪುಟ–485, ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು, ಪ್ರೊ. ಸುಧಾಕರ (ಸಂ) (2012) ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
9. ಪುಟ–586, ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು, ಪ್ರೊ. ಸುಧಾಕರ (ಸಂ) (2012) ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
10. ಪುಟ–487, ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು, ಪ್ರೊ. ಸುಧಾಕರ(ಸಂ), (2012) ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

■■

*– 37ನೇ ಪುಟದಿಂದ ಮುಂದುವರೆದುದು*

| | |
|---|---|
| 5. ಗಿರಿಜಾ ಕಲ್ಯಾಣಲೀಲೆ | 6. ಭಿಕ್ಷಾಟನಲೀಲೆ |
| 7. ಮಾರಹರಲೀಲೆ | 8. ಕಾಲಹರಲೀಲೆ |
| 9. ತ್ರಿಪುರದಹನಲೀಲೆ | 10. ಜಲಂಧರಲೀಲೆ |
| 11. ಅಜಾರಿಲೀಲೆ | 12. ವೀರಭದ್ರಲೀಲೆ |
| 13. ಶರಭಲೀಲೆ | 14. ಅರ್ಧನಾರೀಶ್ವರಲೀಲೆ |
| 15. ಕಿರಾತಲೀಲೆ | 16. ಕಂಕಾಳಲೀಲೆ |
| 17. ಚಂಡೇಶಾನುಗ್ರಹಲೀಲೆ | 18. ವಿಷಧರಲೀಲೆ |
| 19. ಚಕ್ರದಾನಲೀಲೆ | 20. ವಿಘ್ನಪ್ರಸಾದಲೀಲೆ |
| 21. ಉಮಾಸ್ಕಂದಲೀಲೆ | 22. ಏಕಪಾದಲೀಲೆ |
| 23. ಸುಖಾವಹಲೀಲೆ | 24. ದಕ್ಷಿಣಾಮೂರ್ತಿಲೀಲೆ |
| 25. ಲಿಂಗೋದ್ಭವಲೀಲೆ | |

## ಪರಾಮರ್ಶನ ಗ್ರಂಥಗಳು


- **ಡಾ. ಆರ್.ಸಿ. ಹಿರೇಮಠ (ಸಂ.) (1971) :** ಬಸವ ಪುರಾಣ : ಪ್ರಕಾಶಕರು, ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಧಾರವಾಡ ಶ್ರೀ ಮುರುಘಾಮಠ, ಮೃತ್ಯುಂಜಯ ನಗರ, ಪ್ರಥಮ ಮುದ್ರಣ,
- **ಡಾ. ಎಸ್. ವಿದ್ಯಾಶಂಕರ (1981) :** ವೀರಶೈವ ಪುರಾಣಗಳು ಒಂದು ಅಧ್ಯಯನ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.
- **ಎಂ.ಆರ್. ಶ್ರೀನಿವಾಸಮೂರ್ತಿ(ಲೇಖನ) (1923) :** ಕರ್ನಾಟಕ ಸಾಹಿತ್ಯ ಚರಿತ್ರೆ (1150–1600), ವೀರಶೈವ ಪುರಾಣಗಳು : ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ : 8, ಸಂಚಿಕೆ : 2, ಜೂಲೈ.


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನಕದಾಸರ ಕೀರ್ತನೆಗಳಲ್ಲಿ ಪರಮಾರ್ಥ

✍ **ಡಾ. ಮಾಧವ ಎಂ. ಕೆ.**, ಮುಖ್ಯಸ್ಥರು, ಕನ್ನಡ ವಿಭಾಗ, ವಿಶ್ವವಿದ್ಯಾಲಯ ಕಾಲೇಜು, ಮಂಗಳೂರು.

ಕವಿಗಳು ಮತ್ತು ದಾರ್ಶನಿಕರು ಕಾಲಘಟ್ಟದ ಭೇದವಿಲ್ಲದೆಯೂ ಜನಮನದಲ್ಲಿ ಸದಾ ಮಾತನಾಡುತ್ತಿರುತ್ತಾರೆ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಕನಕದಾಸರು ಕವಿಯಾಗಿ,ಸಂತರಾಗಿ, ಪರಮ ಭಕ್ತರಾಗಿ, ಅಧ್ಯಾತ್ಮ ಸಾಧಕರಾಗಿ ನಮಗೆ ಗೋಚರಿಸುತ್ತಾರೆ. ಏಕೆಂದರೆ ಅವರು ಜಾತಿಯ ಬಗ್ಗೆ ಮಾತನಾಡುತ್ತಾರೆ; ಮಾನವನ ಹಲವು ಭಾವಭಂಗಿಗಳ ಬಗ್ಗೆ, ಆತನ ಒಳಮನದ ಇನ್ನೊಂದು ರೂಪದ ಬಗ್ಗೆ, ಅಲ್ಪಸಂಖ್ಯಾತ ಮೇಲ್ವರ್ಗದ ಪ್ರಾಬಲ್ಯದ ಬಗ್ಗೆ, ಬಹುಸಂಖ್ಯೆಯ ತಳಸಮುದಾಯದ ಅಸಹಾಯಕತೆ – ಆತ್ಮಾಭಿಮಾನದ ಬಗ್ಗೆ, ಪ್ರತಿಷ್ಠಿತ ಶಕ್ತಿಗಳ ಹಿತಸಾಧನೆಯ ನಡೆಯಲ್ಲಿ ನಲುಗುವ ಕ್ರಿಯಾಶೀಲತೆಯ ಬಗ್ಗೆ, ಭಾಷೆಯ ಬಗ್ಗೆ, ಕನ್ನಡ ಜನಪದ ಬದುಕಿನ ಅರಿವಿನ ಬಗ್ಗೆ ಹೀಗೆ ಶೂನ್ಯದಿಂದ ಮಾನ್ಯದವರೆಗಿನ ಹತ್ತು ಹಲವು ವಿಚಾರ ವಿಷಯಗಳ ಬಗ್ಗೆ ತನ್ನ ಕೀರ್ತನೆಗಳ ಮೂಲಕ– ಕಾವ್ಯಗಳ ಮೂಲಕ ಸದಾ ಜೀವಂತಿಕೆಯ ಮಾತುಗಳನ್ನು ಆಡುತ್ತಲೇ ಇರುತ್ತಾರೆ ಎನ್ನುವುದನ್ನು ನಾವು ಅನುಭವಿಸುತ್ತೇವೆ ಮತ್ತು ಅನುಭಾವದಲ್ಲೂ ಸ್ವೀಕರಿಸುತ್ತೇವೆ.

ಕನಕದಾಸರಂಥ ಮಹಾ ಸಂತರ ಜೀವನ ಮೀಮಾಂಸೆಯ ನುಡಿಗಳ ಜಾಡನ್ನು ಹಿಡಿಯಲು ಕನಕದಾಸರ ಕಾವ್ಯದ–ಕೀರ್ತನೆಗಳ ಒಂದೊಂದು ಪದವನ್ನೂ ಓದುವ ಮಾರ್ಗವನ್ನು ಕೂಡ ನಾವು ವರ್ತಮಾನಕ್ಕೆ ಜೋಡಿಸಿಕೊಳ್ಳಬೇಕಾದ ಅಗತ್ಯವಿದೆ. ಅವರ ಕಾವ್ಯದರ್ಶನ, ಜೀವನ ಸಂದೇಶ, ಸಮಾಜ ಮುಖಿ ಚಿಂತನೆ, ಆಧ್ಯಾತ್ಮಿಕ ಆಲೋಚನೆಗಳನ್ನು ವಿಭಿನ್ನ ನೆಲೆಗಳಲ್ಲಿ ನೆರಳುಗಳಲ್ಲಿ ನಾವು ಪುನರವಲೋಕನಗೈಯುವುದು ಸಾಂದರ್ಭಿಕವೂ ಸೂಕ್ತವೂ ಆಗಿದೆ. ಕನಕದಾಸರ 'ಮೋಹನ ತರಂಗಿಣಿ', 'ನಳಚರಿತ್ರೆ', 'ಹರಿಭಕ್ತಿಸಾರ', 'ರಾಮಧಾನ್ಯಚರಿತೆ', 'ಮುಂಡಿಗೆಗಳು' ಮತ್ತು 'ಕೀರ್ತನೆಗಳು' ಮಾನವ ಬದುಕಿನ ಹಲವು ಮಜಲುಗಳನ್ನು ತಮ್ಮ ನುಡಿಮಹಲುಗಳಲ್ಲಿ ಮನದಟ್ಟಾಗಿಸಿ ಆತ್ಮ–ಅಧ್ಯಾತ್ಮಗಳವರೆಗಿನ ಹರಹನ್ನೂ ಗೋಚರಿಸುವಂತೆ ಮಾಡುತ್ತವೆ. ಕನಕದಾಸರು ರಚಿಸಿರುವ ಬಹು ಜನಪ್ರಿಯವಾದ ಪ್ರಕಾರವೆಂದರೆ ಕೀರ್ತನೆಗಳು. ಅವರ ನೂರಾರು ಕೀರ್ತನೆಗಳು ಮುಂಡಿಗೆ, ಉಗಾಭೋಗಗಳು, ಉದಯರಾಗ ಗಳನ್ನೊಳಗೊಂಡರೂ ಅವುಗಳಲ್ಲಿ ಕನಕರ ನೇರ ಅಭಿವ್ಯಕ್ತಿ, ಸಹಜತೆ, ನಿಷ್ಠುರತೆ, ಜಾನಪದೀಯ ಲಯಗಳನ್ನು ಗುರುತಿಸಬಹುದಾಗಿದೆ. ಕೀರ್ತನೆಗಳ ಮೂಲಕ ಕನಕದಾಸರು ಡಾಂಭಿಕತೆಯನ್ನು ಖಂಡಿಸುವ, ಸಮಾಜವನ್ನು ವಿಮರ್ಶಿಸುವ, ಲೋಕನೀತಿ ಬೋಧಿಸುವ, ಭಕ್ತಿ ಪಾರಮ್ಯವನ್ನು ಮೆರೆಯುವ ಕಾರ್ಯವನ್ನು ಮಾಡಿದ್ದಾರೆ.

ಸಾಮಾಜಿಕ, ಪಾರಮಾರ್ಥಿಕ ಚಿಂತನೆಗಳನ್ನು ತಮ್ಮ ಸರಳ ನುಡಿಗಳಲ್ಲೇ ಪೋಣಿಸಿ ಗಂಭೀರ ವಿವೇಚನೆ ನಡೆಸುವಂತೆ ಪ್ರೇರೇಪಿಸಿದ್ದಾರೆ. ಹಾಗಾಗಿ ಕನಕದಾಸರು ಲೌಕಿಕ ಮತ್ತು ಪಾರಮಾರ್ಥಿಕ ಲೋಕದ ಒಳಹೊರಗನ್ನು ಶೋಧಿಸುತ್ತಾ ಭಕ್ತಿ ಮಾರ್ಗದ ಮೂಲಕವೇ ಮಾನವ ಸಮಾಜದ ಒಳಿತನ್ನು ಹದ–ಹಸನುಗಳನ್ನು ಆಶಿಸುತ್ತಾ ನಡೆದ ದಾರ್ಶನಿಕ ಕವಿ ಎನ್ನಲು ಯಾವುದೇ ಸಂದೇಹ ಕಾಣದು.

ಕರ್ನಾಟಕದಲ್ಲಿ ಮಹತ್ತ್ವದ ಮೊದಲ ಸಾಂಸ್ಕೃತಿಕ ನಾಯಕ ವಚನ ಚಳವಳಿಯ ಪಿತಾಮಹ ಬಸವಣ್ಣನಾದರೆ ಅನಂತರದಲ್ಲಿ ಬಂದವರೇ ಕನಕದಾಸರು. ಅವರು ಕೀರ್ತನೆಗಳ ಮೂಲಕ ಹೊಮ್ಮಿಸಿದ ಸಮಾನತೆಯ ಬೆಳಕು ಇನ್ನೂ ಸಮರ್ಪಕವಾಗಿ ಜನಮನಕ್ಕೆ ತಟ್ಟದಿರುವುದು ಶೋಚನೀಯವೇ ಸರಿ. ಕನಕದಾಸರು ಮೊದಲಿಗೆ ಸಾಮಾನ್ಯರಾಗಿದ್ದರು. ಬಳಿಕ ನಾಯಕರಾದರು. ಅನಂತರ ಡಣಾಯಕರಾದರು, ಮಹಾ ರೂಪಾಂತರ ಪಡೆದು ಕನಕದಾಸರು ಧಾರ್ಮಿಕ ವಕ್ತಾರರಾಗಿ ಒಂದು ಧರ್ಮ ಪಂಥದೊಳಗೆ ದಾಸರಾದರು. 'ಅಧ್ಯಾತ್ಮ' ಎಂಬ ಏಕಪದ ನಿಷ್ಪತ್ತಿಯಲ್ಲಿ 'ಅಧಿ' ಮತ್ತು 'ಆತ್ಮ' ಎಂಬ ಎರಡು ಭಾಗಗಳನ್ನು ಗುರುತಿಸುತ್ತೇವೆ. ಇದು ಆತ್ಮವನ್ನುಅಧಿಕಾರ ಶಕ್ತಿಯನ್ನಾಗಿಸುವುದು, ಅಧಿಕಾರ ಶಕ್ತಿಯನ್ನು ಆತ್ಮ ಸಮನ್ವಯಗೊಳಿಸುವುದು ಹೀಗೆ ಹಲವು ಆಯಾಮಗಳಲ್ಲಿ ಅರ್ಥವನ್ನು ಸ್ಫುರಿಸಬಹುದು. ಯೋಗ ಸಿದ್ಧಿಯನ್ನು ಪಡೆದವನು ಯೋಗಿಯಾಗುತ್ತಾನೆ. "ತಾನಾರು ದೇಹವಾರು ದಿವ್ಯಜ್ಞಾನದಲಿ ತಿಳಿದಾತ ಪರಮಯೋಗಿ" ಎಂಬ ಪಲ್ಲವಿಯಿಂದ ಆರಂಭಗೊಳ್ಳುವ ಕೀರ್ತನೆಯೊಂದರಲ್ಲಿ ಪ್ರತಿಪಾದಿತವಾಗಿರುವ ದೇಹಾತ್ಮ ವಿವೇಕವು ಕನಕದಾಸರ ಅಧ್ಯಾತ್ಮ ಪ್ರವೃತ್ತಿಯನ್ನು ಎತ್ತಿ ಹಿಡಿಯುತ್ತದೆ. ಅಧ್ಯಾತ್ಮ ಸಾಧಕನಿಗೆ ಆತ್ಮಶೋಧ ಅಥವಾ ಆತ್ಮ ಪರೀಕ್ಷೆ ಪ್ರಮುಖ ಸಾಧನಗಳಾಗಿರುತ್ತವೆ. ತನ್ನಅರಿವಿಲ್ಲದೆ, ಬುದ್ಧಿ ಪೂರ್ವಕವಾಗಿಯಲ್ಲದೆ, ತಾನು ಎಸಗಿರಬಹುದಾದ ಪಾಪ ಕಾರ್ಯಗಳು ಜನ್ಮಾಂತರದ ಕರ್ಮಫಲ ಎಂದು ಸಾಧಕ ನಂಬುವುದಿದೆ. "ಹಲವು ಜನ್ಮದ ಪಾಪವೆನಿಪ ಸೊಕ್ಕಾನೆ ಸೊಂಡಿಲು ಸುತ್ತಿ ಬಂದು ಸೀವರಿಸುತಿದೆಕೊ; ಮಲೆವ ದುಷ್ಕೃತವೆಂಬ ಗಜಕೇಸರಿಯೆಂಬ ಛಲ ಬಿರುದು ತಾಳ್ದ ದೇವರದೇವ ನೀನೆನ್ನ ಕಡಹಾಯಿಸೋ ತಡಿಯ ಸೇರಿಸೊ" ಎಂದು ಆರ್ತರಾಗಿ ಆದಿಕೇಶವನನ್ನು ಕನಕರು ಬೇಡಿಕೊಳ್ಳುತ್ತಾರೆ.

ಜೀವನದ ನಶ್ವರತೆ, ಹೆಣ್ಣು ಹೊನ್ನು ಮಣ್ಣುಗಳಿಗೆ ಆಸೆ ಪಡದಿರುವ ಸಮಚಿತ್ತದ ಅಗತ್ಯ, ಬದುಕಿನ ಪಯಣವನ್ನು ಮುಗಿಸಿ ಅಂತಿಮ ತಾಣವಾದ ಮುಕ್ತಿ ಸ್ಥಾನವನ್ನು ಪಡೆಯಲು ಭಗವತ್ ಕೃಪೆಯ ಅಗತ್ಯ, ಭಗವದ್ಭಕ್ತಿಯ ಮೂಲಕ ಅಧ್ಯಾತ್ಮ ಸಾಧನೆಗೆ ಅಗತ್ಯವಾದ ವೈರಾಗ್ಯ– ಈ ಸಾಧನಾ ಪಥವನ್ನು ಇತರರಿಗೆ ಬೋಧಿಸ ಹೊರಟ ಕನಕದಾಸರು ತಾವು ಹೇಳಿದಂತೆ ನಡೆದು ನುಡಿದಿದ್ದಾರೆ ಎಂದೇ ನಾವು ತಿಳಿಯಬೇಕು. ಶಿವಶರಣರಲ್ಲಿ ಕಾಣುವ ಸತಿ–ಪತಿ ಭಾವದ ಪರಮಾತ್ಮ ಸಮಾಗಮದ ಹೆಬ್ಬಯಕೆಯನ್ನು– ಅರ್ಹತೆಯನ್ನು ಕನಕದಾಸರಲ್ಲೂ ನಾವು ನೋಡುತ್ತೇವೆ. 'ಇಂದು ನೀ ಕರೆದುತಾರೆ– ಬಾರದೆ ಶ್ರೀ ಗೋವಿಂದತಾ ಮುನಿದು ಇರೆ – ವಿರಹದಲಿ ನಾ ನೊಂದು ಸೈರಿಸಲಾರೆ– ತಂದು ನೀ ತೋರೆ"; "ಕರೆತಂದೆ ಕಾಮಿನಿ ಕಮಲಜಪಿತನ' – ಎಂಬುದಾಗಿ ಕೀರ್ತನೆಗಳ ಮೂಲಕ ಕನಕದಾಸರು ಭಕ್ತಿಯ ಉತ್ಕಟತೆಯಲ್ಲಿ ತಾವು ಪತಿಯನ್ನಗಲಿದ ವಿರಹಿಣಿಯಾಗಿ ಪತಿ ಸಮಾಗಮಕ್ಕೆ ಹಂಬಲಿಸುವುದನ್ನು ಗಮನಿಸಬಹುದು. ಕನಕದಾಸರ ಅಧ್ಯಾತ್ಮ ಸಾಧನೆಯ ಹಂತದ ತುತ್ತತುದಿ ಇದೆನ್ನಬಹುದು. ಪ್ರತಿಯೊಬ್ಬ ಸಾಧಕನ ಬದುಕಿನಲ್ಲೂ ಆತ್ಮದ ಕರಾಳ ರಾತ್ರಿ ಎಂದು ಹೆಸರಿಸಬಹುದಾದ ಪ್ರಾರಂಭಿಕ ಸ್ಥಿತಿಯೊಂದಿರುತ್ತದೆ. ಕನಕದಾಸರ ಬದುಕಿನಲ್ಲೂ ಇದು ಇದ್ದಿರಲೇಬೇಕು. ಮೊದಲಿಗೆ ಅವರು ಸಂಸಾರಬದ್ಧರಾಗಿ ಮಾಯಾ ಮೋಹವಶರಾಗಿ ತೊಳಲುತ್ತಿದ್ದಿರಬೇಕು. ಆ ತೊಳಲಾಟವನ್ನು ತೋಡಿಕೊಂಡು ಭಗವಂತನ ಕರುಣೆಯನ್ನುಯಾಚಿಸುವ ಬಗೆ ಅವರ ಅನೇಕ ಕೀರ್ತನೆಗಳಲ್ಲಿ ಗೋಚರಿಸುತ್ತವೆ.

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ನೀನೆ ದಯಮಾಡಿ ಸಲಹು ಎನ್ನನುಕೃಷ್ಣ**
**ಕಾನನದೊಳು ಕಣ್ಣ ಮುಚ್ಚಿ ಬಿಟ್ಟಹರೊ ॥**
**ಎನ್ನುವಲ್ಲಿಜೀವವನ್ನುಕವಿದಕಗ್ಗತ್ತಲಿನ ನಿರೂಪಣೆಯಿದೆ.**
**ಘೋರ ಸಂಸಾರವೆಂಬ ವಾರಿಧಿಯೊಳಗೆ ಬಿದ್ದು**
**ಪಾರಗಾಣದಾದೆನಲ್ಲಯ್ಯಾ ॥**
**ಎಂದು ಕನಕದಾಸರು ಅಳಲು ತೋಡಿಕೊಳ್ಳುವುದುಂಟು.**
**ಸಾಕು ಸಾಕು ಮನುಜಸೇವೆರಂಗಯ್ಯ**
**ಬೇಕು ನಿನ್ನ ಭಜನೆ ॥**

ಎಂದು ಸಂಕಲ್ಪಿಸುತ್ತಾರೆ. ತಮಗೆ ಭಗವದನುಗ್ರಹದ ಬಾಗಿಲು ತೆರೆಯಲಿಲ್ಲ ಎನಿಸಿದಾಗ ಹೀಗೆ ಮೊರೆಯಿಡುತ್ತಾರೆ:

**ಬಾಗಿಲನು ತೆರೆದು ಸೇವೆಯನುಕೊಡು ಹರಿಯೆ**
**ಕೂಗಿದರುಧ್ವನಿ ಕೇಳಲಿಲ್ಲವೇ ನರಹರಿಯೆ? ॥**

ಈ ಸಂಸಾರ, ಸಂಪತ್ತು, ದೇಹಗಳು ಅನಿತ್ಯವೆಂಬ ಅರಿವು ಕನಕದಾಸರಿಗಾಗುತ್ತದೆ; ಅದನ್ನು ಅವರು ವಿವಿಧ ರೀತಿಗಳಲ್ಲಿ ಅಭಿವ್ಯಕ್ತಗೊಳಿಸುತ್ತಾರೆ. ಕನಕದಾಸರಲ್ಲಿ ಭಕ್ತಿ, ದೈವಶ್ರದ್ಧೆ, ಭೋಗ ನಿರಾಸಕ್ತಿ, ಸಂಸಾರ ನಿಸ್ಸಾರತೆಯ ಅರಿವು ಮೊದಲಾದ ವ್ಯಕ್ತಿನಿಷ್ಠ ರಚನೆಗಳು ಒಂದೆಡೆಯಾದರೆ, ಸಮಾಜ ನಿಷ್ಠ ರಚನೆಗಳು ಮತ್ತೊಂದು ಕಡೆಗಿವೆ. ಅಧ್ಯಾತ್ಮ ಸೆಳೆತ ಹಾಗೂ ಸ್ವಾನುಭವದ ಸಾಮಾಜಿಕ ವಾಸ್ತವತೆಯ ಭೀಕರ ಚಿತ್ರ ಅವರ ರಚನೆಗಳಲ್ಲಿ ಅಂತರ್ಗಾಮಿಯಾಗಿವೆ. ಅವರಕೀರ್ತನೆ ಕಾವ್ಯಗಳಲ್ಲಿ ಸಾಂಪ್ರದಾಯಕವಾದ ಹಾಗೂ ಕಾಲಬದ್ಧವಾದ ಸಂಗತಿಗಳಿರುವಂತೆಯೇ ಕಾಲಾತೀತವಾಗಿ ನಿಲ್ಲಬಹುದಾದ ಮೌಲ್ಯ, ಸಂದೇಶಗಳೂ ಇವೆ. "ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮಕುಲದ ನೆಲೆಯನೇನಾದರೂ ಬಲ್ಲಿರ – ಎನ್ನುವ ಕೀರ್ತನೆಯಲ್ಲಿ ಸಾಮಾಜಿಕವಾಗಿ ಮೇಲುಕೀಳು ಭಾವವನ್ನು ಟೀಕಿಸುವುದರ ಜೊತೆಗೆ ಸೂಕ್ತ ಸಮರ್ಥನೆಗಳನ್ನೊದಗಿಸುತ್ತ ನಮ್ಮ ಲೌಕಿಕ ಮಾತ್ರವಲ್ಲದೆ ಪಾರಲೌಕಿಕ ದೃಷ್ಟಿಯ ಹರಹನ್ನು ವಿಸ್ತರಿಸಲು ಬೆಳಕಾಗಿ ಪರಿಣಮಿಸುತ್ತಾರೆ.

ಬದುಕಿನಲ್ಲಿ ಮೈಗೂಡಿಸಿಕೊಳ್ಳಬೇಕಾದ ಹಲವು ಸಾರ್ವತ್ರಿಕ ಸಂದೇಶಗಳನ್ನು ದಾಸರು ಸಾರಿದ್ದಾರೆ 'ತಲ್ಲಣಸದಿರು ಕಂಡ್ಯ ತಾಳು ಮನವೇ', 'ಎಲ್ಲರೂ ಮಾಡುವುದು ಹೊಟ್ಟೆಗಾಗಿಗೇಣು ಬಟ್ಟೆಗಾಗಿ' ಮೊದಲಾದ ರಚನೆಗಳು ವಾಚ್ಯವಾಗಿ, ಸೂಚ್ಯವಾಗಿ ಸಾರುವತತ್ತ್ವ ಉಪದೇಶಗಳು ಲೌಕಿಕ ಹಾಗೂ ಪಾರಲೌಕಿಕ ನೆಲೆಗಳಲ್ಲಿ

ಮಾನವನನ್ನು ವಿವೇಚಿಸುವಂತೆ ವಿಶ್ಲೇಷಿಸುವಂತೆ ಮಾಡುತ್ತದೆ. ಕನಕದಾಸರು ಕೀರ್ತನಕಾರರಷ್ಟೇ ಆಗಿರದೆ ಕವಿಗಳೂ ಆಗಿದ್ದಾರೆ. ಇದು ಅವರ ವಿಶೇಷತೆ; ವಿಭಿನ್ನತೆ. ಅವರ ಕೃತಿಗಳಲ್ಲಿ ಸಾಂಪ್ರದಾಯಿಕ ಕೃತಿ ರಚನೆಕಾರರಿಗಿಂತ ಭಿನ್ನವಾದ ಹಾಗೂ ಅಪೂರ್ವವಾದ ವಿಚಾರಶೀಲತೆ ಕಂಡು ಬರುತ್ತದೆ. ಇದು ಅವರ ಅನನ್ಯತೆಗೂ ಸಾಕ್ಷಿಯಾಗಿದೆ.

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಒಂದುಕಡೆಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. "ಕನಕದಾಸನಲ್ಲಿ ವಿಚಾರ ಸ್ವಾತಂತ್ರ್ಯ ಹೆಚ್ಚು, ಜನಜೀವನ ಜನಭಾಷೆಯ ಅರಿವು ಹೆಚ್ಚು." ರಂ.ಶ್ರೀ. ಮುಗುಳಿಯವರ ಅಭಿಪ್ರಾಯ ಪಡುವಂತೆ, " ಸಮಾಜ ವಿಮರ್ಶೆ ಮತ್ತು ಜನಜೀವನ ಚಿತ್ರಕ್ಕೆ ಮಿಗಿಲಾದ ಎಷ್ಟೋ ಕೀರ್ತನೆಗಳಿವೆ. ಅವುಗಳಲ್ಲಿ ಕನಕದಾಸರು ಸಮಾಜದ ಕುಂದು ಕೊರತೆಗಳನ್ನು ಮುಚ್ಚುಮರೆಯಿಲ್ಲದೆ ಕೆಡೆನುಡಿದಿದ್ದಾನೆ. ಅವನ ಕಳಕಳಿ ನೈಜ, ಮಾತು ಹರಿತ, ನಿರೀಕ್ಷಣೆತೀವ್ರ ಎಂಬುದು ತಿಳಿಯುತ್ತದೆ." ಎಂಬುದಾಗಿದೆ.

ಕನಕದಾಸರ ರಚನೆಗಳನ್ನು ಸಾಹಿತ್ಯ ಮೌಲ್ಯದ ದೃಷ್ಟಿಯಿಂದಲೂ ವಿಶ್ಲೇಷಿಸಬಹುದಾಗಿದೆ. ನಡುಗನ್ನಡ ಸಾಹಿತ್ಯದ ಗಮನಾರ್ಹ ದಾಸ-ಕವಿಗಳಲ್ಲಿ ಓರ್ವರಾದ ಕನಕದಾಸರು ಮೂಲತಃ ಕವಿ ಸ್ವಭಾವದವರು. ನೂರಾರು ಕೀರ್ತನೆಗಳ ರಚನೆಯಿಂದ ಇವರು ದಾಸಶ್ರೇಷ್ಠರಾಗಿಯೂ, ಜನಸಾಮಾನ್ಯರ ಪ್ರೀತ್ಯಾದರಗಳಿಗೆ ಪಾತ್ರರಾದವರು. 'ಕವಿ' ಮತ್ತು 'ದಾಸ' ಇವೆರಡೂ ಕನಕದಾಸರ ಸೃಜನಶೀಲ ವ್ಯಕ್ತಿತ್ವದ ವಿಭಿನ್ನ ಎನ್ನುವುದಕ್ಕಿಂತಲೂ 'ಅಭಿನ್ನ' ಮುಖಗಳೆಂದು ಹೇಳಬಹುದು. ಅಭಿನ್ನ ಏಕೆಂದರೆ, ಅವುಗಳು ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಸಾಗದೆ ಒಂದಕ್ಕೊಂದು ಪೂರಕವಾಗಿ ವ್ಯಕ್ತವಾಗಿರುವುದು ಇದಕ್ಕೆ ಕಾರಣ. ನಮ್ಮ ಮುಂದಿರುವ ಕನಕದಾಸರ ಒಟ್ಟು ಸಾಹಿತ್ಯವು 'ಭಕ್ತಿ' ತತ್ತ್ವದ ಮೇಲೆ ನಿಂತು ಸಾರ್ಥಕ ಜೀವನದ ಬಗೆಗಿನ ವಿವಿಧ ಕಲ್ಪನೆಗಳನ್ನು, ಧಾರ್ಮಿಕ ಆಚರಣೆಯ ಸಂಭವನೀಯತೆಗಳನ್ನು ಮತ್ತು ಬದುಕಿನ ದೃಢ ನಂಬಿಕೆಯ ಭಾವ ವಿಲಾಸಗಳನ್ನು ಪ್ರಸ್ತುತ ಪಡಿಸುವಂಥವಾಗಿವೆ.

ದಾಸ ಪರಂಪರೆಯಲ್ಲಿ ಅಗ್ರಗಣ್ಯರಾಗಿರುವ ಕನಕದಾಸರ ಹೆಸರಲ್ಲಿ 300ಕ್ಕೂ ಹೆಚ್ಚು ಕೀರ್ತನೆಗಳು ಲಭ್ಯವಿವೆ. ಅಲ್ಲದೆ ಸುಳಾದಿ, ಉಗಾಭೋಗಗಳಂಥ ಪ್ರಕಾರಗಳಲ್ಲಿಯೂ ಅವರ ತತ್ವಗಳು ವ್ಯಕ್ತಗೊಂಡಿವೆ. 16ನೇ ಶತಮಾನದಷ್ಟು ಹಿಂದೆಯೇ ಅವರು ಪ್ರತಿಪಾದಿಸಿದ ಮೌಲ್ಯಗಳದ್ದೇ ಒಂದು ಎತ್ತರವಾದರೆ, ಅವರ ಆಧ್ಯಾತ್ಮಿಕ ಪ್ರತಿಪಾದನೆಯದ್ದೇ ಮತ್ತೊಂದು ಎತ್ತರ. ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧಾನ್ಯ ಚರಿತೆ, ಹರಿಭಕ್ತಿ ಸಾರ ಮೊದಲಾದ ಕೃತಿಗಳ ಮೂಲಕ ಕನಕದಾಸರು ಹೇಳಿದ್ದು ಭಕ್ತಿಕಥನವನ್ನು ಮಾತ್ರವಲ್ಲ; ಬದಲಿಗೆ ಅಲ್ಲಿ ಸಾಮಾಜಿಕವಾದುದನ್ನು ಅಧ್ಯಾತ್ಮದ ಹೊಳಹಿನಲ್ಲಿ ನೋಡುವ, ಭ್ರಮೆಯ ಮಸುಕನ್ನು ಅಳಿಸುವ ಬಗೆಯಿದೆ. ದಾಸ ಪರಂಪರೆಯ ವೈಶಿಷ್ಟ್ಯ ಇರುವುದೇ ಅವರು ಲೋಕದ ಸತ್ಯವನ್ನು ಹೇಳಿದುದರಲ್ಲಿ. ಕನಕದಾಸರ ಬದುಕಿನ ಕಥೆ ಮತ್ತು ಅವರು ಕಾಣಿಸಿದ ಸತ್ಯಕೂಡ ಇದಕ್ಕೆ ಹೊರತಲ್ಲ. ಮನಸು ಶುದ್ಧವಿಲ್ಲದ ಮೇಲೆ ಏನೂ ಇಲ್ಲ, ಯಾವುದಕ್ಕೂ ಅರ್ಥವಿಲ್ಲ ಎಂದ ಕನಕದಾಸರು, ನಿಜವಾದ ಅಧ್ಯಾತ್ಮ ನಮ್ಮ ಜೀವನದ ಆಳದಲ್ಲಿಯೇ ಇರುವುದೆಂಬುನ್ನು ಸೂಕ್ಷ್ಮವಾಗಿ ಮನಗಾಣಿಸಿದವರು. ಆತನೊಲಿದ ಮೇಲೆ ಇನ್ಯಾತರ ಕುಲ ಎಂದು, ಸಾಮಾಜಿಕ ಅಶುದ್ಧತೆಯನ್ನು, ಅನಿಷ್ಟವನ್ನು ಕಟುವಾಗಿಯೇ ವಿಮರ್ಶಿಸಿ, ದೇವರ ಕಣ್ಣಲ್ಲಿನ ಸತ್ಯದ ದರ್ಶನವನ್ನು ಮಾಡಿಸಿದವರು. ಕನಕರು ಪ್ರತಿಪಾದಿಸಿದ ಅಧ್ಯಾತ್ಮ ಈ ಕಾರಣದಿಂದಲೇ ಬಾಳುವೆಯ ಭಾವವೂ ಹೌದು.

ಕನಕದಾಸರ ಬದುಕಿನ ವಿಚಾರವಾಗಿ ಹೇಳುವಾಗ, ನಾನು ಹೋದರೆ ಹೋದೇನು ಎಂಬ ಅವರ ಮಾತೊಂದು ಬಲು ಜನಪ್ರಿಯವಾದುದು ಮಾತ್ರವಲ್ಲ, ಅದು ಇಡೀ ಜೀವನ ಮತ್ತು ಅಧ್ಯಾತ್ಮದ ಸಾರದಂತೆಯೂ ಇದೆ. ನಾನು ಎಂಬುದು ಮೋಹವೂ ಹೌದು, ಅಹಂಕಾರವೂ ಹೌದು. ಅದು ಅಳಿದರೆ ಮಾತ್ರವೇ ಅಧ್ಯಾತ್ಮಕ್ಕೆ ಬಾಗಿಲು. ಮತ್ತು ಇದು ಬದುಕನ್ನು ಇನ್ನಷ್ಟು ಗಾಢವಾಗಿಸಬಲ್ಲ ಸರಳ ಸೂತ್ರ. ಇದ್ದಲ್ಲಿಯೇ ಅಧ್ಯಾತ್ಮವನ್ನು ಕಾಣಿಸಬಲ್ಲಿ ಅಪ್ರತಿಮ ಶಕ್ತಿ ಕೂಡ. ಕನಕರ ಕೀರ್ತನೆಗಳ ಜೋಳಿಗೆ ಮೊಗೆಮೊಗೆದು ಕೊಂಡಷ್ಟೂ ಅಕ್ಷಯವಾಗುವಂಥದು. ಭಕ್ತಿಯ ನೆಲೆಯಲ್ಲಿ ದೃಢಗೊಳ್ಳುವ ನಂಬಿಕೆ, ಒಪ್ಪಿಸಿಕೊಳ್ಳುವಿಕೆ, ಅದರ ಮುಖಾಂತರ ಒದಗುವ ಚೈತನ್ಯ ಅನನ್ಯ. ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಂಬುದು ಅಸಾಧಾರಣ ತತ್ವ. ಎಲ್ಲರನು ಸಲಹುವನು ಎಂಬ ನಿಸ್ಸಂಶಯವೇ ಎಲ್ಲವನ್ನೂ ಕಾಯುವ ಬೆರಗನ್ನು ಕನಕರು ಕಾಣಿಸುವ ರೀತಿಯೂ ಅಷ್ಟೇ ಅಸಾಧಾರಣ. ಇದು ಸಾಧ್ಯವಾಗುವುದು ಒಪ್ಪಿಸಿಕೊಳ್ಳುವಿಕೆಯಲ್ಲಿ. ನನ್ನದೆಂಬುದಿಲ್ಲ ಎಂಬ ಭಾವದಿಂದ ಪರಿಶುದ್ಧವಾಗುವುದರಲ್ಲಿ. ತನು ನಿನ್ನದು ಜೀವನ ನಿನ್ನದು, ಅನುದಿನದಲಿ ಬಹು ಸುಖ ದುಃಖ ನಿನ್ನದಯ್ಯ ಎಂಬ ಸಮರ್ಪಣೆಯಲ್ಲಿ ಇರುವುದು ಇಹವನ್ನು ಪರದೊಡನೆಕೂಡಿಸುವ ನೋಟ. ಎಲ್ಲವನ್ನೂ ಸಮರ್ಪಿಸಿ, ನಾನು ನಿನ್ನವನೆಂಬ ಹೆಮ್ಮೆಯ ಋಣವು ಮಾತ್ರವೆ ನನ್ನದು ಎಂದು ಪರಮಾತ್ಮನೊಂದಿಗಿನ ಅಧೀನ ಭಾವವನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಜೀವಿಸುವ ಅನುಭೂತಿ ದೊಡ್ಡದು. ಕನಕರ ಕೀರ್ತನೆಗಳಲ್ಲಿ ಭಕ್ತಿಪಾರಮ್ಯವೇ ಇದೆ. ಪರಮಾತ್ಮನನ್ನುಇಹದ ಸಂಬಂಧಗಳಿಗೆ ಅನ್ವಯಿಸಿ ಅವನೊಡನೆ ಸಂಭಾಷಿಸುವ ದಾಸಪರಂಪರೆಯ ಬಗೆ ಕನಕರಲ್ಲೂ ಕಾಣುತ್ತದೆ. ಅದರಂತೆ ಭಗವಂತ ನಮ್ಮ ಒಡನಾಡಿಯೂ ಹೌದು, ಒಡೆಯನೂ ಹೌದು. ಅವನು ಸಾಧಾರಣನೂ ಹೌದು, ಮಹಾಮಹಿಮನೂ ಹೌದು. ನಮ್ಮ ಹೃದಯದೊಳಗೇ ಅವನನ್ನು ಕಂಡು ಪರಿಭಾವಿಸುವ ಬಗೆ – ಬಾ ರಂಗ ಎನ್ನ ಮನಕೆ ಎಂಬಲ್ಲಿ ಇದ್ದರೆ, ಎಲ್ಲಿ ನೋಡಿದರಲ್ಲಿ ರಾಮ ಎಂಬುದು ಒಳಗಣ್ಣಿನ ಅನುಭೂತಿ. ಆ ಮೂಲಕ, ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು ಎಂಬ ಕೃತಾರ್ಥತೆ. ಕನಕದಾಸರ ಕೀರ್ತನೆ ಎಷ್ಟು ಆಧ್ಯಾತ್ಮಿಕವೊ ಅಷ್ಟೇ ಕಾವ್ಯಾತ್ಮಕವಾಗಿಯೂ ಇರಬಲ್ಲುದು ಎಂಬುದಕ್ಕೆ ಒಂದು ಉದಾಹರಣೆ ಅವರ ಈ ಕೀರ್ತನೆ:

**ನೀ ಮಾಯೆಯೊಳಗೊ, ನಿನ್ನೊಳು ಮಾಯೆಯೊ**
**ನೀ ದೇಹದೊಳಗೊ, ನಿನ್ನೊಳು ದೇಹವೊ**
**ಬಯಲು ಆಲಯದೊಳಗೊ, ಆಲಯವು ಬಯಲೊಳಗೊ**
**ಬಯಲು ಆಲಯವೆರಡು ನಯನದೊಳಗೊ**
**ನಯನ ಬುದ್ಧಿಯೊಳಗೊ, ಬುದ್ಧಿ ನಯನದೊಳಗೊ**
**ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ**
**ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ**
**ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ**
**ಜಿಹ್ವೆ ಮನಸಿನೊಳಗೊ, ಮನಸು ಜಿಹ್ವೆಯೊಳಗೊ**
**ಜಿಹ್ವೆ ಮನಸುಗಳೆರಡು ನಿನ್ನೊಳಗೊ ಹರಿಯೆ**
**ಕುಸುಮದೊಳು ಗಂಧವೊ, ಗಂಧದೊಳು ಕುಸುಮವೊ**
**ಕುಸುಮ ಗಂಧಗಳೆರಡು ಘ್ರಾಣದೊಳಗೊ**
**ಅಸಮಭವಕಾಗಿನೆಲೆಯಾದಿ ಕೇಶವರಾಯ**
**ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೊ**

ಇದು ಅದೆಷ್ಟು ಸಂಕೀರ್ಣವಾಗಿದೆಯೆಂದರೆ, ಬದುಕಿನ ಎಲ್ಲ ಸೂಕ್ಷ್ಮಗಳನ್ನು ಬಿಡಿಸಿ ಬಿಡಿಸಿ ಇಡುವ ಪ್ರಬುದ್ಧ ಗಮನಿಸುವಿಕೆ ಇಲ್ಲಿ ಕಾಣಿಸುತ್ತದೆ. ಕುಲಕುಲವೆಂದು ಹೊಡೆದಾಡದಿರಿ ನಿಮ್ಮಕುಲದ ನೆಲೆಯನೇನಾದರು ಬಲ್ಲಿರಾ, ಬಲ್ಲಿರಾ ಎಂಬುದು ಕನಕರ ಇನ್ನೊಂದು ಪ್ರಸಿದ್ಧ ಕೀರ್ತನೆ. ಕುಲದ ನೆಲೆಯನರಿಯದ ಮೂಢತನವೇ ಅನಿಷ್ಟವೆಲ್ಲದರ ಮೂಲವೆಂಬುದನ್ನು ಅವರು ಪ್ರತಿಪಾದಿಸುತ್ತಾರೆ. ಕೆಸರೊಳು ತಾವರೆ ಪುಟ್ಟಲು ಅದ ತಂದು ಬಿಸಜನಾಭನಿಗರ್ಪಿಸಲಿಲ್ಲವೇ ? ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣಲಿಲ್ಲವೇ ಎಂದು ಪ್ರಶ್ನಿಸುತ್ತ, ಎಲ್ಲದಕ್ಕೂ ನೆಲೆಯಾಗಿರುವ ಭಗವಂತನನ್ನು ಅರಿಯುವ ಬಗೆಯನ್ನು ಮನಗಾಣಿಸುತ್ತಾರೆ. ಕನಕದಾಸರು ಕನ್ನಡದ ಪ್ರಮುಖ ಸಂತ ಕವಿ. ಬದುಕಿನಲ್ಲಿ ಅನುಭವಿಸಿದ ತಲ್ಲಣಗಳು ಮತ್ತು ಇಕ್ಕಟ್ಟುಗಳು ಅವರ ಕೃತಿಗಳಲ್ಲಿ ಹಲವು ಬಗೆಗಳಲ್ಲಿ ಮೂಡಿಬಂದಿವೆ. ಅವರ ರಚನೆಗಳು ಕೀರ್ತನೆಗಳೂ ಹೌದು, ಕಾವ್ಯವೈ ಹೌದು. ಕನಕದಾಸರ ಕೀರ್ತನೆಗಳು ಭಾವಪೂರ್ಣ. ಈ ಕೀರ್ತನೆಗಳ ಮೂಲಕ ಭಗವಂತನಲ್ಲಿ ಭಕ್ತಿಯನ್ನು ಸಾರುವುದರ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಕೆಲವು ಅಸಾಂಪ್ರದಾಯಿಕ ಆಚರಣೆಗಳನ್ನು ಒರೆಗಲ್ಲಿಗೆ ಹಚ್ಚಿ ಪ್ರಶ್ನಿಸಿದ್ದಾರೆ. ಸ್ವಸ್ಥಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರಿಗೂ ಮಾನಸಿಕ ನೆಮ್ಮದಿಯ ಅವಶ್ಯಕತೆಇದೆ. ಅದು ಭಗವದ್ಭಕ್ತಿಯಿಂದ ಲಭಿಸುವುದು. ನಾಸ್ತಿಕತೆಯು ಮನುಷ್ಯನಲ್ಲಿ ತಲ್ಲಣವನ್ನು, ನಿರಾಸೆಯನ್ನು, ಭ್ರಮೆಯನ್ನು, ಹತಾಶೆಯನ್ನು ಉಂಟು ಮಾಡುತ್ತದೆ. ಢಾಂಬಿಕ ಭಕ್ತಿಯನ್ನು ಅವರು ಎಂದೂ ಒಪ್ಪಿದವರಲ್ಲ. ಜಪವ ಮಾಡಿದರೇನು ತಪವಮಾಡಿದರೇನು, ವಿಪರೀತ ಕಪಟಗುಣ ಕಲುಷವಿದ್ದವರು ಎಂದು ತಕರಾರೆತ್ತಿದವರು ಅವರು. ಸಮಾಜದ ಒಳಿತಿಗೆ ಧರ್ಮಾಚರಣೆಯ ಅಗತ್ಯವನ್ನು ಒತ್ತಿಹೇಳಿದವರು ಕನಕರು. ಸಮಾಜದಲ್ಲಿ ಸತ್ಯ, ಧರ್ಮಗಳು ಮಾಯವಾಗುತ್ತಿರುವುದನ್ನು ನೋಡಿ ಮರುಗಿದವರು:

**ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು**
**ನಿರ್ಮಲವಿಲ್ಲದ ಮನಸು ಅದುಕಜ್ಜಿ ತಿನಿಸು**
**ಸತ್ಯಧರ್ಮಗಳೆಲ್ಲ ಎತ್ತ ಪೋದವೊಕಾಣೆ**
**ಉತ್ತಮರಜೀವನಕೆದಾರಿಯಿಲ್ಲ**
**ನಿತ್ಯದಲಿ ಕಳವು ವ್ಯಭಿಚಾರವುಳ್ಳವರೆಲ್ಲ**
**ಅರ್ಥಸಂಪದರಾಗಿ ಅನುಭವಿಸುತಿಹರು**

– ಎಂದು ಕಟುವಾಗಿಯೇ ಹೇಳಿದ್ದಾರೆ.

ಮೋಸದ ಜೀವನವನ್ನು, ಅನ್ಯಾಯದ ಜೀವನವನ್ನು ಕೂಡ ಕನಕದಾಸರು ವಿಡಂಬಿಸಿದರು.

**ಮೋಸದಿ ಜೀವರ ಘಾಸಿ ಮಾಡಿದ ಪಾಪ**
**ಕಾಶಿಗೆ ಹೋದರೆ ಹೋದೀತೆ**
**ಶ್ರೀಶನ ಭಕುತರ ದೂಷಿಸಿದಾ ಫಲ**
**ಕಾಸು ಕೊಟ್ಟರೆ ಬಿಟ್ಟೀತೇ**
**ಭಾಷೆಯಕೊಟ್ಟು ನಿರಾಶೆಯಮಾಡಿದ ಫಲ**
**ಕ್ಲೇಶಗೊಳಿಸದೆ ಬಿಟ್ಟೀತೆ**
**ಭೂಸುರಸ್ವವ ಹ್ರಾಸ ಮಾಡಿದ ಫಲ**
**ಏಸೇಸು ಜನುಮಕು ಬಿಟ್ಟೀತೆ**
**ನ್ಯಾಯವ ಬಿಟ್ಟನ್ಯಾಯವ ಪೇಳಲು**
**ನಾಯಿಗೆ ನರಕವುತಪ್ಪೀತೆ**

– ಎಂದು ಅತ್ಯಂತ ಸತ್ಯವನ್ನು ಕಾಣಿಸಿದವರು ಕನಕರು. ಆ ಕಾಲದ ಸಾಹಿತ್ಯ ಸಂದರ್ಭದಲ್ಲಿ ಕನಕದಾಸರಿಗೆ ವಿಶಿಷ್ಟವಾದ ಹಿನ್ನೆಲೆಯಿತ್ತು. ಊರು ಕಾಗಿನೆಲೆಯಲ್ಲಿ ಇಂದಿಗೂ ಇರುವ ಆದಿಕೇಶವನ ಗುಡಿಯ ದೇವತೆಯಾದ ಕೇಶವನು ಅವರ ಆರಾಧ್ಯ ದೈವ. ಹಾಗಾಗಿಯೇ ಅವರ ಕೀರ್ತನೆಗಳ ಅಂಕಿತವಾದ 'ಕಾಗಿನೆಲೆಯಾದಿ ಕೇಶವರಾಯ'. ಅವರು ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಮಾಡಿದ ನಿರಂತರವಾದ ತಿರುಗಾಟಗಳು ಮತ್ತು ಮತಾಂಧರಾದ ಧಾರ್ಮಿಕ ಮುಖಂಡರೊಂದಿಗಿನ ಅವರ ಮುಖಾಮುಖಿಗಳು ಅವರ ಬದುಕಿನ ಮಹತ್ವದ ಸಂದರ್ಭಗಳಾಗಿವೆ. ಕನಕದಾಸರಿಗೆ ಹಿರಿಯರೂ ಸಮಕಾಲೀನರೂ ಆದ ವ್ಯಾಸರಾಯರು, ಪುರಂದರದಾಸರು ಮುಂತಾದವರು ಕನಕರ ಭಕ್ತಿ ಮತ್ತು ಪ್ರತಿಭೆಗಳನ್ನು ಮೆಚ್ಚಿಕೊಂಡಾಡಿದ್ದಾರೆ. ಅವರ ಕೀರ್ತನೆಗಳು ಅಂತರಂಗದ ಭಾವನೆಗಳಿಗೆ ಕಟ್ಟುಪಾಡಿಲ್ಲದೆ ನುಡಿಗೊಡುವಂಥವು. ಕನಕರ 'ರಾಮಧಾನ್ಯಚರಿತ್ರೆ' ಇಡೀಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅನನ್ಯವಾದ ಕಾವ್ಯ. ವರ್ಣವ್ಯವಸ್ಥೆಯ ಪರಿಣಾಮವಾದ ದಾರುಣಯಾತನೆಯನ್ನು ಸಾಂಕೇತಿಕವಾಗಿ ಮತ್ತು ಅನುಪಮವಾದ ಕಲ್ಪನಾಶಕ್ತಿಯ ಬಲದಿಂದ ಕಟ್ಟಿಕೊಡುವುದು ಈ ಕಾವ್ಯದ ಹೆಗ್ಗಳಿಕೆ. ಕನಕರ ಅಭಿವ್ಯಕ್ತಿಯ ಮೂಲ ಸೆಲೆಯೇ ಬದುಕಿನ ಆಳದಲ್ಲಿರುವ ನಿಲುವಿನಲ್ಲಿ ಭಕ್ತಿಯ ಆರ್ದ್ರತೆಯಲ್ಲಿ ಅಧ್ಯಾತ್ಮವನ್ನು ಕಾಣುವ ಹಂಬಲ. ಅದು ಅವರ ಕೀರ್ತನೆಗಳಲ್ಲಿ ಉದ್ದಕ್ಕೂ ಕಾಣಿಸುತ್ತದೆ.

ಕನಕದಾಸರ ಕಾವ್ಯವಸ್ತು, ಭಾಷಾಭಿವ್ಯಕ್ತಿ ಶಿಷ್ಟ ಮಟ್ಟದ್ದಾಗಿದ್ದರೂ ಅವರ ತುಡಿತವೆಲ್ಲವೂ ಮೇಲ್ವರ್ಗದ ನಂಬಿಕೆಗಳನ್ನೇ ಎತ್ತಿ ಹಿಡಿಯುವಂತಹದ್ದೇನೂ ಆಗಿರಲಿಲ್ಲ. ಅವರ ಖಂಡ ಕಾವ್ಯವಾದ 'ರಾಮಧಾನ್ಯಚರಿತೆ'ಯು ಧ್ವನಿಸುವ ರಾಗಿಯಗರಿಮೆ, ಭತ್ತದ ಕಿರಿಮೆಯ ಪ್ರತಿಪಾದನೆಯು ತಿಮ್ಮಪ್ಪನಾಯಕ (ಕನಕದಾಸರು) ಅಂದು ಎದುರಿಸಿದ್ದ ಸಾಮಾಜಿಕ ವಿಷಮತೆಯನ್ನು ದಾಖಲಿಸುವಂತಿದೆ. ಸ್ವಯಂ ಪ್ರತಿಭೆ ಮತ್ತು ಬುದ್ಧಿಪೂರ್ವಕ ಪರಿಶ್ರಮದಿಂದ ತಿಮ್ಮಪ್ಪನಾಯಕನಿಗೆ ಶಿಷ್ಟ ಸಂಪ್ರದಾಯಕ್ಕೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪರಿವರ್ತಿತನಾಗುವುದು ಸಾಧ್ಯವಾದರೂ ಸಮಾಜದ ರೂಢಿಗತ ವ್ಯವಸ್ಥೆಯ ಅಡ್ಡಿ-ಆತಂಕಗಳಿಂದಾಗಿ ಆತ ಕೆಲವು ಕಷ್ಟಗಳನ್ನೂ ಎದುರಿಸಬೇಕಾಗುತ್ತದೆ. ಆತನು ಅನುಭವಿಸಿದ ಮಾನಸಿಕ ನೋವು 'ಕನಕದಾಸರ' ಕೀರ್ತನೆಗಳಲ್ಲಿ ಪ್ರತಿಮಿತವಾಗಿವೆ. ಕನಕದಾಸರ ಕೀರ್ತನೆಗಳಲ್ಲಿ ಉಳಿದ ದಾಸರ ಸಾಹಿತ್ಯದಲ್ಲಿ ಕಾಣದಂತಹ ವಿಚಾರ ಸೊಬಗು, ಪ್ರಖರವಾದ ಅನುಭವ ನಿವೇದನೆ, ವಿಶಿಷ್ಟ ಭಾಷಾಶೈಲಿ ಕಾಣಸಿಗುತ್ತವೆ. ಅವರ ಕೀರ್ತನೆಗಳ ಸಾಹಿತ್ಯ ಮೌಲ್ಯಕೂಡ ಈ ಕಾರಣದಿಂದಾಗಿಯೇ ಅನನ್ಯವಾಗಿ ಗೋಚರಿಸುತ್ತದೆ.

ಕನಕದಾಸರು ರಚಿಸಿದ ಕೀರ್ತನೆಗಳ ನಿರೂಪಣಾಧಾಟಿಯನ್ನು ಗಮನಿಸಿದಾಗ, ಅವು ನಾಲ್ಕು ಬಗೆಯ ಭಾವಾರ್ಥದ ವಿಧಾನವನ್ನು ಅನುಸರಿಸಿರುವುದು ಕಂಡು ಬರುತ್ತದೆ.

1. ಸ್ವಗತದ ಧಾಟಿಯಲ್ಲಿ, ತನ್ನ ಮನಸ್ಸು-ಅಂತರಾತ್ಮವನ್ನು ಕುರಿತು ಹೇಳಿಕೊಂಡಿರುವ ಕೀರ್ತನೆಗಳು
2. ಆರಾಧ್ಯದೈವವಾದ 'ಕಾಗಿನೆಲೆಯಾದಿಕೇಶವ'ನನ್ನು ಉದ್ದೇಶಿಸಿ ಹೇಳಿರುವ ಮಾತುಗಳು
3. ತನ್ನ ಸುತ್ತಲಿನ ದಾಸರು, ಭಕ್ತರು, ಸಾಧಕರುಗಳನ್ನು ಸಂಬೋಧಿಸಿ ಹೇಳಿದ ಸಾಂದರ್ಭಿಕ ಹೇಳಿಕೆಗಳು
4. ಘೋಷಣಾ ರೂಪದಲ್ಲಿ ಯಾರಿಗೋ-ಎಲ್ಲರಿಗೂ ಕೇಳುವಂತೆ ಹೇಳಿದ ಮಾತುಗಳು.

ಅಂತರಂಗ-ಬಹಿರಂಗಗಳೆರಡರಲ್ಲೂ ಹರಿಭಕ್ತನಾಗಿ ವ್ಯಕ್ತಿತ್ವ ರೂಪಿಸಿಕೊಂಡಿದ್ದ ಕನಕದಾಸರು ಬೇರೆಬೇರೆ ಸಂದರ್ಭಗಳಲ್ಲಿ ಅಂದು ರಚಿಸಿದ ಕೀರ್ತನೆಗಳಲ್ಲಿ ಈ ವೈವಿಧ್ಯವಿರುವುದರಿಂದ ಅವುಗಳಲ್ಲಿ ಸಾಹಿತ್ಯದ ಉತ್ತಮ ಲಕ್ಷಣಗಳು, ಶೈಲಿಯ ವಿಶಿಷ್ಟತೆಗಳು ಮೈದುಂಬಿವೆ. ಈ ದೃಷ್ಟಿಯಲ್ಲಿ ಕನಕದಾಸರ ಕೀರ್ತನೆಗಳನ್ನು ವಿಶ್ಲೇಷಿಸಿದಾಗ ಸಾಹಿತ್ಯದ ಸೊಬಗು-ಸೊಗಡು ನಮಗೆ ಇನ್ನಷ್ಟು ಸ್ಫುಟವಾಗಲು ಸಾಧ್ಯ. "ನಾನಾ ಜನ್ಮದಿ ಬಂದ ನಾಟಕದ ಬೊಂಬೆಯಿದು" ಎಂಬ ದೇಹದ ಪ್ರವೃತ್ತಿಜನ್ಯ ಸ್ವಭಾವಕ್ಕೆ ಕನಕದಾಸರು ನೀಡುವ ರೂಪಕ, ಅವರ ಮನೋಧರ್ಮ ವೈರಾಗ್ಯಕ್ಕೆ ಪರಿವರ್ತಿತವಾದುದರ ದ್ಯೋತಕವೇ ಆಗಿದೆ.

ಭಾವಗೀತೆಯ ಸಾವಯವ ರಚನಾ ಗುಣವನ್ನು ಕನಕದಾಸರ ಕೀರ್ತನೆಗಳಲ್ಲಿ ಗಮನಿಸಬಹುದಾಗಿದೆ. ಒಂದು ಮೂಲಭಾವವು ಆರಂಭದಿಂದ ಅಂತ್ಯದವರೆಗೆ ಕೀರ್ತನೆಯ ಶಿಲ್ಪದಲ್ಲಿ ತರ್ಕಬದ್ಧವಾಗಿ ಸುಸಂಬದ್ಧವಾಗಿ ಬೆಳೆದು ಬರುವ ಬಗೆಯನ್ನು ಓದಿ ಅನುಭವಿಸಲು ಸಾಧ್ಯ. 'ಎಳ್ಳು ಕಾಳಿನಷ್ಟು ಭಕುತಿ ಎನ್ನೊಳಗಿಲ್ಲ' ಎಂಬ ಆತ್ಮ ಪರಿಶೀಲನೆಯ ಕೀರ್ತನೆಯಲ್ಲಿ ಕನಕದಾಸರು ಬಳಸಿರು ಆರು ಬಗೆಯ ದೃಷ್ಟಾಂತಗಳು ಕ್ರಮಬದ್ಧವಾಗಿ ಬೆಳೆದು ಬರುತ್ತವೆ; ಭಕ್ತಿ ಪ್ರಕ್ರಿಯೆಯು ಅಂತರಂಗದಲ್ಲಿ ಪ್ರಾಮಾಣಿಕವಾಗಿ ನೆಲೆಗೊಂಡಿರದೆ, ಕೇವಲ ಅನುಕರಣೆಯ ಮಟ್ಟದಲ್ಲಿ, ಅದೂತೋರಿಕೆ (ಡಾಂಭಿಕ) ರೀತಿಯಲ್ಲಿ ಮಾತ್ರ ಇರುವುದನ್ನು ಕನಕದಾಸರು ಟೀಕಿಸಿಕೊಂಡಿರುವುದನ್ನು ನಾವು ನೋಡಬಹುದು. ವಿಶಿಷ್ಟ ಬಗೆಯಲ್ಲಿ ಅರ್ಥ ಧ್ವನಿಯನ್ನು ಹೊಮ್ಮಿಸುವಂತಹ ಕೀರ್ತನೆಗಳನ್ನು ರಚಿಸುವ ಕನಕದಾಸರು ಸಾಹಿತ್ಯದ ನಾಡಿಮಿಡಿತವನ್ನು ಹಾಡಿನಲ್ಲಿ ಅನುಸರಿಸಿರುವುದು ನಮ್ಮ ಗಮನ ಸೆಳೆಯುತ್ತದೆ. ಅವರ 'ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ" ಎಂಬ ಕೀರ್ತನೆ ಧ್ವನಿಸುವ ಅರ್ಥ ವಾಚ್ಯಕ್ಕಿಂತಲೂ ಸೂಚ್ಯವಾಗಿ ಹೆಚ್ಚು ಪರಿಣಾಮಕಾರಿಯಾಗಿದೆ.

ಕನಕದಾಸರು ತಮ್ಮ ಕೃತಿಗಳ ಮೂಲಕ ಒಟ್ಟು ಸಮಾಜದ ನಂಬಿಕೆಯನ್ನು ಪ್ರತಿಪಾದಿಸುವಂತಹ ನೆಲೆಯೊಂದನ್ನು ಸೂಚಿಸುತ್ತಾರೆ. ಅಂದ ಮಾತ್ರಕ್ಕೆ, ಅವು ತತ್ಕಾಲೀನ ಸಮಾಜವನ್ನು ತೀರಾ ಸರಳವಾಗಿ ಸ್ವೀಕರಿಸಿದ್ದಾರೆಂದು ತಿಳಿಯಬೇಕಿಲ್ಲ; ಅದರಲ್ಲಿ ಅಲೌಕಿಕದ ಶಾಬ್ದಿಕ ಬೆಳಕು ಹೊಮ್ಮುವುದನ್ನು ನೋಡುವ ದೃಷ್ಟಿ ನಮ್ಮದಾಗಬೇಕು ಅಷ್ಟೇ. 'ದೀನ ನಾನು ಸಮಸ್ತ ಲೋಕಕೆ ದಾನಿ ನೀನು, ವಿಚಾರಿಸಲು ಮತಿಹೀನ ನಾನು, ನೆರೆ ಸುಜ್ಞಾನ ಮೂರುತಿ ನೀನು, ನಿನ್ನ ಸಮಾನರುಂಟೇದೇವ, ರಕ್ಷಿಸು ನಮ್ಮನನವರತ" ಎಂಬ ಪದ್ಯದ ಸಾಲುಗಳಲ್ಲಿ ಕನಕದಾಸರ ಕವಿ ಪ್ರತಿಭೆಯನ್ನು ಗುರುತಿಸಬಹುದು. ಭಕ್ತ ಮತ್ತು ಭಗವಂತನ ನಡುವಣ ಮಧುರ ಬಾಂಧವ್ಯವನ್ನು ಮನಕರಗುವಂತೆ ಕರುಣಾಪೂರ್ಣವಾಗಿ ಶ್ರೋತೃಗಳ ಮನ ಮುಟ್ಟುವಂತೆ ನುಡಿರೂಪದಲ್ಲಿ ಹಿಡಿದಿಡುವ ಅವರ ಕಾವ್ಯ ಶಕ್ತಿಯೂ ಇಲ್ಲಿ ದೃಗ್ಗೋಚರ.

ಕನಕದಾಸರ ವ್ಯಕ್ತಿತ್ವ ಮತ್ತು ಪ್ರತಿಭೆ ವಿಶಿಷ್ಟ ಬಗೆಯದಾಗಿದೆ. ಅವರು ನಡೆದು ಬಂದಿರುವ ಹಾದಿಯ ಹಿನ್ನೆಲೆಯಲ್ಲಿ ಅದಕ್ಕೊಂದು ವಿಶಿಷ್ಟ ಸ್ಥಾನವಿದೆ. ಅವರ ರಚನೆಗಳಲ್ಲಿ ಸತ್ಯವಿದೆ, ಸತ್ತ್ವವಿದೆ, ಅರ್ಥವಿದೆ; ಪರಮಾರ್ಥವಿದೆ, ಲೌಕಿಕ-ಪಾರಲೌಕಿಕ ಚಿಂತನೆಯಿದೆ ಎಂಬುದು ನಮ್ಮ ವಿಚಾರದ ಹೊಳಹಿಗೆ ಬರುವ ಸಂಗತಿಯಾಗಿದೆ.

ಕನಕದಾಸರ ಸಮಗ್ರ ಸಾಹಿತ್ಯವನ್ನು ಅವಲೋಕಿಸಿದರೆ ನಮಗೆ ವಿಶೇಷ ಅರ್ಥ-ಪರಮಾರ್ಥಗಳು ಗೋಚರಿಸುತ್ತವೆ. ಅವರ ಬರಿಯ ಕೀರ್ತನೆಗಳನ್ನು ಗಮನಿಸಿದರೂ, ಅವುಗಳಲ್ಲಿ ಭಕ್ತಿ ಮಾತ್ರವಲ್ಲದೆ, ಸಾಮಾಜಿಕ ಲೋಪಗಳನ್ನು ತಿದ್ದುವಲ್ಲಿ ಸಹಾಯಕವಾಗುವ ವ್ಯಂಗ್ಯ ವಿಡಂಬನೆಯ ಉಕ್ತಿಗಳು, ಸತ್ಪಥ ದರ್ಶನದ ಸಾಹಿತ್ಯ, ಆತ್ಮ-ಪರಮಾತ್ಮ ನಡುವಿನ ಬಾಂಧವ್ಯದ ಬೆಸುಗೆ ಹೀಗೆ ಹಲವು ಅಂಶಗಳನ್ನು ಗಮನಿಸಬಹುದು. ನನ್ನ ಈ ವಿಚಾರ ಮಂಡನೆಯಲ್ಲಿ ಮುಖ್ಯವಾಗಿ ನಾನು ಕನಕದಾಸರ ಕೀರ್ತನೆಗಳಿಗೆ ವಿಶೇಷ ಗಮನ ಹರಿಸಿರುವುದರಿಂದ ಸಹಜವಾಗಿಯೇ ಇಲ್ಲಿನ ವಿಚಾರ ಲಹರಿ ಸೀಮಿತ ವಲಯದಲ್ಲೇ ಇರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ ಎಂದುಕೊಂಡಿದ್ದೇನೆ.

ಕನಕದಾಸರ ಪ್ರಮುಖ ಕೀರ್ತನೆಗಳ ಕೆಲವು ಸಾಲುಗಳನ್ನಾದರೂ ಈ ಸಂದರ್ಭದಲ್ಲಿ ಉಲ್ಲೇಖಿಸ ಬಯಸುತ್ತೇನೆ ಮತ್ತು ಅದು ಅಗತ್ಯವೂ ಹೌದು ಎಂದೂ ಭಾವಿಸುತ್ತೇನೆ. ಆವ ಬಲವಿದ್ದೇನು ದೈವ ಬಲವಿಲ್ಲದವಗೆ, ಪುತ್ತಳಿಗೊಂಬೆಯ ಚಿತ್ರದಿ ಬರೆದರೆ, ಮುತ್ತನು ಕೊಟ್ಟರೆ ನುಡಿದೀತೆ, ನ್ಯಾಯವ ಬಿಟ್ಟನ್ಯಾಯವ ಪೇಳುವ ನಾಯಿಗೆ ನರಕವು ತಪ್ಪೀತೆ, ನೇಮವಿಲ್ಲದ ಹೋಮ ಇನ್ನೇತಕೆ, ಹಸಿದು ಬಂದವರಿಗೆ ಅಶನವೀಯಲುಬೇಕು, ಅಜ್ಞಾನಿಗಳ ಕೂಡೆಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು, ಬಿಡದೆ ಬಾಂಧವರೊಡನೆ ಬಡಿದಾಡುವುದಕಿಂತ ಅಡವಿಯೊಳಗ ಜ್ಞಾತವಾಸವೆ ಲೇಸು, ಉಂಡು ನಗದಿಹ ಮೋರೆ ಅದು ಕಹಿಯ ಸೋರೆ, ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ, ಹರಣ ಹಿಂಗದ ಮುನ್ನ ಹರಿಯ ಸೇವೆಯಮಾಡಿ ಪರಗತಿಗೆ ಸಾಧನವ ಮಾಡಿಕೊಳ್ಳೊ, ತೊರೆದುಜೀವಿಸಬಹುದೆ ಹರಿ ನಿನ್ನ ಚರಣವನು ಮುಂತಾದ ಸಾಲುಗಳುಳ್ಳ ಕನಕದಾಸರ ಕೀರ್ತನೆಗಳು ಒಂದೊಂದು ಸೊಲ್ಲಿಗೂ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆ. ವಾಚ್ಯದ ಧ್ವನಿಯ ಜೊತೆ ಇನ್ನಷ್ಟು ಧ್ವನಿ ಪ್ರತಿಮೆಗಳನ್ನು ನಮ್ಮ ಕಣ್ಣ ಮುಂದೆ ತೆರೆದಿಡುತ್ತದೆ. 'ನಾನು ಹೋದರೆ ಹೋದೇನು" ಎಂಬ ಕನಕದಾಸರ ಮಾತು ಅವರ ವಿಶಾಲ ದೃಷ್ಟಿಕೋನಕ್ಕೊಂದು ಕನ್ನಡಿಯೇ ಹೌದು. ಮೋಕ್ಷಕ್ಕೆ ಹೋಗುವ ಅರ್ಹತೆ ಉಳ್ಳವರು ಯಾರು ಎಂದು ವ್ಯಾಸರಾಯರು ಕನಕದಾಸರ ಈ 'ನಾನು ಹೋದರೆ ಹೋದೇನು" ಎಂಬ ಪ್ರತಿಕ್ರಿಯೆ ತಾತ್ವಿಕ ಅರ್ಥಬಾಹುಳ್ಯದಿಂದ ಶೋಭಿಸುತ್ತದೆ. ಕನಕದಾಸರ ಪ್ರತಿಭಾವಿಲಾಸ, ಅನುಭವ-ಅನುಭಾವ ಸಂಪತ್ತು, ನುಡಿಗಟ್ಟುಗಳ ತಾತ್ಪರ್ಯ ಹಾಗೂ ಅವರ ನುಡಿಶಿಲ್ಪ ಸರ್ವಕಾಲಕ್ಕೂ ಗಮನೀಯವೇ ಆಗಿರುವುದರಲ್ಲಿ ಸಂಶಯವಿಲ್ಲ ಎನ್ನಬಹುದು. ಕನಕದಾಸರ ಕೀರ್ತನೆಗಳು ಕರ್ನಾಟಕ

*- 101ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಸಂಚಲನದಲ್ಲಿ ರಾಜಕೀಯ ನಾಯಕತ್ವದ ಪಾತ್ರ

✍ **ಪ್ರಸ್ತುತ ವೈ.ಎನ್.,** ಸಂಶೋಧನ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

✍ **ಪ್ರೊ. ಎಂ. ಹೆಚ್. ಪ್ರಹ್ಲಾದಪ್ಪ,** ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಸಹ್ಯಾದ್ರಿ ಕಲಾ ಕಾಲೇಜು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

## ಪೀಠಿಕೆ

ಸಾಮಾಜಿಕ ಮತ್ತು ಆರ್ಥಿಕ ಸೌಲಭ್ಯಗಳಿಂದ ವಂಚಿತರಾದ ಸಮುದಾಯಗಳನ್ನು ಹಿಂದುಳಿದ ವರ್ಗಗಳೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಹಿಂದುಳಿದ ವರ್ಗಗಳ ಕುರಿತಂತೆ ಮಾಡುವ ವ್ಯಾಖ್ಯಾನ ಗೊಂದಲ ಮಾಯವಾಗಿದೆ. ಹಿಂದುಳಿದ ವರ್ಗ ಎಂದರೆ ಯಾವುವು ಇದರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಲಕ್ಷಣಗಳಾವುವು ? ಎಂಬ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಇದುವರೆಗೆ ದೊರೆತಿಲ್ಲ. ಇದಕ್ಕೆ ಕಾರಣ ಎಂದರೆ ವರ್ಗಗಳನ್ನು ಗುರುತಿಸುವ ಹಾಗೂ ವ್ಯಾಖ್ಯಾನಿಸುವ ಅಗತ್ಯ ತುರ್ತು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವುದು. ಹಿಂದುಳಿದ ವರ್ಗ ಒಂದು ಸಾಪೇಕ್ಷವಾದ ಪರಿಕಲ್ಪನೆ ಹಿಂದುಳಿದ ವರ್ಗ ಗುರುತಿಸುವ ಸಮಸ್ಯೆ ಭಾರತದ ಜಾತಿ ಆಧಾರಿತ ಸಮಾಜಕ್ಕೆ ವಿಶಿಷ್ಟವಾದುದಾಗಿದೆ. ಸಮಾಜದಲ್ಲಿ ಪ್ರತಿಯೊಂದು ಜಾತಿಯನ್ನು ಇನ್ನೊಂದಕ್ಕೆ ಹೋಲಿಸಿದ್ದಾರೆ ಮುಂದುವರೆದ ಅಥವಾ ಹಿಂದುಳಿದ ಜಾತಿಯಾಗಿರುತ್ತದೆ. ಐತಿಹಾಸಿಕ ಕಾರಣಗಳಿಂದ ಕೆಲವು ವಿಶೇಷ ಸವಲತ್ತುಗಳನ್ನು ಹೊಂದಿರುವ ಕಾರಣದಿಂದ ಕೆಲವು ಜಾತಿಗಳು ಸಾಂಸ್ಕೃತಿಕವಾಗಿ ಉಳಿದ ಜಾತಿಗಳಿಗಿಂತ ಮುಂದುವರೆದ ಜಾತಿಗಳು ಎನಿಸಿಕೊಂಡಿದೆ.

20ನೇ ಶತಮಾನದಲ್ಲಿ ಎರಡನೇ ದಶಕದಲ್ಲಿ ಮೈಸೂರು ಸಂಸ್ಥಾನದಲ್ಲಿ ಉಂಟಾದ ಜನ ಜಾಗೃತಿ ಪರಿಣಾಮವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಮುಂದುವರೆದಿದ್ದ ಬ್ರಾಹ್ಮಣ ಸಮುದಾಯದ ವಿರುದ್ಧ ಸಂಘಟನೆಗಳು ಕ್ರಿಯಾಶೀಲಗೊಂಡವು. ಈ ಕ್ರಿಯಾಶೀಲತೆಗೆ ಪ್ರಮುಖ ಕಾರಣ ಲಿಂಗಾಯಿತ ಮತ್ತು ಒಕ್ಕಲಿಗ ಸಮುದಾಯದಂತಹ ಪ್ರಮುಖ ಜಾತಿಗಳು ಬ್ರಾಹ್ಮಣರ ವಿರುದ್ಧ ಇತರೆ ಚಿಕ್ಕ ಪುಟ್ಟ ಜಾತಿಗಳನ್ನು ಒಂದೆಡೆ ತರುವ ಪ್ರಯತ್ನ ನಡೆಸಿದವು. ಈ ಪ್ರಯತ್ನ ರಾಜಕೀಯ ನೆಲೆಯಲ್ಲಿ ಚಳುವಳಿಯಾಗಿ ಮಾರ್ಪಟ್ಟು ವ್ಯವಸ್ಥಿತ ರೀತಿಯಲ್ಲಿ ಬೆಳವಣಿಗೆ ಕಂಡಿತು. ಇಂತಹ ಸಂಘಟಿತ ಹೋರಾಟವನ್ನು "ಬ್ರಾಹ್ಮಣೇತರ ಹಿಂದುಳಿದ ವರ್ಗಗಳ ಚಳುವಳಿ" ಎಂದು ಕರೆಯಲಾಯಿತು.

ಕರ್ನಾಟಕ ಏಕೀಕರಣ ನಂತರ ಈ ಚಳವಳಿ ಇನ್ನೊಂದು ಮಜಲಿನಲ್ಲಿ ರೂಪುಗೊಂಡಿತು. ಬ್ರಾಹ್ಮಣೇತರ ಚಳವಳಿಯ ಲಾಭ ಹೆಚ್ಚಾಗಿ ಒಕ್ಕಲಿಗರು ಮತ್ತು ಲಿಂಗಾಯಿತರು ಪಡೆದುಕೊಂಡು ಪ್ರಬಲವಾಗುವುದರ ಮೂಲಕ ರಾಜಕೀಯ ಅಧಿಕಾರ ಪಡೆಯಲು ಯಶಸ್ವಿಯಾದರು. ಇದರ ವಿರುದ್ಧ ಇತರೆ ಹಿಂದುಳಿದ ವರ್ಗ ಸಾಕಷ್ಟು ಸಂಘಟಿತಗೊಂಡಿರಲಿಲ್ಲ. ಇಂತಹ ಜಾತಿಯನ್ನು ಸಂಘಟಿಸುವ ಮೂಲಕ ಡಿ. ದೇವರಾಜ ಅರಸ್ ಅವರ ಪಾತ್ರ ಪ್ರಮುಖವಾದುದು ಇವರನ್ನು ಸಂಘಟಿಸುವ ಮೂಲಕ ರಾಜಕೀಯ ಅಧಿಕಾರವನ್ನು ಪಡೆಯಲು ಯಶಸ್ವಿಯಾದರು. ಹಿಂದುಳಿದ ವರ್ಗಗಳ ನಾಯಕನಾಗಿ ಹೊರಹೊಮ್ಮಿದರು. ಹಿಂದುಳಿದ ವರ್ಗಗಳ ಪರವಾಗಿ ಅನೇಕ ಯೋಜನೆಯನ್ನು ಹಾಕಿಕೊಳ್ಳುವ ಮೂಲಕ ಇವರನ್ನು ರಾಜಕೀಯವಾಗಿ ಸಂಘಟಿಸುವ ಕೆಲಸ ಮಾಡಿದರು.

## ದೇವರಾಜ್ ಅರಸು ನಾಯಕತ್ವದಲ್ಲಿ

ದೇವರಾಜ್ ಅರಸು ಅವರು ಹಿಂದುಳಿದ ಜಾತಿಗಳ ರಾಜಕೀಯ ಸಂಚಲನದ ಕೇಂದ್ರವಾಗಿದ್ದರು. ಹಿಂದುಳಿದ ವರ್ಗಗಳ ಹೋರಾಟಕ್ಕೆ ಹೊಸ ರೂಪುರೇಷೆಗಳನ್ನು ನೀಡಿದರು. ಅರಸು ಅಧಿಕಾರಕ್ಕೆ ಬಂದ ನಂತರ ಹಿಂದುಳಿದ ವರ್ಗಗಳ ಹೊಸ ಯುಗವೊಂದು ಪ್ರಾರಂಭವಾಯಿತು. ಹಿಂದುಳಿದ ವರ್ಗಗಳನ್ನು ಗುರುತಿಸಲು 1972 ಆಗಸ್ಟ್ 8ರಂದು ಎಲ್.ಜಿ. ಹಾವನೂರು ಅವರ ಅಧ್ಯಕ್ಷತೆಯಲ್ಲಿ ಮೊದಲ ಬಾರಿಗೆ ಹಿಂದುಳಿದ ವರ್ಗಗಳ ಆಯೋಗ ರಚಿಸಲಾಯಿತು. ಈ ಆಯೋಗವು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗುರುತಿಸಲು ಜಾತಿಯು ಒಂದು ಮಾನದಂಡ ವಾಗಿರಬೇಕು. ಜಾತಿಯನ್ನು ಹೊರತುಪಡಿಸಿ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂಬ ನಿಲುವನ್ನು ತೆಗೆದುಕೊಂಡಿತು. ಇದರ ಜೊತೆಗೆ ಸಾಮಾಜಿಕ ಹಿಂದುಳಿದಿರುವಿಕೆಗೆ ಪ್ರಮುಖ ಕಾರಣಗಳನ್ನು ಗುರುತಿಸಿತು. ಹಿಂದುಳಿದ ವರ್ಗಗಳನ್ನು ಹಿಂದುಳಿದ ಸಮುದಾಯ, ಹಿಂದುಳಿದ ಜಾತಿಗಳು, ಹಿಂದುಳಿದ ಬುಡಕಟ್ಟುವೆಂದು ವರ್ಗೀಕರಿಸ ಬಹುದೆಂದು ಸೂಚಿಸಿತು. ಈ ಪ್ರಕಾರ ವಿಂಗಡಿಸಿ ಮೀಸಲಾತಿ ನೀಡಲು ಸರ್ಕಾರ ಪ್ರಯತ್ನಿಸಿತು.

ಅರಸು ಅವರ ಆಡಳಿತಾವಧಿಯಲ್ಲಿ ಕೇವಲ ಹಿಂದುಳಿದ ವರ್ಗಗಳ ಸಂಘಟನೆ ಮಾತ್ರ ಆಗದೆ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದರು. ಅವುಗಳೆಂದರೆ – ಹಿಂದುಳಿದ ವರ್ಗಗಳ ಸಲಹಾ ಮಂಡಳಿ ಸ್ಥಾಪನೆ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಈ ಮೂಲಕ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸಲಾಯಿತು. ಆದರೆ ದೇವರಾಜ ಅರಸು ಅವರು ಪ್ರಬಲ ಜಾತಿಗಳ ವಿರೋಧದಿಂದಾಗಿ ಮತ್ತು ಹಿಂದುಳಿದ ವರ್ಗಗಳಲ್ಲಿಯೇ ಜಾತಿವಾರು ಇದ್ದ ಭಿನ್ನಾಭಿಪ್ರಾಯದಿಂದಾಗಿ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು. ಇವರ ನಂತರ ಕಾಲದಲ್ಲಿ ಹಿಂದುಳಿದ ವರ್ಗಗಳ ಸಂಘಟನೆ ದುರ್ಬಲಗೊಳ್ಳುತ್ತಾ ಸಾಗಿತು.

## ಅರಸು ನಂತರದ ಕಾಲಘಟ್ಟದಲ್ಲಿ

ಹಾವನೂರು ಆಯೋಗ ಜಾರಿಗೆ ವಿರುದ್ಧವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಕೆ.ಸಿ. ವಸಂತ್ ಕುಮಾರ್ v/s. ಮೈಸೂರು ಸರ್ಕಾರ ನಡುವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಹಿಂದುಳಿದ ವರ್ಗಗಳನ್ನು ಗುರುತಿಸಲು ಬೇರೊಂದು ಹೊಸ ಆಯೋಗವನ್ನು ರಚಿಸುವಂತೆ 1982 ತೀರ್ಪು ನೀಡಿತು. ಶ್ರೀ ವೆಂಕಟ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿತು. ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸಿದರು. ಹಿಂದುಳಿದ ವರ್ಗಗಳ ಸ್ಥಿತಿಗತಿಯನ್ನು ವೈಜ್ಞಾನಿಕವಾಗಿ ಪರಿಶೀಲಿಸುವುದು. ಈ ಆಯೋಗವು ಹಿಂದುಳಿದರುವಿಕೆ ಗುರುತಿಸಲು 17 ಮಾರ್ಗಸೂಚಿಗಳನ್ನು ಬಳಸಿ ಹಿಂದುಳಿದ ವರ್ಗಗಳ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎ, ಬಿ, ಗುಂಪುಗಳೆಂದು ವಿಂಗಡಿಸಿತು. ಎ ಗುಂಪಿಗೆ ಶೇ. 14 ಬಿ. ಗೆ ಶೇ. 13ರಷ್ಟು ಮೀಸಲಾತಿಯನ್ನು ನೀಡಬೇಕೆಂದು ಹಿಂದುಳಿದ ವರ್ಗಗಳಿಗೆ ಶೇ. 33ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿತು. ಆದರೆ ಶ್ರೀ ರಾಮಕೃಷ್ಣ ಹೆಗಡೆಯವರ ಸರ್ಕಾರ ವರದಿಯನ್ನು ತಿರಸ್ಕರಿಸಿತು. ಮತ್ತೊಂದು ಆಯೋಗವನ್ನು 1986ರಂದು ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಇದು ಹಿಂದುಳಿದ ವರ್ಗಗಳನ್ನು ಮೂರು ಗುಂಪುವಾಗಿ ವಿಂಗಡಿಸಿತು.

ಚಿನ್ನಪ್ಪ ರೆಡ್ಡಿ ತನ್ನ ವರದಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದರು. ಅವರು ವರದಿಯನ್ನು ಅನುಷ್ಠಾನಗಳಿರುವ ಪ್ರಯತ್ನ ಮಾಡಲಿಲ್ಲ. ಶ್ರೀ ವೀರೇಂದ್ರ ಪಾಟೀಲರ ನಂತರ ಹಿಂದುಳಿದ ವರ್ಗಗಳ ನಾಯಕನಾಗಿ ಹೊರಹೊಮ್ಮಿದ ಎಸ್. ಬಂಗಾರಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದರು. ಆದರೆ ಬಂಗಾರಪ್ಪನವರು ಮೂಲತಃ ಹಿಂದುಳಿದ ವರ್ಗಕ್ಕೆ ಸೇರಿದ ನಾಯಕನಾದರೂ ಕೂಡ ಚಿನ್ನಪ್ಪ ರೆಡ್ಡಿ ವರದಿಯನ್ನು ಅನುಷ್ಠಾನಗೊಳಿಸುವ ಧೈರ್ಯ ತೋರಲಿಲ್ಲ. ವರದಿಯ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಹಿಂದುಳಿದ ವರ್ಗಗಳ ವರದಿಯ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಪ್ರಯತ್ನ ನಡೆಸಲಿಲ್ಲ.

ನಂತರದಲ್ಲಿ ಬಂದ ಮತ್ತೋರ್ವ ಹಿಂದುಳಿದ ವರ್ಗಗಳ ನಾಯಕರಾದ "ಶ್ರೀ ವೀರಪ್ಪ ಮೊಯಿಲಿ" ಅವರು ಮುಖ್ಯಮಂತ್ರಿಯಾದರು. ಚಿನ್ನಪ್ಪರೆಡ್ಡಿ ವರದಿಯನ್ನು ಕೆಲವು ಮಾರ್ಪಾಡುಗಳೊಂದಿಗೆ ಅನುಷ್ಠಾನಗೊಳಿಸುವ ಪ್ರಯತ್ನ ನಡೆಸಿದರು. ಇವರು ಪ್ರಬಲ ಜಾತಿಗಳಾದ ಒಕ್ಕಲಿಗ, ಲಿಂಗಾಯಿತರ ಒತ್ತಡಕ್ಕೆ ಮಣಿದು ಇವರನ್ನು ಒಳಗೊಂಡಂತೆ ಶೇ. 57ರಷ್ಟು ಮೀಸಲಾತಿಯನ್ನು ಪ್ರಕಟಿಸಿದರು. ಆದರೆ ಅದೇ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಯಾವುದೇ ಮೀಸಲಾತಿ ಪ್ರಮಾಣ ಶೇ. 50% ಹೆಚ್ಚು ಮೀರಬಾರದು ಎಂದು ತೀರ್ಪು ನೀಡಿತು. ಈ ಹಿನ್ನೆಲೆಯಲ್ಲಿ ಈ ವರದಿಯನ್ನು ಸರ್ಕಾರ ಪ್ರಕಟಿಸುವ ನಿಯಮಾವಳಿ ಜಾರಿಗೆ ಬರುವಲ್ಲಿ ವಿಫಲವಾಯಿತು.

ಹೀಗೆ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ನಿರಂತರ ಹೋರಾಟ ಬದಲಾವಣೆ ಹಾಗೂ ಬೆಳವಣಿಗೆಗಳು ನಡೆಯುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ. ವಿವಿಧ ರಾಜಕೀಯ ನಾಯಕತ್ವದಲ್ಲಿ ಧ್ರುವೀಕರಣಗೊಂಡು ತಮ್ಮ ಬೇಡಿಕೆಯನ್ನು ಸಫಲಗೊಳಿಸುವ ಪ್ರಯತ್ನ ನಡೆಸಿದರು. ಜೊತೆಗೆ ಪ್ರಬಲ ನಾಯಕತ್ವ ಬೆಳವಣಿಗೆಗೆ ಕಾರಣವಾಗಿದೆ. ತೊಂಬತ್ತರ ದಶಕದ ನಂತರ ಹಿಂದುಳಿದ ವರ್ಗಗಳ ಹೋರಾಟ ಸ್ವಲ್ಪ ಶಿಥಿಲಗೊಂಡಿರುವುದು ಕಾಣಬಹುದಾಗಿದೆ. ಸಿದ್ಧರಾಮಯ್ಯನವರ ರಾಜಕೀಯ ನಾಯಕತ್ವದಲ್ಲಿ ಪುನಃ ಸಫಲತೆಗೊಂಡು ಅಧಿಕಾರ ಪಡೆಯಲು ಯಶಸ್ವಿಯಾದರು. ನಂತರ ಅವರ ಅಧಿಕಾರದಲ್ಲಿ ಹಿಂದುಳಿದ ವರ್ಗಗಳಿಗೆ ಕೈಗೊಂಡ ಕ್ರಮಗಳು ಇವರ ನಾಯಕತ್ವದಲ್ಲಿ ಪುನರ್ ಧ್ರುವೀಕರಣಕ್ಕೆ ನಾಂದಿಯಾಯಿತು.

## ಸಿದ್ಧರಾಮಯ್ಯನವರ ನಾಯಕತ್ವದಲ್ಲಿ ರಾಜಕೀಯ ಸಂಚಲನ

ಶೋಷಿತ ವರ್ಗಗಳ ಕಷ್ಟಕಾರ್ಪಣ್ಯಗಳಿಗೆ ಸದಾ ಮಿಡಿಯುತ್ತಿದ್ದ ಸಿದ್ಧರಾಮಯ್ಯನವರಲ್ಲಿ ಸಾಮಾಜಿಕ ನ್ಯಾಯದ ಆಶಯ ಸೈದ್ಧಾಂತಿಕವಾಗಿ ಸ್ಪಷ್ಟಗೊಳ್ಳಲು ಕಾರಣವಾದುದು, ಡಾ. ರಾಮಮನೋಹರ ಲೋಹಿಯ ಚಿಂತನೆ ಇದಕ್ಕಾಗಿ ಇವರು ವಕೀಲ ವೃತ್ತಿಯನ್ನು ಬಿಟ್ಟು ರಾಜಕಾರಣಕ್ಕೆ ಧುಮುಕಿದರು. 1978ರಲ್ಲಿ ರಾಜಕಾರಣದಲ್ಲಿ ಅಧಿಕೃತವಾಗಿ ಪ್ರವೇಶ ಮಾಡಿದ ಸಿದ್ಧರಾಮಯ್ಯ ಅವರು 1983ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಲೋಕದಳದ ಅಭ್ಯರ್ಥಿಯಾಗಿ ಚಾಮುಂಡೇಶ್ವರಿ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿದ ಸಿದ್ಧರಾಮಯ್ಯನವರು ಕಾಂಗ್ರೆಸ್(ಐ)ನ ಜಯದೇವರಾಜ ಅವರನ್ನು ಸೋಲಿಸಿ ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದರು. ಸಿದ್ಧರಾಮಯ್ಯ ಅವರು ವಿಧಾನಸಭೆಗೆ ಪ್ರವೇಶ ಪಡೆದಾಗ ರಾಮಕೃಷ್ಣ ಹೆಗಡೆ ಅವರ ನೇತೃತ್ವದ ಸರ್ಕಾರದ ರಚನೆಗೆ ಸಿದ್ಧರಾಮಯ್ಯ ಅವರು ಬೆಂಬಲ ನೀಡಿದ್ದರು. ಹೀಗಾಗಿ ಇವರಿಗೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಸ್ಥಾನ ನೀಡಲಾಯಿತು.

1985ರಲ್ಲಿ ವಿಧಾನಸಭೆಯಲ್ಲಿ ಮಧ್ಯಂತರ ಚುನಾವಣೆ ನಡೆದಾಗ ಸಿದ್ಧರಾಮಯ್ಯ ಅವರು ಜನತಾ ಪಕ್ಷದಿಂದ ಸ್ಪರ್ಧಿಸಿ ಎರಡನೇ ಬಾರಿ ಚುನಾಯಿತರಾದರು. ಬಳಿಕ ಪಶುಸಂಗೋಪನೆ, ರೇಷ್ಮೆ ಸಚಿವರಾದರು. ಎಸ್.ಆರ್. ಬೊಮ್ಮಾಯಿ ಅವರ ಮಂತ್ರಿ ಮಂಡಲದಲ್ಲಿ ಸಾರಿಗೆ ಸಚಿವರಾಗಿಯೂ ಕಾರ್ಯ ನಿರ್ವಹಿಸಿದರು. 1989ರಲ್ಲಿ ಜನತಾ ಪಕ್ಷ ಇಬ್ಭಾಗವಾದಗ. ಸಿದ್ಧರಾಮಯ್ಯನವರು ಜನತಾದಳದೊಂದಿಗೆ ಗುರುತಿಸಿಕೊಂಡರು. ಸಿದ್ಧರಾಮಯ್ಯ ಅವರು 1994ರ ವಿಧಾನಸಭೆ ಚುನಾವಣೆಯಲ್ಲಿ ಜನತಾದಳದಿಂದ ಸ್ಪರ್ಧಿಸಿ ಮೂರನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಹೆಚ್.ಡಿ. ದೇವೇಗೌಡರ ಸಚಿವ ಸಂಪುಟದಲ್ಲಿ ಹಣಕಾಸು ಮಂತ್ರಿಗಳಾದರು. ಅವಧಿಯಲ್ಲಿ ಮೊದಲ ಬಾರಿ ಬಜೆಟ್ ಅನ್ನು ಮಂಡಿಸಿದರು. 1996ರಲ್ಲಿ ದೇವೇಗೌಡರು ಪ್ರಧಾನಿಯಾದಾಗ ಜೆ.ಹೆಚ್. ಪಟೇಲ್‌ರ ಸಂಪುಟದಲ್ಲಿ ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಯಾದರು. 1999ರಲ್ಲಿ ಜನತಾ ದಳ ಮತ್ತೆ ಒಡೆದು ಹೋಯಿತು. ಆಗ ಸಿದ್ಧರಾಮಯ್ಯ ಅವರು ಜಾತ್ಯಾತೀತ ಜನತಾ ದಳದೊಂದಿಗೆ ಗುರುತಿಸಿಕೊಂಡರು. ಆದರೆ ಆ ವರ್ಷದ ವಿಧಾನಸಭೆ ಚುನಾವಣೆಯಲ್ಲಿ ಪರಾಭವಗೊಂಡರು. 2004 ಚುನಾವಣೆಯಲ್ಲಿ ಮತ್ತೆ ಗೆಲುವು ಸಾಧಿಸಿದ ಸಿದ್ಧರಾಮಯ್ಯನವರು ಕಾಂಗ್ರೆಸ್ ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾದರು.

## ರಾಜಕೀಯ ತಿರುವು

ಬದಲಾದ ರಾಜಕೀಯ ವಿದ್ಯಮಾನದಲ್ಲಿ ಅನಿವಾರ್ಯವಾಗಿ ಸಿದ್ಧರಾಮಯ್ಯನವರು ಜೆ.ಡಿ.ಎಸ್. ಪಕ್ಷವನ್ನು ತೊರೆಯಬೇಕಾಗುತ್ತದೆ. 2006ರಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಜೆ.ಡಿ.ಎಸ್ ನಿಂದ ಹೊರಬಂದ ಸಿದ್ಧರಾಮಯ್ಯನವರು ಕಾಂಗ್ರೆಸ್ ಪಕ್ಷ ಸೇರಿದರು. ಈ ಬೆಳವಣಿಗೆ ಸಿದ್ಧರಾಮಯ್ಯನವರ ರಾಜಕೀಯ ಜೀವನಕ್ಕೆ ತಿರುವು ನೀಡಿತು. ಬಳಿಕ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾದರು.

2013ರ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಗೆಲುವಿಗೆನೊಂದಿಗೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಗೊಂಡು 2013 ಮೇ 13ರಂದು ಕರ್ನಾಟಕದ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಸಿದ್ಧರಾಮಯ್ಯನವರ ಹಿಂದುಳಿದ ವರ್ಗಗಳ ಆಶಾಕಿರಣವಾಗಿದ್ದರು.

## ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಿದ್ಧರಾಮಯ್ಯನವರ ಕೂಡುಗೆ ವಿಶ್ಲೇಷಣೆ

ಸಿದ್ಧರಾಮಯ್ಯನವರು ಈ ಮೊದಲು ಹಣಕಾಸು ಸಚಿವರಾಗಿ ಜವಾಬ್ದರಿ ನಿರ್ವಹಿಸಿರುವುದರ ಅನುಭವದಿಂದ ತಮ್ಮ ಮುಖ್ಯಮಂತ್ರಿ ಅವಧಿಯಲ್ಲಿ (2013–18) ತಾವು ಮಂಡಿಸಿದ ಆಯವ್ಯಯಗಳಲ್ಲಿ ಹಿಂದುಳಿದ ವರ್ಗಗಳಿಗೆ ಹೆಚ್ಚು ಹೆಚ್ಚು ಅನುದಾನ ಹಂಚಿಕೆ ಮಾಡಿ ಹಿಂದುಳಿದ ವರ್ಗಗಳ ಬೆಂಬಲ ಪಡೆಯಲು ಯಶಸ್ವಿಯಾದರು. ಹಿಂದುಳಿದ ವರ್ಗಗಳು ಅಹಿಂದ ಆದರ್ಶದ ಪ್ರಮುಖ ಭಾಗವಾಗಿದ್ದರು. ಹಿಂದುಳಿದ ವರ್ಗಗಳಿಗೆ ಆಯವ್ಯಯದಲ್ಲಿ ಹಣ ನೀಡಿಕೆ ನೋಡಿದರೆ ಇದು ತಿಳಿಯುತ್ತದೆ. ಸಿದ್ಧರಾಮಯ್ಯ ಅದರಿಂದ ಪೂರ್ವದಲ್ಲಿ ನೀಡಿದ ಹಣಕ್ಕೂ ಇವರ ಕಾಲದಲ್ಲಿ ನೀಡಿದ ಹಣದ ಹಂಚಿಕೆಯನ್ನು ಈ ಪಟ್ಟಿಯಲ್ಲಿ ತೋರಿಸಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಆಯವ್ಯಯದಲ್ಲಿನ ಕೊಡುಗೆ**

| ವರ್ಷ | ಆಯಾವ್ಯಯ ಹಂಚಿಕೆ |
|---|---|
| 2010–2011 | 606 ರೂ. (ಕೋಟಿಗಳಲ್ಲಿ) |
| 2011–2012 | 760 ರೂ. (ಕೋಟಿಗಳಲ್ಲಿ) |
| 2013–2014 | 1000 ರೂ. (ಕೋಟಿಗಳಲ್ಲಿ) |
| 2014–2015 | 1369 ರೂ. (ಕೋಟಿಗಳಲ್ಲಿ) |
| 2015–2016 | 1963 ರೂ. (ಕೋಟಿಗಳಲ್ಲಿ) |
| 2016–2017 | 2503 ರೂ. (ಕೋಟಿಗಳಲ್ಲಿ) |
| 2017–2018 | 3154 ರೂ. (ಕೋಟಿಗಳಲ್ಲಿ) |
| 2018–2019 | 3172 ರೂ. (ಕೋಟಿಗಳಲ್ಲಿ) |

ಈ ಮೇಲಿನ ಅಂಕಿ ಅಂಶಗಳ ಗಮನಿಸಿದಾಗ ಕಂಡು ಬರುವುದೇನೆಂದರೆ ಹಿಂದಿನ ಸರ್ಕಾರದ ಆಡಳಿತವು 2010–11ರಲ್ಲಿ 600 ಕೋಟಿಗಳಿಗಿಂತ ಸ್ವಲ್ಪಮಟ್ಟಿಗೆ ಹೆಚ್ಚಿನ ಅನುದಾನವನ್ನು ಒದಗಿಸಿರುವುದು ಕಂಡು ಬರುತ್ತದೆ. ಈ ಅಂಕಿ ಅಂಶದಲ್ಲಿ ಸಿದ್ಧರಾಮಯ್ಯ ಆಡಳಿತ ಅವಧಿಯ ಕೊನೆಯಲ್ಲಿ 3,172 ಕೋಟಿ ತಲುಪಿರುತ್ತದೆ. ಹಿಂದುಳಿದ ವರ್ಗಗಳಿಗೆ ಒದಗಿಸಿದ ಆಯವ್ಯಯ ಹಂಚಿಕೆಯ 5 ಪಟ್ಟು ಏರಿಕೆಯಾಗಿರುತ್ತದೆ.

ಸಿದ್ಧರಾಮಯ್ಯನವರು ಆಯವ್ಯಯದಲ್ಲಿ ಹೆಚ್ಚು ಹಣ ಹಂಚಿಕೆ ಮಾಡಿರುವುದಲ್ಲದೆ, ಇದಕ್ಕೆ ಪೂರಕವಾದ ಅನೇಕ ಕಲ್ಯಾಣ ಕಾರ್ಯಕ್ರಮ ಹಾಕಿಕೊಂಡರು. ಹಿಂದುಳಿದ ವರ್ಗಗಳಿಗೆ ಆರ್ಥಿಕ, ಶೈಕ್ಷಣಿಕ ಉದ್ಯೋಗದಲ್ಲಿ ಹೆಚ್ಚು ಅವಕಾಶ ದೊರಕಿಸಿಕೊಡುವುದರಿಂದ ಈ ವರ್ಗದ ಅಭಿವೃದ್ಧಿ ಕ್ರಮ ಕೈಗೊಂಡರು ಪ್ರಮುಖವಾದ ಯೋಜನೆ ವಿಶ್ಲೇಷಿಸುವುದಾದರೆ, ಪ್ರತಿ ತಾಲ್ಲೂಕು ಮಟ್ಟದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿಗಳನ್ನು ಪ್ರಾರಂಭಿಸುವುದು. ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪನೆ, ಹಿಂದುಳಿದ ವರ್ಗಗಳ ಉದ್ಯೋಗದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಆದೇಶ. ಐ.ಎ.ಎಸ್/ ಕೆ.ಎ.ಎಸ್ ಆಶಕ್ತರಿಗೆ ವಿಶೇಷ ತರಬೇತಿ, ಉನ್ನತ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಒತ್ತು ಜಾತಿವಾರು, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳುವುದು. ಸಣ್ಣ ಸಣ್ಣ ಜಾತಿಗಳಾದ ಮಡಿವಾಳ, ಕಂಬಾರ, ಗಾಣಿಗ, ಉಪ್ಪಾರ ಇತ್ಯಾದಿ ಸಮುದಾಯಗಳ ಸಂಪ್ರದಾಯ ವೃತ್ತಿಗಳ ಅಭಿವೃದ್ಧಿಗೆ ಸಾಲ ಯೋಜನೆ, ವಿದ್ಯಾಸಿರಿ ಯೋಜನೆ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಡಿ. ದೇವರಾಜ್ ಅರಸು ಶಿಷ್ಯ ವೇತನ ಹಿಂದುಳಿದ ವರ್ಗಗಳ ಆರ್ಥಿಕ ಜೀವನವನ್ನು ಸುಧಾರಿಸಲು ಡಿ. ದೇವರಾಜ್ ಅರಸು ಅಭಿವೃದ್ಧಿ ನಿಗಮದ ವತಿಯಿಂದ ಹಿಂದುಳಿದ ವರ್ಗಗಳ ವಿಧವೆಯರಿಗೆ ಸಹಾಯಧನ, ಸಾರಾಯಿ ನಿಷೇಧದಿಂದ ಉದ್ಯೋಗ ಕಳೆದುಕೊಂಡ ಈಡಿಗ ಸಮುದಾಯದಂತಹ ಸಾರಾಯಿ ಟೆಂಡರ್‌ಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು, ಯುವಕರಿಗೆ ವಾಹನ ಖರೀದಿಸಲು ಸಹಾಯಧನ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಉಪ್ಪಾರ, ಬೆಸ್ತ, ಮಡಿವಾಳ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಕಾರ್ಯಕ್ರಮಗಳು.

ಸಿದ್ಧರಾಮಯ್ಯನವರು ತಮ್ಮ ಆಡಳಿತ ಅವಧಿಯಲ್ಲಿ ಹಿಂದುಳಿದ ವರ್ಗಗಳ ಏಳಿಗೆಗೆ ಪ್ರಮುಖ ಯೋಜನೆಗಳು ಹಾಕಿಕೊಳ್ಳುವುದರ ಮೂಲಕ ಈ ವರ್ಗಗಳ ನಾಯಕನಾಗಿ ಗುರುತಿಸಿಕೊಂಡರು. ಹಿಂದುಳಿದ ವರ್ಗಗಳ ನಾಯಕರಾಗಿದ್ದು ಡಿ. ದೇವರಾಜ್ ಅರಸು ನಂತರದಲ್ಲಿ ಹಿಂದುಳಿದ ವರ್ಗಗಳ ಮುಂಚೂಣಿಯ ನಾಯಕನಾಗಿ ಈ ವರ್ಗಗಳ ಧ್ವನಿಯಾಗಿ ಹಿಂದುಳಿದ ವರ್ಗಗಳ ಪುನರ್ ಧ್ರುವೀಕರಣದಲ್ಲಿ ಕೇಂದ್ರ ಬಿಂದುವಾಗಿದ್ದಾರೆ. ವಂಚಿತ ಹಿಂದುಳಿದ ಜಾತಿಗಳ ನಾಯಕನಾಗಿ ಅರಸು ನಂತರದ ದಶಕದಲ್ಲಿ ಅವರ ಆಡಳಿತದ ಪರಿಣಾಮದ ಪ್ರಗತಿಪರ ಬೆಳವಣಿಗೆಗಳು ಅರಸು ಆಡಳಿತದ ಶಕ್ತಿ ಸಂಪನ್ನತೆಯನ್ನು ಪುನಃ ಸ್ಥಾಪಿಸಿ ವಂಚಿತ ಸಮುದಾಯಗಳ ನಾಯಕನಾಗಿ ಚದುರಿಸಿದ ಸಮುದಾಯಗಳನ್ನು ಸಂಘಟಿಸುವ ರೂವಾರಿಯಾಗಿದ್ದರೆ ಸಿದ್ಧರಾಮಯ್ಯನವರ ನಾಯಕತ್ವದ ಮೂಲಕ ಹಿಂದುಳಿದ ವರ್ಗಗಳಲ್ಲಿ ರಾಜಕೀಯ ಸಂಚಲನವನ್ನು ಉಂಟುಮಾಡಿದ್ದರೆ. ಚದುರಿದ ಹಿಂದುಳಿದ ಜಾತಿಗಳನ್ನು ತಮ್ಮ ನಾಯಕತ್ವದ ಮೂಲಕ ಪುನರ್ ಸಂಘಟನೆಯನ್ನು ಮಾಡಿದ್ದರೆ.

## ಪರಾಮರ್ಶನ ಗ್ರಂಥಗಳು


- **ಮಹದೇವಯ್ಯ ತುಮಕೂರು (2015) :** ಇಟ್ಟಗುರಿ–ದಿಟ್ಟ ಹೆಜ್ಜೆ. ಬೆಂಗಳೂರು ಕರ್ನಾಟಕ ಸಾಹಿತ್ಯ ವೇದಿಕೆ.
- **ಚಿಕ್ಕಣ್ಣ ಕಾತಾ (2019) :** ಸಿದ್ಧರಾಮಯ್ಯ ಆಡಳಿತ ಅಂತರಂಗ–ಬಹಿರಂಗ. ಬೆಂಗಳೂರು ಚನಯ್ಯನ ಪ್ರಕಾಶನ.
- **Karnataka state commission for backward classes special report (2015) :** Socio-Educatinal and constitutional obligation.
- **Devendra Babu A. (2017) :** Impact of Siddaramaiah budget in backward classes. A critical review.
- **B. Monohar Yadav (2016) :** Budgetary allocatin expenditure and implicatin for scheduled castes in Karnatak; A critical reflectin.
- **ಎಚ್. ಕಾಂತರಾಜ್ (1995) :** ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಕಾಯ್ದೆ.
- **ಮಹದೇವ ಪ್ರಕಾಶ್ (2015) :** "ಸಿದ್ಧರಾಮಯ್ಯ ರಾಜಕೀಯ ಚೈತ್ರಯಾತ್ರೆ". (ಸಂ) ಮಹಾದೇವಯ್ಯ, ತುಮಕೂರು ಇಟ್ಟಗುರಿ – ದಿಟ್ಟಹೆಜ್ಜೆ.
- **ಸದಾನಂದ ಜೆ. ಎಸ್. (1994) :** ಶ್ರೀ ದೇವರಾಜ್ ಅರಸು ಹಿಂದುಳಿದ ವರ್ಗಗಳ ಸಂಘಟನೆಯಲ್ಲಿ ಮತ್ತು ಹಾವನೂರು ಆಯೋಗ ವರದಿ.
- **ಸದಾನಂದ ಜೆ. ಎಸ್. (2010) :** ಹಿಂದುಳಿದ ವರ್ಗಗಳ ಚಳುವಳಿ ಮತ್ತು ಸಾಮಾಜಿಕ ಮಸೂದೆ.
- **ಚಂದ್ರಶೇಖರ್ ಎಸ್. (1983) :** ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು (1881–1940).


■■

*– 89ನೇ ಪುಟದಿಂದ ಮುಂದುವರೆದುದು*


- **ಪಿ. ಲಂಕೇಶ್ (2018) :** ನಾನಲ್ಲ, ಲಂಕೇಶ್ ಪ್ರಕಾಶನ, ಬೆಂಗಳೂರು ಈಗಲ್ ಸಿಟಿ.
- **ಪಿ.ಲಂಕೇಶ್ (2018) :** ಕಲ್ಲುಕರಗುವ ಸಮಯ, ಬೆಂಗಳೂರು ಲಂಕೇಶ್ ಪ್ರಕಾಶನ, ಈಗಲ್ ಸಿಟಿ.
- **ಪಿ. ಲಂಕೇಶ್ (2018) :** ಉಲ್ಲಂಘನೆ ಮತ್ತು ಇತರ ಕಥೆಗಳು, ಬೆಂಗಳೂರು ಲಂಕೇಶ್ ಪ್ರಕಾಶನ, ಈಗಲ್ ಸಿಟಿ.
- **ಪಿ. ಲಂಕೇಶ್ (2018) :** ಮಂಜು ಕವಿದ ಸಂಜೆ, ಬೆಂಗಳೂರು ಲಂಕೇಶ್ ಪ್ರಕಾಶನ, ಈಗಲ್ ಸಿಟಿ.
- **ಪಿ. ಲಂಕೇಶ್ (2018) :** ಉಮಾಪತಿಯ ಸ್ಕಾಲರ್ ಶಿಪ್ ಯಾತ್ರೆ, ಬೆಂಗಳೂರು ಲಂಕೇಶ್ ಪ್ರಕಾಶನ, ಈಗಲ್ ಸಿಟಿ.


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕೃಷ್ಣದೇವರಾಯನ ಕಾಲದ ಮಂಡ್ಯ ಪ್ರದೇಶ

✍ **ಡಾ. ಎಸ್. ಶಿವರಾಮು,** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ – 571401.

ವಿಜಯನಗರ ಸಾಮ್ರಾಟ ಕೃಷ್ಣದೇವರಾಯನು ರಾಜ್ಯತಂತ್ರ ಪ್ರತಿಭೆ. ಆಡಳಿತ ದಕ್ಷತೆ ಹಾಗೂ ಸಮರ್ಥ ಸೇನಾಬಲದಿಂದ ಭಾರತದ ಶ್ರೇಷ್ಠ ರಾಜರುಗಳ ಪೈಕಿ ಒಬ್ಬನೆಂದು ಪರಿಗಣಿಸಲ್ಪಟ್ಟಿರುವವನು. ವಿಜಯನಗರ ಕಾಲದಲ್ಲಿ ಮಂಡ್ಯ ಹೆಸರಿನ ಉಲ್ಲೇಖ ಪ್ರಪ್ರಥಮವಾಗಿ ಕ್ರಿ.ಶ. 1516ನೇ ವರ್ಷದ ಕೃಷ್ಣದೇವರಾಯನ ಕಾಲದ ಒಂದು ತಾಮ್ರ ಶಾಸನದಲ್ಲಿದೆ. ಕೃಷ್ಣದೇವರಾಯನು ಧಾತು ಸಂವತ್ಸರದ ಕಾರ್ತಿಕ ಪೌರ್ಣಿಮೆ ಭಾನುವಾರದಂದು ಶ್ರೀರಾಮಾನುಜಾಚಾರ್ಯರ ಅನುಯಾಯಿ ಅನಂತಚಾರ್ಯರ ಪರಂಪರೆಯಲ್ಲಿ ಹನ್ನೆರಡನೆಯವರಾದ ಗೋವಿಂದಚಾರ್ಯ ಎಂಬುವವರಿಗೆ 'ಮಂತೆಯ' ಗ್ರಾಮವನ್ನು ಕೃಷ್ಣರಾಯಪುರವೆಂದು ಕರೆದು ಇದರ ಜೊತೆಗೆ ಶ್ರೀರಂಗಪಟ್ಟಣ ಸೀಮೆಯ ಆ ಗ್ರಾಮಕ್ಕೆ ಸೇರಿದ ಉಪಗ್ರಾಮಗಳಾದ ಚಿಕ್ಕಮಂತೆಯ, ಹೊಸಹಳ್ಳಿ, ಕಲ್ಲಹಳ್ಳಿ, ತಂಡಸೇಹಳ್ಳಿ ಹಾಗೂ ಕೋಣನಹಳ್ಳಿಗಳನ್ನು ದಾನ ಮಾಡಿದ್ದಾನೆ, ಮಂಡ್ಯವನ್ನು 'ಮಂತೆಯ' ಎಂದು ಕರೆದಿದ್ದು 'ಅದಕ್ಕೆ' ಚಿಕ್ಕಮಂಟೆಯ' ಎಂಬ ಉಪಗ್ರಾಮವಿದ್ದುದ್ದು ಸ್ಪಷ್ಟ. ಈ ಮಂತೆಯವೇ ಈಗ ಮಂಡ್ಯ ಎಂಬ ರೂಪವನ್ನು ಪಡೆದಿದೆ. ಮಂತೆಯ ಗ್ರಾಮವು ಹೊಯ್ಸಳರ ಕಾಲದಲ್ಲೂ ಅಗ್ರಹಾರವಾಗಿತ್ತು. ಹೀಗೆ ಅಗ್ರಹಾರವಾಗಿದ್ದ, 'ಮಂಡೆಯ' ವಿಜಯನಗರಕಾಲಕ್ಕೆ 'ಮಂತೆಯ' ಗ್ರಾಮವಾಗಿ ಈಗ ಏಳು ತಾಲ್ಲೂಕುಗಳನ್ನೊಳಗೊಂಡ 'ಮಂಡ್ಯ' ಜಿಲ್ಲೆಯಾಗಿ ಬೆಳೆದಿದೆ. ಈ ಅರಸರ ಆಡಳಿತಕ್ಕೆ ಈಗಿನ ಮಂಡ್ಯ ಜಿಲ್ಲೆಯ ಪ್ರದೇಶವೆಲ್ಲ ಸೇರಿದ್ದಿತು. ಮಂಡ್ಯ ಜಿಲ್ಲೆಯಲ್ಲಿ ವಿಜಯನಗರ ಕಾಲದ ಸುಮಾರು 120ಕ್ಕೂ ಹೆಚ್ಚಿನ ಶಾಸನಗಳು ದೊರಕಿವೆ. ಈ ಪ್ರಬಂಧದಲ್ಲಿ ಕೃಷ್ಣದೇವರಾಯನ ಕಾಲದಲ್ಲಿನ ಮಂಡ್ಯ ಪ್ರದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಕೃಷ್ಣದೇವರಾಯನ ಕಾಲದ ಸುಮಾರು 11 ಶಾಸನಗಳು ಲಭ್ಯವಾಗಿವೆ. ನಾಗಮಂಗಲದಲ್ಲಿ ದೊರೆತಿರುವ ಕ್ರಿ.ಶ. 1511ರ ಶಾಸನವು ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ನಾಗಮಂಗಲ ಅಥವಾ ವೀರಬಲ್ಲಾಳ ಚತುರ್ವೇಧಿ ಭಟ್ಟರತ್ನಾಕರ ಅಗ್ರಹಾರದಲ್ಲಿದ್ದ ವೀರಭದ್ರ ದೇವಾಲಯದ ರಂಗಮಂಟಪ ದುರಸ್ತಿ ಮಾಡಿ, ಮುಂಭಾಗದ ಗಂಧಾಗೋಡಿ ಮಂಟಪವನ್ನು ಗುಮ್ಮಾಲಪುರದ ಅಕ್ಕಣ್ಣಚೆನ್ನಶೆಟ್ಟಿಯ ಮಗನಾದ ಹೊನ್ನಿಶೆಟ್ಟಿಯು ನಿರ್ಮಿಸಿದನೆಂದು ಹಾಗೂ ಅರಮನೆಯ ಬೇಹಾರಿಯೂ ಈ ಕೈಂಕರ್ಯಕ್ಕೆ ಅವಶ್ಯಕವಾದ ಮಾರ್ಗದರ್ಶನ ಮಾಡಿದನೆಂದು ಶಾಸನದಲ್ಲಿ ದಾಖಲಿಸಲಾಗಿದೆ. ಕ್ರಿ.ಶ. 1512ರ ನಾಗಮಂಗಲ ತಾಲ್ಲೂಕು ದೊಡ್ಡಜಟಕದ ಒಂದು ಶಾಸನ ಪ್ರಕಾರ ಕೃಷ್ಣದೇವರಾಯ ಹಿರಿಜತ್ತಿಗ ಗ್ರಾಮವನ್ನು ಅವರ 4 ಪಾಳೆಯಗಳೊಡನೆ ಚಿನ್ನದೇವಿಪುರವೆಂಬ ಹೆಸರನಿಟ್ಟು ಶ್ರೀನಿವಾಸಾಧ್ವರಿಗೆ ದಾನ ಮಾಡಿದರು. ಶ್ರೀನಿವಾಸದ್ವಾರರು 10 ವೃತ್ತಿಗಳನ್ನು ಸ್ವಂತಕ್ಕೆ ಇಟ್ಟುಕೊಂಡು ಉಳಿದ 20 ವೃತಿಗಳನ್ನು ಅರ್ಹರಾದ ಬ್ರಾಹ್ಮಣರಿಗೆ ಕೊಟ್ಟನು.[1]

ನಾಗಮಂಗಲ ತಾಲ್ಲೂಕಿನ ದೇವಾಲಪುರ ತಾಮ್ರಪಟವು ಕ್ರಿ.ಶ. 1513ರಲ್ಲಿ ಕೃಷ್ಣದೇವರಾಯನು ಆಳ್ವಿಕೆ ಮಾಡುತ್ತಿದ್ದಾಗ ಮದನಪುರ ಹಾಗೂ ಮಲ್ಲಿಗೆರೆ ಗ್ರಾಮಗಳನ್ನು "ಕೃಷ್ಣರಾಯಪುರ" ಎಂದು ನಾಮಕರಣ ಮಾಡಿದ ಬಗೆಗೆ ಉಲ್ಲೇಖಿಸುತ್ತದೆ.[2] ಕ್ರಿ.ಶ. 1516ರಲ್ಲಿ ಕೃಷ್ಣದೇವರಾಯ ನಾಗಮಂಗಲ ರಾಜ್ಯದ ಚಿಕ್ಕಬ್ಬೆಹಳ್ಳಿಯನ್ನು ಅದರ 3 ಪಾಳೆಯಗಳೊಡನೆ ಹಾಗೂ ಚೆನ್ನಪಟ್ಟಣ ರಾಜ್ಯದ ಹಲವು ಮರಹೊಸಹಳ್ಳಿ ಮತ್ತು ಬಿಲ್ಲಗೊಂಡನಹಳ್ಳಿ ರಾಜ್ಯದ ವಂಗೇನಹಳ್ಳಿ ಈ ಮೂರು ಗ್ರಾಮಗಳನ್ನು ವ್ಯಾಸತೀರ್ಥರೆಂಬ ಸದ್ಗುಣ ತಪಸ್ವಿಗೆ ಕೊಟ್ಟನು.[3] ನಾಗಮಂಗಲದ ತಾಲ್ಲೂಕಿನ ತಿಬ್ಬನಹಳ್ಳಿಯನ್ನು "ಕೃಷ್ಣದೇವರಾಯ ಸಮುದ್ರ" ವೆಂದು ಕರೆದು ಚನ್ನಪಟ್ಟಣದ ವೀರಪ್ಪ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.

ನಾಗಮಂಗಲ ಕೋಟೆಯನ್ನು ಮೊಟ್ಟಮೊದಲು ಕಟ್ಟಿದವ ತಿಮ್ಮಣ್ಣನಾಯಕ. ವಿಜಯನಗರದ ಶ್ರೀಕೃಷ್ಣದೇವರಾಯನ ದಂಡನಾಯಕರಲ್ಲೊಬ್ಬನೀತ. ಕ್ರಿ.ಶ. 1515ರ ಸುತ್ತಮುತ್ತ ನಾಗಮಂಗಲದ ಬಗೆಗೆ ಕ್ರಿ.ಶ. 1807 ರಲ್ಲಿ ಬರೆದ ಮೂಲ ಕೈಫಿಯತ್ತಿನಲ್ಲಿ ಇದರ ಬಗೆಗೆ ಸವಿಸ್ತಾರ. ಮಾಹಿತಿ ಇದೆ. ನಾಗಮಂಗಲದ ಹೊರಕೋಟೆಯನ್ನು ಕ್ರಿ.ಶ. 1578 ರಲ್ಲಿ ಚನ್ನಪಟ್ಟಣದ ಜಗದೇವರಾಯನು ಕಟ್ಟಿಸಿದನು.[4]

ಕ್ರಿ. ಶ. 1517 ರಲ್ಲಿ ಕೃಷ್ಣದೇವರಾಯನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾನಕ್ಕೆ ಉಂಬಳಿಬಿಟ್ಟನೆಂದು ತಿಳಿದುಬರುವುದಲ್ಲದೆ ಕ್ರಿ. ಶ. 1551 ರ ಮೇಲುಕೋಟೆಯ ಒಂದು ದಾಖಲೆಯಲ್ಲಿ ರಾಯನು ಮೈಸೂರಿನ ಮೇಲೆ ದಾಳಿ ಮಾಡಿದ ಬಗೆಗೆ ಉಲ್ಲೇಖಿಸುತ್ತದೆ.[5] ನಾಗಮಂಗಲದ ಒಂದು ಶಾಸನವು ಮಾವಿನಹಳ್ಳ ಮತ್ತು ನಾಮಿಹಳ್ಳಗಳ ಸಂಗಮದಲ್ಲಿ ವೀರಣ್ಣ ಎಂಬುವವನು ಒಂದು ಕೆರೆಯನ್ನು ನಿರ್ಮಿಸಿದನೆಂದು ತಿಳಿಸುತ್ತದೆ.[6] ಕ್ರಿ. ಶ. 1519ರ ಕೃಷ್ಣದೇವರಾಯನ ಆಡಳಿತದ ಮೇಲುಕೋಟೆ ಶಾಸನವು ತೂಬು ಒಡೆದುಹೋದ ಕೋಡಿ ಹಾಗೂ ಕೆರೆಯ ದುರಸ್ತಿಯನ್ನು ತಿಳಿಸುತ್ತದೆ. ಈ ಕಾರ್ಯಕ್ಕೆ ತಗುಲಿದ 300 ಗದ್ಯಾಣ ಸುವರ್ಣ ನಾಣ್ಯಗಳನ್ನು ಲಕ್ಷ್ಮಿಪತಿಶೆಟ್ಟಿ ಎಂಬ ವ್ಯಾಪಾರಿಯು ನೀಡಿದ. ಈ ಎಲ್ಲಾ ಕಾರ್ಯಗಳಿಗೆ ಪ್ರತಿಫಲವಾಗಿ ದೇವಾಲಯದವರು ದೇವರಿಗೆ ವಿಶೇಷ ಪೂಜೆಯನ್ನು, ಲಕ್ಷ್ಮಿಪತಿಯವರ ತಂದೆ ತಿಬ್ಬಾಶೆಟ್ಟಿಯ ಹೆಸರಿನಲ್ಲಿ ಮಾಡಿ ದಾನಿಗೆ ಪ್ರಸಾದ ನೀಡುತ್ತಿದ್ದರು.[7]

ಕ್ರಿ.ಶ. 1528ರ ಪಾಂಡವಪುರದ 134ನೇ ಮೇಲುಕೋಟೆ ಶಾಸನವು ಬಹಳ ಮುಖ್ಯವಾಗಿದೆ. ಈ ಶಾಸನದ ಪ್ರಕಾರ ಕೃಷ್ಣದೇವರಾಯನು ತನಗೆ ನಾಯಕತನ ದಯಪಾಲಿಸಿದುದಕ್ಕಾಗಿ ದಂಡು ಅಹೋಬಳದ ಮಗನಾದ ಕೃಷ್ಣನಾಯಕನ ಶ್ರೀರಂಗಪಟ್ಟಣದ ದೇವಾಲಯಗಳಿಗೆ ಸಿಂಧುಘಟ್ಟ ಸೀಮೆಯೊಳಗಿನ ಎರಡು ಗ್ರಾಮಗಳನ್ನು ದಾನ ಮಾಡಿದ ವಿಷಯವಲ್ಲದೆ ಮೇಲುಕೋಟೆ ದೇವಸ್ಥಾನದ ಭೂಮಿಗಳನ್ನು ಉಳುಮೆ ಮಾಡುತ್ತಿದ್ದ ಒಕ್ಕಲಿಗರನ್ನೆ ತೊಂಡನ್ನೂರಿನ ದೇವಸ್ಥಾನಕ್ಕೆ ಸೇರಿದ ಭೂಮಿಗಳನ್ನು ಉಳುಮೆ ಮಾಡಲು ಕರೆದೊಯ್ಯಲಾಗುತ್ತಿತ್ತೆಂಬ ಕುತೂಹಲಕಾರಿ ಅಂಶ ತಿಳಿದುಬರುತ್ತದೆ.[8]

ಇದರಿಂದ ಪ್ರಮುಖ ಧಾರ್ಮಿಕ ಕ್ಷೇತ್ರಗಳಾಗಿದ್ದ ಮೇಲುಕೋಟೆ ಹಾಗೂ ತೊಂಡನೂರು ದೇವಾಲಯಗಳು ಬ್ರಹ್ಮಾದಾಯದ ಮೂಲಕ ಭೂಒಡೆತನವನ್ನು ಹೊಂದಿದ್ದು, ಅವುಗಳನ್ನು ಉಳುಮೆ ಮಾಡಲು ಸ್ಥಳೀಯ ಒಕ್ಕಲಿಗರನ್ನು ಅಂದರೆ ರೈತಾಪಿ ಗೇಣಿದಾರರನ್ನು ಬಳಸಿಕೊಳ್ಳುತ್ತಿದ್ದಾರೆಂಬ ವಿಚಾರ ಗೊತ್ತಾಗುತ್ತದೆ.[9]

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೊಯ್ಸಳ 3ನೇ ಬಲ್ಲಾಳನ ನಂತರ ವಿಜಯನಗರವು ಕ್ರಮೇಣ ವಿಸ್ತಾರಗೊಂಡು ಇಡೀ ದಕ್ಷಿಣ ಭಾರತವನ್ನೆಲ್ಲಾ ಒಳಗೊಂಡಿತು. ಮೈಸೂರು, ಮಂಡ್ಯ ಮತ್ತು ಇತರ ಜಿಲ್ಲೆಗಳಲ್ಲಿ ಸಣ್ಣಪುಟ್ಟ ಪಾಳೆಪಟ್ಟು ಮನೆತನಗಳು ತಲೆಯೆತ್ತಿ ವಿಜಯನಗರ ಸಾಮ್ರಾಟರಿಗೆ ಅಧೀನರಾಗಿ ಆಳುತ್ತಿದ್ದರು. ವಿಜಯನಗರದ ಸುಪ್ರಸಿದ್ಧ ಸಾಮ್ರಾಟನಾದ ಕೃಷ್ಣದೇವರಾಯನು ಆ ವೇಳೆಗೆ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಸಾಮಂತಕುಮಾರ ವೀರಯ್ಯನ ಮಗಳಾದ ತಿರುಮಲಾದೇವಿ ಕೃಷ್ಣದೇವರಾಯ ಪಟ್ಟದ ರಾಣಿಯರಲ್ಲಿ ಒಬ್ಬಳು.[10] ತಿರುಮಲದೇವಿಯ ವಿವಾಹವು ಕ್ರಿ.ಶ. 1510ರಲ್ಲಿ ಈಗ ಹೊಸಕೋಟೆ ಎಂದು ಕರೆಯುವ **'ತಿರುಮಲ ದೇವಿಪಟ್ಟಣ'** ದಲ್ಲಿ ನಡೆಯಿತು. ತಿರುಮಲದೇವಿಅಮ್ಮನ್ ಕ್ರಿ.ಶ. 1513ರಲ್ಲಿ ತಿರುಮಲ ಶ್ರೀವೆಂಕಟೇಶ್ವರನಿಗೆ ಪೂಜಾದಿ ಕೈಂಕರ್ಯಗಳಿಗಾಗಿ ಚಿನ್ನದ ಬಟ್ಟಲನ್ನು ಕೊಡುಗೆಯಾಗಿ ಕೊಟ್ಟಳೆಂದು ತಿಳಿದುಬರುತ್ತದೆ.[11] ತಿರುವೆಂಗಳನಾಥದೇವರಿಗೆ 3742 ತೂಕದ ಚಿನ್ನದ ಪಾತ್ರೆಯನ್ನು ಪೂಜಾದಿಗಾಗಿ ಮತ್ತು 102 ತೂಕದ ಚಿನ್ನದ ತಟ್ಟೆಯನ್ನು ದೇವರಿಗೆ ಪುಷ್ಪಾರ್ಚನೆಗಾಗಿ ನೀಡಿದ ವಿಷಯವು ದಾಖಲೆಗಳಿಂದ ತಿಳಿದು ಬರುತ್ತದೆ.[12] ಕೃಷ್ಣದೇವರಾಯನು ಬಹುಪತ್ನಿಯರನ್ನು ಹೊಂದಿದ್ದುದು ಸರ್ವವಿಧಿತವಾಗಿದ್ದರೂ ಹಿರಿಯ ರಾಣಿ ಯಾರು ಎಂಬ ಬಗೆಗೆ ಜಿಜ್ಞಾಸೆಯಿದೆ. ಕ್ರಿ.ಶ. 1517ರ ಶಾಸನವು ತಿರುಮಲದೇವಿಯ ಪಟ್ಟಮಹಿಷಿ ಎಂಬ ಅಂಶವನ್ನು ದೃಢಪಡಿಸುತ್ತದೆ. ಆಕೆಯ ಉನ್ನತ ಸಂಸ್ಕಾರ ಮತ್ತು ರಸಿಕತೆಯನ್ನು ಗ್ರಹಿಸಿ ತುಂಗಭದ್ರ ತೀರದಲ್ಲಿ **"ಚಿತ್ರವಾಟಿಕಾ"** ಎಂಬ ಉದ್ಯಾನವನ್ನು ನಿರ್ಮಿಸಿದನು. ಈ ಚಿತ್ರವಾಟಿಕಾ ನಾಗಲಾಪುರಕ್ಕೆ 2 ಮೈಲು ದೂರದಲ್ಲಿದ್ದಿತು. ಇಷ್ಟೇ ಅಲ್ಲದೇ ಕೃಷ್ಣದೇವರಾಯನು ರಾಜಧಾನಿಯ ಒಂದು ಭಾಗವನ್ನು **'ತಿರುಮಲದೇವಿಪುರ'** ಎಂದು ನಾಮಕರಣ ಮಾಡಿದ್ದನು.[13] ರಾಣಿ ಚಿನ್ನಾದೇವಿ ನಾಗಮಂಗಲದ ಪಾಳೆಯಗಾರನ ಮಗಳೆಂದು ಇತ್ತೀಚೆಗೆ ದೊರೆತ ಕಾಮಿಡಿಹಳ್ಳಿ ಶಾಸನ ಹೇಳಿದೆ. ಆಕೆ ಸಂತಂ ತೋಟದ ಸಿದ್ದಲಿಂಗ ಯತಿಗಳಿಗೆ ಒಂದು ಗ್ರಾಮವನ್ನು 1521 ರಲ್ಲಿ ದಾನಕೊಟ್ಟಿದ್ದಳೆಂದು ಡಾ. ಸೂರ್ಯನಾಥ್ ಕಾಮತ್ ಅಭಿಪ್ರಾಯಪಟ್ಟಿದ್ದಾರೆ.[14]

ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನಿಗೆ ಪ್ರೀತಿ ಪಾತ್ರಳಾದ ತಿರುಮಲಾಂಬೆಯನ್ನು ಮಂಡ್ಯ ಪ್ರಾಂತ್ಯ ಒದಗಿಸಿಕೊಟ್ಟದ್ದು ಒಂದು ಅಭೂತಪೂರ್ವ ಅಂಶ. ಕ್ರಿ.ಶ. 1517 ರಲ್ಲಿ ಕೃಷದೇವರಾಯನು ಮತ್ತೊಂದು ಉಂಬಳಿಯನ್ನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾನಕ್ಕೆ ಮಾಡಿಕೊಟ್ಟ ವಿಷಯವು ತಿಳಿದುಬರುತ್ತದೆ.[15]

ಕೃಷ್ಣದೇವರಾಯನು ಉಮ್ಮತ್ತೂರು ರಾಜ್ಯವನ್ನು ಆಳುತ್ತಿದ್ದ ಗಂಗಶಾಖೆಯ ರಾಜನನ್ನು ಸೋಲಿಸಿ ಕ್ರಿ.ಶ. 1511 ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಉಮ್ಮತ್ತೂರು ಗಂಗರಸರ ಕಾಲದಲ್ಲಿ ಶಿವನ ಸಮುದ್ರವು ಒಂದು ಮುಖ್ಯ ಪಟ್ಟಣವಾಗಿತ್ತು. ಕೃಷ್ಣದೇವರಾಯನ ನಂತರ ಆಳಿದ ಅಚ್ಯುತರಾಯನೂ ಕ್ರಿ.ಶ. 1532 ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದನು.[16] ಕ್ರಿ.ಶ. 1521ರಲ್ಲಿ ನಾಗಮಂಗಲದ ಸಮಸ್ತ ಮಹಾಜನರು ವಿಠ್ಠಣ್ಣನೆಂಬುವನಿಗೆ, ಹೊಸಹಳ್ಳಿಗೆ ಪೂರ್ವಕ್ಕೆ ನದಿಯ ಹತ್ತಿರ ಕೆರೆಯೊಂದನ್ನು ಕಟ್ಟಲು ಒಂದು ಓಲೆಯನ್ನು ಕೊಟ್ಟರು. ಕೆರೆಯನ್ನು ಕಟ್ಟುವುದಕ್ಕೆ ಅವರು ವಿಠ್ಠಣ್ಣನಿಗೆ 'ಕೆರೆಗೊಡಂಗೆ' ಯಾಗಿ ಮಾಯಾದೇವಿ ಕೆರೆಯ ಹತ್ತಿರ ಭೂಮಿಯನ್ನು ಮತ್ತು ತೂಬಿನ ಕೆಳಗಡೆ ಹೊಲಗಳಲ್ಲಿ ಒಂದು ಭಾಗವನ್ನು ಕೊಟ್ಟರು. ನೀರಾವರಿ ಕಾರ್ಯಗಳನ್ನು ನಡೆಸಿದ ಶ್ರೀಮಂತ ವ್ಯಕ್ತಿಗಳನ್ನು ಅರಸರು ಪುರಸ್ಕರಿಸುತ್ತಿದ್ದರು.

ಹೀಗೆ ಮಂಡ್ಯ ಪ್ರದೇಶವು ವಿಜಯನಗರ ಸಾಮ್ರಾಟ ಕೃಷ್ಣದೇವರಾಯನ ಕಾಲದಲ್ಲಿ ಆಡಳಿತ ಸಾಂಸ್ಕೃತಿಕ ಕೇಂದ್ರವಾಗಿ ಬೆಳವಣಿಗೆಗೊಂಡು ರಾಜನಿಂದ ಹಲವು ದಾನದತ್ತಿಗಳನ್ನು ಪಡೆದು ಅಭಿವೃದ್ಧಿಗೊಂಡಿದೆ.

## ಅಡಿ ಟಿಪ್ಪಣಿಗಳು

1. MAR 1914, 15para 92-93
2. E.C. Vll. Ng. 160. 1513. A.D.P. 155-156
3. MAR. 1919. Para. 90
4. Mysore Gazetter p. 484
5. lbid. P. 1788
6. E.C. lV. Ng. 82 P. 389
7. E.C. Vl. PP. 135-P. 228.229
8. E.C. Vl PP. 134-1528. A.D
9. ಎ. ಮುರಿಗೆಪ್ಪ (ಸಂ.) – ಕೃಷ್ಣದೇವರಾಯ (ಆಯ್ದ ಲೇಖನ ಸಂಪುಟ) ಪುಟ– 106
10. QJMS. Xll. PP. 624-625.
11. TTD inscriptions lll.PP. 168-171.
12. N. Saraswathi : The position of Women dur ing Vijayanagara Period (1336-1646) P- 55
13. Mysore Gazetter Vol. 11 part 111. P-1789.
14. ಸೂರ್ಯನಾಥ್ ಕಾಮತ್ : ವಿಜಯನಗರದ ಕೃಷ್ಣದೇವರಾಯ: ಆಡಳಿತ ಮತ್ತು ಸಾಂಸ್ಕೃತಿಕ ಸಾಧನೆ–ಪುಟ–16
15. ಬಿ. ಷೇಕ್ ಅಲಿ (ಸಂ) : ಕರ್ನಾಟಕ ಚರಿತ್ರೆ, ಸಂ. 3–ಪುಟ –121.
16. E.C. lV. Ng. 82

■■

*– 96ನೇ ಪುಟದಿಂದ ಮುಂದುವರೆದುದು*

ಸಂಗೀತ ಗಾರರಗಾಯನ –ವಾದನಗಳಿಗೆ ಕೃತಿಗಳಾಗಿರುವುದನ್ನೂ ಉಲ್ಲೇಖಿಸಲೇಬೇಕು. ತನ್ಮೂಲಕ ಸಂಗೀತ ಕ್ಷೇತ್ರಕ್ಕೂ ಕನಕದಾಸರ ಕೊಡುಗೆ ಅನನ್ಯವಾದುದೆಂದು ಹೇಳಬಹುದು.

ಕನಕದಾಸರ ಕೃತಿಗಳನ್ನು ನಾವು ಭಾಷೆ, ಸಾಹಿತ್ಯ, ಜಾನಪದ, ಭಕ್ತಿ, ಉಪದೇಶ, ಅಧ್ಯಾತ್ಮ, ಲೌಕಿಕ–ಪಾರಲೌಕಿಕ ಹೀಗೆ ಹತ್ತು ಹಲವು ನೆಲೆಗಳಲ್ಲಿ ಅಧ್ಯಯನ ಮಾಡಿದರೂ ನಮ್ಮ ಜ್ಞಾನ ತೃಷೆಗೆ ಬೇಕಾದಷ್ಟು ಜಲಾಮೃತ ಬಿಂದುಗಳು ದೊರೆಯುವುದರಲ್ಲಿ ಅನುಮಾನವಿಲ್ಲ. 'ಕನಕ' ಎಂಬ ಪದವನ್ನು ಅಕ್ಷರಗಳ ದಿಕ್ಕಿಗೆ ಮುಮ್ಮುಖವಾಗಿ–ಹಿಮ್ಮುಖವಾಗಿ ಹೇಗೆ ಓದಿದರೂ 'ಕನಕ'ನೇ ಆಗಿ ಉಳಿಯುವುದು 'ಕನಕದಾಸರ' ಅನನ್ಯತೆಗೆ ಸಾಕ್ಷಿ ಎನ್ನಬಹುದೇನೋ !

## ಪರಾಮರ್ಶನ ಗ್ರಂಥಗಳು


- **ದೇ.ಜವರೇಗೌಡ (ಸಂ.) (2012) :** ಕನಕ ಸಾಹಿತ್ಯ ದರ್ಶನ ಸಂಪುಟ 1 – ಕನಕಾವಲೋಕನ (ಕನಕದಾಸರ ಜೀವನ ಕೃತಿಗಳನ್ನು ಕುರಿತ ಲೇಖನಗಳು) ಪ್ರಕಟಣೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ.
- **ಕಾ.ತ. ಚಿಕ್ಕಣ್ಣ (2015) :** ಕನಕ ಓದು – ಕನಕ ಅರಿವು ಶಿಬಿರದ ಕೈಪಿಡಿ, ಪ್ರಕಟಣೆ : ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ.


■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಲಿಂಗ ವ್ಯವಸ್ಥೆ, ವಲಸೆ ಮತ್ತು ಅಭಿವೃದ್ಧಿ

✍ **ಡಾ. ಯರ್ರಿಸ್ವಾಮಿ ಈ.** ಸಹಾಯಕ ಪ್ರಾಧ್ಯಾಪಕ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – 583276

1970ರ ದಶಕದ ವಲಸೆ ಕುರಿತ ಸಂಶೋಧನೆ ಮತ್ತು ನೀತಿಗಳಲ್ಲಿ ಲಿಂಗವ್ಯವಸ್ಥೆ ಪ್ರಮುಖ ವಿಷಯವಾಗಿರಲಿಲ್ಲ. ಇತ್ತೀಚಿಗೆ ಅಷ್ಟೇ ಮಹಿಳಾ ವಲಸೆಯನ್ನು ಗುರುತಿಸಲಾಯಿತು. ಇದನ್ನು ಸೂಚಿಸಲು ಸ್ತ್ರೀ ವಲಸೆ ಎಂಬ ಪದವನ್ನು ಬಳಕೆಗೆ ತರಲಾಯಿತು. ವಲಸೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧದಲ್ಲಿ ಮಹಿಳೆಯರು ಅಭಿವೃದ್ಧಿಯ ಸಾಧನಗಳಾಗುತ್ತಿರುವ ಕುರಿತು ರಾಜಕೀಯ ಆಸಕ್ತಿ ಲಕ್ಷ್ಯವಹಿಸಿತು. ಅಭಿವೃದ್ಧಿ ಸಾಧನಗಳಾದ ಮಹಿಳಾ ವಲಸೆ ಮತ್ತು ವಲಸೆ ಹೋದ ಮಹಿಳೆಯರು ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದು, ಅವನ್ನು ನಿವಾರಿಸಲು ವಲಸೆ ನೀತಿ ಸಂಬಂಧಿತ ಯೋಜನೆಗಳಲ್ಲಿ ಕೊರತೆಗಳಿರುವುದನ್ನು ಗುರುತಿಸಿತು. ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನಿಗದಿತ ಗುಂಪಾಗಿ ಪರಿಗಣಿತವಾಗಿದ್ದರೆ ಹೊರತು ಬದಲಾವಣೆಯ ಕ್ರಿಯಾತ್ಮಕ ಏಜೆಂಟ್‌ಯೆಂದು ಪರಿಗಣಿತವಾಗಿಲ್ಲ ಎಂಬುದು ಖಚಿತವಾಯಿತು. ಹಾಗೆಯೇ 1970ರಲ್ಲಿ ಬಂದ ಅಭಿವೃದ್ಧಿಯಲ್ಲಿ ಮಹಿಳೆ ಎಂಬುದರ ಉದ್ದೇಶ ಅಭಿವೃದ್ಧಿಯಲ್ಲಿ ಮಹಿಳೆಯನ್ನು ಒಳಗೊಳ್ಳಬೇಕೆಂಬುದಾಗಿತ್ತು. 1980ರ ದಶಕದ ಹೊತ್ತಿಗೆ ಲಿಂಗ ವ್ಯವಸ್ಥೆ ಮತ್ತು ಅಭಿವೃದ್ಧಿ ದೃಷ್ಟಿಕೋನವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಲಿಂಗ ವ್ಯವಸ್ಥೆ ಸಂಬಂಧಗಳನ್ನು ವಿವರಿಸುವ ಆಯಾಮಗಳನ್ನು ಒಳಗೊಂಡಿತು. ಇದರಿಂದಾಗಿ ನೀತಿ ನಿರೂಪಕರು ಮತ್ತು ಅಧ್ಯಯನಕಾರರು, ಅಭಿವೃದ್ಧಿ ಚಿಂತಕರು ಮಹಿಳಾ ಸಬಲೀಕರಣದ ತಂತ್ರಗಳಿಂದ ಲಿಂಗ ವ್ಯವಸ್ಥೆಯನ್ನು ಪ್ರಧಾನಧಾರೆಗೆ ತರಬೇಕೆಂದು ಸಾಂಸ್ಥೀಕರಣಗೊಳಿಸಿದರು. ಮಹಿಳೆಯರು ಅಭಿವೃದ್ಧಿಯಲ್ಲಿ ಸಾಧನವಾಗಿದ್ದಾಳೆ ಎಂಬುದನ್ನು ಪರಿಗಣಿಸಿದರು. ಆದರೆ ಈ ಚರ್ಚೆಗಳು ಮಹಿಳೆ ತಮ್ಮ ಸ್ವಾಯತ್ತತೆಗಾಗಿ ಕೌಟುಂಬಿಕ ಜವಾಬ್ದಾರಿ ಮತ್ತು ಸಿದ್ಧ ಮಾದರಿಯ ಪಾತ್ರಗಳ ಪ್ರತಿರೋಧದಲ್ಲಿ ಹೆಣಗಾಡುತ್ತಿರುವುದನ್ನು ತೋರಿಸಿದವು. ನವ ಉದಾರವಾದದ ಪುನರ್‌ರಚನೆಯು ಮಹಿಳೆಯರನ್ನು ಬಲಿಪಶುವನ್ನಾಗಿ ರೂಪಿಸುತ್ತದೆ ಮತ್ತು ಯಶಸ್ವಿಯಾದವರನ್ನಾಗಿ ನೋಡುತ್ತದೆ. ಈ ಎರಡು ಸನ್ನಿವೇಶಗಳ ಸ್ತ್ರೀಕರಣ ಎಂಬ ಪದ ಸಾಮಾಜಿಕ ಪ್ರಕ್ರಿಯೆಯ ಒಂದು ಭಾಗವಾಗಿರುವುದನ್ನು ಪತ್ತೆ ಹಚ್ಚಿತು. ಈ ತೆರನಾದ ಹೊಸ ವಿದ್ಯಮಾನದಿಂದಾಗಿ ಉತ್ಪಾದನೆಯಾಗುತ್ತಿರುವ ಹೊಸ ಜ್ಞಾನವು ಮಹಿಳೆಯರನ್ನು ಉದ್ದೇಶಿತ ಗುಂಪುಗಳನ್ನಾಗಿ ಮಾಡುವ ರಾಜಕೀಯ ತಂತ್ರಗಾರಿಕೆ ಎಂಬುದು ಸ್ಪಷ್ಟವಾಯಿತು.

ಸ್ತ್ರೀವಾದಿ ಸಂಶೋಧನೆಯಲ್ಲಿ ಲಿಂಗ ವ್ಯವಸ್ಥೆ ಪರಿಕಲ್ಪನೆಯನ್ನು ಸಂಕೀರ್ಣಗೊಳಿಸಲಾಗುತ್ತಿದೆ. ತುಲನಾತ್ಮಕವಾಗಿ ಲಿಂಗವ್ಯವಸ್ಥೆ ಯೋಚನೆಗಳನ್ನು ಸಾಮಾನ್ಯೀಕರಣ ಗೊಳಿಸುವಲ್ಲಿ, ಬಡತನದ ಸ್ತ್ರೀಕರಣ ಮತ್ತು ಶ್ರಮದ ಸ್ತ್ರೀಕರಣವು ಲಿಂಗ ವ್ಯವಸ್ಥೆ ಮರುರೂಪಿಕೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಬಡತನದ ಸ್ತ್ರೀಕರಣವು ರಚನಾತ್ಮಕ ಹೊಂದಾಣಿಕೆಯ ಕಾರ್ಯಕ್ರಮ ಮತ್ತು ಕೃಷಿ ಬದಲಾವಣೆ ಅಥವಾ ಮಾರುಕಟ್ಟೆ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಮೊದಲ ಬಲಿಪಶುಗಳನ್ನಾಗಿ ಮಾಡುತ್ತದೆ. 1980ರಿಂದ ಪ್ರಾರಂಭವಾದ ಉದಾರೀಕರಣ ನೀತಿ ಮತ್ತು ಮೈಕ್ರೊ ಆರ್ಥಿಕತೆಯ ಸುಧಾರಣೆಗಳಿಂದಾಗಿ ಹೊಸದೊಂದು ಚರ್ಚೆ ನಡೆಯಲು ಪ್ರಾರಂಭವಾಯಿತು. ಅದುವೇ ಶ್ರಮದ ಸ್ತ್ರೀಕರಣ. ರಫ್ತು ವಲಯಗಳಲ್ಲಿ ಮಹಿಳೆಯರನ್ನು ಅಭಿವೃದ್ಧಿ ಪ್ರಕ್ರಿಯೆಯ ಕೇಂದ್ರವನ್ನಾಗಿ ಮಾಡಲಾಗುತ್ತದೆ. ಇದನ್ನು ಮಹಿಳೆಯ ಸಬಲೀಕರಣದ ಹೊಸ ಆರ್ಥಿಕ ಉತ್ಪಾದನೆಯ ಅವಕಾಶಗಳು ಎಂಬ ವಾದವನ್ನು ಅಕಾಡೆಮಿಕ್, ರಾಜಕೀಯ ವಲಯದಲ್ಲಿ ಮಂಡಿಸಲಾಗುತ್ತದೆ. ಇದನ್ನು ಮಹಿಳೆಯ ಯಶಸ್ಸು ಎಂದು ನೋಡಲಾಗುತ್ತದೆ. ಆದರೆ ವಾಸ್ತವದಲ್ಲಿ ಇದರಿಂದ ಮಹಿಳೆಯರು ಬಳಲುತ್ತಿದ್ದಾರೆ. ಏಕೆಂದರೆ ಹೊಸ ವಲಯಗಳ ಕೆಲಸದ ಸ್ಥಿತಿಗತಿ, ಕಡಿಮೆ ಸಂಬಳ ಮತ್ತು ಕೌಟುಂಬಿಕ ಜೀವನ ನಿರ್ವಹಣೆ ಮತ್ತು ಜವಾಬ್ದಾರಿ ಹೆಚ್ಚಾಗುತ್ತದೆ.

ಸ್ತ್ರೀವಾದಿಗಳು ಅಭಿವೃದ್ಧಿಯಲ್ಲಿ ಮಹಿಳೆಯರು ಪ್ರಮುಖವೆಂದು ಬಿಂಬಿಸುತ್ತಿದ್ದಾರೆ. ಈ ಮೂಲಕ ಮಹಿಳೆಯರ ಕೆಲವು ಚಿತ್ರಗಳನ್ನು ಚಿತ್ರಿಸುವಂತೆ ಕಂಡುಬರುತ್ತದೆ. ಹೇಗೆಂದರೆ ಜವಾಬ್ದಾರಿಯುತ ತಾಯಿಯಾಗಿ, ಹಲವು ಕೆಲಸಗಳನ್ನು ಏಕಕಾಲಕ್ಕೆ ಮಾಡಬಹುದಾದ ವ್ಯಕ್ತಿಯಾಗಿ, ತುಂಬಾ ಪರಿಶ್ರಮದ ಕೆಲಸಗಳನ್ನು ನಿಷ್ಠೆಯಿಂದ ಮಾಡಬಹುದಾದ ವ್ಯಕ್ತಿಯಾಗಿ, ಮಹಿಳಾ ರಾಜಕಾರಣಿಯಾಗಿ, ತುಂಬಾ ಕಡಿಮೆ ಭ್ರಷ್ಟಾಚಾರಿ, ದೂರದೃಷ್ಟಿಯುಳ್ಳ ಉದ್ಯಮಶೀಲೆ, ಉತ್ತಮ ಮಾರ್ಗದಲ್ಲಿ ಹಣ ಗಳಿಸುವವಳು ಇತ್ಯಾದಿಯಾಗಿ ಈ ತೆರನಾದ ಪ್ರತೀಕಗಳು ಮಹಿಳೆಯ ಬದುಕನ್ನು ಉತ್ತಮಪಡಿಸುವ ತಂತ್ರಗಳ ಸ್ವರೂಪವನ್ನು ಒಳಗೊಂಡಿವೆ. ಇವು ವಿಶೇಷವಾಗಿ ಲಿಂಗ ವ್ಯವಸ್ಥೆ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರಭಾವ ಬೀರುತ್ತವೆ ಹೊರತು ಪ್ರತ್ಯೇಕವಾಗುವುದಿಲ್ಲ. ಆದರೆ ಸತ್ಯ ಸಂಗತಿ ಏನೆಂದರೆ ಮಹಿಳಾ ಏಜೆನ್ಸಿಗಳು ಕುರಿತ ಈ ಚಿತ್ರಗಳು ಮಹಿಳೆಯರ ಉತ್ಪಾದನೆ ಮತ್ತು ಪುನರುತ್ಪಾದನೆ ಮಾಡುತ್ತಾರೆ ಎಂಬುದನ್ನು ಉಲ್ಲೇಖಿಸುವುದಿಲ್ಲ.

ಅಭಿವೃದ್ಧಿಯಲ್ಲಿ ಸಹ–ಸ್ಪರ್ಧೆಯಿದೆ. ಆದರೂ ಸಹ ಅಭಿವೃದ್ಧಿಯ ದೃಷ್ಟಿಕೋನಗಳಿವೆ. ಪ್ರಧಾನ ಧಾರೆ ಚಿಂತನೆಗಳು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಮಾರುಕಟ್ಟೆ ಬೆಳವಣಿಗೆ ಕೇಂದ್ರಿತ ಅಭಿವೃದ್ಧಿಯನ್ನು ಕೇಂದ್ರಿಕರಿಸುತ್ತವೆ. ಈ ತೆರನಾದ ಸಂದರ್ಭದಲ್ಲಿ ಮಹಿಳಾ ಸಬಲೀಕರಣ ಪರಿಗಣಿತವಾಗುವುದು ಪ್ರಧಾನ ಧಾರೆಯ ತಂತ್ರ ಮತ್ತು ಆಸಕ್ತಿಗಳಿಂದ. ಸಾಮಾನ್ಯ ಅರ್ಥದಲ್ಲಿ ಹೇಳಬೇಕೆಂದರೆ ಸಾಮಾಜಿಕವಾಗಿ ಲಿಂಗ ವ್ಯವಸ್ಥೆ ಸಂಬಂಧಗಳ ಬದಲಾವಣೆಯನ್ನು ಮುಂದೆ ಮಾಡಿಕೊಂಡು ಹೋಗಲಾಗುತ್ತಿದೆ. ಅಭಿವೃದ್ಧಿಶೀಲರಿಗೆ ತಮ್ಮ ಆರ್ಥಿಕತೆ ಅಭಿವೃದ್ಧಿ ತಲುಪಲು ಇದು ಸಹಾಯ ಮಾಡುತ್ತದೆ. ವಲಸೆ ಮತ್ತು ಅಭಿವೃದ್ಧಿ ಮೇಲಿನ ಚರ್ಚೆಯಲ್ಲಿ ಹೆಣ್ಣುಮಕ್ಕಳ ಆಸಕ್ತಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ಅಂತಾರಾಷ್ಟ್ರೀಯ ವಲಸೆಯಲ್ಲಿನ ಸಂಖ್ಯಾತ್ಮಕ ಹೆಚ್ಚಳ, ವಲಸಿಗರ ಹಣ ರವಾನೆಯ ಹೆಚ್ಚಳದೊಂದಿಗೆ ಕಂಡುಬರುತ್ತದೆ.

ಅಂತಾರಾಷ್ಟ್ರೀಯ ವಲಸೆಯಲ್ಲಿ ಶೇ. 50ರಷ್ಟು ಮಹಿಳೆಯರ ವಲಸೆ ನಡೆಯುತ್ತಿದೆ. ಇದು ದಿನದಿಂದ ದಿನಕ್ಕೆ ಹೆಚ್ಚಾಗುವುದು ವಲಸೆಯ ಸ್ತ್ರೀಕರಣವಾಗುತ್ತಿದೆ ಎಂಬುದನ್ನು ಅಂಕಿ ಅಂಶಗಳು ತೋರಿಸುತ್ತವೆ. ಇದು ಅಂತಾರಾಷ್ಟ್ರೀಯ ವಲಸೆಯ ಸವಾಲಾಗಿದೆ. ಏಕೆಂದರೆ ಮೊದಲು ಗಡಿಯನ್ನು ಕೇವಲ ಯುವಪುರುಷರು ದಾಟುತ್ತಾರೆ ಎಂಬುದಾಗಿತ್ತು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಾಂಪ್ರದಾಯಿಕ ಸಂಸ್ಕೃತಿ ಮಹಿಳಾ ವಲಸೆಗಾರರನ್ನು ಕುಟುಂಬದ ವಲಸೆಯ ಜೊತೆಗೆ ಗುರುತಿಸಲಾಗುತ್ತಿತ್ತು. ಹಾಗೆಯೇ ಜಾಗತಿಕ ಸೆಕ್ಸ್ ಉದ್ಯಮ ಹೆಚ್ಚಾಗುತ್ತಿರುವುದರಿಂದ ಮಹಿಳೆಯರು ಬಲಿಪಶುಗಳಾಗುತ್ತಿರುವುದನ್ನು ಗುರುತಿಸಲಾಗುತ್ತಿತ್ತು. ಕೇವಲ ಇತ್ತೀಚೆಗಷ್ಟೇ ಮಹಿಳೆಯ ಸ್ವಾಯತ್ತತೆ, ಸ್ವತಂತ್ರತೆ ಹೆಚ್ಚಾಗುತ್ತಿರುವುದರಿಂದ ವಲಸೆ ಪ್ರಕ್ರಿಯೆಯಲ್ಲಿ ಮಹಿಳೆಯನ್ನು ವಿಶೇಷವಾಗಿ ಗುರುತಿಸಲು ಪ್ರಾರಂಭಿಸಲಾಗಿದೆ. ವಲಸೆ ಕುರಿತ ಸಂಶೋಧನೆಯಲ್ಲಿ ವಲಸೆ ಮಹಿಳೆಯರು ವಿದೇಶದಿಂದ ಮರಳಿದಾಗ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುವುದಿಲ್ಲ. ವಲಸೆಯ ಸ್ತ್ರೀಕರಣದ ಆವಿಷ್ಕಾರವು ಮೊದಲೇ ಹೇಳಿದಂತೆ ಜಾಗತಿಕರಣ ಪ್ರಕ್ರಿಯೆಯ ಪರಿಣಾಮದಿಂದ ಹೆಚ್ಚಿನ ಚಲನಶೀಲತೆ ಪಡೆದುಕೊಂಡಿದೆ. 'ವಲಸೆಯ ವಯಸ್ಸು' ಪದವನ್ನು ವಲಸೆಯ ಹೊಸ ವಿಧವಾದ ವಲಸೆಯ ಸ್ತ್ರೀಕರಣ ಮತ್ತು ಹೆಚ್ಚಾಗುತ್ತಿರುವ ಚಲನಶೀಲತೆಯನ್ನು ಸೂಚಿಸಲು ಬಳಸಲಾಗುತ್ತಿದೆ. ಜಗತ್ತಿನಾದ್ಯಂತ ಮಹಿಳಾ ಚಲನಶೀಲತೆಯ ಪರಿಮಾಣಾತ್ಮಕ ಹೆಚ್ಚಳವನ್ನು ಗುರುತಿಸಬಹುದಾಗಿದೆ. ಯುರೋಪ ಮತ್ತು ಲ್ಯಾಟಿನ್ ಅಮೇರಿಕಾದಲ್ಲಿ ಕೇವಲ ತಾತ್ಕಾಲಿಕ ವಲಸೆ ಕಾರ್ಮಿಕರಂತೆ ಮಹಿಳೆಯರು ವಲಸೆ ಹೋಗುತ್ತಿಲ್ಲ. ಸ್ತ್ರೀವಾದಿಗಳ ಅಧ್ಯಯನ ಮತ್ತು ಲಭ್ಯವಿರುವ ಮಾಹಿತಿ ಮತ್ತು ಐತಿಹಾಸಿಕ ಸಂಶೋಧನೆಗಳ ಪ್ರಕಾರ ಮಹಿಳೆಯ ವಲಸೆ ಹೊಸ ವಿದ್ಯಮಾನವೇನಲ್ಲ, ಅಂತಾರಾಷ್ಟ್ರೀಯ ವಲಸೆಯ ಬೆಳವಣಿಗೆ ಆಸಕ್ತಿಯನ್ನು ಹುಟ್ಟಿಸುತ್ತದೆ, ಅದರಲ್ಲಿ ಮಹಿಳೆಯರು ಜ್ಞಾನ ಮತ್ತು ಹಣದ ಹರಿವಿನ ನಾಯಕಿಯರಾಗುತ್ತಿದ್ದಾರೆ. ಅಂತಾರಾಷ್ಟ್ರೀಯ ಸಂಸ್ಥೆ ಮತ್ತು ಸಂಘಟನೆಯಲ್ಲಿ ಈ ತೆರನಾದ ಹರಿವು ಸಕಾರಾತ್ಮಕ ಪರಿಣಾಮವನ್ನುಂಟು ಮಾಡುತ್ತಿದೆ. ಈ ದೃಷ್ಟಿಕೋನವು ಅಭಿವೃದ್ಧಿ ವಿಧಾನಗಳು ವಲಸಿಗರನ್ನು ಕಳುಹಿಸುವ ರಾಷ್ಟ್ರಗಳ ಮೇಲೆ ನಿರ್ಣಾಯಕ ಪಾತ್ರವಹಿಸುತ್ತದೆ. ಅಭಿವೃದ್ಧಿ ಮತ್ತು ವಲಸೆಯ ಸಂಶೋಧನೆಯೊಳಗೆ ನಿರ್ದಿಷ್ಟವಾಗಿ ಹೇಳಬೇಕೆಂದರೆ ಹಣದ ಸಂದಾಯವು ಅಭಿವೃದ್ಧಿ ಪ್ರಕ್ರಿಯೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎನ್ನುವುದು ಇನ್ನು ಚರ್ಚಿತವಾಗದ ವಿಷಯವಾಗಿದೆ. ಯೋಜನೆ ನಿರೂಪಕರು ಮತ್ತು ಸಂಸ್ಥೆಗಳು ವಲಸಿಗರ ಮೂಲರಾಷ್ಟ್ರದ ಅಭಿವೃದ್ಧಿ ಮತ್ತು ಬದಲಾವಣೆಯ ಕುರಿತು ಹೆಚ್ಚಿನ ಗಮನವನ್ನು ಕೇಂದ್ರೀಕರಿಸುತ್ತಿಲ್ಲ.

ಅಧ್ಯಯನಗಳ ಚರ್ಚೆಯಲ್ಲಿ ಮಹಿಳಾ ವಲಸೆಗಾರರು 'ಹೊಸ ಅಭಿವೃದ್ಧಿ ಪಾತ್ರಧಾರಿ'ಗಳಾಗಿ ಪ್ರವೇಶಿಸಿದ್ದಾರೆ. ಅಂತಾರಾಷ್ಟ್ರೀಯ ವಲಸೆಗಾರರ ಕುರಿತ ವರದಿಯಲ್ಲಿ ಮಹಿಳಾ ವಲಸಿಗರು ಹೆಚ್ಚು ಹಣವನ್ನು ನಿರಂತರವಾಗಿ ಸಂದಾಯ ಮಾಡುತ್ತಾರೆ. ತಮ್ಮ ಪುರುಷ ಸಂಗಾತಿಗಳಿಗಿಂತ ಹೆಚ್ಚು ದಕ್ಷತೆಯಿಂದ ಸ್ಥಳೀಯ ಅಭಿವೃದ್ಧಿಗೆ ಹಣವನ್ನು ರವಾನೆ ಮಾಡುತ್ತಾರೆ. ಈ ಹೇಳಿಕೆಯು ಲಿಂಗ ವ್ಯವಸ್ಥೆ ಮತ್ತು ಅಭಿವೃದ್ಧಿ ಶಿಸ್ತಿನಲ್ಲಿನ ಪಾತ್ರವನ್ನು ಗಟ್ಟಿಗೊಳಿಸುತ್ತದೆ, ಮಹಿಳೆಯರು ತಮ್ಮ ಕುಟುಂಬ ಮತ್ತು ಸಮುದಾಯದ ಜವಾಬ್ದಾರಿಯನ್ನು ಹೆಚ್ಚು ದಕ್ಷತೆ, ಬದ್ಧತೆಯಿಂದ ನಿಭಾಯಿಸುತ್ತಾರೆ ಎಂಬುದು. ಆದ್ದರಿಂದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಮಹಿಳಾ ವಲಸೆಗಾರರಿಗೆ ಬೆಂಬಲಿಸುವಂತೆ ರಚಿಸಬೇಕು ಮತ್ತು ಮನೆಗೆ ಕಳುಹಿಸುವ ಹಣದ ಮೇಲೆ ಹೆಚ್ಚು ನಿಯಂತ್ರಣವನ್ನು ಮಹಿಳಾ ವಲಸೆಗಾರರು ಹೊಂದಬೇಕು. ಒಂದು ವೇಳೆ ಅವರು ಹಣವನ್ನು ಸ್ವೀಕರಿಸುವವರಾಗಿದ್ದಾರೆ ಅವರಿಗೆ 'ಆರ್ಥಿಕತೆಯ ಸಾಕ್ಷರತೆ' (Financial Literacy) ಯಂತಹ ತರಬೇತಿ ನೀಡುವಂತಹ ಕಾರ್ಯಕ್ರಮಗಳನ್ನು ಮಾಡಬೇಕು. ಈ ತೆರನಾದ ಪ್ರಸ್ತಾವನೆಗಳು ಪರಿಭಾವಿಸುವುದೇನೆಂದರೆ ಹಣ ರವಾನೆ ಯಾಗುವುದು ನೇರವಾಗಿ ಅಭಿವೃದ್ಧಿಯನ್ನು ಹೆಚ್ಚು ತೀವ್ರಗೊಳಿಸುತ್ತದೆ ಮತ್ತು ವಿವಿಧ ಹಂತದ ಬಡತನ ನಿರ್ಮೂಲನವನ್ನು ಮಾಡುತ್ತದೆ ಎಂಬುದಾಗಿದೆ.

ಕೆಲವು ಅಧ್ಯಯನಗಳು ಹಣ ರವಾನೆ ಮಾಡುವ ಸ್ತ್ರೀ–ಪುರುಷರ ನಡುವಿನ ವ್ಯತ್ಯಾಸಗಳ ಕುರಿತು ಗಮನ ಹರಿಸಿಲ್ಲ. ಮಹಿಳಾ ವಲಸೆಗಾರರ ಹಣ ಸಂದಾಯ ಮತ್ತು ಅಭಿವೃದ್ಧಿ ಹಾಗೂ ಪರಿಣಾಮದ ಕುರಿತ ಪ್ರಾಯೋಗಿಕ ಅಧ್ಯಯನ ಮಾಡಿಲ್ಲ. INSTRAW ಎಂಬ ಅಂತಾರಾಷ್ಟ್ರೀಯ ಸಂಸ್ಥೆಯು ಹಲವು ಪ್ರಕರಣಗಳ ಅಧ್ಯಯನ ಮಾಡಿ ಮಹಿಳೆಯರು ನಿರಂತರವಾಗಿ ಹಣವನ್ನು ಕಳುಹಿಸುತ್ತಾರೆ. ತಮ್ಮ ದೇಶದಿಂದ ಬಂದ ಕರೆಗೆ ಸಕಾರಾತ್ಮಕವಾಗಿ ಉತ್ತರಿಸುತ್ತಾರೆ ಎಂಬ ಅಂಶವನ್ನು ಹೊರಗೆಡುಹಿತು. ಪುರುಷ ವಲಸೆಗಾರರಿಗಿಂತ ಮಹಿಳಾ ವಲಸಿಗರು ತಮ್ಮ ಕಡಿಮೆ ಸಂಬಳದ ಹೆಚ್ಚು ಭಾಗವನ್ನು ಸಂದಾಯ ಮಾಡಿ ಹೆಚ್ಚು ವಿಶ್ವಾಸಾರ್ಹ ವ್ಯವಸ್ಥಾಪಕರಾಗಿದ್ದಾರೆ.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಘಟನೆಗಳು ಮಹಿಳಾ ವಲಸಿಗರನ್ನು ದಶಕಗಳಿಂದ ನೋಡುತ್ತಿದ್ದಾರೆ. ಅವರು ಕುಟುಂಬ ಮತ್ತು ಸಮುದಾಯಗಳ ಅಭಿವೃದ್ಧಿಯಲ್ಲಿ ಉದ್ಯಮಿಗಳಾಗಿ ಪ್ರಜ್ಞಾಪೂರ್ವಕವಾಗಿ ಭಾಗಿಯಾಗುತ್ತಿದ್ದಾರೆ. ಕಾರ್ಮಿಕರ ತಾತ್ಕಾಲಿಕ ವಲಸೆಯಲ್ಲಿ ಮಹಿಳಾ ವಲಸೆಗಾರರು ಹೆಚ್ಚಾಗುತ್ತಿದ್ದಾರೆ. ಶಾಶ್ವತವಾದ ವಲಸೆಯ ಹಣದ ಹರಿವಿಗಿಂತ ತಾತ್ಕಾಲಿಕ ವಲಸೆಯ ಹಣದ ಹರಿವು ಹೆಚ್ಚಾಗಿದೆ. ಇದು ಕೌಶಲ್ಯರಹಿತ ವಲಸಿಗರ ಸೂಚಕವೂ ಆಗಿದೆ. ಇದು ಪಾಲಸಿಗಳ ಪರಿಣಾಮದಿಂದ ಆಗಿಲ್ಲ. ಉದಾಹರಣೆಗೆ ಬ್ಯಾಂಕಿಂಗ್ ಸೇವೆ ಮಹಿಳೆಯರಿಗೆ ಸುರಕ್ಷಿತ ಹಣದ ವರ್ಗಾವಣೆ ಮಾಡುತ್ತದೆ ಇದರಂತೆ ರಾಜ್ಯ ಸರ್ಕಾರಗಳು ಮಹಿಳೆಯರು ವಲಸೆ ಹೋಗುವಂತೆ ಪ್ರೇರೆಪಿಸುತ್ತಿಲ್ಲ ಮಾತ್ರವಲ್ಲದೆ ಅವರ ಮೇಲಿರುವ ನಿಷೇಧಗಳನ್ನು ಕಡಿಮೆಗೊಳಿಸುತ್ತಿವೆ. ಕೆಲವು ದೇಶ–ಪ್ರದೇಶಗಳಲ್ಲಿನ ಉತ್ತಮವಾದ ಹಣದ ರವಾನೆ, ಅಧಿಕಾರ, ಪ್ರಾಧಿಕಾರ ಮತ್ತು ಜ್ಞಾನದ ಪರಿಕಲ್ಪನೆಗಳು ಮಹಿಳಾ ವಲಸಿಗರ ನಿರ್ಧಾರವನ್ನು ಮಾಡುತ್ತವೆ. ವಲಸೆಯ ಗುಂಪಿನ ನಿರೀಕ್ಷಿತಗಳನ್ನು ಅಭಿವೃದ್ಧಿ ಚಟುವಟಿಕೆಗಳು ಪ್ರವೇಶ ಪಡೆದಿಲ್ಲ. ವಲಸೆ, ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿಯ ಸಂಬಂಧ ಸಂಕೀರ್ಣತೆಯಿಂದ ಕೂಡಿದೆ. ಇದು ಅವಲಂಬಿತವಾಗುವುದು ವಲಸಿಗರ ಲಿಂಗ ವ್ಯವಸ್ಥೆ ಸ್ವರೂಪ, ಅಭಿವೃದ್ಧಿಯ ಅರ್ಥೈಸುವಿಕೆ ಮತ್ತು ಹಣದ ಹರಿವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾದ ತುರ್ತುಯಿದೆ.

ರಾಷ್ಟ್ರೀಯ ಮಟ್ಟದ ಆರ್ಥಿಕ ಬೆಳವಣಿಗೆಯಲ್ಲಿ ವಲಸೆಯ ಪ್ರದೇಶ ಅಥವಾ ಸಮುದಾಯಗಳ ಸಾಮಾಜಿಕ ರೂಪಾಂತರವನ್ನು ಪರಿಗಣಿಸುವುದಿಲ್ಲ. ಆದಕಾರಣ ಕೆಲವು ಲೇಖಕರು "ಸಾಮಾಜಿಕ ಹಣ ಹೂಡಿಕೆ" ಪದವನ್ನು ಪರಿಚಯಿಸಿದರು. ಇದು ದೇಶಗಳು ಸ್ವೀಕರಿಸುವ ಮತ್ತು ಕಳುಹಿಸುವ ಸಾಮಾಜಿಕ ಬಂಡವಾಳದ ಹರಿವು, ಯೋಚನೆ, ಆಚರಣೆಗಳನ್ನು ಸೂಚಿಸಲು ಬಳಸಿದರು. ಇದೇ ವೇಳೆಗೆ ಅವರು ರಾಷ್ಟ್ರ ವಲಸಿಗರನ್ನು ಕಳುಹಿಸುವ ಮತ್ತು ಸ್ವೀಕರಿಸುವ ಚೌಕಟ್ಟನ್ನು ಮೀರಿದ ಚಟುವಟಿಕೆಯಾಗಿದೆ ಎಂಬುದನ್ನು ಗಮನಿಸಿದರು. ಆದರೆ ಲಿಂಗವ್ಯವಸ್ಥೆ ಸ್ವರೂಪದ ಚಟುವಟಿಕೆಯ ಅನನ್ಯತೆಯನ್ನು ಗುರುತಿಸಲಿಲ್ಲ. ಹೀಗಿದ್ದರೂ ನಂತರ ವಲಸೆಯ ಪ್ರಕ್ರಿಯೆ ಜಂಡರ್ ಆಯಾಮಗಳ ಕುರಿತು ವಿವರಿಸುವಾಗ ಅಭಿವೃದ್ಧಿಯ ದೂರದೃಷ್ಟಿ ವಲಸೆ ಪ್ರಕ್ರಿಯೆಯಿಂದ ಹೇಗೆ ಬದಲಾಯಿತು ಎಂಬುದನ್ನು ತೋರಿಸಿತು. ಲಿಂಗ ವ್ಯವಸ್ಥೆ ಕುರಿತ ಆದರ್ಶ ಯೋಚನೆಗಳು ಈ ದೂರದೃಷ್ಟಿಗೆ ಅಗತ್ಯವಾದ ಭಾಗವಾದವು. ಇವು ವೈಯಕ್ತಿಕ ಮಹತ್ವಾಕಾಂಕ್ಷೆ ಮತ್ತು ಸಾಮಾಜಿಕ ರೂಪಾಂತರ ನಡುವಿನ ಗಡಿಗಳನ್ನು ಎಳೆದು ವ್ಯಾಪಕವಾಗಿ ವಿಸ್ತರಿಸಿದವು. ಈ ತೆರನಾದ ಬದಲಾವಣೆ ವಲಸಿಗರನ್ನು ಕಳುಹಿಸುವ ದೇಶದ ಆರ್ಥಿಕ ಬೆಳವಣಿಗೆಯಿಂದ ವಲಸಿಗರ ವೈಯಕ್ತಿಕ ಜೀವನದಲ್ಲಿ ಆದ ಬದಲಾವಣೆಗೆ ಸಂಬಂಧಿಸಿದ ಸಂಗತಿಗಳನ್ನು ಚರ್ಚೆಯಲ್ಲಿ ತಂದವು.

ವಿಭಿನ್ನ ಅಭಿವೃದ್ಧಿ ದೃಷ್ಟಿಕೋನಗಳ ಹೊರತಾಗಿಯೂ ಮಹಿಳಾ ವಲಸೆಗಾರರು ತಮ್ಮ ಚಲನೆಯನ್ನು ನ್ಯಾಯಸಮ್ಮತಗೊಳಿಸಲು ಅಥವಾ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಾಮಾಜಿಕ ಜವಾಬ್ದಾರಿಯಿಂದ ಹಣವನ್ನು ಕಳುಹಿಸುತ್ತಾರೆ. ಆದರೆ ವಲಸೆ ಇಲ್ಲದ ಸಂದರ್ಭದಲ್ಲಿ ಅಥವಾ ಹಣ ಹೂಡಿಕೆಗೆ ಬದಲಾಗಿ ಲಿಂಗಸಂಬಂಧಗಳನ್ನು ತಪ್ಪಿಸಲು ಮಹಿಳೆಯರಿಗೆ ಅವಕಾಶ ನೀಡದೆ ಇರಬಹುದಾಗಿದೆ. ಕುಟುಂಬ, ಕುಟುಂಬದೊಳಗಿನ ಅಧಿಕಾರ ರಚನೆಗಳು ಹಣವನ್ನು ಕಳುಹಿಸುವುದು, ಬಳಸಿಕೊಳ್ಳುವುದರ ಮೇಲೆ ಅವಲಂಬಿತವಾಗಿವೆ. ಏಕೆಂದರೆ ಅವರ ಹಣ ರವಾನೆಯು ಇನ್ನೂ ಪುರುಷರ ಕೈಯಲ್ಲಿಯೇ ಅಥವಾ ಅವರ ಕೈಗಳ ಮೂಲಕ ಹರಿದು ಹೋಗುತ್ತದೆ. ಆದ್ದರಿಂದ ಮಹಿಳಾ ವಲಸೆಗಾರರು ಹಣ ರವಾನೆ ಮಾಡುತ್ತಿದ್ದರೆ ವಲಸೆ, ಅಭಿವೃದ್ಧಿ ಮತ್ತು ಜಂಡರ್ ಸಂಬಂಧದ ಮೇಲೆ ಪರಿಣಾಮ ಬೀರುತ್ತದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದು ಕೇವಲ ರಚನಾತ್ಮಕ ಬದಲಾವಣೆಯನ್ನು ತೋರಿಸುವುದಿಲ್ಲ, ಮಹಿಳೆಯ ಹೆಚ್ಚುವರಿ ಸಾಧನೋಪಕರಣಕ್ಕೂ ಕಾರಣವಾಗುತ್ತದೆ.

ಲಿಂಗ ವ್ಯವಸ್ಥೆ ಸಂಬಂಧಗಳು ಮತ್ತು ರಚನಾತ್ಮಕ ಬದಲಾವಣೆಗಳ ವಿಚಾರ ವಿನಿಮಯಕ್ಕೆ ಹಣದ ಹರಿವು ಕಾರಣವಾಗುತ್ತದೆಂದು ಹೇಳಲು ಆಗುವುದಿಲ್ಲ. ಉದಾಹರಣೆಗೆ ಬಾಂಗ್ಲಾದೇಶದ ಮಹಿಳಾ ವಲಸೆಗಾರರು ಮರಳಿದ ನಂತರ ಸ್ಥಳೀಯವಾಗಿ ಸ್ಪರ್ಧಿಸಲು ಮತ್ತು ಜಂಡರ್ ಸಂಬಂಧಗಳ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪರಿಣಾಮ ಬೀರಲು ಹಣದ ಹರಿವು/ಸಂದಾಯವು ಪ್ರಮುಖವಾದ ಅಂಶವಾಗಿದೆ. ಆದರೆ ಮಹಿಳಾ ವಲಸೆಗಾರರಿಗೆ ಸಂಘಟನೆಯ ಬೆಂಬಲವಿಲ್ಲದಿದ್ದರೆ, ಸ್ಥಳೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಯ ಕುರಿತು ಮಾತುಕತೆ ನಡೆಸಲು ಸಾಧ್ಯವಾಗುವುದಿಲ್ಲ. ಬದಲಾಗುತ್ತಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಜಂಡರ್ ಸಂಬಂಧಗಳು ಮಹಿಳಾ ವಲಸೆಗಾರರ ವೈಯಕ್ತಿಕ ಹೋರಾಟದಿಂದ ಮಾತ್ರ ಸಾಧ್ಯವಾಗುತ್ತದೆ. ಮಹಿಳಾ ವಲಸೆಗಾರರ ಅಭಿವೃದ್ಧಿ ದೃಷ್ಟಿಕೋನವನ್ನು ಸರ್ಕಾರೇತರ ಸಂಸ್ಥೆಗಳು ಮತ್ತು ಇತರೆ ನಾಗರಿಕ ಸಮಾಜದ ಸದಸ್ಯರು ಕೇಳುವುದಿಲ್ಲ. ಅವರಿಗೆ ತಮ್ಮದೇ ಆದ ಅಭಿವೃದ್ಧಿ ದೃಷ್ಟಿಕೋನಕ್ಕೆ ಸಹಕರಿಸದಿದ್ದರೆ ಜಂಡರ್ ಸಂಬಂಧಗಳು ಸಾಮಾಜಿಕ ಬದಲಾವಣೆಗಳಿಗಾಗಿ ಮಾತುಕತೆ ಮಾಡುವುದು ಕಷ್ಟವಾಗುತ್ತದೆ.

ಮತ್ತೊಂದೆಡೆ ಆಫ್ರಿಕನ್ ಮಹಿಳಾ ವಲಸೆಗಾರರು ಜರ್ಮನಿಯ ಉತ್ತರ ರೈನ್ ವೆಸ್ಟಾಲಿಯಾದಲ್ಲಿ ವಾಸಿಸುತ್ತಿದ್ದಾರೆ. ಅವರ ಕುರಿತ ಸಂಶೋಧನಾ ಅಧ್ಯಯನ ಮಹಿಳಾ ವಲಸೆಗಾರರನ್ನು ಬೆಂಬಲಿಸುವುದು, ಪ್ರೋತ್ಸಾಹಿಸುವುದು, ಅವರ ಅಭಿವೃದ್ಧಿ ದೃಷ್ಟಿಕೋನಗಳನ್ನು ಆಚರಣೆಗೆ ತರುವುದು ಸುಲಭವಲ್ಲವೆಂದು ತೋರಿಸಿದೆ. ಇಲ್ಲಿಯ ಫೆಡರಲ್ ರಾಜ್ಯ ಸರ್ಕಾರವು ಇತ್ತೀಚಿಗಷ್ಟೇ ತಮ್ಮ ಮೂಲ ರಾಷ್ಟ್ರದ ಅಭಿವೃದ್ಧಿಗಾಗಿ ಆಫ್ರಿಕನ್ ವಲಸಿಗರ ನಿರ್ಣಯವನ್ನು ಪರಿಗಣಿಸಲು ಪ್ರಾರಂಭಿಸಿದೆ. ಈ ತೆರನಾದ ಪಾಲಿಸಿಯ ಉಪಕ್ರಮಗಳು ಜಾಗತಿಕ ಅಭಿವೃದ್ಧಿ ಪರಿಕಲ್ಪನೆ, ಮಿಲೆನಿಯಮ ಅಭಿವೃದ್ಧಿ ಗುರಿಗಳು, ಮಹಿಳಾ ಸಬಲೀಕರಣ ಒಳಗೊಂಡಂತೆ ಮತ್ತು ಲಿಂಗಸಮಾನತೆಯ ಮಾರ್ಗಗಳನ್ನು ಅನುಸರಿಸುತ್ತವೆ. ಆದರೆ ಈ ತೆರನಾಗಿ ಮಹಿಳೆಯರನ್ನು ಗುರಿಯಾಗಿಸಿಕೊಂಡ ಯೋಜನೆಗಳು ಮಹಿಳೆಯರನ್ನು ಸ್ವಾಗತಿಸುತ್ತವೆ. ಆದರೆ ಇವು ತಮ್ಮಿಂದ ತಾವೇ ಆಫ್ರಿಕನ್ ಮಹಿಳಾ ವಲಸೆಗಾರರ ಕ್ರಿಯಾತ್ಮಕ ಭಾಗವಹಿಸುವಿಕೆಯನ್ನು ಬೆಂಬಲಿಸುವುದಿಲ್ಲ. ಜರ್ಮನಿಯಲ್ಲಿರುವ ಆಫ್ರಿಕನ್ ಮಹಿಳಾ ವಲಸೆಗಾರರು ಕಾನೂನಾತ್ಮಕವಾಗಿ ರಚನೆಯಾದ ವಲಸೆ ಸಂಘಟನೆ, ಸರ್ಕಾರೇತರ ಸಂಸ್ಥೆಗಳಲ್ಲಿ ಇವರ ಭಾಗವಹಿಸುವಿಕೆ ಮಟ್ಟ ಕಡಿಮೆ ಇದೆ. ಆದರೆ ಇದು ಆಫ್ರಿಕಾದ ಅಭಿವೃದ್ಧಿ ಉಪಕ್ರಮಗಳನ್ನು ಉತ್ತೇಜಿಸುತ್ತದೆ. ಆದಾಗ್ಯೂ ಜರ್ಮನಿಯ ಸಾರ್ವಜನಿಕ ವಲಯಗಳಲ್ಲಿ ಆಫ್ರಿಕನ್ ಮಹಿಳೆಯರ ಭಾಗವಹಿಸುವಿಕೆ ಪ್ರತ್ಯೇಕಿಸಲ್ಪಟ್ಟಿದೆ. ಆದ್ದರಿಂದ ಜರ್ಮನಿಯ ನೀತಿ, ಯೋಜನೆಗಳಲ್ಲಿ ಸುಲಭವಾಗಿ ಪ್ರವೇಶಿಸಲು ಸಾಧ್ಯವಿಲ್ಲ. ಇದಕ್ಕಿಂತ ಹೆಚ್ಚಾಗಿ ಆಫ್ರಿಕನ್ ಮಹಿಳಾ ಗುಂಪುಗಳು ಪ್ರಧಾನಧಾರೆಯ ಪಾಶ್ಚಾತ್ಯ ಅಭಿವೃದ್ಧಿ ಶಿಸ್ತುಗಳಲ್ಲಿ ಸರಿಹೊಂದುವುದಿಲ್ಲ. ಅವುಗಳಲ್ಲಿ ಕೆಲವರು ಜಂಡರ್ ಸಮಾನತೆಯನ್ನು ಒಪ್ಪುವುದಿಲ್ಲ, ತಮ್ಮ ಸ್ವದೇಶದ ಅಭಿವೃದ್ಧಿಗೆ ಪ್ರಯತ್ನಗಳನ್ನು ಮಾಡುವುದಿಲ್ಲ. ಅವರ ಪ್ರಮುಖ ಕಾಳಜಿ ಮತ್ತು ಸಮಸ್ಯೆ ಸಾಮಾಜಿಕ ಸಾಮರಸ್ಯ, ಅನಿರ್ದಿಷ್ಟ ಭವಿಷ್ಯ ಜರ್ಮನಿಯಲ್ಲಿ ನೆಲೆಸಿದ ಅವರ ಕುಟುಂಬ ಮತ್ತು ಮಕ್ಕಳ ಭವಿಷ್ಯದ ಕುರಿತಾಗಿರುತ್ತದೆ.

ಇವುಗಳೆಲ್ಲದರ ಜೊತೆಗೆ ಹೆಚ್ಚುವರಿಯಾಗಿ ಸಮಸ್ಯೆಯು ಒಂದು ಸಾಮಾಜಿಕತೆಯೆಡೆಗೆ ಕುರಿತು ಇದೆ. ಜರ್ಮನಿಯಲ್ಲಿನ ಅನೇಕ ಆಫ್ರಿಕನ್ ವಲಸಿಗರು ತಮ್ಮ ಕುಟುಂಬಗಳಿಗೆ ಮಾತ್ರ ಹಣವನ್ನು ಕೊಡುತ್ತಿಲ್ಲ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಅನುಷ್ಠಾನಗೊಳ್ಳುವ ಯೋಜನೆಗಳಿಗೆ ಅಥವಾ ಇತರೆ ಧಾರ್ಮಿಕ ಸಂಘಟನೆಗಳಿಗೆ, ದಕ್ಷಿಣದಲ್ಲಿರುವ ಬಡ ಕುಟುಂಬಗಳಿಗೆ, ಗುಂಪುಗಳಿಗೆ ತಮ್ಮ ಕಡಿಮೆ ಸಂಬಳದ ಹೆಚ್ಚು ಭಾಗವನ್ನು ಕೊಡುಗೆ ನೀಡುತ್ತಿದ್ದಾರೆ.

ನಾರ್ತ ರೈನ್ ವೆಸ್ಟ್ಫಾಲಿಯಾದಲ್ಲಿನ ಘಾನಾದ ಮಹಿಳಾ ವಲಸೆಗಾರರ ಕುರಿತ ಸಂಶೋಧನೆಯು ಅವರು ಚಾರಿಟಿಯನ್ನು ಸಹ ಒಂದು ವಿಶಿಷ್ಟ ಬಗೆಯ ಅಭಿವೃದ್ಧಿ ಚಟುವಟಿಕೆಯೆಂದು ಪರಿಗಣಿಸಿದೆ. ತಮ್ಮ ದೇಶದ ಜನರ ಉದ್ಯೋಗ ಮತ್ತು ಆದಾಯ, ಉದ್ಯಮಶೀಲತೆಗೆ ಹಣ ಕಳುಹಿಸುವುದನ್ನು ಪರಿಗಣಿಸುವುದಕ್ಕಿಂತಲೂ ದಾನವನ್ನು ತಮ್ಮದೇ ಆದ ಖಾಸಗಿ ವ್ಯವಹಾರವೆಂದು ಪರಿಗಣಿಸಲಾಗುತ್ತದೆ. ಸುಸ್ಥಿರ ಅಭಿವೃದ್ಧಿಯ ದೃಷ್ಟಿಕೋನದಿಂದ ಇದನ್ನು ನೋಡಿದಾಗ ಚಾರಿಟಿ ಯೋಜನೆಗಳು ಬಹುರಾಷ್ಟ್ರೀಯ ವ್ಯವಹಾರಗಳಿಗಿಂತ ಕಡಿಮೆ ಪರಿಣಾಮಕಾರಿಯಾಗಿವೆ. ಆದಾಗ್ಯೂ ಘಾನಾದ ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳಾ ವಲಸೆಗಾರರು ಕುಟುಂಬ ಕೇಂದ್ರಿತ ಮತ್ತು ಲಾಭಾಧಾರಿತ ಉದ್ಯಮಶೀಲತೆಯ ತಂತ್ರಗಳನ್ನು ಸಂಯೋಜಿಸಲು ಹೊಸ ಅಭಿವೃದ್ಧಿ ಚೌಕಟ್ಟಿನಲ್ಲಿ ಹಣಕಾಸು ಯೋಜನೆಗಳ ಮೂಲಕ ತರುವುದು ಕಷ್ಟವಾಗುತ್ತದೆ.

ಲಿಂಗ ವ್ಯವಸ್ಥೆ, ವಲಸೆ ಮತ್ತು ಅಭಿವೃದ್ಧಿ ಕುರಿತ ಪ್ರಸ್ತುತದ ಚರ್ಚೆಗಳು ರಾಜ್ಯ ಕುರಿತು ಸಂಕ್ಷಿಪ್ತವಾಗಿ ಚರ್ಚಿಸುತ್ತದೆ ಮತ್ತು ಅಭಿವೃದ್ಧಿಯ ಸಾಮಾನ್ಯವಾದ ವಿಚಾರಗಳು ಗೋಚರಿಸುತ್ತವೆ. ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿಯಲ್ಲಿ ಜಂಡರ್‌ನ ಪ್ರಭಾವಕ್ಕೊಳಗಾಗಿದೆ ಎಂದು ತೋರಿಸಿದೆ. ಲಿಂಗ ವ್ಯವಸ್ಥೆ ಮತ್ತು ವಲಸೆ ಕುರಿತ ಚರ್ಚೆಗಳಲ್ಲಿ ಮಹಿಳೆಯ ಸಿದ್ಧ ಮಾದರಿಯ ಪಾತ್ರಗಳು ಮೇಲುಗೈ ಸಾಧಿಸುತ್ತವೆ ಮತ್ತು ಪುನರುತ್ಪಾದನೆಗೊಳ್ಳುತ್ತವೆ. ಮಹಿಳೆಯರು ಶ್ರಮಜೀವಿಗಳು, ಉತ್ತಮ ಮರುಪಾವತಿದಾರರು ಮತ್ತು ತಮ್ಮ ಕುಟುಂಬ ಮತ್ತು ಸಮುದಾಯಗಳಿಗೆ ಹೆಚ್ಚು ಜವಾಬ್ದಾರರು ಎನ್ನುವ ಚಿತ್ರಣದಿಂದಾಗಿ ಅವರ ಸಾಧನೋಪಕರಣವಾಗುವುದಕ್ಕೆ ಹೆಚ್ಚು ಒಳಗಾಗುತ್ತಾರೆ. ಇದಕ್ಕೆ ವಲಸೆ ಮತ್ತು ನಿರ್ದಿಷ್ಟವಾಗಿ ಹೇಳಬೇಕೆಂದರೆ ಅಭಿವೃದ್ಧಿಯ ನೀತಿಗಳು ಪ್ರಮುಖವಾದ ಅವಕಾಶಗಳನ್ನು ಕಲ್ಪಿಸಿವೆ.

ಹಾಗಾಗಿ ಲಿಂಗ ವ್ಯವಸ್ಥೆ, ವಲಸೆ ಮತ್ತು ಅಭಿವೃದ್ಧಿ ಕುರಿತ ಚರ್ಚೆಗಳು ಇನ್ನೂ ಸೂಕ್ಷ್ಮವಾದ ಪರಿಕಲ್ಪನೆಗಳಾಗಬೇಕಾದ ಅಗತ್ಯತೆ ಇದೆ. ವಲಸೆಯ ವಿವಿಧ ಮಾದರಿಗಳಲ್ಲಿ ಪುರುಷ ಮತ್ತು ಸ್ತ್ರೀಯರ ನಡುವಿನ ವ್ಯತ್ಯಾಸಗಳು, ದಾರಿಗಳು, ದೃಷ್ಟಿಕೋನಗಳು ಬದಲಾಗುತ್ತಿರುವ ಜೀವಜಗತ್ತು ಮತ್ತು ಪ್ರಸ್ತುತ ಅಧಿಕಾರದ ರಚನೆಗಳು ರೂಪಾಂತರ ಗೊಳ್ಳುತ್ತಿರುವುದನ್ನು ಪರಿಗಣಿಸಬೇಕು. ಇದರಿಂದಾಗಿ ಮಹಿಳಾ ವಲಸೆಗಾರರ ಏಜೆನ್ಸಿಗಳು ಅಭಿವೃದ್ಧಿಯ ನಿರ್ದಿಷ್ಟ ಸಂದರ್ಭಗಳನ್ನು ಅರ್ಥಮಾಡಿಕೊಳ್ಳಬೇಕು.

*– 112ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಅನನ್ಯ ಮಹಿಳಾವಾದಿ ಅಂಬೇಡ್ಕರ್

✍ **ಡಾ. ಆಶಾರಾಣಿ ಕೆ. ಬಗ್ಗನಡು,** ಅಧ್ಯಾಪಕಿ, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಭಾರತದ ಪ್ರಜಾತಂತ್ರ ಅನೇಕ ಬಗೆಯ ಆತಂಕಗಳನ್ನೆದರಿಸುತ್ತಿರುವ ಸಂವಿಧಾನ ಬದಲಿಸುವ ಸಾಮರಸ್ಯ ಕದಡುವ ಮಾತುಗಳು ಏಕಮುಖವಾಗುತ್ತಿರುವ, ಜಟಿಲ ಸಿಕ್ಕುಗಳ ಬಿಕ್ಕಟ್ಟಿನ ಕಾಲದಲ್ಲಿ ಮತ್ತೊಂದು ಚಾರಿತ್ರಿಕ ದಿನ ಆಚರಿಸುತ್ತಿದ್ದೇವೆ.

ತಾನು ಬದುಕಿದ್ದ ಕಾಲದಎಲ್ಲಾ ವಿರೋಧಾಭಾಸ ಪ್ರತಿಕೂಲ ಸನ್ನಿವೇಶ, ಸಂದಿಗ್ಧತೆ, ಹಿಂಸೆ, ಎಲ್ಲವನ್ನೂ ಮೀರಿ ಕೇವಲ ಒಂದು ವರ್ಗ ಮಾತ್ರವಲ್ಲ ನೊಂದ ಎಲ್ಲಾ ವರ್ಗಗಳ ಬದುಕನ್ನು ಹಸನು ಮಾಡಿದ. ಕೇವಲ ಮನುಷ್ಯ ಕುಲವಷ್ಟೇ ಅಲ್ಲ ಜಗತ್ತಿನ ಚರಾಚರಗಳ ಲೇಸನ್ನು ಬಯಸಿದ ಬುದ್ಧಕಾರುಣ್ಯದ ಸರ್ವಹಿತ ಭಾವಕೋಶದ, ಬಾಬಾ ಸಾಹೇಬ್ ಅಂಬೇಡ್ಕರರವರು ಈ ಶತಮಾನವಷ್ಟೇ ಅಲ್ಲ ಮುಂದಿನ ಕೆಲ ಶತಮಾನಗಳಿಗೂ ಮಾದರಿಯಾಗಿ ನಿಲ್ಲುವ ಮಹಾನ್ ಮಾನವತಾವಾದಿ.

ಅಂಬೇಡ್ಕರ್ ಸ್ಮರಣೆ ಕೇವಲ ಆರಾಧನೆಯಾಗದೆ, ಅವರ ಚಿಂತನೆಗಳನ್ನು ಅರಿಯುವ, ಹಾದಿಯಾದಾಗ ಮಾತ್ರ ಅರ್ಥ ಪೂರ್ಣವಾಗುತ್ತದೆ. ಸಮಾನತೆಯ ಕನಸನ್ನು ಎಲ್ಲರೆದೆಗೂ ಬಿತ್ತಲು ಪ್ರಯತ್ನಿಸಿದ ಮಹಾನ್ ಮಾನವತಾವಾದಿಯನ್ನು ಅರಿಯಲಾರದ ಜಾತಿಗ್ರಸ್ತತೆ, ಆರಾಧನೆ, ಅವಕಾಶವಾದಿತನಗಳ ನಡುವೆ ಅಂಬೇಡ್ಕರನ್ನು ತಮ್ಮೆದೆಯಲ್ಲಿ ಕಾಪಿಟ್ಟುಕೊಂಡಿರುವ ಪ್ರಜ್ಞಾವಂತ ಮನಸ್ಸುಗಳು ಅವರ ಚಿಂತನೆಗಳನ್ನು ಜಾತ್ಯಾತೀತವಾಗಿ ದಾಟಿಸುತ್ತಾ ಹೊಸತಲೆಮಾರು ಅವರ ಅಭಿಪ್ರಾಯಗಳನ್ನು ವಿಶ್ಲೇಷಿಸುವ ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಅಂಬೇಡ್ಕರರು ಜೀವಂತವಾಗುಳಿದಿದ್ದು. ಇಂತಹ ನಡೆಗಳಷ್ಟೇ ಭಾರತವನ್ನು ಭಾರತವಾಗಿಳಿಸುವ ಏಕೈಕ ದಾರಿಯಾಗಿದೆ.

ಅಂಬೇಡ್ಕರ್ ಕೇವಲ ದಲಿತ ವಿಮೋಚಕ ಅಷ್ಟೇ ಅಲ್ಲ ಅವರೊಬ್ಬ ಪ್ರಜಾಪ್ರಭುತ್ವವಾದಿ, ತತ್ವಜ್ಞಾನಿ, ಆರ್ಥಿಕ ತಜ್ಞ, ಕೃಷಿ ತಜ್ಞ, ಶಿಕ್ಷಣ ತಜ್ಞ, ಮಾತ್ರವಲ್ಲ ಅವರೊಬ್ಬ ಅಪ್ಪಟ ಮಹಿಳಾವಾದಿಯು ಹೌದು. ಸಾಮಾಜಿಕ ಪ್ರಜಾಪ್ರಭುತ್ವವಿದ್ದರೆ, ರಾಜಕೀಯ ಪ್ರಜಾಪ್ರಭುತ್ವ ಯಶಸ್ವಿಯಾಗಲು ಸಾಧ್ಯ ಎಂದು ನಂಬಿದ್ದ ಅಂಬೇಡ್ಕರರಿಗೆ ಪ್ರಜಾಪ್ರಭುತ್ವ ಕೇವಲ ಆಡಳಿತ ಮಾದರಿಯಾಗಿರಲಿಲ್ಲ. ಮನುಷ್ಯ ಮನುಷ್ಯರು ಬದುಕುವ ಪರಿಯಾಗಿದ್ದು, ಗಂಡು ಹೆಣ್ಣಿನ ನಡುವಿನ ಸಮಾನತೆಯ ನೆಲೆಯಾಗಿತ್ತು.

ಮಹಿಳಾ ಲೋಕವನ್ನು ಗ್ರಹಿಸುವ ಪೂರ್ವಗ್ರಹ ಚಿಂತನೆಗಳು ಒಂದೆಡೆ ಬದಲಾಗುತ್ತಾ ಮಹಿಳಾ ಹಕ್ಕಿನ ಪರವಾದ ಸಾಮಾಜಿಕ ವಾತಾವರಣ ಮೂಡುತ್ತಿದ್ದರೆ, ಮತ್ತೊಂದೆಡೆ ಆಧುನಿಕ ಮಹಿಳೆಯ ಸಮಸ್ಯೆಗಳು ಬೇರೆಯ ರೂಪ ಹೊದ್ದು ನಿಲ್ಲುತ್ತಿವೆ. ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯರು ಶೋಷಣೆ ಮತ್ತು ಅವಮಾನಗಳನ್ನು ಧಿಕ್ಕರಿಸಿದಷ್ಟು ರೂಪಾಂತರ ಹೊಂದಿ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿರುವ, ಧರ್ಮ, ಸಂಸ್ಕೃತಿ ಹೆಸರಿನಲ್ಲಿ ಅವಳ ಅಸ್ಮಿತೆ, ವಿಸ್ಮೃತಿಗೆ ತಳ್ಳಲ್ಪಡುತ್ತಿರುವ, ಹೋರಾಟ ಚಳುವಳಿಯ ಕಾರಣಕ್ಕಾಗಿ ದೊರೆತಿದ್ದ ಕೆಲವಾದರೂ ಹಕ್ಕುಗಳನ್ನು ಹಿಂದಕ್ಕೆ ಸರಿಸುತ್ತಿರುವ ರಾಜಕೀಯದ ಕಾರಣಕ್ಕಾಗಿ ಕಟ್ಟಲ್ಪಡುತ್ತಿರುವ ಇಂತಹ ಸಂಕಥನಗಳು ಮಹಿಳೆಯರ ಹಿಮ್ಮುಖ ಚಲನೆಗೆ ಕಾರಣವಾಗಿರುವದರಿತ ಕಾಲದಲ್ಲಿ ಅಂಬೇಡ್ಕರರ ಮಹಿಳಾಪರ ಚಿಂತನೆಗಳು ವರ್ತಮಾನದ ಭಾರತಕ್ಕೆ ಹೆಚ್ಚು ಪ್ರಸ್ತುತವೆನಿಸುತ್ತವೆ.

ಕೇವಲ ದಲಿತ ಮಹಿಳೆಯರಷ್ಟೇ ಅಲ್ಲದೆ ಒಟ್ಟಾರೆ ಭಾರತೀಯ ಮಹಿಳೆಯರನ್ನು ಶೈಕ್ಷಣಿಕವಾಗಿ, ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣಗೊಳಿಸಿ, ಭಾರತದ ಅಭಿವೃದ್ಧಿ ಕೇಂದ್ರಕ್ಕೆ ತರಲು ಅವರು ಯಾವ ರೀತಿಯ ಹೋರಾಟಗಳನ್ನು ನಡೆಸಿದರು. ಮಹಿಳಾ ವಿಮೋಚನೆಗಾಗಿ ಸಾಮಾಜಿಕ ಕಾನೂನು ಚೌಕಟ್ಟನ್ನು ಸ್ಥಾಪಿಸಲು ಹೆಣಗಿದರು, ಹೆಣ್ತನದ ಘನತೆಯನ್ನು ಎತ್ತರಿಸಲು, ದಣಿವರಿಯದೆ ದುಡಿದ ಪರಿಯನ್ನ ಅರಿಯುವುದು ಮಹಿಳಾ ಹೋರಾಟ ಚಳವಳಿಗಳು ನಿತ್ರಾಣಗೊಳಿಸುತ್ತಿರುವ ಮಹಿಳಾ ಮನಸುಗಳು ಬಿಕ್ಕಳಿಸುತ್ತಿರುವ ಈ ಬಿಕ್ಕಟ್ಟಿನಕಾಲದತುರ್ತಾಗಿದೆ.

ಲಿಂಗಾಧಾರಿತ ದೌರ್ಜನ್ಯಗಳು ಹೆಚ್ಚುತ್ತಿರುವ ಸಂದರ್ಭ ತಾರತಮ್ಯದ ಪದರುಗಳನ್ನು ಬಹಿರಂಗ ಪಡಿಸಲು ಅಂಬೇಡ್ಕರರ ಚಿಂತನೆಗಳು ಹೆಚ್ಚು ಪ್ರಸ್ತುತವಾಗಿದ್ದು. ಅವರ ಮೂಲ ಆಶಯಗಳನ್ನು ತಲುಪದಿರುವುದಕ್ಕೆ ಭಾರತೀಯ ಮಹಿಳೆಯರಿಗೆ ಸಾಧ್ಯವಾಗಲಿಲ್ಲವೇಕೆ ಎಂಬ ಜಿಜ್ಞಾಸೆಯೊಂದು ಭಾರತೀಯ ಮಹಿಳೆಯರಲ್ಲಿ ವ್ಯಾಪಕವಾಗಿ ಮೂಡಿ ನಿಂತು ಪ್ರಸ್ತುತ ಸವಾಲು ಸಮಸ್ಯೆಗಳೊಟ್ಟಿಗೆ ಅಂಬೇಡ್ಕರ್ ಚಿಂತನೆಗಳು ಜ್ಯಾತ್ಯಾತೀತವಾಗಿ ಭಾರತೀಯ ಮಹಿಳೆಯರ ಎದೆಯೊಳಗೆ ಮರುಹುಟ್ಟು ಪಡೆಯುವ ಮೂಲಕ ಭಾರತೀಯ ಮಹಿಳೆಯರ ವಿಮೋಚನೆಯ ಹಾದಿ ರೂಪುಗ್ಗೊಳ್ಳಬೇಕಿದೆ.

ಭಾರತದ ಮಹಿಳಾ ವಿಮೋಚನೆ ಅಂಬೇಡ್ಕರ್ ಪ್ರಕಾರ ಅದೊಂದು ಬೌದ್ಧಿಕ ವಿಮೋಚನೆಯಾಗಿತ್ತು. ಹಾಗಾಗಿಯೇ ಪಿತೃತ್ವ ರೂಪಿತ ಪಾತ್ರಗಳೊಳಗೆ ಗಂಡಸಿನ ನೆರಳಾಗಿ ಜೀವಿಸುತ್ತಿರುವ ಮಹಿಳೆಯರು ಆ ಪಾತ್ರಗಳಿಂದ ಹೊರ ಬಂದು ತಮ್ಮದೇ ಆದ ಒಂದು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಒತ್ತಾಯಿಸುತ್ತಾರೆ.

ಮಹಿಳೆಯರನ್ನು ಅವರ ವ್ಯಕ್ತಿತ್ವದ ಮೂಲಕವೇ ಗುರುತಿಸಲು ಪ್ರಯತ್ನಿಸಿದ ಅಂಬೇಡ್ಕರರ ಮಹಿಳಾಪರ ಚಿಂತನೆ ಆಧುನಿಕ ಭಾರತದಲ್ಲಿ ವಸಾಹತುಶಾಹಿ ಕಾಲಘಟ್ಟದಲ್ಲಿ ಆರಂಭವಾದ ಸುಧಾರಣಾವಾದಿ ಚಳುವಳಿಗಿಂತ ಭಿನ್ನವಾದದ್ದು. ಅಂಬೇಡ್ಕರರು ಭಾರತೀಯ ಮಹಿಳೆಗೆ ವ್ಯಕ್ತಿತ್ವವೊಂದನ್ನು ರೂಪಿಸುವ ನಿಟ್ಟಿನಲ್ಲಿ ಅವರಿಂದ ಕಸಿಯಲಾಗಿರುವ ಅವಳ ದೇಹದ ಮೇಲಿನ ನಿಯಂತ್ರಣವನ್ನು ಮರಳಿ ಸ್ಥಾಪಿಸುವ ನೆಲೆಯಲ್ಲಿ ಜನನ ನಿಯಂತ್ರಣದ ಅಗತ್ಯತೆಯನ್ನು ಒತ್ತಾಯಿಸುತ್ತಾ, ಗರ್ಭಧಾರಣೆಯ ಸಂಪೂರ್ಣ ಆಯ್ಕೆಯು ಮಹಿಳೆಯ ಮೇಲೆ ಅವಲಂಬಿತವಾಗಿರಬೇಕು ಎನ್ನುತ್ತಾರೆ.

ಸಾಂಪ್ರದಾಯಿಕ ಸಮಾಜದಲ್ಲಿ ತನ್ನ ದೇಹದ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿರುವ ಹೆಣ್ಣು ಬಸಿರು, ಬಾಣಂತನದ ಸೃಷ್ಟಿಯ ಕ್ರಿಯೆಯಲ್ಲಿ ನಲಗಿ ಹೋಗುತ್ತಿರುವ ಪರಿಯನ್ನು ಗಮನಿಸಿದ ಅವರು ದೇಶದ ಮಹಿಳಾಶಕ್ತಿ ಕೇವಲ ಮಕ್ಕಳನ್ನು ಹೆರುವುದರಲ್ಲಿಯೇ ಕಳೆದುಹೋಗುತ್ತಿದೆ. ತನ್ನದೇ ಆದ ವ್ಯಕ್ತಿತ್ವ ನಿರ್ಮಾಣ ಮಾಡಿಕ್ಕೊಳ್ಳುವ ನಿಟ್ಟಿನಲ್ಲಿ ಆಕೆಗೆ ಸ್ವಂತದ ಸಮಯ ಬೇಕಿರುವುದರಿಂದ ಅವಳಿಗೆ ಕುಟುಂಬ ಯೋಜನೆಯ ಅಗತ್ಯವನ್ನು ಪ್ರತಿಪಾದಿಸುತ್ತಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಾಂಪ್ರದಾಯಿಕವಾದ ಹೆಣ್ಣಿನ ತಾಯ್ತನದ ಆದರ್ಶ ಮಾದರಿಗಳನ್ನು ಪ್ರಶ್ನಿಸುವ ಅಂಬೇಡ್ಕರರು ಸಾಂಪ್ರದಾಯಿಕ ಹೆಣ್ತನದ ಕಣ್ಕಟ್ಟನ್ನು ಸರಿಸಿ ಹೆಣ್ಣಿಗೆ ಇರಬಹುದಾದ ಅನಂತ ಸಾಧ್ಯತೆಗಳತ್ತ ಕಣ್ಣುತೆರೆದು ನೋಡುವಂತೆ ಒತ್ತಾಯಿಸುತ್ತಾ, ಅವಳಿಂದ ಕಸಿಯಲಾಗಿರುವ ಅವಳ ದೇಹದ ಮೇಲಿನ ಸಾಮ್ಯವನ್ನು ಹಿಂದಿರುಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾರೆ. ದೇಶ ಪ್ರೇಮಿಗಳು, ಕ್ರಾಂತಿಕಾರಿಗಳು, ಮತ್ತು ಖ್ಯಾತ ಬರಹಗಾರರು ಭಾರತವನ್ನು ತಾಯಿ ಎಂಬ ಕಲ್ಪನೆಯಿಂದ ಪ್ರೇರೆಪಿಸುತ್ತಿದ್ದ ಸಮಯದಲ್ಲಿ ಮಾತೃತ್ವವನ್ನು ರಾಷ್ಟ್ರ ನಿರ್ಮಾಣದ ಸಾಧನವಾಗಿ ವೈಭವಿಕರಿಸುತ್ತಿದ್ದ ರಾಜಕೀಯ ಅಸ್ಥಿರತೆ ನಡುವೆ ಅಂಬೇಡ್ಕರ್ ಸ್ತ್ರೀ ದೇಹದ ಸ್ವಾಯತ್ತತೆಯ ಬಗೆಗೆ ಮಾತನಾಡುತ್ತಾರೆ. ತಮ್ಮ ಬದುಕಿನಲ್ಲಿ ಎದುರಾದ ಆಪ್ತ ಹೆಣ್ಣು ಜೀವಗಳ ಸಾವು, ನೋವುಗಳನ್ನು ಹತ್ತಿರದಿಂದ ಕಂಡಿದ್ದ ಅವರಿಗೆ ಮಹಿಳಾ ಪರವಾದ ವಿಚಾರಗಳು ಕೇವಲ ಪಾಶ್ಚಾತ್ಯ ಚಿಂತನೆಗಳ ಅನುಕರಣೆಯಾಗಿರದೆ. ತನ್ನ ಸುತ್ತಲಿನ ಸಮಾಜವನ್ನು ಸೂಕ್ಷ್ಮವಾಗಿ ಗ್ರಹಿಸುವ ನೆಲೆಯದ್ದಾಗಿತ್ತು.

ತಾಯ್ತುತನದ ಅಂತಕರಣವಿಲ್ಲದ ಸರ್ಕಾರಗಳು ಅವು ಪೋಷಿಸುತ್ತಿರುವ ಬಂಡವಾಳಶಾಹಿಗಳು, ತಾಯ್ತನವನ್ನು, ಹೆಣ್ಣಿನ ದೌರ್ಬಲ್ಯವನ್ನಾಗಿ ಕಾಣುತ್ತಾ ಅವಳ ಶ್ರಮವನ್ನು ಅಗೌರವಿಸುತ್ತಾ ಅವಳ ಕ್ರಿಯಾ ಶೀಲತೆಯ ಕತ್ತು ಹಿಸುಕುವ ಕುತಂತ್ರಗಳ ಆಚೆಗೂ ಅಂಬೇಡ್ಕರರು ಹೆರಿಗೆ ಭತ್ಯೆ, ರಜೆ ಸಹಿತ ಸಂಬಳ ನೀಡುವುದು ದೇಶಕ್ಕೆ ಹೊರೆ ಆಗಬಾರದು ಎನ್ನುತ್ತಾರೆ. ಗಂಡು ಹೆಣ್ಣಿನ ನಡುವಿನ ಅಸಮಾನ ವೇತನದ ಹಂಚಿಕೆಯನ್ನು ನಿವಾರಿಸಿ ಸಮಾನ ವೇತನಕ್ಕಾಗಿ ಹಕ್ಕೊತ್ತಾಯಿಸುವ ಅಂಬೇಡ್ಕರರು ನಮ್ಮನ್ನೆಲ್ಲ ಹೊತ್ತು ಹೆತ್ತು ಸಾಕಿದ ಆ ತಾಯಿಗೆ ನಾವು ಕೊಡುವ ಕನಿಷ್ಠ ಗೌರವ ಅದು ಎಂದು ಭಾವಿಸಬೇಕೆನ್ನುತ್ತಾರೆ.

ವಿವಾಹ ಮತ್ತು ದಾಂಪತ್ಯ ಸಂಸ್ಥೆಗಳನ್ನು ಹೆಣ್ಣಿನ ಅಧೀನ ವ್ಯಕ್ತಿತ್ವದ ಶಕ್ತಿ ಕೇಂದ್ರಗಳೆಂದು ಗುರುತಿಸಿಕೊಂಡಿದ್ದ ಅಂಬೇಡ್ಕರರು ಗಂಡು ಹೆಣ್ಣಿನ ಸಾಂಗತ್ಯವು ಬೌದ್ಧಿಕವಾದರೆ ಮಾತ್ರ ಎಷ್ಟೇ ತೊಡರುಗಳು ಸಮೀಪಿಸಿದರೂ ಆದ್ದರಿಂದ ಬಿಡಿಸಿಕೊಳ್ಳಬಹುದು. ಇಬ್ಬರನ್ನು ಬಂಧನಕ್ಕಿರಿಸದೇ ಮುಕ್ತವಾಗಿ ಉಳಿಸುವ ನಿಜವಾದ ಪ್ರೀತಿಯಷ್ಟೇ ವಿವಾಹವನ್ನು ಎಂದಿಗೂ ಬಂಧನವಾಗಿಸಲಾರದು ಎಂದು ನಂಬಿದ್ದರು. ಈ ನೆಲೆಯಲ್ಲಿಯೇ ಹೆಣ್ಣು ಮಕ್ಕಳು ಗಂಡನ ಪಕ್ಕದಲ್ಲಿ ದಾಸಿಯಾಗಿ ಆಳಿನ ರೂಪದಲ್ಲಿ ದುಡಿಯುವ ಯಂತ್ರವಾಗಬಾರದು ಗಂಡ ಹೆಂಡತಿ ಸ್ನೇಹಿತರಂತಿರಬೇಕು ಅಸಮಾನಪಾತಳಿಯ ಮೇಲೆ ನಿಂತಿರುವ ವಿವಾಹ ಸಂಸ್ಥೆಯನ್ನು ಮುರಿದು ಅವರಿಬ್ಬರನ್ನು ಜೊತೆಗಾರರಾಗಿಸುವ ಅನನ್ಯ ಪ್ರಯತ್ನ ಅಂಬೇಡ್ಕರರದ್ದಾಗಿತ್ತು.

ಭಾರತೀಯ ಸ್ತ್ರೀವಾದ ಪಾಶ್ಚಾತ್ಯ ಸಮಾಜದಲ್ಲಿ ಪ್ರಚಲಿತದಲ್ಲಿಲ್ಲದ ಕೆಲವು ಅಡೆತಡೆಗಳನ್ನು ಎದರುಸುತ್ತಿದ್ದುದನ್ನು ಗುರುತಿಸಿಕ್ಕೊಂಡ ಅಂಬೇಡ್ಕರರು ಪಾಶ್ಚತ್ಯವಾದಕ್ಕಿಂತ ಭಿನ್ನವಾದ ನೆಲೆಯಲ್ಲಿ ಭಾರತೀಯ ಸ್ತ್ರೀವಾದ ಕಟ್ಟಿಕೊಡುತ್ತಾರೆ. ಭಾರತೀಯ ಸಂದರ್ಭದಲ್ಲಿ ಪಿತೃ ಪ್ರಧಾನತೆಯ, ಜಾತಿ ವ್ಯವಸ್ಥೆ ಸ್ತ್ರೀ ಸಮಾನತೆಗೆ ಇರುವ ಬಹು ದೊಡ್ಡ ತಡೆಗೋಡೆಯಾಗಿದ್ದು ಜಾತಿ ವ್ಯವಸ್ಥೆಯನ್ನು ಮೀರಿ ಮುರಿಯದ ಹೊರತು ಸ್ತ್ರೀ ಸಮಾನತೆ ಸಾಧ್ಯವಿಲ್ಲವೆನ್ನುತ್ತಾರೆ. ಈ ನೆಲೆಯಲ್ಲಿ ಶಿಕ್ಷಣ, ಹೋರಾಟ, ಸಂಘಟನೆ ಮಹಿಳಾ ವಿಮೋಚನೆಯ ಬೀಜ ಮಂತ್ರವಾಗಿಸುತ್ತಾರೆ.

ಹೆಣ್ಣಿನ ಶಕ್ತಿಯ ಅನನ್ಯತೆಯ ಅರಿವಿದ್ದ ಅಂಬೇಡ್ಕರರು ಹೆಣ್ಣು ಮಕ್ಕಳು ಸಮಾಜದ ಮುಂಚೂಣಿಗೆ ಬಂದರೆ ಸಮಾಜ ಬಹುಬೇಗ ಸುಧಾರಿಸುತ್ತದೆ ಎಂದು ನಂಬಿದ್ದರು. ಹಾಗಾಗಿಯೇ ತಮ್ಮೆಲ್ಲ ಜಾತಿ ವಿನಾಶ ಹೋರಾಟ ಚಳುವಳಿಗಳನ್ನು ಮಹಿಳೆಯರನ್ನು ಒಳಗೊಂಡಂತೆ ರೂಪಿಸುತ್ತಾರೆ. ಗಾಂಧೀಜಿಯವರ ನೇತೃತ್ವದಲ್ಲಿ ಹೋರಾಟಗಳಲ್ಲಿ ಮಹಿಳೆ ಸಾರ್ವಜನಿಕವಾಗಿ ಬಂದದ್ದು, ಪರಿವರ್ತನಾಶೀಲ, ಕ್ರಾಂತಿಕಾರಿ ಹೋರಾಟಗಳು ಎಂದು ಕರೆಯಬಹುದಾದ ಹೋರಾಟಗಳಲ್ಲಿ ಮಹಿಳೆಯರು ಬೀದಿಗಿಳಿದದ್ದು ಅಂಬೇಡ್ಕರ್ ಅವರ ಚಳವಳಿಗಳಲ್ಲಿ ಗಾಂಧಿಯಷ್ಟೇ ಪ್ರಭಾವಶಾಲಿಯಾಗಿ ಮಹಿಳೆಯರನ್ನು ಚಳವಳಿಗೆ ಸೆಳೆದ ಅಂಬೇಡ್ಕರರು ಸಮಾಜದ ಬಹುಭಾಗವಾದ. ಹೆಣ್ಣು ಮಕ್ಕಳನ್ನು ಸಂಘಟಿಸಿ ಭಾರತದ ಚಳವಳಿಯ ಕೇಂದ್ರಕ್ಕೆ ಕರೆತರುತ್ತಾರೆ. ಹೀಗೆ ಅಂಬೇಡ್ಕರರ ಸಂಘಟನೆಯ ಬಲ ಮತ್ತು ತಾತ್ವಿಕವಾದ ಬೆಂಬಲದೊಂದಿಗೆ ಮಹಿಳಾ ಜಾಗೃತಿಯ ಹೊಸ ಅಧ್ಯಾಯ ಆರಂಭವಾಯಿತು.

ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಮಹಿಳೆಯರು ಸಂಘಟಿತರಾಗಿ ಹೋರಾಡಿದ್ದು ಸಾಮಾಜಿಕ ರಾಜಕೀಯ ಅಂಚಿನಲ್ಲಿರುವ ದಲಿತ ಮಹಿಳೆಯರನ್ನು ಸಮಾಜದ ಮುನ್ನಡೆಗೆ ತಂದ ದಾರ್ಶನಿಕ ಕಾಣ್ಕೆ ಅಂಬೇಡ್ಕರರದಾಗಿದ್ದು ಜಾತಿ, ಲಿಂಗಗಳ ನಡುವಿನ ಪರಸ್ಪರ ಸಂಬಂಧಕ್ಕೆ ಶೈಕ್ಷಣಿಕ ಆಯಾಮ ನೀಡಿದ ಅಂಬೇಡ್ಕರರು ಚಿಂತನೆ ಮುಂದೆ ದಲಿತ ಸ್ತ್ರೀವಾದಕ್ಕೆ  ದಾರಿ ಮಾಡಿಕೊಟ್ಟಿತ್ತು

ಬಾಬಾ ಸಾಹೇಬರ ಮಹಿಳಾ ಚಿಂತನೆಯು ಕೇವಲ ಹಿಂದೂ ಸಾಮಾಜಿಕ ವ್ಯವಸ್ಥೆ ಮತ್ತು ಹಿಂದೂಧರ್ಮಕ್ಕೆ ಮಾತ್ರ ಸೀಮಿತವಾಗದೆ ಮುಸ್ಲಿಂ ಸಮುದಾಯದ ಮಹಿಳೆಯವರೆಗೂ ವ್ಯಾಪಿಸಿತ್ತು ಅಲ್ಲಿಯ ಮಹಿಳಾ ಸಮಸ್ಯೆಗಳಾದ ತಲಾಕ್, ಬುರ್ಖಾ, ಬಾಲ್ಯ ವಿವಾಹ, ವಿಚ್ಛೇದನ ಧಾರ್ಮಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಆ ಮೂಲಭೂತ ವಾದಿಗಳ ವಿರುದ್ಧ ಹೋರಾಡಲು ಮುಸ್ಲಿಂ ಮಹಿಳೆಯರಿಗೆ ಕರೆ ನೀಡುವುದಲ್ಲದೆ ಇಂತಹ ಕಠಿಣ ಪರಿಸ್ಥಿತಿಯಿಂದ ಹೊರಲು ಮಾರ್ಗಗಳನ್ನು ಕಂಡುಹಿಡಿಯುವುದರ ಜೊತೆಗೆ ಮಹಿಳಾ ವಿಮೋಚನೆಗೆ ಚೌಕಟ್ಟುಗಳನ್ನು ರೂಪಿಸುತ್ತಾರೆ.

ಭಾರತೀಯ ಮಹಿಳೆಯರು ಖಾಸಗಿಯಾಗಿ ಅನುಭವಿಸುತ್ತಿರುವ ದೌರ್ಜನ್ಯಗಳನ್ನು ಕಾನೂನು ವ್ಯವಸ್ಥೆ ಆಶ್ರಯದಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ ತರಲು ಯತ್ನಿಸಿದ ಅವರು ದ್ವಿಪತ್ನಿತ್ವ, ನಿರ್ವಹಣೆ, ಆಸ್ತಿ ಹಕ್ಕು, ವಿಚ್ಛೇದನದ ಹಕ್ಕು ದತ್ತಕದ ಹಕ್ಕು ಒಳಗೊಂಡ ಹಿಂದೂ ಕೋಡ್ ಬಿಲ್ಲನ್ನು 1952ರಲ್ಲಿ ಸಂಸತ್ತಿನಲ್ಲಿ ಮಂಡಿಸುವ ಮೂಲಕ ಚಾರಿತ್ರಿಕ ಪ್ರಮಾಧವನ್ನು ಸರಿಪಡಿಸುವ ನಿಟ್ಟಿನಲ್ಲಿ ಪ್ರಯುತ್ನಿಸುತ್ತರಾದರೂ ಹಿಂದೂ ಕೋಡ್ ಬಿಲ್ಲು ತಿರಸ್ಕೃತವಾಗುತ್ತದೆ. ಇದರಿಂದ ಬೇಸರಗೊಂಡ ಅಂಬೇಡ್ಕರ್ ತಮ್ಮ ಕಾನೂನು ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿ ಹೊರ ಬರುತ್ತಾರೆ. ಸ್ತ್ರೀಯರು ತಮ್ಮ ಹಕ್ಕುಗಳಿಗಾಗಿ ತಮ್ಮ ಮನೋದೌರ್ಬಲ್ಯ ಬಿಟ್ಟು ಮುಂದೆ ಬರಬೇಕು ಎನ್ನುತ್ತಾರೆ.

ಇಷ್ಟೊಂದು ವಿವರವಾಗಿ ಮಹಿಳೆಯರ ಸಶಕ್ತತೆಗೆ ವಿಮೋಚನೆಗಾಗಿ ಕಾರ್ಯಕ್ರಮ ರೂಪಿಸಿರುವುದು ಭಾರತದಲ್ಲಿ ಅಂಬೇಡ್ಕರವರ ಪ್ರಯತ್ನವೇ ಮೊದಲನೆಯದಾಗಿದೆ. ಇತರ ದೇಶಗಳಲ್ಲಿ ಮಹಿಳೆಯರು ಅನೇಕ ಹಕ್ಕುಗಳನ್ನು ಪ್ರತಿಭಟನೆ, ಮನವಿ ಮತ್ತು ಹಿಂಸೆಯ ಮೂಲಕ ಗೆದ್ದಿದ್ದಾರೆ. ಭಾರತದಲ್ಲಿ ಇಂತಹ ಹೋರಾಟಗಳು ನಡೆದಿವೆಯಾದರೂ ಬಾಬಾ ಸಾಹೇಬರು ಭಾರತೀಯ ಮಹಿಳೆಯರ ಅಸ್ತಿತ್ವಕ್ಕಾಗಿ ಸಾಂವಿಧಾನಿಕ ಭದ್ರತೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿದ್ದಾರೆ. ಮಹಿಳಾಪರವಾಗಿ ದಣಿವರಿಯದೆ ದುಡಿದ ಅಂಬೇಡ್ಕರರಂತಹ ಮಹನೀಯರ ಇಚ್ಛಾ ಶಕ್ತಿಯಿಂದಷ್ಟೇ ಕೆಲವಾದರೂ ಹಕ್ಕು, ಸೌಲಭ್ಯಗಳನ್ನು ಮಹಿಳೆಯರು ಪಡೆಯಲು ಸಾಧ್ಯವಾಗಿದ್ದು, ಮಹಿಳೆಯರ ಹಕ್ಕುಗಳಿಗಾಗಿ ತನ್ನ ಜೀವಿತದ ಬಹುಭಾಗವನ್ನು ಮೀಸಲಿರಿಸಿದ ವಾಸ್ತವದ ನೆಲೆಯಲ್ಲಿ ಮಹಿಳಾ ವಿಮೋಚನೆಗಾಗಿ ಆಶಿಸಿದ ತಾಯ್ತನದ ಅಂತಕರಣಿಯನ್ನು ಈ ನೆಲದ ಹೆಣ್ಣು ಮಕ್ಕಳು ಅರಿಯಲಾರದೆ ಹೋದದ್ದು ನಿಜಕ್ಕೂ ವಿಪರ್ಯಾಸವೇ ಹೌದಾದರೂ ಭಾರತದ ಮಹಿಳೆಯರು ಜ್ಯಾತ್ಯಾತೀತವಾಗಿ ಭಾರತದ ಸಂವಿಧಾನವನ್ನು ಎದೆಗವಚಿಕೊಂಡು ಅಂಬೇಡ್ಕರರ ಪೋಟೋ ಕೈಲಿಡಿದು ಹೊರಡುವ ಮೂಲಕ ಸಣ್ಣ ಚಲನೆಯೊಂದು ಆರಂಭವಾಗಿದ್ದು ಅದು ವ್ಯಾಪಕತೆಯನ್ನು ಪಡೆಯುವ ಮೂಲಕ ಈ ನೆಲದ ಹೆಣ್ಣುಮಕ್ಕಳ ಸಂಕಟ ಕೊನೆಗೊಳ್ಳಬೇಕಿದೆ.

*– 106ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ–ಸಾಂಸ್ಕೃತಿಕ ಸ್ಥಿತಿಗತಿಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

✍ **ಡಾ. ದ್ರಾಕ್ಷಾಯಣಮ್ಮ ಎನ್.ಸಿ.**, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವರಹಿಪ್ಪರಗಿ, ವಿಜಯಪುರ ಜಿಲ್ಲೆ.

*ಸಾರಾಂಶ*

*ಮಲೆಕುಡಿಯ ಬುಡಕಟ್ಟು ಎಂಬುದು ಕರ್ನಾಟಕ ಮತ್ತು ಕೇರಳ ಪಶ್ಚಿಮಘಟ್ಟಗಳಲ್ಲಿ ಕಂಡುಬರುವ ಭಾರತದ ಒಂದು ವಿಶಿಷ್ಟ ರೂಪದ ಮೂಲನಿವಾಸಿ ಸಮುದಾಯವಾಗಿದೆ. ಈ ಬುಡಕಟ್ಟು ಸಮುದಾಯವು ಸಾಮಾನ್ಯವಾಗಿ ಘಟ್ಟ ಪ್ರದೇಶ ಹಾಗೂ ಘಟ್ಟದ ತಪ್ಪಲಿನಲ್ಲಿ ವಾಸಿಸುವ ಆದಿವಾಸಿ ಜನಾಂಗವಾಗಿದ್ದು, ಸ್ವಾಭಾವಿಕವಾಗಿ ನೈಸರ್ಗಿಕ ಪರಿಸರದಲ್ಲಿ ಜೀವಿಸುವ ಇವರು ತಮ್ಮದೇ ಆದಾ ಸಾಮಾಜಿಕ–ಸಾಂಸ್ಕೃತಿಕ ವಿಶೇಶತೆಯನ್ನು ಹೊಂದಿದ್ದು, ಅವರ ವಿಭಿನ್ನ ಸಂಪ್ರದಾಯ, ಆಚರಣೆಗಳು, ಜೀವನ ವಿಧಾನ, ಬದುಕು ಕಟ್ಟಿಕೊಳ್ಳುವ ರೀತಿ, ಸಾಮಾಜಿಕ ಅಂತಸು, ಸ್ತ್ರಿ–ಪುರುಷರ ಪಾತ್ರಗಳು ಮತ್ತು ಮಾತೃಪ್ರಧಾನ ಹಾಗೂ ಪಿತೃಪ್ರಧಾನ ವ್ಯವಸ್ಥೆಗಳು ಎರಡು ರೀತಿಯ ಜೀವನ ಶೈಲಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.*

*ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾಗಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ ಬರುವ ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ–ಸಾಂಕೃತಿಕ ಸ್ಥಿತಿಗತಿಗಳ ಕುರಿತು ಈ ಅಧ್ಯಯನದಲ್ಲಿ ಕೇಂದ್ರೀಕರಿಸಲಾಗಿದ್ದು, ಪ್ರಾಥಮಿಕ ಮಾಹಿತಿ ಮೂಲಗಳಾದ ಅವಲೋಕನ ಮತ್ತು ಸಂದರ್ಶನ ಅನುಸೂಚಿ ವಿಧಾನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.*

*ಕೀಲಿ ಪದಗಳು : ಮಲೆಕುಡಿಯ, ಅಳಿಯಕಟ್ಟು, ಮಕ್ಕಳಕಟ್ಟು , ಬಳುವಳಿ, ದೈವ, ಕೋಲ.*

## ಪೀಠಿಕೆ

ಮಾನವ ಜನಾಂಗದ ಇತಿಹಾಸ ಬಹಳ ದೀರ್ಘವಾದುದು. ಮೂಲತಃ ಆದಿವಾಸಿಯಾಗಿದ್ದ ಮಾನವನು ಕ್ರಮೇಣ ನಾಗರಿಕತೆಯನ್ನು ಮೈಗೂಡಿಸಿಕೊಂಡು ಇದೀಗ ನಾಗರಿಕತೆಯ ಅತ್ಯುನ್ನತ ಮಟ್ಟಕ್ಕೆ ಬಂದು ತಲುಪಿದ್ದಾನೆ. ಹಾಗೆಂದ ಮಾತ್ರಕ್ಕೆ ಇಡೀ ಜಗತ್ತಿನ ಎಲ್ಲಾ ಕಡೆಗಳಲ್ಲಿಯೂ ಕಾಣಬರುವ ಸಮುದಾಯಗಳು ನಾಗರಿಕತೆಯ ಈ ಘಟ್ಟಕ್ಕೆ ಬಂದು ತಲುಪಿವೆ ಎನ್ನುವಂತಿಲ್ಲ. ಆದಿ ಮಾನವನ ಜೀವನ ಕ್ರಮ ಮತ್ತು ಆಧುನಿಕ ನಾಗರಿಕ ಸಮಾಜದ ಜೀವನ ಕ್ರಮಗಳಲ್ಲಿ ಬಹಳ ಅಂತರವಿದೆ. ನಾಗರಿಕತೆಯ ಬೆಳವಣಿಗೆ ಹಾಗೂ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಇಡೀ ಮಾನವ ಜನಾಂಗವೆಲ್ಲಾ ಒಂದೇ ರೀತಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರಲಿಲ್ಲ. ನಾಗರಿಕತೆಯ ಗಂಧ ಗಾಳಿಯನ್ನೇ ಅರಿಯದ ಬಹಳಷ್ಟು ಸಮುದಾಯಗಳು ಇಂದಿಗೂ ಆದಿವಾಸಿ ಸ್ವರೂಪದಲ್ಲಿವೆ. ಹೀಗೆ ನಾಗರಿಕತೆಯ ಸೋಂಕಿಲ್ಲದೆ ಮೂಲ ಪರಂಪರೆಯನ್ನು ಚಾಚೂ ತಪ್ಪದೇ ಅನುಸರಿಸಿಕೊಂಡು ಬದುಕುತ್ತಿರುವ ಜನಾಂಗಗಳಿಗೆ ಬುಡಕಟ್ಟುಗಳೆಂದು ಕರೆಯಬಹುದು. ಮಲೆಕುಡಿಯ ಬುಡಕಟ್ಟು ಎಂಬುದು ಭಾರತದ ಒಂದು ವಿಶಿಷ್ಟ ರೂಪದ ಮೂಲನಿವಾಸಿ ಸಮುದಾಯವಾಗಿದೆ

## ಅರ್ಥ ಮತ್ತು ಪರಿಕಲ್ಪನೆ

'ಮಲೆಕುಡಿಯರು' ಸಾಮಾನ್ಯವಾಗಿ ಬೆಟ್ಟ ಗುಡ್ಡಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗ. ಇವರು ಸುಮಾರು 2000 ವರ್ಷಗಳ ಹಿಂದಿನಿಂದಲೂ ವಾಸಿಸುತ್ತಿರುವ ಜನಾಂಗವಾಗಿದ್ದು, ಆ ಕಾಲದಲ್ಲಿ ಹೆಚ್ಚಿನ ಪ್ರದೇಶ ಕಾಡಿನಿಂದ ಆವೃತವಾಗಿದ್ದು, ಹಳ್ಳಿ ಗ್ರಾಮ ಜೀವನದ ಕುರುಹು ಇರಲಿಲ್ಲ. ಅಂದಿನಿಂದ ವಾಸಿಸುತ್ತಿರುವ ಈ ಜನಾಂಗ ಕಾಡುಗಳಲ್ಲಿಯೇ ತಾತ್ಕಾಲಿಕವಾಗಿ ಬಿಡಾರಗಳನ್ನು ಹೂಡಿಕೊಂಡು ಜೀವನ ನಡೆಸುತ್ತಿದ್ದರು. ಅಂದಿನಿಂದಲೂ ಎಲ್ಲರೂ ಕಾಡುವಾಸಿಗಳೇ ಆಗಿರುವುದರಿಂದ ಪ್ರಾಚೀನರು ಯಾರೂ ಸಹ ಅವರನ್ನು ಕುರಿತು ಅವರ ಮೂಲ ಹುಟ್ಟುಗಳ ಬಗ್ಗೆ ನಿಖರತೆ ನೀಡಿಲ್ಲ. ಏನಿದ್ದರೂ ಐತಿಹ್ಯಗಳೇ ಸಾಕ್ಷಿಯಾಗಿದ್ದು, ಯಾವುದೇ ರೀತಿಯ ತರ್ಕಕ್ಕೆ ಸಿಲುಕದ ಆಧಾರಗಳಿಲ್ಲ. ಹಾಗಾಗಿ ಮಲೆಕುಡಿಯರ ಮೂಲ ಹಾಗೂ ಹುಟ್ಟಿನ ಕುರಿತು ನಾವೇ ವಿಶ್ಲೇಷಣೆ ಮಾಡಬೇಕಾಗಿದೆ.

'ಮಲೆಕುಡಿಯ' ಎಂಬ ಪದವು 'ಮಲೆ' (Mountain) ಮತ್ತು 'ಕುಡಿಯ' (Top) ಎಂಬ ಎರಡು ಪದಗಳಿಂದ ಸಂಯೋಜನೆಗೊಂಡಿದೆ. ತುಳು ಮತ್ತು ಕನ್ನಡದಲ್ಲಿ ಮಲೆ ಎಂದರೆ ಬೆಟ್ಟ, ದಟ್ಟ ಅಡವಿ, ಬೆಂಗಾಡು, ಹೆಚ್ಚು ಮಳೆ ಬೀಳುವ ಪರ್ವತ ಪ್ರದೇಶ ಎಂಬ ಅರ್ಥವನ್ನು ನೀಡುತ್ತದೆ. ಹಾಗೂ ಕುಡಿ ಎಂಬ ಪದವು ತುದಿ, ಕೊನೆ, ತಪ್ಪಲು ಎಂದು ಅರ್ಥವನ್ನು ನೀಡುತ್ತದೆ. ಹೀಗೆ ಮಲೆಕುಡಿಯರು ಎಂದರೆ ಪರ್ವತಗಳ ತುದಿಯಲ್ಲಿ ವಾಸಿಸುವ ಜನಾಂಗ ಎಂಬ ಅರ್ಥವನ್ನು ನೀಡುತ್ತದೆ. ಹಾಗಾಗಿ ಮಲೆಗಳ ತುದಿಯಲ್ಲಿ ವಾಸಿಸುವ ಇವರನ್ನು ಮಲೆಕುಡಿಯರು ಎಂದು ಕರೆಯಲಾಗಿದೆ (ಮಲೆಕುಡಿಯರ ಉಳಿವು–ತೆರವು, 2011 : 5). ಅಲ್ಲದೆ ಇನ್ನೊಂದು ಅರ್ಥದಲ್ಲಿ ಕುಡಿ ಎಂದರೆ ಸಂತಾನ ಎಂದು ಅರ್ಥ. ಕುಡಿ ಎಂಬ ಪದ ದ್ರಾವಿಡ ಪದ. ಇದಕ್ಕೆ ಮಲೆಯಾಳಿ ಭಾಷೆಯಲ್ಲಿ ಗುಡಿಸಲು ಹಾಗೂ 'ಕುಡಿಯೊಕ್ಕಲಿಗ' ಎಂಬ ಅರ್ಥವೂ ಇದೆ. ಕುಡಿಯೊಕ್ಕಲಿಗ ಎಂದರೆ ಬೆಟ್ಟದಲ್ಲಿ ಕೃಷಿ ಮಾಡುವವನು ಎಂದರ್ಥ. ಇವರು ಕುಮೇರಿ ಬೆಳೆಯನ್ನು ಬೆಳೆಯುವುದರಿಂದ ಇವರಿಗೆ ಕುಮೇರಿ ಗೌಡ, ಕುಡಿಯೊಕ್ಕಲಿಗ ಮುಂತಾದ ವಿಶ್ಲೇಷಣೆಗಳಿವೆ. ಹೀಗೆ ಮಲೆಕುಡಿಯ ಬುಡಕಟ್ಟಿನ ಇತಿಹಾಸವನ್ನು ತಿಳಿಯಬಹುದು (ವಿವೇಕ ರೈ. ಮತ್ತು ಯದುಪತಿ ಗೌಡ, 1996).

## ಅಧ್ಯಯನದ ಪ್ರಾಮುಖ್ಯತೆ

ಮಲೆಕುಡಿಯ ಬುಡಕಟ್ಟು ಎಂಬುದು ಕರ್ನಾಟಕ ಮತ್ತು ಕೇರಳ ಪಶ್ಚಿಮ ಘಟ್ಟಗಳಲ್ಲಿ ಕಂಡುಬರುವ ಭಾರತದ ಒಂದು ವಿಶಿಷ್ಟ ರೂಪದ ಮೂಲನಿವಾಸಿ ಸಮುದಾಯವಾಗಿದೆ. ಈ ಬುಡಕಟ್ಟು ಸಮುದಾಯವು ಸಾಮಾನ್ಯವಾಗಿ ಘಟ್ಟ ಪ್ರದೇಶ ಹಾಗೂ ಘಟ್ಟದ ತಪ್ಪಲಿನಲ್ಲಿ ವಾಸಿಸುವ ಆದಿವಾಸಿ ಜನಾಂಗವಾಗಿದ್ದು, ಸ್ವಾಭಾವಿಕವಾಗಿ ನೈಸರ್ಗಿಕ ಪರಿಸರದಲ್ಲಿ ಜೀವಿಸುವ ಇವರು ತಮ್ಮದೇ ಆದಾ ಸಾಮಾಜಿಕ–ಸಾಂಸ್ಕೃತಿಕ ವಿಶೇಶತೆಯನ್ನು ಹೊಂದಿದ್ದು, ಅವರ ವಿಭಿನ್ನ ಸಂಪ್ರದಾಯ, ಆಚರಣೆಗಳು, ಜೀವನ ವಿಧಾನ, ಬದುಕು ಕಟ್ಟಿಕೊಳ್ಳುವ ರೀತಿ, ಸಾಮಾಜಿಕ ಅಂತಸು, ಸ್ತ್ರಿ–ಪುರುಷರ ಪಾತ್ರಗಳು ಮತ್ತು ಮಾತೃಪ್ರಧಾನ ಹಾಗೂ ಪಿತೃಪ್ರಧಾನ ವ್ಯವಸ್ಥೆಗಳು ಎರಡು ರೀತಿಯ ಜೀವನ ಶೈಲಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾಗಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ ಬರುವ ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳ ಕುರಿತು ಈ ಅಧ್ಯಯನ ಮಾಡುವುದು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

## ಅಧ್ಯಯನ ಕ್ಷೇತ್ರದ ಹಿನ್ನೆಲೆ

ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದ್ದು, ಇತ್ತೀಚೆಗೆ ಈ ಜಿಲ್ಲೆಯನ್ನು ಎರಡು ಜಿಲ್ಲೆಗಳಾಗಿ ವಿಭಾಗಿಸಲಾಗಿದೆ. ಅಂದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ. ದಕ್ಷಿಣ ಕನ್ನಡ ಜಿಲ್ಲೆಯು ಕ್ಯಾಂಬೆಕೊಲ್ಲಿಯಿಂದ ದಕ್ಷಿಣಕ್ಕೆ ಕನ್ಯಾಕುಮಾರಿ, ಭೂಶಿರದ ತನಕ ಚಾಚಿಕೊಂಡಿರುವ ಭಾರತದ ಪಶ್ಚಿಮ ಕರಾವಳಿಯ ಮಧ್ಯಭಾಗದಲ್ಲಿದೆ. ದೇಶದ ಆರ್ಥಿಕ ಜೀವನಾಡಿಯಂತಿರುವ ನೈರುತ್ಯ ಮಾನ್‌ಸೂನ್ ಮಳೆಗಾಳಿಗಳ ಪಶ್ಚಿಮ ಶಾಖೆಯ ನೆಚ್ಚಿನ ಆಡೊಂಬಲ. ಈ ಜಿಲ್ಲೆ ಕವಿ ಸ್ಫೂರ್ತಿಯನ್ನಿತ್ತ ತೆಂಗಣ ಗಾಳಿಯ ನರ್ತನ ಶಾಲೆ. ಕರಾವಳಿ ಕರ್ನಾಟಕದ ವಿಭಾಗದಲ್ಲಿ ದಕ್ಷಿಣಕ್ಕಿರುವ ಈ ಜಿಲ್ಲೆಯು ಕನ್ನಡಕ್ಕೆ ತನ್ನದೇ ಆದ ಕೊಡುಗೆ ನೀಡಿದ ತುಳು ಭಾಷೆ ಮತ್ತು ಸಂಸ್ಕೃತಿಯ ತವರು.

ದಕ್ಷಿಣ ಕನ್ನಡ ಜಿಲ್ಲೆಯು ಬಂಟ್ವಾಳ, ಬೆಳ್ತಂಗಡಿ, ಮಂಗಳೂರು, ಪುತ್ತೂರು ಮತ್ತು ಸುಳ್ಯಗಳೆಂಬ 5 ತಾಲ್ಲೂಕುಗಳನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ನಾನು ಸುಳ್ಯ ಮತ್ತು ದಕ್ಷಿಣ ಕನ್ನಡ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವಂತಹ ದೇವರಗದ್ದೆ, ಕುಳುಕುಂದ ಕಾಲೋನಿ, ಬಾಳುಗೋಡು, ಹಾಡಿಕಲ್ಲು ಮಡಪ್ಪಾಡಿ, ಅರಮನೆಗಾಯ, ಕೂವೆಕಾಡು ಮತ್ತು ನೆಕ್ಕರೆಮಲೆ ಹಾಗೂ ನೆರಿಯಾ, ಬಾಂಜಾರುಮಲೆ, ಕೋಲೋಡಿ, ಶಿಶಿಲ, ನಾವೂರು ಪ್ರದೇಶಗಳಲ್ಲಿ ಅಧ್ಯಯನವನ್ನು ಕೈಗೊಂಡು ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ.

## ಸಂಶೋಧನಾ ಸಮಸ್ಯೆಯ ಹೇಳಿಕೆ

ಪ್ರಸ್ತುತ ಅಧ್ಯಯನ ವಿಷಯವು ಪ್ರಮುಖವಾಗಿ **"ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳು :ಒಂದು ಸಮಾಜಶಾಸ್ತ್ರೀಯ ಅಧ್ಯಯನ"** (ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ) ಎಂಬುದಾಗಿದ್ದು, ಈ ಶೀರ್ಷಿಕೆಯ ಅಡಿಯಲ್ಲಿ ಸುಳ್ಯ ಮತ್ತು ದಕ್ಷಿಣ ಕನ್ನಡ ತಾಲ್ಲೂಕಿನಲ್ಲಿ ಬರುವ ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಕುರಿತು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.

## ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಒಳಗೊಂಡಿದೆ.

ಪ್ರಸ್ತುತ ಸಂಶೋಧನೆಗಾಗಿ "ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ" (ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ)" ಎಂಬ ವಿಷಯವನ್ನು ಆಯ್ಕೆಮಾಡಿಕೊಂಡಿದ್ದು, ಈ ಜಿಲ್ಲೆಯಲ್ಲಿ 7,764 ಒಟ್ಟು ಜನಸಂಖ್ಯೆಯಿದ್ದು, 1,589 ಮಹಿಳೆಯರು ವಾಸವಾಗಿದ್ದಾರೆ. ಸುಳ್ಯ ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಮಲೆಕುಡಿಯ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದ್ದು ಮುಖ್ಯವಾಗಿ ಈ ಸಮುದಾಯವು ಸುಳ್ಯ ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವುದರಿಂದ ಸಂಶೋಧನೆಗೆ ಬೇಕಾದ 400 ಮಹಿಳಾ ಸೂಚನಾದಾರರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದ್ದು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## ಜನಸಂಖ್ಯೆ ಮತ್ತು ಮಾದರಿ

**ಮಲೆಕುಡಿಯ ಸಮುದಾಯದ ಜನಸಂಖ್ಯೆ**

| ತಾಲ್ಲೂಕ | ಮಲೆ ಕುಡಿಯ ಕುಟುಂಬ ಗಳ ಸಂಖ್ಯೆ | ಜನಸಂಖ್ಯೆ | | | ಮಲೆ ಕುಡಿಯರು ಕಾಲೋನಿ ಗಳ ಸಂಖ್ಯೆ | ಮಲೆಕುಡಿಯರು ವಾಸಿಸುತ್ತಿರುವ ಗ್ರಾಮ ಪಂಚಾಯತ್ ಗಳ ವ್ಯಾಪ್ತಿ |
|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | | |
| ಮಂಗಳೂರು | 17 | 31 | 27 | 58 | 2 | 2 |
| ಬಂಟ್ವಾಳ | 86 | 223 | 201 | 424 | 10 | 10 |
| ಪುತ್ತೂರು | 91 | 250 | 222 | 472 | 14 | 11 |
| ಸುಳ್ಯ | 219 | 462 | 518 | 980 | 19 | 12 |
| ಬೆಳ್ತಂಗಡಿ | 1191 | 3017 | 2733 | 5750 | 87 | 39 |
| ಒಟ್ಟು | 1604 | 3983 | 3701 | 7684 | 132 | 74 |

ಮೂಲ : ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, 2011

## ಸಂಶೋಧನಾ ವಿನ್ಯಾಸ

ಪ್ರಸ್ತುತ ಅಧ್ಯಯನವು "ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳು :ಒಂದು ಸಮಾಜಶಾಸ್ತ್ರೀಯ ಅಧ್ಯಯನ"(ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ)" ಎಂಬುದಾಗಿದ್ದು, ಮಹಿಳೆಯರ ಮೇಲೆ ಕೇಂದ್ರೀಕೃತವಾಗಿರುವುದರಿಂದ ಅಧ್ಯಯನಕ್ಕಾಗಿ ವಿಭಾಗಿತ ಸರಳಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಸೂಚನಾದಾರರನ್ನು ಆಯ್ಕೆ ಮಾಡಿಕೊಂಡು, ಸಂದರ್ಶನ ಅನುಸೂಚಿಯ ಸಹಾಯದಿಂದ ಸೂಚನಾದಾರರನ್ನು ವೈಯಕ್ತಿವಾಗಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ.

## ಸಂಶೋಧನಾ ವಿಧಾನ ಮತ್ತು ತಂತ್ರಗಳು

"ಮಲೆಕುಡಿಯ ಬುಡಕಟ್ಟು ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ"(ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ)" ಎಂಬ ಅಧ್ಯಯನದಲ್ಲಿ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಣೆ ಮಾಡಲಾಗಿದ್ದು ಮಾಹಿತಿಗಳನ್ನು ಸಂಗ್ರಹಿಸಲು ಸಂದರ್ಶನ ಅನುಸೂಚಿಯನ್ನು ರಚಿಸಿಕೊಂಡು ಅದನ್ನು ಪೂರ್ವ ಪರೀಕ್ಷೆಗೆ ಒಳಪಡಿಸಿದ ನಂತರ ಬಂದ ತಿದ್ದುಪಡಿಗಳನ್ನು ಮಾಡಿದ ನಂತರ ಅಂತಿಮವಾಗಿ ರಚಿಸಿದ ಸಂದರ್ಶನ ಅನುಸೂಚಿಯನ್ನು ಆಯ್ಕೆಗೊಂಡ ಸೂಚನಾದಾರರಿಗೆ ಅಳವಡಿಸಿ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

1. **ಪ್ರಾಥಮಿಕ ಆಕರಗಳು:** ಸಹಭಾಗಿ ಅವಲೋಕನವನ್ನು ಮಾಹಿತಿ ಸಂಗ್ರಹಣೆಗೆ ಬಳಸಿಕೊಳ್ಳಲಾಗಿದೆ. ಇವುಗಳ ಜೊತೆಗೆ ಆಧುನಿಕ ಸಲಕರಣೆಗಳಾದ ಕ್ಯಾಮರಾ, ಟೇಪ್ ರೆಕಾರ್ಡರ್‌ಗಳನ್ನು ಸಹ ಬಳಸಿಕೊಳ್ಳಲಾಗಿದೆ.

2. **ಅನುಷಂಗಿಕ ಆಕರಗಳು:** ಅನುಷಂಗಿಕ ಮಾಹಿತಿ ಮೂಲಗಳಾದ ದಾಖಲೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಕಟಣೆಗಳು, ಸಂಬಂಧಿಸಿದ ಗ್ರಂಥಗಳು, ಪತ್ರಿಕೆಗಳು, ನಿಯತಕಾಲಿಕೆಗಳು, ಸಮೀಕ್ಷಾ ಗ್ರಂಥಗಳು ಮತ್ತು ವಿಷಯ ಪರಿಣತರೊಂದಿಗೆ ಚರ್ಚಿಸಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಮಾಹಿತಿ ವಿಶ್ಲೇಷಣೆ

ಸಂಶೋಧನಾ ವಿಧಾನದ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಸಂಖ್ಯಾಶಾಸ್ತ್ರೀಯ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಮೂಲಕ ಸಮಾಜಶಾಸ್ತ್ರೀಯ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

## ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳು :

## ವಂಶಾವಳಿ ಗುರುತಿಸುವ ಸಂಪ್ರದಾಯದ ವಿವರ

ಅಳಿಯ ಸಂತಾನ ಅಥವಾ ಸ್ತ್ರಿ ಪ್ರಧಾನವಾದ ಕುಟುಂಬಗಳಲ್ಲಿ ಹುಟ್ಟುವ ಎಲ್ಲಾ ಮಕ್ಕಳು (ಗಂಡನ ಮನೆ ಅಥವಾ ತವರು ಮನೆ) ಮಾತೃ ವಂಶೀಯ ಕುಟುಂಬಕ್ಕೆ ಸೇರಿರುತ್ತಾರೆ ಹಾಗೂ ಗಂಡು ಮಕ್ಕಳು ಮದುವೆಯಾದ ನಂತರ ಹೆಂಡತಿ ಮನೆ ಅಥವಾ ಪ್ರತ್ಯೇಕ ಮನೆಗಳಲ್ಲಿ ವಾಸಿಸುತ್ತಾರೆ. ಇದನ್ನು ಮಲೆಕುಡಿಯರು ಅಳಿಯಕಟ್ಟು ಸಂತಾನ ಅಥವಾ ಅಳಿಯಕಟ್ಟು ವ್ಯವಸ್ಥೆ ಎಂದು ಕರೆಯುತ್ತಾರೆ.

ಮಕ್ಕಳ ಸಂತಾನ ಅಥವಾ ಪುರುಷ ಪ್ರಧಾನ ಕುಟುಂಬಗಳಲ್ಲಿ ಹುಟ್ಟುವ ಎಲ್ಲಾ ಗಂಡು, ಹೆಣ್ಣು ಮಕ್ಕಳು ಪಿತೃವಂಶೀಯ ಕುಟುಂಬಕ್ಕೆ ಸೇರುತ್ತಾರೆ ಹಾಗೂ ಹೆಣ್ಣು ಮಕ್ಕಳು ಮದುವೆಯಾದ ನಂತರ ಗಂಡನ ಕುಟುಂಬಕ್ಕೆ ಸೇರುತ್ತಾರೆ. ಇದನ್ನು ಮಕ್ಕಳಕಟ್ಟು ಅಥವಾ ಮಕ್ಕಳ ಸಂತಾನ ವ್ಯವಸ್ಥೆ ಎಂದು ಕರೆಯುತ್ತಾರೆ.

**ವಂಶಾವಳಿ ಗುರುತಿಸುವ ಸಂಪ್ರದಾಯದ ವಿವರ**

| ಸಂಪ್ರದಾಯ | ಆವೃತ್ತಿ | ಶೇಕಡಾವಾರು |
|---|---|---|
| ಅಳಿಯಕಟ್ಟು | 217 | 54.25 |
| ಮಕ್ಕಳಕಟ್ಟು | 183 | 45.75 |
| ಒಟ್ಟು | 400 | 100.00 |

ಈ ಮೇಲಿನ ಕೋಷ್ಟಕದಲ್ಲಿ ವಂಶಾವಳಿ ಗುರುತಿಸುವ ಸಂಪ್ರದಾಯದ ವಿವರವನ್ನು ನೀಡಲಾಗಿದೆ. ಸಂದರ್ಶಿತ ಒಟ್ಟು ಮಾಹಿತಿದಾರರಲ್ಲಿ ಶೇಕಡ 54.25ರಷ್ಟು ಅಳಿಯಕಟ್ಟು ಮತ್ತು ಶೇಕಡ 45.75ರಷ್ಟು ಮಕ್ಕಳಕಟ್ಟು ಸಂಪ್ರದಾಯವನ್ನು ಅನುಸರಿಸುತ್ತಿದ್ದಾರೆ. ಸಂದರ್ಶನ ಸಮಯದಲ್ಲಿ ತಿಳಿದುಬಂದ ವಿಷಯವೇನೆಂದರೆ, ಸುಳ್ಯ ತಾಲ್ಲೂಕಿನ ದೇವರಗದ್ದೆ, ಕುಳಕುಂದ ಕಾಲೋನಿ, ಬಾಳಗೋಡು, ಅರಮನೆಗಾಯ, ಹಾಡಿಕಲ್ಲು ಮಡಪ್ಪಾಡಿ, ಪೂಮಲೆ, ಮರಕಂಜ ಇನ್ನೂ ಮುಂತಾದ ಸ್ಥಳಗಳಲ್ಲಿ ವಾಸಿಸುವ ಮಲೆಕುಡಿಯರು ಸಾಮಾನ್ಯವಾಗಿ ಮಕ್ಕಳಕಟ್ಟು ಅಥವಾ ಪಿತೃ ವಂಶೀಯ ಸಂಪ್ರದಾಯದಿಂದ ಗುರುತಿಸಿಕೊಂಡರೆ, ಪುತ್ತೂರು ತಾಲ್ಲೂಕಿನ ಸಿರಿಬಾಗಿಲು, ಕುಂಬ್ರಾ ಮತ್ತು ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳ, ಉಜಿರೆ, ಮುಳಿಕ್ಕಾರು, ಮಚ್ಚಿನ, ಕಾರ್ಯತಡ್ಕ, ನಿಡ್ಲೆ, ಪಟ್ರಮೆ, ಕಕ್ಕಿಂಜೆ, ಮುಂಡಾಜೆ, ನೆರಿಯಾ, ಆಲಂಗಾಯ, ಬಾಂಜಾರುಮಲೆ, ಕೋಲೋಡಿ, ಶಿಶಿಲ, ಬಂಗಾಡಿ, ಶಿರ್ಲಾಲು, ನಾವೂರು, ದಿಡುಪೆ ಮುಂತಾದ ಪ್ರದೇಶಗಳಲ್ಲಿ ಅಳಿಯಕಟ್ಟು ಅಥವಾ ಮಾತೃವಂಶೀಯ ಸಂಪ್ರದಾಯವನ್ನು ಅನುಸರಿಸುತ್ತಿರುವುದು ಕಂಡುಬಂದಿದೆ.

ಈ ಮೇಲಿನ ಕೋಷ್ಟಕದಲ್ಲಿ ಮಲೆಕುಡಿಯ ಮಹಿಳೆಯರ ಆಚರಣೆಗಳ ವಿವರವನ್ನು ನೀಡಲಾಗಿದೆ. ಸಂದರ್ಶಿತ ಒಟ್ಟು ಮಾಹಿತಿದಾರರಲ್ಲಿ ಶೇಕಡ 96.3ರಷ್ಟು ಋತುಮತಿ ಆರತಕ್ಷತೆ ಆಚರಣೆಯನ್ನು ಪಾಲಿಸುತ್ತಿದ್ದು, ತಮ್ಮ ಹೆಣ್ಣು ಮಕ್ಕಳು ಋತುಮತಿಯಾದಾಗ ಅದನ್ನು ತಮ್ಮ ಬಳಗಕ್ಕೆಲ್ಲಾ ತಿಳಿಯಲೆಂದು ಆರತಕ್ಷತೆ ಶಾಸ್ತ್ರವನ್ನು ಮಾಡುತ್ತಾರೆ. ಅದನ್ನು ತುಳು ಭಾಷೆಯಲ್ಲಿ 'ಮದ್ಮಲ ಮದ್ಮೆ' ಎಂದು ಕರೆಯುತ್ತಾರೆ. ಅಂದರೆ ಋತುಮತಿಯಾದಾಗಲೇ ಮಧುಮಗಳಂತೆ ಸಿಂಗರಿಸಿ ತಮ್ಮ

**ಆಚರಣೆಗಳ ವಿವರ**

| ಆಚರಣೆಗಳ ವಿವರ | ಹೌದು | ಇಲ್ಲ | ಒಟ್ಟು |
|---|---|---|---|
| ಋತುಮತಿ ಆರತಕ್ಷತೆ | 385 (96.3) | 15 (3.8) | 400 (100.0) |
| ಮುಟ್ಟಾದಾಗ ಪ್ರತ್ಯೇಕತೆ | 400 (100.0) | – 5 | 400 (100.0) |
| ಮದರಂಗಿಶಾಸ್ತ್ರ ಮಾಡುವುದು | 395 (98.8) | 5 (1.3) | 400 (100.0) |
| ನಾಗಸಂಬಂಧಿ ಪೂಜೆ | 289 (72.3) | 111 (27.8) | 400 (100.0) |
| ಪ್ರೇತಗಳಿಗೆ ಎಡೆ ಇಡುವ ಸಂಪ್ರದಾಯ | 378 (94.5) | 22 (5.5) | 400 (100.0) |

ಸೂಚನೆ : ಆವರಣದಲ್ಲಿರುವ ಅಂಕಿ – ಸಂಖ್ಯೆಗಳು ಶೇಕಡವಾರುಗಳನ್ನು ಸೂಚಿಸುತ್ತವೆ

ಮಗಳು ಮದುವೆ ಸಿದ್ಧಳಾಗಿದ್ದಾಳೆ ಎಂಬುದನ್ನು ತಿಳಿಸಿಕೊಡುವುದಕ್ಕೋಸ್ಕರ ಈ ಆಚರಣೆಯನ್ನು ಪಾಲಿಸುತ್ತಾ ಬಂದಿದ್ದಾರೆ. ಶೇಕಡ 3.8ರಷ್ಟು ಋತುಮತಿ ಆರತಕ್ಷತೆ ಆಚರಣೆಯಲ್ಲಿ ಪಾಲಿಸುತ್ತಿಲ್ಲದಿರುವುದು ಕಂಡುಬಂದಿದೆ.

ಪ್ರೇತಗಳಿಗೆ ಎಡೆ ಇಡುವ ಸಂಪ್ರದಾಯವನ್ನು ಶೇಕಡ 94.5ರಷ್ಟು ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದಾರೆ ಮತ್ತು ಶೇಕಡ 5.5ರಷ್ಟು ಈ ಸಂಪ್ರದಾಯವನ್ನು ಆಚರಿಸದೆ ಇರುವವರು ಕಂಡುಬಂದಿದ್ದಾರೆ. ಇದು ಮಾಹಿತಿದಾರರ ಒಂದು ಪ್ರಮುಖ ಸಂಪ್ರದಾಯವಾಗಿದ್ದು, ಮಗುವಿನ ನಾಮಕರಣಶಾಸ್ತ್ರದ ಸಂದರ್ಭದಲ್ಲಿ ಪ್ರೇತಗಳಿಗೆ ಎಡೆ ಬಡಿಸುವುದಾಗಿದೆ. ಈ ಕಾರ್ಯವನ್ನು ಮಗು ಹುಟ್ಟಿದ 10-16ನೇ ದಿನಕ್ಕೆ ಶುದ್ಧ ಶಾಸ್ತ್ರವನ್ನು ಮಾಡಿ ನಂತರ ಮಲೆಕುಡಿಯರ ನಂಬಿಕೆಯಂತೆ ತಮ್ಮ ಕುಟುಂಬದ ಹೊಸ ಸದಸ್ಯನಿಗೆ ತಮ್ಮ ಪೂರ್ವಜರು ಅಥವಾ ತೀರಿ ಹೋದ ಹಿಂದಿನ ತಲೆಮಾರಿನವರು ಪ್ರೇತವಾಗಿ ಯಾವುದೇ ತೊಂದರೆ ನೀಡಬಾರದು ಎಂಬ ನಂಬಿಕೆಯಿಂದ ಇಂದಿಗೂ ಈ ರೀತಿ ಸಂಪ್ರದಾಯವನ್ನು ಆಚರಣೆ ಮಾಡುತ್ತಾ ಬಂದಿದ್ದಾರೆ.

**ವಧುವಿಗೆ ಬಳುವಳಿ ನೀಡುವ ವಿವರ**

| ಬಳುವಳಿ ವಿವರ | ಅಳಿಯ ಕಟ್ಟು | | ಮಕ್ಕಳ ಕಟ್ಟು | |
|---|---|---|---|---|
| | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| ಮೂಗುತಿ | 191 | 54.6 | 159 | 45.4 |
| ಕರಿಮಣಿ ಸರ | 198 | 52.7 | 178 | 47.3 |
| ಕಾಲುಂಗುರ | 203 | 53.3 | 178 | 46.7 |
| ಕುಂಕುಮ | 189 | 52.4 | 172 | 47.6 |
| ಬಳೆ | 189 | 53.7 | 163 | 46.3 |

ಈ ಮೇಲಿನ ಕೋಷ್ಟಕದಲ್ಲಿ ತಿಳಿಯುವುದೇನೆಂದರೆ, ಮಾಹಿತಿದಾರರು ವಿವಾಹದ ಸಂದರ್ಭದಲ್ಲಿ ಮುತ್ತೈದೆಯ ಸೂಚಕವಾಗಿ ಯಾವ ಯಾವ ವಸ್ತುಗಳನ್ನು ಉಡುಗೊರೆಯಾಗಿ ಪಡೆದಿದ್ದಾರೆ ಎಂಬುದನ್ನು ತಿಳಿಸಲಾಗಿದೆ. ಸಂದರ್ಶಿತ ಒಟ್ಟು ಮಾಹಿತಿದಾರರಲ್ಲಿ ಅಳಿಯಕಟ್ಟು ಸಂಪ್ರದಾಯಕ್ಕೆ ಸೇರಿದವರಲ್ಲಿ ಶೇಕಡ 54.6ರಷ್ಟು ಮೂಗುತಿ, ಶೇಕಡ 52.7ರಷ್ಟು ಕರಿಮಣಿ ಸರ, ಶೇಕಡ 53.3ರಷ್ಟು ಕಾಲುಂಗುರು, ಶೇಕಡ 52.4ರಷ್ಟು ಕುಂಕುಮ ಮತ್ತು ಶೇಕಡ 53.7ರಷ್ಟು ಬಳೆಯನ್ನು ಉಡುಗೊರೆಯಾಗಿ ನೀಡುತ್ತಿರುವುದು ಕಂಡುಬಂದಿದೆ.

ಅದೇ ರೀತಿ ಮಕ್ಕಳಕಟ್ಟು ಸಂಪ್ರದಾಯಕ್ಕೆ ಸೇರಿದವರಲ್ಲಿ ಶೇಕಡ 45.4ರಷ್ಟು ಮೂಗುತಿ, ಶೇಕಡ 47.3ರಷ್ಟು ಕರಿಮಣಿ ಸರ, ಶೇಕಡ 46.7ರಷ್ಟು ಕಾಲುಂಗುರ, ಶೇಕಡ 47.6ರಷ್ಟು ಕುಂಕುಮ ಮತ್ತು ಶೇಕಡ 46.3ರಷ್ಟು ಬಳೆಯನ್ನು ಉಡುಗೊರೆಯಾಗಿ ನೀಡುತ್ತಿರುವುದು ಕಂಡುಬಂದಿದೆ.

## ಅಧ್ಯಯನದ ಫಲಿತಗಳು

**01.** ಸುಳ್ಯ ತಾಲ್ಲೂಕಿನಲ್ಲಿ ಸ್ಥಳೀಯ ಬ್ರಾಹ್ಮಣರ ಮನೆಗಳಲ್ಲಿ ಮಲೆಕುಡಿಯರು ಸೇವೆ ಮಾಡುತ್ತಿದ್ದ ಕಾರಣ ಆ ಸ್ಥಳೀಯ ಬ್ರಾಹ್ಮಣರ ಪ್ರಭಾವದಿಂದಾಗಿ ಪಿತೃ ವಂಶೀಯ ಅಥವಾ ಮಕ್ಕಳಕಟ್ಟು ಸಂಪ್ರದಾಯವನ್ನು ಅನುಸರಿಸುತ್ತಿರುವುದು ಕಂಡುಬಂದರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಸ್ಥಳೀಯ ಪ್ರಬಲ ಜಾತಿಗಳಾದ ಬಂಟ ಮತ್ತು ಪೂಜಾರಿಯವರ ಪ್ರಭಾವದಿಂದಾಗಿ ಮಾತೃ ವಂಶೀಯ ಅಥವಾ ಅಳಿಯಕಟ್ಟು ಸಂಪ್ರದಾಯವು ಅಸ್ತಿತ್ವದಲ್ಲಿರುವುದು ಕಂಡುಬಂದಿದೆ.

02. ವಿವಾಹದ ಮುನ್ನ ದಿನ ಶೇಕಡ 98.8ರಷ್ಟು ಮದರಂಗಿಶಾಸ್ತ್ರವನ್ನು ಸಂತೋಷ ಸಂಭ್ರಮದಿಂದ ಆಚರಣೆ ಮಾಡುತ್ತಿರುವುದು ಕಂಡುಬಂದರೆ, ಶೇಕಡ 1.3ರಷ್ಟು ಈ ಆಚರಣೆಯನ್ನು ಮಾಡುತ್ತಿಲ್ಲದಿರುವುದು ತಿಳಿದುಬಂದಿದೆ. ಏಕೆಂದರೆ ಮದರಂಗಿಶಾಸ್ತ್ರವನ್ನು ಮಾಡದ ಕೆಲ ಮನೆಗಳಲ್ಲಿ ಆ ದಿನ ಕೆಟ್ಟ ಅನಾಹುತಗಳು ಸಂಭವಿಸಿದ್ದ ಕಾರಣ ಈ ಆಚರಣೆಯಿಂದ ದೂರ ಉಳಿದಿದ್ದಾರೆ. ಶೇಕಡ 72.3ರಷ್ಟು ನಾಗಸಂಬಂಧಿ ಪೂಜೆ ಆಚರಣೆಯನ್ನು ಮಾಡುತ್ತಿರುವುದು ಕಂಡುಬಂದರೆ, ಶೇಕಡ 27.8ರಷ್ಟು ಈ ಪೂಜೆಯನ್ನು ಆಚರಿಸದಿರುವುದು ತಿಳಿದುಬಂದಿದೆ.

03. ವಧು ದಕ್ಷಿಣೆ ಪದ್ಧತಿಯು ಅಸ್ತಿತ್ವದಲ್ಲಿರುವುದರಿಂದ ವಿವಾಹದ ಸಮಯದಲ್ಲಿ ಮುತ್ತೈದೆಯ ಸೂಚಕವಾಗಿ ಸೂಚಿಸಿದ ವಸ್ತುಗಳನ್ನು ಬಳುವಳಿ ಅಥವಾ ವಧು ದಕ್ಷಿಣೆಯಾಗಿ ವರನ ಕಡೆಯವರು ವಧುವಿಗೆ ಉಡುಗೊರೆಯಾಗಿ ನೀಡುತ್ತಿರುವುದು ಕಂಡುಬಂದಿದ್ದು, ಇವರಲ್ಲಿ ವರದಕ್ಷಿಣೆ ಪದ್ಧತಿಯ ಕಲ್ಪನೆ ಇಲ್ಲವೆಂದೇ ಹೇಳಬಹುದು.

## ಸಲಹೆಗಳು

01. ಮಲೆಕುಡಿಯ ಬುಡಕಟ್ಟು ಸಮುದಾಯವು ತಮ್ಮದೇ ಆದಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನಾಚರಣೆಗಳನ್ನು ಹೊಂದಿದ್ದು ಅವರ ಎಲ್ಲಾ ಆಚರಣೆಗಳಿಗೆ ಮುಕ್ತವಾದ ಅವಕಾಶ ನೀಡಬೇಕು.

02. ಬಾಹ್ಯ ಸಂಸ್ಕೃತಿಯ ಒತ್ತಡಗಳಿಗೆ ಬಲಿಮಾಡದೇ ಅವರ ಮೂಲ ಸಂಸ್ಕೃತಿಯನ್ನು ಉಳಿಸಿ ಬೆಳಸುವ ಪ್ರಯತ್ನ ಮಾಡಬೇಕು

## ಉಪಸಂಹಾರ

'ಮಲೆಕುಡಿಯ' ಬುಡಕಟ್ಟು ಸಮುದಾಯವು ಆಧುನಿಕ ನಾಗರಿಕತೆಯ ಪ್ರಭಾವಕ್ಕೆ ಸಿಲುಕದೆ, ತಮ್ಮದೇ ಆದ ಸಂಪ್ರದಾಯ, ಸಂಸ್ಕೃತಿ, ಭಾಷೆ, ಜೀವನ ಕ್ರಮ, ನ್ಯಾಯ ವ್ಯವಸ್ಥೆ, ಆರಾಧನೆ, ಸಾಂಪ್ರದಾಯಿಕ ವೃತ್ತಿಯ ಜೊತೆಗೆ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ, ಕಾಡು, ಕಣಿವೆ ಎಂದು ನಿಸರ್ಗವನ್ನು ಅವಲಂಬಿಸಿದ್ದು, ಅವುಗಳನ್ನು ರಕ್ಷಿಸುತ್ತಾ, ಗೌರವಿಸುತ್ತಾ ಯಾವುದೇ ರೀತಿಯ ಆಸ್ತಿ, ಸಂಪತ್ತು, ಒಡೆತನ ಎಂಬ ಕಲ್ಪನೆಗಳಿಲ್ಲದೆ ನಿಸರ್ಗವನ್ನು ಸಂರಕ್ಷಿಸಿ ಮುಂದಿನ ತಲೆಮಾರಿಗೆ ಬಳುವಳಿ ನೀಡಿ ಬದುಕಿದವರು. ಭೂಮಿ ಮತ್ತು ಜೀವ ಸೃಷ್ಟಿಯ ಬಗ್ಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡು ತಮ್ಮ ಪರಿಸರವನ್ನು ಸುಂದರವಾಗಿಟ್ಟುಕೊಂಡು ಜೀವಿಸಿದ ಜನಾಂಗವಾಗಿದೆ.

APPROVED BY UGC CARE

## ಪರಾಮರ್ಶನ ಗ್ರಂಥಗಳು


- **"ಮಲೆಕುಡಿಯರ ಉಳಿವು–ತೆರವು" (2011) :** ಕಿರು ಹೊತ್ತಿಗೆ, 2011.
- **ರಾಮಚಂದ್ರಾಚಾರ್ ಹಿ.ಶಿ. (1993):** "ಕುಡಿಯರ ಸಂಸ್ಕೃತಿ", ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ,
- **ವಿವೇಕ ರೈ ಮತ್ತು ಯದುಪತಿ ಗೌಡ (1996) :** "ಮಲೆಕುಡಿಯರು", ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
- **ವಿವೇಕ ರೈ (1977) :** "ತೌಳವ ಸಂಸ್ಕೃತಿ", ಮೈಸೂರು ಸಹ್ಯಾದ್ರಿ ಪ್ರಕಾಶನ.
- **Ambasht and Nawal Kishore (1970) :** "A Critical Study of Tribal Education : A Special Reference to Fanchi District", New Delhi S. Chand and Co.,
- **Census Report, 2011.**
- **Edward Westermark (1894) :** "The History of Human Marriage", New York Mac Millan and Co. Ltd.,
- **Hassan Syed Siraj Ul (1983):** "Tribal India Today", New Delhi Harnam Publications.
- **http://www.malekudiya.com.**


■■

*– 65ನೇ ಪುಟದಿಂದ ಮುಂದುವರೆದುದು*

ಲಕ್ಕುಂಡಿ ಮತ್ತು ಶ್ರವಣಬೆಳಗೊಳ ಗತವೈಭವ ಕಂಡವು. ಅನ್ಯಧರ್ಮದವರ ಹೊಡೆತನಕ್ಕೆ ನಲುಗಿದ ಧರ್ಮ ಮತ್ತು ಜಿನಾಲಯಗಳು ರೂಪಾಂತರ–ನಾಶ–ಪುನರ್‌ನಿರ್ಮಾಣಗೊಂಡಿದ್ದು ಇತಿಹಾಸ.

ಕಾಲಕಾಲಕ್ಕೆ ಧರ್ಮ ಸಂಘರ್ಷಗಳು ನಡೆದು ಒಬ್ಬರು ಮತ್ತೊಬ್ಬರ ಮೇಲೆ ದಾಳಿ ನಡೆಯಿಸಿ ಅವರವರ ಧಾರ್ಮಿಕ ಶ್ರದ್ಧಾ ಕೇಂದ್ರಗಳು ನಾಶ ಪಡಿಸಿ ಬೀಗುತ್ತಾರೆ. ವಿಚಿತ್ರವೆಂದರೆ ಕಟ್ಟಡಗಳನ್ನು ಕೆಡವಿದ್ದಾರೆ ವಿನಃ ಧರ್ಮ ಕೆಡವಲಾಗಲಿಲ್ಲ. ಭೌತಿಕ ವಲಯಗಳನ್ನು 'ನಾಶ' ಮಾಡಿದರೇ ವಿನಃ ಬೌದ್ಧಿಕ ಸಂಗತಿಗಳನ್ನಲ್ಲ. ಹೊರಗೆ ಕಟ್ಟಿದ ಕಟ್ಟಡಗಳನ್ನು ಸಾವಿರ ಸಾವಿರ ಬಾರಿ ಕೆಡವಬಹುದು. ಆದರೆ ಒಳಗೆ ನಿರ್ಮಿಸಿದ ಧಾರ್ಮಿಕ ತತ್ವ ಸಿದ್ಧಾಂತಗಳನ್ನು ಕೆಡವಲಾಗದು. ಬೌದ್ಧರ ಮೇಲೆ ಜೈನರ ದಾಳಿ, ಜೈನರ ಮೇಲೆ ಶೈವ–ವೈಷ್ಣವರ ದಾಳಿ, ವೈಷ್ಣವರ ಮೇಲೆ ಶೈವ–ವೀರಶೈವರ ದಾಳಿ, ಇವರೆಲ್ಲರ ಮೇಲೆ ಮುಸ್ಲಿಂರ ದಾಳಿ, ಹಿಂದೂಗಳ ಮೇಲೆ ಕ್ರಿಶ್ಚನ್ನರ ದಾಳಿ. ಕಟ್ಟು–ಕೆಡುವು–ಪುನರ್ ನಿರ್ಮಾಣ ಕಾಲ ಕಾಲಕ್ಕೆ ಎಲ್ಲ ಮತ–ಧರ್ಮಗಳಲ್ಲಿ ನಡೆಯುತ್ತಲೇ ಇದೆ. ಇದಕ್ಕೆ ಕೊನೆಯಿಲ್ಲ.

## ಪರಾಮರ್ಶನ ಗ್ರಂಥಗಳು


- **ಡಾ. ಎಂ.ಎಂ. ಕಲಬುರ್ಗಿ (2010) :** ಮಾರ್ಗ ಸಂ–3, ಬೆಂಗಳೂರು ಸಪ್ನ ಬುಕ್ ಹೌಸ್. ಪು.36
- **ಡಾ. ದೇವರಕೊಂಡಾರೆಡ್ಡಿ (2020) :** ಕರ್ನಾಟಕ ಜೈನಶಾಸನಗಳು ಸಂ–5 ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. 136
- ಅದೇ
- **ಡಾ. ದೇವರಕೊಂಡಾರೆಡ್ಡಿ (2019) :** ಕರ್ನಾಟಕ ಜೈನಶಾಸನಗಳು ಸಂ–4 ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. 495
- **ಡಾ. ದೇವರಕೊಂಡಾರೆಡ್ಡಿ (2019) :** ಕರ್ನಾಟಕ ಜೈನಶಾಸನಗಳು ಸಂ–2 ಹಂಪಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. 182
- **ಡಾ. ಎಂ.ಎಂ. ಕಲಬುರ್ಗಿ (2010) :** ಮಾರ್ಗ ಸಂ–3, ಬೆಂಗಳೂರು ಸಪ್ನ ಬುಕ್ ಹೌಸ್, ಪು.42
- **ಡಾ. ದೇವರಕೊಂಡಾರೆಡ್ಡಿ (2018) :** ಕರ್ನಾಟಕ ಜೈನಶಾಸನಗಳು ಸಂ–1 ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. 342–343.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಬೀದಿ ಮಕ್ಕಳ ಬದುಕಿನ ಸ್ಥಿತಿಗತಿಗಳ ಒಂದು ಅಧ್ಯಯನ

✍ **ನಾಗೇಂದ್ರಪ್ಪ,** ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

*ಸಾರಾಂಶ*

*"ಬೀದಿ ಮಕ್ಕಳ ಬದುಕಿನ ಸ್ಥಿತಿಗತಿಗಳ ಕುರಿತು ಒಂದು ಅಧ್ಯಯನ " ಎಂಬ ಈ ಸಂಶೋಧನಾ ಲೇಖನವು ಬೀದಿ ಮಕ್ಕಳು ಹೊಂದಿರುವಂತಹ ಸಮಸ್ಯೆಗಳು ಹಾಗೂ ಸವಾಲುಗಳು ಬಗ್ಗೆ ಈ ಸಂಶೋಧನಾ ಲೇಖನವು ಒಳಗೊಂಡಿದೆ ಮತ್ತು ಅವುಗಳಿಗೆ ಪರಿಹಾರಗಳನ್ನು ಸಲಹೆಗಳ ರೂಪದಲ್ಲಿ ನೀಡಲಾಗಿದೆ. ಭಾರತ ದೇಶವು ಪ್ರಜಾಪ್ರಭುತ್ವದ ಒಕ್ಕೂಟ ವ್ಯವಸ್ಥೆಯನ್ನು ಹೊಂದಿದ್ದು ಇಲ್ಲಿನ ರಾಜ್ಯಗಳು ಮಕ್ಕಳ ಹಕ್ಕುಗಳ ಬಗೆಗೆ ವಿಶೇಷವಾದ ಕಾಳಜಿಗಳನ್ನು ಹೊಂದಿರುತ್ತವೆ. ಪ್ರಸ್ತುತ ಭಾರತದಲ್ಲಿ ಮಕ್ಕಳು ಹಲವಾರು ಸಮಸ್ಯೆಗಳು ಹಾಗೂ ಸವಾಲುಗಳನ್ನು ಎದುರಿಸುತ್ತಿರುವುದು ಕಂಡು ಬಂದಿದೆ. ಕರ್ನಾಟಕ ರಾಜ್ಯದಲ್ಲೂ ಪೋಷಕರಿಲ್ಲದ ಮಕ್ಕಳು ಆಶ್ರಯಗಳಿಂದ ವಂಚಿತರಾದ ಮಕ್ಕಳು ಇಂದು ಬೀದಿಗಳಲ್ಲಿ ಅಲೆಮಾರಿಗಳಾಗಿ ದಿಕ್ಕು-ದೆಸೆಯಿಲ್ಲದೆ ನರಳುತ್ತಿರುವುದು ಕಂಡು ಬರುತ್ತಿದೆ. ಕೌಟಂಬಿಕ ಆಶ್ರಯವಿಲ್ಲದೆ ಸರ್ಕಾರದ ಸೌಲಭ್ಯವಿಲ್ಲದೆ ಪ್ರಾಥಮಿಕ ಶಿಕ್ಷಣದ ಅವಕಾಶಗಳಿಂದ ವಂಚಿತರಾಗಿ ತಮ್ಮ ಅತ್ಯಂತ ಅಮೂಲ್ಯವಾದ ಜೀವನವನ್ನು ನಾಶ ಮಾಡಿಕೊಳ್ಳುತ್ತಿರುವುದು ಸಂಶೋಧನೆಯ ಅಧ್ಯಯನದಿಂದ ತಿಳಿದು ಬಂದಿದೆ. ತಂದೆ-ತಾಯಿಗಳ ಪ್ರೀತಿ ವಾತ್ಸಲ್ಯ ಮಮತೆಗಳಿಂದ ದೂರವಾಗಿ ಅಂತಹ ಮಕ್ಕಳು ಮುಂದಿನ ದಿನಗಳಲ್ಲಿ ಸಮಾಜಕ್ಕೆ ಕಂಟಕವಾಗಿ ಪರಿಗಮಿಸಿರುವುದು ಕೂಡ ಈ ಅಧ್ಯಯನದಿಂದ ತಿಳಿದು ಬಂದಿದೆ. ಇಂತಹ ಜ್ವಲಂತ ಸಮಸ್ಯೆಗಳನ್ನು ಎದುರಿಸುವ ಮೂಲಕ ತಮ್ಮ ವ್ಯಕ್ತಿತ್ವದ ವಿಕಾಸನವನ್ನು ವೃದ್ಧಿಗೊಳಿಸಿಕೊಳ್ಳಲು ಸಾಧ್ಯವಾಗದೆ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದನ್ನು ಹಾಗೂ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದು ಈ ಸಂಶೋಧನಾ ಲೇಖನದ ಉದ್ದೇಶವಾಗಿದೆ.*

*ಮುಖ್ಯ ಪದಗಳು : ಬೀದಿಮಕ್ಕಳು, ಸಮಾಜ ಘಾತುಕ ಚಟುವಟಿಕೆ, ಪೋಷಕರಹಿತ ಮಕ್ಕಳು, ಭಿಕ್ಷಾಟನೆಯ ಗೀಳು, ಅಲೆಮಾರಿ ಬದುಕು.*

## ಸಂಶೋಧನಾ ವ್ಯಾಪ್ತಿ

"ಬೀದಿ ಮಕ್ಕಳ ಬದುಕಿನ ಸ್ಥಿತಿಗತಿಗಳ ಕುರಿತು ಒಂದು ಅಧ್ಯಯನ" ಎನ್ನುವ ಈ ಸಂಶೋಧನಾ ಲೇಖನವು ತನ್ನ ಸಂಶೋಧನಾ ಲೇಖನದ ಅಧ್ಯಯನ ವ್ಯಾಪ್ತಿಯಲ್ಲಿ ತುಮಕೂರು ಜಿಲ್ಲೆಯ ಪಾವಗಡ ಮತ್ತು ಮಧುಗಿರಿ ಪಟ್ಟಣಗಳನ್ನು ಮಾತ್ರ ಪರಿಗಣಿಸಲಾಗಿದೆ. ಈ ಎರಡು ಪಟ್ಟಣಗಳಲ್ಲಿನ ಬೀದಿ ಮಕ್ಕಳ ಸ್ಥಿತಿಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಿ ಮಕ್ಕಳ ಸಮಸ್ಯೆಗಳು ಅವರುಗಳು ಅನುಭವಿಸುವ ಸಮಸ್ಯೆಗಳ ಬಗ್ಗೆ ಈ ಲೇಖನದಲ್ಲಿ ವಿವರಣೆ ನೀಡಲಾಗಿದೆ.

## ಉದ್ದೇಶಗಳು

1. ಬೀದಿ ಮಕ್ಕಳನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆ.
2. ಬೀದಿ ಮಕ್ಕಳ ಸಮಸ್ಯೆಗಳನ್ನು ಪಟ್ಟಿ ಮಾಡುವುದು.
3. ಮಕ್ಕಳನ್ನು ಸಂದರ್ಶನಕ್ಕೆ ಒಳಪಡಿಸುವ ಮೂಲಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.
4. ಬೀದಿ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸಲಹೆಗಳನ್ನು ನೀಡುವುದು.
5. ಬೀದಿ ಮಕ್ಕಳ ಸಮಸ್ಯೆಗಳಿಗೆ ಪರಿಹಾರಗಳನ್ನು ಸಲಹೆಗಳ ರೂಪದಲ್ಲಿ ಕಂಡುಕೊಳ್ಳುವುದು.

## ಸಂಶೋಧನಾ ಅಂತರ

ಪ್ರಸ್ತುತ ನಗರ ಪ್ರದೇಶಗಳಲ್ಲಿರುವ ಬೀದಿ ಮಕ್ಕಳ ಹಾಗೂ ಅವರ ಹಕ್ಕುಗಳ ಸಂರಕ್ಷಣೆಯ ಬಗೆಗೆ ಸಾಕಷ್ಟು ಸಂಶೋಧನೆಗಳು, ಅಧ್ಯಯನಗಳು, ವಿಚಾರಣೆ ಸಂಕೀರ್ಣ ಮುಂತಾದವುಗಳ ಮೂಲಕ ಬೀದಿ ಮಕ್ಕಳ ಬದುಕಿನ ಸ್ಥಿತಿಗತಿಗಳ ಬಗ್ಗೆ ಅಧ್ಯಯನಗಳು ಆಗಿದ್ದರು ಕುರಿತು ಮತ್ತಷ್ಟು ಅಧ್ಯಯನಗಳು ನಿರ್ದಿಷ್ಟವಾಗಿ ಸಂಶೋಧನೆಗಳು ಮಕ್ಕಳ ಹಕ್ಕುಗಳ ಬಗ್ಗೆ ಅಧ್ಯಯನದ ಮೂಲಕ ಬೆಳಕು ಚೆಲ್ಲುವ ಅನಿವಾರ್ಯತೆ ಇರುವುದು ಕಂಡು ಬಂದಿದೆ.

## ಬೀದಿ ಮಕ್ಕಳ ಸಮಸ್ಯೆಗಳು

1. ಆಸರೆಯಿಲ್ಲದಿರುವುದು.
2. ಲಿಂಗ ತಾರತಮ್ಯ.
3. ಬಾಲ ಕಾರ್ಮಿಕತನ.
4. ಆರೋಗ್ಯ ಸಮಸ್ಯೆಗಳು.
5. ಮಕ್ಕಳ ದುರುಪಯೋಗ.
6. ಹೆಣ್ಣು ಮಕ್ಕಳ ಲೈಂಗಿಕ ಕಿರುಕುಳ.

ಬೀದಿ ಬದಿಯಲ್ಲಿರುವ ಮಕ್ಕಳ ಮೇಲಿನ ಅಂಶಗಳಿಲ್ಲದೆ ಇನ್ನೂ ಹಲವಾರು ಸಮಸ್ಯೆಗಳನ್ನು ನಿರಂತರವಾಗಿ ದಿನ ನಿತ್ಯದ ಜೀವನದಲ್ಲಿ ಎದುರಿಸುತ್ತಿರುವುದು ಕಂಡು ಬಂದಿದೆ.

## ಪರಿಹಾರ ರೂಪದ ಸಲಹೆಗಳು

1. ಸರ್ಕಾರಗಳು ಬೀದಿ ಮಕ್ಕಳ ರಕ್ಷಣೆಗೆ ಮುಂದಾಗಬೇಕು.
2. ಸಂಘ ಸಂಸ್ಥೆಗಳು ಬೀದಿ ಮಕ್ಕಳನ್ನು ಗುರುತಿಸಿ ಸಂರಕ್ಷಿಸುವುದು.
3. ಕುಟುಂಬಗಳಲ್ಲಿ ಪೋಷಕರು ಉತ್ತಮ ನಡವಳಿಕೆಯಿಂದಿರಬೇಕು.
4. ಸಾರ್ವಜನಿಕರು ಅನಾಥ ಮಕ್ಕಳ ಕಾಳಜಿವಹಿಸಬೇಕು.
5. ಸರ್ಕಾರ ತನ್ನ ಯೋಜನೆಗಳ ಮೂಲಕ ಬೀದಿ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದು.

ಬೀದಿ ಮಕ್ಕಳ ಆರೋಗ್ಯ ಕ್ಷೇತ್ರದ ಕೋಷ್ಟಕದಲ್ಲಿರುವಂತೆ ತುಮಕೂರು ಜಿಲ್ಲೆಯ ಪಾವಗಡ ಮತ್ತು ಮಧುಗಿರಿ ಹಾಗೂ ಕೊರಟಗೆರೆ ನಗರಗಳಲ್ಲಿರುವ ಬೀದಿ ಮಕ್ಕಳಲ್ಲಿ 150 ಮಂದಿ ಮಕ್ಕಳನ್ನು ಸಂದರ್ಶನಕ್ಕೆ ಒಳಪಡಿಸಿದಾಗ ಆರೋಗ್ಯ ಕ್ಷೇತ್ರದಲ್ಲಿ ಮಕ್ಕಳ ಬದುಕಿನ ಸ್ಥಿತಿಗತಿಗಳ ಅಧ್ಯಯನದ ಒಂದು ಕೋಷ್ಟಕವಾಗಿದೆ. ಭಾರತದಲ್ಲಿನ ಪ್ರತಿಯೊಂದು ದೊಡ್ಡ ಹಾಗೂ ಸಣ್ಣ

APPROVED BY UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಬೀದಿ ಮಕ್ಕಳ ಆರೋಗ್ಯ ಕ್ಷೇತ್ರದ ಕೋಷ್ಟಕ**

| | | ಸಂದರ್ಶನದಲ್ಲಿ ಪ್ರತಿಕ್ರಿಯಿಸಿದವರು (150) | ಶೇಕಡಾವರು (%) |
|---|---|---|---|
| **ಅನಾರೋಗ್ಯ** | **ಹೌದು** | **115** | **76.70%** |
| | **ಇಲ್ಲ** | **35** | **23.30%** |
| **ಅನಾರೋಗ್ಯಕ್ಕೆ ಒಳಗಾದವರು** | **ವರ್ಗವಾರು** | | |
| | **ಜ್ವರ** | **56** | **37.30%** |
| | **ತಲೆನೋವು** | **20** | **13.30%** |
| | **ಕೆಮ್ಮು** | **42** | **28.00%** |
| | **ಹೊಟ್ಟೆನೋವು** | **17** | **11.30%** |
| | **ಇತರೆ** | **15** | **10.00%** |

ನಗರಗಳಲ್ಲಿ ಇಂದು ಲಕ್ಷಗಟ್ಟಲೆ ಬೀದಿ ಮಕ್ಕಳು ಬೀದಿಗಳಲ್ಲಿ ಪಾಳು ಬಿದ್ದ ವಾಸಸ್ಥಳಗಳಲ್ಲಿ ವಾಸಿಸುತ್ತಿದ್ದಾರೆ. ಇಂತಹ ಮಕ್ಕಳನ್ನು ಇಂದು ಸರ್ಕಾರಗಳು ಸಂರಕ್ಷಣೆ ಮಾಡುವಲ್ಲಿ ಆಸಕ್ತಿಯನ್ನು ತೋರದೆ ಇರುವುದು ಒಂದು ರೀತಿಯ ಶೋಚನೀಯವಾಗಿದೆ.

ಕೌಟಂಬಿಕ ಕಲಹಗಳಿಂದಾಗಿ ಪೋಷಕರ ಆಸರೆಗಳಿಲ್ಲದೆ ಒಂಟಿಯಾಗಿರುವ ಅನಾಥ ಮಕ್ಕಳು ಬೀದಿಗಳಲ್ಲಿ ವಾಸಿಸಲು ಪರಿಸ್ಥಿತಿ ಅವರನ್ನು ಆಕರ್ಷಿಸುತ್ತಿದೆ. ಇಂತಹ ಮಕ್ಕಳು ತಮ್ಮ ಜೀವನದ ಸಂಪೂರ್ಣ ಜವಾಬ್ದಾರಿಗಳನ್ನು ಬೀದಿ ಮಕ್ಕಳೆ ತೆಗೆದುಕೊಳ್ಳುತ್ತಾರೆ ಬೀದಿ ಮಕ್ಕಳಿಗೆ ಸಾಮಾನ್ಯವಾಗಿ ಯಾವುದೇ ರೀತಿಯ ಗುರುತರವಾದ ಆಧಾರಗಳು ಇಲ್ಲದಿರುವುದು ಒಂದು ಶೋಚನೀಯವಾಗಿದೆ. ಬಸ್ ನಿಲ್ದಾಣ, ರೈಲ್ವೇ ನಿಲ್ದಾಣಗಳು, ಬೀದಿಗಳಲ್ಲಿ, ಹೋಟೆಲ್‌ಗಳಲ್ಲಿ, ವಸತಿ ಗೃಹಗಳಲ್ಲಿ ಬಾಲ ಕಾರ್ಮಿಕರಾಗಿ ದುಡಿಯುವಂತಹ ಸ್ಥಿತಿಯು ಕೂಡ ನಿರ್ಮಾಣವಾಗುತ್ತದೆ.

## ಉಪ ಸಂಹಾರ

ಭಾರತದಂತಹ ದೇಶಗಳಲ್ಲಿ ವಿಭಿನ್ನ ಕ್ಷೇತ್ರಗಳಲ್ಲಿ ಮಕ್ಕಳ ರಕ್ಷಣೆ ಉಲ್ಲಂಘನೆಯಾಗಿ ಆ ಮೂಲಕ ಉಲ್ಲೇಖಿಸಿರುವ ರೀತಿಯಲ್ಲಿ ಹಲವು ಜ್ವಲಂತ ಸಮಸ್ಯೆಗಳಿಗೆ ಸಿಲುಕಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಒಂದು ಕ್ಷೇತ್ರವೆಂದರೆ ಅದು ಬೀದಿ ಮಕ್ಕಳು. ಬೀದಿ ಮಕ್ಕಳು ಅನುಭವಿಸುವಂತಹ ಹಲವು ಕ್ಷೇತ್ರಗಳಲ್ಲಿನ ಸಮಸ್ಯೆಗಳಲ್ಲಿ ಈ ಸಂಶೋಧನಾ ಲೇಖನದ ಅಧ್ಯಯನದ ದೃಷ್ಟಿಯಿಂದ ಆರೋಗ್ಯ ಕ್ಷೇತ್ರವನ್ನು ಪರಿಗಣಿಸಿದ್ದು ಸಂದರ್ಶನದ ಮೂಲಕ ಸಮಸ್ಯೆಗಳಿಗೆ ಪರಿಹಾರಗಳಿಗೆ ಕಂಡು ಕೊಳ್ಳುವಲ್ಲಿ ಈ ಅಧ್ಯಯನ ಸಹಕಾರಿಯಾಗಿದೆ.

## ಪರಾಮರ್ಶನ ಗ್ರಂಥಗಳು


- **Dr. Maria A. :** Access to education of street children in bangalore city, Publishing- Clevar Fax Publication.
- **Sharon G. flake :** "Begging for change" Publishing- Little Brown Books
- 1959 ಬಾಂಬೆ ಮಕ್ಕಳ ಭಿಕ್ಷಾಟಾನೆ ನಿಷೇಧ ಕಾಯ್ದೆ.
- 2012 ಪೋಕ್ಸೋ ಕಾಯ್ದೆ.


■■

*– 104ನೇ ಪುಟದಿಂದ ಮುಂದುವರೆದುದು*

ಒಟ್ಟಾರೆಯಾಗಿ ಹೇಳಬೇಕೆಂದರೆ ಮಹಿಳಾ ವಲಸೆಗಾರರ ಕುರಿತ ಲಿಂಗ ವ್ಯವಸ್ಥೆ ತಂತ್ರಗಳು ಸರಳೀಕೃತ ವಿಚಾರಗಳನ್ನು ಉತ್ಪಾದನೆ ಮತ್ತು ಮರುಉತ್ಪಾದನೆಗೊಳಿಸುತ್ತಾ ಇರುತ್ತದೆ. ಅಭಿವೃದ್ಧಿ ಕಾರ್ಯತಂತ್ರಗಳ ವಿಫಲತೆಯನ್ನು ತಪ್ಪಿಸಲು, ಜಗತ್ತಿನಾದ್ಯಂತ ಮಹಿಳಾ ವಲಸಿಗರು ರೂಪಾಂತರ ಪ್ರಕ್ರಿಯೆಗಳನ್ನು ಪ್ರಾರಂಭಿಸಿದರು. ಅವರ ನ್ಯಾಯೋಚಿತ ನ್ಯಾಯಸಮ್ಮತ ದೂರದೃಷ್ಟಿ ಮತ್ತು ನ್ಯಾಯಸಮ್ಮತ ಸಾಮಾಜಿಕ ಸಂಬಂಧಗಳ ಅವರ ದೃಷ್ಟಿಕೋನಗಳ ಚರ್ಚೆಯನ್ನು ವಲಸೆ, ಜಂಡರ್ ಮತ್ತು ಅಭಿವೃದ್ಧಿಯಿಂದ ಪ್ರಾರಂಭಿಸಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


- **ಅರ್ನೆಸ್ಟ್ ಜಾರ್ಜ್ ರಾವೆನ್‌ಸ್ಟೈನ್ (1889) :** ದಿ ಲಾಸ್ ಆಫ್ ಮೈಗ್ರೇಶನ್, ಜರ್ನಲ್ ಆಫ್ ದಿ ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿ, ವಾಲ್ಯೂಮ್. 52, ನಂ. 2 (ಜೂನ್).
- **ಎಂ. ಹೈನ್ರಿ, (2012) :** ನ್ಯಾಷನಲ್ ವರ್ಕ್‌ಶಾಪ್ ಆನ್ ಇಂಟರನಲ್ ಮೈಗ್ರೇಶನ್ ಅಂಡ್ ಹುಮನ್ ಡೆವಲಪಮೆಂಟ್ ಇನ್ ಇಂಡಿಯಾ, ವರ್ಕ್‌ಶಾಪ್ ಕಂಪೆಂಡಿಯಮ್, ವಾಲ್ಯೂಮ್. 2, ವರ್ಕ್‌ಶಾಪ್ ಪೇಪರ್ಸ್: ಯುನೈಟೆಡ್ ನೇನ್ ಎಜುಕೇಷನಲ್, ಸೈಂಟಿಫಿಕ್ ಅಂಡ್ ಕಲ್ಚರಲ್ ಆರ್ಗನೈಜೆಶನ್, ಯುನಿಎಸ್‌ಸಿಒ, ನ್ಯೂ ಡೆಲ್ಲಿ.
- **ಚಾಂಟ್ ಎಸ್., (1992) :** ಜಂಡರ್ ಆ್ಯಂಡ್ ಮೈಗ್ರೇಶನ್ ಇನ್ ಡೆವಲಪಿಂಗ್ ಕಂರ್ಟಿಸ್ಸ್: ಬೆಲ್ಹೇವನ್ ಪ್ರೆಸ್, ಲಂಡನ್.
- **ಜಸ್ಟಿನಾ ಡುಗ್ಬಾಜಾ (2012) :** ಜಂಡರ್, ಲೈವಲಿಹುಡ್ ಆ್ಯಂಡ್ ಮೈಗ್ರೇಶನ್ ಇನ್ ಆಫ್ರಿಕಾ: ಕ್ಲಿಬ್ರಿಸ್, ಕಾರ್ಪ್.


■■

*– 63ನೇ ಪುಟದಿಂದ ಮುಂದುವರೆದುದು*


- **ವಚನ ಬೆಳಕು (2018) :** ರಂಜಾನ್ ದರ್ಗಾ, ಗದಗ ಲಡಾಯಿ ಪ್ರಕಾಶನ.
- **ಡಾ. ಕೆ.ರವೀಂದ್ರನಾಥ (ಸಂ.) (2021) :** ಸಮಗ್ರ ವಚನ ಸಂಪುಟ 6, ಸಂಕೀರ್ಣ ವಚನ ಸಂಪುಟ–1, ಕರ್ನಾಟಕ ಸರ್ಕಾರ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ವೆಂಕಟೇಶ ಕೆ. ಜನಾದ್ರಿ (ಜೂನ್ 2012) :** ಸಂಪಾದಕರು: ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳವರು ಬಸವಪಥ, ನೇರ, ದಿಟ್ಟ, ಧೀಮಂತ ಶರಣ ಅಂಬಿಗರ ಚೌಡಯ್ಯ, ಬೆಂಗಳೂರು 384, ಬಸವಸಮಿತಿ, ಬಸವ ಭವನ.
- **ಶಂಕರ ಮ. ಪಾಟೀಲ (ಡಿಸೆಂಬರ್–2006) :** ಸಂಪಾದಕರು: ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳವರು ಬಸವಪಥ, ಅಂಬಿಗರ ಚೌಡಯ್ಯ, ಶಿವದೇವ ಸಂಬಂಧ ಬೆಂಗಳೂರು ಬಸವಸಮಿತಿ, ಬಸವ ಭವನ.
- **ಶಿ. ಗು. ಕುಸುಗಲ್ಲ (ಜುಲೈ–ಆಗಸ್ಟ್, 2017) :** ಸಂಪಾದಕರು: ಡಾ. ಮೃತ್ಯುಂಜಯ ರುಮಾಲೆ. ಬಸವಪಥ, ನಿರ್ಭೀತ ನಿಜಶರಣ ಅಂಬಿಗರ ಚೌಡಯ್ಯ ಬಸವಸಮಿತಿ, ಬಸವ ಭವನ, ಬೆಂಗಳೂರು,
- **ಶರಣಪ್ಪ ಗುಡದಿನ್ನಿ, (ಜೂನ್ 2018) :** ಸಂಪಾದಕರು: ಡಾ. ಮೃತ್ಯುಂಜಯ ರುಮಾಲೆ, ಬಸವಪಥ, ಅಂಬಿಗರ ಚೌಡಯ್ಯ, ಬೆಂಗಳೂರು ಬಸವಸಮಿತಿ, ಬಸವ ಭವನ.


■■

APPROVED BY UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

# ರಾಜ್ಯ ಆದಾಯ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಕೌಟಿಲ್ಯನ ಅರ್ಥಶಾಸ್ತ್ರ ಪ್ರಸ್ತುತತೆ – ಒಂದು ಅಧ್ಯಯನ

✍ **ಡಾ. ಸುಜಾತಮ್ಮ,** ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.

*ಸಾರಾಂಶ*

*ಕೌಟಿಲ್ಯನ ಅರ್ಥಶಾಸ್ತ್ರ ರಾಜ್ಯ ಆದಾಯ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಿಸುವುದು ಪತ್ರಿಕೆಯ ಮುಖ್ಯ ಉದ್ದೇಶವಾಗಿದೆ.ಕೌಟಿಲ್ಯನ ಅರ್ಥಶಾಸ್ತ್ರವು ಪ್ರಪಂಚದ ಅತ್ಯಂತ ಹಳೆಯ ಗ್ರಂಥಗಳಲ್ಲಿ ಆರ್ಥಿಕ ಆಡಳಿತದ ಕುರಿತು ಒಂದಾಗಿದೆ. ಭಾರತದಲ್ಲಿ 2500 ವರ್ಷಗಳ ಮೊದಲು ಸಂಸ್ಕೃತ ಭಾಷೆಯಲ್ಲಿ ಬರೆದ ಕೌಟಿಲ್ಯ ಅರ್ಥಶಾಸ್ತ್ರ ಎಂಬ ಪುಸ್ತಕವು ರಾಜ್ಯವನ್ನು ಆಳುವ ಸಿದ್ಧಾಂತಗಳು ಮತ್ತು ತತ್ವಗಳನ್ನು ಚರ್ಚಿಸುತ್ತದೆ.ಈ ಗ್ರಂಥವು ರಾಜ್ಯಶಾಸ್ತ್ರ , ಅರ್ಥಶಾಸ್ತ್ರ, ಬೇಹುಗಾರಿಕೆ, ಆಡಳಿತ, ಯುದ್ಧ, ವಿಜ್ಞಾನ, ಪರಿಸರ ವಿಜ್ಞಾನ ಮತ್ತು ಮಾನವ ಜೀವಕ್ಕೆ ಸಂಬಂಧಿಸಿದ ವಿವಿಧ ಅಂಶಗಳೊಂದಿಗೆ ಸಂಪೂರ್ಣವಾಗಿ ವ್ಯವಹರಿಸುತ್ತದೆ. ಇದಲ್ಲದೆ ಸಂಪತ್ತು ಆದಾಯ, ಕೌಟಿಲ್ಯ ಆರ್ಥಿಕತೆಯ ಆದಾಯ ರಾಜ್ಯಗಳ ತೆರಿಗೆಗಳು ಮತ್ತು ರಾಜ್ಯ ಆದಾಯ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಮಾರ್ಗಸೂಚಿಗಳ ಸದೃಢ ಆರ್ಥಿಕತೆ ತತ್ವಗಳನ್ನು ವಿವರಿಸುವುದು ಪತ್ರಿಕೆಯ ಉದ್ದೇಶವಾಗಿದೆ.*

*ಪ್ರಮುಖ ಪದಗಳು : ಆದಾಯ, ತೆರಿಗೆಗಳು, ಸರಕುಗಳು ರಫ್ತು ಮತ್ತು ಅಮದು ಇತ್ಯಾದಿ.*

ಚಾಣಕ್ಯ ಒಬ್ಬ ಶ್ರೇಷ್ಠ ಚಿಂತಕ, ಶೀಘ್ರವಾಗಿ ಹಾಗೂ ದೀರ್ಘಕಾಲ ಉಳಿಯುವ ಕೆಲಸ ಮಾಡಿದ ಮನುಷ್ಯ.ಉತ್ತಮ ಆಡಳಿತಗಾರ ಹಾಗೂ ಶಿಸ್ತಿನ ಉಪಾಧ್ಯಾಯ,ಪರಿಣಾಮಕಾರಿ ಕ್ರಿಯಾಯೋಜನೆ ರೂಪಿಸಬಲ್ಲ ತಂತ್ರಗಾರ. ಗುರುಕುಲವೊಂದರಲ್ಲಿ ಕಲಿಸುತ್ತಿದ್ದಾತ, ನಂದರ ಕುಲವನ್ನು ನಾಶಗೊಳಿಸಬೇಕೆಂದು ಪಣ ತೊಟ್ಟ. ಜ್ಞಾನವನ್ನು ಹಂಚಲು ಹಾಗೂ ಸಮಾಜದ ಒಳಿತಿಗಾಗಿ ಶಿಕ್ಷಕ ವೃತ್ತಿಯನ್ನು ತೊರೆದ.

ಆತ ತನ್ನ ಜೀವನದ ಎಲ್ಲ ಕೆಲಸವನ್ನೂ 'ಅರ್ಥಶಾಸ್ತ್ರ'ದಲ್ಲಿ ದಾಖಲಿಸಿದ್ದಾನೆ. ಚಕ್ರವರ್ತಿ ಅಶೋಕ, ಚಾಣಕ್ಯನ ಆರ್ಥಶಾಸ್ತ್ರವನ್ನು ಅಧ್ಯಯಿಸಿದ್ದ ಎನ್ನಲಾಗಿದೆ. ಮುಘಲರನ್ನು ಸೋಲಿಸಲು ಕಾರ್ಯನೀತಿ ರೂಪಿಸಲು ಛತ್ರಪತಿ ಶಿವಾಜಿ ಈ ಹೊತ್ತಗೆಯನ್ನು ಆಧರಿಸಿದ್ದ ಎನ್ನುತ್ತಾರೆ. 'ಗುರಿಯನ್ನು ಸಾಧಿಸಲು ಯಾವುದೇ ಮಾರ್ಗ ಬಳಸಬಹುದು' ಎಂಬ ಆತನ ಮಾತು ಚರ್ಚಾಸ್ಪದ. 'ರಾಜ ತನ್ನ ಗುರಿ ಸಾಧನೆಗೆ ಯಾವುದೇ ದಾರಿ ಹಿಡಿಯಬಹುದು ಹಾಗೂ ಇದಕ್ಕೆ ನೈತಿಕ ಕಟ್ಟಳೆಗಳಿರುವುದಿಲ್ಲ' ಎಂದು ಆತ ಹೇಳಿದ್ದು.

ಚಾಣುಕ್ಯ ತನ್ನ ಶಿಕ್ಷಣವನ್ನು ಮುಗಿಸಿದ್ದು ತಕ್ಷ ಶಿಲೆಯಲ್ಲಿ.ಸಾಹಿತ್ಯ, ಭಾಷೆ ಮತ್ತು ದರ್ಶನ' ಎಂಬ ಹೆಸರಿನಡಿ ಇದೆಲ್ಲವನ್ನೂ ಕಲಿಸಲಾಗುತ್ತಿತ್ತು. ಆತ ವರ್ತಮಾನವನ್ನು ಅರಿತ 'ಬುದ್ಧಿಮಾನ್ ಹಾಗೂ ಭೂತವನ್ನು ಬಲ್ಲ 'ಮತಿಮಾನ್' ಮಾತ್ರ ಆಗಿರಲಿಲ್ಲ. ಬದಲಿಗೆ ತ್ರಿಕಾಲ ಜ್ಞಾನಿಯಾಗಿದ್ದ. ಆಗ ತಕ್ಷಶಿಲೆಯ ಕೀರ್ತಿ ಜಗತ್ತಿಡೀ ವ್ಯಾಪಿಸಿತ್ತು ಕಾನೂನು, ವೈದ್ಯ, ಯುದ್ಧ ತಂತ್ರ, ನಾಲ್ಕು ವೇದಗಳು, ಬಿಲ್ವಿದ್ಯೆ, ಬೇಟೆ, ದೇಶಿ ಕಲೆಯನ್ನು ಕಲಿಸಲಾಗುತ್ತಿತ್ತು.

ವಿಜ್ಞಾನ, ತತ್ತ್ವಶಾಸ್ತ್ರ ನಾನಾ ಭಾಷೆಗಳು, ಗಣಿತ, ಅರ್ಥಶಾಸ್ತ್ರ ಜ್ಯೋತಿಷ್ಯ, ಭೂಗೋಳ, ಖಗೋಳ ಶಾಸ್ತ್ರ ಶಸ್ತ್ರಕ್ರಿಯಾ ವಿದ್ಯೆ, ಕೃಷಿ, ಮತ್ತಿತರ ವಿದ್ಯೆಗಳು ಅಲ್ಲಿ ಕಲಿಸಲ್ಪಡುತ್ತಿದ್ದವು. ನಾನಾ ವಿಷಯಗಳ ಬಗ್ಗೆ ಸಂಶೋಧನೆ ಕೈಗೊಳ್ಳಲಾಗುತ್ತಿತ್ತು. ವಿಷಯ ತಜ್ಞರನ್ನು ಸಿದ್ಧಗೊಳಿಸಲಾಗುತ್ತಿತ್ತು.

## 1. ಕೌಟಿಲ್ಯನ ಪರಿಕಲ್ಪನೆಯ ಅರ್ಥಶಾಸ್ತ್ರ

ಕೌಟಿಲ್ಯನು ತನ್ನ ಜೀವಮಾನದ ಕೆಲಸವನ್ನು ಅರ್ಥಶಾಸ್ತ್ರದಲ್ಲಿ ಸಂಗ್ರಹಿಸಿದನು. ಕೌಟಿಲ್ಯನನ್ನು ಸಾಂಪ್ರದಾಯಿಕವಾಗಿ ಅರ್ಥಶಾಸ್ತ್ರದ ಲೇಖಕ ಎಂದು ಕರೆಯಲಾಗುತ್ತದೆ. ಇದರ ಅರ್ಥ "ರಾಜಕೀಯ ವಿಜ್ಞಾನ". ಈ ಸಂಸ್ಕೃತ ಕ್ಲಾಸಿಕ್‌ಅನ್ನು 4 ನೇ ಶತಮಾನದ ಕೊನೆಯಲ್ಲಿ ಬರೆಯಲಾಗಿದೆ. ಅರ್ಥಶಾಸ್ತ್ರವು 1400 ವರ್ಷಗಳಿಗಿಂತ ಹೆಚ್ಚು ಕಳೆದು ಹೋಗಿದೆ ಎಂಬುದು ಕೆಲವು ಉಲ್ಲೇಖಗಳ ಮೂಲಕ ತಿಳಿದು ಬರುತ್ತದೆ.

ಕೌಟಿಲ್ಯನು ನಂದ ರಾಜರನ್ನು ಸೋಲಿಸಿದ ಚಂದ್ರಗುಪ್ತನು ಕೈಗೊಂಡ ತಂತ್ರದ ಪ್ರಮುಖ ಸಲಹೆಗಾರ ಮತ್ತು ಪ್ರತಿಭೆ ಅಲೆಕ್ಸಾಂಡರ್ ಮುನ್ನಡೆಯನ್ನು ನಿಲ್ಲಿಸಿದನು. ಅವರು ಚಂದ್ರಗುಪ್ತನ ಮುಖ್ಯ ಸಲಹೆಗಾರ ಮತ್ತು ಕೌನ್ಸಿಲರಾಗಿದ್ದರು. ಅರ್ಥಶಾಸ್ತ್ರವು 15 ಅಧ್ಯಾಯಗಳು, 380 ಶ್ಲೋಕಗಳು ಮತ್ತು 4968 ಸೂತ್ರಗಳನ್ನು ಒಳಗೊಂಡಿದೆ. ನಿಸ್ಸಂದೇಹವಾಗಿ ಅವರ ಪುಸ್ತಕವು ರಾಜ್ಯ ಕಾರ್ಯ ಮತ್ತು ಪರಿಣಾಮಕಾರಿ ಆರ್ಥಿಕ ಸಾಧನೆಗಳ ಮೇಲೆ ಬರೆದ ಮೊದಲ ಪುಸ್ತಕವಾಗಿದೆ. ಅದರೆ ದುರದೃಷ್ಟವಶಾತ್ ಗುಪ್ತರಾಜ ವಂಶದ ಪಥನದ ನಂತರ ಭಾರತವು ಈ ಕೆಲಸವನ್ನು ಕಳೆದುಕೊಂಡಿತು. ಅದರೆ ನಂತರ ಈ ಮಹಾಕಾವ್ಯವನ್ನು ಶ್ರೀ ಆರ್. ಶಾಮಶಾಸ್ತ್ರಿ 1904 ರಲ್ಲಿ ಮರು ಶೋಧಿಸಿದರು.

ಇವರು ವಿದೇಶಿವ್ಯಾಪಾರವು ದೇಶಗಳ ವ್ಯಾಪಾರ ಪ್ರಗತಿ ಮತ್ತು ಸಂಪತ್ತನ್ನು ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟರು. ಮತ್ತು ಅವರು ಮುಕ್ತ ಆರ್ಥಿಕ ಮಾದರಿಯ ಪರವಾಗಿದ್ದಾರೆ. ಕೌಟಿಲ್ಯ ಸೈನಿಕರಿಗೆ ಮತ್ತು ಸಾರ್ವಜನಿಕ ಕಾರ್ಮಿಕರಿಗೆ, ಸಮರ್ಥವೇತನ ಬಡ್ತಿಯನ್ನು ಶೀಪಾರಸ್ಸು ಮಾಡಿದರು. ಕೌಟಿಲ್ಯನು ಮೊದಲು ಕಾರ್ಮಿಕ ಕಲ್ಯಾಣವನ್ನು ಬೆಂಬಲಿಸಿದನು ಮತ್ತು ಮಾರುಕಟ್ಟೆಯ ವೇತನಕ್ಕಿಂತ ಹೆಚ್ಚಿನ ವೇತನವನ್ನು ಪರಿಚಯಿಸಿದನು.ಅವರ ಪ್ರಕಾರದಕ್ಷ ಮತ್ತು ಆಕರ್ಷಕ ಸಂಭಳವು ಕೆಲಸಗಾರರಿಗೆ, ಶತ್ರುರಾಜ್ಯಗಳಿಂದ ಪ್ರಲೋಭನೆಗಳು ಅಥವಾ ಲಂಚವನ್ನು ಪಡೆಯುವುದನ್ನು ತಡೆಯುತ್ತದೆ ಎಂದು ವಿವರಿಸಿದರು.

## 2. ಸಾಹಿತ್ಯದ ವಿಮರ್ಶೆ

**ಫ್ಲೀಟ್** ಹೇಳುವಂತೆ ಕೌಟಿಲ್ಯಮಹಾನ್ಭಾರತೀಯ ತತ್ವವಿಜ್ಞಾನಿ ಮತ್ತು ರಾಜನೀತಿ ತಜ್ಞರನ್ನು ವಿಷ್ಣುಗುಪ್ತರೆಂದು ಕರೆಯುತ್ತಾರೆ, ಮತ್ತು ಚಾಣಕ್ಯ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಕೌಟಿಲ್ಯ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಉತ್ತರ ಭಾರತದಲ್ಲಿ 2500 ವರ್ಷಗಳ ಹಿಂದೆ 321 ಮತ್ತು 286 ಅವರು ಈ ಲೇಖನದಲ್ಲಿ ಚಾಣಕ್ಯನ ಅರ್ಥಶಾಸ್ತ್ರದ ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ಮತ್ತು ಭಾರತದ ಆರ್ಥಿಕ ನಿರ್ವಹಣೆಗೆ ಚೌಕಟ್ಟನ್ನು ರೂಪಿಸಿದ್ದಾರೆ ಎಂದು ಹೇಳಿದ್ದಾರೆ. ಅವರು ಅರ್ಥಶಾಸ್ತ್ರದ ಬೋಧನೆಗಳನ್ನು ಕೃಷಿ, ಅರಣ್ಯ, ವನ್ಯ ಜೀವಿಗಣಿಗಾರಿಕೆ ಮತ್ತು ಕೈಗಾರಿಕೆಗಳು ಮತ್ತು ಸಾರಿಗೆ ಮತ್ತು ವ್ಯಾಪಾರದ ಕ್ಷೇತ್ರಗಳಲ್ಲಿ ಪರಿಶೀಲಿಸಿದ್ದಾರೆ. ವ್ಯಾಪಾರ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮತ್ತು ವ್ಯಾಪಾರವು ನಾಣ್ಯಗಳ ಮೇಲೆ ಆಧಾರಿತವಾಗಿದೆ. ಮತ್ತು ವಿನಿಮಯ ವ್ಯವಸ್ಥೆಯು ದ್ವಿತೀಯ ಪ್ರಾಮುಖ್ಯತೆಯನ್ನು ಹೊಂದಿತ್ತು, ಚಾಣಕ್ಯಅವರು ಆದಾಯ,ತೆರಿಗೆ ಮತ್ತು ದಂಡದ ಮೂಲಗಳ ಪಟ್ಟಿಯನ್ನು ನೀಡಿದ್ದಾರೆ. ವಾಸ್ತವವಾಗಿ ಚಾಣಕ್ಯ ಅರ್ಥಶಾಸ್ತ್ರವು ಪ್ರಾಚೀನ ಪ್ರಪಂಚದ ಒಂದು ಸ್ಮಾರಕ ಗ್ರಂಥವಾಗಿದೆ ಮತ್ತು ಅರ್ಥಶಾಸ್ತ್ರದ ಇತಿಹಾಸದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ.

**ನೆನೆ (2002)** ಅವರ ಕೌಟಿಲ್ಯರ ಕಾಲ ಮತ್ತು ಆಧುನಿಕ ಕಾಲದ ಕೃಷಿ ಪದ್ಧತಿಗಳು ಮತ್ತು ಆರ್ಥಿಕ ಅಭಿವೃದ್ಧಿಯ ನಡುವೆ ಹೋಲಿಕೆಯನ್ನು ತೋರಿಸಿದ್ದಾರೆ. ಕೌಟಿಲ್ಯರ ಕಾಲದಲ್ಲಿ ಅಥವಾ ಇಂದಿನ ಸರ್ಕಾರಿ ಅಧಿಕಾರಿಗಳಿಂದ ನೀತಿ ಮತ್ತು ಆಡಳಿತಾತ್ಮಕ ಬೆಂಬಲವನ್ನು ಅವರು ಸೂಚಿಸುತ್ತಾರೆ. ಬೆಳೆಗಳ ಉತ್ಪಾದನೆಗೆ, ಉತ್ತಮ ಬೀಜ ಪೂರೈಕೆ ಮತ್ತು ಇತರ ಖರೀದಿ ಒಳಹರಿವು ವ್ಯವಸ್ಥೆ ಮಾಡಲಾಗಿದೆ. ಯಂತ್ರೋಪಕರಣಗಳು, ಉಪಕರಣಗಳು ಮತ್ತು ಎತ್ತುಗಳು ಅಥವಾ ಟ್ರಾಕ್ಟರ್ ಅಂತಹ ಇತರ ಸಂಪನ್ಮೂಲಗಳನ್ನು ಲಭ್ಯವಾಗುವಂತೆ ಮಾಡಲು ಸಹಾಯವನ್ನು ಒದಗಿಸಲಾಗಿದೆ. ಅವರ ಕೆಲಸವು ಮಾರಾಟ ತೆರಿಗೆ,ರಫ್ತು ಮತ್ತು ಅಮದು ಸುಂಕಗಳು, ರಕ್ಷಣಾತೆರಿಗೆ, ಆದಾಯ ತೆರಿಗೆ ಸಂಪತ್ತು ತೆರಿಗೆ ಇತ್ಯಾದಿಗಳನ್ನು ಒಳಗೊಂಡಂತೆ ವಿವಿಧ ರೀತಿಯ ತೆರಿಗೆಗಳನ್ನು ಒಳಗೂಡಿದೆ. ಅವರ ಪ್ರಕಾರ ರಾಜನು ತನ್ನ ಜನರ ಮೇಲೆ ಭಾರಿ ಮತ್ತು ಅತಿಯಾದ ತೆರಿಗೆಗಳನ್ನು ವಿಧಿಸಬಾರದು ಮತ್ತು ತೆರಿಗೆ ದರಗಳನ್ನು ವಿಧಿಸಬಾರದೆಂದು ಸಲಹೆ ನೀಡಿದರು. ಆರ್ಥಿಕ ಚಟುವಟಿಕೆಗಳ ಶೇಕಡಾ 16 ರಿಂದ 20 ರಷ್ಟು ಮೀರಬಾರದೆಂದು ಸಲಹೆ ನೀಡಿದ್ದರು. ರಾಜನು ತೆರಿಗೆಯನ್ನು ಸಂಗ್ರಹಿಸಿದಾಗ ಜೇನುನೂಣದಂತೆ ವರ್ತಿಸಬೇಕು ಮತ್ತು ರಾಜನು ತನ್ನ ಜನರಿಗೆ ಸಂಗ್ರಹಿಸಲು ಯಾವುದೆ ನೋವನ್ನು ಉಂಟು ಮಾಡಬಾರದು, ಎಂದು ವಿವರಿಸಿದನು. ಜೇನುನೂಣ ಹೂವಿನಿಂದ ಜೇನುಹತುಪ್ಪವನ್ನು ಸಂಗ್ರಹಿಸುತ್ತದೆಯೂ ಹಾಗೆ ರಾಜನು.

**ಲೋಗನಾಥನ್ (2004)** ಸಂಪತ್ತು ದೇಶದ ಶಕ್ತಿ ಮತ್ತು ಶಕ್ತಿಯ ಅಧಾರವಾಗಿದೆ, ಎಂಬ ಕೌಟಿಲ್ಯನ ಬಲವಾದ ನಂಬಿಕೆ. ಆದ್ದರಿಂದ ಚಿನ್ನ,ಬೆಳ್ಳಿ, ವಜ್ರ ಮತ್ತು ಕಬ್ಬಿಣವನ್ನು ಉತ್ಪಾದಿಸುವ ಕೈಗಾರಿಕೆಗಳು ಸರ್ಕಾರಿ ಸ್ವಾಮ್ಯದಲ್ಲಿ ತರಬೇಕೆಂದು ಕೌಟಿಲ್ಯ ಸಲಹೆ ನೀಡಿದರು. ವಿನಿಮಯ ಮತ್ತು ಬಳಕೆಯನ್ನು ರಾಜ್ಯವು ಗರಿಷ್ಠ ದಕ್ಷತೆ ಮತ್ತು ಸಾಮಾನ ವಿತರಣೆಯನ್ನು ಉತ್ತೇಜಿಸುವ ಉದ್ದೇಶದಿಂದ ನಿಯಂತ್ರಿಸಬೇಕು. ಒಟ್ಟಾರೆಯಾಗಿ ಕೌಟಿಲ್ಯ ಆದಾಯದ ಮೂಲಗಳನ್ನು ನಂತರ ವಿವರಿಸಲಾಗಿದೆ ಎಂದು ಸೂಚಿಸಿದರು. ಇವುಗಳಲ್ಲಿ ಕೀರಿಟದ ಆಸ್ತಿ, ಗಣಿ ಮತ್ತು ಲೋಹಶಾಸ್ತ್ರ, ಪಶು ಸಂಗೋಪನೆ, ನಿರಾವರಿ ಮತ್ತು ಇತರ ಸಾರ್ವಜನಿಕ ಕೆಲಸಗಳಿಂದ, ಅರಣ್ಯಗಳಿಂದ ಮಾದ್ಯಮಗಳು ಮತ್ತು ವಿರಾಮ ಚಟುವಟಿಕೆಗಳು ಸೇರಿದಂತೆ ಉತ್ಪಾದನ ಉದ್ಯಮದಂತಹ ರಾಜ್ಯ ನಿಯಂತ್ರಿತ ಚಟುವಟಿಕೆಗಳಿಂದ, (ಸೌಜನ್ಯಗಳು, ವೇಶ್ಯೆಯರು, ಮನರಂಜಕರು, ಜೂಜು ಮತ್ತು ಬೆಟ್ಟಿಂಗ್) ನಗದು ಮತ್ತು ವಸ್ತುವಿನ ತೆರಿಗೆಗಳು, ಕಸ್ಟ ಸುಂಕಗಳು ಹರಾಜುಗಳು, ರಸ್ತೆ ಮಾರ್ಗದ ಸುಂಕಗಳು ವಹಿವಾಟು ತೆರಿಗೆಗಳು. ವ್ಯಾಪಾರದ ಮೇಲಿನ ಸುಂಕಗಳು ಮತ್ತು ವಿವಿಧ ದಂಡಗಳು ರಾಜ್ಯಾ ಆದಾಯ ಹಾಗೂ ವಾಣಿಜ್ಯಕ್ಕೆ ನೆರವಾಗುತ್ತದೆಂದು ಈ ಸಾಹಿತ್ಯ ಬಿಂಬಕವಾಗಿದೆ.

## 3. ಅಧ್ಯಯನದ ಉದ್ದೇಶಗಳು

1. ಅರ್ಥಶಾಸ್ತ್ರದ ಬಗ್ಗೆ ಕೌಟಿಲ್ಯನ ಚಿಂತನೆಯನ್ನು ಪರೀಕ್ಷಿಸಲು ಈ ಅಧ್ಯಯನವು ಕೈಗೊಳ್ಳಲಾಗಿದೆ.

2. ಕೌಟಿಲ್ಯನಿಂದ ರಾಜ್ಯದ ಆದಾಯ ಮತ್ತು ವಾಣಿಜ್ಯದ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರಗಳನ್ನು ಗುರುತಿಸಲು ಈ ಅಧ್ಯಯನದಿಂದ ತಿಳಿದುಬರುತ್ತದೆ.

## 4. ಅಧ್ಯಯನದ ವಿಧಾನ

ಅಧ್ಯಯನದ ಉದೇಶಗಳನ್ನು ಪೊರೈಸಲು, ಪ್ರಸ್ತುತ ಅಧ್ಯಯನವು ಮಾಧ್ಯಮಿಕ ದತ್ತಾಂಶಗಳನ್ನು ವ್ಯಾಪಾರ ನಿಯತ ಕಾಲಿಕೆಗಳು ಅಧ್ಯಯನವು ಸೂಕ್ತವಾದ ಸಂಶೋಧನ ವಿಧಾನವನ್ನು ಅಳವಡಿಸಿಕೊಂಡಿದೆ.

**ರಾಜ್ಯದ ಸಂಪತ್ತನ್ನು ಹೆಚ್ಚಿಸುವ ವಿಧಾನಗಳು ಕೆಳಕಂಡಂತಿವೆ**

1. ರಾಜ್ಯ ಚಟುವಟಿಕೆಗಳ ಮತ್ತು ಉದ್ಯಮಗಳ ಸಂವೃದ್ಧಿಯನ್ನು ಖಾತ್ರಿ ಪಡಿಸುವುದು.
2. ಉತ್ತಮವಾಗಿ ಪ್ರಯತ್ನಿಸಿದ ಮತ್ತು ಯಶಸ್ವಿ ನೀತಿಗಳನ್ನು ಮುಂದುವರೆಸುವುದು.
3. ಕಳ್ಳತನ ನಿರ್ಮೂಲನೆ ಮಾಡುವುದು.
4. ಸರ್ಕಾರಿ ನೌಕರರ ಮೇಲೆ ಕಟ್ಟುನಟ್ಟಿನ ನಿಯಂತ್ರಣವನ್ನು ಇಟ್ಟುಕೊಳ್ಳುವುದು.
5. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು.
6. ವ್ಯಾಪಾರವನ್ನು ಉತ್ತೇಜಿಸುವುದು.
7. ತೊಂದರೆಗಳು ಮತ್ತು ವಿಪತ್ತುಗಳನ್ನು ತಪ್ಪಿಸುವುದು.
8. (ತೆರಿಗೆ) ವಿನಾಯಿತಿಗಳು ಮತ್ತು ಉಪಶಮನಗಳನ್ನು ಕಡಿಮೆ ಮಾಡುವುದು ಮತ್ತು
9. ನಗದು ಅದಾಯವನ್ನು ಹೆಚ್ಚಿಸುವುದು.
10. ಸರ್ಕಾರಿ ಆಸ್ತಿಯ ಅಡೆತಡೆ.
11. ದುರುಪಯೋಗ ಮತ್ತು ಸರ್ಕಾರಿ ನೌಕರರು ಸೇರಿ ಲೆಕ್ಕ ಹಾಕುವುದು, ಸಂಪತ್ತಿನ ಕಡೆತಕ್ಕೆ ಕಾರಣವಾಗುತ್ತದೆ.
12. ಕಾರ್ಮಿಕ, ಹಣ,ಸರಕುಗಳು, ಧಾನ್ಯ ಮತ್ತು ದ್ರವ ಪದರ್ಥಗಳ ಪೊರೈಕೆಯಲ್ಲಿ ಹೆಚ್ಚಳವಾಗುತ್ತದೆ.

'ಜನರ ಸಂತೋಷವೇ ರಾಜನ ಸಂತೋಷ. ಅವರ ಕಲ್ಯಾಣವೇ ಆತನ ಕಲ್ಯಾಣ. ರಾಜ ತನ್ನ ವೈಯಕ್ತಿಕ ಹಿತಾಸಕ್ತಿಯು ಬಗ್ಗೆ ಯೋಚಿಸಬಾರದು. ಪ್ರಜೆಗಳ ಸಂತಸದಲ್ಲಿ ಸಂತೋಷ ಕಾಣಬೇಕು'.

ಚಾಣಕ್ಯನಿಗೆ ಜತೆಗಾರರಿರಲಿಲ್ಲ. ಅಷ್ಟಲ್ಲದೆ, ನಿರ್ದಿಷ್ಟ ಕ್ಷೇತ್ರವೊಂದರ ಸಂಪೂರ್ಣ ತಿಳಿವಳಿಕೆ ಇರಲಿಲ್ಲ. ಹೀಗಿದ್ದರೂ ಆತನ ಬರಹಗಳ ವ್ಯಾಪ್ತಿ – ಹರವು ದೊಡ್ಡದು. ಇಂದಿಗೂ 'ಅರ್ಥಶಾಸ್ತ್ರ'ದಷ್ಟು ವಿಶಾಲ ವ್ಯಾಪ್ತಿಯ, ಸಮಗ್ರ ವಿವರವುಳ್ಳ ಪುಸ್ತಕ ಇನ್ನೊಂದಿಲ್ಲ ವಿಷಯಗಳನ್ನು ಆತ ವಿಭಾಗಿಸಿರುವ ರೀತಿ ಇದಕ್ಕೆ ಉದಾಹರಣೆ. ಗುಪ್ತಚರರು, ಲಾಭ – ನಷ್ಟ, ಹೀಗೆ ನಾನಾ ವಿಷಯಗಳನ್ನು ಆತ ಸ್ಪಷ್ಟವಾಗಿ ವಿಂಗಡಿಸಿದ್ದಾನೆ. 'ನೀತಿಶಾಸ್ತ್ರ'ದಲ್ಲಿನ ಬರಹ, ಹಲವು ಪಂಡಿತರ ಒಟ್ಟು ಬರಹಕ್ಕೆ ಸಮ ಎನ್ನಬಹುದು. ಚಾಣುಕ್ಯ ಒಬ್ಬ ಚಿಂತಕ, ಅಂತರ್‌ದೃಷ್ಟಿ ಹಾಗೂ ಶಾಂತ ಮನಸ್ಸಿನವ. ತನ್ನ ಮಾತನ್ನೆಲ್ಲ 'ಸೂತ್ರ' ಇಲ್ಲವೇ ಸೂಕ್ತಿಗಳಲ್ಲಿ ವ್ಯಕ್ತಪಡಿಸಿದ್ದಾನೆ. ಹೊಳೆಯುವ, ಅಪಾರ ಲೋಕಜ್ಞಾನದ ಈ ಮುತ್ತುಗಳು ವರ್ಣಮಯಬದುಕಿನಷ್ಟೇ ವೈವಿಧ್ಯಮಯ.ಬದುಕಿನ ಎಲ್ಲ ಹಂತ, ವ್ಯಕ್ತಿತ್ವ, ಗುಣ–ಶಿಲದ ಪ್ರತಿಬಿಂಬ ಈ ಸೂಕ್ತಿಗಳು. ಕೆಲವು ಈ ರೀತಿ ಇವೆ.

- **ವೃದ್ಧ ಸೇವಯಾ ವಿಗ್ನಾನಂ :** ಹಿರಿಯರ ಸೇವೆಯಿಂದ ಜ್ಞಾನ ಲಭಿಸುತ್ತದೆ.
- **ಅರ್ಥಂ ಸಂಪದ ಪ್ರಕೃತಿ ಸಂಪದಂ ಕರೋತಿ :** ಆರ್ಥಿಕ ಅಭಿವೃದ್ಧಿಯಿಂದ ಜನರು ಅಭಿವೃದ್ಧಿ ಹೊಂದುತ್ತಾರೆ.
- **ಅರ್ಥ ಅನ್ವೇಷಣನ ವ್ಯಸನೇಶು ಗಣ್ಯತೆ :** ಐಶ್ವರ್ಯದ ಆಸೆ ಕೆಡುಕಲ್ಲ
- **ನ ಕಾಮ ಆಸಕ್ತಸ್ಯ ಕಾರ್ಯ ಅನುಷ್ಠನಂ :** ಕಾಮಾಸಕ್ತ ರಾಜ ತನ್ನ ಕಾರ್ಯ ನಿರ್ವಹಿಸಲಾರ.

APPROVED BY UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

- **ಅರ್ಥ ತೋಶಿನಮ್ ಶೃಹ ಪರಿತ್ಯಜ್ಯತಿ :** ಐಶ್ವರ್ಯದಿಂದ ತೃಪ್ತಿ ಹೊಂದಿದವನನ್ನು ಶ್ರೀಮಂತಿಕೆ ತೊರೆಯುತ್ತದೆ.
- **ಅಮಿತ್ರೋ ದಂಡ ನೀತಿ ಅವಾಯುತಹ:** ಶತ್ರುವನ್ನು ರಾಜಕೀಯವಾಗಿ ಗೆದ್ದು, ನಿಯಂತ್ರಿಸಬೇಕು.
- **ಪರೀಕ್ಷಾ ಕರಿಣಿ ಶೃಹ ಚಿರಂತಿಷ್ಠತಿ :** ಸನ್ನಿವೇಶಕ್ಕೆ ಅನುಗುಣವಾಗಿ ವರ್ತಿಸುವವನ ಬಳಿ ಹಣ ಹೆಚ್ಚು ಕಾಲ ಇರುತ್ತದೆ.
- **ಅಪ್ರಯತ್ನಾತ್ ಕಾರ್ಯ ವಿಪತ್ತಿಹ ಭವೇತ್:** ಕೆಲಸ ಕೆಡಲು ಅಗತ್ಯವಿರುವಷ್ಟು ಶ್ರಮ ಹಾಕದಿರುವದೇ ಕಾರಣ.
- **ಅತಿಭಾರಹ ಪುರುಷಂ ಅವಸದಯತಿ:** ಹೊರಲಾಗದ ಭಾರ ಹೊರಿಸಿದರೆ, ವ್ಯಕ್ತಿ ಕುಸಿಯುತ್ತಾನೆ.
- **ಸಹಸೇನ ಕಾರ್ಯ ಸಿದ್ಧಿಹಿ ಭವತಿ:** ಸಾಹಸ ಪ್ರವೃತ್ತಿಯಿಂದಾಗಿ ಕೆಲಸ ಪೂರೈಸಬಹುದು.
- **ಋಜು ಸ್ವಭಾವ ಅಪಾರೋ ಜನೇಶು ದುರ್ಲಭಹ:** ಪ್ರಾಮಾಣಿಕ ಹಾಗೂ ನೇರವಂತಿಕೆಯ ಜನ ಅಪರೂಪ.
- **ಕದಾಚಿದ್ ಅಪಿ ಚಾರಿತ್ರಂ ನ ಲಂಘಯೇತ್:** ಒಳ್ಳೆಯ ಸ್ವಭಾವದ ಎಲ್ಲೆಯನ್ನು ದಾಟಬಾರದು.
- **ಮಿತ ಭೋಜನೆ ಸ್ವಾಸ್ಥ್ಯಂ :** ಮಿತವಾಗಿ ತಿನ್ನುವುದು ಆರೋಗ್ಯಕರ.
- **ಅಜೀರ್ಣ ಭೋಜನಂ ದುಖಂ :** ಅಜೀರ್ಣವಾದಾಗ ಆಹಾರ ಸೇವೆ ದುಃಖಕರ.
- **ಗೋ ದುಷ್ಕರಶ್ವ ಸಹಸ್ತ್ರ ಅದೇಕಾಕಿನಿ ಶ್ರೇಯಸಿ :** ಬಹುಸಾಮಾನ್ಯ ಹಸು, ನೂರು ನಾಯಿಗಳಿಗಿಂತ ಉತ್ತಮ.
- **ಸರ್ವಂ ಜಯೇತ್ ಆಕ್ರೋಧಹ :** ಸಿಟ್ಟು ಮಾಡಿಕೊಳ್ಳದವ ಎಲ್ಲರನ್ನೂ ಗೆಲ್ಲುತ್ತಾನೆ.
- **ಗುರುನಾಂ ಮಾತಾ ಗರೀಯಶಿ :** ತಾಯಿಗಿಂತ ಶ್ರೇಷ್ಠ ಗುರುವಿಲ್ಲ.
- **ಗುರುಂ ಚ ದೈವಂ ಚ :** ಗುರುವೇ ದೇವರು.
- **ಚಕ್ಷುಹ ಹಿ ಶರೀರಾಣಾಂ ನೇತಾ :** ಕಣ್ಣು ಶರೀರದ ನಾಯಕ.
- **ಸ್ವಗಂ ನಯಾತಿ ಸುನೃತಂ :** ಸತ್ಯ ಮತ್ತು ಸವಿ ನುಡಿಯಿಂದ ಸ್ವರ್ಗ ಖಚಿತ.

## ಉಪಸಂಹಾರ

ಕೌಟಿಲ್ಯನನ್ನು ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಲ್ಲಿಯೆ ಇತಿಹಾಸದಲ್ಲಿ ಬುದ್ಧಿವಂತಿಕೆ ಮತ್ತು ಜ್ಞಾನದ ಶ್ರೇಷ್ಠ ವ್ಯಕ್ತಿಯೆಂದು ಕರೆಯಲಾಗುತ್ತದೆ. ಅವರು ಸಂಪ್ರಾದಾಯಿಕವಾಗಿ ಭಾರತದ ಮೊದಲ ಲೇಖಕ ಎಂದು ಕರೆಯುತ್ತಾರೆ. ಅವರನ್ನು ಅರ್ಥಶಾಸ್ತ್ರದ ಕ್ಷೇತ್ರದ **"ಪ್ರವರ್ತಕ"** ಎಂದು ಪರಿಗಣಿಸಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು ಶುದ್ಧ ಅರ್ಥಶಾಸ್ತ್ರವಲ್ಲ ಆದರೆ ಅದು ರಾಜಕೀಯ ಅರ್ಥಶಾಸ್ತ್ರ, ಅರ್ಥಶಾಸ್ತ್ರವು ರಾಜ್ಯದ ಹಲವಾರು ಘಟಕಗಳ ಪಟ್ಟಿಯನ್ನು ಉಲ್ಲೇಖಿಸುತ್ತದೆ. ರಾಜ ಮಂತ್ರಿಗಳು, ಜನಸಂಖ್ಯೆ, ಭೂಗೋಳ, ನೈಸರ್ಗಿಕ ಸಂಪನ್ಮೂಲಗಳು, ಖಜಾನೆ, ಸೈನ್ಯ ಮತ್ತು ಮಿತ್ರ ರಾಷ್ಟ್ರಗಳು ಗೂಢಚಾರರು ಮತ್ತು ರಹಸ್ಯ ಏಜೆಂಟಗಳನ್ನು ಬಳಸಿಕೊಂಡು ಒಬ್ಬರ ರಾಜ್ಯದಲ್ಲಿ ಈ ಅಂಶಗಳನ್ನು ಬಲಪಡಿಸುವ ಮತ್ತು ಶತ್ರುಗಳ ರಾಜ್ಯಗಳಲ್ಲಿ ಅವುಗಳನ್ನು ದುರ್ಬಲಗೊಳಿಸುವ ಈ ಘಟಕಗಳು ಮತ್ತು ಪ್ರಾಮುಖ್ಯತೆಯನ್ನು ಕೌಟಿಲ್ಯ ವಿವರಿಸಿದರು.

## ಪರಾಮರ್ಶನ ಗ್ರಂಥಗಳು


- **ಚಾಣಕ್ಯ :** ವಿಶ್ವದ ಪ್ರವರ್ತಕ ಅರ್ಥಶಾಸ್ತ್ರಜ್ಞ. L. K. ಜಾ ಮತ್ತು K. N. Jha ಇಂಟರ್ ನ್ಯಾಷನಲ್ ಜನರಲ್ ಆಫ್ಸೋಶಿಯಲ್ ಏಕನಾಮಿಕ್ಸನಲ್ಲಿ 1998 ರಲ್ಲಿ ಪ್ರಕಟವಾಯಿತು.
- **ವಿ. ಲೋಗನಾಥನ್ (2004) :** 87 ನೇ ಕಾನ್ಫಾರೆನ್ಸ್ ಸಂಪುಟ, ಇಂಡಿಯನ್ ಏಕನಾಮಿಕ್ ಅಸೋಶಿಎಷನ್, ಪುಟಗಳು.3–16
- **ಕೌಟಿಲ್ಯ ಸಂಸ್ಕೃತ ಭಾಷೆಯಲ್ಲಿ ಅರ್ಥಶಾಸ್ತ್ರ ಪುಸ್ತಕ 2 :** ಅಧ್ಯಯನ 6 ಮತ್ತು ಪದ್ಯ 1–8 ರಾಜ್ಯಕ್ಕೆ ಅಗತ್ಯವಾದ ಆರ್ಥಿಕ ಚಟುವಟಿಕೆಯನ್ನು ವಿವರಿಸುತ್ತದೆ. ಕಾಂಗ್ಲೆ ಕೌಟಿಲ್ಯ ನೋಡಿ ಅರ್ಥಶಾಸ್ತ್ರ, ಭಾಗ 2,75–77.
- **ಫ್ಲೀಟ್ ಎ. ಈ. (1914) :** ಕೌಟಿಲ್ಯನ ಅರ್ಥಶಾಸ್ತ್ರ, 7 ನೇ ಆವೃತ್ತಿ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್ ಮೈಸೂರು.
- **ಕೌಟಿಲ್ಯ ವಿಷ್ಣುಗುಪ್ತ :** (ಕ್ರಿ. ಪೂ. 4 ನೇ ಶತಮಾನ) ದಿ ಅರ್ಥಶಾಸ್ತ್ರ, ಸಂಪಾದಿಸಿದ ಮರು ಜೋಡಣೆ. ಅನುವಾದ ಮತ್ತು ಪರಿಚಯಿಸಿದ L. N. ರಂಗಜಾಜನ್, ಪೆಗ್ವಿನ್ ಬುಕ್ಸ್ 1992 ನವದೆಹಲಿ, ನ್ಯೂಯಾರ್ಕ್.


■■

– *106ನೇ ಪುಟದಿಂದ ಮುಂದುವರೆದುದು*

## ಪರಾಮರ್ಶನ ಗ್ರಂಥಗಳು


- ಡಾ. ಬಾಬಾ ಸಾಹೇಬರ ಸಮಗ್ರ ಬರಹಗಳು ಮತ್ತು ಭಾಷಣಗಳು– ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.2021
- ನಾವೂ ಇತಿಹಾಸ ಕಟ್ಟಿದೆವು– ಅಂಬೇಡ್ಕರ್ ಚಳುವಳಿಯಲ್ಲಿ ಮಹಿಳೆಯರು– ಮರಾಠಿ ಮೂಲ; ಕನ್ನಡಕ್ಕೆದು. ಸರಸ್ವತಿ, ಕವಿ ಪ್ರಕಾಶನ – ಕವಲಕ್ಕಿ, ಹೊನ್ನಾವರ, ಉತ್ತರ ಕನ್ನಡ, 2022


■■

– *78ನೇ ಪುಟದಿಂದ ಮುಂದುವರೆದುದು*

ಬಹುವಾಗಿ ಬದಲಾಗಬೇಕು. ಬಹುತ್ವವೇ ಈ ಮಣ್ಣಿನ ಬದುಕಿನ ವೈಶಿಷ್ಟ್ಯವಾಗಿರುವಾಗ ಬಹುತ್ವದ ಸಾಹಿತ್ಯವು ಬಹು ಬಗೆಯ ಸಾಧ್ಯತೆಗಳನ್ನು ಒಳಗೊಳ್ಳಲಿಕ್ಕೆ ಸಾಧ್ಯವಾಗುತ್ತದೆ.

## ಪರಾಮರ್ಶನ ಗ್ರಂಥಗಳು


- **ಕಲಬುರ್ಗಿ ಎಂ.ಎಂ. (ಸಂ.) (2001) :** 'ಬಸವಯುಗದ ವಚನ ಸಂಪುಟ–1, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಕೀರ್ತಿನಾಥ ಕುರ್ತಕೋಟಿ (2002) :** ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಧಾರವಾಡ ಮನೋಹರ ಗ್ರಂಥಮಾಲಾ,
- **ಕೀರ್ತಿನಾಥ ಕುರ್ತಕೋಟಿ (1998) :** 'ನೂರು ಮರ ನೂರು ಸ್ವರ', ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ,
- **ಮಲ್ಲೇಶಪ್ಪ ಸಿದ್ರಾಂಪೂರು (2022) :** 'ಕಂದಳಿ', ಕೊಪ್ಪಳ ಮೇಘನಾ ಪ್ರಕಾಶನ.
- **ಮಲ್ಲೇಶಪ್ಪ ಸಿದ್ರಾಂಪೂರು (2022) :** 'ಕಂಪಣ', ಕೊಪ್ಪಳ ಮೇಘನಾ ಪ್ರಕಾಶನ
- **ರಾಘವೇಂದ್ರ ರಾವ್ ಎಚ್.ಎಸ್. (ಸಂ.) (2013) :** 'ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಸಂ.2.ಭಾಗ–1,' ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
- **ಲಕ್ಷ್ಮೀನಾರಾಯಣ ಆರ್. (2010) :** 'ಸಾಹಿತ್ಯ ಮಿಮರ್ಶೆ,' ಸಂ, ಪ್ರೋ.ಎಂ.ವಿ. ಸೀತಾರಾಮಯ್ಯ ಸಂ–4, ಭಾಗ–2, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
- **ವೆಂಕಟಾಚಲಶಾಸ್ತ್ರೀ. ಟಿ.ವಿ, (ಸಂ.) :** 'ಪಂಪ ಸಂಪುಟ–1,' ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ,


■■

APPROVED BY UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲಗಳ ನಡುವಿನ ಸಹ-ಸಂಬಂಧದ ಅಧ್ಯಯನ

✍ **ಡಾ. ಪ್ರಕಾಶ ಕೆ. ಬಡಿಗೇರ,** ಸಹ ಪ್ರಾಧ್ಯಾಪಕರು, ಸಿ.ಐ.ಇ.ಟಿ., ಎನ್.ಸಿ.ಇ.ಆರ್.ಟಿ. ನವದೆಹಲಿ.

*ಸಾರಾಂಶ*

*ಪ್ರಸ್ತುತ ಸಂಶೋಧನಾ ಲೇಖನವು ಕರ್ನಾಟಕದ ವಿಜಯಪುರ ಜಿಲ್ಲೆಯ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲಗಳ ನಡುವಿನ ಸಹ-ಸಂಬಂಧದ ಕುರಿತಾದ ಅಧ್ಯಯನವಾಗಿದೆ. ವಿಜಯಪುರ ಜಿಲ್ಲೆಯ **150** ಸ್ನಾತಕೋತ್ತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಪ್ರತಿಚಯನಗಳಗಿ ಯಾದೃಚ್ಛಿಕ ಪ್ರತಿಚಯನ ವಿಧಾನದಿಂದ ಆಯ್ಕೆಮಾಡಲಾಗಿದೆ. ಪ್ರಸ್ತುತ ಅಧ್ಯಯನದಿಂದ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲ ನಡುವೆ ಕಡಿಮೆ ಪ್ರಮಾಣದ ಸಂಬಂಧವಿರುವುದು ಕಂಡುಬಂದಿದೆ. ಅದೇ ರೀತಿ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರು ಹೆಚ್ಚಿನ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೊಂದಿರುವುದು ಕಂಡುಬಂದಿದೆ. ಹಾಗೂ ಅಭ್ಯಾಸ ಕೌಶಲದಲ್ಲಿ ವಿದ್ಯಾರ್ಥಿನಿಯರಿಗಿಂತ ವಿದ್ಯಾರ್ಥಿಗಳ ಹೆಚ್ಚಿನ ಅಭ್ಯಾಸ ಕೌಶಲ ಉತ್ತಮತೆಯನ್ನು ಹೊಂದಿರುವುದು ಕಂಡುಬಂದಿದೆ.*

## ಪೀಠಿಕೆ

ವಿಶ್ವದಾದ್ಯಂತ ಇರುವ ಪೋಷಕರು ಹಾಗೂ ಶಿಕ್ಷಣ ತಜ್ಞರು ಇಂದಿನ ಮಕ್ಕಳಿಗೆ ಸಾಂಪ್ರದಾಯಿಕ ಶಾಲಾ ಪಠ್ಯಕ್ರಮಗಳನ್ನು ಮಾತ್ರ ಕಲಿಸಲು ಇಚ್ಛಿಸದೆ, ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳಲು ಅಗತ್ಯವಾದಂತಹ ಶಿಕ್ಷಣವನ್ನು ನೀಡಲು ಬಯಸುತ್ತಿದ್ದಾರೆ. ನಮ್ಮ ಮಕ್ಕಳಿಗೆ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶಗಳಿಗನುಗುಣವಾಗಿ, ಉದಯಿಸುತ್ತಿರುವ ಹೊಸ ವೃತ್ತಿಗಳನ್ನು ಕೈಗೊಳ್ಳಲು ಅಗತ್ಯವಾದ ಶಿಕ್ಷಣ ನೀಡಬೇಕಾಗಿದೆ. ಕುಟುಂಬಗಳ ಹಾಗೂ ಸಮುದಾಯದ ವ್ಯಕ್ತಿಗಳಲ್ಲಿ ಭಾವನಾತ್ಮಕ ಹೊಂದಾಣಿಕೆ ಇಲ್ಲದಿರುವುದು, ಹತಾಶಭಾವನೆ ಹಾಗೂ ಅಜಾರೂಕತೆಯಂತಹ ಅನೀರೀಕ್ಷಿತ ಭಾವನಾತ್ಮಕ ಏರಿಳಿತಗಳು ಹಿಂದಿನ ಶತಮಾನದ ಕೊನೆಯ ಭಾಗದಿಂದ ಈ ಶತಮಾನಕ್ಕೆ ಹರಿದುಬಂದಿರುವುದನ್ನು ಕಾಣುತ್ತಿದ್ದೇವೆ. ಇಂದಿನ ಯುವಜನತೆ ಮತ್ತು ಮಕ್ಕಳಲ್ಲಿ ಆಕ್ರಮಣ ಪ್ರವೃತ್ತಿ, ಖಿನ್ನತೆ, ಆತ್ಮಹತ್ಯಾ ಪ್ರಮಾಣ ಮತ್ತು ಮಾನಸಿಕ ಒತ್ತಡ ಹೆಚ್ಚಾಗಿರುವುದನ್ನು ಕಾಣುತ್ತಿದ್ದೇವೆ.

ಈ ಹಿನ್ನೆಲೆಯಲ್ಲಿ ನಮ್ಮ ಮಕ್ಕಳಲ್ಲಿ ಜೀವನವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗಲು ಅಗತ್ಯವಾದಂತಹ ಸಾಮರ್ಥ್ಯಗಳನ್ನು ಬೆಳೆಸುವುದರ ಮೂಲಕ ಸರಿಯಾದ ಮಾರ್ಗದಲ್ಲಿ ಮುನ್ನಡೆಯಲು ಮಾರ್ಗದರ್ಶನ ನೀಡಬೇಕಾಗಿದೆ. ತನ್ನ ಹಾಗೂ ಇತರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದರ ಮೂಲಕ ಇತರರ ಭಾವನೆಗಳಿಗೆ ಸ್ಪಂದಿಸುವ ಹಾಗೂ ರಚನಾತ್ಮಕವಾಗಿ ವರ್ತಿಸುವ ಸಾಮರ್ಥ್ಯವನ್ನು ಬೆಳೆಸಬೇಕಾಗಿದೆ. ಇದನ್ನೇ ಸಂವೇಗಾತ್ಮಕ ಬುದ್ಧಿಶಕ್ತಿ ಎನ್ನುವರು. ಈ ಸಂವೇಗಾತ್ಮಕ ಬುದ್ಧಿಶಕ್ತಿ ವಿದ್ಯಾರ್ಥಿಗಳ ಅಭ್ಯಾಸ ಕೌಶಲಗಳ ಮೇಲೆ ತನ್ನದೇ ಆದಂತಹ ಪ್ರಭಾವ ಬೀರುತ್ತದೆ.

## ಅಧ್ಯಯನದ ಅಗತ್ಯತೆ ಮತ್ತು ಮಹತ್ವ

ಇಂದು ನಮ್ಮ ಸರಕಾರವು ಶಿಕ್ಷಣ ರಂಗದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದರೂ ಸಹ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತಿಲ್ಲಾ. ಕಾರಣ ವಿದ್ಯಾರ್ಥಿಗಳ ಮನಸ್ಸಿನ ಸಂವೇಗಗಳು ಶಿಕ್ಷಣದಲ್ಲಿ ಗೊಂದಲ ಮೂಡಿಸಿ ಅವರನ್ನು ಮಂದಗತಿಗಳನ್ನಾಗಿ ಮೂಡಿಸುತ್ತದೆ. ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳು ದೇಶಕ್ಕೆ ಉತ್ತಮ ಕೊಡುಗೆಗಳನ್ನು ನೀಡಲು ವಿಫಲರಾಗುತ್ತಿದ್ದಾರೆ ಮತ್ತು ಮಕ್ಕಳಲ್ಲಿ ಸೃಜನಶೀಲತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ.

ವ್ಯಕ್ತಿಯ ಭಾವೋದ್ವೇಗಗಳು ಸ್ವಯಂ ನಿಯಂತ್ರಣ ಮಾಡುವಲ್ಲಿ ಹಾಗೂ ವೈಯಕ್ತಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ತನ್ನದೇ ಆದ ಪಾತ್ರ ನಿರ್ಧರಿಸುತ್ತದೆ. ಈ ಸಂವೇಗಾತ್ಮಕ ಬುದ್ಧಿಶಕ್ತಿ ಇತರ ಭಾವನೆಗಳಿಗೆ ಸ್ಪಂದಿಸುವುದು ಆದರೆ ಭಾವನೆ ಅಭಿಪ್ರಾಯ ಪರಿಗಣಿಸಿ ಉತ್ತಮ ಬಾಂಧವ್ಯ ರೂಪಿಸಿಕೊಳ್ಳುವ ಹಾಗೂ ವಿಭಿನ್ನ ಮನೋಭಾವದ ಜನಗಳೊಂದಿಗೆ ಹೊಂದಿಕೊಳ್ಳವ ಸಾಮರ್ಥ್ಯವನ್ನು ಸೃಷ್ಟಿಸುವುದರಿಂದ ಸಮಾಜದಲ್ಲಿ ಉತ್ತಮ ಆದರ್ಶ ವ್ಯಕ್ತಿಯಾಗಿ, ಸಮೃದ್ಧ ಸಮತೋಲನ ಜೀವನ ನಡೆಸಲು ಸಾಧ್ಯವಾಗುತ್ತದೆ. ಸಾಮಾಜಿಕ ಮೌಲ್ಯ ಮತ್ತು ಮೌಲಿಕ ವಿಚಾರಗಳ ಉಗಮ ಮತ್ತು ಶಕ್ತಿಯನ್ನು ಕೇಂದ್ರೀಕರಿಸಬೇಕಾದ ಮತ್ತು ಸಂವೇಗಾತ್ಮಕ ಒತ್ತಡಗಳನ್ನು ಪ್ರತಿ ರೂಢಿಸಬೇಕಾದ ಸನ್ನಿವೇಶಗಳಲ್ಲಿ ಕೂಡಾ ಇಂತಹ ಚಟುವಟಿಕೆಗಳಲ್ಲಿ ಮುಂದುವರೆಯುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಅದಕ್ಕಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

## ಸಮಸ್ಯೆಯ ನಿರೂಪಣೆ

"ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲಗಳ ನಡುವಿನ ಸಹ-ಸಂಬಂಧದ ಅಧ್ಯಯನ"

## ಅಧ್ಯಯನದ ಉದ್ದೇಶಗಳು

1. ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅಳೆಯುವುದು.
2. ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲ ನಡುವಿನ ಸಹ-ಸಂಬಂಧವನ್ನು ಕಂಡು ಹಿಡಿಯುವುದು.
3. ಸ್ನಾತಕೋತ್ತರ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ನಡುವಿನ ಸಂವೇಗಾತ್ಮಕ ಬುದ್ಧಿಶಕ್ತಿಯ ವ್ಯತ್ಯಾಸ ಕಂಡುಹಿಡಿಯುವುದು.
4. ಸ್ನಾತಕೋತ್ತರ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ನಡುವಿನ ಅಭ್ಯಾಸ ಕೌಶಲ ನಡುವೆ ವ್ಯತ್ಯಾಸ ಕಂಡುಹಿಡಿಯುವುದು.

## ಅಧ್ಯಯನದ ಪ್ರಾಕಲ್ಪನೆಗಳು

1. ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲ ನಡುವೆ ಯಾವುದೇ ಮಹತ್ವಪೂರ್ಣ ಸಂಬಂಧ ಕಂಡುಬರುವುದಿಲ್ಲ.
2. ಸ್ನಾತಕೋತ್ತರ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ನಡುವಿನ

APPROVED BY UGC CARE

ಸಂವೇಗಾತ್ಮಕ ಬುದ್ಧಿಶಕ್ತಿ ಯಾವುದೇ ರೀತಿಯ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

3. ಸ್ನಾತಕೋತ್ತರ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ನಡುವಿನ ಅಭ್ಯಾಸ ಕೌಶಲದಲ್ಲಿ ಯಾವುದೇ ರೀತಿಯ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ಅಧ್ಯಯನದ ಚರಾಂಶಗಳು**

ಪ್ರಸ್ತುತ ಅಧ್ಯಯನದಲ್ಲಿ 'ಸ್ವತಂತ್ರ' ಮತ್ತು 'ಅವಲಂಬಿತ' ಚರಾಂಶಗಳು ಈ ರೀತಿಯಾಗಿ ಕಂಡುಬರುತ್ತವೆ.

- ಸ್ವತಂತ್ರ ಚರಾಂಶ – ಸಂವೇಗಾತ್ಮಕ ಬುದ್ಧಿಶಕ್ತಿ
- ಅವಲಂಬಿತ ಚರಾಂಶ – ಅಭ್ಯಾಸ ಕೌಶಲ

**ಅಧ್ಯಯನದಲ್ಲಿ ಬಳಸಿದ ತಾಂತ್ರಿಕ ಪದಗಳ ಅರ್ಥ**

- **ಸಂವೇಗಾತ್ಮಕ ಬುದ್ಧಿಶಕ್ತಿ :** ತನ್ನ ಹಾಗೂ ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಇತರರ ಭಾವನೆಗಳಿಗೆ ಸ್ಪಂದಿಸುವ ಹಾಗೂ ರಚನಾತ್ಮಕವಾಗಿ ವರ್ತಿಸುವ ಸಾಮರ್ಥ್ಯವೇ ಸಂವೇಗಾತ್ಮಕ ಬುದ್ಧಿಶಕ್ತಿ.
- **ಅಭ್ಯಾಸ ಕೌಶಲ :** ವಿದ್ಯಾರ್ಥಿಯು ತರಗತಿಯಲ್ಲಿ ಬರವಣಿಗೆ, ಓದುವುದು, ಗೃಹಪಾಠ, ಟಿಪ್ಪಣಿ, ಗೆರೆ ಎಳೆಯುವುದು, ಮುಖ್ಯಾಂಶಗಳನ್ನು ನೋಟ್ ಮಾಡಿಕೊಳ್ಳುವುದು ....ಮುಂತಾದವುಗಳು.

**ಅಧ್ಯಯನದ ವ್ಯಾಪ್ತಿ**

- ಪ್ರಸ್ತುತ ಅಧ್ಯಯನವು ವಿಜಯಪುರ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ.
- ಪ್ರಸ್ತುತ ಅಧ್ಯಯನದಲ್ಲಿ M.A., M.Com., M.Sc., ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲಗಳ ನಡುವಿನ ಸಂಬಂಧವನ್ನು ಮಾತ್ರ ಪರಿಗಣಿಸಲಾಗಿದೆ.

**ಸಂಬಂಧಿಸಿದ ಸಾಹಿತ್ಯಾವಲೋಕನ**

1. **ಹ್ಯಾಸಕೆಟ್ ರೇಬಿಕಾ (2003) :** "ಉನ್ನತ ಶಿಕ್ಷಣದಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿ ಮತ್ತು ಬೋಧನ ಒಂದು ಅಧ್ಯಯನ"

**ಉದ್ದೇಶಗಳು**

(1) ಕಲಿಕೆ ಸಂಗತಿ ಮತ್ತು ಪರಿಣಾಮಕಾರಿ ಬೋಧನೆ ಅಳೆಯುವುದು.

(2) ಬೋಧನೆಯಲ್ಲಿ ಕಲಿಕೆಯ ಉಪಯೋಗವನ್ನು ಗಣನೆಗೆ ತೆಗೆದುಕೊಳ್ಳುವುದು.

**ತೀರ್ಮಾನಗಳು**

(1) ಕಲಿಕೆ ಮತ್ತು ಬೋಧನೆಯು ಉತ್ತಮವಾದ ತತ್ವಗಳೊಂದಿಗೆ ಒಳಗೊಂಡಿದೆ.

(2) ಉನ್ನತ ಹಂತದಲ್ಲಿ ಕಲಿಕೆಯು ಸಂವೇಗಾತ್ಮಕ ಬುದ್ಧಿಶಕ್ತಿ ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿದೆ

2. **ಕೆಪ್ಪನ್ ಪ್ರಾನ್ ಬೆಟ್ಟ (2003) :** "ಸಂವೇಗಾತ್ಮಕ ಬುದ್ಧಿಶಕ್ತಿ ಮೇಲೆ ಶಿಕ್ಷಣದ ಮನಃಶಾಸ್ತ್ರದ ಸೂಕ್ಷ್ಮಮತಿ ಮತ್ತು ಕುಶಲತೆಯ ಪ್ರಭಾವ" ಒಂದು ಅಧ್ಯಯನ

**ಉದ್ದೇಶಗಳು**

1. ಶಿಕ್ಷಕರಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಮೂಡಿಸುವುದು.
2. ಸೂಕ್ಷ್ಮತೆಯನ್ನು ಮೂಡಿಸುವಲ್ಲಿ ಶೈಕ್ಷಣಿಕ ಮನಃಶಾಸ್ತ್ರದ ಪಾತ್ರ ಕಂಡು ಹಿಡಿಯುವುದು.
3. ಕೌಶಲ್ಯಗಳನ್ನು ಬೆಳೆಸುವಲ್ಲಿ ಶೈಕ್ಷಣಿಕ ಮನಃಶಾಸ್ತ್ರದ ಪಾತ್ರ ಕಂಡು ಹಿಡಿಯುವುದು.

**ತೀರ್ಮಾನಗಳು**

ಈ ಮೇಲ್ಕಂಡ ಉದ್ದೇಶಗಳಿಗೆ ಅನುಗುಣವಾಗಿ ಇಲ್ಲಿ ಶಿಕ್ಷಕರು ಕಡಿಮೆ ಸಂವೇಗಾತ್ಮಕ ಬುದ್ಧಿಶಕ್ತಿ ಹೊಂದಿದ್ದರು ಸಹ ಸೂಕ್ತ ತರಬೇತಿಯ ನಂತರ ತರಗತಿಯಲ್ಲಿಯ ಮಕ್ಕಳೊಂದಿಗೆ ಸೂಕ್ಷ್ಮತೆಯಿಂದ ಮತ್ತು ಕುಶಲತೆಯಿಂದ ವರ್ತಿಸಲು ಸಮರ್ಥರಾಗಿರುವರು ಎಂದು ಕಂಡು ಬಂದಿದೆ.

3. **ಡ್ರಾಗೋ ಜೂಡಿ ಎಮ್. (2004):** "ಅಸಾಂಪ್ರದಾಯಿಕ ಕಾಲೇಜು ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಶೈಕ್ಷಣಿಕ ಸಾಧನೆಯ ನಡುವಿನ ಸಂಬಂಧದ" – ಒಂದು ಅಧ್ಯಯನ.

**ಉದ್ದೇಶಗಳು**

1. ಶೈಕ್ಷಣಿಕ ಸಾಧನೆಯಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯ ಪ್ರಭಾವವನ್ನು ಅರಿಯುವುದು.
2. ಸಂವೇಗಾತ್ಮಕ ಬುದ್ಧಿಶಕ್ತಿ ಮತ್ತು ಶೈಕ್ಷಣಿಕ ಸಾಧನೆಗಳ ನಡುವಿನ ಸಹಸಂಬಂಧವನ್ನು ಅಧ್ಯಯನಿಸುವುದು.

**ತೀರ್ಮಾನಗಳು**

1. ಸಂವೇಗಾತ್ಮಕ ಬುದ್ಧಿಶಕ್ತಿಯ ಶೈಕ್ಷಣಿಕ ಸಾಧನೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ.
2. ಸಂವೇಗಾತ್ಮಕ ಬುದ್ಧಿಶಕ್ತಿಯು ಶೈಕ್ಷಣಿಕ ಸಾಧನೆಗೆ ತೀರ ಹತ್ತಿರವಾಗಿದ್ದು ವಿದ್ಯಾರ್ಥಿಗಳು ಬೌದ್ಧಿಕ ವಿಷಯಗಳೊಡನೆ ಸಂಬಂಧ ಕಲ್ಪಿಸಿಕೊಡುತ್ತದೆ. ಇದರಿಂದ ಆಯಾ ವಯಸ್ಸಿನಲ್ಲಿ ಕಲಿಯುವ ಮಕ್ಕಳಿಗೆ ವಿಷಯವನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಸಹಾಯಕವಾಗುತ್ತದೆ.

**ಸಂಬಂಧಿತ ಸಾಹಿತ್ಯಾವಲೋಕನದಿಂದ ಕಂಡುಬಂದ ಅಂಶಗಳು**

1. ಕಲಿಕೆ ಮತ್ತು ಬೋಧನೆಯು ಉತ್ತಮವಾದ ತತ್ವಗಳಿಂದ ಒಳಗೊಂಡಿದೆ.
2. ಶಿಕ್ಷಕರು ಕಡಿಮೆ ಸಂವೇಗಾತ್ಮಕ ಬುದ್ಧಿಶಕ್ತಿ ಹೊಂದಿದ್ದರೂ ಸಹ ಸೂಕ್ತ ತರಬೇತಿ ನಂತರ ತರಗತಿಯಲ್ಲಿಯ ಮಕ್ಕಳೊಂದಿಗೆ ಸೂಕ್ಷ್ಮಮತಿ ಮತ್ತು ಕುಶಲತೆಯಿಂದ ವರ್ತಿಸಲು ಸಮರ್ಥರಾಗಿರುವರೆಂದು ಕಂಡುಬಂದಿದೆ.
3. ಕಲಿಕೆ ಪರಿಣಾಮಕಾರಿಯಾಗುವಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯ ಸಿದ್ಧತೆಗಳು ಮಹತ್ವ ಪಾತ್ರ ವಹಿಸುತ್ತದೆ ಎಂದು ಕಂಡುಬಂದಿದೆ.
4. ಹೆಚ್ಚು ಸಂವೇಗಾತ್ಮಕ ಬುದ್ಧಿಶಕ್ತಿ ಹೊಂದಿದವರು ಕಲಿಕೆಯಲ್ಲಿ ಉತ್ಸುಕರಾಗಿರುತ್ತಾರೆ ಎಂದು ಕಂಡುಬಂದಿದೆ.
5. ಸಂವೇಗಾತ್ಮಕ ಬುದ್ಧಿಶಕ್ತಿಯು ಶೈಕ್ಷಣಿಕ ಸಾಲಿನಲ್ಲಿ ಮಹತ್ವ ಸ್ಥಾನ ಪಡೆದಿದೆ ಎಂಬುದು ಕಂಡುಬಂದಿದೆ.

**ಸಂಶೋಧನಾ ವಿನ್ಯಾಸ**

**ಪ್ರತಿಚಯನ**

ಪ್ರಸ್ತುತ ಅಧ್ಯಯನದಲ್ಲಿ ವಿಜಯಪುರ ಜಿಲ್ಲೆಯ ಸ್ನಾತಕೋತ್ತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಸಮಷ್ಟಿಯಾಗಿ ಪರಿಗಣಿಸಲಾಗಿದೆ.

APPROVED UGC CARE

ISSN : 2249-2429 ಸಂಶೋಧನೆ RNI REG.NO.KARKAN/2011/38712

ಈ ಸಮುಷ್ಠಿಯಿಂದ 150 ಸ್ನಾತಕೋತ್ತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಪ್ರತಿಚಯನಗಳಾಗಿ ಯಾದೃಚ್ಛಿಕ ಪ್ರತಿಚಯನ ವಿಧಾನದಿಂದ ಆಯ್ಕೆಮಾಡಲಾಗಿದೆ.

| ಕ್ರ. ಸಂ. | ವಿಭಾಗಗಳ ಹೆಸರು | ಪ್ರತಿಚಯನ | | |
|---|---|---|---|---|
| | | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು | ಒಟ್ಟು |
| 1. | ಎಂ.ಎ. (ಕನ್ನಡ) | 25 | 25 | 50 |
| 2. | ಎಂ.ಕಾಂ. | 25 | 25 | 50 |
| 3. | ಎಂ.ಎಸ್ಸಿ (ಕಂಪ್ಯೂಟರ್ ಸೈನ್ಸ್) | 25 | 25 | 50 |
| | ಒಟ್ಟು | 75 | 75 | 150 |

## ದತ್ತಾಂಶ ಸಂಗ್ರಹಣಾ ಸಾಧನಗಳು

ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ತಿಳಿಯಲು ಪರೀಕ್ಷಣಾ ಸಾಧನವನ್ನು, ದತ್ತಾಂಶ ಸಂಗ್ರಹಣಾ ಸಾಧನವಾಗಿ ಬಳಸಲಾಗಿದೆ.

- ಸಂವೇಗಾತ್ಮಕ ಬುದ್ಧಿಶಕ್ತಿಯ ಇನ್ವೆಂಟರಿ ಸ್ಕೇಲ್–ಶೈಲೇಂದ್ರಸಿಂಗ್ 2004 ಗೋಲ್‌ನ್‌ರವರ ಮಾದರಿಯಲ್ಲಿ ತಯಾರಿಸಿರುವ ಸಂವೇಗಾತ್ಮಕ ಬುದ್ಧಿಶಕ್ತಿಯ ಪರೀಕ್ಷಣವನ್ನು ಸಾಧನವನ್ನಾಗಿ ಬಳಸಲಾಗಿದೆ.
- ವಿದ್ಯಾರ್ಥಿಗಳ ಅಭ್ಯಾಸ ಕೌಶಲ ತಿಳಿಯಲು ಸ್ನಾತಕೋತ್ತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ 2022–2023 ವರ್ಷದ 1 ಸೆಮಿಸ್ಟರ್ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗಿದೆ.

## ದತ್ತಾಂಶ ಸಂಗ್ರಹಣೆ

ವಿದ್ಯಾರ್ಥಿಗಳಿಗೆ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲ ನಡುವೆ ಇರುವ ಸಂಬಂಧದ ಅರಿವನ್ನು ಮೂಡಿಸಿ, ಪರೀಕ್ಷಣಾ ಸಾಧನದ ಕ್ಲಿಷ್ಟಕರ ಹೇಳಿಕೆಯನ್ನು ಸರಳೀಕರಿಸುವುದರ ಮೂಲಕ, ಉತ್ತರಿಸಲು ಬೇಕಾದಷ್ಟು ಕಾಲಾವಕಾಶ ನೀಡಿ, ಹೇಳಿಕೆಗಳಿಗೆ ಪ್ರತಿಕ್ರಿಯೆಗಳನ್ನು ಗುರುತಿಸುವುದರ ಮೂಲಕ ದತ್ತಾಂಶ ಸಂಗ್ರಹಿಸಲಾಯಿತು.

## ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

ದತ್ತಾಂಶದ ವಿಶ್ಲೇಷಣೆಗಾಗಿ ಸಂಖ್ಯಾಶಾಸ್ತ್ರೀಯ ತಂತ್ರಗಳಾದ ಸರಾಸರಿ (M), ಮಾನಕ ವಿಚಲನೆ (S.D) ಮತ್ತು 0.05 ಸ್ವತಂತ್ರ ಬಳಸಿ, 't' ಅಂಕಗಳು ಹಾಗೂ ಕಾರ್ಲ್‌ಪಿರ್‌ಸನ್ ಗುಣಾನುಪೂರ್ಣ ವಿಧಾನದ 'r' ಮೌಲ್ಯವನ್ನು ಕಂಡುಹಿಡಿದು, ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲ ಸಂಬಂಧದ ಲಕ್ಷಾರ್ಹತೆಯನ್ನು ಕಂಡುಹಿಡಿಯಲಾಗಿದೆ.

## ಅಧ್ಯಯನದಿಂದ ಕಂಡುಬಂದ ಪ್ರಮುಖ ಅಂಶಗಳು

- ಸ್ನಾತಕೋತ್ತರ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲ ನಡುವೆ ಕಡಿಮೆ ಪ್ರಮಾಣದ ಸಂಬಂಧ ಕಂಡುಬಂದಿದೆ.
- ಸ್ನಾತಕೋತ್ತರ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ನಡುವೆ ಸಂವೇಗಾತ್ಮಕ ಬುದ್ಧಿಶಕ್ತಿಯಲ್ಲಿ ಮಹತ್ವಪೂರ್ಣ ವ್ಯತ್ಯಾಸ ಕಂಡುಬಂದಿದೆ.
- ಸ್ನಾತಕೋತ್ತರ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ನಡುವೆ ಅಭ್ಯಾಸ ಕೌಶಲ ಮಹತ್ವಪೂರ್ಣ ವ್ಯತ್ಯಾಸ ಕಂಡುಬಂದಿದೆ.

APPROVED BY UGC CARE

## ಉಪಸಂಹಾರ

ಪ್ರಸ್ತುತ ಅಧ್ಯಯನದಿಂದ ವಿಜಯಪುರ ಪ್ರದೇಶದ ವಿದ್ಯಾರ್ಥಿಗಳ ಸಂವೇಗಾತ್ಮಕ ಬುದ್ಧಿಶಕ್ತಿ ಹಾಗೂ ಅಭ್ಯಾಸ ಕೌಶಲ ನಡುವೆ ತೀರಾ ಕಡಿಮೆ ಪ್ರಮಾಣದ ಸಂಬಂಧವಿರುವುದು ಕಂಡುಬಂದಿದೆ. ಅದೇ ರೀತಿ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಹೆಚ್ಚಿನ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೊಂದಿರುವುದು ಕಂಡುಬಂದಿದೆ. ಹಾಗೂ ಅಭ್ಯಾಸ ಕೌಶಲದಲ್ಲಿ ವಿದ್ಯಾರ್ಥಿನಿಯರಿಗಿಂತ ವಿದ್ಯಾರ್ಥಿಗಳು ಹೆಚ್ಚಿನ ಅಭ್ಯಾಸ ಕೌಶಲ ಉತ್ತಮತೆಯನ್ನು ಹೊಂದಿರುವುದು ಕಂಡುಬಂದಿದೆ. ಅದಕ್ಕಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣದೊಂದಿಗೆ ಅನೇಕ ಕಾರ್ಯಚಟುವಟಿಕೆಗಳನ್ನು ಮಾಡಿಸುವುದರ ಮೂಲಕ ಜ್ಞಾನಾತ್ಮಕ ವಿಕಾಸವಾಗುವಂತೆ ಮಾಡಿ, ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ದೇಶಕ್ಕೆ ಉತ್ತಮ ಕೊಡುಗೆ ನೀಡುವಂತಹ ಕಾರ್ಯವನ್ನು ಶಿಕ್ಷಕರು ಮಾಡಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


- **Best J.W. (1971) :** Research in Education. New Jersey : Prentice-Hall.
- **Garret H.E. (2006) :** Statistics in Psychology and Education. Surjet Publication.
- **Aghasafari M. (2006) :** On the relationship between emotional intelligence and language learning strategies. Unpublished master?s thesis, llameh Tabataba?i University, Iran.
- **Bar-On, R. (2000) :** Emotional and social intelligence: Insights from the emotional quotient inventory (EQ-I). In R. Bar-On, & J. D., Parker (Eds.), The handbook of emotional intelligence, (pp. 363-388). Jossey- Bass, San Francisco.
- **Bracket M. A., Rives S.E., Shiffman S., Lerner N., and Salovey P. (2006) :** Relating Emotional Abilities to Social Functioning: A comparison of self-report and performance measures of emotional intelligence. Journal of Personality and Social Psychology, 91, pp. 780-795.
- **Brown G. (2004) :** How Students Learn. A supplement to the Routledge Falmer Key Guides for Effective Teaching. Retrieved from www.routledgeeducation.com.
- **Durak H.I., Torun S.F., Sayiner A. and Kandiloglu G. (2006) :** Decrisption and Evaluation of an Innovative Course on Learning and Study Skills for the 1ST year Medical Students. Retrieved from www.journal.med.tohoku.ac.
- **Goleman D. (1998) :** Working with Emotional Intelligence. Bantman: London: Bloomsbury.
- **Goleman D. (2001) :** Emotional intelligence. Issues in paradigm building. In Cherniss, and Goleman, D. (Eds.): The Emotionally Intelligence Workplace, San Franscisco: Jossey-Bass.
- **Lawson C. (2011) :** Retrieved from: < http://www.cdl.org/ The Connection Between Emotions and Learning.


■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ಡಾ. ರಾಧಾಕೃಷ್ಣನರವರ ಜೀವನ ಹಾಗೂ ಸಾಧನೆಗಳು

✍ **ಡಾ. ಆರ್.ಹೆಚ್. ಜಂಗಣವಾರಿ**, ಸಹಾಯಕ ಪ್ರಾಧ್ಯಾಪಕರು, ಕೆ.ಆರ್. ಬೆಲ್ಲದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಸ್ನಾತ್ತಕೋತ್ತರ ಅಧ್ಯಯನ ವಿಭಾಗ, ಮುಂಡರಗಿ.

> *"ಹೆಚ್ಚಿನ ಜನರು ಮನಸ್ಸು ಕನ್ನಡಿ ಎಂದು ನಂಬುತ್ತಾರೆ, ಹೆಚ್ಚು ಕಡಿಮೆ ನಿಖರವಾಗಿ ತಮ್ಮ ಹೊರಗಿನ ಪ್ರಪಂಚವನ್ನು ಪ್ರತಿಬಿಂಬಿಸುತ್ತದೆ, ಆದರೆ ಮನಸ್ಸು ಸ್ವತಃ ಸೃಷ್ಟಿಯ ಪ್ರಮುಖ ಅಂಶವಾಗಿದೆ ಎಂದು ತಿಳಿದುಕೊಳ್ಳುವುದಿಲ್ಲ". ಅತ್ಯುನ್ನತ ಶಿಕ್ಷಣವೆಂದರೆ ಅದು ನಮಗೆ ಕೇವಲ ಮಾಹಿತಿಯನ್ನು ನೀಡುವುದಿಲ್ಲ. ಆದರೆ ನಮ್ಮ ಜೀವನವನ್ನು ಎಲ್ಲಾ ಅಸ್ತಿತ್ವದೊಂದಿಗೆ ಸಾಮರಸ್ಯದಿಂದ ಮಾಡುತ್ತದೆ.*
>
> – ರವೀಂದ್ರನಾಥ ಟ್ಯಾಗೋರ್"

ಸರ್ವಪಲ್ಲಿ ರಾಧಾಕೃಷ್ಣನ್ ಭಾರತದ ಒಬ್ಬ ಶೈಕ್ಷಣಿಕ, ತತ್ವಜ್ಞಾನಿ ಮತ್ತು ರಾಜನೀತಿಜ್ಞರು ವಿದ್ವಾಂಸ, ರಾಜಕಾರಣಿ, ತತ್ವಜ್ಞಾನಿ ಮತ್ತು ರಾಜಕಾರಣಿ.ಅವರು ಭಾರತದ ಮೊದಲ ಉಪರಾಷ್ಟ್ರಪತಿ ಮತ್ತು ಎರಡನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು. ರಾಧಾಕೃಷ್ಣನ್ ಅವರು ತಮ್ಮ ಜೀವನ ಮತ್ತು ವೃತ್ತಿಜೀವನವನ್ನು ಬರಹಗಾರರಾಗಿ ತಮ್ಮ ನಂಬಿಕೆಯನ್ನು ವಿವರಿಸಲು, ರಕ್ಷಿಸಲು ಮತ್ತು ಪ್ರಚಾರ ಮಾಡಲು ಪ್ರಯತ್ನಿಸಿದರು, ಇದನ್ನು ಅವರು ಹಿಂದೂ ಧರ್ಮ, ವೇದಾಂತ ಮತ್ತು ಆತ್ಮದ ಧರ್ಮ ಎಂದು ಉಲ್ಲೇಖಿಸಿದ್ದಾರೆ. ಅವರು ತಮ್ಮ ಹಿಂದೂ ಧರ್ಮವು ತಾತ್ವಿಕವಾಗಿ ಮತ್ತು ನೈತಿಕವಾಗಿ ಕಾರ್ಯಸಾಧ್ಯವಾಗಿದೆ ಎಂದು ತೋರಿಸಲು ಬಯಸಿದ್ದರು. ಅವರು ಭಾರತೀಯ ಮತ್ತು ಪಾಶ್ಚಿಮಾತ್ಯ ತಾತ್ವಿಕ ಸಂದರ್ಭಗಳಲ್ಲಿ ಆಗಾಗ್ಗೆ ನಿರಾಳವಾಗಿರುವಂತೆ ತೋರುತ್ತದೆ, ಮತ್ತು ಅವರು ತಮ್ಮ ಗದ್ಯದಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಮೂಲಗಳೆರಡನ್ನೂ ಸೆಳೆಯುತ್ತಾರೆ. ಪರಿಣಾಮವಾಗಿ, ರಾಧಾಕೃಷ್ಣನ್ ಅವರನ್ನು ಶೈಕ್ಷಣಿಕ ವಲಯಗಳಲ್ಲಿ ಪಶ್ಚಿಮಕ್ಕೆ ಹಿಂದೂ ಧರ್ಮದ ಸಂಕೇತವೆಂದು ಪ್ರಶಂಸಿಸಲಾಗಿದೆ. "ಶಿಕ್ಷಣವು ಸಂಪೂರ್ಣವಾಗಲು ಮಾನವೀಯವಾಗಿರಬೇಕು, ಅದು ಬುದ್ಧಿಯ ತರಬೇತಿಯನ್ನು ಮಾತ್ರವಲ್ಲದೆ ಹೃದಯದ ಪರಿಷ್ಕರಣೆ ಮತ್ತು ಚೈತನ್ಯದ ಶಿಸ್ತನ್ನು ಒಳಗೊಂಡಿರಬೇಕು. ಹೃದಯ ಮತ್ತು ಚೈತನ್ಯವನ್ನು ನಿರ್ಲಕ್ಷಿಸಿದರೆ ಯಾವುದೇ ಶಿಕ್ಷಣವನ್ನು ಪರಿಪೂರ್ಣವೆಂದು ಪರಿಗಣಿಸಲಾಗುವುದಿಲ್ಲ."

ಡಾ. ಸರ್ವಪಲ್ಲಿ ರಾಧಾಕೃಷ್ಣನ್, ಸೆಪ್ಟೆಂಬರ್ 5, 1888 ರಂದು ಮದ್ರಾಸ್ನ ಪಟ್ಟಣವಾದ ತಿರುಟ್ಟಣಿಯಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಸರ್ವಪಲ್ಲಿ ವೀರಸ್ವಾಮಿ ಅವರು ಸ್ಥಳೀಯ ಜಮೀನ್ದಾರರ ಸೇವೆಯಲ್ಲಿ ಅಧೀನ ಕಂದಾಯ ಅಧಿಕಾರಿ ಯಾಗಿದ್ದರು ಮತ್ತು ಅವರ ತಾಯಿ ಸೀತಮ್ಮ. ಅವರು ತಮ್ಮ ಆರಂಭಿಕ ಶಿಕ್ಷಣವನ್ನು ತಿರುಟ್ಟಣಿಯಲ್ಲಿ ಪಡೆದರು. ಸರ್ವಪಲ್ಲಿ ರಾಧಾಕೃಷ್ಣನ್ ಅವರು 16 ನೇ ವಯಸ್ಸಿನಲ್ಲಿ ಶಿವಕಾಮು ಅವರನ್ನು ವಿವಾಹವಾದರು. ಶಿವಕಾಮು ರಾಧಾಕೃಷ್ಣನ್ ಅವರ ದೂರದ ಸಂಬಂಧಿ. ರಾಧಾಕೃಷ್ಣನ್ ಮತ್ತು ಶಿವಕಾಮು 51 ವರ್ಷಗಳಿಗೂ ಹೆಚ್ಚು ಕಾಲ ಸಂತೋಷದಿಂದ ದಾಂಪತ್ಯ ಜೀವನ ನಡೆಸುತ್ತಿದ್ದರು. ರಾಧಾಕೃಷ್ಣನ್ ಅವರಿಗೆ ಆರು ಮಕ್ಕಳು, ಐದು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ. ಅವರ ಮಗ ಸರ್ವಪಲ್ಲಿ ಗೋಪಾಲ್ ಭಾರತದ ಪ್ರಸಿದ್ಧ ಇತಿಹಾಸಕಾರರಾಗಿದ್ದರು.

ಡಾ. ರಾಧಾಕೃಷ್ಣನ್ ಅವರು ಶಿಕ್ಷಣಕ್ಕೆ ನೀಡಿದ ಕೊಡುಗೆ ಅನನ್ಯವಾದದ್ದು. ಅವರು ಶಿಕ್ಷಕರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸುತ್ತಾರೆ ಮತ್ತು ಶ್ರೇಷ್ಠ ಶಿಕ್ಷಣ ತಜ್ಞರಾಗಲು ಉದ್ದೇಶಿಸಿದ್ದರು. ಮೊದಲ ಅನುಭವವನ್ನು ಹೊಂದಿದ್ದರು ಸಂಸ್ಥೆಗಳು ಮತ್ತು ಅವುಗಳ ಬಹುಮುಖಿ ಸಮಸ್ಯೆಗಳ ಅವರು ಮಹಾನ್ ತತ್ವಜ್ಞಾನಿಯಾಗಿದ್ದರೂ ಸಹ ಅವರು ಜೀವನವನ್ನು ಬಹಳ ಹತ್ತಿರದಿಂದ ನೋಡಿದರು ಮತ್ತು ಅದನ್ನು ಪೂರ್ಣವಾಗಿ ನೋಡಿದರು. ಜೀವನಕ್ಕೆ ಒಂದು ಅರ್ಥವಿದೆ ಎಂದು ನೋಡಲು ನಾವು ವಿಫಲವಾದರೆ ಮಾನವ ಸುಧಾರಣೆಗಾಗಿ ನಮ್ಮ ಸಂಪೂರ್ಣ ಶ್ರಮದಾಯಕ ಪ್ರಯತ್ನವು ಯಾವುದೇ ಪ್ರಯೋಜನವಿಲ್ಲ ಎಂದು ಅವರು ನಂಬುತ್ತಾರೆ. ಅವರು ನಮ್ಮ ಮೌಲ್ಯಗಳು ಮಸುಕಾಗಿರುವ ನಮ್ಮ ಯುಗದ ಭ್ರಮನಿರಸನ ಮತ್ತು ಗೊಂದಲವನ್ನು ಎತ್ತಿ ತೋರಿಸುತ್ತಾರೆ. ನಮ್ಮ ಆಲೋಚನೆ ಗೊಂದಲಮಯವಾಗಿದೆ ಮತ್ತು ನಮ್ಮ ಗುರಿಗಳು ಅಲೆಯುತ್ತಿವೆ. ಮನುಷ್ಯ ಕೇವಲ ರೊಟ್ಟಿಗಾಗಿ ಬದುಕುವುದಿಲ್ಲ. ಅವನಿಗೊಂದು ನಂಬಿಕೆ ಇರಬೇಕು. ಮನುಷ್ಯನು ತನ್ನಲ್ಲಿ ನಂಬಿಕೆಯನ್ನು ಹೊಂದಿರಬೇಕು ಮತ್ತು ಅವನೊಳಗೆ ದೈವಿಕ ಅಂಶವಿದೆ ಎಂದು ಅರಿತುಕೊಳ್ಳಬೇಕು ಎಂದು ಅವರು ನಂಬುತ್ತಾರೆ. ಇದು ಈ ದೈವಿಕ ಅಂಶವಾಗಿದೆ, ಇದು ಸಂಪೂರ್ಣ ಸೃಜನಶೀಲತೆಗೆ ಮತ್ತು ಪ್ರಪಂಚದಲ್ಲಿ ಪುರುಷರು ಚಲಾಯಿಸುವ ಎಲ್ಲಾ ಸ್ವಾತಂತ್ರ್ಯಕ್ಕೆ ಕಾರಣವಾಗಿದೆ. ಶಿಕ್ಷಣವು ಸಾಮಾಜಿಕ ವಿಮೋಚನೆಯ ಒಂದು ದೊಡ್ಡ ಸಾಧನವಾಗಿದೆ. ಜನಾಂಗ, ಧರ್ಮ, ಲಿಂಗ, ಉದ್ಯೋಗ ಅಥವಾ ಅರ್ಥಶಾಸ್ತ್ರದ ಸ್ಥಿತಿಯನ್ನು ಲೆಕ್ಕಿಸದೆ ಪುರುಷರಲ್ಲಿ ಸಮಾನ ಸ್ವಾತಂತ್ರ್ಯ ಮತ್ತು ಸಮಾನ ಹಕ್ಕುಗಳ ಮನೋಭಾವವನ್ನು ಸ್ಥಾಪಿಸಲು, ಸಂರಕ್ಷಿಸಲು ಮತ್ತು ರಕ್ಷಿಸಲು ಇದು ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ. ಆದಾಗ್ಯೂ ಸಮಾನ ಅವಕಾಶ ಎಂದರೆ ಒಂದೇ ಅವಕಾಶ ಎಂದಲ್ಲ. ಇದರರ್ಥ ಪ್ರತಿಯೊಬ್ಬ ವ್ಯಕ್ತಿಗೆ ಶಿಕ್ಷಣದ ಸಮಾನ ಲಭ್ಯತೆ ಅವರು ಅದರಿಂದ ಲಾಭ ಪಡೆಯುವ ಮಟ್ಟಿಗೆ ಮತ್ತು ಅವರ ಗರಿಷ್ಠ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ವಿನ್ಯಾಸಗೊಳಿಸಲಾಗಿದೆ, ಸಾಮರ್ಥ್ಯದ ಯೋಗ್ಯತೆ ಮತ್ತು ಆಸಕ್ತಿಗಳ ವ್ಯತ್ಯಾಸಗಳನ್ನು ಗುರುತಿಸುತ್ತದೆ. ಶಿಕ್ಷಣ ಮತ್ತು ತತ್ವಶಾಸ್ತ್ರವು ಬೇರ್ಪಡಿಸಲಾಗದಂತೆ ಸಂಬಂಧ ಪ್ರತಿ ಸಮಾಜಕ್ಕೆ, ಮತ್ತು ಶಿಕ್ಷಣವು ಮೂಲಭೂತವಾಗಿ ಒಂದು ಸಾಮಾಜಿಕ–ತಾತ್ವಿಕ ಉದ್ಯಮವಾಗಿದೆ. ಜ್ಞಾನ ಮತ್ತು ತತ್ವಶಾಸ್ತ್ರದ ಶಕ್ತಿಯಿಲ್ಲದೆ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸುವ ಯಾವುದೇ ಪ್ರಯತ್ನವು ಅನಿವಾರ್ಯವಾಗಿ ವಿಫಲವಾಗಿದೆ ಎಂದು ಪರಿಗಣಿಸಲಾಗುತ್ತದೆ. ಡಾ.ರಾಧಾಕೃಷ್ಣನ್ ಅವರಿಂದ ಪಾಠ ಕಲಿತ ಅನೇಕ ವಿದ್ಯಾರ್ಥಿಗಳು ಜನಪ್ರಿಯ ಶಿಕ್ಷಕರಾಗಿದ್ದರು. ರಾಧಾಕೃಷ್ಣನ್ ಅವರು ತಮ್ಮ ಜೀವನದ ಅವಧಿಯಲ್ಲಿ ಆಂಧ್ರ ವಿಶ್ವವಿದ್ಯಾಲಯ ಮತ್ತು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದರು. ಅವರು ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿನಲ್ಲಿ ತತ್ವಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ತಮ್ಮ ಗುರು ಉಪರಾಷ್ಟ್ರಪತಿಯಾಗಿ ದೆಹಲಿಗೆ ಹೊರಡುವ ಸಂದರ್ಭದಲ್ಲಿ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು, ಅವರನ್ನು ಕಳುಹಿಸಿ ಕೊಡಲು ಸಾರೋಟನ್ನು ತಂದು ಅಲಂಕರಿಸಿ, ಕುದುರೆಯ ಬದಲು ತಾವೇ ಕುದುರೆಗಳಂತೆ, ರಾಧಾಕೃಷ್ಣನ್ ಅವರು ಕುಳಿತ ಸಾರೋಟನ್ನು ಪ್ರೀತಿಪೂರ್ವಕವಾಗಿ ರೈಲ್ವೆ ನಿಲ್ದಾಣದವರೆಗೂ ಎಳೆದು ಕೊಂಡು ಹೋಗಿ, ಭಾವಪೂರ್ಣ ವಿದಾಯ ಹೇಳಿದ್ದರು. ಈ ಸನ್ನಿವೇಶವನ್ನು ಕಂಡು ರಾಧಾಕೃಷ್ಣನ್ ಅವರು ಭಾವುಕರಾಗಿದ್ದರಂತೆ. ಅವರು ಆಗಾಗ ಈ ಸಂದರ್ಭವನ್ನು ನೆನೆಸಿಕೊಳ್ಳುತ್ತಿದ್ದರು.

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಒಬ್ಬ ದಾರ್ಶನಿಕ, ಶ್ರೇಷ್ಠ ಶಿಕ್ಷಕ, ವಿದ್ವಾಂಸ ಸರ್ವಶ್ರೇಷ್ಠ, ಸೃಜನಶೀಲ ಪ್ರತಿಭೆ, ಮಹಾನ್ ಮಾನವತಾವಾದಿ, ಆಧ್ಯಾತ್ಮಿಕವಾದಿ, ದೂರದೃಷ್ಟಿಯುಳ್ಳ ವ್ಯಕ್ತಿ, ಧ್ಯೇಯೋದ್ದೇಶದ ವ್ಯಕ್ತಿ, ತತ್ವಗಳ ವ್ಯಕ್ತಿ, ಆದರ್ಶವಾದಿ, ಗ್ಯಾಬ್ ಉಡುಗೊರೆಯನ್ನು ಹೊಂದಿರುವ ವಾಗ್ಮಿ, ಒಬ್ಬ ಮೂಲ ಚಿಂತಕ, ಒಬ್ಬ ಪ್ರಖ್ಯಾತ ಲೇಖಕ ಅವರು ಭಾರತದ ಶ್ರೇಷ್ಠ ಶಿಕ್ಷಣತಜ್ಞರಲ್ಲಿ ಒಬ್ಬರು. ಅವರು ತಮ್ಮ ಅತ್ಯುತ್ತಮ ವ್ಯಕ್ತಿತ್ವ ಮತ್ತು ಬುದ್ಧಿಶಕ್ತಿಯಿಂದ ಭಾರತವನ್ನು ಮಾತ್ರವಲ್ಲದೆ ಇಡೀ ಜಗತ್ತನ್ನು ಬೆಳಗಿಸಿದರು. ಅವರು ಬುದ್ಧಿಜೀವಿಗಳ ನಕ್ಷತ್ರಪುಂಜದಲ್ಲಿ ಪ್ರಕಾಶಮಾನ ನಕ್ಷತ್ರದಂತೆ ಹೊಳೆಯುತ್ತಾರೆ. ಅವರು ಭಾರತದ ಶ್ರೇಷ್ಠ ಪುತ್ರರಾಗಿದ್ದರು.ಅವರ ಜನ್ಮದಿನವನ್ನು ಭಾರತದಲ್ಲಿ ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತದೆ. ಶಿಕ್ಷಕರಾಗಿ ಅವರ ಯಶಸ್ಸಿಗೆ ಅವರ ಉತ್ತಮ ಕಲಿಕೆ ಮತ್ತು ಸ್ಪಷ್ಟವಾದ ನಿರೂಪಣೆಯ ಕೊಡುಗೆ ಕಾರಣ. ಅವರು ಭಾರತದ ಶ್ರೇಷ್ಠ ಶಿಕ್ಷಣ ತಜ್ಞರಲ್ಲಿ ಒಬ್ಬರು.ಅವರು ತಮ್ಮ ಅತ್ಯುತ್ತಮ ವ್ಯಕ್ತಿತ್ವ ಮತ್ತು ಬುದ್ಧಿಶಕ್ತಿಯಿಂದ ಭಾರತವನ್ನು ಮಾತ್ರವಲ್ಲದೆ ಇಡೀ ಜಗತ್ತನ್ನು ಬೆಳಗಿಸಿದರು. ನಕ್ಷತ್ರ ಪುಂಜದಲ್ಲಿ ಪ್ರಕಾಶಮಾನ ನಕ್ಷತ್ರದಂತೆ ಹೊಳೆಯುತ್ತಾರೆ ಬುದ್ಧಿಜೀವಿಗಳ ಅವರು ಭಾರತದ ಶ್ರೇಷ್ಠ ಪುತ್ರರಾಗಿದ್ದರು. ಅವರ ಜನ್ಮದಿನವನ್ನು ಭಾರತದಲ್ಲಿ ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತದೆ. ಅವರು ಭಾರತೀಯ ಶಿಕ್ಷಣದ ಜ್ಯೋತಿಯನ್ನು ಹೊತ್ತವರು. ಅವರ ಕೊಡುಗೆ ಶಿಕ್ಷಣ, ತತ್ವಶಾಸ್ತ್ರ, ಧರ್ಮ, ಸಂಸ್ಕೃತಿ, ವಿಜ್ಞಾನ ಇತ್ಯಾದಿ ಕ್ಷೇತ್ರಕ್ಕೆ ಡಾ. ರಾಧಾಕೃಷ್ಣನ್ ಅವರು ಶಿಕ್ಷಣವನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಸಾಧನವೆಂದು ವ್ಯಾಖ್ಯಾನಿಸುತ್ತಾರೆ. ಸಾಮಾಜಿಕ ಮತ್ತು ರಾಷ್ಟ್ರೀಯ ಏಕೀಕರಣಕ್ಕಾಗಿ, ಉತ್ಪಾದಕತೆಯನ್ನು ಹೆಚ್ಚಿಸಲು, ಶಿಕ್ಷಣವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಶಿಕ್ಷಣದ ಮಹತ್ವವು ಜ್ಞಾನ ಮತ್ತು ಕೌಶಲ್ಯದಲ್ಲಿ ಮಾತ್ರವಲ್ಲ, ಅದು ಇತರರೊಂದಿಗೆ ಬದುಕಲು ನಮಗೆ ಸಹಾಯ ಮಾಡುವುದು.ಅವರ ಪ್ರಕಾರ ಶಿಕ್ಷಣವು ನಮಗೆ ಕೆಲವು ತಂತ್ರಗಳನ್ನು ನೀಡಬಾರದು, ಇದರಿಂದಾಗಿ ನಾವು ಯಶಸ್ವಿ ಜೀವನವನ್ನು ನಡೆಸುತ್ತೇವೆ, ಆದರೆ "ಶಾಶ್ವತ ಮೌಲ್ಯಗಳನ್ನು" ಕಂಡುಹಿಡಿಯಲು ನಮಗೆ ಸಹಾಯ ಮಾಡಬೇಕು. ಶಿಕ್ಷಕ ವೃತ್ತಿಯು ಅವರ ಮೊದಲ ಪ್ರೀತಿಯಾಗಿದ್ದು, ಅವರ ಅಡಿಯಲ್ಲಿ ಓದಿದವರು ಶಿಕ್ಷಕರಾಗಿ ಅವರ ಶ್ರೇಷ್ಠ ಗುಣಗಳನ್ನು ಇಂದಿಗೂ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಈ ಪರಿಸರದಲ್ಲಿ, ಪ್ರಸ್ತುತ ಪತ್ರಿಕೆಯು ಸರ್ವಪಲ್ಲಿ ರಾಧಾಕೃಷ್ಣನ್ ಅವರ ಶೈಕ್ಷಣಿಕ ಚಿಂತನೆಗಳ ಮೇಲೆ ಕೇಂದ್ರೀಕರಿಸಲು ಪ್ರಯತ್ನಿಸಿದೆ– ಶಿಕ್ಷಣದ ಪರಿಕಲ್ಪನೆಗಳು ಮತ್ತು ಕಾರ್ಯಗಳು, ಶಿಕ್ಷಣದ ಗುರಿಗಳು, ಪಠ್ಯಕ್ರಮ, ಬೋಧನಾ ವಿಧಾನಗಳು, ಶಿಸ್ತು, ಶಿಕ್ಷಕರ ಪಾತ್ರ ಮತ್ತು ಇಂದಿನ ದಿನಗಳಲ್ಲಿ ಅವರ ಶೈಕ್ಷಣಿಕ ಚಿಂತನೆಗಳ ಭಾರತ. ಸರ್ವಪಲ್ಲಿ ರಾಧಾಕೃಷ್ಣನ್, ಹೇಳುವಂತೆ "ಶಿಕ್ಷಕರು ದೇಶದ ಉತ್ತಮ ಮನಸ್ಸುಗಳಾಗಬೇಕು" ಸರಿಯಾದ ಶಿಕ್ಷಣದಿಂದ ಮಾತ್ರ ಸಮಾಜ ಮತ್ತು ದೇಶದ ಹಲವು ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು. ರಾಧಾಕೃಷ್ಣನ್ ಅವರು ಧಾರ್ಮಿಕ ಅನುಭವದ ವ್ಯಾಖ್ಯಾನದ ಪ್ರಕಾರ ವಿವಿಧ ಧರ್ಮಗಳನ್ನು ಶ್ರೇಣೀಕರಿಸಿದರು, ಅದ್ವೈತ ವೇದಾಂತವು ಅತ್ಯುನ್ನತ ಸ್ಥಾನವನ್ನು ಹೊಂದಿದೆ. ಇತರ ಧರ್ಮಗಳ ಬೌದ್ಧಿಕ ಮಧ್ಯಸ್ಥಿಕೆಯ ಪರಿಕಲ್ಪನೆಗಳಿಗೆ ಹೋಲಿಸಿದರೆ, ರಾಧಾಕೃಷ್ಣನ್ ಅದ್ವೈತ ವೇದಾಂತವನ್ನು ಹಿಂದೂ ಧರ್ಮದ ಅತ್ಯುತ್ತಮ ಪ್ರತಿನಿಧಿಯಾಗಿ ಕಂಡರು, ಏಕೆಂದರೆ ಅದು ಅಂತಃಪ್ರಜ್ಞೆಯ ಮೇಲೆ ಆಧಾರಿತವಾಗಿದೆ. ವೇದಾಂತವು ರಾಧಾಕೃಷ್ಣನ್ ಅವರ ಪ್ರಕಾರ ಧರ್ಮದ ಅತ್ಯುನ್ನತ ಪ್ರಕಾರವಾಗಿದೆ ಏಕೆಂದರೆ ಇದು ಅತ್ಯಂತ ನೇರವಾದ ಅರ್ಥಗರ್ಭಿತ ಅನುಭವ ಮತ್ತು ಆಂತರಿಕ ಸಾಕ್ಷಾತ್ಕಾರವನ್ನು ಒದಗಿಸುತ್ತದೆ.ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ತತ್ವಶಾಸ್ತ್ರದ ಪರಿಚಯವಿದ್ದರೂ, ರಾಧಾಕೃಷ್ಣನ್ ಅದನ್ನು ಟೀಕಿಸುತ್ತಿದ್ದರು. ವಸ್ತುನಿಷ್ಠತೆಗೆ ತಮ್ಮ ಹಕ್ಕುಗಳ ಹೊರತಾಗಿಯೂ, ಪಾಶ್ಚಿಮಾತ್ಯ ತತ್ವಜ್ಞಾನಿಗಳು ತಮ್ಮದೇ ಸಮಾಜದಿಂದ ಧಾರ್ಮಿಕ ಪ್ರಭಾವಗಳಿಂದ ಪ್ರಭಾವಿತರಾಗಿದ್ದಾರೆ ಎಂದು ಅವರು ಹೇಳಿದರು ಅವರು ತಮ್ಮ ಜೀವಿತಾವಧಿಯಲ್ಲಿ ಗೌರವಿಸಲ್ಪಟ್ಟ ಆರಂಭಿಕ ಜೀವನ, ಶಿಕ್ಷಣ ಮತ್ತು ಪ್ರಶಸ್ತಿಗಳ ಬಗ್ಗೆ ಕಲಿಯುತ್ತಾರೆ. ಅವರು ಭಾರತವನ್ನು ಹೆಮ್ಮೆಪಡುವಂತೆ ಮಾಡಿದ್ದಾರೆ ಮತ್ತು ಅವರ ಸ್ಮರಣೆಯಲ್ಲಿ ಶಿಕ್ಷಕರ ದಿನವನ್ನು ಸಮರ್ಪಿಸಲಾಯಿತು.ನಮ್ಮ ಸಮಾಜಕ್ಕೆ ಶಿಕ್ಷಕರು ನೀಡಿದ ಮಹಾನ್ ಕೊಡುಗೆಯ ಗುರುತಾಗಿ, ಡಾ.ರಾಧಾಕೃಷ್ಣನ್ ಅವರ ಜನ್ಮದಿನದಂದು ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತೇವೆ ಮತ್ತು ಅವರ ಕನಸುಗಳ ಸಮಾಜವನ್ನು ನಿರ್ಮಿಸಲು ಅವರ ಆದರ್ಶಗಳನ್ನು ಅನುಕರಿಸುವ ಮೂಲಕ ನಾವು ಅವರಿಗೆ ಗೌರವ ಸಲ್ಲಿಸಬೇಕು. ಶಿಕ್ಷಕರು ಸ್ತಂಭಗಳಾಗಿದ್ದು, ಅದರ ಮೇಲೆ ಇಡೀ ಸಮಾಜವು ನೆಲೆಗೊಂಡಿದೆ ಮತ್ತು ಆದ್ದರಿಂದ ಸಮಾಜದ ಗುಣಮಟ್ಟವು ಹೆಚ್ಚಿನ ಮಟ್ಟಿಗೆ ನಮ್ಮ ಶಿಕ್ಷಕರ ಮೇಲೆ ಅವಲಂಬಿತವಾಗಿದೆ.

ಡಾ. ರಾಧಾಕೃಷ್ಣನ್ ಅವರ ಶೈಕ್ಷಣಿಕ ಚಿಂತನೆಗಳು ಕೇವಲ ಆದರ್ಶವಾದಿಯಾಗಿರದೆ ಹೆಚ್ಚು ಪ್ರಾಯೋಗಿಕವಾಗಿವೆ. ಅವರ ಶೈಕ್ಷಣಿಕ ಚಿಂತನೆಗಳು ಪ್ರಾಯೋಗಿಕ ತತ್ವಶಾಸ್ತ್ರದಿಂದ ಪ್ರಭಾವಿತವಾಗಿವೆ. ಅವರು ಶಿಕ್ಷಣವನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಸಾಧನವೆಂದು ವ್ಯಾಖ್ಯಾನಿಸುತ್ತಾರೆ. ಸಾಮಾಜಿಕ ಮತ್ತು ರಾಷ್ಟ್ರೀಯ ಏಕೀಕರಣಕ್ಕಾಗಿ, ಉತ್ಪಾದಕವಾಗಿ ಹೆಚ್ಚಿಸಲು, ಶಿಕ್ಷಣವನ್ನು ಸರಿಯಾಗಿ ಬಳಸಿಕೊಳ್ಳಬೇಕು". ಶಿಕ್ಷಣದ ಪ್ರಾಮುಖ್ಯತೆ ಜ್ಞಾನ ಮತ್ತು ಕೌಶಲ್ಯದಲ್ಲಿ ಮಾತ್ರವಲ್ಲ, ಇತರರೊಂದಿಗೆ ಬದುಕಲು ನಮಗೆ ಸಹಾಯ ಮಾಡುವುದು" ಎಂದು ಅವರು ನಂಬಿದ್ದರು. (ಭಾಟಿಯಾ ಮತ್ತು ಸರಿನ್, 2004, ). ಸರಿಯಾದ ಶಿಕ್ಷಣದಿಂದ ಮಾತ್ರ ಸಮಾಜ ಮತ್ತು ದೇಶದ ಹಲವು ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂದು ಡಾ. ರಾಧಾಕೃಷ್ಣನ್ ಅಭಿಪ್ರಾಯಪಟ್ಟರು. ಬಾಹ್ಯಾಕಾಶ ಮತ್ತು ಸಮಯವನ್ನು ಮೀರಿದ ಅದೃಶ್ಯ ಮತ್ತು ಅಮೂರ್ತ ಜಗತ್ತನ್ನು ಇತರ ಜಗತ್ತನ್ನು ನೋಡಲು ನಮಗೆ ಸಹಾಯ ಮಾಡುವ ಶಿಕ್ಷಣವನ್ನು ಅವರು ಬಯಸುತ್ತಾರೆ. ನಮ್ಮಲ್ಲಿ ಈಗಾಗಲೇ ಏನಿದೆ ಎಂಬುದನ್ನು ಅರಿತುಕೊಳ್ಳಲು ಶಿಕ್ಷಣವು ನಮಗೆ ಎರಡನೇ ಜನ್ಮವನ್ನು ನೀಡಬೇಕಾಗಿದೆ. ಶಿಕ್ಷಣದ ಅರ್ಥವು ವ್ಯಕ್ತಿಯನ್ನು ವಿಮೋಚನೆಗೊಳಿಸುವುದಾಗಿದೆ ಮತ್ತು ನಮಗೆ ಸಂಪೂರ್ಣತೆಯ ಶಿಕ್ಷಣದ ಅಗತ್ಯವಿದೆ – ಮಾನಸಿಕ, ದೈಹಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ. ಶಿಕ್ಷಣವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಿರಂತರ ಚಿಂತನೆ, ಸತ್ಯದ ಅನುಸರಣೆ ಮತ್ತು ಜನಪ್ರಿಯ ಭಾವನೆಗಳಿಗೆ ಪ್ರತಿರೋಧದ ಶಕ್ತಿ ಮತ್ತು ಜನಸಮೂಹದ ಉತ್ಸಾಹವನ್ನು ಬೆಳೆಸಬೇಕು.ಅವರು ಜ್ಞಾನಕ್ಕಾಗಿ ಜ್ಞಾನವನ್ನು ಪ್ರೀತಿಸಲಿಲ್ಲ ಆದರೆ ಅದರ ಪ್ರಾಯೋಗಿಕ ಉಪಯುಕ್ತತೆಗಾಗಿ ಜ್ಞಾನವನ್ನು ಬಯಸಿದರು. ಅವರು ತಮ್ಮ ಸ್ವಹಿತಾಸಕ್ತಿ ಮತ್ತು ಸ್ವಾಭಿಮಾನಕ್ಕಾಗಿ ದೇಶದ ಮಕ್ಕಳು ಮತ್ತು ಯುವಕರಿಗೆ ಶಿಕ್ಷಣ ನೀಡಲು ಬಯಸಲಿಲ್ಲ, ಆದರೆ ನೈಸರ್ಗಿಕ ಅಭಿವೃದ್ಧಿ ಮತ್ತು ಸಮೃದ್ಧಿಗಾಗಿ. ಅವರ ಶೈಕ್ಷಣಿಕ ತತ್ವಶಾಸ್ತ್ರವು ಸಾರ್ವತ್ರಿಕ ಪ್ರೀತಿ ಮತ್ತು ಮಾನವೀಯತೆ, ಪರಸ್ಪರ ಸಹಾಯ ಮತ್ತು ಸಹಕಾರ, ಸ್ವಯಂ–ತ್ಯಾಗ ಮತ್ತು ಸ್ವಯಂ–ತ್ಯಾಗದ ತತ್ವಗಳನ್ನು ಆಧರಿಸಿದೆ (ಚೌಧರಿ, ಎಸ್., 2006, ಪುಟ.77). ಶಿಕ್ಷಣದ ಪ್ರಕ್ರಿಯೆಯು ಮಾನಸಿಕ ಬೇರ್ಪಡುವಿಕೆ ಮತ್ತು ವಸ್ತುನಿಷ್ಠತೆಯನ್ನು ಸೃಷ್ಟಿಸಲು ಸಮರ್ಥವಾಗಿರಬೇಕು, ಇದು ಉತ್ತಮ ಸಮತೋಲನ ವ್ಯಕ್ತಿತ್ವದ ಅಗತ್ಯ ಪೂರ್ವಾಪೇಕ್ಷಿತವಾಗಿದೆ. ಶಿಕ್ಷಣದ ಮಹತ್ವವು ಜ್ಞಾನ ಮತ್ತು ಕೌಶಲ್ಯದಲ್ಲಿ ಮಾತ್ರವಲ್ಲ, ಅದು ಇತರರೊಂದಿಗೆ ಬದುಕಲು ನಮಗೆ ಸಹಾಯ ಮಾಡುವುದು. ಸಹಕಾರ ಮತ್ತು ಪರಸ್ಪರ ಸಹಕಾರಿ ಜೀವನಕ್ಕಾಗಿ ನಾವು ತರಬೇತಿ ಪಡೆಯಬೇಕು. ನೈತಿಕ ಗುಣಗಳು ಬೌದ್ಧಿಕ ಸಾಧನೆಗಳಿಗಿಂತ ಹೆಚ್ಚಿನ ಮೌಲ್ಯಗಳನ್ನು ಹೊಂದಿವೆ. ಶಿಕ್ಷಣದ ನಿಜವಾದ ಅಂತ್ಯವು ಮಾಹಿತಿಯ ಸ್ವಾಧೀನವಲ್ಲ, ಪ್ರಮುಖ ಚಿಂತನೆ, ಅಥವಾ ತಾಂತ್ರಿಕ ಕೌಶಲ್ಯಗಳನ್ನು ಸ್ವಾಧೀನಪಡಿಸಿಕೊಳ್ಳುವುದು, ಆದರೆ ಆಧುನಿಕ ಸಮಾಜವು ಬಹಳ ಅವಶ್ಯಕವಾಗಿದೆ.ಮಾಹಿತಿ ಮತ್ತು ತಾಂತ್ರಿಕ

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಕೌಶಲ್ಯವನ್ನು ಮೀರಿದ ಮೇಲ್ನೋಟದ ಮೇಲ್ನೋಟವನ್ನು ಒಬ್ಬರು ಹೊಂದಿರಬೇಕು. ಮಾಹಿತಿಯು ಜ್ಞಾನವಲ್ಲ, ಅಥವಾ ಜ್ಞಾನವೂ ಅಲ್ಲ, ಅಥವಾ ಜ್ಞಾನ ಬುದ್ಧಿವಂತಿಕೆಯೂ ಅಲ್ಲ. ಒಬ್ಬ ವ್ಯಕ್ತಿಯು ಯುದ್ಧದಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು ಮತ್ತು ಯಾವುದೇ ರೀತಿಯ ಆಂತರಿಕ ಅಡಚಣೆ ಅಥವಾ ಒಬ್ಬರ ಅಸ್ತಿತ್ವದ ಪ್ರಕ್ಷುಬ್ಧತೆಯಿಲ್ಲದೆ ನಡೆಯುವ ವಿಷಯಗಳನ್ನು ನೋಡುವ ಸಾಮರ್ಥ್ಯವನ್ನು ಹೊಂದಿರಬೇಕು. (ನಂದಾ ಆರ್. 2009). ಜಾನ್ ಡೀವಿ, ಪೆಸ್ಟಲೋಜಿ, ಅರಬಿಂದೋ ಮತ್ತು ಟ್ಯಾಗೋರ್ರಂತಹ ಅನೇಕ ತತ್ವಜ್ಞಾನಿಗಳಂತೆ, ರಾಧಾಕೃಷ್ಣನ್ ಎಲ್ಲರಿಗೂ ಶಿಕ್ಷಣ ಮತ್ತು ಮಗುವಿನ ಅಗತ್ಯತೆ ಮತ್ತು ಆಸಕ್ತಿಗೆ ಅನುಗುಣವಾಗಿ ಶಿಕ್ಷಣಕ್ಕೆ ಒತ್ತು ನೀಡಿದರು. ಪ್ರತಿಯೊಬ್ಬ ವ್ಯಕ್ತಿಯು ಕೆಲವು ಸಹಜ ಪ್ರವೃತ್ತಿಗಳು ಮತ್ತು ಸಾಮರ್ಥ್ಯಗಳೊಂದಿಗೆ ಜನಿಸುತ್ತಾನೆ ಎಂದು ಅವರು ನಂಬುತ್ತಾರೆ. ಇದು ಶಿಕ್ಷಣದ ಮೂಲಕ ಮಾತ್ರ, ಈ ಜನ್ಮಜಾತ ಸಾಮರ್ಥ್ಯಗಳು ಪ್ರಕಟವಾಗುತ್ತವೆ. ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗದ ಅಧ್ಯಕ್ಷರಾಗಿ (1948), ಅವರು ಶಿಕ್ಷಣ ಕ್ಷೇತ್ರದಲ್ಲಿ ಪ್ರವರ್ತಕ ಕೆಲಸವನ್ನು ಮಾಡಿದ್ದಾರೆ. ಇದು ಹೆಚ್ಚಿನ ಒತ್ತು ಮತ್ತು ಶಿಕ್ಷಣದ ಮೂಲಕ ಅವರ ಅಭಿವ್ಯಕ್ತಿಯನ್ನು ನೀಡಿದೆ (ಚೌಧರಿ ಎಸ್. 2006, ಪು.78). ಎಲ್ಲಾ ಜ್ಞಾನ ಮತ್ತು ಶಕ್ತಿಗಳು ಮನುಷ್ಯನೊಳಗೆ ಇವೆ ಎಂದು ಅವರು ಹೇಳುತ್ತಾರೆ. ಸರಿಯಾದ ಶಿಕ್ಷಣ ಮತ್ತು ಆತ್ಮದ ಮೂಲಕ ಹೃದಯವನ್ನು ಪರಿಷ್ಕರಿಸಬಹುದು ಮತ್ತು ಶುದ್ಧೀಕರಿಸಬಹುದು. ಅವನಿಗೆ, ಶಿಕ್ಷಣವು ಆತ್ಮದ ಜ್ಞಾನೋದಯವಾಗಿದೆ. ಶಿಕ್ಷಣವು ಅಜ್ಞಾನವನ್ನು ಹೋಗಲಾಡಿಸಿ ವ್ಯಕ್ತಿಯನ್ನು ಬೆಳಗಿಸುತ್ತದೆ. ಶಿಕ್ಷಣವು ಪುಸ್ತಕ ಕಲಿಕೆಯೂ ಅಲ್ಲ, ಸತ್ಯಗಳು ಮತ್ತು ಅಂಕಿಅಂಶಗಳನ್ನು ನೆನಪಿಟ್ಟುಕೊಳ್ಳುವುದಲ್ಲ ಎಂದು ಅವರು ಒತ್ತಿಹೇಳುತ್ತಾರೆ. ಇದು ಪದಗಳ ಸಂಗ್ರಹವಲ್ಲ ಅಥವಾ ಜೀವನ ಮತ್ತು ಪ್ರಪಂಚಕ್ಕೆ ಸಂಬಂಧಿಸದ ಲೆಕ್ಕವಿಲ್ಲದಷ್ಟು ಮಾಹಿತಿಯೊಂದಿಗೆ ಮನಸ್ಸನ್ನು ತುಂಬಿಸುವುದಿಲ್ಲ. ಇದು ಆಲೋಚನೆಗಳ ಕಂಠಪಾಠವೂ ಅಲ್ಲ ಶಿಕ್ಷಣದ ನಿಜವಾದ ಅಂತ್ಯವು ಮಾಹಿತಿಯ ಸ್ವಾಧೀನವಲ್ಲ, ಪ್ರಮುಖ ಚಿಂತನೆ, ಅಥವಾ ತಾಂತ್ರಿಕ ಕೌಶಲ್ಯಗಳನ್ನು ಸ್ವಾಧೀನಪಡಿಸಿಕೊಳ್ಳುವುದು, ಆದರೆ ಆಧುನಿಕ ಸಮಾಜವು ಬಹಳ ಅವಶ್ಯಕವಾಗಿದೆ. ಮಾಹಿತಿ ಮತ್ತು ತಾಂತ್ರಿಕ ಕೌಶಲ್ಯವನ್ನು ಮೀರಿದ ಮೇಲ್ನೋಟದ ಮೇಲ್ನೋಟವನ್ನು ಒಬ್ಬರು ಹೊಂದಿರಬೇಕು. ಮಾಹಿತಿಯು ಜ್ಞಾನವಲ್ಲ, ಅಥವಾ ಜ್ಞಾನವೂ ಅಲ್ಲ, ಅಥವಾ ಜ್ಞಾನ ಬುದ್ಧಿವಂತಿಕೆಯೂ ಅಲ್ಲ. (ನಂದಾ, ಆರ್., 2009). ಜಾನ್ ಡೀವಿ, ಪೆಸ್ಟಲೋಜಿ, ಅರಬಿಂದೋ ಮತ್ತು ಟ್ಯಾಗೋರ್ರಂತಹ ಅನೇಕ ತತ್ವಜ್ಞಾನಿಗಳಂತೆ, ರಾಧಾಕೃಷ್ಣನ್ ಎಲ್ಲರಿಗೂ ಶಿಕ್ಷಣ ಮತ್ತು ಮಗುವಿನ ಅಗತ್ಯತೆ ಮತ್ತು ಆಸಕ್ತಿಗೆ ಅನುಗುಣವಾಗಿ ಶಿಕ್ಷಣಕ್ಕೆ ಒತ್ತು ನೀಡಿದರು. ಪ್ರತಿಯೊಬ್ಬ ವ್ಯಕ್ತಿಯು ಕೆಲವು ಸಹಜ ಪ್ರವೃತ್ತಿಗಳು ಮತ್ತು ಸಾಮರ್ಥ್ಯಗಳೊಂದಿಗೆ ಜನಿಸುತ್ತಾನೆ ಎಂದು ಅವರು ನಂಬುತ್ತಾರೆ. ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗದ ಅಧ್ಯಕ್ಷರಾಗಿ (1948), ಅವರು ಶಿಕ್ಷಣ ಕ್ಷೇತ್ರದಲ್ಲಿ ಪ್ರವರ್ತಕ ಕೆಲಸವನ್ನು ಮಾಡಿದ್ದಾರೆ, ಇದು ಹೆಚ್ಚಿನ ಒತ್ತು ಮತ್ತು ಶಿಕ್ಷಣದ ಮೂಲಕ ಅವರ ಅಭಿವ್ಯಕ್ತಿಯನ್ನು ನೀಡಿದೆ (ಚೌಧರಿ, ಎಸ್., 2006, ಪು.78). ಎಲ್ಲಾ ಜ್ಞಾನ ಮತ್ತು ಶಕ್ತಿಗಳು ಮನುಷ್ಯನೊಳಗೆ ಇವೆ ಎಂದು ಅವರು ಹೇಳುತ್ತಾರೆ. ಸರಿಯಾದ ಶಿಕ್ಷಣ ಮತ್ತು ಆತ್ಮದ ಮೂಲಕ ಹೃದಯವನ್ನು ಪರಿಷ್ಕರಿಸಬಹುದು ಮತ್ತು ಶುದ್ಧೀಕರಿಸಬಹುದು.

ಶಿಕ್ಷಣವು ಆತ್ಮದ ಜ್ಞಾನೋದಯವಾಗಿದೆ.ಶಿಕ್ಷಣವು ಅಜ್ಞಾನವನ್ನು ಹೋಗಲಾಡಿಸಿ ವ್ಯಕ್ತಿಯನ್ನು ಬೆಳಗಿಸುತ್ತದೆ. ಶಿಕ್ಷಣವು ಪುಸ್ತಕ ಕಲಿಕೆಯೂ ಅಲ್ಲ, ಸತ್ಯಗಳು ಮತ್ತು ಅಂಕಿಅಂಶಗಳನ್ನು ನೆನಪಿಟ್ಟುಕೊಳ್ಳುವುದಲ್ಲ ಎಂದು ಅವರು ಒತ್ತಿಹೇಳುತ್ತಾರೆ. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಸಂತೋಷ್ ಕುಮಾರ್ ಬೆಹೆರಾ ಸಂಪುಟ–1, ಸಂಚಿಕೆ–1 ಫೆಬ್ರವರಿ 2015 ರ ಶೈಕ್ಷಣಿಕ ಚಿಂತನೆಗಳ ಚಿಂತನೆಗಳನ್ನು ಕಂಠಪಾಠ ಮಾಡಿಲ್ಲ 198 ಇತರರು ವಿದೇಶಿ ಭಾಷೆಯಲ್ಲಿ ಮತ್ತು ವೈಟ್ ಕಾಲರ್ ಉದ್ಯೋಗಗಳಿಗೆ ಡಿಪ್ಲೊಮಾ ಮತ್ತು ಪದವಿಗಳನ್ನು ಪಡೆಯಲು ಪರೀಕ್ಷೆಯಲ್ಲಿರುವವರನ್ನು ಪುನರುತ್ಪಾದಿಸುವುದು. ಬದಲಿಗೆ, ಇದು ಮಾನವ–ತಯಾರಿಕೆ, ಪಾತ್ರ–ರೂಪಿಸುವುದು ಮತ್ತು ಜೀವನ–ನಿರ್ಮಾಣಕ್ಕಾಗಿ ಮೌಲ್ಯಗಳು ಮತ್ತು ಆಲೋಚನೆಗಳ ಸಮೀಕರಣವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರ ಶಿಕ್ಷಣದ ಪರಿಕಲ್ಪನೆಯು ಪೂರ್ವ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ಸಕಾರಾತ್ಮಕ ಅಂಶಗಳ ಸಾಮರಸ್ಯದ ಮಿಶ್ರಣವಾಗಿದೆ ಎಂದು ಹೇಳಬಹುದು. "ಶಿಕ್ಷಣ" ಕುರಿತು ಪ್ರತಿಕ್ರಿಯಿಸುತ್ತಾ, "ಮನಃಶಾಸ್ತ್ರದ ಅಗತ್ಯತೆಗಳು" ತನ್ನ ಪರಿಚಯದ ಕೊನೆಯಲ್ಲಿ ರಾಧಾಕೃಷ್ಣನ್ ಹೇಳುತ್ತಾರೆ : "ಶೈಕ್ಷಣಿಕ ಸಿದ್ಧಾಂತದ ಆಧಾರವು ಮನೋವಿಜ್ಞಾನವಾಗಿದೆ. ಶಿಕ್ಷಣವು ಮಾನವನ ವಿವಿಧ ಕಾರ್ಯಗಳ ಸಂಪೂರ್ಣ ಮತ್ತು ಸಾಮರಸ್ಯದ ಬೆಳವಣಿಗೆಯನ್ನು ತನ್ನ ಗುರಿಗಾಗಿ ಹೊಂದಿದೆ.ಅವು ಯಾವುವು ಮತ್ತು ಅವು ಹೇಗೆ ಬೆಳೆಯುತ್ತವೆ ಎಂಬುದು ಮನೋವಿಜ್ಞಾನದ ಸಮಸ್ಯೆಗಳು. ಪ್ರತಿಯೊಬ್ಬ ಶಿಕ್ಷಣತಜ್ಞನು ಮನಸ್ಸಿನ ಸ್ವಭಾವದ ಸಂಪೂರ್ಣ ಜ್ಞಾನವನ್ನು ಹೊಂದಿರಬೇಕು, ಅದು ಪೂರ್ಣತೆ ಮತ್ತು ಪ್ರಬುದ್ಧತೆಗೆ ತರುವುದು ಅವನ ವ್ಯವಹಾರವಾಗಿದೆ. ಆದ್ದರಿಂದ, ಮಗುವಿನ ಮನಸ್ಸಿನ ಜ್ಞಾನವು ಶಿಕ್ಷಕರಿಗೆ ಅವಶ್ಯಕವಾಗಿದೆ. ಮತ್ತೊಮ್ಮೆ, ಮಾನಸಿಕ ತತ್ವಗಳಿಗೆ ವಿರುದ್ಧವಾದ ಬೋಧನೆಯ ಯಾವುದೇ ವಿಧಾನವು ಸುಳ್ಳು.ಮನೋವಿಜ್ಞಾನವು ಬೋಧನೆಯ ನಿಜವಾದ ವಿಧಾನದ ನಕಾರಾತ್ಮಕ ಸ್ಪರ್ಶವನ್ನು ನೀಡುತ್ತದೆ. (ಡಿ. ಆಂಜನೇಯುಲು, 1996). ರಾಧಾಕೃಷ್ಣನ್ ಅವರು ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ದುಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಅವರು ಅಭಿಪ್ರಾಯಪಟ್ಟರು, "ಶಿಕ್ಷಣವು ಮಾನವರ ಹೃದಯ ಮತ್ತು ಮನಸ್ಸಿನಲ್ಲಿ ಬುದ್ಧಿವಂತಿಕೆ ಮತ್ತು ಮಾನವೀಯತೆಯನ್ನು ನಿರ್ಮಿಸದಿದ್ದರೆ ಅದರ ಎಲ್ಲಾ ವೃತ್ತಿಪರ, ವೈಜ್ಞಾನಿಕ ಮತ್ತು ತಾಂತ್ರಿಕ ವಿಜಯಗಳು ಅರ್ಥಹೀನವಾಗುತ್ತವೆ. ಶಿಕ್ಷಣದ ಕೆಳಗಿನ ಪರಿಕಲ್ಪನೆಗಳು ಮತ್ತು ಕಾರ್ಯಗಳನ್ನು ಕೆಳಗೆ ನೀಡಲಾಗಿದೆ (ಅಗರ್ವಾಲ್, ಎಅ 2002, .256– 258): ಶಿಕ್ಷಣ– ಬೌದ್ಧಿಕ, ಹೃದಯ ಮತ್ತು ಆತ್ಮದ ತರಬೇತಿ: ರಾಧಾಕೃಷ್ಣನ ಬಯಕೆಗಳು, ಶಿಕ್ಷಣವು ಪೂರ್ಣಗೊಳ್ಳಲು, ಮಾನವೀಯವಾಗಿರಬೇಕು, ಅದು ಒಳಗೊಂಡಿರಬಾರದು. ಕೇವಲ ಬುದ್ಧಿಯ ತರಬೇತಿ ಆದರೆ ಹೃದಯದ ಪರಿಷ್ಕರಣೆ ಮತ್ತು ಶಿಸ್ತಿನ ಮನೋಭಾವ. ಹೃದಯ ಮತ್ತು ಚೈತನ್ಯವನ್ನು ನಿರ್ಲಕ್ಷಿಸಿದರೆ ಯಾವುದೇ ಶಿಕ್ಷಣವನ್ನು ಸಂಪೂರ್ಣವೆಂದು ಪರಿಗಣಿಸಲಾಗುವುದಿಲ್ಲ" (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, 1956, ಪು.142). ಶಿಕ್ಷಣದಲ್ಲಿ ಮಾನವತಾವಾದ – ಈ ಜಗತ್ತಿನಲ್ಲಿ ಯಾವುದೇ ರಾಷ್ಟ್ರವು ಶಾಶ್ವತವಾಗಿ ತನ್ನ ಪ್ರಮುಖ ಸ್ಥಾನವನ್ನು ಹೊಂದಲು ಸಾಧ್ಯವಿಲ್ಲ. ಮಾನವ ಕಲ್ಯಾಣಕ್ಕೆ ನಾವು ನೀಡುವ ನೈತಿಕ ಕೊಡುಗೆಯು ಎಣಿಕೆಯಾಗಿದೆ. ಆದ್ದರಿಂದ, ನಾವು ಪ್ರಯತ್ನಿಸೋಣ ಮತ್ತು ಬಳಲುತ್ತಿರುವ ಜನರ ಬಗ್ಗೆ ತೀರ್ಪು ಮತ್ತು ಸಹಾನುಭೂತಿಯಲ್ಲಿ ದಾನದ ಗುಣಗಳನ್ನು ಅಭಿವೃದ್ಧಿಪಡಿಸೋಣ. ನಾವು ಅಂತಹ ವಿಧಾನವನ್ನು ಅಳವಡಿಸಿಕೊಂಡರೆ, ಪ್ರಪಂಚದ ಉದ್ವಿಗ್ನತೆಗಳು ಶೀಘ್ರವಾಗಿ ಕಡಿಮೆಯಾಗುತ್ತವೆ (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, 1956, ಪು.142). ಪ್ರಜಾಪ್ರಭುತ್ವಕ್ಕಾಗಿ ಶಿಕ್ಷಣ: ಶಿಕ್ಷಣವು ಪ್ರಜಾಸತ್ತಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳು ಜನರನ್ನು ಸ್ವಾತಂತ್ರ್ಯ, ಏಕತೆಗಾಗಿ ತರಬೇತುಗೊಳಿಸಬೇಕೇ ಹೊರತು ಸ್ಥಳೀಯತೆಯಲ್ಲ, ಪ್ರಜಾಪ್ರಭುತ್ವಕ್ಕಾಗಿಯೇ ಹೊರತು ಸರ್ವಾಧಿಕಾರಕ್ಕಾಗಿ ಅಲ್ಲ. ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಶಿಕ್ಷಣ: ವಿಜ್ಞಾನವನ್ನು ಉತ್ಪಾದಕ ಕೆಲಸಕ್ಕೆ ಬಳಸಬೇಕು. ವಿಜ್ಞಾನ ಮತ್ತು ಪಾಂಡಿತ್ಯದ ಅನ್ವೇಷಣೆಯಲ್ಲಿ ನಾವು ವಿಚಾರಣೆ ಮತ್ತು ಸಮರ್ಪಣಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣ ಮತ್ತು ಮಾನವೀಯ ಮೌಲ್ಯಗಳು: ಸಾಕಷ್ಟು ಬೌದ್ಧಿಕ ಮತ್ತು ತಾಂತ್ರಿಕ ಕೌಶಲ್ಯವಿದೆ ಆದರೆ ನೈತಿಕ ಮತ್ತು ಆಧ್ಯಾತ್ಮಿಕ

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಚೈತನ್ಯವು ಕಡಿಮೆ ಮಟ್ಟದಲ್ಲಿದೆ. ಮನುಷ್ಯನ ಸಂಪೂರ್ಣತೆಯು ಸತ್ಯದ ಅನ್ವೇಷಣೆ ಮತ್ತು ಮಾನವ ಜೀವನವನ್ನು ಸುಧಾರಿಸಲು ಅದರ ಅನ್ವಯದಿಂದ ಉಂಟಾಗುತ್ತದೆ, ಪ್ರಕೃತಿಯಲ್ಲಿ ಸುಂದರವಾದದ್ದು, ಮನುಷ್ಯ ಮತ್ತು ಕಲೆ, ಮತ್ತು ಆಧ್ಯಾತ್ಮಿಕ ಅಭಿವೃದ್ಧಿ ಮತ್ತು ನೈತಿಕ ತತ್ವಗಳಲ್ಲಿ ಅದರ ಸಾಕಾರ. ಶಿಕ್ಷಣ ಮತ್ತು ಆಧ್ಯಾತ್ಮಿಕ ಮೌಲ್ಯಗಳು: ಶಿಕ್ಷಣವು ನಾವು ನಮ್ಮ ಮನಸ್ಸನ್ನು ಉಬ್ಬರವಿಳಿಸುವಂತೆ ಮಾಡುವ, ಮಾಹಿತಿಯನ್ನು ಪಡೆದುಕೊಳ್ಳುವ ಮತ್ತು ಮೌಲ್ಯಗಳ ಪ್ರಜ್ಞೆಯನ್ನು ಪಡೆಯುವ ಸಾಧನವಾಗಿದೆ. ನಿಜವಾದ ಪ್ರಜಾಪ್ರಭುತ್ವವು ನಾಗರಿಕರ ಸಮುದಾಯವು ಪರಸ್ಪರ ಭಿನ್ನವಾಗಿರುತ್ತದೆ ಆದರೆ ಎಲ್ಲರೂ ಸಾಮಾನ್ಯ ಗುರಿಗೆ ಬದ್ಧರಾಗಿರುತ್ತಾರೆ (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಎರಡನೇ ಸರಣಿ, 1957, ಕ88). ಶಿಕ್ಷಣ – ಏಕೀಕರಣದ ಹುಡುಕಾಟ: ಶಿಕ್ಷಣವು ನಮ್ಮನ್ನು ಸುಸಂಸ್ಕೃತ ಮನುಷ್ಯರನ್ನಾಗಿ ಮಾಡುವ ಗುರಿಯನ್ನು ಹೊಂದಿದೆ, ನಮ್ಮ ನೈತಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳ ಪ್ರಜ್ಞೆ, ನಾವು ವಾಸಿಸುವ ಜಗತ್ತನ್ನು ನಾವು ತಿಳಿದಿರಬೇಕು, ಭೌತಿಕ, ಸಾವಯವ ಮತ್ತು ಸಾಮಾಜಿಕ.ನಾವು ಬ್ರಹ್ಮಾಂಡದ ಸಾಮಾನ್ಯ ಯೋಜನೆ ಮತ್ತು ಸತ್ಯದ ಹುಡುಕಾಟದ ಕಲ್ಪನೆಯನ್ನು ಹೊಂದಿರಬೇಕು. ನಾವು ಸತ್ಯವನ್ನು ಸಾಧಿಸಿದಾಗ ನಮ್ಮ ಹೊರೆಗಳು ಹಗುರವಾಗುತ್ತವೆ ಮತ್ತು ನಮ್ಮ ಕಷ್ಟಗಳು ಕಡಿಮೆಯಾಗುತ್ತವೆ. ಇದು ನಮ್ಮ ಹಾದಿಯನ್ನು ಸಂತೋಷದ ಪ್ರಕಾಶದಿಂದ ಬೆಳಗಿಸುತ್ತದೆ (ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಮೂರನೇ ಸರಣಿ, 1963, ಪುಟ 87). ನಮ್ಮ ದೇಶದಲ್ಲಿ ಇಂದು ನಾವು ಬುದ್ಧಿವಂತರಾದ ಅನೇಕ ಪುರುಷರನ್ನು ಹೊಂದಿದ್ದೇವೆ ಆದರೆ ನೆಟ್ಟಗೆ ಇರುವುದಿಲ್ಲ. ನಾವು ಏಕೀಕರಣದ ಗೌರವವನ್ನು ಬೆಳೆಸಿಕೊಳ್ಳಬೇಕು. ದೈನಂದಿನ ಜೀವನ ಮತ್ತು ಆಡಳಿತದಲ್ಲಿ ಶುದ್ಧತೆ ಅತ್ಯಗತ್ಯ. ವಿಚಾರಣೆಯ ಮನೋಭಾವವನ್ನು ಅಭಿವೃದ್ಧಿಪಡಿಸಲು ಶಿಕ್ಷಣ: ನಾವು ವಿಚಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಮತ್ತು ವಿಜ್ಞಾನ ಮತ್ತು ವಿದ್ಯಾರ್ಥಿವೇತನದ ಅನ್ವೇಷಣೆಗೆ ಸಮರ್ಪಣೆ ಮಾಡಬೇಕು. ನಾವು ನಮ್ಮ ವರ್ಷಗಳನ್ನು ಕಾಲೇಜಿನಲ್ಲಿ ಕ್ಷುಲ್ಲಕತೆಗಳು ಮತ್ತು ಜಡತೆಗಳಲ್ಲಿ ವ್ಯರ್ಥ ಮಾಡುತ್ತೇವೆ. ನಮಗೆ ಅಕ್ಷರ ಶಿಕ್ಷಣ ಬೇಕು. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಜನರನ್ನು ತರಬೇತುಗೊಳಿಸಲು ಶಿಕ್ಷಣ: ನಾವು ಯುವಕರ ಮನಸ್ಸನ್ನು ಆಕಾರವಿಲ್ಲದೆ ತಿರುಗಿಸಿದರೆ, ಅವರು ಸಮಾಜಕ್ಕೆ ಅಪಾಯವನ್ನುಂಟುಮಾಡುತ್ತಾರೆ. ನಮ್ಮ ಯುವಕರಿಗೆ ಗುರಿಯ ಪ್ರಜ್ಞೆ ಇರಬೇಕು.ನಾವು ಅವರನ್ನು ಬುದ್ಧಿವಂತರು ಮತ್ತು ಒಳ್ಳೆಯವರನ್ನಾಗಿ ಮಾಡಬೇಕು ಅವರು ಭಾರತವನ್ನು ಹೆಮ್ಮೆಪಡುವಂತೆ ಮಾಡಿದ್ದಾರೆ ಮತ್ತು ಅವರ ಸ್ಮರಣೆಯಲ್ಲಿ ಶಿಕ್ಷಕರ ದಿನವನ್ನು ಸಮರ್ಪಿಸಲಾಯಿತು.ನಮ್ಮ ಸಮಾಜಕ್ಕೆ ಶಿಕ್ಷಕರು ನೀಡಿದ ಮಹಾನ್ ಕೊಡುಗೆಯ ಗುರುತಾಗಿ, ಡಾ.ರಾಧಾಕೃಷ್ಣನ್ ಅವರ ಜನ್ಮದಿನದಂದು ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತೇವೆ ಮತ್ತು ಅವರ ಕನಸುಗಳ ಸಮಾಜವನ್ನು ನಿರ್ಮಿಸಲು ಅವರ ಆದರ್ಶಗಳನ್ನು ಅನುಕರಿಸುವ ಮೂಲಕ ನಾವು ಅವರಿಗೆ ಗೌರವ ಸಲ್ಲಿಸಬೇಕು. ಶಿಕ್ಷಕರು ಸ್ತಂಭಗಳಾಗಿದ್ದು, ಅದರ ಮೇಲೆ ಇಡೀ ಸಮಾಜವು ನೆಲೆಗೊಂಡಿದೆ ಮತ್ತು ಆದ್ದರಿಂದ ಸಮಾಜದ ಗುಣಮಟ್ಟವು ಹೆಚ್ಚಿನ ಮಟ್ಟಿಗೆ ನಮ್ಮ ಶಿಕ್ಷಕರ ಮೇಲೆ ಅವಲಂಬಿತವಾಗಿದೆ.

## ಪರಾಮರ್ಶನ ಗ್ರಂಥಗಳು


1. **ಅಗರವಾಲ್ ಜೆ. ಸಿ. (2002) :** ಥಿಯರಿ ಅಂಡ್ ಪ್ರಿನ್ಸಿಪಲ್ಸ್ ಆಫ್ ಎಜುಕೇಶನ್, 12ನೇ ಪರಿಷ್ಕೃತ ಆವೃತ್ತಿ, ನವದೆಹಲಿ, ವಿಕಾಸ್ ಪಬ್ಲಿಷಿಂಗ್ ಹೌಸ್ ಪ್ರೈ. ಲಿಮಿಟೆಡ್.
2. **ಆನಂದ್, ವಿ. (2011) :** ಡಾ ರಾಧಾಕೃಷ್ಣನ್ ಅವರ ಸಮಕಾಲೀನ ಚಿಂತನೆಗೆ ಕೊಡುಗೆ, ಮುಖ್ಯವಾಹಿನಿ, VOL L, ನಂ. 1, ಡಿಸೆಂಬರ್ 24, 06 ಫೆಬ್ರವರಿ 2015 ರಂದು ಮರು ಸಂಪಾದಿಸಲಾಗಿದೆ,
3. **ಭಾಟಿಯಾ ಎಸ್. ಮತ್ತು ಸರಿನ್ ಎ. (2004) :** ಫಿಲಾಸಫಿಕಲ್ ಫೌಂಡೇಶನ್ ಆಫ್ ಎಜುಕೇಶನ್ ಇನ್ ಇಂಡಿಯಾ, ಜೈಪುರ: ಎಬಿಡಿ ಪಬ್ಲಿಷರ್ಸ್.
4. **ಬೆಹುರಾ ಡಿ. ಕೆ. (2010) :** ದಿ ಗ್ರೇಟ್ ಇಂಡಿಯನ್ ಫಿಲಾಸಫರ್: ಡಾ. ರಾಧಾಕೃಷ್ಣನ್, ಒರಿಸ್ಸಾ ರಿವ್ಯೂ, ಸೆಪ್ಟೆಂಬರ್ ಚೌಧರಿ, ಎಸ್. (2006). ಶೈಕ್ಷಣಿಕ ತತ್ವಶಾಸ್ತ್ರ ಡಾ. ಸರ್ವಪಲ್ಲಿ ರಾಧಾಕೃಷ್ಣನ್, ನವದೆಹಲಿ: ಡೀಪ್ ಅಂಡ್ ಡೀಪ್ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್. ಲಿಮಿಟೆಡ್
5. **ಚಿಂಚು ಕೆ.ಆರ್. (2013) :** ಎಸ್. ರಾಧಾಕೃಷ್ಣನ್ ಅವರ ಶೈಕ್ಷಣಿಕ ವಿಚಾರಗಳು, ಹೃದಯ ಬಡಿತಗಳು, 05 ಫೆಬ್ರವರಿ 2015
6. **ಆಂಜನೇಯ (1996) :** ರಾಧಾಕೃಷ್ಣನ್ –ದಿ ಎಜುಕೇಶನಿಸ್ಟ್, ತ್ರಿವೇಣಿ, 06 ಫೆಬ್ರವರಿ 2015 ಮೊದಲ ವಿಶ್ವವಿದ್ಯಾಲಯ ಶಿಕ್ಷಣ ಆಯೋಗದ ವರದಿ, ಭಾರತ ,ನಂದಾ, ರೇಣು
7. **ಸರ್ವಪಲ್ಲಿ, ರಾಧಾಕೃಷ್ಣನ್ (1956) :** ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಸಂಪುಟ. ನವದೆಹಲಿ : ಸಚಿವಾಲಯ ಪ್ರಸಾರ ಭಾರತದ.ಪ. 142.
8. **ಸರ್ವಪಲ್ಲಿ, ರಾಧಾಕೃಷ್ಣನ್ (1957) :** ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಎರಡನೇ ಸರಣಿ,
9. ಸಚಿವಾಲಯ ಮಾಹಿತಿ ಮತ್ತು ಪ್ರಸಾರಭಾರತದ.P.89.
10. **ಸರ್ವೆಪಲ್ಲಿ, ರಾಧಾಕೃಷ್ಣನ್ (1963) :** ಸಾಂದರ್ಭಿಕ ಭಾಷಣಗಳು ಮತ್ತು ಬರಹಗಳು, ಮೂರನೇ ಸರಣಿ, ನವದೆಹಲಿ : ಪ್ರಕಾಶನ ವಿಭಾಗ, ಮಾಹಿತಿ ಸಚಿವಾಲಯ
11. **ಸರ್ವೆಪಲ್ಲಿ, ರಾಧಾಕೃಷ್ಣನ್ (2009) :** ದಿ ಪರ್ಸ್ಯೂಟ್ ಆಫ್ಟುತ್, ನವದೆಹಲಿ:ಹಿಂದ್ ಪಾಕೆಟ್ ಬುಕ್ಸ್.
12. **ಸ್ಕಿಲ್ಪ್, ಪಾಲ್ ಆರ್ಥರ್ (1992):** ದಿ ಫಿಲಾಸಫಿ ಆಫ್ ಸರ್ವಪಲ್ಲಿ ರಾಧಾಕೃಷ್ಣನ್, ಮೋತಿಲಾಲ್ ಬನಾರ್ಸಿದಾಸ್, ಪು. 98
13. **ಬ್ರೇಬ್ರೂಕ್, ಮಾರ್ಕಸ್. ಎ ವೈಡರ್ ವಿಷನ್ :** ಎ ಹಿಸ್ಟರಿ ಆಫ್ ದಿ ವರ್ಲ್ಡ್ ಕಾಂಗ್ರೆಸ್ ಆಫ್ ಫೇಯ್ಸ್ 1936 – 1996. ಒನ್ವರ್ಲ್ಡ್, 1997.
14. **ಬ್ರೌನ್, ಟೆಕ್ನಿಕ್ಸ್ ಆಫ್ ಪರ್ಸುವೇಶನ್ :** ಫ್ರಮ್ ಪ್ರಾಪಗಾಂಡಾ ಟು ಬ್ರೈನ್ವಾಶಿಂಗ್. ಪೆಂಗ್ವಿನ್ ಬುಕ್ಸ್, 1963.
15. **ವೇದಾಂತದ ನೀತಿಶಾಸ್ತ್ರ ಮತ್ತು ಅದರ ಮೆಟಾಫಿಸಿಕಲ್ ಪೂರ್ವಭಾವಿಗಳು. ಮದ್ರಾಸ್:** ದಿ ಗಾರ್ಡಿಯನ್ ಪ್ರೆಸ್, 1908. "ಕರ್ಮ ಮತ್ತು ಫ್ರೀವಿಲ್" ಇನ್ ಮಾಡರ್ನ್ ರಿವ್ಯೂ. (ಕಲ್ಕತ್ತಾ) ಸಂಪುಟ.
16. **ಅಹಂಭಾವ ಮತ್ತು ಪರಹಿತ ಚಿಂತನೆ :** ವೇದಾಂತ ಪರಿಹಾರ" ಪೂರ್ವ ಮತ್ತು ಪಶ್ಚಿಮದಲ್ಲಿ (ಬಾಂಬೆ) 9 (ಜುಲೈ 1910), ಪುಟಗಳು 620–628.
17. **"ದಿ ರಿಲೇಶನ್ ಆಫ್ ಮೋರಾಲಿಟಿ ಟು ರಿಲಿಜನ್" :** ಹಿಂದೂಸ್ತಾನ್ ರಿವ್ಯೂ (ಸೆಪ್ಟೆಂಬರ್ 1910), ಪುಟಗಳು 292–297 "ಶಿಕ್ಷಣದಲ್ಲಿ ನೈತಿಕತೆ ಮತ್ತು ಧರ್ಮ" ಮದ್ರಾಸ್ ಕ್ರಿಶ್ಚಿಯನ್ ಕಾಲೇಜ್ ಮ್ಯಾಗಜೀನ್ನಲ್ಲಿ. 10 (1910–1911), ಪುಟಗಳು 233–239.
18. **"ದಿ ಎಥಿಕ್ಸ್ ಆಫ್ ದಿ ವೇದಾಂತ" :** ದಿ ಇಂಟರ್ನ್ಯಾಶನಲ್ ಜರ್ನಲ್ ಆಫ್ ಎಥಿಕ್ಸ್. 225 ಸಂಖ್ಯೆ 2 (ಜನವರಿ 1914), ಪುಟಗಳು 168–183.


**SHIKSHAN SOUDAH** *Kannada Quarterly* Printer, Publisher, Editor and Owned by : **Jayadev Mailarappa Menasagi** Resi. : Okkalageri Oni, GADAG-582101, Tq. Gadag, Dist.: Gadag. Karnataka State Printed at **Maima Akshara Mudrana,** S.P. Gadag Compound, J.T.Math Road, GADAG 582101, Tq. Gadag, Dist.: Gadag. Karnataka State Phone : 08372-200527, email : shikshansoudha@gmail.com.